# ರೇವಣಸಿದ್ಧರು : ಒಂದು ಅಧ್ಯಯನ

ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

111-115

ಸಂಶೋಧಕರು
**ಶಕುಂತಲಾ ಗೋಪಶೆಟ್ಟಿ**
ಹಿರಿಯ ಶ್ರೇಣಿ ಅಧ್ಯಾಪಕರು
ಎಸ್.ಎಸ್.ಆರ್.ಜಿ. ಮಹಿಳಾ ಮಹಾವಿದ್ಯಾಲಯ
ರಾಯಚೂರು ೫೮೪ ೧೦೧

ಮಾರ್ಗದರ್ಶಕರು
**ಡಾ. ಕೆ.ರವೀಂದ್ರನಾಥ**
ಹಿರಿಯ ಶ್ರೇಣಿ ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

92B
REV S

ಭಾಷಾ ನಿಕಾಯ
**ಹಸ್ತಪ್ರತಿಶಾಸ್ತ್ರ ವಿಭಾಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೩

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬.

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Binding at
CREATOR
Hospet,
423152,
522

115

ಹಂಗವ್ಯರ್ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

115
ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ರೇವಣಸಿದ್ಧರು : ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
**ಶಕುಂತಲಾ ಗೋಪಶೆಟ್ಟಿ**
ಹಿರಿಯ ಶ್ರೇಣಿ ಅಧ್ಯಾಪಕರು
ಎಸ್.ಎಸ್.ಆರ್.ಜಿ. ಮಹಿಳಾ ಮಹಾವಿದ್ಯಾಲಯ
ರಾಯಚೂರು ೫೮೪ ೧೦೧

ಮಾರ್ಗದರ್ಶಕರು
**ಡಾ. ಕೆ.ರವೀಂದ್ರನಾಥ**
ಹಿರಿಯ ಶ್ರೇಣಿ ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಭಾಷಾ ನಿಕಾಯ
**ಹಸ್ತಪ್ರತಿಶಾಸ್ತ್ರ ವಿಭಾಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೩

AKSHARA GRANTHALAYA
ACC.NO. 052073

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

052073

92B
REV S

ಗಣಕೀಕರಣ ಆಗಿದೆ.

115
ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

◆

**ಡಾ. ಕೆ.ರವೀಂದ್ರನಾಥ**
ಹಿರಿಯ ಶ್ರೇಣಿ ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ

## ದೃಢೀಕರಣ ಪತ್ರ

ಶ್ರೀಮತಿ ಶಕುಂತಲಾ ಗೋಪಶೆಟ್ಟಿ ಇವರು ರೇವಣಸಿದ್ಧರು : ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೩೦ ಏಪ್ರಿಲ್ ೨೦೦೩ (ಡಾ. ಕೆ.ರವೀಂದ್ರನಾಥ)

# ಪ್ರಮಾಣ ಪತ್ರ

ರೇವಣಸಿದ್ಧರು : ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ಡಾ. ಕೆ.ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೩೦ ಏಪ್ರಿಲ್ ೨೦೦೩
ಸ್ಥಳ : ವಿದ್ಯಾರಣ್ಯ

(ಶಕುಂತಲಾ ಗೋಪಶೆಟ್ಟಿ)
ಹಿರಿಯ ಶ್ರೇಣಿ ಅಧ್ಯಾಪಕರು
ಎಸ್.ಎಸ್.ಆರ್.ಜಿ. ಮಹಿಳಾ ಮಹಾವಿದ್ಯಾಲಯ
ರಾಯಚೂರು ೫೮೪ ೧೦೧

# ಅರಿಕೆ

ಹನ್ನೆರಡನೆಯ ಶತಮಾನದ ಬಸವಾದಿ ಪ್ರಮಥರ ಆಗಮನದ ಮುನ್ಸೂಚನೆಯನ್ನು ಇಳೆಗೆ ಸಾರಲು ಬಂದ ಬಸವಪೂರ್ವಯುಗದ ಶರಣರಲ್ಲಿ ಕೊಂಡುಗುಳಿ ಕೇಶಿರಾಜ, ದೇವರ ದಾಸಿಮಯ್ಯ, ಮಾದಾರ ಚನ್ನಯ್ಯ, ಚಂದಿರಮರಸ, ಕೆಂಬಾವಿ ಭೋಗಣ್ಣ, ಶಂಕರದಾಸಿಮಯ್ಯ, ಸಕಲೇಶ ಮಾದರಸ, ಡೋಹರ ಕಕ್ಕಯ್ಯ ಮುಂತಾದವರು ಪ್ರಮುಖರು. ಇವರ ಸಮಕಾಲೀನನಾಗಿ ಕಾಣಿಸಿಕೊಳ್ಳುತ್ತಾರೆ ರೇವಣಸಿದ್ಧರು. ರೇವಣಸಿದ್ಧರನ್ನು ಕುರಿತು ಕನ್ನಡದಲ್ಲಿ ಕಾವ್ಯ-ಪುರಾಣಗಳು ರಚನೆಯಾದಂತೆ ಶಾಸನಗಳು ಸೃಷ್ಟಿಯಾಗಿವೆ. ಇವುಗಳ ಸಹಾಯದಿಂದ ರೇವಣಸಿದ್ಧರ ಚರಿತ್ರೆಯನ್ನು ವಿದ್ವಾಂಸರು ಲೇಖನ ರೂಪದಲ್ಲಿ ಕಟ್ಟುವ ಪ್ರಯತ್ನ ಮಾಡಿದ್ದಾರೆ.

ರೇವಣಸಿದ್ಧರು ಸಿದ್ಧನಾದರೆ ಎನ್ನತ್ತಾಗಬೇಕೆಂಬಂತೆ ನಾಡಿನಾದ್ಯಂತ ಸಂಚರಿಸಿ ಕರ್ನಾಟಕ ಸಿದ್ಧಪರಂಪರೆಯಲ್ಲಿ ಬಹುದೊಡ್ಡ ಹೆಸರನ್ನು ಪಡೆದವರು. ಈತನ ಪ್ರಭಾವ ಮುದ್ರೆ ವಿಸ್ತಾರವಾದ ಪ್ರದೇಶವನ್ನು ವ್ಯಾಪಿಸಿತ್ತು ಎಂಬುದಕ್ಕೆ ಶಾಸನ, ಕಾವ್ಯ, ಪುರಾಣಗಳೇ ಸಾಕ್ಷಿ ನುಡಿಯುತ್ತವೆ. ಹೀಗಿದ್ದೂ ರೇವಣಸಿದ್ಧರ ಜೀವನಚರಿತ್ರೆ ಕುರಿತು ಭಿನ್ನಾಭಿಪ್ರಾಯಗಳು ಇವೆ. ಕಂಚಿಯ ಅರಸ ಚೋಳರಾಜೇಂದ್ರನನ್ನು ಸಂದರ್ಶಿಸಿದ್ದು, ವಿಕ್ರಮಾಂಕನಿಗೆ ಖಡ್ಗವನ್ನು ನೀಡಿದ್ದು, ಹಾವಿನಹಾಳ ಕಲ್ಲಯ್ಯನಿಗೆ ರುದ್ರಮುನಿಗಳಿಂದ ದೀಕ್ಷೆ ನೀಡಿದ್ದು ಇತ್ಯಾದಿ ಐತಿಹಾಸಿಕ ಸಂಗತಿಗಳಿಗೆ ಪೌರಾಣಿಕ ಬಣ್ಣಬಳಿದು, ಪವಾಡಗಳನ್ನು ಹೆಣೆದು ನಿಜದ ನಿಲುವನ್ನು ಮರೆಮಾಚಲಾಗಿದೆ. ಅಂತೆಯೇ ರೇವಣಸಿದ್ಧರನ್ನು ಕುರಿತು ಸಂಶೋಧನೆ ನಡೆಸುವುದು ಅವಶ್ಯವೆನಿಸಿತು. ಈ ಅವಶ್ಯಕತೆಗೆ ಅವಕಾಶ ನೀಡಿದ್ದು ''ಹಂಪಿಯ ಕನ್ನಡ ವಿಶ್ವವಿದ್ಯಾಲಯ''.

ಎಂ.ಎ.ಮುಗಿಸಿದ ಹೊಸದರಲ್ಲಿ ಪಿಎಚ್.ಡಿ. ಮಾಡಬೇಕೆಂಬ ಬಯಕೆ ಹೊಂದಿದ್ದ ನನಗೆ ಉಪನ್ಯಾಸ ವೃತ್ತಿ ಮತ್ತು ಕೌಟುಂಬಿಕ ಜವಾಬ್ದಾರಿಗಳಿಂದ ಈಡೇರದೇ ಹೋಯಿತು. ೧೨-೧೩ ವರ್ಷಗಳ ನಂತರ ಕನ್ನಡ ವಿಶ್ವವಿದ್ಯಾಲಯದ ಮೂಲಕ ಈ ಬಯಕೆ ಈಡೇರುವಂತೆ ಮಾಡುವಲ್ಲಿ ನೆರವಾದವರು ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಾಪಕರಾದ ಡಾ.ಕೆ.ರವೀಂದ್ರನಾಥ ಅವರು. ವಿದ್ವತ್ತು, ಪ್ರತಿಭೆ, ಪ್ರಾಮಾಣಿಕತನ ಮತ್ತು ಸಂಶೋಧನ ದೃಷ್ಟಿಗಳನ್ನು ಮೈಗೂಡಿಸಿಕೊಂಡಿರುವ ಡಾ.ಕೆ.ರವೀಂದ್ರನಾಥ ಅವರು ಮಾರ್ಗದರ್ಶಕರಾಗಿ ದೊರೆತದ್ದು ನನ್ನ ಭಾಗ್ಯವೆಂದೇ ಹೇಳಬೇಕು. ಈ ಮಹಾಪ್ರಬಂಧಕ್ಕೊಂದು ಸ್ವರೂಪ ನೀಡುವಲ್ಲಿ ಅವರು ವಹಿಸಿಕೊಂಡ ಶ್ರಮ ಬಹು ದೊಡ್ಡದು. ಅವರಿಗೆ ನನ್ನ ಕೃತಜ್ಞಾಪೂರ್ವಕ ವಂದನೆಗಳು.

ಸಂಶೋಧನ ವಿಷಯವನ್ನು ಆರಿಸಿಕೊಳ್ಳುವ ಸಮಯದಲ್ಲಿ ಅಂದಿನ ಕುಲಪತಿಗಳಾಗಿದ್ದ ಡಾ. ಎಂ.ಎಂ. ಕಲಬುರ್ಗಿ ಅವರಲ್ಲಿಗೆ ನಾನು ಮಾರ್ಗದರ್ಶಕರೊಂದಿಗೆ ಹೋದಾಗ "ಬಸವಪೂರ್ವಯುಗದ ಶಿವಶರಣರ ಬದುಕು-ಬರಹ ಕುರಿತು ಬೆಳಕು ಚೆಲ್ಲಬೇಕಾಗಿರುವುದು ಇಂದಿನ ಅಗತ್ಯಗಳಲ್ಲಿ ಒಂದು ಅದರಲ್ಲೂ ಸಿದ್ಧಪರಂಪರೆಯ ವಾರಸುದಾರರಾದ ರೇವಣಸಿದ್ಧರಂಥ ಐತಿಹಾಸಿಕ ವ್ಯಕ್ತಿಗಳ ಅಧ್ಯಯನ ಸಮಗ್ರತೆ ಕಂಡಿಲ್ಲ. ಈ ನಿಟ್ಟಿನಲ್ಲಿ ನೀವು ಚಿಂತಿಸುವುದು ಸೂಕ್ತವೆಂದು" ಸೂಚಿಸಿ ಈ ವಿಷಯದ ಕಡೆಗೆ ಗಮನ ಸೆಳೆದ ಅವರಿಗೂ ಮತ್ತು ಅದಕ್ಕೆ ಅನುವು ಮಾಡಿಕೊಟ್ಟ ಈಗಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡರಿಗೂ, ಕುಲಸಚಿವರಾದ ಡಾ. ಕೆ.ವಿ.ನಾರಾಯಣ, ಪ್ರಾಧ್ಯಾಪಕರಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರುಗಳಿಗೆ ನನ್ನ ನಮನಗಳು.

ಹಸ್ತಪ್ರತಿಶಾಸ್ತ್ರ ವಿಭಾಗವು ಸಂಶೋಧನ ವಿದ್ಯಾರ್ಥಿಗಳಿಗೆ ಸಹಕಾರಿಯಾಗುವ ಕಮ್ಮಟ, ಚರ್ಚೆ ಹಾಗೂ ಶಿಬಿರಗಳನ್ನು ಏರ್ಪಡಿಸುವದರ ಮೂಲಕ ಸಂಶೋಧನಾಸಕ್ತಿ ಬತ್ತದಂತೆ ನೋಡಿಕೊಳ್ಳುತ್ತಿರುವುದಕ್ಕೆ ಕಾರಣ ಅಲ್ಲಿಯ ಅಧ್ಯಾಪಕ ವರ್ಗದಲ್ಲಿ ಮನೆ ಮಾಡಿಕೊಂಡಿರುವ ಸಹಕಾರ ಪ್ರವೃತ್ತಿ. ಹೀಗಾಗಿ ಹಿರಿಯರಾದ ಪ್ರೊ.ಎ.ವಿ.ನಾವಡ, ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ, ಪ್ರವಾಚಕರಾದ ಡಾ.ಎಫ್.ಟಿ.ಹಳ್ಳಿಕೇರಿ, ಅಧ್ಯಾಪಕರಾದ ಡಾ.ಎಸ್.ಎಸ್.ಅಂಗಡಿ ಮತ್ತು ಶ್ರೀ ಚನ್ನವೀರಪ್ಪ ಅವರ ಸಹಕಾರಕ್ಕೆ ಋಣಿಯಾಗಿರುವೆ.

ರೇವಣಸಿದ್ಧರನ್ನು ಕುರಿತು ಅಧ್ಯಯನ ಕೈಗೊಂಡಿದ್ದನ್ನು ಕೇಳಿ ಆಶೀರ್ವದಿಸಿದ ಮಾನ್ವಿ ಕಲ್ಮಠಾಧ್ಯಕ್ಷರಾದ ಷ|| ಬ್ರ|| ಶಿವಮೂರ್ತಿ ಶಿವಾಚಾರ್ಯರಿಗೂ ತೀರ್ಥ ಸ್ವರೂಪರಾದ ಪ್ರೊ.ವಸಂತ ಕುಷ್ಟಗಿ ಅವರಿಗೂ ನನ್ನ ಭಕ್ತಿಪೂರ್ವಕ ಪ್ರಣಾಮಗಳು. ನಾನು ಕೆಲಸ ಮಾಡುವ ಶೈಕ್ಷಣಿಕ ಸಂಸ್ಥೆಯ ಆಡಳಿತ ಮಂಡಳಿಯ ಸಮಸ್ತ ಪದಾಧಿಕಾರಿಗಳಿಗೂ ಹಾಗೂ ಪ್ರಾಚಾರ್ಯರಾದಿಯಾಗಿ ಎಲ್ಲ ಸಹದ್ಯೋಗಿ ಬಳಗದವರಿಗೂ ನನ್ನ ಹೃದಯಪೂರ್ವಕ ವಂದನೆಗಳು.

ಬದುಕಿನ ಅನುಭವವನ್ನೆ ಶಾಲೆಯನ್ನಾಗಿ ಮಾಡಿಕೊಂಡು ನಮ್ಮ ಬೆಳವಣಿಗೆಯಲ್ಲಿಯೇ ಸಂತೋಷವನ್ನು ಕಂಡು ಖುಷಿಪಡುತ್ತಿರುವ ತಾಯಿ ಶ್ರೀಮತಿ ಪಾರ್ವತಮ್ಮ ಶರಣಪ್ಪ ಗೋಪಶೆಟ್ಟಿಯವರಿಗೆ, ಅಧ್ಯಯನದ ಸಮಯದಲ್ಲಿ ಕ್ಷೇತ್ರಕಾರ್ಯಕ್ಕೆ ಸಹಕರಿಸಿದ ತಮ್ಮಂದಿರಾದ ಶ್ರೀ ಮಲ್ಲಿಕಾರ್ಜುನ-ನಟರಾಜ ಗೋಪಶೆಟ್ಟಿ ಸಹೋದರರಿಗೆ ಮತ್ತು ಕುಟುಂಬದ ಸದಸ್ಯರಿಗೆ ನಾನು ಋಣಿಯಾಗಿದ್ದೇನೆ. ವಿಶೇಷವಾಗಿ ಮಾರ್ಗದರ್ಶಕರನ್ನು ಕಾಣಲು ರಾಯಚೂರಿನಿಂದ ಹೊಸಪೇಟೆಗೆ ಬಂದಾಗಲೆಲ್ಲ ಊಟ-ಉಪಚಾರ ನೀಡಿ ಸತ್ಕರಿಸಿದ ಶ್ರೀಮತಿ ಮಂಗಳಾ ರವೀಂದ್ರನಾಥ ಅವರ ಸೌಜನ್ಯವನ್ನು ಸ್ಮರಿಸದಿರಲಾರೆ. ಮೂರು ವರ್ಷಗಳ ಕಾಲ ನನ್ನ ಅಧ್ಯಯನಕ್ಕೆ ಸಾವಧಾನ-ವ್ಯವಧಾನಗಳಿಂದ ಸಹಕರಿಸಿದ ನನ್ನ ಪತಿ ಶರಣಶಾಂತಪ್ಪಶೆಟ್ಟಿಯವರಿಗೂ ಹಾಗೂ ನನ್ನ ಚಿರಂಜೀವಿಗಳಿಗೂ ನೆನಕೆಗಳು. ಪೂರಕ ಸಾಹಿತ್ಯ ನೀಡಿ ಸಹಕರಿಸಿದ ಶ್ರೀ ರಾಜಶೇಖರ ಗೋರಟ ಮತ್ತು ಶ್ರೀ ಬಾಬುರಾವ್ ಪೂಜಾರಿ ಅವರುಗಳಿಗೆ, ಸಂಶೋಧನೆಗೆ ಸಂಬಂಧಪಟ್ಟಂತೆ ಸಲಹೆ ಸೂಚನೆ ನೀಡಿದ ಡಾ.ಶಿವಾನಂದ ವಿರಕ್ತಮಠ ಹಾಗೂ ಡಾ.ಅಮರೇಶ ನುಗಡೋಣಿ, ಶ್ರೀಮತಿ ಬಿ. ಮಂಜುಳಾ ಅವರಿಗೆ ವಂದನೆಗಳು,

ಸಂಶೋಧನೆಗೆ ಬೇಕಾದ ಪುಸ್ತಕಗಳನ್ನು ಕೊಟ್ಟು ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯದ ಎಲ್ಲಾ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು. ಪ್ರಬಂಧ ಸಿದ್ಧತೆಯಲ್ಲಿ ಸಹಕರಿಸಿದ ಜಾಜಿ ದೇವೇಂದ್ರಪ್ಪ, ಎ. ಕರಿಬಸಪ್ಪ, ಪವನ್ ಕುಮಾರ್ ಅವರಿಗೂ ಹಾಗೂ ಡಿ.ಟಿ.ಪಿ.ಯಂತಹ ಶ್ರಮಸಾಧ್ಯವಾದ ಕೆಲಸವನ್ನು ಅಚ್ಚುಕಟ್ಟಾಗಿ ಪೂರೈಯಿಸಿದ ರಚನಾ ಗ್ರಾಫಿಕ್ಸ್‌ನ ಮಾಲೀಕರಾದ ಶ್ರೀ ಸೋಮನಾಥ ಕುಡುತಿನಿ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಶಕುಂತಲಾ ಗೋಪಶೆಟ್ಟಿ**
ಹಿರಿಯ ಶ್ರೇಣಿ ಉಪನ್ಯಾಸಕರು
ಎಸ್.ಎಸ್.ಆರ್.ಜಿ. ಮಹಿಳಾ ಮಹಾವಿದ್ಯಾಲಯ
ರಾಯಚೂರು ೫೮೪ ೧೦೧

# ಪರಿವಿಡಿ


೧. ಅಧ್ಯಯನದ ಉದ್ದೇಶ ಮತ್ತು ಸ್ವರೂಪ /೧ - ೭

೨. ಕರ್ನಾಟಕದಲ್ಲಿ ಸಿದ್ಧ ಪರಂಪರೆ /೮ - ೧೩

೩. ರೇವಣಸಿದ್ಧರು : ಪೂರ್ವಾಪರ ವಿಚಾರಗಳು /೧೪ - ೭೪

೧. ಜನನ
೨. ಕಾಲ
೩. ಬಾಲ್ಯ
೪. ಮತ
೫. ಮದುವೆ
೬. ಲೋಕಪರ್ಯಟನೆ
೭. ವ್ಯಕ್ತಿತ್ವ

೪. ರೇವಣಸಿದ್ಧರು : ಸಾಹಿತ್ಯ ಸೃಷ್ಟಿಸಿದ ಕವಿಗಳ ಇತಿವೃತ್ತ /೭೫ - ೮೨

೧. ಹರಿಹರ
೨. ಚೆನ್ನಬಸವ
೩. ಚತುರ್ಮುಖ ಬೊಮ್ಮರಸ
೪. ಜಾಲವಾದಿ ಮಲ್ಲಣ್ಣ
೫. ಚೆನ್ನಬಸವಶಾಸ್ತ್ರಿ
೬. ನಂಜನಗೂಡು ಶ್ರೀಕಂಠಶಾಸ್ತ್ರಿ.

೫. ರೇವಣಸಿದ್ಧರ ಸಾಹಿತ್ಯ : ಕಥಾವಸ್ತು ಸಮೀಕ್ಷೆ /೮೩ - ೧೫೯

೧. ಪ್ರಧಾನ ಕೃತಿಗಳು

ಅ. ಹರಿಹರನ ರೇವಣಸಿದ್ದೇಶ್ವರ ರಗಳೆ
ಆ. ಚೆನ್ನಬಸವನ ರೇವಣ ಸಾಂಗತ್ಯ
ಇ. ಚತುರ್ಮುಖ ಬೊಮ್ಮರಸನ ರೇವಣಸಿದ್ದೇಶ್ವರ ಪುರಾಣ
ಈ. ಮಲ್ಲಣನ ರೇವಣಸಿದ್ದೇಶ್ವರ ಕಾವ್ಯ
ಉ. ಚೆನ್ನಬಸವಶಾಸ್ತ್ರಿಗಳ ಹಾಲುಮತ ಪುರಾಣ
ಊ. ನಂಜನಗೂಡು ಶ್ರೀಕಂಠಶಾಸ್ತ್ರಿಗಳ ರೇಣುಕವಿಜಯ ಪುರಾಣ

೨. ಅನುಷಂಗಿಕ ಕೃತಿಗಳು

ಅ. ರಾಘವಾಂಕನ ಸಿದ್ಧರಾಮ ಚಾರಿತ್ರ್ಯ
ಆ. ವಿರುಪಾಕ್ಷ ಪಂಡಿತನ ಚೆನ್ನಬಸವಪುರಾಣ
ಇ. ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ

ಈ. ಷಡಕ್ಷರಿ ಕವಿಯ ರಾಜಶೇಖರ ವಿಳಾಸ
ಉ. ಶಾಂತಲಿಂಗದೇಶಿಕರ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ
ಊ. ಗುರುಲಿಂಗದೇಶಿಕರ ಲಿಂಗಪುರಾಣ
ಋ. ಪರ್ವತೇಶನ ಚತುರಾಚಾರ್ಯರ ಚಾರಿತ್ರ
ೠ. ರಾಚಪ್ಪಯ್ಯನ ಪ್ರಭುಚರಿತೆ
ಕ. ಜನಪದ ಹಾಲುಮತ ಮಹಾಕಾವ್ಯ
ಖ. ವಚನಗಳು
ಗ. ಸಿದ್ಧಾಂತ ಶಿಖಾಮಣಿ
ಘ. ಶಾಸನಗಳು

೬. **ರೇವಣಸಿದ್ಧರು : ಕೃತಿಗಳ ವಿಶ್ಲೇಷಣೆ** / ೧೬೦ - ೧೮೬

೧. **ಸಾಹಿತ್ಯಿಕ ವಿಶ್ಲೇಷಣೆ**

ಅ. ಸನ್ನಿವೇಶ ಇ. ಭಾಷೆ
ಆ. ಪಾತ್ರಚಿತ್ರಣ ಈ. ಶೈಲಿ

೨. **ಸಾಂಸ್ಕೃತಿಕ ವಿಶ್ಲೇಷಣೆ**

ಅ. ಸಾಮಾಜಿಕ ಇ. ರಾಜಕೀಯ ಉ. ಸ್ಥಳನಾಮಗಳು
ಆ. ಧಾರ್ಮಿಕ ಈ. ಆಚಾರ - ವಿಚಾರ

೭. **ರೇವಣಸಿದ್ಧರು : ಪುಣ್ಯಕ್ಷೇತ್ರಗಳು** / ೧೮೭ - ೨೦೨

೧. ಕೊಲ್ಲಿಪಾಕಿ ೬. ಕಂಚಿ ೧೧. ಇಂಗಳೇಶ್ವರ
೨. ಮಂಗಳವಾಡ ೭. ಮಾಸೂರು ೧೨. ರೇವಣಸಿದ್ದೇಶ್ವರ ಬೆಟ್ಟ
೩. ಮಾಸನೂರು ೮. ಹೂಲಿ ೧೩. ಬಾಳೆಹೊನ್ನೂರು
೪. ಸೊನ್ನಲಿಗೆ ೯. ಮುನವಳ್ಳಿ
೫. ಕೊಲ್ಲಾಪುರ ೧೦. ಸಿರಿವಾಳ

೮. **ಸಮಾರೋಪ** / ೨೦೩ - ೨೧೧

**ಅನುಬಂಧ** / ೨೧೨ - ೨೮೪

೧. ವಚನಗಳು ೩. ಕಾವ್ಯ ಪಾಠ ೫. ಗ್ರಂಥಋಣ
೨. ಶಾಸನ ಪಾಠ ೪. ಛಾಯಾಚಿತ್ರ

# ೧

# ಅಧ್ಯಯನದ ಉದ್ದೇಶ ಮತ್ತು ಸ್ವರೂಪ

# ೧

# ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರು ವೀರಶೈವಮತ ಚರಿತ್ರೆ ಎಂಬ ಅಧ್ಯಾಯವೊಂದನ್ನು ತೆರೆದರು. ಬಸವ ಕೇಂದ್ರಿತವಾದ ಈ ಯುಗವನ್ನು ಬಸವಯುಗವೆಂತಲೂ ವಚನಕೇಂದ್ರಿತವಾದ ಇವರ ಸಾಹಿತ್ಯವನ್ನು ವಚನ ಸಾಹಿತ್ಯವೆಂತಲೂ ಕರೆಯುವ ರೂಢಿಯಾಯಿತು. ಈ ಹಿನ್ನೆಲೆಯಲ್ಲಿ ನೂರಾರು ಶಿವಶರಣರು ಸಾವಿರಾರು ವಚನಗಳ ರಚನೆಗೆ ಮುಂದಾಗಿ ಹನ್ನೆರಡನೆಯ ಶತಮಾನ ವೆಂದರೆ ಅದು ಶಿವಶರಣರ ಶತಮಾನ, ಅದು ವಚನಗಳ ಶತಮಾನ ಎನ್ನುವಷ್ಟು ಪ್ರಾಮುಖ್ಯತೆಯನ್ನು ತಂದುಕೊಟ್ಟರು. ಆದರೆ ಒಂದು ಮಾತನ್ನು ನಾವು ಗಮನಿಸಬೇಕು. ಯಾವುದೇ ಸಾಹಿತ್ಯ ಉಚ್ಛ್ರಾಯ ಸ್ಥಿತಿಯನ್ನು ತಲುಪಿದಲ್ಲಿ ಅದಕ್ಕೆ ಜನ್ಮ ನೀಡಿದ ಪ್ರಾರಂಭದ ಹಂತ ಮತ್ತು ಅವಸಾನಗೊಳ್ಳುವ ಅಂತ್ಯದ ಹಂತಗಳು ಇರುವುದನ್ನು ಬೇರೆ ಹೇಳಬೇಕಾಗಿಲ್ಲ. ಈ ಮಾತನ್ನು ಹೇಳುವುದಕ್ಕೆ ಕಾರಣವಿಷ್ಟೆ, ಬಸವಯುಗ ದಿಂದಲೇ, ಬಸವಣ್ಣನವರಿಂದಲೇ ಒಮ್ಮೆಲೆ ವಚನ ಸಾಹಿತ್ಯ ಸೃಷ್ಟಿಗೊಳ್ಳಲಿಲ್ಲ ಅದಕ್ಕಿಂತ ಪೂರ್ವದಲ್ಲಿ ಆ ಕ್ಷೇತ್ರದಲ್ಲಿ ಹಲಕೆಲವು ಆದ್ಯ ವಚನಕಾರರಿಂದ ವಚನ ಸಾಹಿತ್ಯದ ಸೃಷ್ಟಿ ಆಗಿರಬೇಕು. ಈ ಅಂಶವನ್ನು ಈಗಾಗಲೇ ವಿದ್ವಾಂಸರು ಗುರುತಿಸಿ "ಬಸವಣ್ಣನಿ ಗಿಂತ ಹಿಂದೆ ಆಚಾರ್ಯ ರೇವಣಸಿದ್ಧ, ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಏಕಾಂತದ ರಾಮಯ್ಯ ಮೊದಲಾದ ಮಹನೀಯರು ಲಿಂಗವಂತಧರ್ಮದ ಅಭ್ಯುದಯ ಕ್ಕಾಗಿ ತಕ್ಕಷ್ಟು ಪ್ರಯತ್ನಗಳನ್ನು ನಡೆಸಿದ್ದಾರೆಂಬುದಕ್ಕೆ ಚರಿತ್ರೆಯಲ್ಲಿ ಆಧಾರಗಳಿವೆ. ಬಸವಣ್ಣನವರು ಮಾಡಿದ ಮಹತ್ಕಾರ್ಯಗಳು ಕೇವಲ ಅವರೊಬ್ಬರಿಂದ ಮಾತ್ರ

ಆದವುಗಳಲ್ಲ. ಅವರ ವಿಜಯಕ್ಕೆ ಅವರ ಸಮಕಾಲೀನವರಾದ ಹಲವು ಮಂದಿ ಮಹಾತ್ಮರು ಬಹು ಮಟ್ಟಿಗೆ ಕಾರಣಕರ್ತರು. ಅವರುಗಳಲ್ಲಿ ಆಚಾರ್ಯ ರೇವಣಸಿದ್ಧ, ಮಹಾತ್ಮ ಮರುಳಸಿದ್ದ, ಏಕೋ ರಾಮಿತಂದೆ, ಕೊಂಡಗುಳಿ ಕೇಶಿರಾಜ, ಹಾವಿನಹಾಳ ಕಲ್ಲಯ್ಯ, ಏಕಾಂತರಾಮಯ್ಯ, ಅನಿಮಿಷಯ್ಯ, ಶಿವಲೆಂಕಮಂಚಣ್ಣ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಘನಲಿಂಗಿ ರುದ್ರಮುನಿ, ಪ್ರಭುದೇವ, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಯ್ಯ, ಅಕ್ಕನಾಗಮ್ಮ, ಗಂಗಾಬಿಕೆ, ನೀಲಾಂಬಿಕೆ, ವರದಾನಿಗುಡ್ಡಮ್ಮ, ಅಮುಗಿದೇವಯ್ಯ, ಮೋಳಿಗೆ ಮಾರಯ್ಯ, ಸಕಲೇಶಮಾದರಸ, ಸೊಡ್ಡಳ ಬಾಚರಸ ಮೊದಲಾದರವರ ಹೆಸರುಗಳನ್ನು ಇಲ್ಲಿ ನಾವು ಉಲ್ಲೇಖಿಸಬಹುದು."[೧] ಬಸವಯುಗದ ಚಾರಿತ್ರಿಕ ಬೆಳವಣಿಗೆಯನ್ನು ಪರಿಪೂರ್ಣವಾಗಿ ಕಟ್ಟಿಕೊಡುವದಕ್ಕೆ ಅವರ ಹಿರಿಯ ಸಮಕಾಲೀನ ಮತ್ತು ಸಮಕಾಲೀನ ಈ ಮಹನೀಯರ ಚರಿತ್ರೆಯನ್ನು ಅಧ್ಯಯನ ಮಾಡುವದು ಅಗತ್ಯವಾಗಿದೆ. ಇಂತಹ ಅಧ್ಯಯನದ ಅಗತ್ಯತೆಗಳಲ್ಲಿ ಅಥವಾ ಉದ್ದೇಶಗಳಲ್ಲಿ ಬಂದು ನಿಲ್ಲುತ್ತಾರೆ ರೇವಣಸಿದ್ಧರು.

ರೇವಣಸಿದ್ಧ ಎಂಬ ಹೆಸರು ಮತ್ತು ಇತಿಹಾಸ ವೀರಶೈವದಲ್ಲಿ ಒಂದು ಒಗಟು. ಹೀಗಾಗಿ ಈ ಹೆಸರಿನ ಮೂವರು ರೇವಣಸಿದ್ಧರು ಇರುವದನ್ನು ವಿದ್ವಾಂಸರು ಗುರುತಿಸುತ್ತಾರೆ. ಅವರಲ್ಲಿ ಒಬ್ಬ ಕ್ರಿ.ಪೂರ್ವದ ಅಂದರೆ ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾದ ಸಿದ್ಧಾಂತ ಶಿಖಾಮಣಿಯ ಕರ್ತೃ ರೇವಣಸಿದ್ಧ, ಇನ್ನೊಬ್ಬ ಬಸವಾದಿ ಪ್ರಮಥರ ಸಮಕಾಲೀನವನಾದ ರುದ್ರಮುನಿಯ ತಂದೆಯಾದ ರೇವಣಸಿದ್ಧ. ಮಗದೊಬ್ಬ ಬಸವೋತ್ತರ ಕಾಲದಲ್ಲಿ ಬದುಕಿದ್ದ ರೇವಣಸಿದ್ಧ ಹೀಗೆ ಮೂರುಜನ ರೇವಣಸಿದ್ಧರನ್ನು ಕೆ.ಜಿ.ನಾರಾಯಣ ಪ್ರಸಾದ ಆದಿಯಾಗಿ ಅನೇಕ ವಿದ್ವಾಂಸರು ಗುರುತಿಸುತ್ತಾರೆ. ಇದಲ್ಲದೆ ಕ್ರಿ.ಶ. ೧೭೫೦ರಲ್ಲಿ ಶಂಕರಲಿಂಗ ಕಾವ್ಯದ ಕರ್ತೃ ಮತ್ತು ಕ್ರಿ.ಶ. ೧೮೦೦ರಲ್ಲಿ ಕೀರಿಟೇಶ್ವರ ಪುರಾಣ ಬರೆದ ರೇವಣಸಿದ್ಧ ಹೆಸರಿನ ಇಬ್ಬರು ಕವಿಗಳ ಉಲ್ಲೇಖವಿರುವುದು ಸಾಹಿತ್ಯ ಚರಿತ್ರೆಯಲ್ಲಿ ಕಂಡುಬರುತ್ತದೆ. ಕೊನೆಯ ಮೂವರು ರೇವಣಸಿದ್ಧರನ್ನು ಅಂದರೆ ಬಸವೋತ್ತರ ಯುಗದ ರೇವಣಸಿದ್ಧ ಮತ್ತು ಶಂಕರಲಿಂಗ ಕಾವ್ಯ ಮತ್ತು ಕೀರಿಟೇಶ್ವರ ಪುರಾಣ ಕೃತಿಗಳ ರೇವಣಸಿದ್ಧರನ್ನು ಹೊರತುಪಡಿಸಿ, ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾದ ರೇವಣಸಿದ್ಧ ಮತ್ತು ಶರಣರ ಸಮಕಾಲೀನರಾದ ರೇವಣ ಸಿದ್ಧರ ಕುರಿತಂತೆ ಅನೇಕ ಸಂದೇಹಗಳಿವೆ. ಕೆಲವರು ಇವರಿಬ್ಬರು ಒಂದೇ ಎಂತಲೂ, ಇನ್ನೂ ಕೆಲವರು ಬೇರೆ ಬೇರೆ ಎಂತಲೂ ಹೇಳುವವರಿದ್ದಾರೆ.

ಸಿದ್ಧಾಂತ ಶಿಖಾಮಣಿ ಕರ್ತೃ ಮತ್ತು ಹನ್ನೆರಡನೆಯ ಶತಮಾನದ ರೇವಣಸಿದ್ಧರು ಬೇರೆ ಎಂಬುದಕ್ಕೆ ಕೆಲವು ವಿದ್ವಾಂಸರು ಕೊಡುವ ಕಾರಣಗಳು ಹೀಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತವನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ ಹೆಸರಿನಲ್ಲಿ ಸಂಗ್ರಹಿಸಿದ್ದಾರೆಂಬುದನ್ನು ಶ್ರೀ ಮರಿತೋಂಟಾದಾರ್ಯರ

ರೇಣುಕಾಗಸ್ತ್ಯ ಸಂವಾದಂ ನಿಗಮಾಗಮವಿಶ್ರುತಮ್ |
ಪ್ರದೀಪಯತಿಗುಪ್ತಾರ್ಥಮುದ್ಧೃತ್ಯ ಶಿವಯೋಗಿರಾಟ್ ||

ಉಕ್ತಿಯಿಂದ ಸ್ಥಿರಪಡಿಸಿಕೊಂಡು ಶಿವಯೋಗಿ ಶಿವಾಚಾರ್ಯರ ಕಾಲ ನಿರ್ಣಯಕ್ಕೆ ತೊಡಗುತ್ತಾರೆ. ಶಿವಯೋಗಿ ಶಿವಾಚಾರ್ಯರು ತನ್ನ ಸಿದ್ಧಾಂತ ಶಿಖಾಮಣಿಯ ಪ್ರಥಮ ಪರಿಚ್ಛೇದದ ಹದಿಮೂರನೇ ಶ್ಲೋಕದಿಂದ ಇಪ್ಪತ್ನಾಲ್ಕನೆಯ ಶೋಕ್ಲದವರೆಗಿನ ಹನ್ನೆರಡು ಶ್ಲೋಕಗಳಲ್ಲಿ ತನ್ನ ವಂಶಾವಳಿ ಮತ್ತು ವ್ಯಕ್ತಿತ್ವವನ್ನು ಪರಿಚಯಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಈತನೊಬ್ಬ ಆಚಾರ್ಯನಿದ್ದು ಶಿವಯೋಗಿ ಎಂಬುವವನ ಮರಿಮೊಮ್ಮಗ, ಮುದ್ದದೇವನ ಮೊಮ್ಮಗ, ಸಿದ್ಧನಾಥನ ಮಗ ಎಂಬುದಾಗಿ ತಿಳಿಸುತ್ತಾನೆ. ಇದೇ ಜಾಡನ್ನು ಹಿಡಿದುಕೊಂಡು ಹೋದ ಶ್ರೀ ಮರಿತೋಂಟಾದಾರ್ಯರು ಬಹುಶಃ ಈತನ ವಂಶದಲ್ಲಿ ಕಂಡುಬರುವ ಮುದ್ದದೇವ ಹೆಸರಿನ ಈತನ ಅಜ್ಜ ಸೊನ್ನಲಿಗೆಯ ಸಿದ್ಧರಾಮನ ತಂದೆಯಾದ ಮುದ್ದಗೌಡನೇ ಇರಬೇಕು ಮತ್ತು ಶಿವಯೋಗಿ ಶಿವಾಚಾರ್ಯನ ತಂದೆ ಸಿದ್ಧನಾಥ ವಚನಕಾರ ಸಿದ್ಧರಾಮನೇ ಇರಬೇಕು ಎಂದು ಭಾವಿಸಿ, ಶ್ರೀ ಶಿವಯೋಗಿ ಶಿವಾಚಾರ್ಯರರಿಂದ ರಚಿಸಲ್ಪಟ್ಟ ಸಿದ್ಧಾಂತ ಶಿಖಾಮಣಿಯ ಕಾಲ ಹನ್ನೆರಡನೆಯ ಶತಮಾನ ಮತ್ತು ಸಿದ್ಧಾಂತ ಶಿಖಾಮಣಿಯು ವಚನಕಾರ ಸೊನ್ನಲಿಗೆಯ ಸಿದ್ಧರಾಮರ ಮನೆತನದಲ್ಲಿ ರಚಿತವಾಗಿರುವಂತೆ ಭಾವಿಸಬೇಕಾಗುತ್ತದೆ ಎಂದು ಅಭಿಪ್ರಾಯಪಡುತ್ತಾನೆ. ಇದನ್ನು ಒಪ್ಪದ ಕೆಲವು ವಿದ್ವಾಂಸರು ಸಿದ್ಧರಾಮನಿಗೆ ಸಂಬಂಧಿಸಿದ ಕೃತಿಗಳಲ್ಲಿ ಶಿವಯೋಗಿ ಎಂಬ ಪುತ್ರನಿದ್ದ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ ಎಂದು ಅಭಿಪ್ರಾಯ ಪಡುತ್ತಾ, ಎನ್.ಆರ್.ಕರಿಬಸವಶಾಸ್ತ್ರೀಗಳು ಸಿದ್ಧಾಂತ ಶಿಖಾಮಣಿ ಗ್ರಂಥಕ್ಕೆ ತಾತ್ಪರ್ಯ ದೀಪಿಕಾ ಎಂಬ ಕನ್ನಡ ವ್ಯಾಖ್ಯಾನವನ್ನು ಬರೆದು, ಗ್ರಂಥದ ಪ್ರಸ್ತಾವನೆಯಲ್ಲಿ ಶ್ರೀ ಮರಿತೋಂಟಾದಾರ್ಯರ ಮೇಲಿನ ವಿಚಾರಗಳನ್ನು ಅಲ್ಲಗಳೆದು ಸಿದ್ಧಾಂತ ಶಿಖಾಮಣಿ ಬಸವಾದಿ ಶಿವಶರಣರ ಅವತಾರಕ್ಕಿಂತಲೂ ಪೂರ್ವದ್ದೆಂಬ ಅಭಿಪ್ರಾಯವನ್ನು ಹೀಗೆ ನಿರೂಪಿಸುತ್ತಾರೆ.

"ಶ್ರೀ ಶಿವಯೋಗಿ ಶಿವಾಚಾರ್ಯರು ತಮ್ಮ ವಂಶಪರಂಪರೆಯನ್ನು ಹೇಳುವಾಗ ತನ್ನ ತಾಯಿ ಅಜ್ಜಿ ಹಾಗೂ ಮುತ್ತಜ್ಜಿಯರ ಹೆಸರುಗಳನ್ನು ಹೇಳದೆ ತಂದೆ - ಅಜ್ಜ ಹಾಗೂ ಮುತ್ತಜ್ಜರ ಹೆಸರುಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿದ್ದಾರೆ. ಆದ್ದರಿಂದ ಇವರ ಈ ವಂಶಪರಂಪರೆಯು ಗೃಹಸ್ಥ ಪರಂಪರೆಯಾಗಿರದೆ ಪುತ್ರವರ್ಗದ ಗುರುಪರಂಪರೆ ಎಂಬುದಾಗಿ ಹೇಳಲು ಅವಕಾಶವಿದೆ. ಪುತ್ರವರ್ಗದ ಗುರುಪರಂಪರೆಯಲ್ಲಿ ತಮ್ಮ ವಂಶಸಂಜಾತನಾದ ಒರ್ವ ಯೋಗ್ಯ ವಟುವಿಗೆ ದೀಕ್ಷಾದಿ ಸಂಸ್ಕಾರಗಳನ್ನು ಮಾಡಿ ಮುಂದೆ ತಮ್ಮ ಮಠಪರಂಪರೆಗೆ ಉತ್ತರಾಧಿಕಾರಿ ಶಿವಾಚಾರ್ಯರನ್ನಾಗಿ ಮಾಡುತ್ತಾರೆ. ಈ ಪರಂಪರೆಯಲ್ಲಿ ಬರುವ ಶಿಷ್ಯನಿಗೆ ಪುತ್ರನೆಂಬುದಾಗಿಯೂ ಸಹ ಕರೆಯುವುದುಂಟು. ಅಂತೆಯೇ ಶಿವಯೋಗಿ ಶಿವಾಚಾರ್ಯರು ಇಲ್ಲಿ 'ನಂದನ' ಎಂಬ ಶಬ್ದವನ್ನು ಪ್ರಯೋಗಿಸಿದ್ದನ್ನು ಕಾಣಬಹುದು. ವೀರಶೈವಧರ್ಮದ ಗುರುವರ್ಗದ ಮಠಗಳಲ್ಲಿ ಪುತ್ರವರ್ಗದ ಸಂಪ್ರದಾಯದ ಮಠಪರಂಪರೆಯಲ್ಲಿ

ಅತ್ಯಂತ ಪ್ರಾಚೀನ ಕಾಲದಿಂದ ನಡೆದುಬಂದುದಾಗಿದ್ದು ಅದು ಇಂದಿಗೂ ಸಹ ಪ್ರಚಲಿತದಲ್ಲಿರುತ್ತದೆ. ಈ ದೃಷ್ಟಿಯಿಂದ ನೋಡಲಾಗಿ ಪ್ರಾಚೀನಕಾಲದ ಶ್ರೀ ಶಿವಯೋಗಿ ಶಿವಾಚಾರ್ಯನ ಶಿಷ್ಯನು ಮುದ್ದದೇವ ಶಿವಾಚಾರ್ಯರು. ಆ ಮುದ್ದದೇವ ಶಿವಾಚಾರ್ಯ ಶಿಷ್ಯನು ಸಿದ್ಧನಾಥ ಶಿವಾಚಾರ್ಯರು ಮತ್ತು ಆ ಸಿದ್ಧನಾಥ ಶಿವಾಚಾರ್ಯನ ಶಿಷ್ಯನು ಈ ಗ್ರಂಥಕರ್ತೃವಾದ ಶಿವಯೋಗಿ ಶಿವಾಚಾರ್ಯನೆಂಬುದಾಗಿ ಒಪ್ಪಿಕೊಳ್ಳುವದು ಸೂಕ್ತ ಎಂಬುದಾಗಿ ನಮಗೆ ತಿಳಿದುಬರುತ್ತದೆ. ಇದರ ಮೇಲಿಂದ ಶ್ರೀ ಶಿವಯೋಗಿ ಶಿವಾಚಾರ್ಯರು ಪುತ್ರವರ್ಗ ಪರಂಪರೆಯ ಒಂದು ಗುರುವರ್ಗ ಮಠದ ಪಟ್ಟಾಧ್ಯಕ್ಷರಾಗಿದ್ದರೆಂಬುದಾಗಿ ಊಹಿಸಬಹುದಾಗಿದೆ. ವೀರಶೈವ ಧರ್ಮದಲ್ಲಿ ಪಂಚಪೀಠಗಳು, ಪಂಚಪೀಠಗಳ ಶಾಖಾನುವರ್ತಿಗಳಾದ ಶಿವಾಚಾರ್ಯರ ಪರಂಪರೆಯು ಸನಾತನವಾದುದೆಂಬುದರಲ್ಲಿ ಯಾವ ಸಂದೇಹವಿರುವದಿಲ್ಲ."[೨] ಅಲ್ಲದೆ ಹನ್ನೆರಡನೆಯ ಶತಮಾನದಲ್ಲಿ ರಚಿತವಾಯಿತೆನ್ನಲಾದ ಅಭಿಪ್ರಾಯಗಳನ್ನು ಶ್ರೀಕರಭಾಷಾ ಆಧಾರದಿಂದ ಅಲ್ಲಗಳೆದು ಆದ್ಯ ಶಂಕರಾಚಾರ್ಯರಿಗಿಂತಲೂ ಸಿದ್ಧಾಂತ ಶಿಖಾಮಣಿ ಪೂರ್ವದ್ದೆಂದೂ ಅಂದರೆ ಏಳನೆಯ ಶತಮಾನಕ್ಕೆ ಕೊಂಡೊಯ್ಯುವ ಪ್ರಯತ್ನಗಳು ನಡೆದಿವೆ.

ಈ ಮೇಲಿನ ಎಲ್ಲ ಪ್ರಸ್ತಾಪಗಳನ್ನು ನಾವು ಇಲ್ಲಿ ಉಲ್ಲೇಖಿಸುವ ಉದ್ದೇಶವೆಂದರೆ ಶ್ರೀ ರೇಣುಕಾಗಸ್ತ್ಯ ಸಂವಾದವಾದ ಶ್ರೀ ಸಿದ್ಧಾಂತ ಶಿಖಾಮಣಿಯ ಕಾಲನಿರ್ಣಯವನ್ನು ೭ನೇ ಶತಮಾನಕ್ಕೆ ಒಯ್ಯುವುದರ ಜೊತೆಗೆ ಅದರ ಸೃಷ್ಟಿಗೆ ಕಾರಣರಾದ ರೇವಣಸಿದ್ಧನನ್ನು ಇನ್ನೂ ಪ್ರಾಚೀನಕ್ಕೆ ಕೊಂಡೊಯ್ಯುವ ಪ್ರಯತ್ನಗಳು ನಡೆದಿವೆ. ಹೀಗಾಗಿ ರೇವಣಸಿದ್ಧರು ಒಂದು ಅಧ್ಯಯನ ಎಂಬ ಸಂಶೋಧನ ಸಮಸ್ಯೆಯನ್ನು ಕೈಗೆತ್ತಿಕೊಂಡರೆ ಆತನ ಕಾಲ ನಿರ್ಣಯ, ಜನನ ವೃತ್ತಾಂತ ಇತ್ಯಾದಿ ವಿಷಯಗಳು ಸಮಸ್ಯಾತ್ಮಕ ಜಾಲವನ್ನೇ ಹೆಣೆಯುತ್ತವೆ. ಕೇವಲ ಕಾವ್ಯಗಳನ್ನಾಧರಿಸಿ ಈತನ ಚರಿತ್ರೆಯನ್ನು ಕಟ್ಟಬೇಕು ಎನ್ನುವವರಿಗೆ ಕೆಲ ಕಾವ್ಯಗಳಲ್ಲಿ "ಬಂದಗಸ್ತ್ಯನ ಕೂಡೆ ಶಿವಭಕ್ತಿಗೋಷ್ಠಿಯೊಳು ನಿಂದು" ಎಂಬ ಅಗಸ್ತ್ಯ ಮತ್ತು ರೇವಣರನ್ನು ತಳಕು ಹಾಕುವದರ ಮೂಲಕ ಸಿದ್ಧಾಂತ ಶಿಖಾಮಣಿಯ ಕರ್ತೃ ಇದೇ ರೇವಣಸಿದ್ಧ ಎಂಬುದಾಗಿ ವಾದಿಸಲು ಆಸ್ಪದ ದೊರೆಯುತ್ತದೆ. ಆದರೆ ಪುರಾಣ ಕರ್ತೃವಿನ ಮನೋಧರ್ಮ ಇತಿಹಾಸ ವ್ಯಕ್ತಿಗೆ ಪುರಾಣ ವಸ್ತುವನ್ನು ಆರೋಪಿಸುವದು ಸರ್ವಸಾಮಾನ್ಯ. ಈ ಮಾತನ್ನೇ ಸಿದ್ಧಾಂತ ಶಿಖಾಮಣಿ ಕರ್ತೃ ರೇವಣಸಿದ್ಧ ಮತ್ತು ಹದಿಮೂರನೆ ಶತಮಾನದ ಹರಿಹರ ಕವಿಯಾದಿಯಾಗಿ ಮಿಕ್ಕ ಕವಿಗಳು ಬರೆದ ರೇವಣಸಿದ್ದೇಶ್ವರ ಕೃತಿಗಳಾದ ಈಶಾನ್ಯಗುರು ರಚಿತ ರೇಣುಕ ಚಂಪೂ, ಶ್ರೀಕಂಠಶಾಸ್ತ್ರೀ ವಿರಚಿತ ರೇಣುಕ ವಿಜಯ ಪುರಾಣಂ ಮತ್ತು ಚತುರ್ಮುಖ ಬೊಮ್ಮರಸರ ರೇವಣಸಿದ್ದೇಶ್ವರ ಪುರಾಣ ಇತ್ಯಾದಿ ಗ್ರಂಥಗಳಲ್ಲಿ ರೇಣುಕರ ಹಾಗು ರೇವಣಸಿದ್ದೇಶ್ವರರ ಲೀಲೆಗಳನ್ನು ಮಿಶ್ರಮಾಡಿ ವರ್ಣಿಸಿದ್ದಾರೆ. ಹೀಗಾಗಿ ರೇವಣಸಿದ್ಧರ ಇತಿವೃತ್ತವನ್ನು ಕಟ್ಟಿಕೊಡುವಲ್ಲಿ ಸ್ಪಷ್ಟತೆ ಗೋಚರಿಸುವುದಿಲ್ಲ. ಪ್ರಸ್ತುತ ಅಧ್ಯಯನ ಪಂಡಿತಾರಾಧ್ಯ ಮತ್ತು ಮರುಳಸಿದ್ಧರ ಸಮಕಾಲೀನವರಾದ ರೇವಣಸಿದ್ಧರನ್ನು ಸಿದ್ಧಾಂತ ಶಿಖಾಮಣಿಯ ರೇವಣಸಿದ್ಧರಿಂದ

ಪ್ರತ್ಯೇಕಿಸಿ ನೋಡುವ, ಸಾಹಿತ್ಯ ಚರಿತ್ರೆಯಲ್ಲಿ ಅದರಲ್ಲೂ ಹನ್ನೆರಡನೆಯ ಶತಮಾನದ ಸಮಾಜೋಧಾರ್ಮಿಕ ಕ್ಷೇತ್ರದಲ್ಲಿ ಈತನ ಸ್ಥಾನವನ್ನು ನಿರ್ಧರಿಸುವ ಉದ್ದೇಶವನ್ನಿರಿಸಿಕೊಂಡು ಇಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮೂರು ಕೋಟಿ ಶಿವಲಿಂಗ ಪ್ರತಿಷ್ಠಾಪನೆ ಲೀಲೆಯನ್ನು ಹೊರಗಿಟ್ಟು ರೇವಣಸಿದ್ಧರು ಲೋಕಸಂಚಾರದಲ್ಲಿ ಮಾಡಿದರೆನ್ನಲಾದ ಪವಾಡಗಳಲ್ಲಿ ಮಾಸನೂರಿನ ಯಕ್ಷ ಮಿಥುನಗಳ ಉದ್ಧಾರ, ವಿಕ್ರಮಾದಿತ್ಯನಿಗೆ ಖಡ್ಗ ಪ್ರಧಾನ, ಬಿಜ್ಜಳನಿಗೆ ಖಡ್ಗಪ್ರಧಾನ, ಕಲ್ಯಾಣದ ಬಳಿ ತ್ರಿಪುಂತಾಕೇಶ್ವರನ ಕೆರೆಯ ನಿರ್ಮಾಣ ಹಾಗೂ ಸೊನ್ನಲಿಗೆಯ ಸುಗ್ಗಲದೇವಿಗೆ ಪುತ್ರಾನುಗ್ರಹ ಇತ್ಯಾದಿ ಕಾವ್ಯಕ್ತ ಉಲ್ಲೇಖಗಳನ್ನು ಗಮನಿಸಿ ಮತ್ತು ಕಲ್ಯಾಣಚಾಲುಕ್ಯರ ಅವಧಿಯ ಕ್ರಿ.ಶ. ೧೧೨೭ರ ಕಕ್ಕೇರಿ ಶಾಸನ, ಕ್ರಿ.ಶ. ೧೧೫೫ರ ಯಡ್ರಾಮಿ ಶಾಸನ, ಕ್ರಿ.ಶ. ೧೧೯೯ರ ಕೊಲ್ಲೂರು ಶಾಸನ, ಕ್ರಿ.ಶ. ೧೧೩೫ರ ಹೋತಗಲ್ ಶಾಸನ, ಕ್ರಿ.ಶ. ೧೧೭೬ರ ಐವೂರ ಶಾಸನ, ಕ್ರಿ.ಶ. ೧೧೮೭ರ ಬಯಿರಿತ್ತಿ ಶಾಸನ, ಕ್ರಿ.ಶ. ೧೧೮೦ರ ಕೊಳಕೂರು ಶಾಸನ, ಕ್ರಿ.ಶ. ೧೨೦೦ರ ನಡಾಲ ಮತ್ತು ಪುಳಜೆ ಶಾಸನ, ಕ್ರಿ.ಶ. ೧೩೪೬ರ ತೊಂಡವಾಡಿ ಶಾಸನ, ಕ್ರಿ.ಶ. ೧೩೧೩ರ ಲಕ್ಷ್ಮೇಶ್ವರ ಶಾಸನ, ಕ್ರಿ.ಶ. ೧೧೮೭ರ ಸಿರಿವಾಳ ಶಾಸನ ಮುಂತಾದ ಶಾಸನಗಳಲ್ಲಿ ರೇವಣಸಿದ್ಧರು ಉಲ್ಲೇಖಗೊಂಡಿರುವದು ಗಮನಿಸಿದರೆ ಬಸವಪೂರ್ವ ಯುಗದಲ್ಲಿ ಬದುಕಿದ ಪಂಚಾಚಾರ್ಯ ಪಂಡಿತದ್ವಯರಾದ ಶ್ರೀಪತಿ ಪಂಡಿತ, ಅಮರಗುಂಡದ ಮಲ್ಲಿಕಾರ್ಜುನರ ಸಮಕಾಲೀನನಾಗಿ ರೇವಣಸಿದ್ಧರು ಜೀವಿಸಿದ್ದಿರಬಹುದೆಂಬ ಐತಿಹಾಸಿಕ ಸಂಗತಿಯನ್ನು ಈ ಮೇಲಿನ ಶಾಸನಗಳು ನಿರೂಪಿಸುತ್ತವೆ.

ಸಮಕಾಲೀನ ವಚನಕಾರರಾದ, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಿದೇವ, ಆದಯ್ಯ, ಹಾವಿನಾಳು ಕಲ್ಲಯ್ಯ, ಸಿದ್ಧರಾಮ, ಸಂಗನಬಸವ ಮುಂತಾದ ಶಿವಶರಣ ವಚನಗಳಲ್ಲಿ ಹಾಗೂ ಹನ್ನೆರಡನೆಯ ಶತಮಾನದ ನಂತರ ಸೃಷ್ಟಿಯಾದ ವೀರಶೈವ ಪುರಾಣ ಕಾವ್ಯಗಳಾದ ಸಿದ್ಧನಂಜೇಶನ ಗುರುರಾಜ ಚಾರಿತ್ರ, ಶಾಂತಲಿಂಗ ದೇಶಿತರ ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರ, ರಾಘುವಾಂಕನ ಸಿದ್ಧರಾಮ ಚಾರಿತ್ರ, ಷಡಕ್ಷರಿ ಕವಿಯ ರಾಜಶೇಖರ ವಿಳಾಸ, ಸಂಪಾದನೆ ಪರ್ವತೇಶನ ಚತುರಾಚಾರ್ಯರ ಪುರಾಣ ಇತ್ಯಾದಿ ಕೃತಿಗಳು ರೇವಣಸಿದ್ಧರ ಸಾಧನೆ - ಮಹತ್ವವನ್ನು ವರ್ಣಿಸುತ್ತವೆ. ಈ ಎಲ್ಲ ಆಧಾರಗಳನ್ನಿರಿಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಕವಿಯ ಕಾಲ, ಊರು, ಮತ ಮತ್ತು ಆತನ ವ್ಯಕ್ತಿತ್ವವನ್ನು ಕಟ್ಟಿಕೊಡುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿ ಕೊಳ್ಳಲಾಗಿದೆ.

ಸಾಂಸ್ಕೃತಿಕವಾಗಿ ರೇವಣಸಿದ್ಧರು ಸಂಚರಿಸಿದರೆನ್ನಲಾದ ರೇವಣಸಿದ್ದೇಶ್ವರ ಬೆಟ್ಟ, ಸಿದ್ಧರಬೆಟ್ಟ, ಶಿವಗಂಗ ಕ್ಷೇತ್ರದ ರೇವಣಸಿದ್ದೇಶ್ವರ ದೇವಸ್ಥಾನ, ತುಮಕೂರು ಜಿಲ್ಲೆಯ ಸಿದ್ಧರಬೆಟ್ಟ, ಸೊಲ್ಲಾಪುರದ ರೇವಣಸಿದ್ದೇಶ್ವರ ದೇವಾಲಯ, ಮಾಸನೂರು ಮತ್ತು ಮಂಗಳವೇಡೆಯಲ್ಲಿ ರೇವಣಸಿದ್ದೇಶ್ವರ

ದೇವಾಲಯಗಳು ಪ್ರಮುಖವಾಗಿದ್ದು ಇವುಗಳ ಮಹತ್ವವನ್ನು ಕುರಿತು ಇಲ್ಲಿ ಪರಿಚಯಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಕಾವ್ಯ, ಶಾಸನ, ವಚನಗಳನ್ನು ಮತ್ತು ಈಗ ಅಸ್ತಿತ್ವದಲ್ಲಿರುವ ನಾಡಿನ ರೇವಣಸಿದ್ದೇಶ್ವರ ಪುಣ್ಯಕ್ಷೇತ್ರಗಳನ್ನು ಆಕರವಾಗಿಟ್ಟುಕೊಳ್ಳಲಾಗಿದೆ. ಈತನನ್ನು ಕುರಿತು ಸಿದ್ದನಾಥ ಶಿವಾಚಾರ್ಯರ ರೇಣುಕ ವಿಜಯ, ಈಶಾನ್ಯ ಶಿವಗುರು ರೇಣುಕ ಚಂಪು ಎಂಬ ಸಂಸ್ಕೃತ ಕಾವ್ಯಗಳು ರಚನೆಯಾಗಿದ್ದು, ಅವುಗಳನ್ನು ಪ್ರಸ್ತುತ ಅಧ್ಯಯನದಿಂದ ಹೊರಗಿಡಲಾಗಿದೆ. ಹೀಗಾಗಿ ನಮ್ಮ ಈ ಪ್ರಬಂಧ ಕನ್ನಡ ಸಾಹಿತ್ಯದಲ್ಲಿ ರೇವಣಸಿದ್ಧರು ಎಂಬ ವ್ಯಾಪ್ತಿಯನ್ನು ಪಡೆದುಕೊಂಡಿದೆ.

**ಕೊನೆ ಟಿಪ್ಪಣಿಗಳು**

೧. ಬಸವೇಶ್ವರರ ಸಮಕಾಲೀನರು, ಬಸವ ಸಮಿತಿ, ಬೆಂಗಳೂರು, ಪು. ೨೧೫ - ೨೧೬

೨. ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ, ಸಂಪುಟ - ೧, ಡಾ.ಚಂದ್ರಶೇಖರ ಮಹಾಸ್ವಾಮಿಗಳು, ಪು. ೧೩-೧೪

❖❖

# ೨

# ಕರ್ನಾಟಕದಲ್ಲಿ ಸಿದ್ಧ ಪರಂಪರೆ

## ೨

# ಕರ್ನಾಟಕದಲ್ಲಿ ಸಿದ್ಧ ಪರಂಪರೆ

ಧಾರ್ಮಿಕ ಇತಿಹಾಸದಲ್ಲಿ ಮುಕ್ತಿಗೆ ಅನೇಕ ಮಾರ್ಗಗಳಿವೆ. ಅವುಗಳನ್ನು ಯೋಗಮಾರ್ಗ, ತಂತ್ರಮಾರ್ಗ ಎಂದು ಮುಂತಾಗಿ ಕರೆಯುತ್ತಾರೆ. ಈ ಮಾರ್ಗಗಳ ಅನುಯಯಾಗಳಾಗಿ ಸಿದ್ಧರು ಮತ್ತು ನಾಥ ಪಂಥದವರು ಕಂಡುಬರುತ್ತಾರೆ. ಕರ್ನಾಟಕದ ಉದ್ದಗಲಕ್ಕೂ ಇವರ ಪ್ರಭಾವ ಕಂಡುಬಂದರೂ ಸಿದ್ಧರ ಬಗ್ಗೆ ಶಾಸನಗಳಲ್ಲಾಗಲಿ ಸಾಹಿತ್ಯದಲ್ಲಾಗಲಿ ಅವರ ಹೆಸರುಗಳು ಕಂಡುಬರುವುದಿಲ್ಲ.

''ಮೋನಿಯರ್ ವಿಲಿಯಸ್ ಅವರು ತಮ್ಮ ನಿಘಂಟಿನಲ್ಲಿ ಸಿದ್ಧ ಎನ್ನುವದಕ್ಕೆ Proved, Substortioted demonstroted ಎಂದು ಅರ್ಥೈಸಿದ್ದಾರೆ. ಸಿದ್ಧಿಯನ್ನು ಸಾಧಿಸಿದ ಸಾಧಕ ಸಿದ್ಧನಾಗುತ್ತಾನೆ.''[೧]

ಭಾರತೀಯ ಗ್ರಂಥಗಳಲ್ಲಿ ಅಣಿಮಾ, ಮಾಹಿಮಾ, ಲಘುಮಾ, ಪ್ರಾಕಾಮ್ಯ, ಗರಿಮಾ, ಈಶಿತ್ವ, ವಶಿತ್ವವೇ ಮೊದಲಾದ ಸಿದ್ಧಿಗಳು ಉಲ್ಲೇಖಗೊಂಡಿವೆ. ಸಾಧನೆಯ ಮಾರ್ಗದಲ್ಲಿ ಈ ಸಿದ್ಧಿಗಳನ್ನು ಪಡೆದವನೇ ಸಿದ್ಧ. ಸಿದ್ಧಿಯನ್ನು ಗಳಿಸುವುದು ಅತೀಂದ್ರಿಯ ತತ್ವಗಳಲ್ಲಿ ನಂಬಿಕೆ ಉಂಟುಮಾಡಲು ಮತ್ತು ಎಲ್ಲಾ ಜೀವಿಗಳ ಉಪಕಾರಕ್ಕಾಗಿ ಪಂಚಭೂತಗಳಾದ ಪೃಥ್ವಿ, ಅಪ್, ತೇಜ, ವಾಯು, ಆಕಾಶ ಇವುಗಳನ್ನು ಜಯಿಸುವುದು ಒಂದು ಕ್ರಮಬದ್ಧತೆ ಇದೆ. ಪಂಚಭೂತಗಳಲ್ಲಿ ಆಕಾಶವಿಜಯ ಸಿದ್ಧ' ಎಂಬುದು ಸರ್ವೋತ್ತಮ ಸಿದ್ಧಿಯಾಗಿದೆ. ಸಿದ್ಧತನವನ್ನು ಹೊಂದುವುದು ತುಂಬಾ ಕಷ್ಟಸಾಧ್ಯವಾದುದು. ಅವುಗಳ ಅಭ್ಯಾಸ ಅನುಷ್ಠಾನಕ್ಕಾಗಿ ಅನೇಕ ಪಂಥಗಳು ಹುಟ್ಟಿದವು. ಆಧ್ಯಾತ್ಮಿಕ ವಿದ್ಯೆಯಲ್ಲಿ ವಿದ್ಯಾಘ, ಮಾನವೌಘ ಮತ್ತು ಸಿದ್ಧೌಘ ಎಂದು ಮೂರು

ಸಂಪ್ರದಾಯಗಳಿವೆ ಎಂದು ತಿಳಿದುಬರುತ್ತದೆ. ತಂತ್ರಗಳಲ್ಲಿ ಸಿದ್ಧಿಗಳ ಬಗ್ಗೆ ಸಾಕಷ್ಟು ಹೇಳಿದ್ದರೂ ಅದರ ಬಗೆಗೆ ಇರುವ ವಿಭಿನ್ನ ಸಿದ್ಧಾಂತವೇನು ಎಂಬುದನ್ನು ಸ್ಪಷ್ಟವಾಗಿ ಎಲ್ಲೂ ಹೇಳಿಲ್ಲ.

ಸಿದ್ಧರ ಹಿನ್ನೆಲೆ ಮಹತ್ವವನ್ನು ಹೇಳುವಾಗ ಸಿದ್ಧರಾದ ನಾಥ ಪಂಥದವರನ್ನು ಮರೆಯುವಂತಿಲ್ಲ. ಸಂಸ್ಕೃತ ಗ್ರಂಥಗಳಲ್ಲಿ ಬೌದ್ಧ ಸಿದ್ಧರು ಮತ್ತು ನಾಥ ಸಿದ್ಧರೆಂದು ಉಲ್ಲೇಖ ಬರುತ್ತದೆ. ತಮಿಳುನಾಡಿನಲ್ಲಿ ತಿರುಮೂಲರ್‌ರು ಸಿದ್ಧ ಪದಕ್ಕೆ ಅರ್ಥವನ್ನು ನೀಡುತ್ತಾ. "ಯಾರು ಯೋಗ ಮಾರ್ಗದಲ್ಲಿ ದಿವ್ಯಶಕ್ತಿ ಮತ್ತು ದಿವ್ಯ ಬೆಳಕನ್ನು ಕಾಣುತ್ತಾರೋ ಅವರೇ ಸಿದ್ಧರು" ಇಂತಹ ಸಿದ್ಧರು ಪುರಾಣಗಳ ಪ್ರಕಾರ ಭೂಮಿಯಲ್ಲಿ ವಾಸಿಸುವರು. ಇನ್ನು ಕೆಲವು ಕಡೆ ಅಂತರಿಕ್ಷದಲ್ಲಿ ವಾಸಿಸುವರು. ಸಿದ್ಧರು ಪರ್ವತವಾಸಿಗಳೆಂದು ಪುರಾಣಗಳು ಹೇಳುತ್ತವೆ. ಧರ್ಮಗ್ರಂಥಗಳ ಪ್ರಕಾರ ಯೋಗಮಾರ್ಗ ಅಥವಾ ತಪಸ್ಸಿನ ಸಾಧನೆಯಿಂದ ಸಿದ್ಧಿಯನ್ನು ಪಡೆದು ಮೋಕ್ಷ ಪಡೆಯುವದು ಇವರ ಪರಮ ಗುರಿ.

ಸಿದ್ಧರು ಶ್ರದ್ಧೆ ಮತ್ತು ವಿಶ್ವಾಸಗಳಿಂದ ಈಶ್ವರ ಸಾಕ್ಷಾತ್ಕಾರವನ್ನು ಹೊಂದಿದ್ದಾರೆ. ಮಹಾತಪಸ್ವಿಗಳು, ಯೋಗಿಗಳು ಗುಂಪಿಗೆ ಇವರು ಸೇರುತ್ತಾರೆ. ಇವರೆಂದಿಗೂ ಕಾಮವಶರಾಗದೆ ಅಲೌಕಿಕ ಸಾಧನೆಗಳ ಫಲವಾಗಿ ಅನೇಕ ಸಿದ್ಧಿಗಳನ್ನು ಪಡೆದು ಅವುಗಳ ಬಲದಿಂದ ಅನೇಕ ವಿಧವಾದ ಅತಿ ಮಾನವೀಯ ಕಾರ್ಯಗಳನ್ನು ಮಾಡಬಲ್ಲವರಾಗಿದ್ದರು. ಸಮಾಧಿಯೋಗದಿಂದ ಅನೇಕ ಸಾಧನೆಗಳನ್ನು ಮಾಡಬಲ್ಲವರಾಗಿದ್ದರು. ಅಲ್ಲದೆ ಭವಿಷ್ಯವನ್ನು ನುಡಿಯುತ್ತಿದ್ದರು.

"ಸಿದ್ಧರುಗಳಲ್ಲಿ ಬೌದ್ಧ ಸಿದ್ಧರು, ಶೈವ ಸಿದ್ಧರು, ಜೈನ ಸಿದ್ಧರು, ನಾಥ ಸಿದ್ಧರು, ರಸ ಸಿದ್ಧರು, ಮಾಹೇಶ್ವರ ಸಿದ್ಧರು, ಕಪಾಲಿ ಸಿದ್ಧರು ಮತ್ತು ಜ್ಞಾನ ಸಿದ್ಧರು ಇತ್ಯಾದಿಯಾಗಿ ಕಂಡುಬರುತ್ತದೆ. ಸಿದ್ಧರು ಸರಳ ಮತ್ತು ಸಹಜ ಜೀವನಕ್ಕೆ ಒತ್ತುಕೊಟ್ಟು ಧರ್ಮಕ್ಕೆ ಒಂದು ಕಾಯಕಲ್ಪ ನೀಡಿದವರು. ಸಿದ್ಧ ವೈದ್ಯ ಪದ್ಧತಿಯು ಆಯುರ್ವೇದ ಪದ್ಧತಿಯಂತೆ ಇದ್ದು ಅದು ದೇಶೀಯ ವೈದ್ಯ ಪರಂಪರೆಯಾಗಿರುವದು."[೨] ಮನುಷ್ಯನ ಶರೀರ ಮತ್ತು ಮನಸ್ಸಿಗೆ ಔಷಧಿ ನೀಡುವ ಮಹಾ ವೈದ್ಯರಾಗಿದ್ದರು.

ವೀರಶೈವ ಸಾಹಿತ್ಯದಲ್ಲಿ ಅನೇಕ ಸಿದ್ಧರುಗಳ ಹೆಸರುಗಳು ಕಾಣಿಸಿಕೊಳ್ಳುತ್ತವೆ. ಶರಣರ ವಚನಗಳಲ್ಲಿ ಗೋರಖನಾಥ ಮತ್ತು ಇತರೆ ನವನಾಥ ಸಿದ್ಧರ ಹೆಸರುಗಳು ಕಂಡುಬರುತ್ತವೆ. ಹರಿಹರ ರಾಘವಾಂಕ ಮೊದಲಾದವರ ಕಾವ್ಯಗಳಲ್ಲಿ ಕೆಲವು ಸಿದ್ಧರ ಪ್ರಸಂಗಗಳು ಬರುತ್ತವೆ. ರೇವಣಸಿದ್ಧ, ಮರುಳಸಿದ್ಧ, ಸಿದ್ಧರಾಮ ಮೊದಲಾದವರು ಶೈವ ಪರಂಪರೆಗೆ ಸೇರಿದವರು. ಹರಿಹರನು ರೇವಣಸಿದ್ದೇಶ್ವರ ರಗಳೆಯಲ್ಲಿ ರೇವಣಸಿದ್ಧರನ್ನು ನಿರುಪಮ ಸಿದ್ಧ, ಅಪ್ರತಿಮ ಸಿದ್ಧ, ಮಹಾಸಿದ್ಧ, ಸಿದ್ಧರವೇದ, ಸಿದ್ಧಕುಲ ಚಕ್ರವರ್ತಿ ಮೊದಲಾದ ವಿಶೇಷಗಳಿಂದ ಕರೆದಿದ್ದಾನೆ. ಅಲ್ಲದೆ ಹಸ್ತಸ್ತಂಭ, ಜಿಹ್ವಾಸ್ತಂಭ ಹಾಗೂ ಪಾದಸ್ತಂಭ ಮೊದಲಾದ ಸಿದ್ಧಿಗಳ ಪವಾಡಗಳನ್ನು ಹೇಳಿದ್ದಾನೆ. ಅದರಂತೆ ರಾಘವಾಂಕನು ಸಿದ್ಧರಾಮ ಚಾರಿತ್ರ್ಯದಲ್ಲಿ ಸಿದ್ಧರಾಮನಿಗೆ ಸಿದ್ಧಕುಲ ತಿಲಕ, ಸಿದ್ದೇಶ್ವರ, ಸಿದ್ಧಕುಲ

ಕಮಲರವಿ, ಸಿದ್ಧವರೇಣ್ಯ, ಸಿದ್ಧರ ದೇವ, ಸಿದ್ಧರಾಧಿತ್ಯ, ಸಿದ್ಧನಿಧಾನ ಮುಂತಾದ ವಿಶೇಷಣಗಳಿಂದ ಬಣ್ಣಿಸಲಾಗಿದೆ.

ಚಾಮರಸ ಪ್ರಭುಲಿಂಗ ಲೀಲೆಯಲ್ಲಿ ಪ್ರಭುದೇವರಿಗೆ ಮತ್ತು ಗೋರಕ್ಷನಿಗೆ ನಡೆಯುವ ಹಾಗೂ ರೇವಣಸಿದ್ದೇಶ್ವರ ರಗಳೆಯಲ್ಲಿ ಕಠಾರಿಯ ಪ್ರಸಂಗದಲ್ಲಿ ಗೋರಕ್ಷ ಮತ್ತು ರೇವಣಸಿದ್ಧರ ಮಧ್ಯ ನಡೆಯುವ ವಾದಗಳನ್ನು ಗಮನಿಸಿದರೆ ೧೨ನೇ ಶತಮಾನದ ಹೊತ್ತಿಗೆ ಸಿದ್ಧಪರಂಪರೆ ಕರ್ನಾಟಕದಲ್ಲಿ ಪ್ರಭಾವಶಾಲಿಯಾಗಿತ್ತೆಂದು ತೋರುತ್ತದೆ.

"ನಿರುಪಮ ಸಿದ್ಧನಪ್ರತಿಮ ಸಿದ್ಧನ ಚಿಂತಿತ ಸಿದ್ಧನುತ್ತಮಾ
ವರಣ ಶರೀರ ಸಿದ್ಧನತಿಕಾರಣ ಸಿದ್ಧನ ಶೇಷಮಂಸಮು
ದ್ಧರಿಸುವ ಸಿದ್ಧನಾತ್ಮ ನಿಜಸಿದ್ಧನನೂನ ಪರಾ ಪರೈಕ ವಿ
ಸ್ತರತರ ಸಿದ್ಧನೊಪ್ಪಿದನಿಳಾತಳದೊಳ್ ಸತಿ ಸಿದ್ಧರೇಣಂ" [೩]

ಹರಿಹರನ ರಗಳೆಯಲ್ಲಿ ರೇವಣಸಿದ್ಧನ ಸಿದ್ಧತ್ವವನ್ನು ವರ್ಣಿಸಲಾಗಿದೆ. ಕರ್ನಾಟಕದ ಮಧ್ಯಾವಧಿ ಕಾಲದಲ್ಲಿ ಬೌದ್ಧ ಸಿದ್ಧರು ವಾಮಾಚಾರಗಳಲ್ಲಿ ತೊಡಗಿಕೊಂಡು ಹೇಯವಾದ ಕೃತ್ಯಗಳಲ್ಲಿ ತೊಡಗಿದಾಗ ಜನರಿಗೆ ದಿಗ್ಭ್ರಾಂತವಾಯಿತು. ಅವರ ಗುಹ್ಯ ಸಾಧನೆಗಳು ಜನತೆಗೆ ಹಿಡಿಸಲಿಲ್ಲ. ಆ ಸಂದರ್ಭದಲ್ಲಿ ಹೊಸ ಪಂಥ ಹುಟ್ಟಿಕೊಂಡಿತು. ಅದೇ 'ನಾಥ ಪಂಥ'.

ನಾಥ ಎಂದರೆ ರಕ್ಷಕ, ಒಡೆಯ, ರಕ್ಷಕ, ಪತಿ ಎಂಬ ಅರ್ಥಗಳನ್ನು ಒಳಗೊಂಡಿತ್ತು. ಜೈನರಲ್ಲಿ, ವೈಷ್ಣವರಲ್ಲಿ ಈ ಪದಕ್ಕೆ ಅತ್ಯಂತ ದೊಡ್ಡ ದೇವರು ಎನ್ನುವ ಅರ್ಥ ಕೊಡಲಾಯಿತು. ಕಾಲಂತರದಲ್ಲಿ ಯೋಗ ಪರವಾದ ಪಾಶುಪತ ಮತವೇ ನಾಥ ಸಂಪ್ರದಾಯವಾಗಿ ರೂಪುಗೊಂಡಿತು. ಆಗ ನಾಥ ಎಂಬ ಶಬ್ದವು 'ಶಿವ' ಅರ್ಥದಲ್ಲಿ ಪ್ರಚಲಿತವಾಯಿತು. ಗೋರಕ್ಷನಿಂದ ಪ್ರವರ್ತಿತವೆನ್ನಲಾದ ನಾಥ ಮತವು ಹನ್ನೆರಡು ಶಾಖೆಗಳಾಗಿ ಹಂಚಿಕೊಂಡಿವೆ. ನಾಥ ಸಂಪ್ರದಾಯವು ಹಠಯೋಗದ ತಳಹದಿಯ ಮೇಲೆ ನಿಂತಿದೆ. ನಾಥ ಪರಂಪರೆಯವರೆಲ್ಲರೂ ಉಗ್ರವಾದ ಇಂದ್ರಿಯ ನಿಗ್ರಹದಿಂದ ಅದ್ಭುತವಾದ ಭೌತಿಕತೆಯನ್ನು ಜಯಿಸಿದ ಸಿದ್ಧರೇ ಆಗಿದ್ದರು ಎಂಬುದು ಚರಿತ್ರೆಯಲ್ಲಿ ಉಕ್ತವಾದ ಪವಾಡಗಳಿಂದ ವ್ಯಕ್ತವಾಗುತ್ತದೆ.

ನವನಾಥರು ಯಾರು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಆಧಾರ ಗ್ರಂಥಗಳಲ್ಲಿ ಅವರ ಹೆಸರು ಹೀಗಿವೆ. ಗೋರಕ್ಷನಾಥ, ಜಾಲಂದರನಾಥ, ನಾಗರ್ಜುನ, ಸಹಸ್ರಾರ್ಜುನ, ದತ್ತಾತ್ರೇಯ ದೇವದತ್ತ, ಜಡಭರತ, ಆದಿನಾಥ ಮತ್ತು ಮತ್ಸ್ಯೇಂದ್ರನಾಥ ಈ ನವನಾಥರ ಹೆಸರುಗಳು ಬೇರೆ ಬೇರೆ ಗ್ರಂಥಗಳಲ್ಲಿ ಬೇರೆ ಬೇರೆಯಾಗಿ ಕಂಡುಬರುತ್ತವೆ. ಹಠಯೋಗ ಪ್ರದೀಪಿಕೆಯಲ್ಲಿ ನಾಥರ ಒಂಭತ್ತು ಸಂಖ್ಯೆಗೆ ಪ್ರಾಧಾನ್ಯವಿದ್ದಂತೆ ತೋರುವದಿಲ್ಲ ಎಂಬುದು ಆಧಾರ ಗ್ರಂಥದಿಂದ ತಿಳಿದುಬರುತ್ತದೆ.

ಶ್ರೀ ಆದಿನಾಥ - ಮತ್ಸ್ಯೇಂದ್ರ - ಶಾಬರಾನಂದ - ಭೈರವಾ ||
ಚೌರಂಗೀ - ಮೀನ - ಗೋರಕ್ಷ - ವಿರುಪಾಕ್ಷ ವಿಲೇಶಯಾ ||
ಮಂಥನೋ ಭೈರವೊ ಯೋಗೀ ಸಿದ್ಧಃ ಬುದ್ಧಶ್ಚಕಂಥಡಿ
ಕೊರಾಂಟಕಃ ಸುರಾನಂದಃ ಸಿದ್ಧಪಾದಶ್ಚ ಚರ್ಪಟೀ ||
ಕಾನೇರಿ ಪೂಜ್ಯಪಾದಶ್ಚ ಕಾಕ ಚಂಡೀಶ್ವರಾಸಹ್ವಯಃ |
ಅಲ್ಲಮಪ್ರಭುದೇವಶ್ಚ ಘೋಡಾಚೂಲಿ ಚೆಂಟಸ್ವಾಣಿ
ಭಾನುತಿ ನಾದದೇವಶ್ಚ ಖಂಡಃ ಕಪಾಲಿಕಥಾ |
ಇತ್ಯಾದಯೋ ಮಹಾಸಿದ್ಧಾಃ ಹಠಯೋಗ ಪ್ರಭಾವತಃ |
ಖಂಡಯಿತ್ವಾಕಾಲ ದಂಡಂ ಬ್ರಹ್ಮಾಂಡೇ ವಿಚರಂತಿತೆ ||

ಈ ಮೇಲೆ ಉಲ್ಲೇಖಿತವಾದ ಸಿದ್ಧರ ಹೆಸರುಗಳಲ್ಲಿ ಅಲ್ಲಮಪ್ರಭುದೇವರ ಹೆಸರು ಬಂದಿರುವದು ಗಮನಾರ್ಹವಾದ ವಿಷಯ. ಹಾಗೆಯೇ ಮತ್ತೊಂದು ಸೂಚಿಯಲ್ಲಿ ರೇವಣಸಿದ್ಧರ ಹೆಸರು ಉಲ್ಲೇಖಗೊಂಡಿದೆ.

"ಗೋರಕ್ಷ - ಜಾಲಂಧರ - ಚರ್ಪಟಶ್ಚ - ಅಡಭಂಗ -
ಕಾನಪ - ಮಚ್ಛೀಂದ್ರಾದಯೂಃ ||
ಚೌರಂಗೊ - ರೇವಣಶ್ಚ - ಭೃರ್ತ್ರ್ಯ ಸಂಜ್ಞಾ
ಭೂಮ್ಯೆಂ ಬಭೂವ ನವನಾಥ ಸಿದ್ಧಾಃ || "

ಸಿದ್ಧರು ಚಿರಂಜೀವಿಗಳೆಂದೂ ಕಾಲದಂಡವನ್ನು ಖಂಡತುಂಡ ಮಾಡಿ ಇಂದಿಗೂ ಬ್ರಹ್ಮಾಂಡದಲ್ಲಿ ವಿಹರಿಸುತ್ತಿರುವರೆಂಬ ನಂಬಿಕೆ ಇದೆ.

ರೇವಣಸಿದ್ಧರು ಒಬ್ಬ ಸಿದ್ಧ ಪುರುಷನು ಎನ್ನುವುದ್ಕಕೆ ಆತನ ಚರಿತ್ರೆಯಲ್ಲಿ ಕಂಡುಬರುವ ಘಟನೆಗಳು ಸಮರ್ಥಿಸುತ್ತವೆ. ಗೋರಕ್ಷನು ಕೊಲ್ಲಾಪುರುದಲ್ಲಿದ್ದು ಸಿದ್ಧ ವಿದ್ಯೆಯನ್ನು ಬಲ್ಲವನಾಗಿದ್ದನು. ರೇವಣಸಿದ್ಧನು ಕೊಲ್ಲಾಪುರಕ್ಕೆ ಬಂದು ಗೋರಕ್ಷನ ಅಹಂಕಾರವನ್ನು ಮುರಿಯಬೇಕೆಂದು ಸಂಕಲ್ಪಿಸಿಕೊಂಡು ಭಿಕ್ಷೆ ಕೇಳುತ್ತಾನೆ. ಆಗ ಗೋರಖನು ಲಕ್ಷಗೊಡದೆ ಕಠಾರಿಯನ್ನು ಭಿಕ್ಷೆಗೆ ಹಾಕುವಂತೆ ಹೇಳಲು

"ಚಿಕ್ಕ ಲಕ್ಕಾದೇವಿ ಪಾಣಿಪಾತ್ರೆಗೆ ತಂದು
ಇಕ್ಕಿದಳು ನಸುನಗುತೆ ಹೊಸ ಕಠಾರಿಯನಂದು
ಇಕ್ಕೆ ರೇವಣಸಿದ್ಧ ತನ್ನ ಬಿಸುಗಣ್ಣಿಂದೆ
ಮಿಕ್ಕು ನೋಡಿದಡೆ ಲೋಹಂ ಕರಗಿ ಭರದಿಂದೆ

ನೋಡಿ ಕೈಕೊಂಡನಾ ಲೋಹರಸ ಭಿಕ್ಷಮಂ
ಮೂಡಿತ್ತು ತಾನೊಡೆದು ಗೋರಖನ ವಕ್ಷಮಂ
ಕುಳ್ಳಿರ್ದನುರದೊಳಗೆ ಮಾಡಿದಂ ಕಠಾರಿಯಂ'' [೫]

ಇಲ್ಲಿ ಕಠಾರಿಯು ಗೋರಕ್ಷನ ಎದೆಯಲ್ಲಿ ಮೂಡಿ ಅವನಿಗೆ ಅತ್ಯಂತ ನೋವನ್ನುಂಟು ಮಾಡಿತು. ಆಗ ಮತ್ತೊಬ್ಬ ಹೆಂಡತಿಯು ಕೊಲ್ಲಾಪುರ ಲಕ್ಷ್ಮಿಯ ಆದೇಶದಂತೆ ಶ್ರೀ ರೇವಣಸಿದ್ಧರನ್ನು ಮೊರೆ ಹೋಗುತ್ತಾಳೆ. ಆಗ ರೇವಣಸಿದ್ಧರು ಗೋರಕ್ಷನಿಗೆ ಮನ್ನಿಸಿ ಕಠಾರಿಯನ್ನು ಅವನಿಂದ ಉಗುಳಿಸಿದರು. ಅದರಂತೆ ರಾಕ್ಷಸ ಮಿಥುನಗಳು ಮರದಿಂದ ಗಳಗಳನೆ ಇಳಿದು ಸಿದ್ಧ ರೇವಣನನ್ನು ಕಂಡು ಮರನೇರಲು ಪ್ರಯತ್ನಿಸುತ್ತವೆ. ಆಗ

"ಮರವನೇರುವಾಗಳ ಪ್ರತಿಮ ಸಿದ್ಧಂ
ಸಿದ್ಧರೇವಣ ತಂದೆ ಬೋಂಕನೆ ಕಂಡು
ನೊಸಲ ಕಣ್ಣೆಬ್ಬೆಗೆ ಬೆಸಸನೀಯೇ ಬಸುಗಣ್ಣ
ಬೆಂಕಿಯಿಂ ಮರಂಗಳೆರಡುಂ ತರಿ ಮುರಿಯಾಗಿ
ಘುಲಿ ಘುಲಿಲನುರಿದು ಭಸ್ಮಾವಶೇಷವಾಗಿ'' [೬]

ತಗಣೆಗಳೆರಡು ಭಸ್ಮವಾಗಿ ಎರಡು ಗುಂಡುಗಳಾಗುತ್ತದೆ. ಅವುಗಳನ್ನು ಕಠಾರಿಗಳನ್ನಾಗಿ ಮಾಡುವದು ಹೀಗೆ ಈ ಎಲ್ಲಾ ಅದ್ಭುತ ಕ್ರಿಯೆಗಳನ್ನು ನೋಡುವಾಗ ರೇವಣಸಿದ್ಧರು ವ್ಯೋಮಕಾಯಸಿದ್ಧಿಯಾಗಿ ಮುಂದೆ ಖರ್ಪರನ ಸೊಕ್ಕ ಅಡಗಿಸಿ, ಬಿಜ್ಜಳನು ಬೇಡುವ ಸುರಗಿಯನ್ನು ತೋರಿಸಿ ಹಾವಿನಂತೆ ಬುಸುಗುಟ್ಟುತ್ತಿರುವದನ್ನು ಕೈಯಲ್ಲಿ ಹಿಡಿಯುತ್ತಾನೆ. ಆಗ ಬಿಜ್ಜಳನು ಹೆದರಿ ಹಾಗೇ ಅಲ್ಲಿಯೇ ಮಡುವಿನಲ್ಲಿರಿಸುವಂತೆ ಕೇಳಿಕೊಳ್ಳುತ್ತಾನೆ. ಮುಂದೆ ರುದ್ರಮುನಿಯ ಜನನವನ್ನು ನೋಡಿದಾಗ ರಸವಿದ್ಯೆಯಲ್ಲಿ ಪ್ರವೀಣರಾಗಿದ್ದಂತೆ ಕಾಣುತ್ತದೆ.

ಹೀಗೆ ಭಾರತೀಯ ವಾಙ್ಮಯ ಮತ್ತು ಕನ್ನಡ ನಾಡಿನಲ್ಲಿ ಸಿದ್ಧರನ್ನು ಕುರಿತಂತೆ ಮಾಹಿತಿಗಳು ಲಭ್ಯವಿವೆಯಾದರೂ ಕರ್ನಾಟಕದ ಸಿದ್ಧ ಪರಂಪರೆಯ ಬಗ್ಗೆ ಪ್ರತ್ಯೇಕವಾದ ಮತ್ತು ವಸ್ತುನಿಷ್ಠವಾದ ಅಧ್ಯಯನ ನಡೆಯಬೇಕಾದ ಅಗತ್ಯವಿದೆ.

**ಕೊನೆಟಿಪ್ಪಣಿಗಳು**

೧. ಸಿದ್ಧ ಸಾಹಿತ್ಯ, ಸಿದ್ಧರು ಯಾರು, ಲೇ, ಮ.ಸು.ಕೃಷ್ಣಮೂರ್ತಿ, ಪು. ೧
೨. ಶಿವಯೋಗಿ ಶ್ರೀ ಜೇನುಕಲ್ಲು ಸಿದ್ದೇಶ್ವರ, ಲೇ, ಡಾ.ವೈ.ಡಿ.ನಂಜುಂಡಪ್ಪ, ಪು. ೩೯೬ - ೩೯೭
೩. ರೇವಣಸಿದ್ದೇಶ್ವರ ರಗಳೆ, ೪ನೇ ಸ್ಥಲ, ಪು. ೧೭೦
೪. ಶಿವಯೋಗಿ ಶ್ರೀ ಜೇನುಕಲ್ಲು ಸಿದ್ದೇಶ, ಡಾ.ವೈ.ಡಿ.ನಂಜುಂಡಪ್ಪ, ಪು. ೪೦೧
೫. ರೇವಣಸಿದ್ದೇಶ್ವರ ರಗಳೆ, ೩ನೇ ಸ್ಥಲ, ಪು. ೨೯೪
೬. ರೇವಣಸಿದ್ದೇಶ್ವರ ರಗಳೆ, ೨ನೆ ಸ್ಥಲ, ಪು. ೨೯೧

೩

# ರೇವಣಸಿದ್ಧರು : ಪೂರ್ವಾಪರ ವಿಚಾರಗಳು

# ೩

# ರೇವಣಸಿದ್ಧರು : ಪೂರ್ವಾಪರ ವಿಚಾರಗಳು

ಕನ್ನಡ ಸಾಹಿತ್ಯದಲ್ಲಿ ಕವಿ-ಕೃತಿಗಳ ನಿರ್ಣಯದಲ್ಲಿ ನಿರಂತರವಾಗಿ ಭಿನ್ನಾಭಿಪ್ರಾಯಗಳು ವಿದ್ವಾಂಸರಲ್ಲಿ ಇಂದಿಗೂ ಇವೆ. ಹೀಗಾಗಿ ಕಾಲದಿಂದ ಕಾಲಕ್ಕೆ ನಮ್ಮ ಸಾಹಿತ್ಯಚರಿತ್ರೆಯಲ್ಲಿ ಪರಿಷ್ಕರಣ ಆಗುವ ಸಾಧ್ಯತೆಯು ಅನಿವಾರ್ಯವೆನಿಸುತ್ತದೆ. ಕವಿಯ ಕಾಲ, ದೇಶ, ಮತ ಮುಂತಾದ ವಿಚಾರಗಳಲ್ಲಿ ಅನೇಕ ರೀತಿಯ ತೊಡಕುಗಳು, ಭಿನ್ನಾಭಿಪ್ರಾಯಗಳು ಅವುಗಳಿಗೆ ಪರಿಹಾರಾತ್ಮಕ ರೀತಿಯ ಸಂಶೋಧನೆಗಳು ನಡೆಯುತ್ತಲೇ ಇವೆ. ಈ ಎಲ್ಲ ಸಾಧ್ಯತೆಗಳಿಗೆ ಪ್ರಸ್ತುತ ರೇವಣಸಿದ್ಧರ ಇತಿವೃತ್ತವು ಹೊರತಾಗಿಲ್ಲ. ಕನ್ನಡ ಸಾಹಿತ್ಯದಲ್ಲಿ ಬಸವಪೂರ್ವಯುಗದಲ್ಲಿ ಬದುಕಿದ್ದರೆನ್ನಲಾದ ಕ್ರಿ.ಶ. ಪೂರ್ವದ ಕಾಲಮಾನದಲ್ಲಿರುವ ಒಬ್ಬ ರೇವಣಸಿದ್ಧರಾದರೆ, ಬಸವಯುಗದ ಅಂದರೆ ೧೨ನೆಯ ಶತಮಾನದ ರೇವಣಸಿದ್ಧರು ಇನ್ನೊಬ್ಬರು ಮತ್ತು ಬಸವೋತ್ತರ ಯುಗದಲ್ಲಿ ಶಂಕರಲಿಂಗ ಕಾವ್ಯ ಬರೆದ ರೇವಣಸಿದ್ಧ (೧೭೫೦) ಮತ್ತು ಕಿರೀಟೇಶ್ವರ ಪುರಾಣ ಬರೆದ ರೇವಣಸಿದ್ಧ (೧೮೦೦) ಹೆಸರಿನ ಇಬ್ಬರು ಕಾಣಸಿಗುತ್ತಾರೆ. ಪ್ರಸ್ತುತ ಅಧ್ಯಯನವು ಬಸವಯುಗದಲ್ಲಿ ಜೀವಿಸಿದ್ದ ರೇವಣಸಿದ್ಧರನ್ನು ಕುರಿತದ್ದಾಗಿದೆ.

ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗು ಸಾಂಸ್ಕೃತಿಕ ಪುನರುತ್ಥಾನಕ್ಕೆ ೧೨ನೆಯ ಶತಮಾನ ವಿನೂತನ ಯುಗವಾಗಿ ಪರಿಣಮಿಸಿದೆ. ಬಸವಣ್ಣನ ವೈಚಾರಿಕ ಮನೋಧರ್ಮಕ್ಕೆ ಜ್ಞಾನ - ವೈರಾಗ್ಯ - ಅನುಭಾವಗಳ ರೂಪದಲ್ಲಿ ನೂರಾರು ಶರಣರು ಕೈಗೂಡಿಸಿದ್ದು, ವಚನ ಸಾಹಿತ್ಯ ಪ್ರಕಾರವನ್ನು ಹುಟ್ಟುಹಾಕಿದ್ದು ಆ ಮೂಲಕ ಸಾಮಾಜಿಕ ಕ್ರಾಂತಿಯ ಜೊತೆಗೆ ಸಾಹಿತ್ಯಿಕ ಕ್ರಾಂತಿಯನ್ನು ಮಾಡುವಲ್ಲಿ ಮುಂದಾದುದ್ದನ್ನು ಇಲ್ಲಿ

ಸ್ಮರಿಸಬಹುದು. ಈ ಎಲ್ಲ ವಿಚಾರಗಳಿಗೆ ಮೂಲಭೂತವಾಗಿ ನೆಲೆಗಟ್ಟನ್ನು ಒದಗಿಸುವಲ್ಲಿ ಬಸವಾದಿ ಪ್ರಮಥರಿಗಿಂತ ಪೂರ್ವದಲ್ಲಿ ಕೆಲವು ಜನ ಕೃಷಿ ಮಾಡಿರುವುದನ್ನು ಕಾಣಬಹುದಾಗಿದೆ. ಅಂಥವರಲ್ಲಿ ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯ, ಸಕಲೇಶಮಾದರಸ ಮುಂತಾದವರನ್ನೂ ಗುರುತಿಸಲಾಗಿದೆ. ಇವರ ಜೊತೆಗೆ ನೆನೆಯಬಹುದಾದ ಮತ್ತೊಬ್ಬ ವ್ಯಕ್ತಿ ರೇವಣಸಿದ್ಧರು. ಇವರನ್ನು ಕುರಿತು ಶಾಸನಗಳು, ಕಾವ್ಯ-ಪುರಾಣಗಳು ಮತ್ತು ಜನಪದ ಸಾಹಿತ್ಯ, ವಿಪುಲವಾದ ಮಾಹಿತಿಯನ್ನು ಒದಗಿಸುತ್ತವೆ. ಇವೆಲ್ಲವುಗಳ ಆಧಾರದಿಂದ ಈತನ ಪೂರ್ವಾಪರ ಇತಿವೃತ್ತಿಯನ್ನು ಕಟ್ಟಿಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

### ೧. ಜನನ

ಸಿದ್ಧ ಪರಂಪರೆಗೆ ಸೇರಿದ ರೇವಣಸಿದ್ಧರು ಐತಿಹಾಸಿಕ ವ್ಯಕ್ತಿ. ಈತನ ಜೀವನ ಕುರಿತಾಗಿ ಶಾಸನ, ಕಾವ್ಯ - ಪುರಾಣಗಳು ರಚನೆಗೊಂಡಿವೆ. ಅವುಗಳಿಂದ ಸಾಧ್ಯವಾದಷ್ಟು ನಿಖರವಾದ ಚರಿತ್ರೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ. ಹರಿಹರಾದಿಯಾಗಿ ಚತುರ್ಮುಖ ಬೊಮ್ಮರಸ, ಮಲ್ಲಣ್ಣಕವಿ, ಚೆನ್ನಬಸವರಲ್ಲದೆ ಇತ್ತೀಚಿಗೆ ಚೆನ್ನಬಸವಶಾಸ್ತ್ರೀ ಮುಂತಾದವರು ಈತನನ್ನು ತಮ್ಮ ಕಾವ್ಯಗಳಲ್ಲಿ ನಾಯಕನನ್ನಾಗಿಸಿಕೊಂಡು ಕಾವ್ಯ ರಚಿಸಿದ್ದಾರೆ. ಇನ್ನೂ ಕೆಲವರ ಕಾವ್ಯಗಳಲ್ಲಿ ಈತನ ಕುರಿತಾಗಿ ಪ್ರಾಂಸಗಿಕ ಪರಿಚಯವನ್ನು ಮಾಡಲಾಗಿದೆ. ಈ ಮೂಲಕ ಎಲ್ಲ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ರೇವಣಸಿದ್ಧರ ಪೂರ್ವಾಪರ ವಿಚಾರಗಳನ್ನು ಗುರುತಿಸಲಾಗಿದೆ.

ಶಿವಶರಣರನ್ನು ಕುರಿತಾಗಿ ಕಾವ್ಯರಚಿಸಿ ಚರಿತ್ರೆಗೆ ಕಾರಣವಾದ ಹರಿಹರನು ರೇವಣಸಿದ್ಧರನ್ನು ಶಾಪಗ್ರಸ್ಥ ನಿಮಿತ್ತವಾಗಿ ಭೂಲೋಕದಲ್ಲಿ ಜನಿಸಿದಂತೆ ಚಿತ್ರಿಸುತ್ತಾನೆ. ಕೈಲಾಸ ಗಣಗಳಲ್ಲಿ ಒಬ್ಬನಾಗಿದ್ದ ರೇಣುಕನು ಶಿವನಿಂದ ತಂಬುಲವನ್ನು ತೆಗೆದುಕೊಳ್ಳಲು ಹೋದಾಗ ದಾರುಕನನ್ನು ದಾಟುತ್ತಾನೆ. ದಾಟಿದ ತಪ್ಪಿಗಾಗಿ ಭೂಮಿಯಲ್ಲಿ ಲಿಂಗೋದ್ಭನಾಗಿ ಜನಿಸೆಂದು ಶಿವನು ಆಜ್ಞೆ ಮಾಡುತ್ತಾನೆ. ಆ ಪ್ರಸಂಗವನ್ನು ಕವಿ ಹರಿಹರ ರಗಳೆಯಲ್ಲಿ ಹೀಗೆ ಬಣ್ಣಿಸುತ್ತಾನೆ.

> "..... ರಂಗ ಮಂಟಪದ ಮಧ್ಯದೊಳು
> ಹಿಡಿದ ಜವನಿಕೆ ಸರಿಯ ಸಕಳವಾದ್ಯಂ ನೆಗಳೆ
> ನಡುವೆ ನೃತ್ಯದ ಲಲನೆಯಾರುತಿರ್ದಳ್ಬೊಗಳೆ
> ಆಗಳೊಗೆದುದು ಮಹಾಲಿಂಗದಿಂ ನರವಂ
> ರಾಗದಿಂದರ್ದ ಸಭೆ ನಡುಗುತ್ತಮಿಲೆ ಕರಂ
> ನೆಲಮೊಳಗಿದಂದದಿಂ ಮೇಘಗರ್ಜನೆಯಂತೆ
> ಸಲೆ ಲಿಂಗದೊಳಗಣಿಂ ಪೊಣ್ಮುತ್ತಲಿರಲಿಂತೆ
> ಪುಟ್ಟುತಿರ್ದ ಸಿದ್ಧರೇಣುಕಯ್ಯಂ ನೋಡ"[೧]

ಹಾಗು ಬೆಳಕಿನಿಂದ ಬೆಳಕು ಹುಟ್ಟುವಂತೆ ಭೂಮಿಗೆ ಹೊಸತೆನ್ನುವ ರೀತಿಯಲ್ಲಿ ರೇವಣಸಿದ್ಧನ ಜನನವನ್ನು ಹೀಗೆ ನಿರೂಪಿಸುತ್ತಾನೆ.

"..... ಭಸಿತದಿಂ ನೊಸಲಕಣ್ಣೆ ಮುಸುಂಕಿಟ್ಟಲ್ಲಿ
ಎಸೆವರಳ್ಕಂಗಳಿಂ ಬೆಳ ಬೆಳಗುತಂತಲ್ಲಿ
ಜ್ಯೋತಿಯಿಂದಂ ಜ್ಯೋತಿಯೊಗೆದ ತೆರದಂತಾಗೆ
ಓತು ಪುಟ್ಟಿದನಯೋನಿಜನಿಳೆಗೆ ಪೊಸತಾಗೆ ....."[3]

ಎಂದು ವರ್ಣಿಸಿರುವ ಹರಿಹರನು ನೂತನ - ಪುರಾತನ ಶಿವಶರಣರ ಕಥೆಗಳನ್ನು ರಗಳೆ ಪ್ರಕಾರದಲ್ಲಿ ರಚಿಸುವಲ್ಲಿ ಯಾವುದಾದರೂ ತಪ್ಪನ್ನು ಎಸಗಿ ಶಾಪಗ್ರಸ್ತರಾಗಿ ಭೂಲೋಕದಲ್ಲಿ ಜನಿಸಿ ಸಾಧನೆಯಿಂದ ಪುನ: ಕೈಲಾಸ ಪದವಿಯನ್ನು ಪಡೆಯುವಂತೆ ಎಲ್ಲ ಶಿವಶರಣರ ಜನನಕ್ಕೆ ಕಾರಣವನ್ನು ಸಂಯೋಜಿಸಿಕೊಂಡಿದ್ದಾನೆ. ಅದರಂತೆ ರೇವಣಸಿದ್ಧರ ಜನನವನ್ನು ಇದೇ ದಾಟಿಯಲ್ಲಿ ಚಿತ್ರಿಸಿ ಕೈತೊಳೆದುಕೊಂಡಿರುವದನ್ನು ಮೇಲಿನ ಪದ್ಯಗಳಿಂದ ನೋಡಬಹುದಾಗಿದೆ. ಹೀಗಾಗಿ ಹರಿಹರನ ಈ ಧೋರಣೆಯನ್ನು ವಾಸ್ತವದ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗಿದೆ. ರೇವಣಸಿದ್ಧರಂತಹ ಸಿದ್ಧಯೋಗಿಗಳು ಕೂಡ ತಮ್ಮ ತಪ್ಪಿಗೆ ಪ್ರಾಯಶ್ಚಿತ ಮಾಡಿಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಭೂಲೋಕವೇ ಸರಿಯಾದ ಕರ್ಮಭೂಮಿಯೆಂಬುದನ್ನು ಹರಿಹರ ತನ್ನ ಎಲ್ಲ ಕಥಾನಾಯಕರ ಜನನ ವೃತ್ತಾಂತದಲ್ಲಿ ಸಾರಿ ಹೇಳಿದಂತಿದೆ.

ರೇವಣಸಿದ್ದೇಶ್ವರ ಪುರಾಣ ಬರೆದ ಚತುರ್ಮುಖ ಬೊಮ್ಮರಸನು ರೇವಣಸಿದ್ಧರ ಜನ್ಮವೃತ್ತಾಂತವನ್ನು ಹರಿಹರನ ರೀತಿಯಲ್ಲಿಯೇ ಚಿತ್ರಿಸುತ್ತಾ ದಾರುಕನ ದಾಟಿದ ತಪ್ಪಿಗಾಗಿ ಶಾಪಗ್ರಸ್ಥನಾಗಿ "ರೇವಣಸಿದ್ಧರು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ಜನಿಸಿದನೆಂದು ತಿಳಿಸುತ್ತಾನೆ.[4] ಇದೇ ಅಭಿಪ್ರಾಯವನ್ನು ಕವಿ ಚೆನ್ನಬಸವನು ತನ್ನ ರೇವಣ ಸಾಂಗತ್ಯದಲ್ಲಿ ಅನುಮೋದಿಸಿದ್ದಾನೆ.

ಇವರಿಗಿಂತ ಭಿನ್ನವಾಗಿ ರೇವಣಸಿದ್ಧರ ಜನನವನ್ನು ಕುರಿತು ಕವಿ ಮಲ್ಲಣ್ಣನು ತನ್ನ ರೇವಣಸಿದ್ಧೇಶ್ವರ ಕಾವ್ಯದಲ್ಲಿ ಚಿತ್ರಿಸುತ್ತಾನೆ. ಅವನ ಪ್ರಕಾರ ರೇವಣಸಿದ್ಧರು ಸಾಮಾನ್ಯನಾಗಿ ಜನಿಸಿ ಅಸಾಮಾನ್ಯನಾಗಿ ಬೆಳೆದಿರುವ ವ್ಯಕ್ತಿತ್ವವನ್ನು ಹೊಂದಿದವನಾಗಿರುತ್ತಾನೆ. ಆಚೆಗೊಂಡನೆಂಬ ಒಕ್ಕಲಿಗನು ಅನಾಥನಾದ ಬಾಲಕ ರೇವಣನಿಗೆ ನೀನು ಯಾರ ಮಗನೆಂದು ಕೇಳಲು ರೇವಣಸಿದ್ಧನು ತನ್ನ ತಂದೆ ತಾಯಿಯು ಪರಿಚಯವಿಲ್ಲವೆಂದು ತಿಳಿಸುತ್ತಾನಲ್ಲದೆ, ತಾನು ಬೆಳೆದ ಮನೆ ಅಲ್ಲಿ ಮಾಡಿದ ಕಾಯಕ ಮಾಡಲಿಚ್ಛಿಸುವ, ಮನದಿಚ್ಛೆಯನ್ನು ಅರಹುತ್ತಾನೆ. ಅಂದರೆ ಮಲ್ಲಣ್ಣನು, ಹರಿಹರ ಬೊಮ್ಮರಸ, ಚೆನ್ನಬಸವ ಕವಿಗಳಂತೆ ಲಿಂಗೋದ್ಭವನಾದನೆಂಬ ವಿಚಾರ ಹೇಳದೆ ಸಾಮಾನ್ಯ ಕುಟುಂಬವೊಂದರಲ್ಲಿ ಬೆಳೆದ ಚಿತ್ರಣವನ್ನು ನೀಡುತ್ತಾನೆ.

“….. ಎಂದ ಮಾತಿಗೆ ಆಚಿಗೊಂಡನು
ತಂದೆ ತಾಯಿಗಳುಂಟೆ ಹೇಳು ಮಗನೆ?
ತಂದೆ ತಾಯಿಗಳರಿಯೆ ಲೋಗರಮನಿಲಿ ನಾ ಬೆಳೆದ
ಹೊಂದಿ ಬೆಳೆದಿರೆ ಕೆಯ್ಗೆ ಅಂಬಲಿ
ತಂದು ಕೊಡತಿಯ ತುಂಬಿಹೊಯ್ದೆನು
ಒಂದು ಸಾವಿರ ಗಿರಿಯ ಹಾದಿಲಿಮಂದಿ ದಣಿದುದುಂಡು

ಬೆಳೆದ ರೇವಣಸಿದ್ಧನು
ಎಲ್ಲಗೂಡಿಯೆ ಆದಿಗೊಂಡೆನು
ತಲ್ಲಿ ಹೆಸರಲಿ ಕರೆದರೆನ್ನನು
ಬಲ್ಲ ಪರಿಯಲಿ ಕಷ್ಟಮಾಡುವೆ ನಿನ್ನಮನ ದಣಿಯೆ
ಸೊಲ್ಲ ಕೇಳುತ ಆಚೆಗೊಂಡನು
ಮಲ್ಲವನೊಡಗೂಡಿ ಎಂದನು
ಬಲ್ಲ ಪರಿಯಲಿ ಒಲಿದು ಎಮ್ಮನು ಸಲಹು ಬಾಯೆಂದ”[೪]

ಮೇಲಿನ ಪದ್ಯದಿಂದ “ರೇವಣಸಿದ್ಧರು ಲೌಕಿಕವ್ಯವಹಾರವನ್ನು ತಿಳಿದುಕೊಳ್ಳುವ, ಬಾಲ್ಯತನದ ಪೂರ್ವದಲ್ಲಿಯೇ ಅವನು ತಂದೆಯನ್ನು ಕಳೆದುಕೊಂಡಿದ್ದನೆಂದೂ, ಲೋಗರ ಮನೆಯಲ್ಲಿ ಬೆಳೆದವನೆಂದೂ, ಕುಡು ಒಕ್ಕಲಿಗನ ಮಗನೆಂದೂ, ಯಲ್ಲಗುಂಡಿಯ ರೇವ ಎಂದು ಬಾಲ್ಯದಲ್ಲಿ ಇವರಿಗೆ ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.”[೫]

ರೇವಣಸಿದ್ಧರ ಜನನದ ವಿಷಯದಲ್ಲಿ ನವನಾಥ ಚರಿತ್ರೆಯೆಂಬ ಗ್ರಂಥವು ಗಮನಾರ್ಹವಾದದ್ದು. ಈ ಕೃತಿಯ ಮೂವತ್ತುನಾಲ್ಕನೆಯ ಅಧ್ಯಾಯದಲ್ಲಿ ಗೋರಕ್ಷ ಮೊದಲಾದ ಪಂಚನಾಥರ ತೀರ್ಥಯಾತ್ರೆ ಮಾಡುತ್ತಿರುವಾಗ ರೇವಾ ನದಿಯ ದಂಡೆಯಲ್ಲಿ ಒಂದು ಶಿಶುವನ್ನು ನೋಡುತ್ತಾರೆ. ಇದನ್ನು ‘ಸಹನಸಾರಖನೆಂಬ ಕುಣುಬಿ’ಯು ಆ ಮಗುವನ್ನು ಎತ್ತಿಕೊಂಡು ಮನೆಗೆ ತುರುತ್ತಾನೆ. ಇದು ರೇವೆಯಲ್ಲಿ ದೊರೆತ್ತಿದ್ದರಿಂದ ರೇವಣನೆಂಬ ಹೆಸರು ಆ ಮಗುವಿಗೆ ಅಂಟಿಕೊಳ್ಳುತ್ತದೆ. ಬೆಳೆದು ದೊಡ್ಡವನಾದ ರೇವಣನು ತಂದೆಯ ಆರೈಕೆಯಲ್ಲಿ ಮನೆಯ ಕಸುಬಾದ ಒಕ್ಕಲುತನದಲ್ಲಿ ತೊಡಗುತ್ತಾನೆ ಎಂಬ ಉಲ್ಲೇಖವಿದೆ. ಅಂದರೆ ನದಿ ತೀರದಲ್ಲಿ ದೊರೆತು ಒಕ್ಕಲುತನ ಮನೆತನದಲ್ಲಿ ಬೆಳೆದ ರೀತಿಯನ್ನು ನವನಾಥ ಚರಿತ್ರೆಯಲ್ಲಿ ಕಾಣಬಹುದಾಗಿದೆ.

ಕಾವ್ಯದಲ್ಲಿ ಉಲ್ಲೇಖಿತಗೊಂಡ ಲಿಂಗೋದ್ಭವ ವಿಚಾರಗಳನ್ನು ಕೆಲವು ಸಮಕಾಲೀನ ವಚನಕಾರರು ತಮ್ಮ ವಚನಗಳಲ್ಲಿ ನಿರೂಪಿಸಿದ್ದಾರೆ. ಇಲ್ಲಿ ಅಂಗವನ್ನೋರತುಪಡಿಸಿದರೆ ಉಳಿದಂತೆ ಲಿಂಗ, ಭಸ್ಮ, ಪಾದೋದಕ, ಮಂತ್ರ, ಪ್ರಸಾದಗಳೆಂಬ ವೀರಶೈವ ಅಷ್ಟಾವರಣಗಳು ಕಾಣಸಿಗುತ್ತವೆ.

ಹೀಗಾಗಿ ಲಿಂಗವ್ಯಸನಿಯಾದ ರೇವಣರ ಜನನವನ್ನು ಕಾವ್ಯಗಳಂತೆ ಲಿಂಗೋದ್ಭವಾಗಿಯೇ ಚಿತ್ರಿಸಿದ್ದಾರೆ, ಕೆಲವು ವಚನಕಾರರು. ಅವುಗಳಲ್ಲಿ ನಾಗಲಾಂಬಿಕೆಯ ವಚನ ಹೀಗಿದೆ.

> "ಅಂಗದಿಂದುದಯವಾದಾತ ಮಡಿವಾಳಯ್ಯ
> ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ
> ಭಸ್ಮದಿಂದುದಯವಾದಾತ ಸಿದ್ಧರಾಮಯ್ಯ
> ಪಾದೋದಕದಿಂದ ಉದಯವಾದಳು ಅಕ್ಕಮಹಾದೇವಿ
> ಮಂತ್ರದಿಂದುದಯವಾದಾತ ನಿಮ್ಮ ಸೋದರ ಮಾವ ಬಸವಯ್ಯ
> ಪ್ರಸಾದದಿಂದುದಯವಾದಾತ ನೀನಲ್ಲವೆ ಚೆನ್ನಬಸವಯ್ಯ
> ಬಸವಣ್ಣ ಪ್ರಿಯ ಚೆನ್ನಸಂಗಯ್ಯ"[೬]

ಅದೇ ರೀತಿಯಾಗಿ ತೋಂಟದ ಸಿದ್ಧಲಿಂಗ ಸ್ವಾಮಿಗಳು ರಚಿಸಿದ ಸಿದ್ದೇಶ್ವರ ವಚನ ಎಂಬ ಗ್ರಂಥದ ಪ್ರಕಾರ

> ಲಿಂಗದಿಂದ ಶರಣರುದಯವಾಗದಿರ್ದಡೆ,
> ಬಸವ ಚೆನ್ನಬಸವ ಪ್ರಭುದೇವರು ಮುಖ್ಯವಾದ
> ಏಳುನೂರುಯೆಪ್ಪತ್ತು ಅಮರಗಣಂಗಳು
> ಎಲ್ಲರೂ ಕ್ಷೀರ ಕ್ಷೀರವ ಬೆರಸಿದಂತೆ, ನೀರು ನೀರ ಬೆರಸಿದಂತೆ
> ಘೃತ ಘೃತವ ಬೆರಸಿದಂತೆ, ಬಯಲು ಬಯಲ ಬೆರಸಿದಂತೆ
> ಲಿಂಗವ ಬೆರಸಿ ಮಹಾಲಿಂಗವೇಯಾದರು ನೋಡಾ
> ಲಿಂಗದಿಂದ ಶರಣರುದಯವಾಗದಿರ್ದಡೆ,
> ನೀಲಲೋಚನೆಯಮ್ಮ ಲಿಂಗದೊಳಗೆ ತನ್ನಂಗವನೇಕೀಕರಿಸಿ
> ಕೇವಲ ಪರಂಜ್ಯೋತಿರ್ಲಿಂಗದಲ್ಲಿ ನಿರವಯವಾದಳು ನೋಡಾ
> ಇಂತಪ್ಪ ದೃಷ್ಟವ ಕಂಡು ಕಂಡು ನಂಬದಿರ್ಪುದು ಕರ್ಮದ ಫಲ.
> ಅದು ಇವರ ಗುಣವೆ? ಶಿವನ ಮಾಯಾ ಪ್ರಪಂಚಿನ ಗುಣನೋಡಾ
> ಈ ಪ್ರಪಂಚ ಜೀವಿಗಳು ಅಲ್ಲಾ ಎಂಬುದು, ಅಹುದೆಂಬುದು
> ಪ್ರಮಾಣೆ? ಅಲ್ಲ ನೋಡಾ
> ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ"[೭]

ಎನ್ನುವ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ತಮ್ಮ ಮತ್ತೊಂದು ವಚನದಲ್ಲಿ

"ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯನಾಗದಿರ್ದಡೆ
ಇಲ್ಲಿ ಶಿವಲಿಂಗದಲ್ಲಿ ಉದಯುವಾದ ಪರಿಯೆಂತೂ?
ಆ ಶಿವನಲ್ಲಿಯೇ ಹುಟ್ಟಿ ಶಿವನಲ್ಲಿಯೇ ಲಯವಾದ ರೇವಣಸಿದ್ಧೇಶ್ವರ
ಅನಾದಿ ಮುಕ್ತನಲ್ಲ, ಅವಾಂತರ ಮುಕ್ತರೆಂಬ ಅಜ್ಞಾನಿಗಳಿಗೆ
ನಾಯಕ ನರಕ ತಪ್ಪದು.
ಸಕಲ ಕೋಟಿ ಬ್ರಹ್ಮಾಂಡಕ್ಕಾಧಾರ ಕಾರಣವಾಗಿಯೂ
ಸಮಸ್ತ ಲೋಕಂಗಳ ಪವಿತ್ರ ಕಾರಣವಾಗಿಯೂ
ಪರಮೇಶ್ವರ ನಿಜಚಿನ್ಮಯಮಪ್ಪ" ಉರ್ಧ್ವಮುಖದಲ್ಲಿ
ಚಿತ್ಕಲಾ ಸ್ವರೂಪದರಪ್ಪ ರುದ್ರಗಣಂಗಳುದಯವಾದರು ನೋಡಾ
ಆ ರುದ್ರಗಣಂಗಳು ಮತ್ತೂ ಜಗತ್ಪಾವನ ಕಾರಣ ಮರ್ತ್ಯದಲ್ಲಿ ಅವತರಿಸಿದಡೆ
ಅದೇನು ಕಾರಣ ಉದಯವಾದರು ವಾಸನಗುಣವಿಲ್ಲದೆ ಎಂದು ಸಂದೇಹಿಸುವ
ಅವಲಕ್ಷಣ ನಾಯ ನಾಲಗೆಯ, ಯಮಧೂತರು ಕೀಳದೆ ಮಣ್ದರೆ?
ಇವರಿಗೆ ನಾಯಕ ನರಕ ತಪ್ಪದು ಕಾಣ, ಎಲೆ ಶಿವನೆ ನೀ ಸಾಕ್ಷಿಯಾಗಿ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.[೮]

ಎಂದು ತೋಂಟದ ಸಿದ್ಧಲಿಂಗರು ಲಿಂಗೋದ್ಭವವದ ಕಲ್ಪನೆಯನ್ನು ಸಮರ್ಥಿಸಿ ಲಿಂಗದಲ್ಲಿ ಶರಣರು ಉದಯವಾಗಿ ಬಯಲು ಬೆರಸಿದಂತೆ, ಸಕಲ ಕೋಟಿ ಬ್ರಹ್ಮಾಂಡವು ಸಮಸ್ತಲೋಕಗಳು ಪರಮೇಶ್ವರ ಪೂರ್ವ ಮುಖದಲ್ಲಿ ರುದ್ರಗಣಗಳು ಹುಟ್ಟಿ ಆ ರುದ್ರಗಣಗಳು ಜಗತ್ತಿಗೆ ಪಾವಿತ್ರತೆಯನ್ನು ನೀಡಲು ಉದಯಿಸಿದರು ಎಂದು ಶಿವತತ್ವ ಇಲ್ಲವೆ ಕವಿಗಳ ಲಿಂಗೋದ್ಭವ ಕಲ್ಪನೆಗೆ ಒತ್ತು ಕೊಟ್ಟಿರುವರು ಕಾಣಬಹುದು.

ಹೀಗೆ ವಚನಗಳಲ್ಲಿ ಶಿವಶರಣರು ಲಿಂಗದಲ್ಲಿ ಹುಟ್ಟಿದನೆಂದು ಹೇಳಲ್ಪಟ್ಟಿರುವದನ್ನು ಕೆಲವು ವಿದ್ವಾಂಸರು ರೇವಣಸಿದ್ಧರ ತಂದೆ - ತಾಯಿಗಳ ಖಚಿತತೆಯನ್ನು ಸ್ಪಷ್ಟವಾಗದೆ ಇದ್ದರಿಂದ ವಚನಗಳ ಹಿನ್ನೆಲೆಯಲ್ಲಿ ತಮ್ಮ ಅಭಿಪ್ರಾಯಯನ್ನು ಹೀಗೆ ಕೊಡುತ್ತಾರೆ.

"ಶಿವಶರಣರ ಹುಟ್ಟನ್ನು ಲಿಂಗದಲ್ಲಿ ಸಾವನ್ನು ಲಿಂಗದ ಮೂಲಕವೇ ಗುರುತಿಸಿ, ಲಿಂಗೋದ್ಭವವು ಹಾಗು ಲಿಂಗೈಕ್ಯಗಳು ವೀರಶೈವ ಸಂಸ್ಕಾರ ಹಾಗು ಸಂಕೇತವನ್ನು ನಿರ್ದೇಶಿಸುತ್ತವೆ" ಎಂಬುದಾಗಿ ಶ್ರೀ ಚೆನ್ನಮಲ್ಲಿಕಾರ್ಜುನರು ಅಭಿಪ್ರಾಯ ಪಡುತ್ತಾರೆ. ಆದರೆ ನೂರಾರು ನೂತನ - ಪುರಾತನ ಶರಣರ ರಗಳೆ ಬರೆದ ಹರಿಹರನು ಒಂದೊಂದು ಶಾಪದಿಂದ ಭೂಮಿಯಲ್ಲಿ ಹುಟ್ಟಿ ಬರುವಂತೆ ಶಿವನಾಜ್ಞೆ ಮಾಡಿಸುತ್ತಾನೆ. ಶರಣರ ಜನ್ಮವೃತ್ತಾಂತದಲ್ಲಿ ರೇವಣರಿಗೆ ಮಾತ್ರ ಲಿಂಗೋದ್ಭವ ಉಪಕ್ರಮವನ್ನು ಆರೋಪಿಸಿರುವ ಕಾರಣಗಳೇನೆಂಬುದಕ್ಕೆ ಚೆನ್ನಮಲ್ಲಿಕಾರ್ಜುನ ಅಭಿಪ್ರಾಯ ಮೌನ ತಾಳಬಹುದೇನೊ?

ರೇವಣಸಿದ್ಧರ ಜನನದ ವಿಷಯದಲ್ಲಿ ಡಾ.ಎಂ.ಚಿದಾನಂದಮೂರ್ತಿ ಅವರು ನಾಗಾಲಾಂಬಿಕೆಯ ವಚನದ ಉಲ್ಲೇಖವನ್ನು ತಮ್ಮ ವಚನ ಶೋಧದಲ್ಲಿ ಪ್ರಸ್ತಾಪಿಸಿ ಶರಣರ ವಿಷಯದಲ್ಲಿ ಇತಿಹಾಸ ಉಳಿಸಿಕೊಂಡು ಬಂದಾಗ ಮಾತ್ರ ಅವರ ತಂದೆ - ತಾಯಿಗಳ ಹೆಸರು ಸ್ಪಷ್ಟವಾಗುತ್ತದೆ. ಉಳಿಸಿಕೊಂಡು ಬಾರದೆ ಇದ್ದಾಗ ಲಿಂಗದಿಂದ ಉದಯವಾಗುವರು ಎಂಬ ಪೌರಾಣಿಕ ಮೌಢ್ಯತೆಯನ್ನು ಅಲ್ಲಗಳೆದು ಎಲ್ಲರಂತೆ ಸಹಜವಾಗಿಯೇ ರೇವಣಸಿದ್ಧರು ಕೂಡ ತಂದೆತಾಯಿಗಳಿಂದಲೇ ಜನಿಸಿರುವರು. ಆದರೆ ತಂದೆ-ತಾಯಿಗಳು ಯಾರೂ? ಎಂಬ ನಿಲುವಿಗೆ ಬಂದು ನಿಲ್ಲುತ್ತಾರೆ. ಇಲ್ಲಿ ಡಾ. ಎಂ.ಚಿದಾನಂದಮೂರ್ತಿಯವರು ಇತಿಹಾಸದ ಕಡೆಗೆ ಒತ್ತು ಕೊಡುವದರಿಂದ ರೇವಣಸಿದ್ಧರ ಜನನದ ವಿಷಯದಲ್ಲಿ ಇತಿಹಾಸ ಮೂಕವಾಗಿದೆ ಎಂದು ತಮ್ಮದೇ ಆದ ವಿಚಾರ ಧಾರಗಳಿಂದ ಸಮರ್ಥಿಸಿಕೊಳ್ಳುತ್ತಾರೆ.

ಹೀಗೆ ಎಲ್ಲ ಕಾವ್ಯಗಳ ವಚನಗಳ ಮೂಲಕ ತಿಳಿದುಬರುವ ಹಾಗೆ ರೇವಣಸಿದ್ಧರು ಒಬ್ಬ ಅಲೌಕಿಕ ಪುರುಷರಾಗಿ ಕಾಣುತ್ತಾರೆ. ಈ ಅಲೌಕಿಕತೆಯ ಜೊತೆಯಲ್ಲಿ ಆತನಿಗೆ ಸಾಮಾನ್ಯ ಕುಟುಂಬದ ಹಿನ್ನೆಲೆ ಇರುವುದನ್ನು ಈತನ ಕುರಿತಾಗಿ ಸಾಹಿತ್ಯ ಸೃಷ್ಟಿಸಿದ ಕವಿಗಳು ಉಲ್ಲೇಖಿಸುತ್ತಾರೆ.

೨. ಕಾಲ

ಕನ್ನಡ ಕವಿಗಳ ಕಾಲ ನಿರ್ಣಯದಲ್ಲಿ ಏಕಾಭಿಪ್ರಾಯವಿಲ್ಲ ಬಹುತೇಕ ಎಲ್ಲ ಕವಿಗಳ ಕಾಲ ನಿರ್ಣಯದಲ್ಲಿ ಭಿನ್ನಾಭಿಪ್ರಾಯಗಳಿರುವದನ್ನು ಸಾಹಿತ್ಯ ಚರಿತ್ರೆಯಲ್ಲಿ ನೋಡಿದ್ದೇವೆ. ಇದಕ್ಕೆ ರೇವಣಸಿದ್ಧರೂ ಹೊರತಾಗಿಲ್ಲ. ಹನ್ನೊಂದು ಮತ್ತು ಹನ್ನೆರಡನೆಯ ಶತಮಾನಗಳ ನಡುವೆ ಈತನ ಕುರಿತಾದ ಸಾಹಿತ್ಯ ಹಾಗೂ ಜೀವಿಸಿದ್ದನೆನ್ನಲಾದ ಸಮಕಾಲೀನ ಐತಿಹಾಸಿಕ ಉಲ್ಲೇಖಗಳನ್ನು ಧರಿಸಿ ಕಾಲ ನಿರ್ಣಯವನ್ನು ವಿದ್ವಾಂಸರು ಹೀಗೆ ನಿರೂಪಿಸಿದ್ದಾರೆ.

ಹದಿಮೂರನೆಯ ಶತಮಾನದಲ್ಲಿ ಜೀವಿಸಿದ್ದ ಹರಿಹರ ಕವಿ ಮೊದಲಿಗೆ ಈತನನ್ನು ಕುರಿತು "ರೇವಣ ಸಿದ್ಧೇಶ್ವರ ರಗಳೆ" ಎಂಬ ಕಾವ್ಯ ರಚಿಸಿದ್ದಾನೆ. ಇದರಿಂದಾಗಿ ರೇವಣಸಿದ್ಧನು ಹರಿಹರನಿಗಿಂತ ಪೂರ್ವದವನೆಂಬ ಮಾತು ನಿರ್ವಿವಾದದಾದ್ದು. ಹರಿಹರನಿಗಿಂತ ಪೂರ್ವದಲ್ಲಿಯೇ ಹನ್ನೆರಡನೆಯ ಶತಮಾನದ ಕಲ್ಯಾಣದ ಶರಣರು ರೇವಣಸಿದ್ಧೇಶ್ವರನನ್ನು ಅವನ ಮಹಾತ್ಮೆಗಳನ್ನು ಸ್ತುತಿಸಿದ ಉಲ್ಲೇಖಗಳಿವೆ. "ನಿಮ್ಮ ಶರಣರ ಸೂಳ್ನುಡಿಗಳನ್ನೊಂದರಗಳಿಗೆ ಇತ್ತಡೆ" ಎಂಬ ಜೇಡರ ದಾಸಿಮಯ್ಯನ ಪೂರ್ವದ ಶರಣರ ಸ್ತುತಿಯ ಸಾಲಿನಲ್ಲಿ ರೇವಣಸಿದ್ಧರು ಸೇರುತ್ತಾರೆಂಬುದನ್ನು ಊಹಿಸಲು ಸಾಧ್ಯವಿದೆ. ಹೀಗಾಗಿ ಈತ ಹನ್ನೆರಡನೆಯ ಶತಮಾನದ ಶರಣರಿಗಿಂತ ಹಿರಿಯವನೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನಾಡಿನ ಚರಿತ್ರೆಗೆ ಅಧಿಕೃತ ದಾಖಲೆಗಳೆನಿಸಿದ ಶಾಸನಗಳು ರೇವಣಸಿದ್ಧರ ಮೇಲೆ ಬೆಳಕನ್ನು ಚೆಲ್ಲುತ್ತವೆ. ಹೀಗಾಗಿ ಶಾಸನಗಳ ಕಾಲವನ್ನು ಲಕ್ಷಿಸಿ ರೇವಣಸಿದ್ಧರ ಕಾಲವನ್ನು ಹೆಚ್ಚು ಖಚಿತವಾಗಿ

ನಿರ್ಧರಿಸಲು ಸಾಧ್ಯವಾಗುತ್ತದೆ. ಅಲ್ಲದೆ ರೇವಣಸಿದ್ಧರಿಗೆ ಮರಳಸಿದ್ಧರು (೧೧೯೩) ಮಗನೆಂಬುವುದ ರಿಂದ ಆ ಮೊದಲೇ ಅವರಿಬ್ಬರೂ ಬೇಟಿಯಾಗಿರಬೇಕು. ದೀಕ್ಷಾಕಾರ್ಯ ಸುಮಾರು ೧೧೮೫ರಲ್ಲಿ ನಡೆದಿರಬೇಕೆಂದು ತಿಳಿದು ಬರುತ್ತದೆ.

ರೇವಣಸಿದ್ದೇಶ್ವರ ಬೆಟ್ಟದಲ್ಲಿಯ ಅವ್ವೇರಹಳ್ಳಿಯ (ಕ್ರಿ.ಶ. ೧೧೯೩) ಶಾಸನದಲ್ಲಿ -

"ಆನಂದ ಸಂವತ್ಸರದ ಆಗೊರತ್ತೆಗೆ
ಹಜರಗವಿ ಬಗಿಲ ತೆಗೆದು ಮುಲೋ
ಕ ಅರಿನಹಿ ಪವಡವ ತೋರಿದರು
ರೇವಣಸಿದ್ದೇಶ್ವರನ ಮಗ
ಮರುಳ ಸಿದ್ಧೇಶ್ವರನು ....."[೯]

ಎಂಬ ಉಲ್ಲೇಖವಿದೆ. ಈ ಶಾಸನಕ್ಕೆ ಪೂರಕವಾಗಿ ದೊರೆತ ಮರುಳಸಿದ್ಧನ ಏಕೈಕ ವಚನದಲ್ಲಿ ರೇವಣ್ಣಪ್ರಭುವೆ ಎಂದು ಅಂಕಿತವಿದೆ. ಬಹುತೇಕ ವಚನಕಾರರು ವಚನಾಂಕಿತವನ್ನು ಪತಿ, ಸೋದರ, ಆರಾಧ್ಯದೈವ, ಗುರು ಹೆಸರಿನಲ್ಲಿ ನಿವೇದಿಸಿಕೊಂಡಿರುವುದು ಕಂಡುಬರುತ್ತದೆ. ಉದಾಹರಣೆಗೆ ಕಾಳವ್ವೆ "ಉರಿಲಿಂಗಪೆದ್ದಿಗಳರಸ" ಗಂಗಾಂಬಿಕೆ "ಗಂಗಾಪ್ರಿಯ ಕೂಡಲಸಂಗ" ಗಚೇಸ ಮಸಣಯ್ಯನ ಪ್ರಣ್ಯಸ್ತ್ರೀ "ಮಸಣಯ್ಯ ಪ್ರಿಯ ಗಜೇಶ್ವರ", ದುಗ್ಗಳೆ "ದಾಸಿಮಯ್ಯ ಪ್ರಿಯ ರಾಮನಾಥ", ಹಡಪದ ಲಿಂಗಮ್ಮ "ಅಪ್ಪಣ್ಣಪ್ರಿಯ ಚೆನ್ನಬಸವಣ್ಣ" ಹಾಗು ಮುಕ್ತಾಯಕ್ಕ" ಅಜಗಣ್ಣ ತಂದೆ" ಎಂದು ಅಂಕಿತವನ್ನು ಬಳಸಿರುವದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಹೀಗಾಗಿ ಅವ್ವೇರಹಳ್ಳಿ ಶಾಸನೋಕ್ತ ರೇವಣಸಿದ್ಧ ಮರುಳಸಿದ್ಧರ ಗುರು ಎಂಬ ಉಲ್ಲೇಖವಿದ್ದು ಮುಂದೆ ಆ ಗುರುವಿನ ಹೆಸರನ್ನೆ ಅಂಕಿತವನ್ನಾಗಿ ಮಾಡಿಕೊಂಡು ವಚನ ರಚಿಸಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಇವುಗಳ ಜೊತೆಗೆ ರೇವಣರ ಹೆಸರಿಗೆ ಸೇರಿಕೊಂಡ ಸಿದ್ಧರೆಂಬ ವಿಶೇಷಣ ಮರುಳಸಿದ್ಧರಿಗೂ ಆರೋಪಿತವಾಗಿರುವದು. ಅವರ ಅನುಯಾಯಿ ಎಂಬುದಕ್ಕೆ ಇಲ್ಲವೆ ಸಿದ್ಧ ಪರಂಪರೆಯ ವಾರುಸುದಾರಿಕೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಹೇಳಲು ಅವಕಾಶವಿದೆ. ಮರುಳಸಿದ್ಧರ ವಚನ ಈ ಹೀಗಿದೆ.

"ಆಲಿ ಆಲಯದಲ್ಲಿ ಕರಿಗೊಳಲು
ಆಲಿಸುವ ಶ್ರವಣವು ಮೇಲಿಪ್ಪ ಆಕಾಶವಡರಲು
ಉಲುಹು ನಿರ್ಭೂತ ಚಿತ್ತ ಸಮಾಧಾನವೆಯ್ದಲು
ಕಾಲ ಕರ್ಮ ಭವಂಗಳ ಗೆಲುವುದಿದೇನು
ಸೋಜಿಗವು ರೇವಣ್ಣ ಪ್ರಭುವೆ"[೧೦]

ಎಂದು ಮರುಳಸಿದ್ಧರು ರೇವಣಸಿದ್ಧರನ್ನು ಆರಾಧ್ಯ ದೈವವೆಂದು ಸ್ವೀಕರಿಸಿದಂತಿದೆ.

ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಕಕ್ಕೇರಿಯ (ಕ್ರಿ.ಶ. ೧೧೨೭) ಶಾಸನದಲ್ಲಿ ರೇವೇಶ್ವರ ದೇವರು ಎಂಬ ಉಲ್ಲೇಖದ ಜೊತೆಗೆ

> "ಮಹಾಸ್ಥಾನಂಗಳ ಆಚಾರ್ಯಸಿದ್ಧರೇವಣದೇವನ ಶಿಷ್ಯಬ್ರಹ್ಮರಾ
> ಸಿ ಪಂಡಿತರ ಕಾಲಂಕರ್ಚಿ ಧಾರಾಪೂರ್ವಕಯಾಡಿ
> ಯೂರಿಂ ಮೂಡದ ಕಲಿದೇವರ ತೆಯ್ಯ
> ಕರುಗಳತ್ತ್ರಿಗೆ"[೧೧]

ಎಂಬ ಉಲ್ಲೇಖದಿಂದ ರೇವಣಸಿದ್ಧರು ಬ್ರಹ್ಮರಾಸಿ ಪಂಡಿತರ ಗುರುಗಳಾಗಿರಬೇಕೆಂದು ತಿಳಿದುಬರುತ್ತದೆ.

ಕ್ರಿ.ಶ. ೧೧೫೫ ಗುಲಬರ್ಗಾ ಜಿಲ್ಲೆಯ ಯಡ್ರಾಮಿ ಶಾಸನದಲ್ಲಿ 'ಕುಮಾರ ರೇವಣದೇವ' ಎಂಬ ಉಲ್ಲೇಖವಿದ್ದು ಮಹಾಮಂಡಲೇಶ್ವರನ ಮಗನಾದ ಕುಮಾರನು ರೇವಣದೇವ ಉಪಾಸಕನಾಗಿರಬಹುದು ಇಲ್ಲವೆ ವ್ಯಾಸನ ಹೆಸರನ್ನು ನಾರಾಯಣಪ್ಪ ಕುಮಾರವ್ಯಾಸನೆಂದು ಇಟ್ಟುಕೊಂಡಂತೆ ಮಹಾಮಂಡಲೇಶ್ವರ ಮಗ ರೇವಣದೇವರ ಹೆಸರನ್ನು ಕುಮಾರರೇವಣ ದೇವ ಎಂದು ಇಟ್ಟುಕೊಂಡಂತೆ ಅಥವಾ ತಂದೆ ತಾಯಿಗಳು ನಾಮಕರಣ ಮಾಡಿದಂತೆ ತಿಳಿಯಲು ಅವಕಾಶವಿದೆ. ಈ ಶಾಸನವಲ್ಲದೆ ಕ್ರಿ.ಶ. ೯೯೯ರ ಬೆಡ್ಕಿಹಾಳ್, ಕ್ರಿ.ಶ. ೯೯೮ರ ಬೇವಿನಹಳ್ಳಿ, ಕ್ರಿ.ಶ. ೧೦೬೮ ಬಾಗಳಿ ಕ್ರಿ.ಶ. ೧೦೭೯ರ ಹಾಲೂರು, ಕ್ರಿ.ಶ. ೧೧೫೨ರ ಮಾಸೂತಿ, ಕ್ರಿ.ಶ. ೧೧೮೨ರ ನರೇಗಲ್ ಮುಂತಾದ ಶಾಸನಗಳಲ್ಲಿ ರೇವರಸ, ರೇವಣ, ಕುಮಾರ ರೇವರಸ, ಕುಮಾರ ರೇವಣದೇವ, ರೇವಣಸಿದ್ಧ ಎಂಬ ಹೆಸರುಗಳು ಕಂಡುಬರುತ್ತವೆ.

ಕಲುಬುರ್ಗಿ ಜಿಲ್ಲೆಯ (ಕ್ರಿ.ಶ. ೧೧೭೫) ಹೋತಗಲ್ ಶಾಸನದಲ್ಲಿ

> "..... ಸ್ವಸ್ತಿ ಶ್ರೀ ಮದ
> ಣು ಮಾದ್ವಷ್ಟಗುಣ ಸಂಪನ್ನರುಳಶ್ವಜ್ಞಾನಪ್ರ (ಗ ಅ)ರು
> ಕ್ಕ ಸಿದ್ಧ ಶಿವಯೋಗಿ ಶಾನ್ತಿಮಯಂಗಳ
> ಭೂಗುತಮಪ್ಪ ಸಿರಿವೊಳಲ ಶಾನ್ತೀಶ್ವರದೇವರ (ಸಿದ್ದೇ)
> ಶ್ವರ ದೇವರ ದೇವಕಾರ್ಯ್ಯ ನಡವನ್ತಾಗಿ ಸಿದ್ಧದೇವಣ
> ಯ್ಯಗಳ ಪಾದಪಕ್ಷಾಲನ ಮಾಡಿ ಸೌಧೊರೆ ಬಮ್ಮ
> ಯ್ಯ ಮುಖ್ಯ ಸಮಸ್ತ ಆಶ್ರಯತರು ಸಗರವೈನೂರ
> ಬಾಡದ ಬಳಿಯ ಬಾಡ ಹೋತಂಗಲ್ಲಂ ತ್ರಿಭೋ
> ಗಾಭ್ಯಾಂತರಂ ಸರ್ವ್ವಗಮಶ್ಯವಾಗಿ ಧಾರಾಪೂರ್ಬ್ಬಕಂ
> ಮಾಡಿ ಕೊಟ್ಟರು ....."[೧೨]

ಎಂಬ ಉಲ್ಲೇಖವಿದ್ದು ಕಲ್ಯಾಣ ಚಾಲುಕ್ಯದೊರೆ ಸೋಮೇಶ್ವರ ಮಹಾಮಂಡಲೇಶ್ವರ ದಂಡನಾಯಕನ ಮಗ ಕುಮಾರ ಬಮ್ಮಿದೇವರಸ, ಅಲ್ಲಪುಲಿದೇವರಸರು ರೇವಣಸಿದ್ಧಯ್ಯಗಳ ಪಾದ ತೊಳೆದು ಸಗರ ಐನೂರರ ಬಾಡದ ಬಳಿಯ ಹೋತಗಲ್ಲಿನ ಸಮಸ್ತರ ಸಮ್ಮುಖದಲ್ಲಿ ದೇವಕಾರ್ಯಕ್ಕಾಗಿ ದಾನ ನೀಡಿರುವದು ಇದರಿಂದ ತಿಳಿದು ಬರುತ್ತದೆ.

ಸುರಪುರ ತಾಲ್ಲೂಕಿನಲ್ಲಿ (ಕ್ರಿ.ಶ. ೧೧೭೬) ಏವೂರ ಶಾಸನದಲ್ಲಿ 'ರೇವಣಂ' ಎಂಬ ಪದ ರೇವಣಸಿದ್ಧರನ್ನೇ ಸೂಚಿಸಿರಬೇಕು. ಹಾಗೆಯೇ ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೊಲ್ಲೂರಿನಲ್ಲಿ ಕ್ರಿ.ಶ. ೧೧೯೯ರ ಶಾಸನದಲ್ಲಿ

> "..... ಶಕ ವರ್ಷ ೧೧೯೧ನೆಯ
> ವಿರೋಧಿ ಸಂವತ್ಸರದ ಶ್ರಾವಣ ೧೧ ಸೋಮವಾರ ವ್ಯಾತಿಪಾತ
> ಸೋಮಗ್ರಹಣದಂದು ಕೊರಲೂರ ಪ್ರತಿಷ್ಟಟ ಕೊನ್ನಡಳೆಯ ಉಭಯ
> ಸ್ವಾಮ್ಯಮಂ ಶ್ರೀ ರಾಮೇಶ್ವಂ ಅಲೇಶ್ವರ ದೇವರ ಮ
> ರ ದಾಚಾರ್ಯ ರಾಮೇಶ್ವರ ದೇವರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿ
> ಪ್ರಸನ್ನ ರಾಮೇಶ್ವರ ದೇವ ಸಾಯಿ ನಿರ್ಮಡೇಶ್ವರ ವೆಸ xxxxx
> xxxxx ಶ್ವರ ದೇವರ ಏಲೇಶ್ವರದೇವರ ಮಠದಾಚಾರ್ಯ ಮಾಡಿಕೊಟ್ಟರ ||
> ಹಿರಿಯ ಸೋಮೇಶ್ವರ ದೇವರ ಮಠದಾರ್ಯರಿಗೆ xxxxx
> ಕಾಲಕರ್ಚಿ ಧಾರಾಪೂರ್ವಕಂ ಮಾಡಿ ಕಂನ್ನಶ್ವರದೇವರ ಮಠದಾಚಾರ್ಯ
> ಮಾಡಿಕೊಟ್ಟರು xxxxxಸ್ಥಳದ ಪ್ರಸನ್ನಗೊಗ್ಗೇಶ್ವ
> ರ ದೇವಂಗಂ ಸಾಯಿ ನಿರ್ಮಡೇಶ್ವರ ದೇವರಿಗಂ ರೇವಣೇಶ್ವರ ದೇವರಿಗೆ
> ಸಿದ್ಧೇಶ್ವರ ದೇವರಿಗಂ ಕಂನ್ನೇಶ್ವರ ದೇವರಿಗಂ xxxxx ಬಾರಿ
> xxxxx ಯಂ ದೂರ ಪಂಚಲಿಂಗ ದೋವರೊಳದಾಚಾರ್ಯರು ದೇವರ
> ಪೂಜಾ ಪುನಸ್ಕಾರ ನಂದಾದೀವಿಗೆ ಖಂಡಸ್ಪುಟಿತ ಜೀರ್ಣೋದ್ಧಾರ
> ರ ....."[೧೩]

ಎಂಬ ಉಲ್ಲೇಖವಿದೆ. ಇದರ ಪ್ರಕಾರ ಪ್ರಸನ್ನ ರಾಮೇಶ್ವರ ದೇವರ ಮತ್ತು ಅಲೇಶ್ವರ ದೇವರ ಮಠದ ಆಚಾರ್ಯರರ ಕಾಲನ್ನು ತೊಳೆದು ಕಲಚೂರ್ಯ ಚಕ್ರವರ್ತಿ ಸೋವಿದೇವನ ಮಾಂಡಲಿಕ ಸಗರ ಮೂವತ್ತರ ಬಾಡದ ಸೌಧೊರೆ ಮಹಾಪ್ರಭುಗಳು ರೇವಣಸಿದ್ಧೇಶ್ವರ ದೇವರ ನಿತ್ಯ ಸೇವೆಗೆಂದು ದತ್ತಿ ನೀಡಿದ ವಿಷಯವಿದೆ. ಇದೇ ಶಾಸನದಲ್ಲಿ "ಗೊಗ್ಗೇಶ್ವರ, ಏಚಲೇಶ್ವರ, ಕನ್ನೇಶ್ವರ, ರಾಮೇಶ್ವರ, ಅಲೇಶ್ವರ ದೇವರುಗಳು ಮಠದ ಹೆಸರುಗಳಾಗಿರಬಹುದು ಮತ್ತು ಇವರನ್ನು ವೀರಶೈವರ ಇಂದಿನ ಶಿವಾಚಾರ್ಯರಿಗೆ ಹೋಲಿಸಬಹುದಾಗಿದೆ.

ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕೋಳಕೂರ (ಕ್ರಿ.ಶ. ೧೧೮೦) ಶಾಸನದಲ್ಲಿ ರೇವಣಸಿದ್ಧೇಶ್ವರ ದೇವರು ಎಂಬ ಉಲ್ಲೇಖವಿದ್ದು ಕಲ್ಯಾಣ ಚಾಲುಕ್ಯ ಅರಸ ವೀರಸೋಮೇಶ್ವರನ ಕಾಲದ ಈ ಶಾಸನದಲ್ಲಿ ಬಡಗಣ ನಾಡೊಳಗೆ ಪ್ರಸಿದ್ಧವಾದ ರೇವಣೇಶ್ವರ ದೇವರ ನಿತ್ಯ ಸೇವೆಗೆಂದು ದತ್ತಿ ನೀಡಿರುವ ವಿವರಣೆ ಇದೆ.

"..... ರೇವಣೇಶ್ವರ ದೇವರ ಬಡಗಣವೊಳಗೆ ವರ್ದ್ದದಿಂ
ಬಡಗ ಗಲು ಹಂ
ನಿ ಕೈಯ್ಯ ನಿವೇಶನ ಒಂದು"[೧೪]

ಪ್ರಾಯಶ: ಈ ಹೊತ್ತಿಗಾಗಲೇ ರೇವಣ ಸಿದ್ಧೇಶ್ವರರು ಜನರ ಬಾಯಲ್ಲಿ ದಂತಕತೆಯಾಗಿ ಉಳಿದಿರುವಂತೆ ತಿಳಿದುಬರುತ್ತದೆ.

ಮಹಾರಾಷ್ಟ್ರದ ಪಂಡರಾಪುರದ ಸಮೀಪದ ಪುಳಜೆಯಲ್ಲಿ ಕ್ರಿ.ಶ. ೧೨೦೦ರ ಶಾಸನವು ರೇವಣಸಿದ್ಧರ ಹೆಸರಿನಲ್ಲಿರುವ ಪವಿತ್ರ ತೀರ್ಥವನ್ನು ಉಲ್ಲೇಖಿಸುತ್ತದೆ.

".....ಶ್ರೀ ಸಿದ್ಧಸೋಮನಾಥ ದೇವರ್ಗ ಅಸುರಿಯಲ್ಲಿ
ಡವಳ ಪಳದ ಬಟ್ಟೆ ಬವಡಳೆಯಂ? ಪಡುವಲು
ವೃತ್ತಿ೧ ಜಕ್ಕಿಯರ ಬಾವಿ ರೇವಣ ಮಡು
ಹೂದೋಟ ..... ಪರ್ವನಮಸ್ಯ ಧಾರಾ ಪೂರ್ವಕಂ
ಮಾಡಿಕೊಟ್ಟರು"[೧೫]

ಎಂಬ ಶಾಸನದ ಪ್ರಕಾರ ರೇವಣಸಿದ್ಧರ ಹೆಸರಿನಲ್ಲಿರುವ ಮಡು ಕುಂಡದ ಸಂರಕ್ಷಣೆಗಾಗಿ ದತ್ತಿ ನೀಡಿರುವದು ತಿಳಿದು ಬರುತ್ತದೆ. ಹಾಗೆಯೇ ಆಚಾರ್ಯ ರೇವಣಸಿದ್ಧರನ್ನು ಸಿದ್ಧಕುಲ ಚಕ್ರವರ್ತಿ ಎಂದು ಸಂಭೋದಿಸಲಾಗಿದೆ.

ತೊಂಡೆವಾಡಿ (ಕ್ರಿ.ಶ. ೧೩೪೬) ಶಾಸನದ ಪ್ರಕಾರ

"ವಿಜಯ ನಗರದಲ್ಲೂ ಆದಿ ಪ್ರಥಮಾಚಾರ್ಯಪೀಠಸ್ಥರಾದ
ರೇವಣಾರಾಧ್ಯ ಸ್ವಾಮಿಯವರ ಗೋತ್ರಕ ದೇವರು ಕೊಲ್ಲಿಪಾಕಿ
ವೀರಭದ್ರ ಸ್ವಾಮಿಯವರು ..... ರಾಚವಟ್ಟೆ ವೀರಭದ್ರ
ಕುಲದೇವರು ..... ಷಟಸ್ಥಲವರ್ಗ ಸಿಂಹಾಸನ
ಸ್ಥಾಪಕಾಯ ..... ರೇಣುಕ ಗೋತ್ರ ಶಿವಲಿಂಗಸ್ವಾಮಿಯವರಿಗೆ
ಶಿಷ್ಯರಾದ ಹರಿಹರಮಹಾರಾಯ ..... ಸೋಸಲೆಯಲ್ಲಿ
ಮಟ್ಟ ಸ್ಥಾಪಿಸಿಕೊಟ್ಟ ....."[೧೬]

ಎಂಬ ಉಲ್ಲೇಖದಿಂದ ವೀರಭದ್ರ ಸ್ವಾಮಿಯವರು ವಿಜಯನಗರದಲ್ಲಿ ಆದಿ ಪ್ರಥಮಾಚಾರ್ಯ ಪೀಠಸ್ಥರಾದ ರೇಣವರಾಧ್ಯ ಸ್ವಾಮಿಯವರ ಗೋತ್ರದವರು. ಇವರ ಕುಲದೈವ ರಾಚವಟ್ಟಿ ವೀರಭದ್ರ ಎಂದು ತಿಳಿದು ಬರುವದರಿಂದ ಪ್ರಾಯಶ: ಈ ಕಾಲದ ಹೊತ್ತಿಗೆ ಬಗೆ, ಗೋತ್ರ ಮುಂತಾದ ವೀರಶೈವ ಬೆಡಗುಗಳು ಪ್ರಚಲಿತಕ್ಕೆ ಬಂದಂತಿವೆ. ಹೀಗಾಗಿ ಪ್ರಸ್ತುತ ಶಾಸನದ ರೇವಣರಾಧ್ಯ ಸ್ವಾಮಿಯವರ ರೇಣುಕ ಗೋತ್ರ ಎಂಬ ಉಲ್ಲೇಖ ರೇವಣಸಿದ್ಧರನ್ನೆ ಕುರಿತು ಸಂಭೋದಿಸಿದಂತಿದೆ.

ಬಯರತ್ತಿ (ಕ್ರಿ.ಶ. ೧೧೮೭) ಶಾಸನದ ಉಲ್ಲೇಖದಂತೆ

ಮುಸುಕುಂದ ಮಹಾಋಷಿಯ ಪಿತಾಮಹಾ (ಅಜ್ಜ) ರೇವಣಸಿದ್ಧಯ್ಯ ದೇವರು ಇದ್ದ ಸ್ಥಳವನ್ನು ಆ ಸೀಮೆಯ ಮುನಿಗಳು ಪೂಜೆಯನ್ನು ಮಾಡಿದ ಮೂಲ ಸ್ಥಳವಿದು ಎಂಬ ಶಾಸನವು ಹೀಗಿದೆ.

> "ಮುಸುಕುಂದ ಮಹಾರುಸಿಯ ಪಿತಾಮ
> ರೇವಣಸಿದ್ಧಯ್ಯ ದೇವರಿದ್ದ ತಾನ ನಾಗ ಸಿಮ
> ಮುನಿಗಳು ಪೂಜೆಯ ಮಾಡಿದ ಮೂಲ ತಾಣ"[೧೭]

ರೇವಣಸಿದ್ಧರು ಜಡೆಮುನಿಯಪ್ಪನೊಡನೆ ಇದ್ದರು. ಬೆಂಗಳೂರು ಜಿಲ್ಲೆ ಈಗಿನ ರಾಮನಗರ ತಾಲ್ಲೂಕ ಆವ್ವೇರಹಳ್ಳಿ ಮತ್ತು ಪ್ರಸ್ತುತ ಬಯಿರತ್ತಿಗ್ರಾಮ ಎರಡು ಬೆಂಗಳೂರು ಜಿಲ್ಲೆಯಲ್ಲಿರುವುದ ರಿಂದ ರೇವಣಸಿದ್ಧರು ಆ ಭಾಗದಲ್ಲಿ ಸಂಚರಿಸಿರುವ ಸಾಧ್ಯತೆಯನ್ನು ಊಹಿಸಬಹುದಾಗಿದೆ. ಹೀಗಾಗಿ ಜಡೆಮುನಿಯಪ್ಪ ಮತ್ತು ರೇವಣಸಿದ್ಧರ ಸಹವರ್ತನವು ಚಾರಿತ್ರಿಕವಾಗಿ ನಿರ್ಧರಿಸಲಿಕ್ಕೆ ಸಹಾಯಕ ವಾಗುತ್ತದೆ. ಈ ಜಡೆಮುನಿಯಪ್ಪನ ಮಗ ಇಲ್ಲವೆ ಶಿಷ್ಯನಾದ ಶಾಸನೋಕ್ತ ಮುಸಕುಂದ ಮಹಾರುಸಿ ಜಡೆಮುನಿಯಪ್ಪನಷ್ಟೇ ಪ್ರೀತಿ ಆದರಾಭಿಮಾನಗಳನ್ನು ರೇವಣಸಿದ್ಧರಲ್ಲಿರಿಸಿಕೊಂಡಿದ್ದು ಆತನನ್ನು ಪಿತಾಮಹಾ (ಅಜ್ಜ)ನೆಂದು ಸ್ವೀಕರಿಸಿದ್ದಾನೆ. ಆತನು ನೆಲೆ ನಿಂತ ಸ್ಥಳವನ್ನು ಪೂಜ್ಯಭಾವನೆಯಿಂದ ಪರಿಗಣಿಸಿ ಆ ಸ್ಥಳದಲ್ಲಿ ಶಾಸನವನ್ನು ಬರೆಯಿಸಿದ್ದಾನೆ. ಇದಕ್ಕೆ ಪೂರಕವೆಂಬಂತೆ ಈ ಕಾಲದಲ್ಲಿ ಆ ಪ್ರಾಂತವನ್ನೆಲ್ಲಾ ರೇವಣಸಿದ್ಧರು ಸಂಚರಿಸಿದ್ದನ್ನು ಭೀಮೇಶಾದ್ರಿ ಪುರಾಣವು ಒಪ್ಪಿಕೊಳ್ಳುವ ಉಲ್ಲೇಖವನ್ನು ಚೆನ್ನಮಲ್ಲಿಕಾರ್ಜುನರು ತಿಳಿಸುತ್ತಾರೆ. ಹೀಗಾಗಿ ರೇವಣಸಿದ್ಧರು ೧೧೮೭ರಲ್ಲಿ ತನ್ನ ಸಾಧನೆ-ವ್ಯಕ್ತಿತ್ವದಿಂದ ಆರಾಧ್ಯಗುರುವಾಗಿ, ಕಾರಣಿಕ ಪುರುಷನಾಗಿ ಕಂಗೊಳಿಸಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಅದೇ ರೀತಿಯಾಗಿ (ಕ್ರಿ.ಶ. ೧೯೯೧) ಚೌಡದಾನಪುರ ಶಾಸನದಲ್ಲಿ

> "ಕಾರನಿಡರೆನಿಪರೊಳು ತಾಂ
> ಕಾರಣಿತರೆನಿಪ ಸಿದ್ಧರೇವಣ ದೇವರ
> ಕಾರಣ್ಯದ ಶಿಶು ಭಕ್ತ್ಯಾ

ಚಾರದ ಬಲ್ಲಾಳದೇವ ಲೊಕ್ಕಿಯೊಸೆದೆದಂ"[೧೮]

ಹಾಗೂ

"..... ಧರ್ಮಧ್ವಜ ದೇವಲೋಕವನೆ ತಾನೆಯ್ದಲ್

ಧರ್ಮಜ್ಞದೇವಿಕನ್ಸರೆ

ಪರಮ ಗುರು ಸಿದ್ಧರೇವಣ

ಸಿರಿಗಿರಿಯ ನಿವಾಸನಾಜ್ಞೆಯಿಂ ಬೆಸಸಿದನ

ಚ್ಚರಿಯ ಮನೆಯಪ್ಪ ಮುಕ್ತೇ

ಶ್ವರ ಲಿಂಗದೊಳಲ್ಲಿ ತುಂಗಭದ್ರೆಯ ತಡಿಯೊಳ್"[೧೯]

ಎಂಬ ಉಲ್ಲೇಖಗಳಿಂದ ತೊರೆಗಲ್ ನಾಡಿನ ಲಂಕೆ ಎಂಬಲ್ಲಿ ಗಣಂಗಳ ದಾಸೋಹ ಭಾವದಲ್ಲಿ ಸುಖವಾಗಿದ್ದ ಬಲ್ಲಾಳ ದೇವರಿಗೆ ರೇವಣಸಿದ್ಧರು ಅನುಗ್ರಹ ದೀಕ್ಷೆ ನೀಡಿದರು. ಹಾಗೂ ಕಲ್ಲರಸನ ಸಾವನ್ನು ಗ್ರಹಿಸಿದ ರೇವಣಸಿದ್ಧರು ಆತನ ಹೆಂಡತಿ ಕನ್ನಾದೇವಿಯ ಮಾಂಗಲ್ಯವನ್ನು ನೀಗುವದಕ್ಕಾಗಿ ಪಶ್ಚಿಮವಾಹಿನಿಯಾದ ತುಂಗಭದ್ರೆಯ ದಡದಲ್ಲಿರುವ ಮುಕ್ತೇಶ್ವರ ಕ್ಷೇತ್ರಕ್ಕೆ ಹೋಗಬೇಕೆಂಬ ಅಪ್ಪಣೆ ಮಾಡಿರುವ ಸಂಗತಿ ಈ ಮೇಲಿನ ಎರಡು ಶಾಸನಗಳಿಂದ ತಿಳಿದುಬರುತ್ತದೆ. ಅಂದರೆ ಕ್ರಿ.ಶ. ೧೧೯೩ರ ಹೊತ್ತಿಗೆ ರೇವಣಸಿದ್ಧರು ಸಿದ್ಧಪುರುಷರಾಗಿ ನಾಡಿನಾದ್ಯಾಂತ ಜನಜನಿತವಾಗಿದ್ದರೆಂಬುದು ವೇದ್ಯವಾಗುತ್ತದೆ.

ಸಿರಿವಾಳ (ಕ್ರಿ.ಶ. ೧೧೮೨) ಶಾಸನದ ಪ್ರಕಾರ

"..... ಶ್ರೀ ಮದಣಿ ಮಾದ್ಯಷ್ಟ ಗುಣಸಂ

ಪಂನರು ತತ್ವಜ್ಞಾನ ಪ್ರಸನ್ನರುಂ ಷಡಂಗಯೋಗಸಂಗದರುಂ ಸರಾರಭಸಂಗ

ನಿಸಂಗರುಮಪ್ಪ ಶಿವಯೋ

ಗಿ ಶಾನ್ತಿಮಯ್ಯ ದೇವಂಗಳ ಪುತ್ರ ರೇವಣ ದೇವಯ್ಯಂಗಳ

ಪ್ರಸಿದ್ಧತಿಕೆ ಯೆಂತನೆ ||

ಒರ್ಬ್ಬಳ ತಂಡುಳದಿಂ

ದಬ್ಬರ್ಬ್ಬಿಶನ ರಾಯನಕಟಕಮಂ ತಣಿಸಿದನಾ ಸರ್ವ್ವಜ್ಞ ಮೂರ್ತಿ ಜಗದೊಳ

ಗೊರ್ಬ್ಬನೆ ಶಿವಸಿಧ ಚ

ಕ್ರಿ ರೇವಣದೇವಂ || ತೊಟಿ ತುಂಬಿ ಬಂದಡರೆ ತಾ ಹರಗೊಲಂ ತನ್ನವೆಂನ

ದಾಜ್ಞಾಬಲದಿಂ ತೊರೆ

ಯಂ ದಾಂಟಿ ವನಿಂತಿ ಕುರುಪಿನ ತತುಕಾರನೀ ರೇವಣದೇವಂ ಅಂದೊಮ್ಮ

ಸಿದ್ದನೆಂದೊಡೆ

ನಿಂದಿಸಿದರು ಮನುಜರೆಲ್ಲ ಧರೆ ಭೂರ್ಭುಗಿಲನೆ ಬೆಂದುದು ಸತ್ವರಜಂತ ಮ

ವಂದಿನ ಸಿದ್ಧಂ ಪ್ರ

ಸಿದ್ಧ ರೇವಣ ದೇವಂ || ಮುನ್ನೊಮ್ಮೆ ಸಿದ್ಧನಾಗಿಯು ವನ್ನದ ತವನಿಧಿಯ

ತೊರೆ ಲೋಕದೊಳ

ಮತ್ತಿನ್ನೊಮ್ಮೆ ನೋರ್ಪನೆಂದುಂ ತಂನಂ ತಾನರಪ್ಪ ನೆಗಳ್ದ ರೇವಣದೇವಂ||

ತಾರಜ ಮಂದ್ರದ ಮಧು

ರದ ಸಾರಾಯದ ಸಪ್ತಸರದಿಂದ ನರೇಶ್ವರನಂ ಭೋರನೆ ಕೇಳಿಸು ತಿಪ್ಪ ಧಾರಿಣಿ

ತಳದೊಳಗೆ ನೆಗಳ್ದ ರೇವಣದೇವ |

ನ್ರಿತ್ಯಕ್ಕೆ ನಿಂದಡೆವೆ ಬಲದತ್ಯದ್ಭುತ ಮರಳ ತಂಡ ರೌದ್ರಮಿದೆನ ಲುಂ ಪ್ರತ್ಯಕ್ಷ

ಲಿಂಗ ಬೆಮರಲು ಸತ್ಯ

ದಿಂದತ್ಯಂತ ಸಿದ್ಧರೇವಣದೇವ || ಅನ್ತಾ ಭೂಲೋಕ ಸಿದ್ಧ ಪ್ರಸಿದ್ಧ ರಪ್ಪ ರೇವಣ

ದೇವಯ್ಯಂಗಳ

ಪಾದಪ್ರಕ್ಷಾಳನಂ ಮಾಡಿ ತ್ರಿಭೋಗಾಭ್ಯಂತರ ಸರ್ಬ್ಬನಮಶ್ಯವಾಗಿ ಧಾರಾ

ಪೂರ್ಬ್ಬ

ಕಂ ಮಾಡಿ ಕೊಟ್ಟರು ಮಂಗಳ ಮಹಾ ಶ್ರೀ ಶ್ರೀ ..... ಯ ಪ್ರಭುಗಳು || [೨೦]

ಬಿಜ್ಜಳನ ಗರ್ವಭಂಗ, ಬಿಜ್ಜಳನಿಗೆ ಮಾಸೂರು ಕೆರೆಯಲ್ಲಿ ಹೂಳಿದ ಕತ್ತಿಯನ್ನು ತೆಗೆದು ಕೊಡುವದಕ್ಕಾಗಿ ಹೊಳೆದಾಟದ ವಿಷಯ ಹಾಗೂ ನಾಥ ಪಂಥದವನಾಗಿದ್ದಾಗ ಜನರ ನಿಂದನೆ ಅದಕ್ಕೆ ಸಿದ್ದನಾಗಿ, ವೀರಶೈವನಾಗಿ, ಶಿವಯೋಗಿಯಾಗಿ ಪ್ರಸಿದ್ಧಿ ಹೊಂದಿದ ರೀತಿ, ಅಲ್ಲದೆ ನಟೇಶ್ವರ ದೇವಸ್ಥಾನದ ಲಿಂಗದ ಮುಂದೆ ಕುಣಿದಾಗ ಲಿಂಗ ಬೆವರಿದ ಉಲ್ಲೇಖವನ್ನು ಒಳಗೊಂಡಿದೆ. ಹೀಗಾಗಿ ರೇವಣಸಿದ್ದರು ಪವಾಡ ಪುರಷರಂತೆ ಚಿತ್ರಿತರಾಗಿದ್ದಾರೆ. ಪ್ರಾಯಶಃ ಅವರ ಘನ ವ್ಯಕ್ತಿತ್ವನ್ನು ಜನರು ಇಂತಹ ಆರಾಧನೆ, ಪವಾಡಗಳ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿರಬೇಕು. ಚೆನ್ನಮಲ್ಲಿಕಾರ್ಜುನರು ಹೇಳುತ್ತಾರೆ "ಬೌಡದಾನಪುರ ಶಾಸನ ಮತ್ತು ಸಿರಿವಾಳ ಶಾಸನದ ರೇವಣರು ಒಂದೇ ಇರಬೇಕೆಂದು ವಿದ್ವಾಂಸರಾದ ಡಾ. ಶಿ.ಚ.ನಂದೀಮಠ ಅವರು ಅಭಿಪ್ರಾಯಪಡುತ್ತಾರೆ."[೨೧]

ಇಂಗಳಿಗೆಯ (ಕ್ರಿ.ಶ. ೧೨೨೯) ಶಾಸನದ ಪ್ರಕಾರ

"..... ಶ್ರೀಮಾನ್ ಮಹಾ

ಮಂಡೇಳೇಶ್ವರಂ ಬಿಬ್ಬರಸರು ಅರಲು ಮುಂನೂರರ ಬ

ಳಿಯ ಬಾಡ ಯಿಂಗುಳಿಗೆಯ ಪ್ರಭು ನಾಗರಸ ವೆರ್ಗ್ಗಡೆ

ಬಸವನಲ್ಲಿಯ ಪಂಚಮಠ ಯಿಂತಿವರೇಕಸ್ತರಾಗಿ ಶ್ರ
ಮೂಲ ಸ್ಥಾನದೇವರ ಪಾದಾರಾಧಕೆಯರಪ್ಪ ಕ್ಷೇತ್ರ ಸನ್ಯಾ
ಸಿ ಮಹಾನುಭಾವನೆಯನುಮಪ್ಪ ಚಲವ್ವೆಯಗಳ ಕಾಲಂ ತೊ
ಳದು ಧಾರ ಪೂರ್ವ್ವಕಂ ಮಾಡಿ ಶ್ರೀ ಸಿದ್ಧರಾಮನಾಥ ದೇವರ್ಗ್ಗೆ
ದೇವರ್ಗ್ಗೆಂದ ನಗಣ ಸಿಂಗಿದೇವ ಬಿಜ್ಜೇಶ್ವರ ದೇವರು
ರೇವಣೇಶ್ವರ ಕಂನ್ನೇಶ್ವರ ಕೇದಾರದೇವರು ನಾಗೇಶ್ವರ ಯಿಂ
ತಿ ಸಕಳ ಲಿಂಗದೇವರಿಗೆ ಶ್ರೀ ಗುಡ್ಡವ್ವೆಗಳು ಮುಖ್ಯ
ವಾಗಿ ಗಣಮಠಕ್ಕೆ ಕೊಟ್ಟವೃತ್ತಿ .....''[೨೨]

ಇಲ್ಲಿ ಗಣಂಗಳ ಮಹಿಮೆಯನ್ನು ಹೊಗಳಿ ವೀರಬಿಜ್ಜರಸರು, ಇಂಗಳಿಗೆ ಪ್ರಭು ನಾಗರಸ ಹೆಗ್ಗಡೆ, ಬಸವಯ್ಯ ಪಂಚಮಠ, ಇವರುಗಳು ಸಿದ್ಧರಾಮನಾಥ, ಸಿಂಗಿದೇವ ಬಿಜ್ಜರಸ, ಕನ್ನೇಶ್ವರ, ಕೇದಾರ ದೇವರು ನಾಗೇಶ್ವರ ಮುಂತಾದ ದೇವರುಗಳಿಗೆ ದಾನ ಕೊಟ್ಟಂತೆ ರೇವಣೇಶ್ವರ ಎಂಬ ದೇವರಿಗೂ ದಾನ ಬಿಟ್ಟ ಉಲ್ಲೇಖ ಶಾಸನದ ಮೂಲಕ ತಿಳಿದುಬರುತ್ತದೆ. ಈ ಶಾಸನೋಕ್ತ ರೇವಣೇಶ್ವರರು ಆಚಾರ್ಯ ರೇವಣರೆಂಬುದು ಗುರುತಿಸಲು ತಕ್ಕ ಆಧಾರಗಳಿಲ್ಲವೆಂದು ಚೆನ್ನಮಲ್ಲಿಕಾರ್ಜುನರು ಅಭಿಪ್ರಾಯ ಪಡುತ್ತಾರಾದರು ''ಶಾಸನಗಳಲ್ಲಿ ಉಕ್ತವಾಗಿರುವ ಪಂಚಮಠಗಳ ಮತ್ತು ಗಣ ಮಠಗಳು ಪಂಚಮಠಗಳ ಶಾಖಾ ಮಠಗಳಾಗಿರುವದಕ್ಕೆ ಸಾಧ್ಯತೆಗಳಿವೆ. ಶ್ರೀಶೈಲದಲ್ಲಿ ಇಂತಹದ್ದೇ ಪಂಚಮಠ, ಗಣಮಠಗಳಿದ್ದು ಇವೆಲ್ಲಾ ಶಾಸನೋಕ್ತವಾಗಿದೆ. ಸಾರಂಗಮಠ (ರಂಭಾಪುರಿ) ನಂದೀಮಠ (ಉಜ್ಜಯಿನಿ) ಘಂಟಾಮಠ (ಕೇದಾರ) ವಿಭೂತಿಮಠ (ಶ್ರೀಶೈಲ) ಮತ್ತು ರುದ್ರಾಕ್ಷಿಮಠ (ಕಾಶಿ) ಗಳು ಆಗಿ ಆಯಾ ಪೀಠಗಳನ್ನು ಪ್ರತಿನಿಧಿಸುತ್ತವೆ. ಹೀಗಾಗಿ ಶಾಸನೋಕ್ತ ರೇವಣೇಶ್ವರ ಎಂಬ ಉಲ್ಲೇಖ ರೇವಣಸಿದ್ದೇಶ್ವರ ಹೆಸರಿನ ಮಠವೊಂದಕ್ಕೆ ದಾನವನ್ನು ಬಿಟ್ಟಿರುವಂತೆ ಊಹಿಸಬಹುದಾಗಿದೆ. ಈ ಕಾರಣವಾಗಿ ಶ್ರೀ ಸಾಮಾನ್ಯರ ಆರಾಧ್ಯ ದೈವವಾಗಿ ಬೆಳೆದುನಿಂತ ರೇವಣಸಿದ್ಧರು ಅರಸರಿಗೆ ರಾಜಗುರುಗಳಾಗಿ ಕಂಗೊಳಿಸಿದಂತೆ ತಿಳಿದು ಬರುತ್ತದೆ. ಹರಿಹರನ ರಗಳೆಯ ಪ್ರಕಾರ ಆರನೆಯ ವಿಕ್ರಮಾದಿತ್ಯನಿಗೆ ಖಡ್ಗವನ್ನು ನೀಡಿ ಅದರ ಮಹತ್ವವನ್ನು ವಿವರಿಸಿದ ಘಟನೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಲಕ್ಷೇಶ್ವರ (ಕ್ರಿ.ಶ. ೧೫೧೩) ಶಾಸನದಲ್ಲಿ

''ಶ್ರೀ ಮುದಮಾಮನೋಹರನೆನಿಪ್ಪ ಸದಾಶಿವನಾಮಹಾಗರ್ಣ
ಸ್ತೋಮದ ಮಧ್ಯದಲ್ಲಿ ರಜತಾದ್ರಿಯೊಳೋಲಗವಿತ್ತುದಿವ್ಯತೇ
ಜೋಮಯಮೂರ್ತಿ ದಾರುಕ ನಿಮಿತ್ತದ ಸೋಂಕುನೊಳಂದು ರೇಣುಕಂ
ಗೀ ಮಹಿಯಲ್ಲಿ ಲಿಂಗದುದರೋಬ್ಭವ ನೇಮವ ನಿತ್ತವಕ್ಕರಿಂ ||

ಶಿವಭಕ್ತರ್ನಲಿವಾಡೆ ಸಜ್ಜನಜನಂ ಕೊಂಡಾಡೆ ದೇವರ್ಕಳಂ
ತ್ಸವದಿಂದಂಬರಭಾಗ ಮೊಳ್ಜಯಜಯದ್ಯಾನಂಗಳಂ ಮಾಡೆ ತತ್ |
ಶಿವಲಿಂಗೋದ್ಭವನಾಗಿ ಸಂಚರಿಸುತಿರ್ದ ರೇವಣಾಚಾರ್ಯ ಪ್ಪಂ |
ಗವನೀ ಧಾರಣಿಯಲ್ಲಿ ಸಾಸಿರನಾನೂರ್ವತ್ಸರಂ ಲೀಲೆಯಂ
ಮಗುಳ್ದಾ ಸೋಮೇಶನೊಳ್ಬ್ವೈಕ್ಯಗಣಿತ ಮಹಿಮಂ ಸಿದ್ಧ ರೇವಣನೊಲ್ದಾ
ಜಗದೀಶಂ ತನ್ನ ಮುನ್ನಂ ಕಳಾಪಿದ ಕಥನಂ ತೀರಲೆಂದುರ್ವ್ವಿಯೊಳ್ಬಂ
ದೊಗೆದಂ ಪೂವಲ್ಲಿ ಸಿದ್ದೇಶ್ವರನೆನೆ ಪೆಸರಿಂ ಜಂಗಮಾಕಾರದಿಂಭ|
ಕ್ತಗಣಕ್ಕಾನಂದಮಂ ಪುಟ್ಟಿಸುತೆ ಸುಳಿದಂ ಲೀಲಾ ವಿನೋದಂಗಳಿಂದ"[೨೩]

ಹಾಗೂ

ಸ್ವಸ್ತಿ ಶ್ರೀ ಮತ್ ಕೈಲಾಸವಾಗಿ ಶ್ರೀ ಮತ್ಪರಮೇಶ್ವರರಾವತಾರಮಪ್ಪ ರೇವಣಾ
ಚ್ಯಾರ ಭಕ್ತ ಜಗಹಿತಾರ್ಥಮಾಗಿ ಮರ್ತ್ಯಕ್ಕೆ ಪೂಲಿ (ಯ) ಮರುಳ ಸಿದ್ದೇಶ್ವರ
ನಾಮವಂ ಧರಿಸಿ ಎಂಬ ಉಲ್ಲೇಖಗಳಿವೆ.

ವೀರಶೈವ ಕಾವ್ಯ - ಪುರಾಣ - ಚರಿತ್ರೆಗಳಲ್ಲಿ ಉಲ್ಲೇಖವಾಗಿರುವಂತೆ ರೇಣುಕ, ರೇವಣಸಿದ್ಧ ದಾರುಕ, ಮರುಳಸಿದ್ಧರ ಅವತಾರಗಳು ವರ್ಣಿತವಾಗಿವೆ. ಈ ಶಾಸನ ಪ್ರಕಾರ ರೇವಣಸಿದ್ಧರು ಹದಿನಾಲ್ಕುನೂರು ವರ್ಷ ಮರ್ತ್ಯದಲ್ಲಿ, ಸೋಮೇಶ್ವರಲಿಂಗದಲ್ಲಿ ಐಕ್ಯವಾಗಿ ಮತ್ತೆ ಪೂಲಿಯಲ್ಲಿ ಮರುಳಸಿದ್ಧರಾಗಿ ಜನಿಸಿದರೆಂಬುದು ಇಲ್ಲಿಯ ವಸ್ತು. ಹೀಗಾಗಿ ಆಚಾರ್ಯರ ಲಿಂಗೋದ್ಭವ ಸಂಗತಿಗೆ ಈ ಶಾಸನ ಚಾರಿತ್ರಿಕ ಲೇಪನವನ್ನು ಕಟ್ಟಿಕೊಡುತ್ತದೆ.

ಹುಳ್ಳಂಬಳ್ಳಿ ಮಠದಲ್ಲಿಯ (ಕ್ರಿ.ಶ. ೧೫೬೫) ತಾಮ್ರ ಶಾಸನದಲ್ಲಿ

"ಕಾಶಿ ಕ್ಷೇತ್ರದ ಪ್ರತಿನಿಧಿಯಾದ ಗಜಾರಣ್ಯ
ಕ್ಷೇತ್ರದಲ್ಲಿಯಿಹ ಭೂಕೈಲಾಸಕ್ಕೆ ಸದಸ್ಯವಾದ
ಮುಡ್ಕದೊರೆ ವಾಯುವ್ಯ ಭಾಗದಲ್ಲಿದುಹ
ಹುಲ್ಲಂಬಳಿಯಲ್ಲಿರುವ ರೇವಣಾರಾಧ್ಯರ ಮಠಪತಿ
ಗಳಾದ ರೇವಣಾರಾಧ್ಯರ ಅಂಸಿಭೂತರಾದ ರುದ್ರ
ಮುನಿ ದೇವಾರಾಧ್ಯರ ವಶಕ್ಕೆ ಬರೆಸಿ
ಕೊಟ್ಟ ಶಾಸನ ಕ್ರಮವೆಂತೆಂದಡೆ ....."[೨೪]

ಈ ಶಾಸನದ ಉಲ್ಲೇಖದಂತೆ ಶ್ರೀ ರೇವಣಸಿದ್ಧರ ಮಠವನ್ನು ಅವರ ಮಗನಾದ ಶ್ರೀರುದ್ರಮುನಿ ದೇವರ ವಶಕ್ಕೆ ಕೊಟ್ಟ ಶಾಸನವಾಗಿದೆ.

ಗುಮ್ಮಾಳಪುರದ (ಕ್ರಿ.ಶ. ೧೬೦೬) ಶಾಸನದಲ್ಲಿ

"ಭಾರಧ್ವಜ ಗೋತ್ರದ ಪಡಿವಿಡಿ ವರ್ಗ
ಕೊಲ್ಲಿಪಾಕೆ ರೇವಣಸಿದ್ದೇಶ್ವರ ಸಂಪ್ರದಾಯವರಾದ
ಗುಮ್ಮಾಳಪುರದ ಸಿಂಹಾಸನ ಕರ್ತೃರಾದ ನಂಜೆ ದೇವರು ....."[೨೫]

ಎಂಬ ಉಲ್ಲೇಖವಿದೆ. ಹೀಗಾಗಿ ರೇವಣಸಿದ್ಧರು ಈ ನಾಡಿನಲ್ಲಿ ತಮ್ಮ ಪ್ರಬಲ ವ್ಯಕ್ತಿತ್ವದಿಂದ ಒಂದು ಸಂಪ್ರದಾಯವನ್ನೇ ಸೃಷ್ಟಿಸುವಷ್ಟು ಮಹತ್ವದ ಹೆಸರನ್ನು ಪಡೆದುಕೊಂಡಿರುವುದು ಇದರಿಂದ ವಿಧಿತವಾಗುತ್ತದೆ.

ಮಂಡ್ಯಜಿಲ್ಲೆಯ ಮರಡಿಪುರ (ಕ್ರಿ.ಶ. ೧೨೮೦) ಶಾಸನದಲ್ಲಿ

"ತಗ್ರೀವ ಮಯಗ್ರೀವ ಘಂಟಾಕರ್ಣ್ಣ (ಅ) ಗ್ಗಳಗಣ್ಣ
ದಾರುಕ ರೇಣುಕ ಸಾರಪ್ಯಸಾಯುಜ್ಯ ಸಾ
ಮಾಜ್ನಪದವಿಯಂ ....."[೨೬]

ಎಂದು ದಾರುಕರ, ರೇಣುಕರ ಜೊತೆ ಕೇಶಿರಾಜ, ಜಗದೇವ ದಣ್ಣಾನಾಯಕ, ಚೋಳ ಭೋಗದೇವ ಮುಂತಾದ ಐತಿಹಾಸಿಕ ವ್ಯಕ್ತಿಗಳನ್ನು ಸ್ಮರಿಸಲಾಗಿದೆ. ಹೀಗಾಗಿ ರೇವಣಸಿದ್ಧೇಶ್ವರರು ಐತಿಹಾಸಿಕ ವ್ಯಕ್ತಿ ಎಂಬುದನ್ನು ಈ ಶಾಸನದ ಉಲ್ಲೇಖದಿಂದ ನಿರ್ಧರಿಸಲು ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಸು.ಕ್ರಿ.ಶ. ೯೯ ರಿಂದ ಕ್ರಿ.ಶ. ೧೬೦೬ರ ವರೆಗಿನ ಶಾಸನಗಳು, ಇವರ ಹೆಸರಿನಲ್ಲಿ ಬಿಟ್ಟ ದಾನ ಇವರನ್ನು ಕೀರ್ತಿಸಿ ಕೈಗೊಂಡ ಸಮಾಜೋಧಾರ್ಮಿಕ ಕಾರ್ಯಗಳನ್ನು ಉಲ್ಲೇಖಿಸಿರುವದು ತಿಳಿದುಬರುತ್ತದೆ.

ಶಾಸನಗಳಂತೆ ರೇವಣಸಿದ್ಧರ ಕಾಲವನ್ನು ನಿರ್ಧರಿಸಲಿಕ್ಕೆ ನಮಗೆ ಸಹಾಯಕ್ಕೆ ಬರುವ ಆಕರಗಳೆಂದರೆ ಸಮಕಾಲೀನ ಶರಣರ ವಚನಗಳು ಹಾಗೂ ಕಾವ್ಯಗಳು. ಇವುಗಳಲ್ಲಿ ಅಕ್ಕನಾಗಲಾಂಬಿಕೆ, ಅಂಬಿಗರ ಚೌಡಯ್ಯ, ಮೆರೆಮಿಂಡಯ್ಯ, ಮಡಿವಾಳ ಮಾಚಿದೇವ, ಸಕಲೇಶ ಮಾದರಸ ಮುಂತಾದ ಬಸವ ಪೂರ್ವದ, ಬಸವಯುಗದ ವಚನಕಾರರ ವಚನಗಳು ರೇವಣಸಿದ್ಧರನ್ನು ಕುರಿತು ಗುಣಗಾನ ಮಾಡುತ್ತವೆ.

"ಸದ್ಯೋಜಾತನ ಶರಣರ ಧರೆಯನುರಿಯ ನಾಲಗೆಯ ನೀಡಿ
ಕಲ್ಯಾಣವನಾಳುವ ಬಿಜ್ಜಳನ ಮುಟ್ಟಿ ನಿಂದಡೆ
ಕೋಪೋಟೋಪವಂ ಬಿಟ್ಟು ಕಳದು ಸಾಮಾನ್ಯವಾಗದೆ ?"[೨೭]

ಎಂಬ ಸಕಲೇಶ ಮಾದರಸ (೧೧೫೦) ನ ವಚನದಲ್ಲಿ ಸದ್ಯೋಜಾತನಾಗಿ ರೇವಣಸಿದ್ಧರು

ಉಲ್ಲೇಖಿತಗೊಂಡು ಕಲ್ಯಾಣದ ಬಿಜ್ಜಳನ ಅರಮನೆಗೆ ಸುಡುವ ಪಾಯಸವನ್ನು ರೇವಣಸಿದ್ಧರು ಕಂಭಕ್ಕೆ ಒರೆಸಿದಾಗ ಬೆಂಕಿ ಹತ್ತಿ ಉರಿಯುತ್ತದೆ. ಅದನ್ನು ಆರಿಸಿದ ಕತೆಯನ್ನು ಈ ವಚನ ನಿವೇದಿಸುತ್ತದೆ.

ಮೆರೆಮಿಂಡಯ್ಯ (೧೧೩೦) ತನ್ನ ವಚನದಲ್ಲಿ

"ಎನ್ನ ಘ್ರಾಣ ಶುದ್ಧವಾಯಿತಯ್ಯ ಏಕೋರಾಮಿ ತಂದೆಗಳ ಧರ್ಮದಿಂದ
ಎನ್ನ ಜಿಹ್ವೆ ಶುದ್ಧವಾಯಿತಯ್ಯ ಪಂಡಿತಾರಾಧ್ಯರ ಧರ್ಮದಿಂದ
ಎನ್ನ ನೇತ್ರ ಶುದ್ಧವಾಯಿತಯ್ಯ ರೇವಣಸಿದ್ದೇಶ್ವರ ದೇವರ
ಧರ್ಮದಿಂದ - - - - - - - - - - - - - - - - - - - - - - - -
- - - - - - - - - - - - - - - - - - - - - - - - - - - - - - -
- - - - - - - - - - - - - - - - - - - - - - - - - - - - - - -
ಐಘಟ ದೂರ ರಾಮೇಶ್ವರಾ ನಿಮ್ಮ ಶರಣರ
ಧರ್ಮದಿಂದ ನಾನು ಶುದ್ಧನಾದೆನಯ್ಯ"[೨೮]

ಮೆರೆಮಿಂಡಯ್ಯ ತನ್ನ ಸರ್ವ ಇಂದ್ರಿಯಗಳು ಶುದ್ಧವಾದ ಬಗೆಯನ್ನು ತಿಳಿಸುವಲ್ಲಿ ಏಕೋರಾಮಿ, ಪಂಡಿತಾರಾಧ್ಯ, ಮರಳು ಸಿದ್ದೇಶ್ವರಂತಹ ಆಚಾರ್ಯರ ಜೊತೆಗೆ ರೇವಣಸಿದ್ಧರನ್ನು ಸ್ಮರಿಸಿದುವನ್ನೂ ಗಮನಿಸಬೇಕು.

ಬಸವಾದಿ ಪ್ರಮಥರ ಸಮಕಾಲೀನ ಶರಣೆಯಾದ ಅಕ್ಕನಾಗಮ್ಮ ತನ್ನ ವಚನವೊಂದರಲ್ಲಿ

"ಅಂಗದಿಂದುದಯವಾದಾತ ಮಡಿವಾಳಯ್ಯ
ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ
ಭಸ್ಮದಿಂದುದಯವಾದಾತ ಸಿದ್ಧರಾಮಯ್ಯ
ಪಾದೋದಕದಿಂದುದಯವಾದಳು ಅಕ್ಕಮಹಾದೇವಿ
ಮಂತ್ರದಿಂದುದಯವಾದಾತ ನಿಮ್ಮ ಸೋದರ ಮಾವ ಬಸವಣ್ಣ
ಪ್ರಸಾದದಿಂದದಯವಾದಾತ ನೀನಲ್ಲವೆ ಚೆನ್ನಬಸವಯ್ಯ"[೨೯]

ಎಂದು ಹೇಳುವಲ್ಲಿ ಆಯಾ ಶರಣರ ಹುಟ್ಟಿನ ಹಿಂದೆ ತಾತ್ವಿಕ ನೆಲೆಯನ್ನು ಗುರುತಿಸುತ್ತ ರೇವಣಸಿದ್ದೇಶ್ವರನ ಜನನ ಲಿಂಗದಲ್ಲಿ ಎಂಬ ವಿಚಾರವನ್ನು ಅರಹುತ್ತಾಳೆ. ಇದೇ ಕಾಲಮಾನದವನಾದ ಶಿವಯೋಗಿ ಸಿದ್ಧರಾಮ

"ಬಲ್ಲದ ಬಾಣನ ಬಾಗಿಲ ಕಾಯುವದು ಅವರು
ಭೂತಗಳೇನಯ್ಯ ಅಪ್ಪ ರೇವಣಸಿದ್ಧರು ನೀರು ಹೊತ್ತರೆಂಬುದು
ನಮ್ಮ ನೀರು ಹೊರವವರು ಕೂಲಿಕಾರರೇನಯ್ಯ"

ಎಂದು ಪ್ರಶ್ನಿಸುವಲ್ಲಿ ರೇವಣಸಿದ್ಧರು ಸೂಳೆ ಮಾಯಿದೇವಿಯ ಮನೆಗೆ ನೀರು ಹೊತ್ತು ತಂದ ಪ್ರಸಂಗವನ್ನು ನೆನಪಿಸುತ್ತಾನೆ. ಹಾಗೆಯೇ ಅದೇ ಕಾಲದ ಬಾಲಬೊಮ್ಮಣನು "ಗುರುವಾಗಿ ಬಂದರಯ್ಯ ರೇವಣಸಿದ್ದೇಶ್ವರ ದೇವರು" [೨೦] ಎಂದು ಪ್ರಾರಂಭವಾಗುವ ವಚನವೊಂದರಲ್ಲಿ ಗುರು - ಲಿಂಗ - ಜಂಗಮ, ಪಾದೋದಕ, ಪ್ರಸಾದಗಳಾದಿಯಾದ ಅಷ್ಟಾವರಣಗಳನ್ನು ವಿವರಿಸುವಲ್ಲಿ ರೇವಣಸಿದ್ಧರಿಗೆ ಗುರುಸ್ಥಾನ ನೀಡಿರುವದನ್ನು ಕಾಣಬಹುದಾಗಿದೆ. ಮಡಿವಾಳ ಮಾಚಿದೇವರು ಬಸವಣ್ಣನನ್ನು ಗುಣಗಾನ ಮಾಡುವ ವಚನವೊಂದರಲ್ಲಿ ಪರಶಿವ, ನವನಾಥ ಸಿದ್ಧರು, ಲಂಭೋದರ, ಕುಂಭೋದರ, ದಾರುಕ ಮುಂತಾದ ತಾಂಡವರೆಲ್ಲರಂತೆ ರೇಣುಕರು ಸಹ ಸಕಲ ಜೀವಚೈತನ್ಯ ಮಾತ್ರ ಬಸವ ಎಂದೆಂಬರು ಎಂದು ತಿಳಿಸುತ್ತಾನೆ. ಮುಂದುವರಿದು ಮಾಸೂರಿನಲ್ಲಿ ಸಿದ್ಧರಳಿದರು ಎಂಬ ಹೇಳಿಕೆಯಿಂದ ರೇವಣಸಿದ್ಧರು ಮಾಸೂರಿನಲ್ಲಿ ಖರ್ಪರ ಸಿದ್ಧರನ್ನು ನಾಶ ಮಾಡಿದ ಕಥೆಯನ್ನು ನೆನಪಿಸುತ್ತಾರೆ. ಮರುಳುಸಿದ್ಧರಂತು ಅರವತ್ತೆಂಟು ಸಾವಿರ ವಚನಗಳನ್ನು ಬರೆದಿರುವದು ಸಿದ್ಧರಾಮನ ವಚನದಿಂದ ತಿಳಿದು ಬರುತ್ತದೆಯಾದರು ಉಪಲಬ್ಧವಿರುವ ಒಂದೇ ಒಂದು ವಚನ "ರೇವಣ್ಣಪ್ರಭುವೆ" ಎಂಬ ಅಂಕಿತದಿಂದ ರಚನೆಗೊಂಡಿರುವದನ್ನು ಗಮನಿಸಿದರೆ ರೇವಣಸಿದ್ಧರು ಮರುಳಸಿದ್ಧರಿಗೆ ಆರಾಧ್ಯ ಗುರುವಾಗಿ ಮಾರ್ಗದರ್ಶನ ಮಾಡಿದಂತೆ ತೋರುತ್ತದೆ.

ಕ್ರಿ.ಶ. ೧೧೬೦ರಲ್ಲಿ ಹಾವಿನಾಳು ಕಲ್ಲಯ್ಯನು ತನ್ನದೊಂದು ವಚನದಲ್ಲಿ ತನಗೆ ಇಷ್ಟರಾದ ವಚನಕಾರರನ್ನು ಸ್ಮರಿಸುವಲ್ಲಿ ರೇವಣಸಿದ್ಧರನ್ನು ಕೂಡ ಸೇರಿಸಿ ಸ್ಮರಿಸಿದ್ದಾರೆ.

"ಎನ್ನ ಕಕ್ಷೆಯಲ್ಲಿ ಸ್ವಾಯತವಾದನಯ್ಯ ಶಂಕರದಾಸಿಮಯ್ಯನು
ಎನ್ನ ಕರಸ್ಥಲದಲ್ಲಿ ಸ್ವಾಯತವಾದನಯ್ಯ ಉರಿಲಿಂಗ ಪೆದ್ದಣ್ಣನು
ಎನ್ನ ಉರಸಜ್ಜೆಯಲ್ಲಿ ಸ್ವಾಯತವಾದನಯ್ಯ ಘಟ್ಟಿವಾಳಯ್ಯನು
ಎನ್ನ ಅಮಳೋಕ್ಯದಲ್ಲಿ ಸ್ವಾಯತವಾದನಯ್ಯ ಅಜಗಣ್ಣನು
ಎನ್ನ ಮುಖ ಸಜ್ಜೆಯಲ್ಲಿ ಸ್ವಾಯತವಾದನಯ್ಯ ನಿಜಗುರುವೇವರು.
ಎನ್ನ ಶಿಖೆಯಲ್ಲಿ ಸ್ವಾಯತವಾದನಯ್ಯ ಅನಿಮಿಷದೇವರು
ಎನ್ನ ಘ್ರಾಣದಲ್ಲಿ ಸ್ವಾಯತವಾದನಯ್ಯ ಏಕೋರಾಮಿ ತಂದೆಗಳು
ಎನ್ನು ಜಿಹ್ವೆಯಲ್ಲಿ ಸ್ವಾಯತವಾದನಯ್ಯ ರೇವಣಸಿದ್ಧೇಶ್ವರ ದೇವರು
ಎನ್ನ ಹೃದಯದಲ್ಲಿ ಸ್ವಾಯತವಾದನಯ್ಯ ಪ್ರಭುದೇವರು
ಎನ್ನ ಬ್ರಹ್ಮರಂಧ್ರದಲ್ಲಿ ಸ್ವಾಯತವಾದನಯ್ಯ ಚೆನ್ನಬಸವಣ್ಣನು
ಎನ್ನ ಭ್ರೂಮಧ್ಯದಲ್ಲಿ ಸ್ವಾಯತವಾದನ್ನಯ ಸಂಗನಬಸವಣ್ಣನು
ಎನ್ನ ಉತ್ತಮಾಂಗದಲ್ಲಿ ಸ್ವಾಯತವಾದನಯ್ಯ ಮಡಿವಾಳಯ್ಯನು
ಎನ್ನ ಲಲಾಟದಲ್ಲಿ ಸ್ವಾಯತವಾದನಯ್ಯ ಸೊಡ್ಡಳ ಬಾಚರಸನು

ಎನ್ನ ಪಶ್ಚಿಮದಲ್ಲಿ ಸ್ವಾಯತವಾದನಯ್ಯ ಹಡಪದ ಅಪ್ಪಣ್ಣಗಳು
ಎನ್ನ ಸರ್ವಾಂಗದಲ್ಲಿ ಸ್ವಾಯತವಾದರಯ್ಯ ಸರ್ವಗಣಂಗಳು
ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣರ ಪಾದಕ್ಕೆ ನಮೋ ನಮೋ ಎನುತ್ತಿರ್ದೆನು"[೨೦]

ಕ್ರಿ.ಶ. ೧೧೬೫ರಲ್ಲಿ ಬದುಕಿದ್ದ ಆದಯ್ಯನು ಕೂಡ ಹಲವಾರು ವಚನಕಾರರ ಮಹಿಮೆ ನಿಷ್ಠೆಗಳನ್ನು ತಿಳಿಸುವಲ್ಲಿ "ರೇವಣಸಿದ್ಧಯ್ಯ ದೇವರ ನಿಷ್ಠೆ" ಎಂಬ ಮಾತನ್ನು ತಿಳಿಸುತ್ತಾನೆ. ಈತನ ಜೊತೆಗೆ ಮರುಳಸಿದ್ಧ, ಏಕೋರಾಮಯ್ಯ, ಪಂಡಿತಾರಾಧ್ಯರನ್ನು ನೆನಪಿಸುತ್ತಾನೆ. ಈ ಎಲ್ಲ ವಚನಕಾರರ ಜೊತೆಗೆ ಸಾಹಿತ್ಯ ಚರಿತ್ರೆಕಾರರು ಪಂಚಾಚಾರ್ಯರೆಂದು ಈಗ ಕರೆಯಿಸಿಕೊಳ್ಳುವ ರೇವಣಸಿದ್ಧರು, ಪಂಡಿತಾರಾಧ್ಯ, ಮರುಳಸಿದ್ಧರನ್ನು ಕ್ರಿ.ಶ. ೧೧೬೦ರಲ್ಲಿ ಬದುಕಿದ್ದ ವಚನಕಾರರೆಂದು ಗುರುತಿಸುತ್ತಾರೆ. ಹೀಗಾಗಿ ಬಸವ ಪೂರ್ವಯುಗದ ವಚನಕಾರರಲ್ಲಿ ಉಲ್ಲೇಖಿತಗೊಂಡ ರೇವಣಸಿದ್ಧರೂ ೧೧೬೦ರ ಕಾಲದಲ್ಲಿ ಜೀವಿಸಿರುವ ಸಾಧ್ಯತೆ ಇದೆ.

ವಚನಗಳಲ್ಲದೆ ಕೆಲವು ಜನ ವಚನಕಾರರಿಗೆ ದೀಕ್ಷೆಯನ್ನು ರೇವಣಸಿದ್ಧರು ನೀಡಿದರೆಂಬ ಚಾರಿತ್ರಿಕ ಅಂಶದಿಂದ ಈತನ ಕಾಲಮಾನವನ್ನು ನಿರ್ಣಯಿಸುವ ಪ್ರಯತ್ನವನ್ನು ಕೆಲ ಕವಿಗಳ ಕಾವ್ಯಗಳ ಹಿನ್ನಲೆಯಲ್ಲಿ ಮಾಡಲಾಗಿದೆ.

ರುದ್ರಮುನಿದೇವರ ಜನನವನ್ನು ರೇವಣಸಿದ್ಧರು ಮಂಗಳವಾಡದ ಬಳಿ ಒಂದು ತಟಾಕವನ್ನು ಕಟ್ಟಿಸುವಾಗ ತಮ್ಮ ಹೆಂಡತಿಯೊರೊಡನೆ ತಾವು ಸೇರಿ ಕೆರೆಯ ಕೆಲಸದಲ್ಲಿ ತೊಡಗುವರು. ಗರ್ಭಿಣಿಯಾದ ಚೋಳರಾಜೇಂದ್ರನ ಪುತ್ರಿಯಾದ ಸೌಂದರಿಯು ಕಷ್ಟ ಸಹಿಸಲಾರದೆ ರೇವಣಸಿದ್ಧರಿಗೆ ತಾನು ಕೆಲಸ ಮಾಡಲು ಆಗಲಾರದು ಎಂದು ತಿಳಿಸುವಳು. ಆಗ ರೇವಣಸಿದ್ಧರು ಹಾಗಾದರೆ ಪಿಂಡವನ್ನು ಕೊಟ್ಟು ಹೋಗೆಂದು ಹೇಳುವದನ್ನು ಹರಿಹರನು ರಗಳೆಯಲ್ಲಿ ಹೀಗೆ ಹೇಳುತ್ತಾನೆ.

"..... ನೀನಾರದಡೆ ಮ್ಮೊಡವೆಯನೆಮಗೆ ಕೊಟ್ಟು
ಪೋಗೆಂದು ನುಡಿಯೆ, ಕುಡುಲುಂ
ಬಿಡಲುಮರಿಯದಿರ್ಪ ಮುಗ್ದೆಯಂ ಕಂಡು
ಕರುಣಿಸಿ ಸಾಮರ್ಥ್ಯಶರಭಂ ಸಕಲ ಜೀವಂಗಳುತ್ಪತ್ಯಕರ್ತುವಪ್ಪ ರೇವಣಸಿದ್ಧಂ
ತನ್ನಕರತಳದಿಂದಾ ಲಲನೆಯ ಪಣ್ಣೊವರಮನೊಯ್ಯನೆ ತಡವೆ
ಪುಣ್ಯದುರುಳಿ ಬೀಳ್ವಂತೆ ಬಾಲಕಿಯ ಗರ್ಭಂ ಭೋಕನೆ
ಬೀಳೆ ಮುಂಕಣಿಸಿ ತೆಗೆದು ಶಂಕರನಂ ನೆನೆದು
ಸಾರ ಹೃದಯಂ ಮಾರಾರಿಯಣುಗನೇರಿಯ ಮೇಲಣ
ನಿವಾಸಸ್ಥಲಮೊಳಾದರದಿಂದಿರಿಸಿ ಭಸಿತಮಂ ಕಾಪಿಟ್ಟು

ಶಿವಧ್ಯಾನದಿಂ ಮುಸುಂಕಿ ಜ್ಞಾನನಿಧಾನಮಂ ಚಿತ್ತಭೂಮಿ
ಯೊಳ್ಪಯಿತಿಟಿಡುವಂತೆ ಬಯಿತಿಡೆ, ತಾಯ ಗಭದಿಂ
ನೂರ್ಮಡಿ ರಕ್ಷೆಯಾಗಿರೆ, ರೇವಣಸಿದ್ಧಂ ಚೋಳಪುತ್ರಿಯಂ
ದಕ್ಷಿಣ ದೇಶಕ್ಕೆ ಕಳುಪಿಯಾ .....''[೨೧]

ನಂತರ ನವಮಾಸಗಳು ಕಳೆದು, ರೇವಣಸಿದ್ಧರು ಹೊರ ತೆಗೆಯಲು ಪ್ರಕಾಶಮಾನವಾಗಿರುವ ಬಾಲಕನು ಉದ್ಭವಿಸುವದು. ಆ ಮಗುವಿಗೆ ರುದ್ರಮುನಿಯೆಂದು ನಾಮಕರಣ ಮಾಡಿ, ಶೈವೋಪದೇಶವನ್ನು ಮಾಡಿರುವುದಾಗಿ ತಿಳಿದು ಬರುವುದು.

ಮತ್ತೋರ್ವ ಶರಣರಾದ ಹಾವಿನಾಳ ಕಲ್ಲಯ್ಯನಿಗೆ ರೇವಣಸಿದ್ಧರು ತನ್ನ ಮಗನಾದ ರುದ್ರಮುನಿಯಿಂದ ದೀಕ್ಷೆ ಕೊಡಿಸುವರು. ಮುಂದೆ ಸಿದ್ಧರಾಮನ ಜನನವನ್ನು ಸೊಲ್ಲಾಪುರುದಲ್ಲಿಯ ಚಾಮಲದೇವಿಗೆ

''ಸಲ್ಲಲ್ಲಿತ ಸುಗ್ಗವ್ವೆ ಎಂಬ ಕಾರಣಿಕೆಯೊಳ್
ಕಾರಣುಕ ಸಿದ್ದನುದಯಿಸುವ ನೋರ್ವ ಕೇಳು''[೨೨]

ಎಂದು ಅರಹುವನು. ಕಾರಣಿಕ ಶಿಶುವಾದ ಸಿದ್ಧರಾಮನ ಜನನವನ್ನು ಹರಿಹರನ ರಗಳೆಯಲ್ಲಿ ಹೇಳಲ್ಪಟ್ಟಿರುವದು.

''ಸಿದ್ಧರಾಮನು ಜನಿಸಿರುವುದು ಸು.ಕ್ರಿ.ಶ. ೧೧೬೦ರಲ್ಲಿ ಆಗಿರಬಹುದು ಎಂದು ಹಾವಿನಾಳು ಕಲ್ಲಯ್ಯನ ಶಾಸನವು ಕ್ರಿ.ಶ. ೧೧೭೬ರಲ್ಲಿ ಬರೆಯಲ್ಪಟ್ಟಿದೆ. ಈ ಕಾಲದ ಒಳಗಾಗಿಯೇ ರುದ್ರಮುನಿಯ ಅನುಗ್ರಹವು ಹಾವಿನಾಳು ಕಲ್ಲಯ್ಯನಿಗೆ ಆಗಿರಬಹುದು. ೧೧೭೬ರ ಪೂರ್ವದಲ್ಲಿ ಶ್ರೀ ರೇವಣಸಿದ್ಧರು ಮಾಡಿದ ಕೆಲಸಗಳನ್ನು ರಗಳೆ, ಪುರಾಣಗಳು ಹೇಳುತ್ತವೆ ಎಂದು ನಿರ್ಣಯಿಸಲಿಕ್ಕೆ ಕಲ್ಲಿದೇವನ ವಿಷಯದ ಶಾಸನವೇ ಆಧಾರವಾಗಿದೆ.''[೨೪]

ಹೀಗೆ ರುದ್ರಮುನಿ, ಹಾವಿನಾಳ ಕಲ್ಲಯ್ಯ ಹಾಗೂ ಸಿದ್ಧರಾಮರು ಐತಿಹಾಸಿಕ ಪುರುಷರಾಗಿರುವುದ ರಿಂದ ರೇವಣಸಿದ್ಧರ ಕಾಲ ನಿರ್ಣಯಕ್ಕೆ ಇಂತಹ ಐತಿಹಾಸಿಕ ಸಂಗತಿಗಳು ನೆರವಾಗುತ್ತವೆ.

ಶಾಸನ, ವಚನ, ಕಾವ್ಯಗಳಂತಹ ಪ್ರಾಚೀನ ಕಾವ್ಯಗಳ ಆಧಾರಗಳಲ್ಲದೆ ಆಧುನಿಕ ವಿದ್ವಾಂಸ ರಲ್ಲಿಯೂ ಈತನ ಕಾಲದ ಬಗ್ಗೆ ಚರ್ಚೆಗಳು ನಡೆದಿವೆ.

ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ''ಶ್ರೀ ರೇವಣಸಿದ್ದೇಶ್ವರು ಅವರ ಸಮಕಾಲಿನರೂ'' ಎಂಬ ಶಿರೋಲೇಖನದಲ್ಲಿ ನಾಲ್ಕು ಲೇಖನಗಳನ್ನು ಪ್ರಕಟಿಸುತ್ತಾರೆ. ಶ್ರೀ ರೇವಣರು ನಡೆಸಿದ ಕಾವ್ಯವು ಈ ಚರಿತ್ರೆಯಲ್ಲಿ ಹೇಳಲ್ಪಟ್ಟ ಸಂಗತಿಗಳಿಗೆ ಅನೇಕ ವಿಷಯಗಳಲ್ಲಿ ಭಿನ್ನವಾಗಿದ್ದರೂ ರೇವಣಸಿದ್ಧರ ಕಾಲವು ಕ್ರಿ.ಶ. ಹನ್ನೆರಡನೆಯ ಶತಮಾನವೆಂದು''[೨೫] ತಿಳಿಸುತ್ತಾರೆ. ದೇವುಡು ಅವರ ಕರ್ನಾಟಕ ಸಂಸ್ಕೃತಿ

ಹಾಗೂ ಹಾಲುಮತ ಪುರಾಣದಲ್ಲಿಯ ಮದುವೆಯಕಾಲದ ಆಶೀರ್ವಚನಗಳನ್ನು ಸಾದಾರಪೂರ್ವಕವಾಗಿ ತಿಳಿಸುತ್ತ ಶ್ರೀ ಜೋಯಿಸರು ಈ ನಿರ್ಣಯಕ್ಕೆ ಬರುತ್ತಾರೆ. ಮುಂದುವರಿದು ರೇವಣಸಿದ್ಧರು ೧೧೦೦ರಲ್ಲಿ ಜನಿಸಿದರೆ ೧೨೦೦ಕ್ಕಿಂತ ಮುಂದೆ ಲಿಂಗೈಕ್ಯರಾದರೆಂದು ತಿಳಿಸುತ್ತಾರೆ. ಹೀಗಾಗಿ ಇವರ ಕಾಲ ನಿರ್ಣಯದಲ್ಲಿ ಖಚಿತತೆ ಕಂಡುಬರುವುದಿಲ್ಲ.

ಶ್ರೀ ಗೋವಿಂದ ಪೈಗಳು "ರೇವಣಸಿದ್ಧರ ಕಾಲ ನಿರ್ಣಯ" ಲೇಖನದಲ್ಲಿ ಹೀಗೆ ಹೇಳುತ್ತಾರೆ. ಕ್ರಿ.ಶ.ಸು. ೧೧೪೫ ರಿಂದ ೧೧೯೫ರ ಅವಧಿಯಲ್ಲಿ ಬಾಳಿದ್ದಾನೆ ಎಂದು ತಿಳಿಸುವ ಶ್ರೀಯುತರು 'ಶಕ ೧೦೦೯ ಪ್ಲವಂಗ ಸಂವತ್ಸರದ ಬಾದ್ರಪದ ಬಹುಳ ಅಮವಾಸ್ಯೆ ಶುಕ್ರವಾರ ಸೂರ್ಯಗ್ರಹಣ ನಿಮಿತ್ತವಾಗಿ ಶಿಲಾಹಾರವಂಶದ ಮಹಾಮಂಡೇಶ್ವರ ಸಿಂಗಿದೇವರಸನು ಬಿಟ್ಟ ದತ್ತಿಯ ವಿಷಯವನ್ನು ಪ್ರಸ್ತಾಪಿಸುವ ಸಿರಿಯಾಳದ ಸಿದ್ಧಲಿಂಗೇಶ್ವರ ದೇವಸ್ಥಾನದಲ್ಲಿ ದೊರೆತ ಶಾಸನದಿಂದ 'ಸಿದ್ಧರೇವಣಯ್ಯನ ಕಾಲಕರ್ಚಿ ದತ್ತಿ ಬಿಟ್ಟಿರುವಂತೆ ಹೇಳಿರುವುದರಿಂದ ಕ್ರಿ.ಶ. ೧೧೮೭ರಲ್ಲಿ ರೇವಣಸಿದ್ಧರು ಬದುಕಿದ್ದನೆಂದು ಧಾರಳವಾಗಿ ಸಿದ್ಧವಾಗುತ್ತದೆ."[೩೬] ಎಂಬ ಅಭಿಪ್ರಾಯವನ್ನು ಉಲ್ಲೇಖಿಸುತ್ತಾರೆ.

ರೇವಣಸಿದ್ಧರ ಕಾಲ ಕುರಿತಂತೆ ಶ್ರೀ ಕಪಟರಾಳ ಕೃಷ್ಣರಾಯರು "ಕರ್ನಾಟಕ ಸಂಸ್ಕೃತಿ ಸಂಶೋಧನೆ" ಎಂಬ ಕೃತಿಯಲ್ಲಿ ೧೧ನೆಯ ಶತಮಾನದ ಮಧ್ಯಕಾಲವೆಂದು ನಿರ್ಣಯಿಸಲು ನಾಲ್ಕು ಅಂಶಗಳನ್ನು ಸಮರ್ಥನೆಗೆ ಬಳಸಿಕೊಳ್ಳುತ್ತಾರೆ.[೩೭]

೧. ಹರಿಹರ ಮತ್ತು ಶಿವಯೋಗಿಗಳಿಂತ ರೇವಣಸಿದ್ಧರು ಪೂರ್ವದಲ್ಲಿಯೇ ಜನ್ಮ ತಾಳಿರಬೇಕಾಗಿರುವುದು. ಇವರಿಬ್ಬರಿಗಿಂತ ಎಷ್ಟು ಕಾಲ ಹಿಂದೆ ಆಗಿ ಹೋದನೆಂಬು ದನ್ನು ತಿಳಿದುಕೊಳ್ಳಲು ಸಾಧನಗಳಿಲ್ಲ. ಆದರೆ ಇತ್ತಿಚೀಗೆ ಕಲುಬುರ್ಗಿ ಜಿಲ್ಲೆಯ ಎಪ್ಪತ್ತು ಚಿಂಚೊಳ್ಳಿ ಮಠದ ತಾಡೋಲೆಯ ಗ್ರಂಥವೊಂದು ನನ್ನ ಸ್ನೇಹಿತರಾದ ಶ್ರೀಮಾನ್ ಸೋಸಲರಾಯರು ವಕೀಲರಿಂದ ನನಗೆ ದೊರಕಿತು. ಈ ಗ್ರಂಥದ ಹೆಸರು 'ಪ್ರಸಾದ ಚಿಂತಾಮಣಿ' ಗ್ರಂಥವು ಸಂಸ್ಕೃತ ಭಾಷೆಯಲ್ಲಿದೆ. ಗ್ರಂಥದ ಓಲೆಗಳು ಕದಲು ಬದಲಾಗಿ ಕ್ರಮವಾಗಿ ಹೊಂದುವದಿಲ್ಲ. ಕೆಲವೆಡೆಗಳಲ್ಲಿ ಓಲೆಗಳು ಹರಿದುಹೋಗಿವೆ. ಗ್ರಂಥದ ಕೊನೆಯ ಓಲೆಯು ಮತ್ತು ಅದರೊಡನೆ 'ಗುರು ಪರಾತ್ಪರ ಸಂಪ್ರದಾಯ' ಎಂದು ಗುರು ಪರಂಪರೆಯನ್ನು ಹೇಳುವುದರಿಂದ ಇದೊಂದು ಒಳ್ಳೆಯ ಮಹತ್ವದ ಐತಿಹಾಸಿಕ ಸಾಧನವಾಗಿದೆ.

೨. ರೇವಣಸಿದ್ಧನಿಂದ ೩೧ ತಲೆಯವರೆಗೆ ಗುರು ಪೀಳಿಗೆಯನ್ನು ಕೊಟ್ಟಿರುವ ಸಂಗತಿಯು ಬಹಳ ಮಹತ್ವದ್ದಾಗಿರುವುದು. ಕೊನೆಯ ಹೆಸರಿನಿಂದ ಮುಂದೆ ಇಂದಿನವರೆಗೆ ಎಷ್ಟು ತಲೆಗಳಾಗಿವೆ ಎಂಬುದು ಇದರಿಂದ ಗೊತ್ತಾಗುವುದಿಲ್ಲ.

೩. ರೇವಣಸಿದ್ಧರ ಕಾಲವು ಕ್ರಿ.ಶ. ೧೦೪೨.೬ ಬರುವದು ರೇವಣಸಿದ್ಧನು ಕಾರ್ಯ ಮಾಡಿದ ಕಾಲವು ಕ್ರಿ.ಶ. ೧೦೫೦ ರಿಂದ ೧೦೭೦ರವರೆಗೆ ಗ್ರಹಿಸಿದರೆ ತಪ್ಪಾಗಲಾರದು.

೪. ಅಂತೂ ರೇವಣಸಿದ್ಧನು ಪ್ರಸಿದ್ಧ ಕಲಚೂರಿ ಚಕ್ರವರ್ತಿಯಾದ ಬಿಜ್ಜಳನಿಗಿಂತ ನೂರು ವರ್ಷಗಳ ಹಿಂದಿನವರೆಂದೂ ಸು. ೧೧ನೆಯ ಶತಮಾನದ ಮಧ್ಯದ ಕಾಲದವನೆಂದೂ ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಟಿ.ಎಸ್.ಎಂ.ಸದಾಶಿವಯ್ಯನವರು ರೇವಣಸಿದ್ಧರ ಕಾಲದ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ.

ರೇವಣಸಿದ್ಧನಿಗೂ ಮರುಳಸಿದ್ಧನಿಗೂ ನಿಕಟ ಸಂಬಂಧವಿರುವದರಿಂದ ಮರುಳಸಿದ್ಧನ ಕಾಲ ನಿರ್ಣಯವನ್ನು ರೇವಣಸಿದ್ಧರ ಕಾಲನಿರ್ಣಯ ಅವಲಂಬಿಸಿರುತ್ತವೆ ಎಂದು ಹೇಳಿ, ಮುಂದುವರಿದು "ಮರುಳಸಿದ್ಧನು ಹನ್ನೆರಡನೆಯ ಶತಮಾನದಲ್ಲಿ ಅಂದರೆ ೧೧೯೨ರ ಅವ್ವೇರಹಳ್ಳಿಯ ಶಾಸನದಂತೆ ರೇವಣಸಿದ್ಧರು ಹನ್ನೆರಡನೆಯ ಶತಮಾನದಲ್ಲಿದ್ದನೆಂದು ಶಾಸನಗಳ, ವಚನಗಳ, ಹರಿಹರನ ಕಾವ್ಯದ ಆಧಾರದ ಮೇಲೆ ಸ್ಥೂಲವಾಗಿ ನಿರ್ಧರಿಸಬಹುದು" [೩೮] ಎಂದು ಅಭಿಪ್ರಾಯಪಡುತ್ತಾರಾದರೂ ನಿಖರವಾದ ಕಾಲನಿರ್ಣಯವನ್ನು ಇವರು ಕೊಡುವುದಿಲ್ಲ.

ಕರ್ಲಮಂಗಲಂ ಶ್ರೀಕಂಠಯ್ಯನವರ ಪ್ರಕಾರ "ನಾವು ನಮಗೆ ದೊರೆಯಬಹುದಾದ ಚಾರಿತ್ರಿಕ, ಐತಿಹಾಸಿಕ ಪೌರಾಣಿಕ ಆಧಾರಗಳ ಮೇಲೆ ಇದುವರೆಗೆ ದೊರೆತ ಸಾಧನಗಳನ್ನೆಲ್ಲಾ ಉಪಯೋಗಿಸಿಕೊಂಡು ಈತನ ಕಾಲವು ಸುಮಾರು ೧೧೨೬ ರಿಂದ ೧೨೧೦ರವರೆಗೆ ಜೀವಿಸಿರಬೇಕೆಂದು ನಂಬುವದಕ್ಕೆ ಈಗ ಯಾವ ಅಡ್ಡಿಯೂ ಇಲ್ಲ ..... ಮರುಳಸಿದ್ಧನು ದಾರುಕನ ಅವತಾರವೆಂದು ಹೇಳುತ್ತಾರೆ. ಈತನು ರೇವಣಸಿದ್ಧನ ಕಾಲದಲ್ಲಿದ್ದವನೆಂದು ಸಿದ್ಧನಾಥ ಶಿವಾಚಾರ್ಯನು 'ರೇಣುಕ ವಿಜಯ' ಬರೆದಿರುವದರಿಂದಲೂ ಇತರ ಕನ್ನಡ ಕವಿಗಳು ಈ ವಿಷಯವಾಗಿ ದನಿಗೂಡಿಸಿರುವದರಿಂದಲೂ ಮರುಳಸಿದ್ಧನು ರೇವಣಕಾಲದಲ್ಲಿದ್ದವನೆಂದು ಊಹಿಸಬಹುದು. ಮರುಳಸಿದ್ಧನು ಕಗ್ಗಲ್ಲಗೌಡನಿಗೆ ಮಗುವಾಗಿ ಸಿಕ್ಕಿದನೆಂದು ಪುರಾಣಗಳಲ್ಲಿ ಹೇಳಿರುವದರಿಂದ ಈತನು ಕ್ರಿ.ಶ. ೧೧೮೭ ರಲ್ಲಿರಬಹುದು[೩೯] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಪಂಚಾಚಾರ್ಯರ ಚರಿತ್ರೆಯ ಮೊದಲಭಾಗದಲ್ಲಿ ಚೆನ್ನಮಲ್ಲಿಕಾರ್ಜುನರು ರೇವಣಸಿದ್ಧರ ಕಾಲವನ್ನು ಹೀಗೆ ಸಮರ್ಥಿಸುತ್ತಾರೆ. ಎರಡನೆಯ ರಾಜೇಂದ್ರ ಚೋಳನು ಕ್ರಿ.ಶ.ಸು.೧೧೪೬ ರಿಂದ ೧೧೬೪ರವರೆಗೆ ರಾಜ್ಯವನ್ನು ಆಳುತ್ತಿದ್ದನು. ತನ್ನ ಮಗಳಾದ ಸೌಂದರಿಯನ್ನು ಸು. ೧೧೪೬ರ ಕಾಲದಲ್ಲಿ ರೇವಣಸಿದ್ಧರಿಗೆ ಕೊಟ್ಟು ವಿವಾಹ ಮಾಡಿರಬೇಕು. ಹಾಗೂ ರುದ್ರಮುನಿಯು ಅದೇ ವರ್ಷದಲ್ಲಿ ಹುಟ್ಟಿರುವದಾಗಿ, ಆದ್ದರಿಂದ ೧೧೧೪ ರಲ್ಲಿ ಶ್ರೀ ರೇವಣಸಿದ್ಧರು ಜನಿಸಿರಬೇಕೆಂದು ತಿಳಿಸುತ್ತಾರೆ."[೪೦]

ಬಿ.ಶಿವಮೂರ್ತಿಶಾಸ್ತ್ರೀ ಅವರು ರೇವಣಸಿದ್ಧರ ಕಾಲವನ್ನು ಹೀಗೆ ಊಹಿಸುವರು. "ಶಿರಿವಾಳ ಶಾಸನಕಾಲವು ೧೧೮೭. ಈ ಕಾಲಕ್ಕೆ ಮುಂಚೆಯೇ ಕ್ರಿ.ಶ. ೧೧೪೦ರಲ್ಲಿ ಮಂಗಳವಾಡದಲ್ಲಿ ಆಳುತ್ತಿದ್ದ ವೀರಬಿಜ್ಜಳನಲ್ಲಿಗೆ ಹೋಗಿದ್ದನು. ಸುಲಕ್ಷಣೆಯನ್ನು ಆಗ ರೇವಣಸಿದ್ಧರಿಗೆ ಮದುವೆಯಾಗುವ ವಯಸ್ಸು ೩೦ ವರ್ಷವಾದರೂ ಆಗಿರಬೇಕು. ಆದ್ದರಿಂದ ಕ್ರಿ.ಶ. ೧೧೧೦ ರಿಂದ ೧೧೮೭ರವರೆಗೆ ಅದಕ್ಕೂ ಹೆಚ್ಚು ಕಾಲ ರೇಣುಕರು ಬದುಕಿದ್ದಂತೆ ತರ್ಕಿಸಬಹುದು"[೪೧] ಎಂದು ಹೇಳುತ್ತಾರೆ.

ಡಾ.ಎಂ.ಚಿದಾನಂದಮೂರ್ತಿ ಅವರು ರೇವಣಸಿದ್ಧರ ಕಾಲವನ್ನು 'ವಚನಶೋಧ' ಕೃತಿಯಲ್ಲಿ ಹೀಗೆ ಹೇಳುತ್ತಾರೆ.

"ರಾಜೇಂದ್ರ ಚೋಳನು ಅಥವಾ ಕುಲ್ಲೋತ್ತುಂಗ ಚೋಳನು ಕ್ರಿ.ಶ. ೧೦೭೦-೧೧೧೮ ಜಯಂತಿಯ ವಿಕ್ರಮಾದಿತ್ಯ ಬಹುಶ: ಕಲ್ಯಾಣದ ಆರನೆಯ ವಿಕ್ರಮಾದಿತ್ಯ (ಜಯಂತಿ ಪುರವೆಂದಲೆ ಬನವಾಸಿ) ಇವನ ಕಾಲ ಸು. ೧೧೧೦. ಮಂಗಳವಾಡದ ಬಿಜ್ಜಳನ ಕಾಲ ೧೧೪೦. ರುದ್ರಮುನಿ ಹಾವಿನಾಳ ಕಲ್ಲಯ್ಯ ಮತ್ತು ಸಿದ್ಧರಾಮ ಸಮಕಾಲಿನವರು. ಇವರ ಕಾಲ ಕ್ರಿ.ಶ. ೧೧೬೦ ಈ ಎಲ್ಲಾ ಐತಿಹಾಸಿಕ ವ್ಯಕ್ತಿಗಳನ್ನು ನೋಡಿದರೆ ರೇವಣಸಿದ್ಧರ ಕಾಲವನ್ನು ಕ್ರಿ.ಶ. ೧೦೮೦ ರಿಂದ ೧೧೬೦ರ ಅವಧಿಯವರೆಗೆ ಹೊಂದಿಸಬಹುದು. ಹನ್ನೊಂದನೆಯ ಶತಮಾನದ ಅಂತ್ಯದಿಂದ ಹನ್ನೆರಡನೆಯ ಶತಮಾನದ ಉತ್ತರಾರ್ಧವರೆಗೆ ರೇವಣಸಿದ್ಧರು ಬದುಕಿದ್ದರೆಂಬುದರಲ್ಲಿ ಅನುಮಾನಗಳಿಲ್ಲ."[೪೨] ಎಂದು ತಿಳಿಸುತ್ತ ಅವರು ಮುಂದುವರಿದು ವೀರಶೈವರಲ್ಲಿ ವಿರಕ್ತ ಪರಂಪರೆಯಾಗಲಿ ಗುರು ಪರಂಪರೆಯಾಗಲಿ ಯಾರು ಯಾರನ್ನು ಧಾರ್ಮಿಕ ಚರಿತ್ರೆಯಲ್ಲಿ ಗೌರವ ಪೂಜ್ಯ ಭಾವನೆಗಳಿಂದ ನೋಡುತ್ತ ಬಂದಿರುವರೋ ಅವರೆಲ್ಲರೂ ಸ್ಥೂಲವಾಗಿ ಹನ್ನೆರಡನೆಯ ಶತಮಾನಕ್ಕೆ ಸೇರಿದವರ ಅಲ್ಲಮ, ಜೇಡರದಾಸಿಮಯ್ಯ, ಡೋಹರಕಕ್ಕಯ್ಯ, ಮಾದಾರ ಚೆನ್ನಯ್ಯ, ರೇವಣಸಿದ್ಧ, ಮರುಳಾರಾಧ್ಯ, ಶ್ರೀ ಪಂಡಿತ ಇವರಲ್ಲಿ ಕೆಲವರು ಹಿರಿಯರಾಗಿದ್ದು ಸಮಕಾಲೀನವರು ಆಗಿದ್ದಾರೆ ಎಂದು ತಿಳಿಸುತ್ತ ಇವರ ಜೀವಿತಾವಧಿಯನ್ನು ಬಸವಣ್ಣನಿಗಿಂತಲೂ ಸ್ವಲ್ಪ ಹಿಂದಕ್ಕೆ ತೆಗೆದುಕೊಂಡು ಹೋಗಿದ್ದಾರೆ.

"ಶ್ರೀ ವಿ.ಬಿ.ಹಾಲಭಾವಿಯರು "ರೇವಣಸಿದ್ಧರ ಕಾಲವನ್ನು ೧೦೨೫ - ೧೧೫೦ರಲ್ಲಿದ್ದರೆಂದು"[೪೩] ಸೂಚಿಸಿದ್ದಾರೆ. "ಡಾ. ನಂದೀಮಠ ಅವರೂ ಶ್ರೀ ಹಾಲಭಾವಿ ಅವರ ಹೇಳಿಕೆಯನ್ನೆ ಸಮರ್ಥಿಸುತ್ತಾರೆ."[೪೪]

ನಿಡುಮಾಮಿಡಿ ಸಂಸ್ಥಾನದ ಜಗದ್ಗುರುಗಳಾದ ಶ್ರೀ.ಜ. ಚೆನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು "ಸಿದ್ಧರಾಮ ಶಿವಯೋಗಿಯ ಜನನಕ್ಕೆ ಮೊದಲೆ ರೇವಣಸಿದ್ಧನು ತನ್ನ ಜಾತಕ ಲೀಲೆಗಳನ್ನು ಮುಗಿಸಿದ್ದರಿಂದ ಸು.ಕ್ರಿ.ಶ. ೧೦೦೦ - ೧೧೧೦ರ ಅವಧಿ ರೇವಣಸಿದ್ಧರ ಕಾಲವೆಂದು ಊಹಿಸಿದ್ದಾರೆ."[೪೫]

ಒಟ್ಟಿನಲ್ಲಿ ರೇವಣಸಿದ್ಧರ ಕಾಲ ನಿರ್ಣಯದಲ್ಲಿ ಇಲ್ಲಿಯವರೆಗೂ ನಾವು ಅಧ್ಯಯನಕ್ಕೆ ಬಳಸಿಕೊಂಡ ಶಾಸನಗಳು, ವಚನಗಳು ಹಾಗೂ ವಿದ್ವಾಂಸರ ಹೇಳಿಕೆಗಳ ಹಿನ್ನೆಲೆಯಲ್ಲಿ ಕ್ರಿ.ಶ. ೧೧೧೦ ರಿಂದ ೧೧೮೭ರವರೆಗಿನ ಕಾಲನಿರ್ಣಯವು ಸರ್ವಸಮ್ಮತವಾಗಿದೆ ಎನ್ನಬಹುದು.

## ೩. ಬಾಲ್ಯ

ರೇವಣಸಿದ್ಧರ ಕುರಿತು ಹುಟ್ಟಿಕೊಂಡಿರುವ ಕಾವ್ಯಪುರಾಣಗಳಲ್ಲಿ ಅವರ ಬಾಲ್ಯ ಜೀವನಕ್ಕೆ ಸಂಬಂಧಿಸಿದಂತೆ ವಿವರಗಳು ದೊರೆಯುತ್ತವೆ.

ರೇವಣಸಿದ್ದೇಶ್ವರ ಜೀವನವನ್ನು ಮೊದಲಿಗೆ ಕಟ್ಟಿಕೊಟ್ಟವನು ಕವಿ ಹರಿಹರ. ಇವನು ಶಿವಭಕ್ತರ ಇಲ್ಲವೆ ಶಿವಶರಣರ ಜೀವನವನ್ನು ಅಭಿವ್ಯಕ್ತಿಸುವಾಗ ಅವರ ಬಾಲ್ಯವನ್ನು ಸಾಮಾನ್ಯವಾಗಿ ಲೀಲಾ ಪೂರ್ಣವಾಗಿ ವರ್ಣಿಸುವುದು ವಾಡಿಕೆ. ಆದರೆ ರೇವಣಸಿದ್ಧನು ಸಾಧನೆಯಿಂದ ಸಿದ್ಧನಾದಾತ ಎಂಬ ವಿಚಾರವನ್ನು ಒಪ್ಪದೆ ಸ್ವಯಂ ಸಿದ್ಧನೆಂದು ಹೇಳುವದು ಅವನ ಇಲ್ಲಿಯ ವಿಚಾರವಾಗಿರುವದರಿಂದ ರೇವಣಸಿದ್ಧನ ಬಾಲ್ಯದ ವಿವರಗಳಿಗೆ ಆತ ಹೋಗಿಲ್ಲವೆಂಬುದು ಎದ್ದು ಕಾಣುತ್ತದೆ. "ಅದೆ ಕಂಥೆಯದೆ ವದನವದೆ ವಜ್ರಕುಂಡಲಂ ಅದೆ ವಕ್ಷವದೆ ಹಸ್ತವದೆ ಹಿಡಿದ ಲಾಕುಳಂ ಅದೇ ಕೋವಣಂ ನೋಡೆನುತ್ತ ಮಿರಲುದಿಸಿದಂ"[೬೭] ಹೀಗೆ ಹರಿಹರ ಬೇರೆ ಶಿವಶರಣರ ಬಾಲಲೀಲೆಗಳಂತೆ ರೇವಣಸಿದ್ದನನ್ನು ಚಿತ್ರಸದೆ ಈತನನ್ನು ಒಮ್ಮೆಲೆ ಸಿದ್ಧ ಪುರುಷನಾಗಿ ಬೆಳೆದ ರೀತಿಯನ್ನು ವರ್ಣಿಸಿದ್ದಾನೆ.

ಜಾಲವಾದಿ ಮಲ್ಲಣ್ಣ ಕವಿಯು ರೇವಣಸಿದ್ದೇಶ್ವರ ಕಾವ್ಯದಲ್ಲಿ ರೇವಣನು ಆಚೆಗೊಂಡನೆಂಬಾತನಿಗೆ ಮಗುವಾಗಿ ದೊರೆತು ಅವನ ಪ್ರೀತಿಯ ಸಾಕು ಮಗನಾಗಿ ಬೆಳೆಯುತ್ತಾನೆ. ಸಾಕು ತಂದೆ ತಾಯಿಗಳ ಮನಸ್ಸನ್ನು ಸೂರೆಗೊಂಡು ಆಚೆಗೊಂಡನ ಗ್ರಾಮದ ಎಲ್ಲರನ್ನು ತಣಿಸುತ್ತಾ ಹೋಗುತ್ತಾನೆ.

"ಸೃಷ್ಟಿಗೀಶ್ವರ ಸಿದ್ಧರೇವಣ
ಜಟ್ಪೂರ ಪಟ್ಟಣಕೆ ಬಂದನು
.................." ೬೮

ಊರಿನ ಜನತೆಗೆ ಸಮೃದ್ಧಿಯನ್ನು ನೀಡಿ, ದಾರಿದ್ರ್ಯವನ್ನು ನಿವಾರಿಸಿ ಕಲ್ಯಾಣಕ್ಕೆ ಬರುತ್ತಾನೆ. ಅಂಗವಿಕಲರಿಗೆ ಅವಯವಗಳನ್ನು ನೀಡುತ್ತಾ ಮುಂದುವರಿಯುವದನ್ನು ಕವಿ ಮಲ್ಲಣ್ಣ

"ಎದ್ದು ಬಂದವರೆಲ್ಲ ಅರಿತರು
ಸಿದ್ದನೀತನು ಎಂದು ಆತಗೆ
ಬಿಟ್ಟು ಹೊರಳುವ ಮುದುಕಿ ಮುದುಕರು ಹೋಗಿಯದನುಣ್ಣ
ವಜ್ರ ಕಾಯಗಳಾಗುತಿರಲಿಕೆ

ಇದ್ದ ಕುರುಡರು ಕುಂಟರೆಲ್ಲರು

ಮುದ್ದಾಯವರುಣಲಾಗ ಕಂಗಳು ಬಂದು ಕಾಲುಗಳು"೪೮

ಸಿದ್ಧಿಯನ್ನು ಪಡೆದ ಬಾಲಕ ರೇವಣ ಬೆಳೆದಂತೆ ಆಚೆಗೊಂಡನ ಬಡತನ ಹಿಂದಾಗಿ ಧನಧ್ಯಾನ, ಗೋ ಸಂಪತ್ತು ಬೆಳೆಯುತ್ತ ಹೋಗುತ್ತದೆ. ಮುಂದೆ ಲೋಕ ಸಂಚಾರ ಮಾಡುತ್ತಾನೆ. ಆದರೆ "ನವನಾಥರ ಚರಿತ್ರೆ"ಯ ೩೪ನೆಯ ಅಧ್ಯಾಯದಲ್ಲಿ ಗೋರಕ್ಷ ಮುಂತಾದ ಐವರು ನಾಥರು ತೀರ್ಥಯಾತ್ರೆ ಮಾಡುತ್ತಿರುವಾಗ ರೇವಾ ನದಿಯ ತೀರದಲ್ಲಿ ಒಂದು ಶಿಶುವನ್ನು ನೋಡಿದರು "ಸಹನಸಾರಬ"ನೆಂಬ ಒಬ್ಬ ಕುಣುಬಿ ಆ ಮಗುವನ್ನು ಮನೆಗೆ ತೆಗೆದುಕೊಂಡು ಹೋದನು. ರೇವೆಯಲ್ಲಿ ದೊರಕಿದುದರಿಂದ ರೇವಣ ಎಂಬ ಹೆಸರು ಅವನಿಗೆ. ಸ್ವಲ್ಪ ಜ್ಞಾನವಾಗುತ್ತಲೇ ತಂದೆಯ ಜೊತೆಗೆ ಹೊಲಕ್ಕೆ ಹೋಗುತ್ತಿದ್ದನು. ೧೨ ವರ್ಷಗಳಲ್ಲಿಯೇ ಬೇಸಾಯದಲ್ಲಿ ಬಹಳ ಜಾಣನಾದನು. ಒಮ್ಮೆ ಕಾಡಿನಲ್ಲಿ ಎತ್ತನ್ನು ಹೊಡೆದು ಕೊಂಡು ಹೋದಾಗ ದತ್ತರ ದರ್ಶನವಾಯಿತು. ಅವರು ಒಂದು ಸಿದ್ಧಿಯನ್ನು ಭೋದಿಸಿ ಹೊರಟುಹೋದರು." ೪೯

ರೇವಣಸಿದ್ಧರು ಬಾಲ್ಯವನ್ನು ಕುರಿತು ಇತರ ಕಾವ್ಯಗಳಾದ ಚತುರ್ಮುಖ ಬೊಮ್ಮರಸನ ಪುರಾಣ ದಲ್ಲಿ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇವಣಸಿದ್ಧರು ಜನಿಸಿದರು ಎಂದು ಪುರಾಣವನ್ನು ಆರಂಭಿಸುತ್ತಾನೆ. ಇಲ್ಲಿಯು ಏನನ್ನೂ ಹೇಳುವದಿಲ್ಲ. ಹರಿಹರನನ್ನು ದಟ್ಟವಾಗಿ ಅನುಸರಿಸುವ ಚೆನ್ನಬಸವ ಕವಿಯು ದಾರುಕನನ್ನು ದಾಟಿದ ತಪ್ಪಿಗಾಗಿ ರೇವಣಸಿದ್ಧರು ಕೈಲಾಸದಿಂದ ಭೂಮಿಗಿಳಿದ ರೆಂದು ಹೇಳುತ್ತಾನೆ. ಆದರೆ ರೇವಣನು ಅವತಾರವ್ಯಕ್ತಿ ಅಸಾಧಾರಣ ಸಿದ್ಧ ಎಂಬ ಕಲ್ಪನೆಯೇ ಈ ಎಲ್ಲಾ ಕವಿಗಳಲ್ಲಿ ದೃಢವಾಗಿರುವದರಿಂದ ರೇವಣನ ಬಾಲ್ಯ ಅವನು ಪಡೆದ ಶಿಕ್ಷಣದ ವಿಷಯಗಳು ಅಷ್ಟಾಗಿ ವರ್ಣನೆಗೊಂಡಿರುವುದಿಲ್ಲ. ಈ ಕವಿಗಳ ಮೌನವನ್ನು ಭೇದಿಸಿ ಅನ್ಯ ಮೂಲಗಳಿಂದ ರೇವಣ ಬಾಲ್ಯವನ್ನು ಕಟ್ಟಿಕೊಡುವದು ಅಸಾಧ್ಯವಾಗಿದೆ. ಶಾಸನಗಳಲ್ಲಂತೂ ರೇವಣಸಿದ್ಧರ ಪ್ರಬುದ್ಧ ವ್ಯಕ್ತಿತ್ವ ಮಾತ್ರ ಕಂಗೊಳಿಸುತ್ತದೆ.

## ೪. ಮತ

ರೇವಣಸಿದ್ಧರ ಜನನ - ಕಾಲನಿರ್ಣಯಗಳ ಕುರಿತು ವಿದ್ವಾಂಸರಲ್ಲಿರುವ ಭಿನ್ನಾಭಿಪ್ರಾಯಗಳು ಈತನ ಮತದ ವಿಚಾರದಲ್ಲಿಯೂ ಮುಂದುವರಿದಿವೆ. ಕೆಲವರು ಆತನನ್ನು ಶೈವನೆಂದು ಪ್ರತಿಪಾದಿಸು ತ್ತಾರೆ. ಇನ್ನು ಕೆಲವರು ಮೂಲತಃ ಶೈವನಿದ್ದವನು ಮುಂದೆ ವೀರಶೈವನಾದ ಎಂದು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಎರಡನೆಯ ವಿಚಾರ ಬಹುತೇಕ ವಿದ್ವಾಂಸರ ಸಹಮತವನ್ನು ಪಡೆದಿದೆ.

ಹರಿಹರನ ರಗಳೆಯಲ್ಲಿ ರೇವಣಸಿದ್ಧನು ಶೈವನೆಂಬಂತೆ ಚಿತ್ರಿಸಿದ್ದಾನೆ. ಇವನ ಜನನದ ಸಂದರ್ಭದಲ್ಲಿ ಹರಿಹರ ಆತನ ರೂಪವನ್ನು ಹೀಗೆ ಕಟ್ಟಿಕೊಡುತ್ತಾನೆ.

"ಅದೆ ಕಂಥೆಯದೆ ವದನವದೆ ವಜ್ರಕುಂಡಲಂ
ಅದೆ ವಕ್ಷವದೆ ಹಸ್ತವದೆ ಹಿಡಿದ ಲಾಕುಳಂ
ಅದೆ ಕೋವಣಂ ನೋಡೆದೆ ನುತ್ತ ಮಿರಲುಸಿದ್ಧಂ
ಸದಮಳವೆನಿಪ್ಪ ಶಿವಲಿಂಗದಿಂ ಪುಟ್ಟಿದಂ"[೫೦]

ಇದಲ್ಲದೆ ಸ್ಥಾವರಲಿಂಗ ಪೂಜೆಯು ಶೈವದ ಇನ್ನೊಂದು ಲಕ್ಷಣ. ಹೀಗಾಗಿ ಶೈವ ಕ್ಷೇತ್ರಗಳಿಗೆ ರೇವಣಸಿದ್ಧ ಭೇಟಿಕೊಡುವದನ್ನು ಹರಿಹರ ತನ್ನ ರಗಳೆಯಲ್ಲಿ ಪರಿಚಯಿಸುತ್ತಾನೆ.

"ದ್ರವಿಡ ದೇಶದ ಶಿವಪುರಂಗಳಂ ನೋಡತಂ
ಶಿವಲಿಂಗ ಸಂತತಿಗಳಂ ಪೂಜೆಗೆಯ್ಸುತಂ
ಪೊನ್ನಂಬಲವನೆಯ್ದಿ ನಾಟ್ಯರೂಪ ಕಂಡು
ಪನ್ನಾಗಾಭರಣ ನಾಟ್ಯಕ್ಕೆ ಹರಾಷಗೊಂಡು
ನಡೆದು ಕಾಂಚೀಪುರದೊಳ ಕಾಮ್ರನಾಥನಂ"[೫೧]

ಹೀಗೆ ಶಿವ ಕ್ಷೇತ್ರಗಳ ದರ್ಶನ, ಶಿವಲಿಂಗ ಪೂಜೆಗಳಂತಹ ಉಪಕ್ರಮಗಳು ಇವನು ಶೈವನೆಂಬುದಕ್ಕೆ ಪುಷ್ಟಿಕೊಡುತ್ತವೆ. ರೇವಣಸಿದ್ಧನ ಮತವಿಚಾರವಾಗಿ ಚಾಲವಾದಿ ಮಲ್ಲಣ್ಣ ಕವಿಯಾಗಲಿ, ಚೆನ್ನಬಸವ ಕವಿಯಾಗಲಿ, ಹಾಗು ನವನಾಥ ಚರಿತ್ರೆಯಾಗಲಿ ತಪ್ಪಿಯೂ ಮಾತನಾಡುವದಿಲ್ಲ.

ಮೇಲೆ ಉಲ್ಲೇಖಿಸಿದ ಕಾವ್ಯಗಳನ್ನು ಹೊರತು ಪಡಿಸಿದರೆ ರೇವಣಸಿದ್ಧನ ಶಿರಿವಾಳ ಶಾಸನ, ಬೌಡದಾನಪುರ ಶಾಸನ, ಮತ್ತು ಜನಪದ ಹಾಲುಮತ ಮಹಾಕಾವ್ಯ, ಹಾಲುಮತ ಪುರಾಣಗಳಲ್ಲಿ ರೇವಣಸಿದ್ಧರು ಶೈವ ಮತ್ತು ವೀರಶೈವ ಲಕ್ಷಣಗಳನ್ನು ಹೊಂದಿರುವ ಸ್ಪಷ್ಟ ಕುರುಹುಗಳು ಉಲ್ಲೇಖಗೊಂಡಿವೆ.

ಶಿರಿವಾಳ (ಕ್ರಿ.ಶ. ೧೧೮೭) ಶಾಸನವು

"ಶ್ರೀ ಮದಣಿಮಾಧ್ಯಷ್ಟ ಗುಣಸಂಪನ್ನರುಂ
ಷಟ್ ಕ್ರಿಯಾನ್ವಿತರುಂ ಸಾರ ಸೌರಬ್ಯಾ ಸರ್ವ
ನಿಸ್ಸಂಗರುಮಪ್ಪ ಶಿವಯೋಗಿ ಶಾಂತಿಮಯ್ಯಗಳ ಪುತ್ರ ರೇಣುಕಾಚಾರ್ಯರ
ಪ್ರಸಿದ್ಧಿಯಂತೆಂದಡೆ" [೫೨]

ಎಂಬ ಉಲ್ಲೇಖದಿಂದ ಇವನ ಪೂರ್ವಜರು ವೀರಶೈವ ಷಟ್‌ಸ್ಥಲ ಮಾರ್ಗವನ್ನು ಅನುಸರಿಸಿದರು ಮತ್ತು ಅನುಷ್ಠಾನಗೊಳಿಸಿರುವುದಾಗಿ ತಿಳಿದುಬರುತ್ತದೆ.

''ಶಾಂತಿಮಯ್ಯಗಳ ಸುಪುತ್ರಂ ಎಂಬುದು ಕಲ್ಯಾಣದಲ್ಲಿ ಶಾಂತಮಯ್ಯನವರಿಂದ ಶ್ರೀ ರೇವಣರಿಗೆ ವೀರಶೈವ ಅನುಗ್ರಹ ದೀಕ್ಷೆಯನ್ನು ಪಡೆದಿದ್ದರೆಂಬುದು ವ್ಯಕ್ತವಾಗುತ್ತದೆ ನಿರ್ಲಜ್ಜ ಶಾಂತಮಯ್ಯಗಳಿಂದ ಪಡೆದರೆಂದು ''ಸಂಗನ ಬಸವೇಶ್ವರರ ವಚನಗಳು'' ಎಂಬ ಗ್ರಂಥದಲ್ಲಿ ಹೇಳಲ್ಪಟ್ಟಿದೆ. (ಶ್ರೀ ಐ.ಜಿ.ಹಳಕಟ್ಟಿಯವರು ಮುದ್ರಿಸಿದ್ದಾರೆ) ವೀರಶೈವರು ಯಾವ ಗುರುವಿನಿಂದ ದೀಕ್ಷೆ ಹೊಂದಿದರೋ ಅವರು ಗುರುಪುತ್ರರು ಎಂದು ತಿಳಿಯಲ್ಪಡುತ್ತಾರೆ. ಆ ಪ್ರಕಾರ ಶಾಂತಮಯ್ಯ ಎಂಬ ಗುರುಗಳ ಪುತ್ರರೆಂದು ಇಲ್ಲಿ ಹೇಳಲ್ಪಟ್ಟಿದೆ.

ಶ್ರೀ ರೇವಣರಿಗೆ ''ಶಾಂತ ಮಲ್ಲಿಕಾರ್ಜುನ ಎಂಬ ಲಿಂಗವು'' ಎಂದು ವೀರಶೈವರ ಮಠಸ್ಥಲ ಮುಂತಾದ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯವು ಯಾವ ವೀರಶೈವನಿಗೂ ಇಲ್ಲ. ಗುರುವಿನ ಹೆಸರನ್ನು ಲಿಂಗಕ್ಕೆ ಇಡುವ ಪದ್ಧತಿಯೂ ವೀರಶೈವರಲ್ಲಿ ಇದೆ.''[೫೩] ಎಂದು ಶ್ರೀ ಚೆನ್ನಮಲ್ಲಿಕಾರ್ಜುನರು ಅಭಿಪ್ರಾಯಪಡುತ್ತಾರೆ.

ಚೌಡದಾನಪುರ (ಕ್ರಿ.ಶ. ೧೨೬೨) ಶಾಸನದಲ್ಲಿ

''ಕಾರಣಿಕರೆನಿಪರೊಳು ತಾಂ ಕಾರಣಿಕರೆನಿಪ ಸಿದ್ಧರೇವಣ ದೇವರ ಕಾರುಣ್ಯದ ಶಿಶು
ಭಕ್ತ್ಯಾಚಾರದ ಬಳ್ಳಾಲದೇವ ಲೊಕ್ಕೆಯೊಳೆಸೆದಂ
ಈ ಬಲ್ಲಾಳ ದೇವನ ಶಿಷ್ಯಳಾರ ಕನ್ಯಾದೇವಿಗೆ ..... ಪರಮ

ಗುರು ಸಿದ್ಧರೇವಣ ಸಿರಿಗಿರಿಯ ನಿವಾರಾಜ್ಞೆಯಂಬೆಸಸಿದನಚ್ಚರಿಯ ಮನೆಯಪ್ಪ ಮುಕ್ರೇಶ್ವರ ಲಿಂಗದೊಳಲ್ಲಿ ತುಂಗಭದ್ರೆಯ ತಡಿಯೊಳ್ ''[೫೪] ಅಲ್ಲಿ ಆಕೆ ಗಂಡನ ಹೆಸರಿನಲ್ಲಿ ಕಲಿದೇವರನ್ನು ಸ್ಥಾಪಿಸಿದಳು. ಈ ರೇವಣಸಿದ್ಧರು ''ತುಂಗಭದ್ರೇನ ತಡಿಯಲ್ಲಿ ಮುಕ್ತೇಶ್ವರ ದೇವಸ್ಥಾನದಲ್ಲಿ ದೊರೆತ ಶಾಸನದಲ್ಲಿ ರೇವಣಸಿದ್ದೇಶ್ವರ ಆಜ್ಞೆಯಿಂದ ವೀರಕನ್ಯಾ ದೇವಿಯರು ಇಲ್ಲಿಗೆ ಬಂದಂತೆಯೂ ಗುತ್ತರಸ ವಿಕ್ರಮಾದಿತ್ಯನ ಪ್ರಧಾನಕಾಮೆಯ ನಾಯಕನು ಶಕೆ ೧೧೧೩ ವಿರೋಧಿ ಕೃತ ಸಂವತ್ಸರದಲ್ಲಿ ಇದೇ ದೇವರಿಗೆ ಮುಕ್ತಜೀಯರ ಕಾಲಂಕರ್ಚಿ ದತ್ತಿಯನ್ನು ಬಿಟ್ಟಂತೆಯೂ ಸಂಕೀರ್ಣಶಾಸನ ೧೭ರಿಂದ ಕಂಡುಬರುವುದಾಗಿಯೂ ಈ ಕಾಲದಲ್ಲಿ ಅಲ್ಲಿಯ ಸ್ಥಾನಚಾರ್ಯರು ಕಾಳಾಮುಖ ಗುರುಗಳಾದ ಮುಕ್ತಜೀಯರೆಂಬವರಿದ್ದಾರೆಂದು ಕಂಡುಬರುವುದನ್ನು'' [೫೪] ಡಾ.ನಂದಿಮಠರು ಹೇಳುತ್ತಾರೆ.

ಹಾಲುಮತ ಪುರಾಣ ರೇವಣಸಿದ್ಧರಿಗೆ ಶಾಂತ ಮುತ್ತಯ್ಯನು ಲಿಂಗಾಧಾರಣೆ ಹಾಗೂ ಉಪದೇಶ ಬೋಧಿಸಿದ ಸಂಗತಿಯನ್ನು ಹೀಗೆ ಹೇಳಲ್ಪಡುತ್ತದೆ.

''ಕರ ಪೀಠಕೆ ಲಿಂಗ ಶ್ರೋತ್ರ ಪೀಠಕೆ ಬೋಧ
ಬರಬೇಕಾದರೆ ಸುಕೃತಬೇಕು
ಅರಿವೇನೀ ಸುಕೃತ ಶಾಲಿಯಂದು ಲಿಂಗವ

ಕರುಣದಿಂದ ಕೊಡುತಲಿಗುರುವು ||

.................................................................................

.................................................................................

ಅರಿ ತತ್ವಶಾಸ್ತ್ರವು, ಅರಿಲಿಂಗಭೇದವಂ ||

ಅರಿಯಷ್ಟಾವರಣವ ಮತ್ತೆ

ಅರಿ ಮುಕ್ತಿಪಥವನು ತೊರೆಸಂಶಯಂಗಳ

ಮರೆ ಜೀವದಾಸೆಪಾಶಗಳ'

ತನುವನು ಗುರುವಿಗೆ ಮನವನು ಲಿಂಗಕ್ಕೇ ||

ಧನವನು ಜಂಗಮಕ್ಕೊಲಿದು

ಅನುದಿನ ಕರಣಶುದ್ಧಾಂಗದಿಂದರ್ಪಿಸು ......... ||

.........................................

.........................................

ಲಿಂಗ ಪೂಜೆಯೆ ಮುಖ್ಯ ಲಿಂಗಸಂಗವೆಸಖ್ಯ

ಲಿಂಗಾಂಗದೊಳೊಡನೈಕ್ಯ

ಲಿಂಗ ಬಾಹಿರನಾಗೆ ನರಕವಪ್ಪದರಿಂದ

ಲಿಂಗ ದೆಚ್ಚರವಿರಲೆಂದು ಮಂತ್ರವನುಳಿಯದಿರ್ಕು ತಂತ್ರವನೆಸಗದಿ

................................

.......... ಕೇಳು ನೀ ಸರ್ವಕರ್ತೃತ್ವ ರೂಪವು

ಈ ಸ್ಥೂಲ ಸೂಕ್ಷ್ಮಗಳಿರವಿಂತು''[೫]

ಎರಡನೆಯ ಸಂಧಿಯಲ್ಲಿ ರೇವಣಸಿದ್ಧರು ಶಾಂತಮುತ್ತಯ್ಯನಿಂದ ಲಿಂಗಪ್ರಧಾನ, ಉಪದೇಶ ಮತ್ತು ಹಾಲು ಮತದವರಿಗೆ ಗುರುವಾಗಿರುವಂತೆ ಶಾಸನವನ್ನು ಮಾಡಿ ಆಚಾರ ಮತ್ತು ಆಚಾರ್ಯರ ನಿಲುವು ಲಿಂಗಾಪೂಜಾ ಮಹತ್ವ, ಪೂಜಾ ವಿಧಾನ ಮಹತ್ವ, ಮಂತ್ರದ ಮಹತ್ವ, ಜೀವ, ಜೀವದಶಕ್ತಿ ಸಮನ್ವಯ ವಿಚಾರ, ಲಿಂಗಾಂಗ ಸಾಮರಸ್ಯ, ಶಿವಯೋಗ ಮತ್ತು ಅಷ್ಟಾವರಣಗಳ ಪ್ರಾಮುಖ್ಯತೆ ಇವೆಲ್ಲವುಗಳು ಗುರು ಶಿಷ್ಯನಿಗೆ ಕರುಣಿಸುವಾಗ ಕಂಡು ಬರುವ ಅಂಶಗಳಿಂದ ಶಕ್ತಿ ವಿಶಿಷ್ಟದ್ವೈತ ಸಿದ್ಧಾಂತವು ಈ ಸಂಧಿಯಲ್ಲಿ ಪ್ರಕಟವಾಗಿರುವುದರಿಂದ ಹಾಗೂ ಹಾಲು ಮತದವರಿಗೆ ಗುರುವಾಗಿ ಕಂಡು ಬರುತ್ತಾನೆ.

ಜನಪದ ಹಾಲಮತ ಮಹಾಕಾವ್ಯದಲ್ಲಿ

"ಶರಣ ತಿಂಗಳ ಕಡಿಯೇನ ಹಾಲಿನ ಭಿಕ್ಷಕ ಹೋಗಬೇಕಾಂದನ
ಹೊಕ್ಕಳಗಂಟ ಕಟ್ಯಾನ ಮಳಕಾಲ ಜಂಗ ಕಟ್ಯಾನ
ರುಂಡ ಮಾಳ ಹಾಕ್ಯಾನ ಗುಂಡ ಮಣಿಗೋಳು ಹಾಕ್ಯಾನ
ಕ್ಯಾವಿಯ ಬಗಲಾಹಾಕ್ಯಾನೆ ಲ್ಯಾವಿ ದಂಡ ಕೋಲ ಹಿಡಿದಾನ
ಕೈಯಾಗ ತ್ರಿಸೂಲ ಹಿಡಿದಾನ ಮುಳ್ಳ ಆಂವಿಗಿ ಹಾಕ್ಯಾನ"೫೬

ಇಲ್ಲಿ ರೇವಣಸಿದ್ಧನು ತ್ರಿಸೂಲ, ದಂಡಕೋಲ, ರುಂಡಮಾಲೆ ಹಾಕಿಕೊಂಡು ಶಿವನ ವೇಷದಂತೆ ಕಂಡರೂ ಮೊಳಕಾಲಿಗೆ ಜಂಗು ಕಟ್ಟಿ ಮನೆ ಮನೆಗೆ ಭಿಕ್ಷೆ ಬೇಡುವ ಜಂಗಮನಾಗಿದ್ದ ರೇವಣರು ಶೈವ ಹಾಗೂ ವೀರಶೈವದ ಪ್ರತೀಕವಾಗಿ ಕಾಣಿಸಿಕೊಳ್ಳುವನು.

ಸಂಶೋಧಕರಾದ ಕಪಟರಾಳ ಕೃಷ್ಣರಾಯರು ಶಿರಿವಾಳ ಶಾಸನದಲ್ಲಿ ಉಕ್ತನಾದ ರೇವಣಸಿದ್ಧರ ಕುರಿತು ಬರೆಯುತ್ತಾ "ರೇವಣನೂ ಅವನ ತಂದೆ ಶಾಂತಿಮಯ್ಯ ಆಗಿನ ಕಾಲದಲ್ಲಿ ಶೈವಮತದವನಾಗಿದ್ದನು. ಆ ಕಾಲದಲ್ಲಿ ಶೈವ ಮತವೆಂದರೆ ಕರ್ನಾಟಕದಲ್ಲಿ ಲಾಕುಳ ಶೈವಮತವು ಪ್ರಬಲವಾಗಿತ್ತೆಂದೂ ಎಲ್ಲರಿಗೂ ಸಮ್ಮತವಾದ ವಿಷಯ, ಉಕ್ತ ಶಾಸನದ ರೇವಣನ ವರ್ಣನೆಯಿಂದ ಅವನು ಲಾಕುಳ ಶೈವನಾಗಿದ್ದನೆಂದು ಊಹಿಸಬಹುದು" ಎಂದು ಅಭಿಪ್ರಾಯಿಸುತ್ತಾರೆ.

ಜೀರಿಗಿ ಬಸವಲಿಂಗಪ್ಪನವರು ರೇವಣಸಿದ್ಧರನ್ನು ಮೊದಲು ಶೈವರಾಗಿದ್ದರೆಂದು ಊಹಿಸುತ್ತಾರೆ.

"ಬಸವಣ್ಣನವರಿಗಿಂತ ಮೊದಲು ಒಂದು ವಿಧವಾದ ಕೇವಲ ಶೈವವು ಭಾರತದೇಶದಲ್ಲಿ ಅಲ್ಲಲ್ಲಿ ಹರಿದಿತ್ತು. ಕಾಶ್ಮೀರದಲ್ಲಿಯೂ, ಅರವತ್ತುಮೂರು ಪುರಾತನರನ್ನು ಒಳಗೊಂಡಿರುವ ತಮಿಳು ದೇಶದಲ್ಲಿಯೇ ಕಾಳಮುಖರು, ಲಕುಲೀಶರು, ಪಾಶುಪತರು ಮೊದಲಾದ ವಿಶಿಷ್ಟ ಶೈವರು ನೆಲೆಗೊಂಡಿದ್ದರೆಂಬುದು ಶಾಸನಗಳಿಂದಲೂ ಗ್ರಂಥಗಳಿಂದಲೂ ಇವರಲ್ಲಿ ಶೈವರಲ್ಲಿ ಕೆಲವರು ವೀರಶೈವರಾದುದು ಕಂಡುಬರುತ್ತದೆ.

ಈ ಮೇಲಿನ ಎಲ್ಲಾ ಶಾಸನಗಳ ಮತ್ತು ಕಾವ್ಯಗಳ ಉಲ್ಲೇಖವನ್ನು ಹಾಗೂ ವಿದ್ವಾಂಸರ ಅಭಿಪ್ರಾಯಗಳನ್ನು ಅವಲೋಕಿಸಿದಾಗ ರೇವಣಸಿದ್ಧನು ಶೈವನಾಗಿದ್ದನು ಎಂಬ ಅಭಿಪ್ರಾಯದ ಬಗೆಗೆ ಸಮರ್ಥನೆಗಳು ದೊರೆಯುತ್ತವೆ. ಚೆನ್ನಮಲ್ಲಿಕಾರ್ಜುನ ಮೊದಲಾದ ವಿದ್ವಾಂಸರು ರೇವಣನ ವೀರಶೈವತ್ವವನ್ನು ಎತ್ತಿ ಹಿಡಿಯುತ್ತಾರೆ. ರೇವಣಸಿದ್ಧ ವೀರಶೈವನಾಗಿದ್ದ ಎಂಬುದರ ಬಗೆಗೆ ಕಾವ್ಯ ಪುರಾಣಗಳು ಮೌನವಾಗಿರುವುದೇ ಅವನ ವೀರಶೈವತ್ವದ ಸಮರ್ಥನೆಗೆ ದೊಡ್ಡ ಕೊರತೆಯಾಗಿರುವುದು ಸಹಜವೇ ಆಗಿದ್ದರೂ ರೇವಣಸಿದ್ಧನು ವೀರಶೈವನಾಗಿರಲಿಲ್ಲವೆಂದು ತಿಳಿಯುವುದು ದೊಡ್ಡ ತಪ್ಪಾಗುತ್ತದೆ. ರೇವಣಸಿದ್ಧನು ವೀರಶೈವನಾಗಿದ್ದನೆಂಬುದಕ್ಕೆ ಪ್ರಬಲವಾದ ಆಧಾರವೆಂದರೆ ವೀರಶೈವ

ಮತಸ್ಥಾಪಕ ಆಚಾರದಲ್ಲಿ ಆತನೇ ಮುಖ್ಯನಾಗಿದ್ದಾನೆ. ಅಲ್ಲದೆ ಆತನ ಪುತ್ರ ರುದ್ರಮುನಿಯಂತೂ ವೀರಶೈವ ಪರಂಪರೆಗೆ ಸೇರಿದ ಹಿರಿಯ ಶರಣನಾಗಿದ್ದಾನೆ. ರೇವಣಸಿದ್ಧನನ್ನು ಗುರುವೆಂದು ಭಾವಿಸುವುದು. ಆತನ ಹೆಸರನ್ನು ಮಕ್ಕಳಿಗೆ ಇರುವುದು ರೇವಣಸಿದ್ಧ ಕ್ಷೇತ್ರಗಳಿಗೆ ನಡೆದುಕೊಳ್ಳುವುದು ವೀರಶೈವ ಆಚಾರಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣವಾಗಿದೆ.

ರೇವಣಸಿದ್ಧರು ಲಿಂಗೋದ್ಭವ ಎಂಬ ಕಾರಣಕ್ಕೆ ನಮ್ಮ ಕವಿಗಳು ಆತನಿಗೆ ಮತ್ತೆ ಲಿಂಗ ದೀಕ್ಷೆ ಮಾಡಿಸುವ ಗೋಜಿಗೆ ಹೋಗಿರಲಾರರು ಅಲ್ಲದೆ ರೇವಣನು ಶೈವರಿಂದ ವೀರಶೈವಕ್ಕೆ ಹೋದದ್ದು ಅವನ ಜೀವನದ ಉತ್ತರಾರ್ಧದಲ್ಲಿ ಆದುದರಿಂದ ಅವನ ವೀರಶೈವ ಪರಿವರ್ತನೆಯನ್ನು ಹೇಳುವ ಅಗತ್ಯ ಹರಿಹರಾದಿಗಳಿಗೆ ಮುಖ್ಯವೆನಿಸಲಾರದು. ಹೀಗೆ ಶಾಸನ, ಕಾವ್ಯ ಪುರಾಣಗಳನ್ನು ಹಿಡಿದು ರೇವಣರ ವೀರಶೈವತ್ವ ಸಮರ್ಥನೆಗೆ ಹೊರಡುವರು. ವೀರಶೈವ ಸಮಾಜದಲ್ಲಿ ಜೀವಂತವಾಗಿರುವ ರೇವಣಸಿದ್ಧ ಸಂಪ್ರದಾಯಗಳನ್ನು ಲಕ್ಷಿಸುವುದು ಹಾಗು ವೀರಶೈವ ಪಂಚ ಪೀಠಗಳಲ್ಲಿ ಒಂದಾದ ಹಾಗು ಈ ಪಂಚ ಪೀಠಗಳಿಗೆ ಮೂಲವಾದ ರಂಭಾಪುರಿ (ಬಾಳೆಹೊನ್ನೂರು) ಪೀಠದ ಅಂದರೆ ರೇವಣ ಪೀಠದ ಸ್ವಾಮಿಗಳು ವೀರಶೈವ ಗುರುಗಳಾಗಿದ್ದಾರೆ. ಇವರ ಸೂತ್ರ ಗೋತ್ರಕ್ಕೆ ಸೇರಿದ ಜಂಗಮರು ವೀರಶೈವ ಭಕ್ತರ ಮನೆಯ ಗುರುಗಳಾಗಿದ್ದಾರೆ. ಹೀಗಿರುವಾಗ ರೇವಣಸಿದ್ಧನ ವೀರಶೈವತ್ವವನ್ನು ಸಂದೇಹಿಸುವುದು ಶುದ್ಧ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಬೇರೆ ಬೇರೆ ಜಾತಿ, ಮತ, ಸಂಪ್ರದಾಯಗಳಿಗೆ ಸೇರಿದವರು ಹನ್ನೆರಡನೆಯ ಶತಮಾನದಲ್ಲಿ ಶರಣರ ಕಲ್ಯಾಣಕ್ರಾಂತಿಯ ಪ್ರಭಾವದಿಂದ ವೀರಶೈವರಾದರು. ಇಷ್ಟಲಿಂಗ ಧಾರಣಪೂಜೆ ಶರಣರ ಕ್ರಾಂತಿ ಫಲವಾಗಿ ವೀರಶೈವವು ಸ್ಪಷ್ಟವಾಗಿ ಮೂಡಿ ಬಂತು. ಕಲ್ಯಾಣದ ಈ ಶರಣರಿಂದ ಪ್ರಭಾವಿತರಾದ ರೇವಣಸಿದ್ಧ ತನ್ನ ಜೀವನದಲ್ಲೂ ಇಷ್ಟಲಿಂಗಧಾರಿಯಾಗಿ ವೀರಶೈವ ಲಕ್ಷಣಗಳನ್ನು ಆ ಮೇಲೆ ಅಳವಡಿಸಿಕೊಂಡಿದ್ದಾನೆ ಎಂಬುದು ಸಹಜವಾಗುತ್ತದೆ. ಇದನ್ನು ಆಧಾರವಾಗಿ "ಶಾಂತಿಮಯ್ಯಗಳು ಈತನ ಗುರುವಾಗಿ ನಿಂತು ಈತನಿಗೆ ಲಿಂಗದೀಕ್ಷೆ ನೀಡಿರಬೇಕು ಎಂದು ವಿದ್ವಾಂಸರಾದ ಡಾ. ಎಂ.ಎಂ.ಕಲಬುರ್ಗಿ ಅವರು ತಿಳಿಸುತ್ತಾರೆ. ಶಾಂತಮಲ್ಲಿಕಾರ್ಜುನ ಅಂಕಿತದಲ್ಲಿ ಈತ ವಚನಗಳನ್ನು ಬರೆದ ಶರಣನೂ ಆಗಿರುವಂತಿದೆ ಎಂದು ಅವರು ಊಹಿಸಿದ್ದಾರೆ."

ಈತನ ಪುಣ್ಯಸ್ತ್ರೀ ರೇಕಮ್ಮ ವೀರಶೈವ ಶರಣಳಾಗಿದ್ದಾಳೆ. ಮಾತ್ರವಲ್ಲದೆ ವಚನಗಳನ್ನು ಬರೆದಿದ್ದಾಳೆ. ಈ ಅಂಶವೂ ಆತನ ವೀರಶೈವತ್ವವನ್ನು ಘೋಷಿಸುತ್ತದೆ.

ಈ ಹಿನ್ನೆಲೆಯಲ್ಲಿ ಮೊದಲು ಶೈವರಾಗಿದ್ದವರು ಹನ್ನೆರಡನೆಯ ಶತಮಾನದ ಎಲ್ಲ ಶರಣರ ಹಾಗೆ ವೀರಶೈವ ಉದ್ಧರಿಸಿದವನಾಗಿದ್ದಾನೆ ಮತ್ತು ವೀರಶೈವರಿಗೆ ಗುರುವಾಗಿದ್ದಾನೆ.

### ೫. ಮದುವೆ

'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ಸಂಸಾರದ ಸಾಮರಸ್ಯವನ್ನು ಸತಿಪತಿಗಳ ಏಕೋಪಾಸನೆಯಲ್ಲಿ ಕಾಣುವ ಶರಣರು ಸಂಸಾರವನ್ನು ಧಿಕ್ಕರಿಸಲಾರರು ಎಂಬ ವಿಚಾರವು ಸರ್ವ ವಿಧಿತವಾದದು. ಇದಕ್ಕೆ ನಿದರ್ಶನವಾಗಿ ಜೇಡರ ದಾಸಿಮಯ್ಯ, ಬಸವಣ್ಣ, ಮೋಳಿಗೆ ಮಾರಯ್ಯ ಆಯ್ದಕ್ಕಿ ಮಾರಯ್ಯ ಮೊದಲಾದ ಶರಣರು ತುಂಬು ಜೀವನ ನಡೆಸಿದ ಕಥಾ ವಿವರಗಳು ದೊರೆಯುತ್ತವೆ. ಇದಕ್ಕೆ ರೇವಣಸಿದ್ಧರು ಹೊರತಾಗಿಲ್ಲ.

ಪ್ರಭಾವಿ ವ್ಯಕ್ತಿಯಾಗಿದ್ದ ರೇವಣಸಿದ್ಧರು ವೈವಾಹಿಕ ಸಂಬಂಧಗಳನ್ನು ಅರಸು ಮನೆತನಗಳ ಜೊತೆಗೆ ಮಾಡಿರುವದಾಗಿ ಕಾವ್ಯಗಳಲ್ಲಿ ಉಲ್ಲೇಖಗೊಂಡಿದೆ. ಸಾಧು ಸತ್ಪುರಷರ ಸಾಲಿಗೆ ಸೇರುವ ರೇವಣಸಿದ್ಧರಿಗೆ ರಾಜರು ತಮ್ಮ ಮಕ್ಕಳನ್ನು ಕೊಡಬೇಕಾದರೆ ಈತನ ಪಾರಮಾರ್ಥ ವ್ಯಕ್ತಿತ್ವದ ಇನ್ನೊಂದು ಮುಖ ಪರಿಚಯವಾಗುತ್ತದೆ. ಪಾರಮಾರ್ಥಿಕ ಪ್ರಪಂಚವನ್ನು ಸಮನಾಗಿ ನಡೆಸಿಕೊಂಡು ಹೋಗಿದ್ದು ಆದರ್ಶ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ರೇವಣಸಿದ್ಧರ ಪತ್ನಿಯರಾಗಿ ಸುಲಕ್ಷಣೆ, ಶಾಂಭವಿ, ಸೌಂದರಿದೇವಿ, ಮೋಹಿನಿ, ಪುಣ್ಯವತಿ, ಸೋಮದೇವಿ, ವೇದ, ಕಂಚುಕಿ ಮೊದಲಾದ ಹೆಸರುಗಳು ಕಾವ್ಯಗಳಿಂದ ತಿಳಿದುಬರುತ್ತವೆ. ಇವರೆಲ್ಲ ಚೋಳ, ಗುರ್ಜಾ, ಮಲೆಯಾಳ, ಆಂಧ್ರ ಮೊದಲಾದ ದೇಶದ ರಾಜಕುಮಾರಿಯರು ಇವರನ್ನೊಳಗೊಂಡಂತೆ ನೂರೊಂದು ಜನ ಪತ್ನಿಯರು ಈತನಿಗೆ ಇದ್ದರೆಂಬುದಾಗಿ ಕಾವ್ಯಗಳಲ್ಲಿ ಚಿತ್ರಣಗೊಂಡಿದೆ.

"ನೆಲೆಮಲೆಗಂದೆಯ್ತುರುತಂ
ನಲಿಯುತೆ ಮರುಳುಗಳ ಕರಗಳಿಂದಂ ಶಿಖರದಿ
ಬಲು ಗುಹೆಯೊಂದನು ಮಾಣಿಸಿ
ಲಲನೆಯರೆಲ್ಲರನುಮರಲೊಳಿರಿಸುತೆ ತಾನುಂ"

"ಬಿನದಿಸುತವರೊಳಗಾಗಂ
ಎನಿತು ವಿಲಾಸಂಗಳನಿತುಮಂ ಕೈಕೊಳುತಂ
ಘನಲಿಂಗವಾಗಿ ತೋರುವ
ನನುವಿಂ ತಾಂ ಲಿಂಗದಿಂದಲುದಿಸಿದ ಕತದಿಂ"[೫೮]

"ರೇವಣಸಿದ್ದೇಶ್ವರ ಬೆಟ್ಟದಲ್ಲಿ ಇರುವ ಮರಳುಸಿದ್ಧಲಿಂಗದ ಗುಡಿಯಲ್ಲಿ ಒಂದು ಗವಿಯ ಬಾಗಿಲು ಕಾಣುತ್ತದೆ. ಈ ಗವಿಯ ಬಾಗಿಲಿನಿಂದ ಮೇಲಿನ ಗುಡ್ಡದ ತುದಿಯವರೆಗೆ ೧೦೧ ಅಂಕಣಗಳಿವೆ ಎಂದೂ, ೧೦೧ ಸ್ತ್ರೀಯರನ್ನು ಕೋಣೆಯಲ್ಲಿರಿಸಿದ್ದನು ಎನ್ನುವ ಜನವಾರ್ತೆ"[೫೯] ಎಂದು ಶ್ರೀ ಚೆನ್ನಮಲ್ಲಿಕಾರ್ಜುನರು ಹೇಳಿಕೆ ನೀಡುತ್ತಾ ನೂರೊಂದು ಸಂಖ್ಯೆಯು ವೀರಶೈವರಲ್ಲಿ ಅಷ್ಟು ಸಂಖ್ಯೆಯ ಸ್ಥಳಗಳು ಇರುವುದಾಗಿ ಎಂದು ಗುರುತಿಸಿದ್ದಾರೆ.

ಹರಿಹರನು ರಗಳೆಯಲ್ಲಿ ರೇವಣಸಿದ್ಧರ ಮದುವೆ ವಿಚಾರ ಹೀಗೆ ತಿಳಿದುಬರುತ್ತದೆ.

ಚೋಳ ದೇಶಮಂ ಪೊಕ್ಕು ರಾಜೇಂದ್ರಚೋಳನ ಕಾಣಿಸಿ
ಕೊಂಡು ಕರುಣಮನಿತ್ತು ವಿವಿಧ ವಿಸ್ತರಮಪ್ಪ ಘನನಿಳಯ
ದ ಸಿಂಹನಿಥ್ಯರಕ್ಕೆ ಬಿಜಯಂಗೈಯ್ದು ಚೋಳ ಕುಮಾರಿಯಂ
ವಿವಾಹಮಾಗಿ, ಚೋಳ ಮಹಾರಾಜನಿಂ ಪೊಡವಡಿಸಿಕೊಳುತಂ
ಶಿವಭಕ್ತರಿಂ ವಂದಿಸಿಕೊಳುತಂ ಆ ದೇಶದ ಪಲವು
ಶಿವಪುರಂಗಳಂ ನೋಡುತಂ ತಿರುಗಿ ಪೊರಮಟ್ಟು, ಚೋಳಂ
ಕೊಟ್ಟ ಬಳುವಳಿಯ ಚತುರಂಗ ಬಲಂವೆರಸಿ ತಿರುಗಿ, ಚೇರ
ಮಲೆಯಾಳ ಗೌಳ ಗುರ್ಜರ ನೇಪಾಳಂ ಮೊದಲಾದ
ದೇಶಂಗಳಂ ಪೊಕ್ಕಲ್ಲಲ್ಲಿಯ ರಾಜಪುತ್ರಿಯರಂ ಪರಿಣಯನ
ಪೂರ್ವಕಂ ಸ್ವೀಕರಿಸಿ, ತಟಾಂಗಳಂಗಳಂ ಕಟ್ಟಿಸುತ್ತಂ ಶಿವನಿಳಯಂ
ಗಳ ನೆತ್ತಿಸುತ್ತಂ ಆರವೆಗಳನಿಕ್ಕಿಸುತ್ತಂ ಶಿವಪುರಂಗಳ ಮಾಡಿಸು
ತ್ತಂ ಸತ್ರಂಗಳಂ ನಿರ್ಮಿಚಿಸುತ್ತಂ ................
ಪುಣ್ಯಲೀಲೆಗಳನಲಂಕರಿಸುತ್ತಂ ಜಗದ್ಹಿತಾರ್ಥ ಮೂರ್ತಿ ಮಂಗಳವಾದ
ಕ್ಕೆ ಮರಳಿ ಬಪ್ಪಗಳು"[೬೦]

ಹೀಗೆ ರೇವಣಸಿದ್ಧನು ಮದುವೆಯ ಸಮಾಚಾರವನ್ನು ಹರಿಹರನು ಚಿತ್ರಿಸಿದರೆ ಬೊಮ್ಮರಸನು ಮದುವೆಗಳ ವೈಭವವನ್ನು ಹೀಗೆ ವರ್ಣಿಸುತ್ತಾನೆ.

"ಚೋಳನಿಂ ಬೀಳ್ಕೊಂಡು ಬಳಿಕ ಗುರುವರನು ಮಲೆ
ಯಾಳ ಪಾಂಡ್ಯ ಕಾಳಿಂಗ ವಂಗ ಕಾಶ್ಮೀರ ನೇ
ಪಾಳ ಮೊದಲಾದ ದೇಶಮಂ ಪೊಕ್ಕುರಾಜಪುತ್ರಿಯರ
ಗಳ ಮದುವೆಯಾಗಿ
ಬಾಲೆಯರ ನಿಂತು ಮೂನ್ನೂರ್ವರಂ ಹರಿಸಿ ಕಾ
ಲಾಳು ತೇರಾನೆ ಕುದುರೆಗಳು ಸಂದಣಿಸಿ ಭೂ
ಪಾಲಲೋಲೈಸಿ ಬರೆ ಬಂದ ಮಂಗಳವಾಡಮಂ
ಪೊಕ್ಕ ಸುಖಮಿರ್ದನು"[೬೧]

ಶ್ರೀ ರೇವಣಸಿದ್ಧರಿಗೆ ಮೂನ್ನೂರು ಜನರೊಂದಿಗೆ ಮದುವೆಯಾಗಿರುವದಾಗಿ ತಿಳಿಸುವ ಬೊಮ್ಮರಸನು ಬಿಜ್ಜಳನ ಮಗಳಾದ ಸುಲಕ್ಷಣೆಯನ್ನು ಮದುವೆಯಾದದ್ದು ಮೊದಲನೆಯ

ಮದುವೆಯೆಂದು ಹೇಳುವನು. ಬಿಜ್ಜಳನು ಮಾಸನೂರಿನ ಮಡುವಿನಲ್ಲಿ ಖಡ್ಗಕ್ಕಾಗಿ ಖರ್ಪರನ ಮಾತಿನಂತೆ ಹನ್ನೆರಡು ಸಾವಿರ ಕನ್ಯೆಯರನ್ನು ಬಲಿ ಕೊಡಲು ಸಿದ್ಧವಾದಾಗ ರೇವಣಸಿದ್ಧನನ್ನು ಮಾಯಿದೇವಿಯು ಸ್ಮರಿಸಲು

"ದುರುಳ ಖರ್ಪರನ ನುಡಿಸಿ ಮಾಯಿದೇವಿಯ ಕುವರಿ
ಸಹಿತ ಸಕಲ ಕನ್ಯಬಂಧನವ ಬಿಡಿಸಿ ಪರಮಗುರು
ವೀರ ಬಿಜ್ಜಳನ ಅಣುಗೆಯನ್ನು ಮದುವೆಯಾಗಿ ಸುಖದಿಂರ್ದನು"[೬]

ರೇವಣಸಿದ್ಧನು ಬಿಜ್ಜಳನ ಮಗಳಾದ ಸುಲಕ್ಷಣೆಯನ್ನು ಮದುವೆಯಾದನೆಂದು ಬೊಮ್ಮರಸ ತಿಳಿಸಿದರೆ ಮತ್ತೊಂದು ಕಡೆ ಅನೇಕ ರಾಜ ಪುತ್ರಿಯರನ್ನು ಮದುವೆಯಾಗುವದರ ಜೊತೆಗೆ ರುದ್ರಮುನಿಯ ಜನನವನ್ನು ಹೇಳುತ್ತಾನೆ.

"ರಾಜೇಂದ್ರ ಭೂಪಾಲ ಮೊದಲಾದ ತನುಜೆಯರ
ಮುನ್ನೋರ್ವರಂ ಮದುವೆಯಾಗಿ ಎತಿರಾಜ ರಾಜಂ ರುದ್ರ
ಮುನಿದೇವರೆಂಬ ಕುವರನಂ ಪಡೆದು ಸುಖದಿಂದರ್ದನು"[೭]

ಹೀಗೆ ಕಾವ್ಯಗಳ ಹಿನ್ನೆಲೆಯಲ್ಲಿ ರೇವಣಸಿದ್ಧನು ಮದುವೆಯ ಸಂದರ್ಭವನ್ನು ವಿವರಿಸುತ್ತಾನೆ. ಆದರೆ ಯಲಬುರಗಿ ತಾಲೂಕಿನ ಶಾಸನವೊಂದರ ಉಲ್ಲೇಖದಿಂದ ಶ್ರೀ ಚೆನ್ನಮಲ್ಲಿಕಾರ್ಜುನರು ರೇವಣರೊಂದಿಗೆ ಬಿಜ್ಜಳನ ಮಗಳೊಂದಿಗೆ ಮದುವೆಯಾಗಿರಲಿಲ್ಲವೆಂಬ ತೀರ್ಮಾನಕ್ಕೆ ಬರುತ್ತಾರೆ.

"ಶ್ರೀ ವೀರಮೂರ್ತಿ ಬಿಜ್ಜಲ
ದೇವಂ ನಿಜ ತನುಜೆಯರ್ಕಳಂ ಗುಣ ಲಂಕೌ
ದೇವಿಯನೊರೆದೀಯೆ ಚವಾಂಡ ಭೂಪತಿ ಪಡೆದಂ"

ಪ್ರಸಿದ್ಧನಾದ ಕಲಚುರಿ ಬಿಜ್ಜಳನಿಗೆ ಸಿರಿಯಾದೇವಿ, ಲಕ್ಕಾದೇವಿ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದು ಅವರನ್ನು ಚಾವುಂಡರಾಯನಿಗೆ ಮದುವೆ ಮಾಡಿ ಕೊಟ್ಟನೆಂಬುದಕ್ಕೆ ಶಾಸನವಿರುವದರಿಂದ ಬಿಜ್ಜಳನ ಮಗಳನ್ನು ಶ್ರೀ ರೇವಣಸಿದ್ಧರು ಮದುವೆಯಾಗಲಿಲ್ಲವೆಂದು ತಿಳಿಯಬೇಕಾಗಿದೆ."[೮]

"ರಾಯ ಮುರಾರಿ ಸೋವಿದೇವನ ಮಗಳು ಸುಲಕ್ಷಣೆಯನ್ನು ಶ್ರೀ ರೇವಣಸಿದ್ಧರು ಮದುವೆಯಾದರೆಂದು ಶ್ರೀ ಸಿಂದಗಿ ಸಿದ್ದಪ್ಪನವರು ಅಭಿಪ್ರಾಯಿಸುತ್ತಾರೆ."[೯] "ರೇವಣಸಿದ್ಧರ ಪರ್ಯಾಯನಾಮಗಳನ್ನು ಹೇಳುವಾಗ ಶತ್ಯೆಕಸ್ಪರತಃ" ಎಂಬ ಹೆಸರೊಂದು ಬರುತ್ತದೆ. ಇದರಿಂದ ತಿಳಿದು ಬರುವದೇನೆಂದರೆ ರೇವಣಸಿದ್ಧರು ಬಹುಜನ ಪತ್ನಿಯರನ್ನು ಹೊಂದಿದ್ದರು. ಆದರೆ ಸಂಸಾರದಲ್ಲಿ ಇದ್ದು ಇಲ್ಲದಂತೆ, ಕಮಲಪತ್ರದ ಜಲಬಿಂದುವಿನಂತೆ ಜಗದ ಜಂಜಾಟಗಳಿಗೆ ನಿಲುಕದೆ ಇದ್ದರೆಂದು ಚಿತ್ರಿತಗೊಂಡಿದೆ.

"ಶ್ರೀ ರೇವಣಸಿದ್ಧರು ಮತ್ತು ಅವರ ಪತ್ನಿಯರೂ ನುಡಿದ ವಚನಗಳು ಮುಕ್ತಿಕಂಠಾಭರಣದಲ್ಲಿ ಕಂಡು ಬರುತ್ತದೆ. ಕಲ್ಯಾಣದಲ್ಲಿ ಬಸವಣ್ಣನ ವಿಷಯವಾಗಿ ಪ್ರಭುದೇವರು ಆಕ್ಷೇಪಣೆ ಮಾಡಿದಾಗ ಅದನ್ನು ಸಹಿಸಲಾರದೆ ಚೆನ್ನಬಸವಣ್ಣನವರು ಮೂರ್ಛೆ ಹೊಂದುತ್ತಾರೆ. ಆಗ ಪ್ರಭು ರೇವಣಸಿದ್ಧರು ಮತ್ತು ಅವರ ಪತ್ನಿಯರು ಸಂಭಾಷಣೆಗಳು ಬರುತ್ತವೆ. ವೇದ, ಕಂಚುಕಿ, ಸೌಂದರಿದೇವಿ, ಮೋಹಿನಿ, ಶಾಂಭವಿ ಇವರೆಲ್ಲರೂ ಪ್ರಸ್ತಾಪಿಸಿರುವ ವಚನಗಳ ಪ್ರಸಂಗ ಬರುವದು."[೬] ಹೀಗೆ ರೇವಣಸಿದ್ಧರ ಪತ್ನಿಯರಿಗೆ ಅನೇಕ ರಾಜಪುತ್ರಿಯರು ಎಂಬುದು ಖಚಿತವಾಗುತ್ತದೆ. ಒಟ್ಟಿನಲ್ಲಿ ಶ್ರೀ ರೇವಣಸಿದ್ಧರು ವೈವಾಹಿಕ ಜೀವನವನ್ನು ನೋಡುತ್ತಿದ್ದರೆ ಲೋಕ ಪರ್ಯಾಟನದ ಮೂಲಕ ಸಮಾಜದ ಹಿತವನ್ನು ಬಯಸುತ್ತ ಲೌಕಿಕವು ಧಾರ್ಮಿಕ ಜೀವನಕ್ಕೆ ಎಂದೂ ವಿರೋಧಿಯಲ್ಲವೆಂಬುದನ್ನು ಶೃತಪಡಿಸಿದ್ದಾನೆ. ಇಲ್ಲಿ ಲೌಕಿಕ ಮತ್ತು ಅಲೌಕಿಕತೆಯ ಸಮನ್ವಯತೆಯನ್ನು ಸಾಧಿಸಿರುವದು ಕಂಡುಬರುತ್ತದೆ.

### ೬. ಲೋಕಪರ್ಯಾಟನೆ

ಲೋಕಕಲ್ಯಾಣದಲ್ಲಿಯೇ ತಮ್ಮ ಆತ್ಮ ಕಲ್ಯಾಣವನ್ನು ಕಂಡುಕೊಂಡ ಶರಣರು ಲೋಕದ ಹಿತಕ್ಕಾಗಿ ಸಂಚಾರ ಕೈಗೊಂಡು, ಮಾನವೀಯ ಮೌಲ್ಯಗಳನ್ನು ಆಧ್ಯಾತ್ಮದ ವಿಚಾರಗಳನ್ನು ಜನಮನದಲ್ಲಿ ಬಿತ್ತಿ ಬೆಳೆಯುವುದರಲ್ಲಿ ಮುಂದಾದರು.

ಲೋಕವನ್ನು ಸಾಮಾನ್ಯರು ನೋಡುವದಕ್ಕೂ ದಾರ್ಶನಿಕರು-ಸಂತರು-ಶರಣರು ನೋಡುವುದಕ್ಕೆ ತುಂಬಾ ವ್ಯತ್ಯಾಸವಿದೆ. ಸಾಮಾನ್ಯರ ಕಣ್ಣಿಗೆ ಲೋಕ ವೈಯಕ್ತಿಕ ಲಾಭ ಲಾಲಸೆಗಳಿಗೆ ಪೂರಕವಾಗಿ ಕಂಡುಬಂದರೆ, ವೈಯಕ್ತಿಕತೆಯನ್ನು ಮೀರಿ ಸಾಮಾಜಿಕತೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಕರಗಿಸಿಕೊಂಡು ನಿಜವಾದ ವಿಶ್ವಕುಟುಂಬಿಗಳಾದ ಶರಣರು ಯಾವಾಗಲೂ ಲೋಕೋದ್ಧಾರಕ್ಕಾಗಿ ತಮ್ಮ ಆಯುಷ್ಯವನ್ನು ಸವೆಸಿದವರಾಗಿದ್ದಾರೆ. ಬತ್ತಿ ತಾನು ಉರಿದು ಅನ್ಯರಿಗೆ ಬೆಳಕು ಕೊಡುವ ಹಾಗೆ ಶರಣರ ಪರಿ. ಈ ಹಿನ್ನೆಲೆಯಲ್ಲಿಯೇ ರೇವಣಸಿದ್ಧರ ಲೋಕದರ್ಶನದ ಪರ್ಯಾಟನೆಯನ್ನು ಬಹುತೇಕ ಎಲ್ಲಾ ಕಾವ್ಯಗಳು ಚಿತ್ರಿಸಿವೆ. ರೇವಣಸಿದ್ಧರ ಲೋಕಪರ್ಯಾಟನ ಕುರಿತಂತೆ ಕವಿ ಹರಿಹರನು ಮತ್ತು ಚತುರ್ಮುಖ ಬೊಮ್ಮರಸರು ಹೇಳುವ ಸನ್ನಿವೇಶಗಳು ಬಹು ಸಾಮ್ಯತೆಯಿಂದ ಕೂಡಿವೆ. ಇದಕ್ಕೆ ಚೆನ್ನಬಸವ ಕವಿ ಹೊರತಾಗಿಲ್ಲ. ಆದರೆ ಇವರಿಗಿಂತ ಭಿನ್ನವಾಗಿ ಕವಿ ಮಲ್ಲಣನು ಚಿತ್ರಿಸುತ್ತಾನೆ.

ಹರಿಹರನ ರೇವಣಸಿದ್ದೇಶ್ವರ ರಗಳೆಯಲ್ಲಿ ರೇವಣಸಿದ್ಧನ ಲೋಕ ಪರ್ಯಾಟನೆಯ ಉಲ್ಲೇಖವನ್ನು ಹೀಗೆ ಕಟ್ಟಿಕೊಡುತ್ತಾರೆ.

ರೇವಣಸಿದ್ಧರು ಕೊಲ್ಲಪಾಕಿಯಲ್ಲಿ ಲಿಂಗೋದ್ಭವಾಗುವರು. ಈ ಪ್ರದೇಶವು ಆಂಧ್ರಪ್ರದೇಶದ ರಾಜ್ಯದಲ್ಲಿ ನಲ್ಗೊಂಡ ಜಿಲ್ಲೆಯ ಭುವನಗಿರಿ ತಾಲೂಕಿನಲ್ಲಿ ಕುಲನುಪಾಕಲು, ಕುಲಪಾಕ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಹರಿಹರ ತನ್ನ ಕಾವ್ಯದಲ್ಲಿ ಕೊಲ್ಲಿಪಾಕಿಯೆಂದು ಕರೆಯುತ್ತಾನೆ.

ಕೊಲ್ಲಿಪಾಕಿಯ ರಂಗಮಂಟಪದ ಮಧ್ಯದೊಳು ಜವನಿಕೆ ಸರಿಯಲು ಸಕಲ ವಾದ್ಯಗಳ, ನೃತ್ಯಗಳಿಂದ ಲಲನೆಯರು ನರ್ತಿಸುತ್ತಿರಲು ಮಹಾಲಿಂಗದಿಂದ ಕಾರಣಿಕ ಸಿದ್ಧನಾಗಿ ರೇವಣಸಿದ್ಧರು ಹುಟ್ಟಿಬರುತ್ತಾರೆ. ಜನವೆಲ್ಲ ಇಂತಹ ಮಹಾಸಿದ್ಧನನ್ನು ಬೆರಗಾಗಿ ನೋಡುತ್ತಿರುವಾಗಲೇ ಲೋಕಸಂಚಾರ ಪ್ರಾರಂಭಿಸುತ್ತಾನೆ.

ರೇವಣಸಿದ್ಧರು ನಭಸ್ಥಲದಿಂದ ನಡೆದು ಬರುವದನ್ನು ಹರಿಹರನು ಹೀಗೆ ಚಿತ್ರಿಸುತ್ತಾನೆ.

"ದಕ್ಷಿಣ ದಿಶಾವರಕೆ ಬಂದಗಸ್ತ್ಯನ ಕೂಡೆ ಶಿವಭಕ್ತಿ
ಗೋಷ್ಠಿಯೊಳು ನಿಂದು ....................
ಸೇತುವಿನ ರಾಮನಾಥನನೊಲ್ಮೆಯಿಂ ಕಂಡು ........
........ ಪಿಣ್ಣಾಂಕ ದೇವನೆಂಬಾ ನಾಮವಳ್ಕರಿಂ
ಚೋಳದೇಶದೊಳೆಲ್ಲ ಸಂದಿರೆ ನಿರಂತರಂ .........."[೬೭]

ಅಗಸ್ತ್ಯರನ್ನು ಕಂಡು ಶಿವತತ್ವವನ್ನು ಉಪದೇಶಿಸಿದ ನಂತರ ರಾಮೇಶ್ವರಕ್ಕೆ ಸಂಧಿಸುವರು. ಅಲ್ಲಿ ರಾಮನಾಥನನ್ನು ಪೂಜಿಸಿ ಚೋಳ ದೇಶಕ್ಕೆ ಹೊರಡುವನು. ಅಲ್ಲಿ ಲೋಕಕ್ಕೆ ತಾನು ಮರುಳು ತನಗೆ ಲೋಕವು ಮರಳೋ ಎನ್ನುವಂತೆ ಶಿವತತ್ವದ ಹುರುಳು ತಾನಾಗಿ ಸುಳಿಯುತ್ತಾರೆ.

ರೇವಣಸಿದ್ಧರು ಚೋಳದೇಶದ ಕಾಂಚಿಪುರದ ಏಕಾಮ್ರನಾಥನನ್ನು ಪೂಜಿಸಿ ಪಿಣ್ಣಾಂಕನೆಂಬ ನಾಮವನ್ನು ಪಡೆಯುತ್ತಾರೆ. ಶಿವಕಂಚಿಯಲ್ಲಿ ಕೆಲವು ದಿನಗಳು ಕಳೆದು, ಸಂಚಾರದಲ್ಲಿ ಏಕಾಂಗಿಯಾಗಿ ಮೈಗೆ ಒಂದು ಹೊದಿಕೆಯನ್ನು ಹೊದೆದು ಊರೂರ ಮರುಳರಂತೆ ಸಂಚರಿಸುವುದನ್ನು ಕವಿ ಹರಿಹರನು ಹೀಗೆ ಚಿತ್ರಿಸುತ್ತಾನೆ.

"ಪೊರ್ದಿಯುಂ ಪೊರ್ದನೀ ಜಗವ ಸಂಸಾರವಂ
ಸಾರ್ದು ಸಾರಂ ನೋಡ ಭವಕುಲದ ಭಾರಮಂ
...............................................
...............................................
...............................................
ಆ ಪುರಕೆ ಪಿಣ್ಣಾಂಕನೆಂಬ ನಾಮಂ ಸಂದು
ಪಾಪಹರನಲ್ಲಿ ಕೆಲವುಂ ದಿವಸವಿರಲಂದು"[೬೮]

ಪಿಣ್ಣಾಂಕನೆಂಬ ಹೆಸರನ್ನು ಪಡೆದ ರೇವಣಸಿದ್ಧರಿಂದಲೇ ಆ ಊರಿಗೆ ಈಗಲೂ ಪಿಣ್ಣಾಕ ಊರ್ ಎಂಬುದು ಇರುವುದಾಗಿ ತಿಳಿದುಬಂದಿದೆ.

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

“ಈ ಪ್ರದೇಶದಲ್ಲಿ ಈತನ ಭಕ್ತರು ಇರುವುದಾಗಿ ಕಂಡು ಬರುತ್ತದೆ. ಅಲ್ಲದೆ ಹೆಗ್ಗಾಣಿಗರ ಭಕ್ತಿಗೆ ಆಕರವಾದ ಗುರುವಾಗಿರಬೇಕು. ಕಂಚಿಯಲ್ಲಿ ಗುರು-ಶಿಷ್ಯತನ ಪ್ರಾರಂಭವಾಗಿರಬಹುದೆಂದು ಊಹಿಸಬಹುದಾಗಿದೆ.”[೨]

ವಿಷ್ಣುವಿನ ಭಕ್ತನಾದ ಚೋಳ ಅರಸನು ಕಂಚಿಯಲ್ಲಿ ತನ್ನ ಆರಾಧ್ಯದೈವವಾದ ವಿಷ್ಣು ಪ್ರತಿಮೆಯು ಅಲ್ಲಾಡುತ್ತದೆ. ಅದನ್ನು ನಿಲ್ಲಿಸಲು ಸಾಧ್ಯವಾಗದೆ ಮುಖವು ಬಾಡಿ ಮನಸ್ಸು ವ್ಯಾಕುಲಗೊಂಡು ತಾಪದಲ್ಲಿರುವಾಗ ಮೃಡನನ್ನು ಮೊರೆಹೋಗದೆ ಕಾರ್ಯವಾಗಲಾರದು ಎಂದು ಮನದಲ್ಲಿ ನಿರ್ಧರಿಸುತ್ತಾನೆ. ಆಗ ಕನಸಿನಲ್ಲಿ ಏಕಾಮ್ರನಾಥನು ಚೋಳ ಅರಸನಿಗೆ ಪಿಣ್ಯಾಂಕನನ್ನು ಕರೆತರುವಂತೆ ಅರಹುತ್ತಾನೆ. ಆಗ ಅರಸನು ಪಿಣ್ಣಾಂಕನನ್ನು ಕರೆತರಲು ಚಾರರರನ್ನು ಕಳುಹಿಸುವನು. ಆದರೆ ರೇವಣಸಿದ್ಧರು ಬಾರದೆ ಇದ್ದಾಗ ಚೋಳ ಅರಸನೇ ಬಂದು ಕರೆದುಕೊಂಡು ಹೋಗುತ್ತಾನೆ. ಸಿದ್ಧರೇವಣನು ಬರುವದನ್ನು ಕವಿ ಹರಿಹರನು ಹೀಗೆ ವರ್ಣಿಸುತ್ತಾನೆ.

“ಲಾಕುಳವ ಲಾಕ್ಷಣಿತನಮ್ಮಮ್ಮ ಬರುತಿರ್ದ
ಆಕಸ್ಮಿಕಂ ಮರುಳನಂತು ನಡತರುತಿರ್ದ
ಇಂತು ವಿಷ್ಣುಗೃಹದ ಕಾಣ್ಕೆಗೊಲವಿಂ ಬಂದು
ಅಂತಲ್ಲಿ ಚೋಳಸಹಿತಿಬ್ಬರೇ ನಿಂದಂದು.”[೭೦]

052073

ರೇವಣಸಿದ್ಧರು ಹೀಗೆ ಬಂದು ಅರಸನಿಗೆ ಹೇಸದಿರು ಹೇಸಿದರೆ ನುಡಿಯಿಲ್ಲ ಪ್ರತಿಮೆಗೆ ಎನ್ನುತ್ತ ತನ್ನ ಪುಲ್ಲಿಂಗಕ್ಕೆ ಕೈಯನ್ನು ನೀಡಿ ವೀರ್ಯವನ್ನು ಪ್ರತಿಮೆ ಅಲ್ಲಾಡುವಲ್ಲಿ ಲೇಪಿಸಿ ನಿಲ್ಲಿಸುವನು. ಆ ಕಾರಣಕ್ಕೆ ‘ಅರಳಾಳ್ ಪೆರುಮಾಳ್ ಎಂಬ ಹೆಸರು ರೂಢಿಯಲ್ಲಿ ಕರೆಯಲ್ಪಟ್ಟಿತು. ಮುಂದೆ ರೇವಣಸಿದ್ಧರು ಚೋಳದೇಶದಿಂದ ಉತ್ತರ ದಿಶಾಭಾಗದ ಮಾಸನೂರಿಗೆ ಪ್ರಯಾಣಿಸುತ್ತಾರೆ.

ಮಾಸನೂರಿನ ಹೊರಗಿದ್ದ ಶಿವಲಾಯದೊಳಗೆ ಬಂದು ರಂಗಮಂಟಪದ ನಡುವೆ ಸಾಧುವೇಷದಿಂದ ರೇವಣಸಿದ್ಧರು ಕುಳಿತುಕೊಳ್ಳುವರು. ಅಲ್ಲಿಯ ಪೂಜಾರಿಯು ಬಂದು ಆತನನ್ನು ಕಂಡು -

‘ಹಂಗನ್ನಡ’ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

“ಎಲೆ ಸಿದ್ಧಾ, ಇಲ್ಲಿ ಏಕಿರ್ಪೆಯಾ
ಶಿವಾಲಯದ ಮುಂದಣ ವೃಕ್ಷದ್ವಯ
ದೊಳಿರ್ದ ಕಾರಣಿಕಂಗಳಪ್ಪ ತಗಣುಗಳೆರಡರಿದಿಲ್ಲಿ ಪಟ್ಟಿರ್ದ
ದೇಶಾಂತ್ರಿಗಳ್ ತಲಂಬರ್ ಮಡಿರಿಲ್ಲಿರದಿರೆಂದು
ಪೇಳುತ್ತ ..........................” [೭೧]

ಪೂಜಾರಿಯು ವೃಕ್ಷದ್ವಯಗಳಲ್ಲಿಯ ಕಾರಣಿಕ ತಗಣಿಗಳು ಅಲ್ಲಿ ತಂಗಿದ್ದವರನ್ನು ಕೊಂದಿರು

ವುದು ಅಲ್ಲಿರಕೂಡದೆಂದು ಹೇಳಿ ಪುರಕ್ಕೆ ಹೊರಡುವನು. ಆದರೆ ನಿರುಪಮ ಸಿದ್ಧನಾಥ ದಯಾಮೇರು, ತ್ರಿಕಾಲದರ್ಶಿಯಾದ ರೇವಣಸಿದ್ಧರು ತನ್ನ ಮನದಲ್ಲಿಯೇ ನೆನೆದು ರಾಕ್ಷಸ ಮಿಥುನಗಳು ಶಾಪಗ್ರಸ್ಥ ವಾಗಿರುವುದು ಪ್ರಾಣಿವಧೆಯನ್ನು ನಿಲ್ಲಿಸಿ ಅದಕ್ಕೆ ಇತ್ಯರ್ಥವನ್ನು ಮಾಡಬೇಕೆಂದು ನಿರ್ಣಯಿಸುವರು.

ರಾತ್ರಿಯಲ್ಲಿ ತಗಣಿಗಳೆರಡು ಗಳಗಳನೆ ಇಳಿದು ರೇವಣಸಿದ್ಧರನ್ನು ನೋಡಿ ಪುನಃ ಮರವನ್ನೇರು ವಾಗಲೆ ಅಪ್ರತಿಮ ಸಿದ್ಧರೇವಣನು ಅವುಗಳನ್ನು ಉರಿಗಣ್ಣಿನಿಂದ ನೋಡುತ್ತಾನೆ. ಆತನ ಬಿಸುಗಣ್ಣಿನ ಬೆಂಕಿಯಿಂದ ತಗಣಿಗಳೆರಡು ಬೆಂದು ಗುಂಡುಗಳಾಗುತ್ತವೆ. ಅವುಗಳನ್ನು ಕಮ್ಮಾರನ ಕೈಗೆ ಕೊಡುತ್ತಾರೆ. ಕಮ್ಮಾರನು ಹೆಣ್ಣು ಗುಂಡಿನಿಂದ ಒಂದು ಕಠಾರಿಯನ್ನು ಮಾಡುತ್ತಾನೆ. ಆದರೆ ಇನ್ನೊಂದು ಗಂಡು ಗುಂಡು ಕಾಸಿದರೂ ಕಡಿದರೂ, ಬಡಿದರೂ ಏನೂ ಪರಿಣಾಮವಾಗದೆ ಇರುತ್ತದೆ. ಅದೇ ಸಂದರ್ಭದಲ್ಲಿ ಆ ಮನೆಯ ಮುಂದೆ ಒಬ್ಬನು ಮಾಂಸವನ್ನು ಹಿಡಿದುಕೊಂಡು ಹೋಗುವಾಗ ಅದನ್ನು ಕಂಡು ಗಂಡು ಗುಂಡು ಹಿಗ್ಗುತ್ತದೆ. ಆಗ ಕಮ್ಮಾರನು ಮತ್ತೆ ಮಾಂಸವನ್ನು ತೋರಿಸುತ್ತಲೆ ಹಿಗ್ಗುತ್ತದೆ. ಆಗ ಪುನಃ ಪುನಃ ತೋರಿಸುತ್ತಿರುವಾಗಲೆ ಅದು ಚಾಚುತ್ತದೆ, ಚಾಚಿದಂತೆ ಅಲಗನ್ನು ಮಾಡುತ್ತಾನೆ. ಆದರೆ ಅದರ ಅಬ್ಬರಿಕೆಯನ್ನು ಕಂಡು ರೇವಣಸಿದ್ಧರು ಮಾಸನೂರಿನ ಕೆರೆಯಲ್ಲಿ ತುದಿ ಕೆಳಗೆ ಮಾಡಿ ಇರಿಸುತ್ತಾರೆ. ಹೀಗೆ ಪ್ರಯಾಣಿಸಿದ ರೇವಣಸಿದ್ಧರು ಮುಂದೆ ಜಯಂತಿಪುರಕ್ಕೆ ಪ್ರಯಾಣಿಸುವರು. ಆಗ ವಿಕ್ರಮಾ ದಿತ್ಯದನ ಆತಿಥ್ಯವನ್ನು ಸ್ವೀಕರಿಸುವ ಸನ್ನಿವೇಶ ಹರಿಹರನ ರಗಳೆಯಲ್ಲಿ ಹೀಗೆ ಚಿತ್ರಿತವಾಗಿದೆ.

> "ವಿಕ್ರಮಾದಿತ್ಯಂ ಕಂಡಿದಿರದ್ದು ಬಂದು
> ಪೊಡಮಟ್ಟು ಪ್ರೇಮದಿಂ ಕಯ್ಗೊಟ್ಟು ತಂದು
> ಸಿಂಹಾಸನದೊಳ್ವಿಜಯಂಗೆಯ್ದಿ ಶ್ರೀಪದಂ ತೊಳೆದು
> ...............................................
> ಬಂದಕಾರಣವೇನೆಂದು ಭಿನ್ನೈಸೆ, ರೇವಣಸಿದ್ಧಂ
> ತನ್ನ ಕೈಯ ಕಠಾರಿಯಂ ತೋರಿಸುತಂತಿಡುವ
> ಡೆ ದಿವ್ಯವಸ್ತ್ರಂ ತೊಡುವಡೆ ನವ್ಯಾಭರಣಂ
> ಉಂಬಡೆ ಮೃಷ್ಟಾನ್ನಂ ಏರುವಡೆ ವಾಹನಂ
> ಕೂಡುವಡೆ ದೇವಾಂಗನೆ ಕಾದುವಡೆ ನಿಶಿತಾಯುಧ
> ಮಪ್ಪುದಿಂತಿದಂ ಕುಡುಲ್ಬಂದೆವೆನುತಾ
> ಕಠಾರಿಯಂ ಕರುಣಿಸಿ ಕೊಟ್ಟಿಲ್ಲಿಂ ನೆಗೆದು ......"[೭೨]

ಹೀಗೆ ರೇವಣಸಿದ್ಧರು ಕಠಾರಿಯನ್ನು ವಿಕ್ರಮಾದಿತ್ಯನಿಗೆ ಕೊಟ್ಟು ಮುಂದೆ ಕಲ್ಯಾಣಕ್ಕೆ ಬರುತ್ತಾರೆ. ಕಲ್ಯಾಣದ ಕಲ್ಲಿಶೆಟ್ಟಿಯ ಗಾಣದ ಕೊಟ್ಟಿಗೆಗೆ ಮುಗಿಲ ಮರೆಯ ಸೂರ್ಯನಂತೆ ಮಾಸಿದ ಪರಷದಂತೆ ಮೈಯ ಮಣಿಕಿನ ಪ್ರವಾಸಿಗನಾಗಿ, ದೇಶಿಕನಂತೆ ಬರುತ್ತಾರೆ. ಕಲ್ಲಿಶೆಟ್ಟಿಗೆ, ಆತನ ಹೆಂಡತಿಗೆ ಮತ್ತು

ಎತ್ತಿಗೆ ಒಂದೊಂದೆ ಕಣ್ಣು ಪಡೆದವರಾಗಿದ್ದು, ದಾರಿದ್ರ್ಯವು ಆತನ ಮನೆಯಲ್ಲಿ ಮನೆ ಮಾಡಿ ಕೊಂಡಿತ್ತು. ಆಗ ರೇವಣಸಿದ್ಧನು ಆತನ ದಾರಿದ್ರ್ಯ ನಿವಾರಿಸಲು ಗಾಣ ತಿರುಗಿಸುವ ನೆವದಿಂದ ಕೆಲವು ದಿನಗಳು ಅಲ್ಲಿಯೇ ಕಳೆಯುತ್ತಾನೆ.

ಮಂಗಳಕನಾದ ರೇವಣಸಿದ್ಧನ ಸಂಗದಿಂದ ಕಲ್ಲಿಶೆಟ್ಟಿಯ ದಾರಿದ್ರ್ಯವು ಹರಿದು ಹೋಗುತ್ತದೆ ಹಾಗೂ ದೃಷ್ಟಿಯು ಬಂದು ಎಲ್ಲರಿಗೂ ಕಣ್ಣು ಕಾಣುತ್ತವೆ. ಆಗ ಆಶ್ಚರ್ಯಚಕಿತನಾಗಿ ಕಲ್ಲಿಶೆಟ್ಟಿಯು ಗಾಣದ ಕೊಟ್ಟಿಗೆಯ ಬಳಿಬಂದು ನೋಡುತ್ತಾನೆ. ಆ ಕಾರಣಿಕ ಪುರುಷನ ಇರುವಿಕೆಯನ್ನು ಹರಿಹರನು ಹೀಗೆ ಚಿತ್ರಿಸುತ್ತಾನೆ.

> "ಕೊಟ್ಟಿಗೆಯ ಧವಾಳರನ ಕತ್ತರಿ ವಲಗೆಯ
> ಸಿರಿಮಂಚದ ಮೇಲೆಣ್ಣೆ ಬತ್ತಿಯ ಹಂಗಿಲ್ಲದ
> ಬೆಳಗಿನೊಳು ದಿವ್ಯಾಂಗನೆಯರಿಂ ಪದತಳಮನೊತ್ತಿಸಿ
> ಕೊಳುತ್ತಿದ್ದ ನಿತ್ಯ ನಿಳಯನಂ ಕಂಡು ಕಲ್ಲಿಸೆಟ್ಟಿ ಕೌತು
> ಕಂ ಬಟ್ಟು ......................"[೭೩]

ಕರಣಾತರನೆ ನನ್ನನ್ನು ಕ್ಷಮಿಸೆಂದು ಅನನ್ಯ ಪರಿಯಲ್ಲಿ ಆಗ ರೇವಣಸಿದ್ಧನು ತವನಿಧಿಯನ್ನು ಕೊಟ್ಟು ಅಲ್ಲಿರದೆ ಮುಂದೆ ಮಂಗಳವಾಡಕ್ಕೆ ಸೂಳೆ ಮಾಯಿದೇವಿಯ ಮನೆಗೆ ಬರುತ್ತಾನೆ. ಆಕೆಯ ಮನೆಯಲ್ಲಿ ಕಂಬಿಯ ನೀರು ತಂದು ಶಿವನ ಬೆಸೆದವನಾಗಿರುವನು.

ಅದೇ ಸಂದರ್ಭದಲ್ಲಿ ವಿಭೀಷಣನು ವಿರುಪಾಕ್ಷ ಸಿದ್ಧನಾಗಿ ಮೂರುಕೋಟಿ ಲಿಂಗಗಳ ಪ್ರತಿಷ್ಠಾಪನೆಗಾಗಿ ಮಾಯಿದೇವಿಯ ಮನೆಗೆ ಬಂದು ರೇವಣಸಿದ್ಧರ ಮಹಿಮೆಯನ್ನು ಕಂಡು ಲಂಕೆಗೆ ಕರೆದುಕೊಂಡು ಹೋಗುವನು.

ರೇವಣಸಿದ್ಧರು ಲಂಕೆಗೆ ವಿಭಿಷಣನ ಸಹಿತ ನೆಗೆಯುವದನ್ನು ಕವಿ ಹರಿಹರನು ಕೊಡುವ ವರ್ಣನೆ ಹೀಗಿದೆ.

> "ಸಮುದ್ರ ಮಧ್ಯದ ಮತ್ಸ್ಯಕೇಶ್ವರನ
> ಸಮಕ್ಷಮದೊಳ್ ಮಾಡಿತೇ ಮಹೂರ್ತಮಾಗೆ
> ಮೂರುಕೋಟಿ ಶಿವಲಿಂಗ ಪ್ರತಿಷ್ಠೆಯಂ ಮಾಡಿ
> ಮಜ್ಜನ ಪೂಜೆಯಾರೋಗಣೆ ಜನಾದಿಗಳಂ
> ಕುಂದಲಾಗಲೆಂದು ವಿಭೀಷಣಂಗೆ ನಿಯಾಮಿಸಿ
> ಆತಂಗೆ ಬೀಳ್ಕೊಟ್ಟು ............"[೭೪]

ರೇವಣಸಿದ್ಧರು ಶಿವಲಿಂಗವನ್ನು ಪ್ರತಿಷ್ಠಾಪಿಸಿದ ನಂತರ ದ್ರಾವಿಡ ದೇಶಕ್ಕೆ ಆಗಮಿಸುವರು.

ಚೇರ, ಕೇರಳ, ತುಳುವ, ಮಲೆಯಾಳ, ಮಾಳವ, ತೆಲುಗು, ಕೊಂಕಣ, ಕರ್ನಾಟಕ, ಕಾಶ್ಮೀರ, ಕಳಿಂಗ, ವಂಗ, ಬಂಗಾಳಿ, ಲಾಳ, ಗೌಳ, ಗುರ್ಜರ ದೇಶಗಳನ್ನೆಲ್ಲಾ ಸಂಚರಿಸುತ್ತ ಪುನಃ ಮಂಗಳವಾಡಕ್ಕೆ ಬರುತ್ತಾರೆ.

ಬಿಜ್ಜಳನ ಸಭೆಗೆ ರೇವಣಸಿದ್ಧರು ಭಿಕ್ಷೆಕ್ಕೆ ಬರುವರು. ಕುದಿಯುವ ಓಗರವನ್ನು ಬಿಜ್ಜಳನು ಕೈಯಲ್ಲಿ ನೀಡಿಸುತ್ತಾನೆ. ಸದಮಳ ಸಿದ್ಧರೇವಣನು ಕಂಭಕ್ಕೆ ಕೈ ಒರಿಸಲು ಅರಮನೆಯು ಸುಟ್ಟು ಬಿಜ್ಜಳನ ಗರ್ವಭಂಗವಾಗುತ್ತದೆ. ಮುಂದೆ ಕೊಲ್ಲಾಪುರಕ್ಕೆ ಪ್ರಯಾಣಿಸಿ ಗೋರಖನಾಥನನ್ನು ಗೆದ್ದು ವಾರಣಾಸಿಗೆ ಹೊರಡುವನು.

ಕೊಲ್ಲಾಪುರದಲ್ಲಿ ತನ್ನ ಮಹಿಮೆ ತೋರಿಸಿದ ಸಿದ್ಧರೇವಣನು ಮಂಗಳವಾಡವನ್ನು ಆಳುತ್ತಿದ್ದ ಬಿಜ್ಜಳನಲ್ಲಿಗೆ ಬರುವನು. ಆಗ ಬಿಜ್ಜಳನು ಮಾಸನೂರಿನ ಮಡುವಿನಲ್ಲಿರಿಸಿದ್ದ ಕತ್ತಿಗಾಗಿ ಸಹಸ್ರ ಹೊನ್ನಕೊಡುವುದಾಗಿ ಪ್ರಕಟಿಸುತ್ತಾನೆ. ಖರ್ಪಟನೆಂಬ ಕುಟಿಲನು ಬಿಜ್ಜಳನನ್ನು ತನ್ನ ಕುಹಕಕ್ಕೆ ವಶಮಾಡಿ ಹನ್ನೆರಡು ಸಾವಿರ ಕನ್ನೆಯರನ್ನು ಬಲಿ ಕೊಡಲು ನಿರ್ಧರಿಸುತ್ತಾನೆ. ಹನ್ನೆರಡು ಸಾವಿರ ಕನ್ನೆಯರಿಗೆ ಒಬ್ಬಳು ಕಡಿಮೆಯಾಗಲು, ಮಾಯಿದೇವಿಯ ಪುತ್ರಿ ರೇವಣದೇವಿಯನ್ನು ಬಲಿಯಾಗಲು ನಿಯಮಿಸುವರು. ಆಗ ಮಾಯಿದೇವಿಯು ರೇವಣಸಿದ್ಧನನ್ನು ಸ್ಮರಿಸುತ್ತಾಳೆ. ಆ ಕ್ಷಣವೇ ಸಿದ್ಧನು ಬಂದು ಬಿಜ್ಜಳನಿಗೆ.

"ಸ್ತ್ರೀವಧೆಯುಮಪಕೀರ್ತಿಯುಂ ಸಾರ್ದುದಗ್ಗದಗ್ಗಳಂ
ಬಿಡು ಬಿಡೆಂದಾ ಕುಮಾರಿಯರೆಲ್ಲರಂ ಬಿಡಿಸಿ
ನಡೆ ನಿನಗೆ ಸುರಗಿದಲೊರುವೆನೆಂದೊಡಂಬಡಿಸಿ
..................................
ಸುರಗಿದ್ದಲ್ಲಿಗೆ ನಡೆ ಬಂದು
..................................
ಉಲಿದು ಪಲ್ಮೊರೆದು ಗರ್ಜಿಸುತಲಗುಮಿಗೆ ಹೊಳೆಯೆ
..................................
ನೃಪತಿ ನೋಡು ನೋಡೆಯ ತೆಗೆವುತಿದೆ
ಐದು ಪೆಡೆಗಳನುಳ ಹಾವಾಗಿ ಭುಸ್ಸೆನಲು
........... ಬಿಡು ಬಿಡುದೇವ........."[೭೫]

ಖಡ್ಗವನ್ನು ಅಲ್ಲಿಯೆ ಇರಿಸೆಂದು ಬೇಡುವ ಬಿಜ್ಜಳನನ್ನು ಕಂಡು ಸಿದ್ಧನು ನಕ್ಕು ಗಜವನ್ನೇರಿ ಪುರಕ್ಕೆ ಬರುತ್ತಾನೆ. ಮುಂದೆ ಬಿಜ್ಜಳನು ತನ್ನ ಮಗಳು ರೇವಣದೇವಿಯನ್ನು ಬಿಜ್ಜಳನಿಗೆ ಕೊಟ್ಟು ಮದುವೆ ಮಾಡಿಸಿ ಮುಂದೆ ದಕ್ಷಿಣ ದೇಶವಾದ ಚೋಳದೇಶಕ್ಕೆ ಹೋಗುವನು. ಚೋಳ

ರಾಜಕುಮಾರಿಯನ್ನು ವರಿಸಿಕೊಂಡು ಚೋಳ ಅರಸನಿಂದ ವಂದಿಸಿಕೊಂಡು ಬಳುವಳಿ, ಚದುರಂಗ ಸಮೇತ ಹೊರುಡುತ್ತಾನೆ. ಆ ದೇಶದ ಹಲವು ಶಿವಪುರಗಳನ್ನು ನೋಡುತ್ತ ಚೇರ, ಮಲೆಯಾಳ, ಗೌಳಗುರ್ಜರ, ನೇಪಾಳ ದೇಶಗಳ ರಾಜಕುಮಾರಿಯರನ್ನು ವಿವಾಹವಾಗುತ್ತಾನೆ. ಅಲ್ಲದೆ ಅನೇಕ ತಟಾಕಗಳನ್ನು ಶಿವಾಲಯಗಳನ್ನು ಕಟ್ಟಿಸುತ್ತಾ, ಛತ್ರಗಳನ್ನು ನಿರ್ಮಿಸಿ ಕುರಡರಿಗೆ ಕಣ್ಣುಗಳನ್ನು, ಹೆಳವರಿಗೆ ಕಾಲುಗಳನ್ನು ಬಂಜೆಯರಿಗೆ ಮಕ್ಕಳನ್ನು ರಾಜ್ಯವನ್ನು ಕಳೆದುಕೊಂಡ ಅರಸುಮಕ್ಕಳಿಗೆ ರಾಜ್ಯವನ್ನು ಕೊಡಿಸುತ್ತಾ ಬಡವರಿಗೆ ಸಂಪತ್ತನ್ನು ನೀಡುತ್ತ ರೇವಣಸಿದ್ಧರು ಪುಣ್ಯಲೀಲೆಗಳನ್ನು ಅಲಂಕರಿಸಿಕೊಂಡು ಜಗಕ್ಕೆ ಕಲ್ಯಾಣವನ್ನು ನೀಡುತ್ತ ಬರುತ್ತಾರೆ. ಇಂತಹ ಸಾಂಸ್ಕೃತಿಕ ಕಾರ್ಯದಲ್ಲಿ ತೊಡಗಿರುವ ರೇವಣಸಿದ್ಧರು ಮಂಗಳವಾಡದ ಹೊರವಲಯದಲ್ಲಿ ತಟಾಕವನ್ನು ಕಟ್ಟಿಸುವ ರೀತಿಯನ್ನು ಹರಿಹರ ತುಂಬಾ ಸುಂದರವಾಗಿ ಹೇಳುತ್ತಾನೆ. ಧರ್ಮವನ್ನೇ ಬಿತ್ತುವಂತೆ ಗುದ್ದಲಿಯನ್ನು ಹಿಡಿದು ರೇವಣಸಿದ್ಧನ ಹೆಂಡತಿಯರೆಲ್ಲರೂ ಕೆಲಸದಲ್ಲಿ ತೊಡಗಿರುವಾಗ ಗರ್ಭಿಣಿಯಾದ ಚೋಳ ರಾಜಕುಮಾರಿ ಮಣ್ಣು ಹೊರಲು ವಿರೋಧಿಸುತ್ತಾಳೆ. ಆಗ ರೇವಣಸಿದ್ಧರು ತಮ್ಮ ಒಡವೆಯನ್ನು ಕೊಟ್ಟು ಹೋಗೆಂದು ಆಕೆಯನ್ನು ಕೇಳುತ್ತಾರೆ.

"ರೇವಣಸಿದ್ಧಂ ತನ್ನ ಕರತಳದಿಂದಾಲಲನೆಯ
ಪಣ್ನೊದರಮನೊಯ್ಯನೆ ತಡವೆ ಪುಣ್ಯದುದುಳಿ
ಬೀಳ್ವಂತೆ ಬಾಲಕಿಯ ಗರ್ಭ ಭೋಂಕನೆ ಬೀಳೆ
ಮುಂಕುಣಿಸಿ ತೆಗೆದು ಶಂಕರನಂ ನೆನೆದು .......
........... ಜ್ಞಾನನಿಧಾನಮಂ ಚಿತ್ರಭೂಮಿಯೊಳ್ಪಂಯಿತಿ
ಡುವಂತೆ ಬಯಿತಿಡೆ, ತಾಯ ಗರ್ಭದಿಂ ನೂರ್ಮಡಿ
ರಕ್ಷೆಯಾಗಿರೆ ............"[೭೭]

ಮುಂದೆ ರುದ್ರಮುನಿಯ ಜನನಕ್ಕೆ ನಾಂದಿಯಾಗುವುದು. ರುದ್ರಮುನಿ ಹುಟ್ಟಿದ ನಂತರ ರೇವಣಸಿದ್ಧರು ತನ್ನ ಅರಸಿಯರಲ್ಲಿ ಪುಣ್ಯವತಿಯ ಕೈಗೆ ಮಗುವನ್ನು ಒಪ್ಪಿಸುವರು. ಆ ಬಾಲಕನ ಎಂಟನೆಯ ವರ್ಷಕ್ಕೆ ಬರಲು, ಶೈವೋಪದೇಶವನ್ನು ರೇವಣಸಿದ್ಧರು ತಾವೇ ಕರುಣಿಸಿ ಪರಶಿವ ಸ್ವರೂಪಜ್ಞಾನ ಭೋದೆಯನ್ನು ಬೆಸಸಿ ಮಂಗಳವಾಡದಲ್ಲಿ ಇದ್ದು ಪುನಃ ತಮ್ಮ ಪ್ರಯಾಣವನ್ನು ಮುಂದುವರಿಸುತ್ತ ಸಕಲ ದೇಶಗಳ ಸಖನಂತೆ ಶಶಿಯ ಸಿರಿಯಂತೆ, ಸುಧೆಯಂತೆ ಸುಳಿದನು. ಮುಂದೆ ಕಳಿಂಗಕ್ಕೆ ಹೊರಟು, ಹಾವಿನಾಳ ಗ್ರಾಮಕ್ಕೆ ಬರುತ್ತಾರೆ.

ಹಾವಿನಾಳು ಗ್ರಾಮದಲ್ಲಿ ಗುರುವಿನ ಪಾದಕಮಲಕ್ಕೆ ಬಯಸಿ ಪ್ರೀತಿಯಿಂದ ನೆನೆಯುತ್ತಿರುವ ಸಂದರ್ಭದಲ್ಲಿ ಗುರು ರೇವಣರು ಆಗಮಿಸುತ್ತಾರೆ. ಆಗ ಹಾವಿನಾಳು ಕಲ್ಲಯ್ಯನು ಪುಳಕಿತಗೊಂಡು ಗುರುವಿನ ಪಾದಕ್ಕೆ ನಮಿಸಿ ಸದ್ಗತಿಯನ್ನು ತೋರಿಸೆಂದು ಮಣಿಯುತ್ತಾನೆ. ಆಗ ರೇವಣಸಿದ್ಧರು

ಕಲ್ಲಯ್ಯನಿಗೆ -

"ಏಳಯ್ಯ ಕಲ್ಲಯ್ಯ ನಿನಗೆ ಲೇಸಕ್ಕುಮೆನೆ
ಏಳಯ್ಯ ನಿನ್ನಯ ಮನೋರಥವನೀವೆನೆನೆ
ಏಳ್ದು ಕೈಮುಗಿದಿರ್ದ ಕಲ್ಲಯ್ಯನಂಕಂಡು
ತಾಳ್ದು ಕಾರಣ್ಯಮಂ ಭಕ್ತಿಗೆ ಮನಂಗೊಂಡ
ರುದ್ರಮುನಿದೇವರಿಂ ಕರುಣೆಮಂ ಮಾಡಿಸುತೆ
ರುದ್ರ ನಣುಗಂ ಶೈವದೀಕ್ಷೆಯಂ ನೀಡಿಸುತೇ"[೬]

ಹೀಗೆ ರುದ್ರಮುನಿಯು ಕಲ್ಲಯ್ಯನಿಗೆ ದೀಕ್ಷೆ ಕೊಟ್ಟ ನಂತರ ಸೊಲ್ಲಾಪುರಕ್ಕೆ ಪುತ್ರ ರುದ್ರಮುನಿಯ ಜೊತೆ ನಡೆದು ಬರುವನು. ಮುದ್ದಾಗೌಡನ ಮನೆಗೆ ಬಂದು ಭಿಕ್ಷೆಯನ್ನು ಕೇಳುವನು. ಸುಗ್ಗವ್ವೆಯನ್ನು ನೋಡಿ ಆಕೆಯ ಪುಣ್ಯೋದರದಲ್ಲಿ ಕಾರಣಿಕ ಪುರುಷನು ಜನಿಸುವನೆಂದು ಚಾಮಲೆಗೆ ಅರುಹಿ, ಶಾಂತನಾಗಿ ಶಶಿ ಬಂದಂತೆ, ಅಂಬರದ ತಳಕೆ ಶಾಂತ ರವಿಯಂತೆ ನೆಗೆದನು. ಮುಂದೆ ತೀರ್ಥ ಕ್ಷೇತ್ರಗಳನ್ನು ಹೊಕ್ಕು ಸೊಗಯಿಸುವ ಲಿಂಗಗಳನ್ನು ನೋಡುತ್ತ, ಶಿವಭಕ್ತರಿಗೆ ಸುಖಗಳನ್ನು ನೀಡುತ್ತ, ಬಂದು ಗಗನದಲ್ಲಿ ನಡೆ ತಂದು ಕೊಲ್ಲಿಪಾಕಕ್ಕೆ ಬರುತ್ತಾನೆ. ಅಲ್ಲಿಯ ಸೋಮೇಶ್ವರ ಲಿಂಗದಲ್ಲಿ ಐಕ್ಯನಾಗುವನು.

ಹೀಗೆ ರೇವಣಸಿದ್ಧರ ಲೋಕಪರ್ಯಾಟನವು ಕೊಲ್ಲಿಪಾಕಿಯಿಂದ ಪ್ರಾರಂಭಿಸಿ ಅಲ್ಲಿಗೆ ಬಂದು ಮುಗಿಸುವುದನ್ನು ಹರಿಹರನು ಹೇಳುತ್ತಾನೆ.

ಹರಿಹರನಂತೆ ರೇವಣಸಿದ್ಧರ ಲೋಕಪರ್ಯಾಟನೆಯನ್ನು ತನ್ನ ರೇವಣಸಿದ್ಧೇಶ್ವರ ಪುರಾಣದಲ್ಲಿ ಚತುರ್ಮುಖ ಬೊಮ್ಮರಸ ಮಾಡಿಸಿದ್ದಾನೆ. ಆದರೆ ಕವಿ ಮಲ್ಲಣ್ಣನು ರೇವಣಸಿದ್ದೇಶ್ವರ ಕಾವ್ಯದಲ್ಲಿ ಇವರಿಬ್ಬರಿಗಿಂತ ಭಿನ್ನವಾಗಿ ವರ್ಣಿತವಾಗಿದೆ.

ಕೈಲಾಸದಲ್ಲಿ ನಾರದನು ಮರ್ತ್ಯಲೋಕದಲ್ಲಿ ಶ್ರೀಮಂತರು ಬಡವರನ್ನು ಕಡೆಗಣಿಸಿ ಆಳುತ್ತಿರುವರು ಎನ್ನುವ ವಿಷಯವನ್ನು ಶಿವನಿಗೆ ಅರಹಲು, ಶಿವನೇ ಮೂಲೋಕವನ್ನು ನೋಡಬೇಕೆಂದು ಸಿದ್ಧರೇವಣನಾಗಿ ಜುಟ್ಟೂರು ಪಟ್ಟಣದಲ್ಲಿ ಆಚೆಗೊಂಡ, ಅವನ ಹೆಂಡತಿ ಬನದವ್ವೆಯ ಮನೆಗೆ ಬರುತ್ತಾರೆ. ಹಸಿದ ರೇವಣಸಿದ್ಧರಿಗೆ ಅಂಬಲಿಯನ್ನು ಉಣಲಿಕ್ಕೆ ಕೊಡುವರು. ಅಂಬಲಿಯ ಉಂಡ ರೇವಣನು ಆಚೆಗೊಂಡನ ಹೊಲದ ಕೆಲಸವನ್ನು ಕೈಗೊಳ್ಳುವನು. ಆತನ ಒಕ್ಕಲುತನಕ್ಕೆ ದೇವತೆಗಳಲ್ಲರೂ ನೆರವಾಗುವರು. ಕವಿ ಮಲ್ಲಣ್ಣನು ಬೇಸಾಯದ ಚಿತ್ರವನ್ನು ಹೀಗೆ ಕೊಡುವನು.

"ರೇವಣಸಿದ್ಧಯ್ಯ ಹರಗುತ
ದೇವಗಣ ತಿಂತಿಣಿಯ ಕರೆಸಿದ
ದೇವತೆಯರಿಗೆ ಕೊರಡು ಕಾಸಿಗೆ ಗದ್ದೆಗಳ ಸವರಿರಿ

ದೇವ ಮಾನವರೊಬ್ಬಳಿಕ್ಕುತೆ
ರಾಹುಯಮ ವಿಧಿ ಮುಳ್ಳನಾವುತ
ದೇವಕಿಯ ನಂದನನು ಬಂದು ನೇಗಿಲವ ಪಿಡಿದು"[೬೮]

ಹೊಲವನ್ನು ಹದಗೊಳಿಸುತ್ತಿದ್ದರೆ ಬ್ರಹ್ಮ, ವಿಷ್ಣು, ರುದ್ರ, ಪಾರ್ವತಿ ದಶದಿಕ್ಕುಗಳು ಇಂದ್ರಾದಿಗಳು ರೇವಣನ ಒಕ್ಕಲುತನದಲ್ಲಿ ಸೇವೆಯನ್ನು ಮಾಡುತ್ತಿದ್ದಾರೆ. ಆಚೆಗೊಂಡನ ಹೊಲದಲ್ಲಿ ಸಂಪತ್ತು, ಸಂಮೃದ್ಧಿ ಏರಿ ಬರುತ್ತದೆ. ಆಗ ಅಲ್ಲಿದ್ದ ಎಲ್ಲಾ ಜನತೆಗೆ ತಣಿಸಿ ರೇವಣಸಿದ್ಧರು ಪ್ರಯಾಣಿಸುತ್ತಾರೆ. ಮುಂದೆ ಕಲ್ಯಾಣಕ್ಕೆ ಹೊರಡುವ ಮಾರ್ಗದಲ್ಲಿ ಮರುಗು, ಮಲ್ಲಿಗೆ, ಜಾಜಿ, ಇರುವಂತಿಗೆ, ಸೇವಂತಿಗೆ, ದಾಳಿಂಬೆ, ಸುರಭಿ, ಹೊನ್ನೆ ಸರೋವರ ತಾವರೆಗಳನ್ನು ನೋಡುತ್ತ ನವಿಲು, ಕೋಗಿಲೆ, ಹಂಸಗಳು, ತುಂಬಿಗಳ ಚೆಲುವನ್ನು ಆಸ್ವಾದಿಸುತ್ತ ಮುಂದೆ ದುರ್ಗ ಕೋಟೆ ಕೊತ್ತಳಗಳನ್ನು ನೋಡುತ್ತ ಬರುತ್ತಿರುವಾಗ ಮುಂದೆ ಏಳುನೂರಿಪ್ಪತ್ತು ಜಂಗಮರು ಬಸವಭಕ್ತಿಯನ್ನು ಕಂಡರು. ವೇಶ್ಯೆಯರ ಬಡವಿ ಮಹಾದೇವಿಯ ಮನೆಗೆ ಬರುತ್ತಾರೆ. ಆಕೆಯ ಉದ್ಧಾರಕ್ಕಾಗಿ ನೊಸಲಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಯನ್ನು ಧರಿಸಿ ವಿಟ ಪುರುಷನಾಗಿ ಕಾಣುತ್ತಾನೆ. ಆಗ ಆಕೆ ಹರುಷದಿಂದ ಕರವಿಡಿದು ಚರಣಕ್ಕೆರಗಿ ಒಳಗೆ ಕರೆಯೊಯ್ದು ಉಪಚರಿಸುವಳು.

ರೇವಣಸಿದ್ಧನು ಆ ಮನೆಯಲ್ಲಿ ನೆಲೆಸಲು ಅವರ ಬಡತನ ಹರಿದು ಸಿರಿವಂತಿಕೆ ಹೆಚ್ಚಿದುದನ್ನು ಕವಿ ಮಲ್ಲಣ್ಣನು ಹೀಗೆ ಚಿತ್ರಿಸುತ್ತಾನೆ.

"ಹೊರಸು ಬೆಳ್ಳಿಯ ಮಂಚವಾಯಿತು
ಮುರಿದ ಮನೆ ಉಪ್ಪರಿಗೆಯಾಯಿತು
ಭರವ ಪ್ರಾಯಗಳಾಗೆ ಮಹಾದೇವಿಯರ ಅಂಗದಲಿ
ಪರುಷ ಮುಟ್ಟಲು ಕಬ್ಬಿಣಂಗಳು
ಬೆರಸಿ ಸುವರ್ಣಗಳಾದ ಪರಿಯಲಿ
ಕರುಣಿ ಪ್ರಿಯನು ಮಾಡಿ ಕೃಪೆಯನು ಬೆಳಗಳಾದಿವಸ"[೬೯]

ಹೀಗೆ ಶ್ರೀಮಂತಿಕೆಯನ್ನು ಸೃಷ್ಟಿಸಿ ಬಡತನವನ್ನು ಹೋಗಲಾಡಿಸಿ ಮುಂದೆ ಸಾಗುತ್ತಾರೆ. ಮುಂದೆ ರೇವಣಸಿದ್ಧರು ಗಾಣಿಗರ ಓಣಿಯಲ್ಲಿ ಸಂಚರಿಸುತ್ತ ಕಡುಬಡವನಾದ ಗಾಣಿಗ ಕಲ್ಲಿಶೆಟ್ಟಿಯಲ್ಲಿಗೆ ಬರುತ್ತಾರೆ. ಆಗ ಕಲ್ಲಿಶೆಟ್ಟಿಯು ರೇವಣಸಿದ್ಧರಿಗೆ ಯಾರೆಂದು ಪರಿಚಯವನ್ನು ಕೇಳಲು, ಹಿಂಡಿಯ ರೇವಣನೆಂದು ತಾನು ಗಾಣದ ಕೆಲಸಕ್ಕೆ ನೆರವಾಗುವನೆಂದ ಹೇಳುತ್ತಾನೆ. ರಾಜ ಬೀದಿಯಲ್ಲಿ ಕಲ್ಲಿಶೆಟ್ಟಿಯ ಎತ್ತು ಬಿದ್ದಿರುವಾಗ ಯಾವ ಗಾಣಿಗರು ಸಹಾಯ ಮಾಡಲು ಮುಂದಾಗದೆ ಹಾಗೂ ತಮ್ಮ ವೇಳೆ ಹಾಳಾಗುವದೆಂದು ಜರೆಯುವರು. ಆದರೆ ರೇವಣಸಿದ್ಧನು ಎತ್ತನ್ನು ಎಬ್ಬಿಸಿ ಮನೆಗೆ ಬಂದು ರಾತ್ರಿಯಲ್ಲಿ ಗಾಣ ಹೊಡೆಯುವುದಕ್ಕೆ ಸಹಾಯ ಮಾಡುತ್ತಾರೆ. ಕಲ್ಲಿಶೆಟ್ಟಿ ಹಿಂಡಿರೇವಯ್ಯನನ್ನು ನೋಡಲು

ಬರುತ್ತಾನೆ ದಿಕ್ಪಾಲಕರು ಬ್ರಹ್ಮ, ವಿಷ್ಣು, ಪಾರ್ವತಿ, ಗಂಗೆಯರು ಚಿತ್ರ ತುಂಬುರ ನಾರದರು ಗೀತೆ ಹಾಡುತ್ತ ನಿಂತಿರುವರು. ಈ ಮೃಡನ ಒಡ್ಡೋಲಗವನ್ನು ನೋಡಿ ಹೊತ್ತು ಹೋಗುತ್ತಲೆ ಒಬ್ಬೊಬ್ಬರು ಹೊರಡಲು ಸಿದ್ಧ ರೇವಣನ ಚರಣವನ್ನು ಹಿಡಿಯುವನು. ಆಗ ಗುರುಸಿದ್ಧ ತಾನು ಬಂದ ಕಾರಣವನ್ನು ಹೀಗೆ ಹೇಳುತ್ತಾನೆ.

“ಬಾಳ ಬಡವರು ಎಂದು ನಿಮಗೆಯು
ಆಳುತನದಲಿ ಸಲಹ ಬಂದೆನು
ಹೇಳದಿರಿ ಪರರೊಡನೆ ನಾನಿರೆ ಎಂದು ಗುರುಸಿದ್ಧ
ಏಳುನೂರಾ ಕಲ್ಲಗಾಣವು
ಏಳುನೂರಾ ಮರದಗಾಣವು
ಆಳ ಮಾಡಿಯು ಅವರನೊಮ್ಮೆಯು ನಿನ್ನ ದೊರೆ ಮಾಡಿ”[೮೦]

ಎಂದು ತನ್ನ ಇರುವಿಕೆಯನ್ನು ಅರಿತ ಕಲ್ಲಶೆಟ್ಟಿಗೆ ಸಂಪತ್ತು ನೀಡಿ ಸಿದ್ಧರೇವಣನು ದೇಶ ದೇಶವನು ತಿರುಗಿ ಬಡವರೆಲ್ಲರಿಗೆ ಲೇಸು ಮಾಡುತ ಘಾಸಿ ಮಾಡಿದವರಿಗೆ ಪ್ರತಿಯಾಗಿ ಈಶನಾಥ ರೇವಣನು ಮಂಗಳವಾಡಿಗೆ ಬರುತ್ತಾರೆ. ಬಿಜ್ಜಳನ ಓಲಗದಲ್ಲಿ ಬಂದು ಹಸಿದಿದ್ದೇನೆ ಭಿಕ್ಷೆಯನ್ನು ನೀಡೆಂದು ಕೇಳಲು ಬಿಜ್ಜಳನು ಕುದಿಯುವ ಹುಗ್ಗಿಯನ್ನು ಸಿದ್ಧನ ಕರಗಳಿಗೆ ನೀಡುತ್ತಾರೆ. ಆದರೆ ಕರಗಳನ್ನು ಹೊಳೆಯುವ ಕಂಭಗಳಿಗೆ ಒರೆಸಲು ಕಿಚ್ಚು ಏಳುವದು. ಆಗ ರೇವಣಸಿದ್ಧನು ಅಗ್ನಿಗೆ ಆಜ್ಞೆ ಮಾಡುತ್ತಾನೆ.

“ಚಾವಡಿಯ ಉರಿ ಕೊಳಲು ರಾಯನ
ಸಾವಿರದ ಪ್ರಧಾನರೆಲ್ಲರು
ತಾವು ಒಳಯಕೆ ಓಡಿ ಹೋದರ ಕೊತ್ತಳವಸೇ
ವಾಯು ಅಗ್ನಿಗೆ ಬೆಸನ ಕೊಟ್ಟನು
ರೇವಣಸಿದ್ಧಯ್ಯ ನಗುತಲಿ
ಜಾವ ನಾಲ್ಕಕೆ ಪಟ್ಟಣವು ನಿರ್ಧೂಮವಾಗುತಿದೆ.”[೮೧]

ಹೀಗೆ ಪಟ್ಟಣವೆಲ್ಲಾ ಉರಿದು ಬೆಂದು ಹೋಗುತ್ತದೆ. ಆಗ ಬಿಜ್ಜಳನ ಸತಿ ಸೋಮಲೆಯು ವಿಚಾರಿಸಿ ಕಾರಣ ತಿಳಿದು ಊರ ಹೊರಗಿನ ಸಿದ್ಧನಲ್ಲಿಗೆ ಬಂದು ಪ್ರಾರ್ಥಿಸುತ್ತಾಳೆ. ಆಗ ರೇವಣಸಿದ್ಧನು ‘ಮಗಳೆ ಬಿಸಿಯ ಹುಗ್ಗಿಯನ್ನು ಕೈಯಲ್ಲಿ ನೀಡಲು ಕಂಭಕ್ಕೆ ಒರಸಿದನು ಆ ಕಾರಣ ಸುಟ್ಟಿತು. ನೀನು ಏತಕ್ಕೆ ಬಂದಿರುವೆ? ಬಿಜ್ಜಳನನ್ನು ಕಳಿಸೆಂದು ಹೇಳುವನು. ಆತನ ಅಣತಿಯಂತೆ ಬಿಜ್ಜಳನು ಬಂದು ಮೊರೆ ಹೋಗುತ್ತಾನೆ. ಅಲ್ಲದೆ ಬಸವನಿಂದ ವಂದಿತನಾದ ರೇವಣಸಿದ್ಧನು ಮುಂದೆ ಪ್ರಯಾಣಿಸುವರು.

ರೇವಣಸಿದ್ಧರು ಸಗರ ನಾಡಿಗೆ ಬಂದು ಬೀಯಳ್ಳಿ ಸಿದ್ಧನ ಕುಟಿಲತೆಯನ್ನು ಕಂಡು ಬೆಳ್ಳಿಗುಂಡನ್ನಾಗಿ ಮಾಡಿ ಮುಂದೆ ದಿಲ್ಲಿಗೆ ಪ್ರಯಾಣಿಸುವನು. ಅಲ್ಲಿ ನರಭಕ್ಷಕನನ್ನು ಕಂಡು ಆತನಿಗೆ ಬುದ್ಧಿ ಕಲಿಸಿ, ನರಭಕ್ಷಕನಾಗದೆ ಫಲ ಭಕ್ಷಕನಾಗೆಂದು ವಿಭೂತಿಯನ್ನು ಕೊಂಡು, ಕೃಪೆ ತೋರಿಸಿ ಮುಂದೆ ವಿಷಸಾಗರ, ತಂಡಸಾಗರ ನೋಡುತ್ತ ಬರುತ್ತಾನೆ.

ಮುಂದೆ ಕವಿ ಮಲ್ಲಣ್ಣನು ಸಿದ್ಧರೇವಣನು ಸಂಚರಿಸಿದ ಪ್ರದೇಶಗಳನ್ನು ಹೀಗೆ ವಿವರಿಸುವನು.

"ಮರಳಿ ಎಲ್ಲವ ದಾಟಿ ಸಿದ್ಧನು
ತಿರುಗಿ ಬಂದನು ಓರಂಗಲ್ಲಿಗೆ
ಹಿರಿಯ ಪರ್ವತ ಗದಗು ಹಂಪೆಯು ಕಂಚಿಯನು ನೋಡಿ
ಹರಿಹರವ ಲೆಂಕಿಯಸಿ ಕಂಡನು
ಹರನು ತೋರಸಮುದ್ರ ಗೋವೆಯಂ
ಇರುವ ಕೊಂಕ ಸಪ್ತಸಾರರಗಳನು ನೋಡುತಲಿ"[೮೨]

ಹೀಗೆ ಓರಂಗಲ್ಲು ಗದಗ, ಹಂಪೆಯನ್ನು, ಬೆಳಗಾವಿಯ ಸಮೀಪವಿರುವ ಲೆಂಕಿ (ಲಕ್ಕವ್ವನತೊರೆ) ಮತ್ತು ಗೋವ ಕೊಂಕಣಿಯನ್ನು ಸುತ್ತಿದ ರೇವಣನು ಸಪ್ತಸಾಗರಗಳನ್ನು ದಾಟುತ್ತ ಚಾಕೂರಿಗೆ ನಡೆದು ಬರುತ್ತಾನೆ. ಅಲ್ಲಿ ಜಕ್ಕಲೆ ಎನ್ನುವ ಬಂಜೆಗೆ ವಿಭೂತಿಯನ್ನು ಕೊಟ್ಟು ಮಗುವಾಗುವಂತೆ ತನ್ನ ಹೆಸರಿಡುವಂತೆ ಹೇಳಿ ಮುಂದೆ ಪ್ರಯಾಣಿಸುತ್ತಾರೆ.

ರೇವಣಸಿದ್ಧರು ಮಾಸನೂರಿಗೆ ಬಂದು, ಅಲ್ಲಿ ಅಂಧಕಾಸುರನನ್ನು ಸಂಹರಿಸಿದ ಶಿವನ ತ್ರಿಶೂಲಕ್ಕೆ ಹತ್ತಿದ ಎರಡು ಬಿಸಿ ರಕ್ತದ ಹನಿಗಳಿಂದ ತಗಣೆಗಳಾಗಿದ್ದವು. ಅವುಗಳಿಗೆ ಶಿವನು ಮಾಸನೂರಿನ ಅಡವಿಯಲ್ಲಿರುವ ಬೊಪ್ಪಲೇಶ್ವರ ದೇವಾಲಯದ ಮುಂದಿರುವ ಬನ್ನಿ ಮರದಲ್ಲಿ ಆಶ್ರಯಿಸುವಂತೆ ಹೇಳಿರುವನು. ಆದರೆ ಆ ತಗಣೆಗಳೆರಡು ಅಲ್ಲಿ ಬಂದ ಮನುಷ್ಯರನ್ನು ಹಿರಿಯ ಹಂದಿಗಳಂತೆ ಹಾಯ್ದು ರಕ್ತವನ್ನು ಹೀರಿ ಬಿಡುತ್ತಿದ್ದವು. ಆಗ ವೀರ ರೇವಣಸಿದ್ಧನು ಹತ್ತೆಂಟು ಬಂಡಿ ಕಟ್ಟಿಗೆ ತರಿಸಿ ಕಿಚ್ಚನು ಹೊತ್ತಿಸಿ ಸುಡುತ್ತಾನೆ. ಹಾಗೂ ಅವು ಸುಟ್ಟು ಎರಡು ಗಟ್ಟಿ ಗುಂಡುಗಳಾಗಿ ಸಿದ್ಧ ರೇವಣನ ಪಾದದ ಮುಂದೆ ಬೀಳಲು ಎರಡನ್ನು ಮೆಟ್ಟಿಕೊಂಡು ಕಮ್ಮಾರನಲ್ಲಿ ಇರುತ್ತಾನೆ. ಕಮ್ಮಾರನಿಗೆ ಸುರಗಿಗಳನ್ನು ಮಾಡುವಂತೆ ಹೇಳುತ್ತಾನೆ. ಗುಂಡುಗಳನ್ನು ಎಷ್ಟೇ ಕಾಸಿ ಬಡಿದರೂ ಅದು ಚಾಚದೆ ಇರುವಾಗ ಗೌರಿಪೂಜೆಗೆಂದು ಕೊಡಗೂಸೊಂದು ದಾಸವಾಳದ ಹೂವನ್ನು ತೆಗೆದುಕೊಂಡು ಹೋಗುವಾಗ ಅದನ್ನು ನೋಡಿ ಗುಂಡು ಮಾಂಸವೆಂದು ತಿಳಿದು ಮುಂದೆ ಚಾಚುವದು. ಆಗ ಕಮ್ಮಾರನು ತಕ್ಷಣವೇ ಕಾಸಿ ಕಾಸಿ ಬಡಿದು ಸುರಗಿಗಳನ್ನಾಗಿ ಮಾಡುವನು. ನಂತರ ಅವು ನೀರಿನ ಮಡುವಿಗೆ ಹರಿದು ಹೋದವು. ಇತ್ತ ರೇವಣಸಿದ್ಧನು ಮಾಸನೂರಿನ ಮಡುವು ದಾಟುವುದಕ್ಕಾಗಿ ಅಂಬಿಗರ ಭೂತಯ್ಯನನ್ನು ಹರಿಗೋಲಿನಲ್ಲಿ ದಾಟಿಸುವಂತೆ ಕೇಳಿಕೊಳ್ಳುತ್ತಾನೆ. ಆದರೆ ಅಂಬಿಗನು ಕೋಪದಲ್ಲಿ

"ಕೊಳಲಿಲ ಕೊಡಲಿಲ್ಲ ಜಂಗಮ
ಒಳಗೆ ಬರಬೇಡೆಂದು ಬೈದನು
ಎಳೆದು ಹರಿಗೋಲುಗಳ ತೆಗೆದನು
ಸೆಳೆದನು ಹುಟ್ಟಿನಲಿ"[೮೩]

ಆಗ ರೇವಣಸಿದ್ಧನು ನೀರಿಗೆ ತನ್ನ ಕಂಥೆಯನ್ನೆ ಹಾಸಿ ಲಾಕುಳವನ್ನೆ ಹುಟ್ಟು ಮಾಡಿ ಅದರ ಮೇಲೆ ಕುಳಿತು ಪಡುವಣ ದಿಕ್ಕಿನಡೆ ಸಾಗುತ್ತಾನೆ. ಮಡುವಿನಲ್ಲಿಯ ಕನ್ನಿಕೆಯರಿಬ್ಬರು ಬಂದು ಹರಿವಾಣದಿಂದ ಆರತಿ ಎತ್ತಿ ಕೇಳಿಕೊಳ್ಳುತ್ತಾರೆ. ಆಗ ರೇವಣನು ಸುರಗಿ ಕನ್ಯಾಕುಮಾರಿಯರಿಗೆ ದುರ್ಗಿಯ ಕೃಪೆಯನ್ನು ಕೇಳಬೇಕೆಂದು ಹೇಳುತ್ತಾನೆ. ಮತ್ತು ದುರ್ಗಿಯ ಕೃಪೆಯ ನಂತರ -

"..... ಮುಟ್ಟಬಾರದು ಸುರಗಿಯನು ನರ
ಮನುಜ ದೈವಗಳು
ನಟ್ಟ ನಡುವೆಯ ಜಲದ ಮಧ್ಯದಿ
ಇಟ್ಟನಾತನು ......"[೮೪]

ರೇವಣಸಿದ್ಧರು ಮುಂದೆ ಹೋಗಲು ಎಡಬಲಕ್ಕೆ ಇದ್ದ ಜನವೆಲ್ಲಾ ಹಾಗೂ ಅಂಬಿಗರ ಭೂತಯ್ಯನು ಶರಣೆಂದು ತ್ರಾಹಿ ತ್ರಾಹಿ ಎನುತ ಪರುಷ ಸಿದ್ಧನೆಯ ನಮಿಸಿದರು. ಬಿಜ್ಜಳನಿಗೆ ವಿಷಯವು ತಿಳಿಯುತ್ತದೆ. ಆಗ ಸುರಗಿಯನ್ನು ಬಯಸುವನು. ಅಲ್ಲದೆ ನೀರೊಳಗಿರುವ ಸುರಗಿಗಳನ್ನು ತಂದುಕೊಟ್ಟವರಿಗೆ ಅರ್ಧ ರಾಜ್ಯವನ್ನು ಕೊಡುತ್ತೇನೆ ಎಂದು ಸಾರುವನು. ಆಗ ಗೋರಖನಾಥನೆಂಬ ಜೋಗಿಯು ಸಾವಿರ ಕನ್ನೆಯರನ್ನು ಬಲಿ ಕೊಟ್ಟರೆ ಸುರಗಿಗಳು ವಶವಾಗುತ್ತವೆ ಎಂದು ಹೇಳುತ್ತಾನೆ. ತಕ್ಷಣವೇ ಎಡ ಬಲ ದೇಶಗಳಾದ ತೆಲುಗು, ಮಲೆಯಾಳ, ಕೊಂಕಣೆ, ತೆಂಕಣ, ಗೋವ, ದಿಲ್ಲಿಯಿಂದ ಕೊಡಗೂಸುಗಳನ್ನು ಹಾಗೂ ಕಲ್ಯಾಣರಾಜ್ಯದಿಂದ, ಸಗರ, ಓರಂಗಲ್ಲಿನ ಬ್ರಾಹ್ಮಣ, ಕೋಮಟಿಗರ ಕನ್ನೆಯರನು ಕೊಡವಿಕೊಂಡು ತಂದರು. ಆದರೆ ಸಾವಿರದೊಳಗೊಂದು ಕಡಿಮೆಯಾಗಲು ಚಾಕೂರಿನ ಜಕ್ಕವ್ವೆಯ ಮಗಳನ್ನು ಎಳೆದುಕೊಂಡು ಬರುತ್ತಾರೆ. ಆಗ ಜಕ್ಕವ್ವೆ ಎಂಬಾಕೆ ರೇವಣಸಿದ್ಧರನ್ನು ಪ್ರಾರ್ಥಿಸಿಕೊಳ್ಳವಳು. ಆಗ ಸಿದ್ಧರು ಬಂದು -

ನಡೆದು ಬಂದೆರಗಿದರೆ ಸಿದ್ಧನು
ತೊಡೆಯ ಮೇಲೆ ಕುಳ್ಳಿಸುತಲಿ
ಪಿಡಿದು ಭಸ್ಮವ ಕೊಟ್ಟು ಮಂಡೆಯ ಮೇಲೆ ಕೈಯಿಟ್ಟ
ಎಡಬಂದ ಜನರೆಲ್ಲ ಕೈಗಳ
ಒಡನೆ ಮುಗಿವುತ ಸುರಗಿ ನೀರಿನ ನಡುವೆ ಘೂರ್ಮಿಸುತ"[೮೫]

ಬೆಂಕಿಯನ್ನು ಉಗುಳುತ್ತಿರುವ ಸುರಗಿಯನ್ನು ಕಂಡು ಅಲ್ಲಿ ನೆರೆದ ಜನತೆ, ಅರಸುಮಂತ್ರಿಗಳ ಸಹಿತ ಬಾಯಿ ಒಣಗಿ ಕೈಕಾಲು ನಡುಗಿ ಹಮ್ಮೈಸಿದರು. ಸಿದ್ಧನು ಸುರಗಿಯನ್ನು ಕೊಡಲು ಬಂದಾಗ ಒಲ್ಲೆವೆಂದು ದೂರ ಸರಿದರು. ಆಗ ರೇವಣಸಿದ್ಧರು ತಮ್ಮ ಮಗಳನ್ನು ಕರೆದುಕೊಂಡು ಮಡುವಿನಲ್ಲಿ ಸುರಿಗೆಗಳನ್ನು ಇರಿಸಿ ಬರುತ್ತಾನೆ. ಸಾವಿರ ಕನ್ನೆಯರನ್ನು ಅವರವರ ಮಾತ - ಪಿತ್ರರನ್ನು ಸೇರುವಂತೆ ಮಾಡಿ ಜಕ್ಕವ್ವೆಯ ಮಗಳನ್ನು ರಾಯನ ಜೊತೆ ಮದುವೆ ಮಾಡಿಸಿದನು.

ಹರಿಹರನ ರಗಳೆಯಲ್ಲಿ ರೇವಣಸಿದ್ಧರು ಮಾಡುವ ಲೋಕ ಪರ್ಯಟನವು ಕವಿ ಮಲ್ಲಯ್ಯ ರೇವಣಸಿದ್ಧೇಶ್ವರ ಕಾವ್ಯದಲ್ಲಿಯ ಲೋಕ ಪರ್ಯಟನವು ಅಲ್ಪಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಸಮಾಜಸೇವೆ, ಸಮಾಜಕಲ್ಯಾಣ, ಸಮಾಜವನ್ನು ಸುಭಿಕ್ಷವಾಗಿಡುವ ಗುರಿಯು ಒಂದೇ ರೀತಿಯಾಗಿ ಕಂಡು ಬರುತ್ತವೆ. ಕೆಲವು ಘಟನೆಗಳಲ್ಲಿ ವ್ಯತ್ಯಾಸವು ಕಂಡುಬಂದರೂ ಆತನ ವ್ಯಕ್ತಿತ್ವವನ್ನು ಕಟ್ಟಿಕೊಡುವುದರಲ್ಲಿ ಇಬ್ಬರಲ್ಲೂ ಸಾಮ್ಯತೆ ಕಂಡುಬರುತ್ತದೆ.

ಹೀಗೆ ರೇವಣಸಿದ್ಧರ ಲೋಕಪರ್ಯಾಟನವು ಕಾವ್ಯ ಪುರಾಣಗಳಲ್ಲಿ ತುಂಬಾ ವ್ಯಾಪಕವಾಗಿ ಚಿತ್ರಿತಗೊಂಡಿದೆ. ಇದನ್ನು ನೋಡಿದರೆ ದಕ್ಷಿಣಭಾರತವನ್ನಲ್ಲದೆ ದೆಹಲಿ ಮುಂತಾದ ಉತ್ತರ ಭಾರತದವರೆಗೂ ಇವರ ಸಂಚಾರವನ್ನು ಕಾಣಬಹುದಾಗಿದೆ.

ರೇವಣಸಿದ್ಧರ ಲೋಕ ಸಂಚಾರದಲ್ಲಿ ಅವರಿಗೆ ಎದುರಾದ ವ್ಯಕ್ತಿಗಳು ಸಾಮಾನ್ಯರಾಗಿರಲಿಲ್ಲ. ಸಿದ್ಧರಲ್ಲಿ ಗೋರಖನಾಥ ರಾಜರುಗಳಲ್ಲಿ ಬಿಜ್ಜಳ, ರಾಜರಾಜೇಂದ್ರ ಚೋಳ ಮೊದಲಾದವರೊಂದಿಗೆ ಸಂಘರ್ಷಕಿಟ್ಟು ಸತ್ಯವನ್ನು ಮೆರೆಯುವ ಘಟನೆಗಳು ರೋಮಾಂಚನಕಾರಿಯಾಗಿವೆ. ಅಡ್ಡ ಹಾದಿಯ ಭೈರಾಗಿಗಳನ್ನು ಸದೆ ಬಡೆಯುವ ಅಪರೂಪದವರನ್ನು ತಿದ್ದುವ, ದುರುಳನ್ನು ಶಿಕ್ಷಿಸುವ ಈ ಗುಣಗಳ ಜೊತೆಗೆ ಸಾಮಾನ್ಯ ಕುಟುಂಬಗಳಲ್ಲಿ ಸಾಮಾನ್ಯನಾಗಿ ಆತ ಹೊಕ್ಕು ಬಳಸುವ ರೀತಿ ಆತನ ಮಾನವೀಯ ಅಂತಃಕರಣದ ನಿದರ್ಶನವಾಗಿದೆ. ಬಾಗಿದ ಭಕ್ತರ ಮನೆಗೆ ನೀರು ಹೊರಬಲ್ಲ ರೇವಣಸಿದ್ಧನನ್ನು ಅರ್ಥಮಾಡಿಕೊಳ್ಳದೆ ಸೆಣಸಿದರೆ ಒಡಲಿಂದ ಕಠಾರಿಯನ್ನು ಕಕ್ಕಿಸಬಲ್ಲ ಅವಿರಳ ಸಿದ್ಧ ಎಂಬುದು ಆತನ ಒಟ್ಟು ಲೋಕಸಂಚಾರಿ ಜೀವನದಿಂದ ವ್ಯಕ್ತವಾಗುತ್ತದೆ.

ಹರಿಹರ, ಬೊಮ್ಮರಸರ ಕಾವ್ಯಗಳಲ್ಲಿ ಉಲ್ಲೇಖವಾಗಿರುವ ಘಟನೆಗಳನ್ನು, ಪ್ರದೇಶಗಳನ್ನು, ಶಾಸನಗಳ ಹಿನ್ನೆಲೆಯಲ್ಲಿ ತುಲನೆ ಮಾಡಿ ನೋಡಿದರೆ ಚಾರಿತ್ರಿಕ ಕೆಲವು ಅಂಶಗಳು ತಿಳಿದು ಬರುತ್ತವೆ. ಅಲ್ಲದೆ ಕೆಲವು ವಿದ್ವಾಂಸರ ಅಭಿಪ್ರಾಯಗಳು ಉಲ್ಲೇಖವಾಗುತ್ತವೆ.

ಮಲಯಾಚಲದಲ್ಲಿ ರೇವಣಸಿದ್ಧರು ಅಗಸ್ತ್ಯರನ್ನು ಕಂಡು ಶಿವತತ್ವಗಳನ್ನು ಉಪದೇಶಿಸುವ ಸಂದರ್ಭದಲ್ಲಿ ಅಗಸ್ತ್ಯನ ವಿಷಯದಲ್ಲಿ ವಾದಗಳು ಕಂಡುಬರುತ್ತವೆ. ಅಗಸ್ತ್ಯರ ವಿಷಯವಾಗಿ ಅವರು ರಾಮಾಯಣ, ಮಹಾಭಾರತದ ಕಾಲದಲ್ಲಿಯ ಅಗಸ್ತ್ಯರಾಗಿರಬೇಕೆಂದು ತಿಳಿಯಲಾಗಿತ್ತು. ಆದರೆ

ಹನ್ನೆರಡನೆಯ ಶತಮಾನದ ಶರಣರ ಕಾಲದಲ್ಲಿ ಅಗಸ್ತ್ಯರೊಬ್ಬರೊಡನೆ ರೇವಣಸಿದ್ಧರು ಅನೇಕ ವಿಷಯಗಳನ್ನು ಕುರಿತು ಚರ್ಚಿಸಿರುವುದಾಗಿ ಎಂದು ಕೆಲವು ವಿದ್ವಾಂಸರು ತಿಳಿಸಿದ್ದಾರೆ.

ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರು "ಬಳ್ಳಾರಿ ಗೆಜೆಟಿಯರ್ ಪುಟ ೩೩೨ ಚಿಕ್ಕನಾಯಕನ ಹಳ್ಳಿ ೧೪ನೇ ಶಾಸನ ಅಗಸ್ತ್ಯ ಕಥಾಸಂಗ್ರಹ ಎಂಬ ಕಲಶಮಹಾತ್ಮ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (ಸಂಪುಟ ೨೭, ಪುಟ ೧೭೪-೧೮೮), ಶ್ರೀಕರ ಬಾಷ್ಯ, ಕುಕನೂರಿನ ಶಾಸನ (ಕ್ರಿ.ಶ. ೧೧೭೦)ಗಳ ಆಧಾರದಿಂದ ಆರು ಜನ ಅಗಸ್ತ್ಯರ ಉಲ್ಲೇಖವಿರುವುದನ್ನು ತೋರಿಸಿ ಇವರಲ್ಲಿ ಒಬ್ಬನಿರಬಹುದೆಂಬ ಅಭಿಪ್ರಾಯಕ್ಕೆ ಬಂದಿರುವುದನ್ನು ಶ್ರೀ ಚೆನ್ನಮಲ್ಲಿಕಾರ್ಜುನರು ತಮ್ಮ ಕೃತಿಯಲ್ಲಿ ಚರ್ಚಿಸಿ, ಜೋಯಿಸರು ಅಭಿಪ್ರಾಯ ಪಟ್ಟಂತೆ ರೇವಣಸಿದ್ಧರಿಗೂ, ಅಗಸ್ತ್ಯರಿಗೂ ಸಂಬಂಧವಿರದ ದಾಖಲೆಗಳೆಂದು" ಸ್ಪಷ್ಟಪಡಿಸುತ್ತಾರೆ. ಮುಂದುವರೆದು ಕುಕನೂರ ಮಲ್ಲಿಕಾರ್ಜುನ ದೇವಾಲಯದ ಶಾಸನದಲ್ಲಿ (೧೧೭೦) 'ಅಗಸ್ತ್ಯಕುಲತಿಲಕ' ಎಂದಿದೆ.

ಅಗಸ್ತ್ಯರ ವಿಷಯದಲ್ಲಿ ಶಾಸನಗಳು ಹಾಗೂ ಚಾರಿತ್ರಿಕ ಹಿನ್ನೆಲೆಗಳ ಮೂಲಕ ತಮ್ಮ ಅಭಿಪ್ರಾಯವನ್ನು ಹೀಗೆ ಹೇಳುತ್ತಾರೆ.

"ಅಗಸ್ತ್ಯ ಹೆಸರಿನ ಋಷಿಗಳು ಅಂದಿನ ಅಗಸ್ತ್ಯರಂತೆಯೇ ಮಹಿಮೆಯುಳ್ಳವರಾಗಿದ್ದರು ಎಂಬುದಕ್ಕೆ ಆಧಾರಗಳಿವೆ. ಅದೇ ರೀತಿ ಮಲಯ ಪರ್ವತ ಅಂದರೆ ಮೈಸೂರಿನ ನೆಲಮನೆ ಅಥವಾ ಮಲಯ ಪರ್ವತ ಅಥವಾ ಮಲಾಯಾಚಲ ಬೆಟ್ಟದಲ್ಲಿ ಅಗಸ್ತ್ಯರು ವಾಸಿಸಿದ್ದರೆಂದು ದಾಖಲೆಗಳಿಂದ ತಿಳಿಯಬಹುದಾಗಿದೆ. ಅವರೇ ಬೆಳಗಾವಿಯ ಮುನವಳ್ಳಿ ಸಮೀಪದ ಹುಲಿ ಪ್ರದೇಶದವರೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಇದೇ ವಾದವನ್ನು ಎಂ.ಎಸ್.ಭೈರವನಟ್ಟಿ ಅವರು ಒಪ್ಪಿಕೊಳ್ಳುತ್ತಾರೆ. ಹಾವೇರಿಯ ಸಿದ್ದೇಶ್ವರ ಗುಡಿಯ ಮುಂಭಾಗದಲ್ಲಿರುವ ಶಿಲಾಶಾಸನವೊಂದು ಇವರೀರ್ವರ ಸಂಬಂಧವನ್ನು ಹೀಗೆ ಉಲ್ಲೇಖಿಸುತ್ತದೆ.

"..... ತತು ಪಾದ ಪದ್ಮಾರಾಧರಿಂ ಸಿದ್ದಪಯ್ಯ ದಂಡನಾಯಕರ
ಮಹಿಮೋನ್ನತಿಯೆಂತೆಂದಡೆ ಒಂದನೆ ಕೇಳಗಸ್ತ್ಯಮುನಿ
ಪುಂಗವರಿರ್ದ್ದಡೆ ಯೆತ್ತಲತ್ತಲುಂ ........"[೮೬]

"ಬಿಜ್ಜಳನ ಮಗನಾದ ರಾಯಮುರಾರಿ ಸೋವಿದೇವನ ಆಶ್ರಯದಲ್ಲಿ ಸಿದ್ದಪದಂಡನಾಯಕನು ಅಗಸ್ತ್ಯಮುನಿಯಿದ್ದ ಕಡೆಯಲ್ಲೆಲ್ಲಾ ..... ಪ್ರಸಿದ್ಧವಾದ ರಾಜಸಭೆಯೊಳಗೆ ಈತನ ಮಾತೇ ಜಗಕ್ಕೇ ಶಾಸನವು ಎಂಬ ಸಂಗತ ತಿಳಿಯುವುದರಿಂದ ಅವನ ಸಹವರ್ತನದಲ್ಲಿ ಅಗಸ್ತ್ಯರು ಇದ್ದಂತೆ ವ್ಯಕ್ತವಾಗುತ್ತವೆ. ಈ ಶಾಸನದ ಕಾಲ ಸು.ಕ್ರಿ.ಶ. ೧೧೭೨ ಇರಬಹುದು. ಸೋವಿದೇವನ ಆಳ್ವಿಕೆಯು ಕ್ರಿ.ಶ. ೧೧೬೮ ರಿಂದ ೧೧೭೬ ರವರೆಗೆ ಇದ್ದಿತು. ಆ ಸೋವಿದೇವನ ಮಗಳಾದ ಸುಲಕ್ಷಣೆಯನ್ನು

ಶ್ರೀ ರೇವಣಸಿದ್ಧರು ಮದುವೆಯಾದರೆಂದು ಸಿಂದಗಿ ಸಿದ್ದಪ್ಪನವರ 'ಶ್ರೀ ಬಸವೇಶ್ವರ ಚರಿತ್ರೆ' ಹೇಳುತ್ತದೆ. ಹೀಗೆ ಸೋವಿದೇವನ ಈ ಶಾಸನದ ಅಗಸ್ತ್ಯರೂ ಶ್ರೀ ರೇವಣಸಿದ್ಧರ ಸಮಕಾಲೀನವರೆಂದೂ ಅವರ ಸಹವರ್ತನದವರೆಂದೂ ಗೊತ್ತು ಮಾಡಬಹುದಾಗಿದೆ."[೮೭]

ಚೆನ್ನಮಲ್ಲಿಕಾರ್ಜುನ ಅವರ ಮತ್ತೊಂದು ಅಭಿಪ್ರಾಯ ಹೀಗಿದೆ.

"ಕಡೂರು ಜಿಲ್ಲೆಯ ಹಿರೇ ಮಗಳೂರು ಈಶ್ವರ ದೇವಸ್ಥಾನದ ಈಶಾನ್ಯ ದಿಕ್ಕಿನಲ್ಲಿಯ ಪ್ರತಿಮೆ ಆಧಾರವಾಗಿ ಕಾಣಬಹುದು. ಈ ದೇವಸ್ಥಾನದ ಈಶಾನ್ಯದಿಕ್ಕಿನಲ್ಲಿ 'ಜಡೆಮುನಿ' ಎಂದು ಕರೆಯಲ್ಪಡುವ ಒಂದು ಪ್ರತಿಮೆ ಇದೆ. ಈಚೀಗಿನ ಶೋಧನೆಯ ಪ್ರಕಾರ ಹೂಲಿ, ಮುನಿವಳ್ಳಿ, ನಂಜಾಪುರ, ಹಿರೇಮಗಳೂರು ಈ ನಾಲ್ಕು ಕಡೆಗಳಲ್ಲಿಯೂ ಜಡೆ, ಜಪಮಾಲೆ, ದೊಡ್ಡಮುಖ, ದಪ್ಪದೊಹ ದೊಡ್ಡ ಕಣ್ಣು ಇವುಗಳು ಸಾಮಾನ್ಯವಾಗಿ ಒಂದೇ ಸಮನಾಗಿ ಕಂಡು ಬರುತ್ತಿರುವುದರಿಂದ ಈ ಎಲ್ಲಾ ಕಡೆಗಳಲ್ಲಿದ್ದವನೂ ಒಬ್ಬನೆ ಜಡೆಮುನಿ ಎಂದೂ "ಜಡೆಮುನಿ" ಎಂಬುದಾಗಿ ಅವರ ಹೆಸರು ಆದ್ದರಿಂದ ಅಗಸ್ತ್ಯ ಎಂಬ ಹೆಸರು ಅವನಿಗಿರಬೇಕೆಂದು ಮೇಲಿನ ಎಲ್ಲಾ ಸಂಗತಿಗಳಿಂದ ನಿರ್ಧರಿಸಲಿಕ್ಕೆ ಬರುತ್ತದೆ. ಈ ಜಡೆಮುನಿಯ ಬಂಡೆಯ ಮೇಲೆ ರೇವಣಸಿದ್ಧರ ಹೆಸರಿನ ಬರವಣಿಗೆ ಇರುವುದರಿಂದ ಈ ಅಗಸ್ತ್ಯನಿಗೂ ರೇವಣಸಿದ್ಧರಿಗೂ ಸಂಬಂಧವಿತ್ತೆಂದು ಧಾರಾಳವಾಗಿ ಹೇಳಲು ಮಾನವೇನೂ ಬಾರದು."[೮೮]

ಒಟ್ಟಿನಲ್ಲಿ ಮೇಲಿನ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿ ರಾಮಾಯಣ ಮಹಾಭಾರತದ ಕಾಲದ ಅಗಸ್ತ್ಯರಾಗ ಆರು ಜನ ಅಗಸ್ತ್ಯರು ಕಂಡು ಬರುವಂತೆ ಅಭಿಪ್ರಾಯಿಸುತ್ತಾರೆ. ಆದ್ದರಿಂದ ಪ್ರಾಚೀನ ಅಗಸ್ತ್ಯರು ಬೇರೊಬ್ಬರಾಗಿದ್ದು ಕಾಲಾನುಕಾಲಕ್ಕೆ ಅಗಸ್ತ್ಯರೆಂಬ ಹೆಸರನ್ನು ಪಡೆದ ತಪಸ್ವಿಗಳು ಜ್ಞಾನಿಗಳು ಬೇರೆ ಬೇರೆಯಾಗಿದ್ದರೆಂದು ಹೇಳಬಹುದು. ರೇವಣಸಿದ್ಧರ ಕಾಲಕ್ಕೆ ಅಗಸ್ತ್ಯರೆಂಬ ಹೆಸರನ್ನು ಪಡೆದ ತಪಸ್ವಿಗಳು ಜ್ಞಾನಿಗಳು ಬೇರೆ ಬೇರೆಯಾಗಿದ್ದರೆಂದು ಹೇಳಬಹುದು. ರೇವಣಸಿದ್ಧರ ಕಾಲಕ್ಕೆ ಅಂದರೆ ಹನ್ನೆರಡನೆಯ ಶತಮಾನದ ಶರಣರ ಕಾಲಕ್ಕೆ ಒಬ್ಬ ಅಗಸ್ತ್ಯರು ಇದ್ದರು ಅವರು ಹೂಲಿ, ಹಿರಮಗಳೂರು, ಮುನವಳ್ಳಿ, ನಂಜಾಪುರ ಈ ಪ್ರದೇಶಗಳಲ್ಲಿ ಕಂಡುಬರುವ ದೊಡ್ಡ ಮುಖ ಜಡೆ, ದಪ್ಪ ಮುಖವನ್ನು ಹೊಂದಿರುವ 'ಜಡೆಮುನಿ ಎಂದು ಕರೆಯಲ್ಪಡುವ ಪ್ರತಿಮೆಯು ಇತ್ತೀಚಿನ ಶೋಧನೆಯ ಮೇರೆಗೆ ಅಗಸ್ತ್ಯ ಮುನಿಯಾಗಿರಬಹುದು ಎಂದು ನಿರ್ಧರಿಸಬಹುದಾಗಿದೆ.

ರೇವಣಸಿದ್ಧರು ಅಲ್ಲಾಡವ ಮೂರ್ತಿಯನ್ನು ನಿಲ್ಲಿಸಿದ ಪ್ರಸಂಗವೊಂದು ಕಂಚಿಯಲ್ಲಿ ನಡೆಯಿತೆಂದು ತಿಳಿಸುವ 'ಅರಳಾಳ್ ಪೆರುಮಾಳ್' ಕಾವ್ಯದ ಈ ಘಟನೆ ಎರಡನೆಯ ಚೋಳರಾಜೇಂದ್ರ ಕಾಲದಲ್ಲಿ ನಡೆಯಿತೆಂಬುದು ತಿಳಿದು ಬರುತ್ತದೆ. ಕಂಚಿಯ ವಿಷ್ಣುವಿನ ದೇವಸ್ಥಾನದ ಪ್ರಾಮುಖ್ಯತೆಯನ್ನು ಚೆನ್ನಮಲ್ಲಿಕಾರ್ಜುನರು ತಮ್ಮ ಸಂಶೋಧನೆಯಲ್ಲಿ ಬಳಸಿಕೊಂಡು ರೇವಣಸಿದ್ಧರು ಕಂಚಿಯಲ್ಲಿ ಪರ್ಯಟನೆಯಮಾಡಿದ್ದನ್ನು ಹೀಗೆ ಸಮರ್ಥಿಸಿಕೊಳ್ಳುತ್ತಾರೆ. ಪ್ರೊ. ಕೆ.ಎ.ನೀಲಕಂಠ

ಶಾಸ್ತ್ರಿಗಳು ರಚಿಸಿದ ಚೋಳರ ಚರಿತ್ರೆಯಂಬ ಕೃತಿಯಿಂದ ಅಲ್ಲಾಡುವ ವಿಷ್ಣುಮೂರ್ತಿಯನ್ನು ಭದ್ರಗೊಳಿಸಿದ ಮೇಲೆ ನರಲೋಕವೀರನು ಅಡುಗೆಮನೆ, ಪ್ರಾಕಾರ, ಮಂಟಪ ಹಾಗು ಬಂಗಾರದ ಶಿಖರ, ದತ್ತಿ ನೀಡಿರುವ ಶಾಸನಗಳನ್ನು ಆಧರಿಸಿ ಈತ ವಿಕ್ರಮಚೋಳನ ಸಹವರ್ತನದವನಾಗಿರಬೇಕು. ವಿಕ್ರಮ ಚೋಳನ ಕಾಲ ಕ್ರಿ.ಶ. ೧೧೧೮ ರಿಂದ ೧೧೩೩ ಹೀಗಾಗಿ ನರಲೋಕವೀರನು ಇದೇ ಕಾಲದವನಾಗಿರಬೇಕೆಂದು ತಿಳಿಸಿ ಅದೇ ಸರಿಸುಮಾರಿನಲ್ಲಿ ರೇವಣಸಿದ್ಧರು ಕಂಚಿಯಲ್ಲಿರಬೇಕೆಂದು ವಿಶ್ಲೇಷಿಸುತ್ತಾರೆ.[೮] ಅವರು ಮುಂದುವರಿದು ಅಲ್ಲಾಡುವ ಮೂರ್ತಿಗೆ ರೇವಣಸಿದ್ಧರು ವೀರ್ಯವನ್ನು ಲೇಪಿಸಿರುವ ಹಿಂದಿರುವ ತತ್ತ್ವವನ್ನು ಸಾದಾರಪೂರ್ವಕವಾಗಿ ಹೀಗೆ ವಿವೇಚಿಸುತ್ತಾರೆ.

"ಧಾರ್ಮಿಕವಾಗಿ ವಿಷ್ಣು ತತ್ವವು ಶಕ್ತಿ ಅಥವಾ ಸ್ತ್ರೀ ಸ್ವರೂಪ ಎಂದು ಭಾವಿಸಲ್ಪಟ್ಟಿರುವದು. ಅನೇಕ ಧರ್ಮಗ್ರಂಥಗಳಿಂದ ತಿಳಿದು ಬರುತ್ತದೆ. ಆದುದರಿಂದ ಈ ಪ್ರತಿಮೆಯ ಚಂಚಲವಾದುದನ್ನು ನೋಡಿ ಶಕ್ತಿ ಅಥವಾ ಸ್ತ್ರೀ ಚಂಚಲಕ್ಕೆ ಚೈತನ್ಯದ ಪುರುಷ ತತ್ವದ ಲೇಪನವಾಗಬೇಕೆಂಬ"[೯] ಅಭಿಪ್ರಾಯಕ್ಕೆ ಬರುತ್ತಾರೆ.

ಹರಿಹರ ಬೊಮ್ಮರಸರ ಕಾವ್ಯಗಳಲ್ಲಿ ಬರುವ ರೇವಣಸಿದ್ಧರ ತಗಣೆಗಳ ಸುಡುವ ಪ್ರಸಂಗದಲ್ಲಿ ಕಂಡುಬರುವ ಜಯಂತಿಪುರ ಹಾಗು ಉಜ್ಜಯಿನಿ ಎಂಬ ಊರುಗಳ ಕುರಿತು ವಿದ್ವಾಂಸರು ಐತಿಹಾಸಿಕವಾಗಿ ಬೆಳಕು ಚೆಲ್ಲುತ್ತಾರೆ. ಹೀಗಾಗಿ ರೇವಣಸಿದ್ಧರು ಉಜ್ಜಯಿನಿ, (ಅಂದರೆ ಈಗಿನ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಸಮೀಪದ ಉಜ್ಜಯಿನಿ ಜಯಂತಿಪುರವೆಂದು ಕರೆಸಿಕೊಳ್ಳುವ ಈಗಿನ ಬಳ್ಳಿಗಾಂವೆಗಳಲ್ಲಿ ಈತ ಸಂಚರಿಸಿರುವದನ್ನು ತಿಳಿಸುತ್ತಾರೆ.

ಹೀಗೆ ಬಸವಯುಗದಲ್ಲಿ ಅಲ್ಲಮಪ್ರಭುವಿನಂತೆ ಲೋಕಸಂಚರಿಸಿದ ರೇವಣಸಿದ್ಧರು ರಾಜರಿಗೆ ರಾಜನೀತಿ, ಅಸಹಾಯಕರಿಗೆ ಅಭಯಹಸ್ತ ಸಾಮಾಜಿಕ ಹಾಗು ಧಾರ್ಮಿಕ ನಿಷ್ಠೆಗಳಲ್ಲಿ ಶ್ರದ್ಧೆಯನ್ನು ಬೆಳೆಸಿ ಲೌಕಿಕ ಹಾಗೂ ಅಲೌಕಿಕ ಬದುಕಿನ ಸಾರ್ಥಕತೆಯನ್ನು ತಿಳಿಸಿದ ಭವರೋಗದ ವೈದ್ಯರೆನಿಸಿದ್ದ ರೇವಣಸಿದ್ಧರು ಲೋಕಪರ್ಯಟನೆ ಮಾಡಿರುವುದು ಈತನ ಒಂದು ಪ್ರವಾಸಕಥನದಂತೆ ಕಾವ್ಯಗಳಲ್ಲಿ ಮೂಡಿಬಂದಿದೆ.

## ೭. ವ್ಯಕ್ತಿತ್ವ

ದಕ್ಷಿಣದ ಕಾಶಿಯೆಂದು ಕರೆಯುತ್ತಿರುವ, ಅತಿ ಪ್ರಾಚೀನವಾದ ಪರಶಿವನ ಆಸ್ಥಾನವೆನಿಸಿದ ಕೊಲ್ಲಿಪಾಕಿಯು ಸರ್ವಧರ್ಮ ಸಿದ್ಧಾಂತಗಳ ನೆಲೆವೀಡಾಗಿತ್ತು. ಶ್ರೀ ರೇವಣಸಿದ್ಧರು ಸರ್ವಧರ್ಮಗಳನ್ನು ಅರಿತು, ಅಭ್ಯಾಸಿಸಿ ಅವುಗಳಲ್ಲಿಯ ಟೊಳ್ಳು-ಗಟ್ಟಿಯನ್ನು ಕಂಡುಕೊಂಡರು. ಸಕಲ ವೇದಶಾಸ್ತ್ರ, ಪುರಾಣ ಆಗಮಗಳನ್ನು ಅಭ್ಯಾಸಿಸಿದ ರೇವಣಸಿದ್ದರು ಶುದ್ಧ, ಶೈವ ಸಿದ್ಧಾಂತವನ್ನು ಪುನರ್ನಿರ್ಮಿಸಿ ಶಿವಾದ್ವೈತ ಸಿದ್ಧಾಂತವನ್ನು ನಾಡಿನಾದ್ಯಂತ ಹರಡಲು ಸಂಕಲ್ಪ ಮಾಡಿದರು. ಈ ಕಾರ್ಯಕ್ಕಾಗಿ ಅವರು ಕೊಲ್ಲಿಪಾಕಿಯ ಸೋಮೇಶ್ವರಲಿಂಗದ ಸಮಕ್ಷಮದಲ್ಲಿ ಶಿವದೀಕ್ಷೆಯನ್ನು ಪಡೆದುಕೊಂಡರು.

ಸಿದ್ಧಪುರುಷನಾಗಿ ಕೈಯಲ್ಲಿ ಲಾಕುಳ ಧರಿಸಿ ವಜ್ರ ಕುಂಡಲವನ್ನು ತೊಡಿಸಿಕೊಂಡು ಲಿಂಗದೊಳಗಿಂದ ಎದ್ದುಬಂದಂತೆ ಅನೇಕ ಮಂಗಳ ವಾದ್ಯಗಳೊಂದಿಗೆ "ಸಿದ್ಧ ರೇವಣ"ರೆಂಬ ನಾಮಕರಣದೊಂದಿಗೆ ರಾಜ ವೈಭವದ ಮಂಗಲಕಾರ್ಯದೊಂದಿಗೆ ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ನಡೆದ ಸಂಸ್ಕಾರವು ಲಿಂಗೋದ್ಭವಾಗಿ ತಿಳಿಯುವಂತಾಯಿತು. ಅಲ್ಲಿಂದ ಮಲಯಪರ್ವತಕ್ಕೆ ಬಂದರು. ಅಂದು ಮೈಸೂರಿನ ವಲಯವಾಗಿರುವ ನೆಲೆಮನೆ ಮಲಯಾಚಲ ಬೆಟ್ಟಗಳಲ್ಲಿ ಋಷಿಗಳು, ತಪಸ್ವಿಗಳು, ವಿದ್ವಾಂಸರು ವಾಸಿಸಿದ್ದು, ಅವರೆಲ್ಲ ಬೆಳಗಾವಿಯ ಹೂಲಿ, ಮುನವಳ್ಳಿ ಪ್ರದೇಶಗಳಲ್ಲಿ ಸಂಚರಿಸಿದ್ದು ಇದೆ. ಅಂತಹ ತಪಸ್ವಿಗಳಾದ ಋಷಿಮುನಿಗಳಲ್ಲಿ ಅಗಸ್ತ್ಯರು ಒಬ್ಬರಾಗಿದ್ದರು. ಆದರೆ ಮಹಾಭಾರತದ, ರಾಮಾಯಣದ ಅಗಸ್ತ್ಯರು ಅವರಾಗದೆ ಪ್ರಾಚೀನ ಅಗಸ್ತ್ಯರಂತೆ ಮತ್ತೊಬ್ಬ ಅಗಸ್ತ್ಯರು ಹನ್ನೆರಡನೆಯ ಶತಮಾನಕ್ಕಿದ್ದುದು ಅವರ ವಿಷಯಗಳ ಹಿನ್ನೆಲೆಯಲ್ಲಿ. ಈ ಮೊದಲೆ ವಿವರಿಸಲಾಗಿದ್ದು ಈ ಸಂದರ್ಭದಲ್ಲಿ ಶ್ರೀ ರೇವಣಸಿದ್ಧರು ಇಂತಹ ಅಗಸ್ತ್ಯರಿಗೆ ಅಷ್ಟಾಂಗಯೋಗ, ವರ್ಣಶ್ರಮ ವಿಚಾರ, ಷಟ್ಚಕ್ರದ ವಿಚಾರ, ಲಿಂಗಪೂಜಾ ವಿಧಾನ, ಲಿಂಗತ್ರಯಿಂದ ಅಥವಾ ಗುರುಶಿಷ್ಯರ ವಿಷಯ ಮುಂತಾದ ಧಾರ್ಮಿಕ ಎಲ್ಲ ಸಿದ್ಧಾಂತಗಳನ್ನು ಕುರಿತು ಚರ್ಚಿಸಿ, ಅವರಿಗೆ ಶೈವೋಪದೇಶವನ್ನು ಮಾಡಿ ಗುರುರೇವಣ್ಣನಾಗಿ ಮೆರೆದರು. ವೈಷ್ಣವ ಧರ್ಮದ ದಿವ್ಯಕೇಂದ್ರವಾಗಿರುವ ಚೋಳರಾಜರ ಭವ್ಯ ರಾಜಧಾನಿ ಯಾಗಿದ್ದ ಕಾಂಚಿಪುರದಲ್ಲಿ ವಿಷ್ಣುವಿನ ಪ್ರತಿಮೆಯನ್ನು ತನ್ನ ವೀರ್ಯದ ಲೇಪನದಿಂದ ನಿಲ್ಲಿಸಿ ಶೈವ ಧರ್ಮದ ಪ್ರಭಾವವನ್ನು ಸ್ಥಾಪಿಸಿ ರಾಜನಿಂದ ಮನ್ನಣೆ ಪಡೆದು ಚೋಳ ಅಧಿತತ್ವದಲ್ಲಿ ಶೈವ ಸಿದ್ಧಾಂತದ ಪ್ರಚಾರಕ್ಕೆ ಅನುವು ಪಡೆದು ಮುಂದೆ ಕೇರಳ ದಕ್ಷಿಣ ಕರ್ನಾಟಕದಲ್ಲಿ ಸಂಚರಿಸಿ ಹಸಿವು ತೃಷೆಗಳ ಭಾದೆಯಿಲ್ಲದೆ, ಸದಾ ಸಂಚಾರದಲ್ಲಿ ಲಿಂಗ ಪ್ರತಿಷ್ಠಾಪನೆ, ಕ್ಷೇತ್ರ ತೀರ್ಥಗಳ ದರ್ಶನ ಜನಸಾಮಾನ್ಯರ ಸುಖ ದುಃಖಗಳ ಚಿಂತನಗಳೇ ಮುಖ್ಯವಾಗಿರಿಸಿಕೊಂಡಿದ್ದವು.

ಶ್ರೀ ರೇವಣಸಿದ್ಧರು ರಾಜ ಮಹಾರಾಜರಿಂದ ಮನ್ನಣೆ ಗಳಿಸಿ ದೀನದಲಿತರ, ದುಃಖಿತರ, ರೋಗಿಗಳ, ದರಿದ್ರರ ಸೇವೆ ಮಾಡುವದನ್ನೇ ಪರಮಗುರಿಯನ್ನಾಗಿಸಿಕೊಂಡರು. ಸಂಚಾರಿಯಾಗಿ ಅವರು ಶೈವಧರ್ಮದ ಪುನರುಜ್ಜೀವನದೊಂದಿಗೆ ಜಗತ್ತಿನ ಜನರಿಗೆ ಆಶ್ರಯದಾತರಾದರು. ವೈಚಾರಿಕವಾಗಿ ಈ ನಾಡಿಗೆ ಶರಣರು ಅನನ್ಯವಾದ ಕಾಣಿಕೆಯನ್ನು ನೀಡಿದರು. ಆದರೆ ಅವರ ವೈಚಾರಿಕ ಮನೋಧರ್ಮವನ್ನೆ ಬಹುಶಃ ಇಂದು ನಾವು ಪವಾಡಗಳೆಂದು ಕರೆಯಬಹುದಾಗಿದೆ. ರೇವಣಸಿದ್ಧರು ರಸಾಯನಶಾಸ್ತ್ರವನ್ನು ಬಲ್ಲವರಾಗಿದ್ದರು, ಅವರೊಬ್ಬ ರಸವಾದಿಗಳಾಗಿದ್ದರು ಎನ್ನುವುದಕ್ಕೆ ಮಾಸನೂರಿನ ಶಿವಮಂದಿರದ ಮುಂದೆ ವೃಕ್ಷವೊಂದರಲ್ಲಿ ರಾಕ್ಷಸ ತಿಗಣೆಗಳೆರಡು ಮನುಷ್ಯರನ್ನು ಭಕ್ಷಿಸುವ ಹಿಂಸೆಯ ಕೃತ್ಯವನ್ನು ನಿಲ್ಲಿಸಿ ಅಲ್ಲಿ ತನ್ನ ಫಾಲನೇತ್ರದಿಂದ ಸುಟ್ಟು ಗುಂಡುಗಳಾಗುತ್ತವೆ. ಕಮ್ಮಾರನಿಂದ ಅವುಗಳನ್ನು ಅಲಗನ್ನಾಗಿ ಮಾಡಿ ಒಂದನ್ನು ಆ ಊರಿನ ನೀರಿನ ಮಡುವಿನಲ್ಲಿ ತುದಿ ಕೆಳಗೆ ಮಾಡಿ ಇಟ್ಟು ಮತ್ತೊಂದನ್ನು ಉಜ್ಜಯನಿಯ ವಿಕ್ರಮಾದಿತ್ಯನಿಗೆ ಕರುಣಿಸುವನು ತಾನು ಕರುಣಿಸು ಕಠಾರಿಯನ್ನು ವಿಕ್ರಮಾದಿತ್ಯನಿಗೆ ಕೊಟ್ಟು ಆದರ ಮಹತ್ವವನ್ನು ಹೀಗೆ ಅರಹುತ್ತಾನೆ.

"ರೇವಣ ಸಿದ್ಧಂ ತನ್ನ ಕೈಯ ಕಠಾರಿಯ ತೋರಿಸುತ್ತಿಂತು ಇದು ಉಡುವೊಡೆ ದಿವ್ಯಾಸ್ತ್ರ ತುಡುವೊಡೆ ದಿವ್ಯಾಭರಣಂ ಉಣ್ಬೊಡೆ ಮೃಷ್ಟಾನ್ನಂ ಎರುವೊಡೆ ವಾಹನಂ ಕೂಡುವೊಡೆ ದೇವಾಂಗನೆ ಕಾದುವೊಡೆ ನಿಶಿತಾಂಯುಧಮಪ್ಪುದು ಇಂತಿದಂ ನಿನಗೆ ಕುಡಲ್ ಬಂದೆವಾ ಎನುತಾ ಕಠಾರಿಯಂ ಕರುಣಿಸಿಕೊಟ್ಟು"[೯೦]

ಹೀಗೆ ಅರಸು ಪರಿವಾರದವರಿಗಲ್ಲದೆ ಶ್ರೀ ಸಾಮಾನ್ಯರನ್ನು ರಕ್ಷಿಸುವ ಹೊಣೆಗಾರಿಕೆಯಿಂದ ಕಲ್ಯಾಣದ ಕಲ್ಲಿಶೆಟ್ಟಿ ಕುಟುಂಬಕ್ಕೆ ದಾರಿದ್ರವೂ ಮತ್ತು ಕುರುಡುತನವು ಆವರಿಸಿರುವಾಗ ತನ್ನ ಅಂತಃ ಕರಣದ ಬೆಳಕಿನ ದೃಷ್ಟಿಯನ್ನು ಕೊಡುವುದರ ಜೊತೆಗೆ ಸಂಪತ್ತನ್ನು ಕರುಣಿಸುವರು.

ಮಂಗಳವಾಡದಲ್ಲಿ ಮಾಯಿದೇವಿ ಎನ್ನುವ ಪುಣ್ಯಾಂಗನೆ ಲಿಂಗಧಾರಿಗಳಿಗೆ ಮಾತ್ರ ಸಂಗ ಬಯಸಿ ಮುಕ್ಕಣ್ಣನಲ್ಲಿ ಮನವೆರಕಳಿಸಿ ಭಕ್ತಿಯಿಂದ ಪೂಜಿಸುತ್ತಿದ್ದಳು. ಅನ್ನವಿಲ್ಲದೆ ಬೆನ್ನಿಗೆ ಹತ್ತಿದ ಹೊಟ್ಟೆಯಲ್ಲಿದ್ದಂತೆ ರೇವಣಸಿದ್ದರು ದಿವ್ಯ ತೇಜಸ್ಸಿನಿಂದ ಕಾಣಿಸುತ್ತಿರುವ ಮಾಯೆಗೆ ಕಾಣಿಸುತ್ತಾರೆ ಮತ್ತು ಆಕೆಯ ಮನೆಗೆ ನೀರು ಹೊರುವ ಸೇವೆ ಮಾಡುವರು. ಅಲ್ಲಿ ಆಕೆಗೆ ಅನುಗ್ರಹಿಸಿ ಖರ್ಪರನೆಂಬ ಜೋಗಿಯ ಕುಟಿಲತೆಯನ್ನು ಖಂಡಿಸಿ ಹನ್ನೆರಡು ಸಾವಿರ ಕನ್ಯೆಯರನ್ನು ಸೆರೆಯಿಂದ ಬಿಡಿಸುವನು. ರೇವಣಸಿದ್ದರು ಬಿಜ್ಜಳನ ಅಹಂಕಾರವನ್ನು ತುಳಿದು, ಸುಡುವ ಓಗರವನ್ನು ಅಂಗೈಯಲ್ಲಿ ನೀಡಿದಾಗ, ಸೇವಿಸಿ ನಂತರ ಕೈಯನ್ನು ಕಂಭಗಳಿಗೆ ಒರೆಸಿದಾಗ ಅರಮನೆಯಲ್ಲಾ ಸುಡತ್ತದೆ. ಬಿಜ್ಜಳನ ಗರ್ವಭಂಗ ಮಾಡುತ್ತಾನೆ. ಮುಂದೆ ಬಿಜ್ಜಳನು ತನ್ನ ತಪ್ಪಿನ ಅರಿವಾಗಿ ತನ್ನ ಮಗಳನ್ನು ಧಾರೆಯೆರೆದು ಬೀಳ್ಕೊಡುವನು. ಕೇರಳ, ಚೇರ ಪಾಂಡ್ಯ, ಕರ್ನಾಟಕ, ಆಂಧ್ರಾದಿ ಸಕಲ ದೇಶಾಧಿಪತಿಗಳಿಂದ ಕನ್ಯಾದಾನ ಪೂರ್ವಕವಾಗಿ ಸಮರ್ಪಿಲ್ಪಟ್ಟ ಸಕಲ ಭೋಗ ಭಾಗ್ಯಗಳನ್ನು ಪಡೆದು ಎಲ್ಲಾ ಭೂಭಾಗಗಳಲ್ಲಿ ಪ್ರಚುರವಾಗಿ ಕೆರೆಗಳನ್ನು ಕಟ್ಟಿಸಿ ಹೂದೋಟಗಳನ್ನು ಮಾಡಿಸಿ ಶಿವಾಲಯಗಳನ್ನು ನಿರ್ಮಿಸುವರು. ದುಷ್ಟರನ್ನು ನಿಗ್ರಹಿಸಿ, ಶಿಷ್ಟರನ್ನು ಪರಿಪಾಲಿಸಿ, ಕುರುಡರಿಗೆ ಕಣ್ಣಿತ್ತು, ಕಿವುಡರಿಗೆ ಕೇಳುವಂತೆ ಮಾಡಿ, ಮೂಕರಿಗೆ ಮಾತು ನೀಡಿ, ಹೆಳವರಿಗೆ ಕೈಯಿತ್ತು, ಕುಂಟರಿಗೆ ಕಾಲು ಕೊಟ್ಟು, ನಪುಂಸಕರಿಗೆ ಪುರುಷೋತ್ತಮರೆನ್ನಿಸಿ ಬಂಜೆಯರಿಗೆ ಪುತ್ರರನ್ನು ನೀಡಿ ಬರಡು ದನಗಳಿಗೆ ಹೈನಾಗಿಸಿ ಕರ್ಮ ವ್ಯಾಧಿಗಳನ್ನು ಪರಿಹರಿಸಿ ನೆಲಸಿದ ತಾಣವನ್ನು ಸುಕ್ಷೇತ್ರವೆನಿಸಿ ತುಳಿದ ನೆಲವು ಕಾಶಿಗೆ ಮಿಗಿಲೆನಿಸಿ ಚರಣೋದಕವನ್ನು ಸುಕ್ಷೇತ್ರವೆನಿಸಿ ನಾಡೆಲ್ಲವನ್ನು ಲಿಂಗ ಬೀಡಾಗಿಸಿ ಪದ್ಮ ಪತ್ರದಂತೆ ನಿರ್ಲಿಪ್ತನಾಗಿ, ಸರ್ವಪ್ರಕಾರದ ದಿವ್ಯ ಭೋಗಗಳನ್ನು ಅನುಭವಿಸುತ್ತಿದ್ದನು.

ಆದಿ ಕಾಲದಿಂದಲೂ ಖಗೋಳವಿಜ್ಞಾನ, ಭೂಗರ್ಭಶಾಸ್ತ್ರ, ರಸಾಯನ ವಿಜ್ಞಾನ ಮಾನವನಿಗೆ ತಿಳಿದಿತ್ತು. ಮಾನವನ ವಿಧಿ ಹಾಗೂ ಆಕಾಶ ಕಾಯಗಳ ಚಲನೆಯನ್ನು ಮಾನವಾತೀತಾದ ಶಕ್ತಿಯೊಂದು ನಿಯಂತ್ರಿಸುತ್ತದೆ ಎನ್ನುವ ಭಾವನೆಯು ಈ ಮಾನವನಿಗಿದೆ. ಆದರೆ ಈ ಹಿಂದೆ ಕ್ರಿ.ಪೂ. ಮೂರುಸಾವಿರ ವರ್ಷಗಳ ಹಿಂದೆ ಮಾನವರು ದೂರದರ್ಶಕಗಳ ಸಹಾಯವಿಲ್ಲದೆ ಕೇವಲ ಬರಿಗಣ್ಣಿನಿಂದ

ಗ್ರಹತಾರೆಗಳನ್ನು ವೀಕ್ಷಿಸಿ ಅವರು ಪಂಚಾಂಗಗಳನ್ನು ಸಿದ್ಧಗೊಳಿಸುತ್ತಿದ್ದರು. ತಾರೆಗಳ ನಕ್ಷೆಯನ್ನು ಸಿದ್ಧಪಡಿಸುತ್ತಿದ್ದರೆಂಬುದಕ್ಕೆ ಐತಿಹಾಸಿಕ ಆಧಾರಗಳಿವೆ. ಈ ನಕ್ಷೆಗಳ ಅಧ್ಯಯನದಿಂದ ಪ್ರತಿ ೧೮ ವರ್ಷಕ್ಕೊಮ್ಮೆ ಗ್ರಹಕೂಟಗಳು ಪುನರಾವರ್ತಿತವಾಗುತ್ತವೆ ಎಂಬುದನ್ನು ಅವರು ಕಂಡುಕೊಂಡಿದ್ದರು. ಈ ಸಾರೊಸ್ ಚಕ್ರವನ್ನಾಧರಿಸಿ ಹೇಳುತ್ತಿದ್ದರು. ಆದರೆ ಧೂಮಕೇತುಗಳು ಈ ಸಾರೋಸ್ ಚಕ್ರದ ವ್ಯಾಪ್ತಿಯನ್ನು ಮೀರಿವೆ ಯಾದ್ದರಿಂದ ನಕ್ಷೆಯನ್ನು, ಭವಿಷ್ಯವನ್ನು ಹೇಳಲು ಸಾಧ್ಯವಾಗದು.[೯೨] ಅಲ್ಲದೆ ಇಂದು ಮಾನವನ ಪ್ರಕೃತಿಯು ಶಾರೀರಿಕವಾಗಿ, ಮಾನಸಿಕವಾಗಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಕಳೆದುಕೊಂಡು ಪ್ರಕೃತಿಯನ್ನು ವಿಕೃತಿಗೊಳಿಸುತ್ತಿದ್ದಾನೆ. ಸುಮಾರು ಹದಿನಾರನೇ ಶತಮಾನದವರೆಗೆ ಮನುಷ್ಯನು ವಿಜ್ಞಾನವನ್ನು ಬಲವಾಗಿ ನಂಬಿ ವೈಜ್ಞಾನಿಕ ಹಿನ್ನೆಲೆಯಲ್ಲಿ ಜೀವಿಸಿದ್ದನು. ಆದರೆ ಮೌಢ್ಯತೆಗಳು ನಮ್ಮ ವೈಚಾರಿಕತೆ, ವೈಜ್ಞಾನಿಕತೆಯನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತವೆ. ಹದಿನಾರನೆ ಶತಮಾನದಲ್ಲಿ ಕೋಪರ್ನಿಕಸ್, ಸೂರ್ಯನು ಸೌರವ್ಯೂಹದ ಕೇಂದ್ರವೆಂದು ಜಗತ್ತಿಗೆ ಸಾರಿದಾಗ, ಹದಿನೇಳನೆಯ ಶತಮಾನದಲ್ಲಿ ನ್ಯೂಟನ್ನಿನ ಗುರುತ್ವಾಕರ್ಷಣ ತತ್ವವನ್ನು ಸಾಬೀತುಪಡಿಸಿದಾಗ ಮೌಢ್ಯತೆಯ ಜಗತ್ತಿಗೆ ದಿಗ್ಭ್ರಮೆಯಾಯಿತು.

ಸಿದ್ಧ ಪುರುಷರು ಶೂರರಾದ ರಾಜರುಗಳಿಗೆ ಕಠಾರಿಗಳನ್ನು ಕರುಣಿಸಿರುವದು ಚರಿತ್ರೆಗೆ ಹೊಸದಲ್ಲ ಇದು ಸಿದ್ಧಪುರುಷರಿಗೆ ವಾಡಿಕೆಯಿದೆ. ಅದರಂತೆ ರೇವಣಸಿದ್ಧರು ವಿಕ್ರಮಾದಿತ್ಯನಿಗೆ ಕಠಾರಿಯನ್ನು ಕೊಡುವದು, ಗೋರಕ್ಷನು ಭಿಕ್ಷೆಯಾಗಿ ನೀಡಿರುವ ಕಠಾರಿಯನ್ನು ದ್ರವವನ್ನಾಗಿ ಮಾಡುವುದು ರಸವಾದಿಯಾಗಿದ್ದರು ಎನ್ನುವುದಕ್ಕೆ ಅನೇಕ ದೃಷ್ಟಾಂತಗಳಿವೆ. ''ಹರ್ಷವರ್ಧನನ ವಂಶದ ಮೂಲಪುರುಷನಾದ ಪುಷ್ಪಭೂಪತಿಯ ಪರಾಕ್ರಮದ ವಾರ್ತೆಯನ್ನು ಕೇಳಿ ಹರ್ಷಿಸಿದ ಭೈರವಾಚಾರ್ಯನೆಂಬ ಯೋಗಿಯು ಕಾಳರಾತ್ರಿಯ ಕಟಾಕ್ಷದಂತೆಯೂ, ದರ್ಪದ ದೇಹದಂತೆಯೂ, ಮೃತ್ಯುವಿನ ಮಗುವಿನಂತೆಯೂ ಇದ್ದ ಅಟ್ಟಹಾಸವೆಂಬ ಖಡ್ಗವನ್ನು ಮೆಚ್ಚುಗೆಯಾಗಿ ಕೊಟ್ಟನು.'' ಮತ್ತೊಂದು ಸಂದರ್ಭವು ''ಚಿತ್ರದುರ್ಗದ ಕಿನ್ನರಿಗಲ್ಲು ಹರವಿನಲ್ಲಿ ವಾಸಮಾಡುತ್ತಿದ್ದ ರಸಾಸಿದ್ದರೆಂಬ ಯೋಗಿಗಳು ಮೊದಲನೆಯ ಪಾಳೆಯಗಾರನಾದ ಮಂತ್ರಿ ತಿಮ್ಮಣ್ಣನಾಯ್ಕನಿಗೆ ದೆಸೆಕಟ್ಟು ಧೂಳಿತ ಸಿದ್ದಮೂಲಿಕೆ ಎಂಬ ವಸ್ತುಗಳನ್ನು, ಕೈ ಅಂಬು ಎನ್ನುವ ಆಯುಧವನ್ನು ಕುರುಣೆಸಿಕೊಟ್ಟರು.''[೯೩]

''ರಸತಂತ್ರವು ಕ್ರಿ.ಶ. ಹದಿನಾರನೇ ಶತಮಾನದವರೆಗೆ ಪ್ರಬಲವಾಗಿತ್ತು. ರಸವಾದಿಗಳಲ್ಲಿ ಬಹಳ ಹೆಸರುವಾಸಿಯಾದವರು. ಚೀನ ದೇಶದ ಕೋಹೂಂಗ (ಕಿ.ಶ. ೪ನೆಯ ಶತಮಾನ) ಭರತಖಂಡದ ನಾಗಾರ್ಜುನ (ಕ್ರಿ.ಶ. ೮೫೦) ಅರಬ್ಬೀದೇಶದ ಗೆಲರ್ (ಕ್ರಿ.ಶ. ೮೦೦) ಜರ್ಮನಿಯ ಮ್ಯಾಗ್ನಸ್ (ಕ್ರಿ.ಶ. ೧೧೯೩-೧೧೬೧) ಹಾಗೂ ಆಂಗ್ಲೇಯ ರೋಜರ್ ಬೇಕನ್ (ಕ್ರಿ.ಶ. ೧೨೧೪-೧೧೯೪) ಹೀಗೆ ರಸವಾದಿಗಳು ಕಂಡುಬರುತ್ತಾರೆ. ಹದಿನೈದನೆಯ ಶತಮಾನದಿಂದ ರಸತಂತ್ರವು ಕಡಿಮೆಯಾಗುತ್ತಾ ಬಂದು ಔಷಧಿಗಳನ್ನು ಕಂಡು ಹಿಡಿಯುವದರಲ್ಲಿ ಆಸಕ್ತಿ ಹೆಚ್ಚಾಯಿತು. ಸ್ಪರ್ಶವೇದಿ ಎಂಬ

ಪದಾರ್ಥದಲ್ಲಿದ್ದ ಆಸಕ್ತಿಯ ಸಂಜೀವನ ರಸಾಯನವನ್ನು ತಯಾರು ಮಾಡುವ ಪ್ರಯತ್ನವು ನಡೆಯಿತು."[9] ಈ ಹಿನ್ನೆಲೆಯನ್ನು ಇಟ್ಟುಕೊಂಡು ರೇವಣಸಿದ್ಧರನ್ನು ಕುರಿತಾದ ಕಾವ್ಯಗಳನ್ನು ಅಧ್ಯಯನ ಮಾಡಿದಾಗ ಇವರು ರಸತಂತ್ರದಲ್ಲಿ ಸಿದ್ಧಿಯನ್ನು ಪಡೆದದ್ದಾಗಿ ತಿಳಿಯಲು ಅವಕಾಶವಿದೆ.ಅಲ್ಲದೆ ಕಾಯಿಲೆಗಳನ್ನು ನಿವಾರಿಸಿ ಚಿಕಿತ್ಸೆ ಮಾಡುವದರಲ್ಲಿ ಪ್ರವೀಣರಾಗಿದ್ದರು. ಚಿಕಿತ್ಸಾ ಗ್ರಂಥಗಳಲ್ಲಿ ಅನೇಕ ವೈದ್ಯರ ಗುಂಪಿನಲ್ಲಿ ಸಿದ್ಧನಾಥ ಎಂಬುದಾಗಿ ರೇವಣಸಿದ್ಧರ ಹೆಸರು ಕಂಡುಬರುತ್ತದೆ. ಮಹತ್ತರವಾದ ಕಾಯಿಲೆಗಳನ್ನು ಗುಣಪಡಿಸುವುದರಲ್ಲಿ ಸಿದ್ಧ ಹಸ್ತರಾಗಿದ್ದರು.

ರಸಾಯನಶಾಸ್ತ್ರವು ಇಂದು ಮಾನವ ಸಂತತಿಯನ್ನು ರಸಾಯನ ಸಾಮಾಗ್ರಿಗಳ ಸಹಾಯದಿಂದ ಗರ್ಭವನ್ನು ಸಂರಕ್ಷಿಸುವದನ್ನು (Test tube babes) ನಳಿಗೆಯ ಶಿಶುಗಳು ಇಂದಿನ ಆವಿಷ್ಕಾರವೆಂದು ತಾಯಿಯ ಹೊಟ್ಟೆಯಲ್ಲಿಯೇ ಮಗು ಬೆಳೆಯುವ ರೀತಿಯಲ್ಲಿ ಇಂದು ಹೊಸತನದ ಪ್ರಯೋಗವೆಂದು ಈ ಶತಮಾನದಲ್ಲಿ ಬೀಗುತ್ತಿದ್ದೇವೆ ಆದರೆ Test tube babes ಇಂದಿನ ಹೊಸ ಆವಿಷ್ಕಾರವಲ್ಲ ಅದು ಹಿಂದಿನ ಕಾಲದಲ್ಲಿಯೇ ಸಂಶೋಧಿಸಲ್ಪಟ್ಟಿರುವ ವಿಧಾನವಾಗಿದೆ. ಶ್ರೀ ರೇವಣಸಿದ್ಧರು ಮಂಗಳವಾಡದಲ್ಲಿ ಒಂದು ತಟಾಕವನ್ನು ಕಟ್ಟಿಸುವಾಗ ಅವರ ಎಲ್ಲಾ ಹೆಂಡಂದಿರೂ ಕೆಲಸದಲ್ಲಿ ತೊಡಗಿರುವಾಗ ಚೋಳರಾಜೇಂದ್ರನ ಮಗಳಾದ ಸೌಂದರಿಯು ಕಷ್ಟ ಸಹಿಸಲಾರದೆ ಪತಿಗೆ ಹೇಳುತ್ತಾಳೆ. ಆಗ ಮೂರು ತಿಂಗಳ ಭ್ರೂಣವನ್ನು ಹೊರತೆಗೆದು ಏರಿಯಲ್ಲಿ ಬಚ್ಚಿಟ್ಟು ರಕ್ಷಿಸಿದರು ಮುಂದೆ ನವಮಾಸಗಳು ತುಂಬಿದ ನಂತರ ಮಡಕೆಯಲ್ಲಿ ರಸಾಯನ ಸಾಮಗ್ರಿಗಳ ಸಹಾಯದಿಂದ ಅದು ಪಕ್ವವಾಗುವಂತೆ ಬೆಳೆಸುವರು. ಆ ಮಗುವೆ ರುದ್ರಮುನಿಯೆಂದು ಕರೆಯಲ್ಪಟ್ಟು ಚಾರಿತ್ರಿಕ ವ್ಯಕ್ತಿಯಾಗಿದ್ದಾನೆ.

ಒಟ್ಟಿನಲ್ಲಿ ರೇವಣಸಿದ್ದರು ಕೇವಲ ಸನ್ಯಾಸಿಯಾಗಿರಲಿಲ್ಲ ತಪಸ್ವಿಗಳೆನಿಸಿರಲಿಲ್ಲ. ಯೋಗ, ಹಟ, ಮಂತ್ರ, ತಂತ್ರ, ಸಿದ್ದಿಗಳಾಗಿ ಮೆರೆಯುವುದರಲ್ಲಿ ಅವರೊಬ್ಬ ವನಸ್ಪತಿ ಔಷಧಿಗಳನ್ನು ಬಲ್ಲ ಮಹಾ ವೈದ್ಯರಾಗಿದ್ದರು. ಅವರೇ ಬರೆದ ಕಾಯಕಲ್ಪ ಚಿಕಿತ್ಸೆ ಎಂಬ ಪುಸ್ತಕವು ಸರ್ವರೋಗ ನಿವಾರಣೆಗಾಗಿ ಅನೇಕ ಔಷಧಗಳನ್ನು ಬಳಸುತ್ತಿದ್ದರೆಂಬುದನ್ನು ಕಾಣಬಹುದು. ಅಸ್ತಮಾ, ಕ್ಷಯ, ಚರ್ಮರೋಗ, ಅಂಧತಿ, ಕರುಳುಬೇನೆ, ಹೃದಯಬೇನೆ ಹೀಗೆ ಸರ್ವ ರೋಗಗಳು ನಿವಾರಣೆ ಮಾಡುವ ವೈದ್ಯರಾಗಿದ್ದರು. ರಸಾಯನವಾದಿಯಾಗಿ ಒಬ್ಬ ಯೋಗಿಯಾಗಿ ಹಾಗೂ ಯೋಧರಾಗಿ ಧಾರ್ಮಿಕ ಗುರುವಾಗಿ ಮಾನವ ಜಗತ್ತಿಗೆ ಸಮರ್ಪಿಸಿಕೊಂಡಿದ್ದಾರೆ.

ಭೂಮಿಯ ಪ್ರಾಣಿಗಳ ಚರಾಚರ ವಸ್ತುಗಳನ್ನು ಚೇತನಾಚೇತನ ವಸ್ತುಗಳನ್ನು ಹೊಂದಿದ್ದು, ಪ್ರತಿಯೊಂದು ಪದಾರ್ಥಗಳಿಗೆ ತನ್ನದೇ ಭಾಷೆ, ಗುಣವನ್ನು ಹೊಂದಿರುತ್ತದೆ. ಪ್ರತಿ ವಸ್ತುಗಳನ್ನು ನಿಯಂತ್ರಿಸುವ ಶಕ್ತಿ ಕೇಲವೇ ವ್ಯಕ್ತಿಗಳು ಪಡೆದಿರುತ್ತಾರೆ. ಅಂತಹವರಲ್ಲಿ ಶ್ರೀ ರೇವಣಸಿದ್ದರು ಒಬ್ಬರೆನ್ನುವುದಕ್ಕೆ ಬಿಜ್ಜಳನು ಸುರಗಿಯನ್ನು ಪಡೆಯಲು ಖರ್ಪರನ ಕುಟಿಲತೆಗೆ ಹನ್ನೆರಡು ಸಾವಿರ

ಕನ್ನೆಯರು ಬಲಿಯಾಗುವ ಸಂದರ್ಭದಲ್ಲಿ ರೇವಣಸಿದ್ದರು ಬಂದಿರುವುದನ್ನು ಹರಿಹರನು ಹೀಗೆ ಚಿತ್ರಿಸಿದ್ದಾನೆ.

ನಡೆ ನಿನಗೆ ಸುರಗಿ ದೋರುವೆನೆಂದೊಡಂಬಡಿಸಿ
ನಡೆ ತರುತ್ತಂ ಮಾಸನೂರ ಮುಂದಂ ನಿಂದು
ಪೊಡವಿ ಭಾಷೆನುಮಿರೆ ಗಜದಿಂದಲಿಳಿತಂದು
ಒಂದೊಂದು ಹರಿಗೋಲನೊಬ್ಬೊರ್ಬ್ಬರೇರುತಂ
ಅಂದು ರೇವಣಸಿದ್ಧನಂ ನೃಪನು ವೇರುತಂ |
ನದಿಯೊಳಗೆ ಸುರಗಿಯಿರ್ದಲ್ಲಿಗೇ ನಡೆದು ಬಂದು
ಅದಿರದಳ್ಕದೆ ಸಿದ್ದನಾನಂದದಿಂದಂದು
ಅಲಗಿನಾಯುಧದೊಳಗೆ ಕೈಯಿಕ್ಕಿ ಬರಸೆಳೆಯೆ
ಉಲಿದು ಪೆಲ್ಮೊರೆದು ಗರ್ಜಿಸುತಲಗು
ಮಿಗೆಹೊಳೆಯೆ .....[೯೫]

ಅದೇ ರೀತಿಯಾಗಿ ಚತುರ್ಮುಖ ಬೊಮ್ಮರಸನು ತನ್ನ ರೇವಣಸಿದ್ದೇಶ್ವರ ಪುರಾಣದಲ್ಲಿ

ಮಡುವಿನೊಳು ನೀರಮೇಲಡಿಯಿಟ್ಟು ಗುರುರಾಯ
ನಡೆದೆಯ್ದಿ ಹರಿಗೋಲಮೇಲೆ ನೃಪತಿಯ ನಿರಿಸಿ
ಘುಡು ಘುಡಿಸುವ ದಿವ್ಯಾಯುಧದ ಪೊರೆಗೆ ಬಂದಲಗನುಗಿದು
ಪಿಡಿಯೆಂದು ತೋರೆ [೯೬]

ಸಿರಿವಾಳ ಶಾಸನದಲ್ಲಿ ಎರಡನೆಯ ಪದ್ಯದಲ್ಲಿ

"ತೊರೆತುಂಬಿ ಬಂದಡಗೆ ತಾ |
ಹರುಗೋಲಂ ತನ್ನಿವೆನ್ನದಾಜ್ಞಾಬಲದಿಂ
ತೊರೆಯಂ ದಾಂಟುವ ನಿಂತರೆ |
ರರುಪಿನ ತತುಕಾರನೀತ ರೇವಣದೇವಂ"

ತೊರೆಯು ತುಂಬಿ ಬಂದು ಅಡ್ಡಲಾಗಲು ಹರುಗೋಲನ್ನು ತನ್ನದಾಗಿ ಅಂದರೆ ಹಿಡಿದು ಉಪಯೋಗಿಸದೆ ಅಜ್ಞಾಬಲದಿಂದಲೇ ತೊರೆಯನ್ನು ದಾಟಿದ ಮಹಾತ್ಮನೆಂದು ತಿಳಿದು ಬರುತ್ತದೆ. ಪ್ರಕೃತಿಯನ್ನು ನಿಯಂತ್ರಿಸುವ ಅಸಾಮಾನ್ಯ ಶಕ್ತಿಯನ್ನು ಶ್ರೀ ರೇವಣಸಿದ್ಧರು ಪಡೆಯುವುದರಿಂದಲೇ ನೀರಿನ ಮೇಲೆ ನಡೆಯುವುದು, ಬೆಂಕಿಯನ್ನು ತನ್ನ ನಿಯಂತ್ರಣದಲ್ಲಿಡುವುದು, ಗಗನದಲ್ಲಿ (ಆಕಾಶದಲ್ಲಿ) ಸಂಚರಿಸುವುದು, ಗಾಳಿಯಲ್ಲಿ ಗಾಳಿಯಾಗುವುದು (ನಿಯಂತ್ರಿಸುವ) ಭೂಮಿಯಲ್ಲಿಯ ಚರಾಚರಗಳನ್ನು

ನಿಯಂತ್ರಿಸುವುದು ಈ ಎಲ್ಲಾ ಹಿನ್ನೆಲೆಗಳಲ್ಲಿ ಪಂಚಭೂತ ತತ್ವಗಳನ್ನು, ಪಂಚಮುಖಿಗಳನ್ನು, ಪಂಚಲಿಂಗಗಳನ್ನು ಆವರಿಸಿದ ಪಂಚಾಚಾರ್ಯರ ಪ್ರತೀಕವಾಗಿ ಶ್ರೀ ರೇವಣಸಿದ್ಧರು ಕಂಡುಬರುತ್ತಾರೆ. ರೇವಣರು ಯೋಗಾ ಸಾಮರ್ಥ್ಯದ ಬಲದಿಂದಲೇ ಭಾರತದ ಉತ್ತರ ದಕ್ಷಿಣ ಪ್ರದೇಶಗಳನ್ನು ಸುತ್ತಿ ಸುಳಿದಾಡಿ ಶ್ರೀ ಸಾಮಾನ್ಯರಿಂದ ಎಲ್ಲ ವರ್ಗದವರ ಉದ್ಧಾರವೇ ಮೂಲಭೂತ ಧ್ಯೇಯವಾಗಿ ಕಂಡುಕೊಂಡರು. ಪ್ರಕೃತಿಯನ್ನು ಸ್ಪಷ್ಟವಾಗಿ ಕಂಡುಕೊಳ್ಳುವುದು ಹಾಗೂ ಮಾತಾಡಿಸುವುದಾಗಿ ಶ್ರೀ ರೇವಣಸಿದ್ಧರಂತಹ ವ್ಯಕ್ತಿಗಳ ಚರಿತ್ರೆಯಿಂದ ಕಂಡುಕೊಳ್ಳಬೇಕಾದ ನಿಜವಾದ ತತ್ವವಾಗಿದೆ.

''ವೀರಶೈವ ಪಂಚಾಚಾರ್ಯರಲ್ಲಿ ರೇವಣಸಿದ್ಧರು ಒಬ್ಬರೆಂಬುದೂ, ಆಚಾರ್ಯರಲ್ಲಿ ಹಿರಿಯರು ಎಂಬ ವಿಷಯ ಪ್ರಸಿದ್ಧವಾದದ್ದು. ೧೧೬೭ ನಂತರ ಶ್ರೀ ಸಿದ್ಧರಾಮೇಶ್ವರರು ಶೂನ್ಯಸಿಂಹಾಸನದ ಸ್ವಾಮಿಯಾದವರು. ಇವರ ಜೊತೆಗೆ ಶಿವಗಂಗೆಗೆ ಬಂದ ರೇವಣಸಿದ್ಧ ಮರಳುಸಿದ್ಧ ಇವರೂ ಆಗ ಆಚಾರ್ಯರಾಗಿದ್ದರು.''[೯೭]

ಕ್ರಿ.ಶ. ೧೧೮೭ರ ಸಿರಿವಾಳ ಶಾಸನದ ಉಲ್ಲೇಖದಂತೆ ''ಶ್ರೀ ಮದಣಮಾದ್ಯಷ್ಟ ಗುಣಸಂಪನ್ನರು ಷಟ್ ಕ್ರಿಯಾನ್ವಿತರುಂ ಸಾರಸೌರಭ್ಯ ಸರ್ವನಿಸ್ಸಂಗರುಮಪ್ಪಶಿವಯೋಗಿ ಶಾಂತಮಯ್ಯಗಳ ಪುತ್ರ ರೇಣುಕಾಚಾರ್ಯರ ಪ್ರಸಿದ್ಧಿಯೆಂತೆಂದಡೆ'' ಎನ್ನುವಲ್ಲಿ ಶ್ರೀ ರೇವಣರು ಆಚಾರ್ಯರಾಗಿ ಪ್ರಸಿದ್ಧಿ ಹೊಂದಿರುವುದು ತಿಳಿದುಬರುತ್ತದೆ (ಶಿವಾನುಭವ ಸಂಪುಟ iv-೨). ಮೇಲಿನ ಶಾಸನದ ಪ್ರಕಾರ ರೇವಣರು ರೇವಣದೇವಂ ಎಂದು ಹೊಗಳಲ್ಪಟ್ಟಿದ್ದಾರೆ. ವೀರಶೈವದಲ್ಲಿ ಅನುಗ್ರಹ ಹೊಂದಿದವರಿಗೆ 'ದೇವರು', 'ದೇಶಿಕರು' ಎಂದು ಈಗಲೂ ಕರೆಯುತ್ತಾರೆ. ''ಬಸವೇಶ್ವರನು ಕಲ್ಯಾಣದಲ್ಲಿ ಇರುವಾಗಲೇ ಅವರನ್ನು ಗುರುವನ್ನಾಗಿಯೂ ಅಲ್ಲಮ ಪ್ರಭುಸ್ವಾಮಿಗಳನ್ನು ಪರಮಗುರುವನ್ನಾಗಿಯೂ ಏರ್ಪಡಿಸಿ ಪ್ರಭುಸ್ವಾಮಿಗಳ ಶೂನ್ಯಸಿಂಹಾಸನದ ಪಟ್ಟದ ಚರಮೂರ್ತಿಗಳಾದ ಶ್ರೀ ಚೆನ್ನಬಸವಣ್ಣನವರಿಗೂ ಗುರುವಿನ ಗುರು ಎಂಬ ಗೌರವವನ್ನು ಕೊಟ್ಟು ಆಚಾರಣೆಯಂ ಪಿಡಿದು ಆಚರಿಸಿ ಆಚಾರ್ಯರೆಂಬ ಅಭಿಧಾನವಂ ಪಡೆದು ..... ಶ್ರೀ ಗುರು ಬಸವಲಿಂಗ ಮೂರ್ತಿಯ ಸದ್ ಭಕ್ತಿವರ್ತನ ಸಾಂಪ್ರದಾಯಕರಾಗಿ ವರ್ತಿಸುವರೇ ಚತುರಾಚಾರ್ಯರ ವಂಶೋತ್ಪತ್ತಿಯ ಸುಲಕ್ಷಣಂ ಎಂದೂ ನಮಃ ಶಿವಾಯ ಎಂಬ ಐದು ಅಕ್ಷರಗಳೊಳಗೆ ನಕಾರಾದಿ ಚತುರಕ್ಷರ ಕಲಶ ಮೂರ್ತಿಗಳೇ ರೇಣುಕಗಣೇಶ್ವರ, ಮರುಳ ಶಂಕರೇಶ್ವರ, ಏಕೋರಾಮೇಶ್ವರ, ಪಂಡಿತೇಶ್ವರ ಎಂಬುವರೇ ಚತುಃ ಕಲಶಾಚಾರ್ಯರು ಎಂದೂ ''ಅನಾದಿ ವೀರಶೈವ ಸಂಗ್ರಹ'' ಎಂಬ ಗ್ರಂಥದಲ್ಲಿ ಹೊಗಳಿಸಿಕೊಂಡ ವ್ಯಕ್ತಿತ್ವ ಇವರದಾಗಿದೆ. ಜಂಗಮವಾದ ಪ್ರಭುಸ್ವಾಮಿಗಳ ಪಾದ ಪೂಜೆಯ ಮಾಡುವಲ್ಲಿ ಬಸವೇಶ್ವರವೆಂಬ ಗುರುವಿಗೆ ಈ ನಾಲ್ಕು ಜನ ಆಚಾರ್ಯರೂ ಸಹಾಯಕರು ಈ ರೀತಿಯಾಗಿ ವೀರಶೈವ ಸಮಾಜದ ಮೂಲರಾದ ಪ್ರಮುಖರಿಂದ ಏರ್ಪಡಿಸಲ್ಪಟ್ಟು ಅದೇ ರೀತಿ ಈವರೆಗೂ ನಡೆದುಕೊಂಡು ಬಂದಿದೆ. ಬಸವಣ್ಣನವರು ಕಲ್ಯಾಣ ಕ್ರಾಂತಿಯಾದ ನಂತರ ಬಿಟ್ಟುಹೋದ ಮೇಲೆ ವೀರಶೈವನನ್ನು ಮುಂದಕ್ಕೆ ತರಲಿಕ್ಕೆ ಶ್ರೀ ರೇವಣರು ವೀರಶೈವ ಧರ್ಮವನ್ನು ಉದ್ಧರಿಸಿದರು.

ಸಿರಿವಾಳ ಶಾಸನದಿಂದ ಶ್ರೀ ರೇವಣರ ಗುರು ಶಾಂತಮಯ್ಯಗಳೆಂದು ತಿಳಿದುಬರುವುದು. ಶ್ರೀ ರೇವಣರು ಆಚಾರ್ಯರೆಂದು ಮೊದಲು ಕರೆಯಲ್ಪಡುತ್ತಿದ್ದು ಕೆಲವು ಕಾಲದ ಅನಂತರ ಗುರುಗಳೆಂದು ಕರೆದದ್ದು ಉಂಟು. ಆದರೆ ಸಾಮಾನ್ಯವಾಗಿ 'ಪಂಚಾಚಾರ್ಯರು' ಎಂದು ಕರೆಯುವ ರೂಢಿಯೇ ಹೆಚ್ಚಾಗಿ ಕಂಡುಬರುವುದು. ಪಂಚಾಚಾರ್ಯರೇ ಒಬ್ಬ ಗುರು ಇರಬಹುದಾಗಿದೆ. ಈಗ ಪ್ರಚಲಿತವಾಗಿರುವಂತೆ ವೀರಶೈವರಲ್ಲಿರುವ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಎಂಬ ಗೋತ್ರಗಳು ಸಮಾಜ ರಚನೆಯ ಪದ್ಧತಿಯನ್ನು ಮುಂದುವರಿಸಿ ಏರ್ಪಡಿಸಿಕೊಂಡರೆಂದು ತಿಳಿದುಬರುತ್ತದೆ.

"ಶ್ರೀ ರೇವಣಸಿದ್ಧರಿಗೆ ಶ್ರೀಶೈಲದ ಸಾರಂಗಮಠವು ಈ ಮಠದ ಮುಂಭಾಗದಲ್ಲಿ ದೊಡ್ಡದೊಂದು ವೀರಭದ್ರ ಪ್ರತಿಮೆ ಇದೆ. ಅವರಿಗೆ ವೀರಗೋತ್ರವು ವಿಧಾಯಿಸಿದೆ. ಚಾರಿತ್ರಿಕ ದೃಷ್ಟಿಯಿಂದ ಆ ಪ್ರತಿಮೆಗಳು ಮೊದಲು ಪ್ರತಿಷ್ಠಾಪಿಸಲ್ಪಟ್ಟವೇ ಅಥವಾ ಗೋತ್ರಗಳ ಏರ್ಪಟ್ಟಾದ ಮೇಲೆ ಪ್ರತಿಮೆಗಳು ಪ್ರತಿಷ್ಠಾಪಿಸಲ್ಪಟ್ಟವೆ ಎಂಬುದನ್ನು ಶೋಧಿಸಿದಾಗ ಪ್ರತಿಮೆಗಳೇ ಮೊದಲೆಂದು ಗೋತ್ರಗಳು ಆಮೇಲೆ ಬಂದವೆಂದು ತಿಳಿಯುತ್ತದೆ."[೯೮]

ಮೊದಲು ಬೆಳಗಾವಿಯ ಹೂಲಿಯಲ್ಲಿ (ಪೂವಲ್ಲಿ) ಎಂಬ ಪಂಚಾಚಾರ್ಯರ ಮಠಗಳಿದ್ದು, ಕೊಲ್ಲಿಪಾಕಿಯಲ್ಲಿ ಆಚಾರ್ಯ ಮಠಗಳು ಕಂಡುಬರುತ್ತವೆ. ನಂತರ ಮಳೆಹಳ್ಳಿ, ಉಜ್ಜಯನಿಯಲ್ಲಿ ಶ್ರೀಶೈಲದಲ್ಲಿ ಪೀಠಗಳಾಗಿರಬೇಕು. ಈ ಆಚಾರ್ಯರು ಎಲ್ಲಾ ಜಾತಿಯ ಜನರಿಗೂ ವೀರಶೈವ ಆಚಾರ್ಯ ಗುರುಗಳೆಂದು ಪ್ರಸಿದ್ಧಿ ಪಡೆದವರು. ರೇವಣಸಿದ್ಧರು ಹಂಡೇ ಕುರುಬರ ಗುರುಗಳಾಗಿರುವುದು ಕಂಡುಬರುತ್ತದೆ. ಹಾಲುಮತದರ್ಶನ ಕಾವ್ಯದಲ್ಲಿ 'ವೀರಶೈವಧರ್ಮಸಿಂಧು' ಎಂಬ ಗ್ರಂಥವು ಪಂಚಾಚಾರ್ಯರು ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳಲ್ಲಿಯೂ ಇದ್ದರೆಂದು ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ, ವಿಶ್ವಕರ್ಣ ಎಂಬ ಹೆಸರಿನಿಂದ ಅನಾದಿಕಾಲದಲ್ಲಿ ಕರೆಯಲ್ಪಟ್ಟು, ತ್ರೇತಾಯುಗದಲ್ಲಿ ಇವರೇ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ, ಪಂಚಾಕ್ಷರ ಎಂಬ ಹೆಸರಿನಿಂದಲೂ ದ್ವಾಪರದಲ್ಲಿ ಇವರೇ ಏಕಮುಖ, ದ್ವಿಮುಖ, ತ್ರಿಮುಖ, ಚತುರ್ಮುಖ, ಪಂಚಮುಖ ಎಂಬ ಹೆಸರಿನಿಂದಲೂ ಕಲಿಯುಗದಲ್ಲಿ ಪುನಃ ಇವರೇ ಉದ್ಭವರಾಗಿ ಬೇರೆ ಹೆಸರಿನಿಂದ ಏಕೋರಾಮ 'ಪಂಡಿತಾಚಾರ್ಯ' ರೇವಣಸಿದ್ದೇಶ್ವರ, ಮರುಳಸಿದ್ದೇಶ್ವರ, ವಿಶ್ವಾರಾಧ್ಯ ಎಂದು ಕರೆಯಲ್ಪಟ್ಟಿರುವುದಾಗಿ ತಿಳಿದುಬರುತ್ತದೆ.

"ಚತುರಾಚಾರ್ಯ ಪ್ರಬಂಧ"ದಲ್ಲಿ ಯುಗಕ್ಕೆ ಒಬ್ಬೊಬ್ಬರು ಗುರುಗಳಾಗಿರಬೇಕೆಂದು ಶ್ರೀ ರೇವಣಸಿದ್ಧರು ಕೃತಯುಗದ ಗುರು, ಮರುಳಸಿದ್ಧರು ತ್ರೇತಾಯುಗದ ಗುರು, ಏಕೋರಾಮರು ದ್ವಾಪರಯುಗದ ಗುರು, ಪಂಡಿತಾರಾಧ್ಯರು ಕಲಿಯುಗದ ಗುರು ಎಂದು ಹೇಳುತ್ತಿರುವರು. ರೇವಣಸಿದ್ಧರು ಮೊದಲನೆಯ ಆಚಾರ್ಯರೆಂದು ತಿಳಿಯಬೇಕಾಗುವುದು."[೯೯] ಅದೇನೇ ಇದ್ದರೂ ಲೋಕಸಂಚಾರಾರ್ಥವಾಗಿ ಅನೇಕ ಜನ ರಾಜರ, ಶ್ರೀ ಸಾಮಾನ್ಯರ, ಋಷಿಮುನಿಗಳ ಪರಿಸರದಲ್ಲಿ ಒಡನಾಡಿದ ಇವರ ವ್ಯಕ್ತಿತ್ವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮನ್ನಣೆಯಿಂದ ಕಂಗೊಳಿಸಿದೆ.

## ಕೊನೆಟಿಪ್ಪಣಿ

೧. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ಪುಟ ೨೪೯

೨. ಅದೇ, ಪುಟ ೨೪೯

೩. ಪಂಚಾಚಾರ್ಯರ ಚರಿತ್ರೆ (ಭಾಗ ೧), ಚೆನ್ನಮಲ್ಲಿಕಾರ್ಜುನ, ಪುಟ ೧೮

೪. ರೇವಣಸಿದ್ಧೇಶ್ವರ ಕಾವ್ಯ, ೧ನೇ ಸಂಧಿ, ಪದ್ಯ ೨೧

೫. ಪಂಚಾಚಾರ್ಯರ ಚರಿತ್ರೆ (ಭಾಗ ೧), ಲೇ. ಚೆನ್ನಮಲ್ಲಿಕಾರ್ಜುನ, ಪುಟ ೧೬

೬. ಶಿವಶರಣೆಯರ ವಚನ ಸಂಪುಟ (ಸಂ), ಡಾ.ವೀರಣ್ಣ ರಾಜೂರು, ವಚನ ಸಂಖ್ಯೆ ೬೦೨

೭. ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್‌ಸ್ಥಲ ಜ್ಞಾನಸಾರಮೃತ, ಸಂ, ಡಾ.ಆರ್ .ಸಿ.ಹಿರೇಮಠ, ವಚನ ಸಂಖ್ಯೆ ೬೦

೮. ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್‌ಸ್ಥಲ ಜ್ಞಾನಸಾರಮೃತ (ಸಂ), ಡಾ.ಆರ್.ಸಿ.ಹಿರೇಮಠ, ವಚನ ೬೧

೯. ಪಂಚಚಾರ್ಯರ ಚರಿತ್ರೆ (ಭಾಗ ೧), ಚೆನ್ನಮಲ್ಲಿಕಾರ್ಜುನ, ಪುಟ ೩೨೬

೧೦. ಸಮಗ್ರ ವಚನ ಸಂಪುಟ ೮

೧೧. ಸುರಪುರ ತಾಲ್ಲೂಕಿನ ಶಾಸನಗಳು (ಸಂ), ಹನುಮಾಕ್ಷಿಗೋಗಿ, ಪುಟ ೫೪

೧೨. ಕಲಬುರ್ಗಿ ಜಿಲ್ಲೆಯ ಶಾಸನಗಳು (ಸಂ), ಹನುಮಾಕ್ಷಿ ಗೋಗಿ, ಪುಟ ೬೦

೧೩. ಅದೇ, ಪುಟ ೧೫೨

೧೪. ಅದೇ, ಪುಟ ೩೩೧ - ೩೩೨

೧೫. ಪಂಚಾಚಾರ್ಯರ ಚರಿತ್ರೆ (ಭಾಗ ೧), ಚೆನ್ನಮಲ್ಲಿಕಾರ್ಜುನ, ಪುಟ ೩೩೯

೧೬. ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ, ಎಂ.ಜಿ.ನಾಗರಾಜ, ಪುಟ ೫

೧೭. ಶಾಸನಗಳಲ್ಲಿ ಶಿವಶರಣರು, ಡಾ.ಎಂ.ಎಂ.ಕಲಬುರ್ಗಿ, ಪುಟ ೧೧೩

೧೮. ಅದೇ, ಪುಟ ೪೫

೧೯. ಅದೇ, ಪುಟ ೪೫

೨೦. ಪಂಚಾಚಾರ್ಯರ ಚರಿತ್ರೆ (ಭಾಗ ೧), ಚೆನ್ನಮಲ್ಲಿಕಾರ್ಜುನ, ಪುಟ ೩೧೭

೨೧. ಅದೇ, ಪುಟ ೩೩೦

೨೨. ಅದೇ, ಪುಟ ೩೩೬

೨೩. ಗುಲಬರ್ಗಾ ಜಿಲ್ಲೆಯ ಶಾಸನಗಳು, ಹನುಮಾಕ್ಷಿಗೋಗಿ, ಪುಟ ೧೨೩

೨೪. ರೇವಣಸಿದ್ಧರು, ಎಂ.ಫಿಲ್. ಪ್ರಬಂಧ, ಅಪ್ರಕಟಿತ, ಸರಸ್ವತಿ ನವಣಿ ಪರಿಶಿಷ್ಟ, ಪುಟ ೨೨

೨೫. ಇತಿಹಾಸ ದರ್ಶನ, ಸಂಪುಟ ೫ (ಸಂ), ಸೂರ್ಯನಾಥ ಕಾಮತ್, ಪ್ರೊ. ಲಕ್ಷ್ಮಣ್ ತೆಲಗಾವಿ, ಪುಟ ೩೧ - ೩೩

೨೬. ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೭, ಮರಡಿಪುರ ಶಾಸನ ೧೩, ಮಂಡ್ಯ ಜಿಲ್ಲೆ

೨೭. ಸಮಗ್ರ ವಚನ ಸಂಪುಟ ೮, ವಚನ ೪೫೧

೨೮. ಅದೇ, ವಚನ ೧೧೩೦

೨೯. ಶಿವಶರಣೆಯರ ವಚನ ಸಂಪುಟ (ಸಂ), ಡಾ.ವೀರಣ ರಾಜೂರು, ವಚನ ಸಂಖ್ಯೆ ೬೦೨. ಪುಟ ೨೩೦

೩೦. ಸಮಗ್ರ ವಚನ ಸಾಹಿತ್ಯ ಸಂಪುಟ ೯, ವಚನ ೨೩೭

೩೧. ಅದೇ, ವಚನ ೧೧೧೩

೩೨. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ಸ್ಥಲ ೪, ಗದ್ಯ

೩೩. ಅದೇ, ಸ್ಥಲ ೫ - ೭೦

೩೪. ಪಂಚಾಚಾರ್ಯರ ಚರಿತ್ರೆ, (ಭಾಗ - ೧), ಚೆನ್ನಮಲ್ಲಿಕಾರ್ಜುನ, ಪುಟ ೨೦೭

೩೫. ಶರಣ ಸಾಹಿತ್ಯ ಸಂಪುಟ ೭ (ಸಂ), ಪುಟ ೩೩೦, ೧೯೪೪ - ೪೫

೩೬. ಅದೇ, ಸಂಪುಟ ೮, ಪು. ೮೮

೩೭. ಅದೇ, ಪುಟ ೮೮ ರಿಂದ ೧೦೩, ೧೯೨, ೨೩೯, ೨೫೫

೩೮. ಅದೇ ಸಂಪುಟ ೭ (ಸಂ), ಅನಕೃ, ಪುಟ ೫ - ೬

೩೯. ಪಂಚಾಚಾರ್ಯರ ಕಾಲನಿರ್ಣಯ, ಕರ್ಲಮಂಗಲಂ ಶ್ರೀಕಂಠಯ್ಯ, ಪುಟ ೫೫

೪೦. ಪಂಚಾಚಾರ್ಯರ ಚರಿತ್ರೆ, (ಭಾಗ - ೧), ಚೆನ್ನಮಲ್ಲಿಕಾರ್ಜುನ, ಪುಟ ೧೬೪

೪೧. ಬಸವೇಶ್ವರ ಸಮಕಾಲೀನವರು, ಬಿ.ಶಿವಮೂರ್ತಿಶಾಸ್ತ್ರೀ, ಪುಟ ೩೦೯

೪೨. ವಚನ ಶೋಧ - ೨, ಡಾ. ಎಂ.ಎಂ.ಚಿದಾನಂದಮೂರ್ತಿ, ಪುಟ ೨೭

೪೩. ಶರಣ ಸಾಹಿತ್ಯ ಸಂಪುಟ ೭ (ಸಂ), ಅನಕೃ, ಪು. ೨

೪೪. ಶರಣ ಸಾಹಿತ್ಯ ಸಂಪುಟ ೭ (ಸಂ), ಅನಕೃ, ಸಂಚಿಕೆ - ೧, ಸಂಪುಟ - ೨

೪೫. ಲಿಂಗಾಯತ ವಿದ್ಯಾವರ್ಧಕ ಸಂಸ್ಥೆ, ಸಾಹಿತ್ಯ ಸಮಿತಿಯ ಪತ್ರಿಕೆ, ಸಂಪುಟ - ೨, ಸಂಚಿಕೆ - ೧, ಪು. ೧೫

೪೬. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ಪದ್ಯ ೬೦, ಪುಟ ೨೮೯

೪೭. ರೇವಣಸಿದ್ದೇಶ್ವರ ಕಾವ್ಯ, ೧-೯

೪೮. ಅದೇ, ೩-೩೩

೪೯. ಪಂಚಾಚಾರ್ಯರು ಮೊದಲನೆಯ ಭಾಗ, ಚೆನ್ನಮಲ್ಲಿಕಾರ್ಜುನ, ಪುಟ ೧೯

೫೦. ಹರಿಹರನ ರಗಳೆಗಳು (ಸಂ), ಡಾ. ಎಂ.ಎಂ.ಕಲಬುರ್ಗಿ, ೧ ಸ್ಥಲ, ೬೦

೫೧. ಅದೇ, ೧ ಸ್ಥಲ, ೧೦೦

೫೨. ಪಂಚಾಚಾರ್ಯರ ಚರಿತ್ರೆ ಭಾಗ ೧, ಚೆನ್ನಮಲ್ಲಿಕಾರ್ಜುನ, ಪುಟ ೩೧೬

೫೩. ಅದೇ, ಪುಟ ೩೨೦

೫೪. ಶಾಸನಗಳಲ್ಲಿ ಶಿವಶರಣರು, ಎಂ.ಎಂ.ಕಲಬುರ್ಗಿ, ಪುಟ ೪೫

೫೫. ಪುರಾಣ ಪ್ರಸಿದ್ಧರಾದ ರೇಣುಕಾಚಾರ್ಯ ಅಥವಾ ರೇವಣಸಿದ್ಧರ ಕಾಲ ನಿರ್ಣಯ, ಜೀರಗಿ ಬಸವಲಿಂಗಪ್ಪ, (೧೯೩೨ ಜನನ), ಶಿವಾನುಭವ ಸಂಚಿಕೆ - ೨, ಸಂಪುಟ - ೨, ಸಂ, ಫ.ಗು.ಹಳಕಟ್ಟಿ

೫೬. ಹಾಲುಮತ ಪುರಾಣ, ಪಂಡಿತ ಚೆನ್ನಬಸವಶಾಸ್ತ್ರಿಗಳು, ೨ ಸಂ, ಪುಟ ೧೨

೫೭. ಜನಪದ ಹಾಲು ಮತ ಮಹಾಕಾವ್ಯ, ಸಂ, ಡಾ.ವೀರಣದಂಡೆ, ಪುಟ ೬೩೨

೫೮. ರೇಣುಕ ವಿಜಯ ಚಂಪೂ, ಪದ್ಯ ೨೩, ೨೪

೫೯. ಪಂಚಾಚಾರ್ಯರು ಮೊದಲನೆಯ ಭಾಗ, ಚೆನ್ನಮಲ್ಲಿಕಾರ್ಜುನ, ಪುಟ ೨೨೫

೬೦. ರೇವಣಸಿದ್ದೇಶ್ವರ ರಗಳೆ, ೪ನೆಯ ಸ್ಥಲ, ಪುಟ ೧೭೦

೬೧. ರೇವಣಸಿದ್ದೇಶ್ವರ ಪುರಾಣ IX, ಪದ್ಯ ೪೮

೬೨. ಅದೇ, ಪದ್ಯ ೨೪

೬೩. ಅದೇ, ಪದ್ಯ ೨೪

೬೪. ಪಂಚಾಚಾರ್ಯರು ಮೊದಲ ಭಾಗ, ಚೆನ್ನಮಲ್ಲಿಕಾರ್ಜುನ, ಪುಟ ೧೫೭

೬೫. ಬಸವೇಶ್ವರ ಚರಿತ್ರೆ, ಸಿಂದಗಿ ಸಿದ್ದಪ್ಪನವರು, ಪುಟ ೭೭

೬೬. ಪಂಚಾಚಾರ್ಯರು ಮೊದಲ ಭಾಗ, ಚೆನ್ನಮಲ್ಲಿಕಾರ್ಜುನ, ಪುಟ ೧೬೮

೬೭. ಹರಿಹರನ ರಗಳೆಗಳು (ಸಂ), ಸಂ, ಡಾ.ಎಂ.ಎಂ.ಕಲಬುರ್ಗಿ, ೧ ಸ್ಥಲ, ೭೦

೬೮. ಅದೇ, ಪುಟ ೧೧೦

೬೯. ಪಂಚಾಚಾರ್ಯರ ಚರಿತ್ರೆ, ಭಾಗ ೧, ಚೆನ್ನಮಲ್ಲಿಕಾರ್ಜುನ, ಪುಟ ೬೭

೭೦. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ೧ ಸ್ಥಲ, ೧೭೦

೭೧. ಅದೇ, ಸ್ಥಲ ೨, ಗದ್ಯ

೭೨. ಅದೇ, ಸ್ಥಲ ೨, ಗದ್ಯ

೭೩. ಅದೇ, ಸ್ಥಲ ೨, ಗದ್ಯ

೭೪. ಅದೇ, ಸ್ಥಲ ೨, ಗದ್ಯ

೭೫. ಅದೇ, ಸ್ಥಲ ೩, ೧೬೦

೭೬. ಅದೇ, ಸ್ಥಲ ೪, ಗದ್ಯ

೭೭. ಅದೇ, ಸ್ಥಲ ೫, ೩೦

೭೮. ರೇವಣಸಿದ್ದೇಶ್ವರ ಕಾವ್ಯ (ಸಂ), ಎಂ.ಎಸ್.ಸುಂಕಾಪುರ, ಒಂದನೆಯ ಸಂಧಿ, ಪದ್ಯ ೨೪

೭೯. ಅದೇ, ಪದ್ಯ ೧೬, ಸಂಧಿ ೨

೮೦. ಅದೇ, ಪದ್ಯ ೩೧, ಸಂಧಿ ೨

೮೧. ಅದೇ, ಪದ್ಯ ೧೦, ಸಂಧಿ ೩

೮೨. ಅದೇ, ಪದ್ಯ ೧೮, ಸಂಧಿ ೧೮

೮೩. ಅದೇ, ಪದ್ಯ ೩, ಸಂಧಿ ೬

೮೪. ಅದೇ, ಪದ್ಯ ೮, ಸಂಧಿ ೬

೮೫. ಅದೇ, ಪದ್ಯ ೨೨, ಸಂಧಿ ೭

೮೬. ಪಂಚಾಚಾರ್ಯರ ಚರಿತ್ರೆ ಭಾಗ ೧, ಚೆನ್ನಮಲ್ಲಿಕಾರ್ಜುನ, ಪುಟ ೫೦

೮೭. ಅದೇ, ಪುಟ ೧೫೭

೮೮. ಅದೇ, ಪುಟ ೫೪ - ೫೫

೮೯. ಅದೇ, ಪುಟ ೬೮ - ೮೯

೯೦. ಅದೇ, ಪುಟ ೭೦ - ೭೧

೯೧. ರೇವಣಸಿದ್ದೇಶ್ವರ ರಗಳೆ, ಸ್ಥಲ ೨

೯೨. ರೇವಣಸಿದ್ದೇಶ್ವರರ ಅವರ ಸಮಕಾಲಿನರು, ಹು.ಶಿ.ಜೋಯಿಸರು, ಪು. ೨೧೨

೯೩. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು (ಸಂ), ಶ್ರೀ.ಸಿ.ಕೆ.ವೆಂಕಟರಾಮಯ್ಯ ಮತ್ತು ಹರ್ಷವರ್ಧನ, ಪು. ೧೭

೯೪. ಚಿತ್ರದುರ್ಗದ ಪಾಳೆಗಾರರ ಚರಿತ್ರೆ (ಸಂ), ಹು.ಶಿ.ಜೋಯಿಸರ ಸಂಶೋಧನ ಲೇಖನಗಳು, ಪು. ೨೧೩

೯೫. ರೇವಣಸಿದ್ದರ ರಗಳೆ, ಹರಿಹರ, ಸ್ಥಲ ೩, ೧೬೦

೯೬. ರೇವಣಸಿದ್ದೇಶ್ವರ ಪುರಾಣ, ಸಂಧಿ - ೧, ಪದ್ಯ - ೧೦

೯೭. ಪಂಚಾಚಾರ್ಯರು ಮೊದಲನೆಯ ಭಾಗ, ಚೆನ್ನಮಲ್ಲಿಕಾರ್ಜುನ, ಪು. ೨೪೮

೯೮. ಅದೇ, ಪು. ೨೪೭

೯೯. ಅದೇ, ಪು. ೧೧

# ೪

# ರೇವಣಸಿದ್ಧರು :

## ಸಾಹಿತ್ಯ ಸೃಷ್ಟಿಸಿದ ಕವಿಗಳ ಇತಿವೃತ್ತ

# ೪

# ರೇವಣಸಿದ್ಧರು :
# ಸಾಹಿತ್ಯ ಸೃಷ್ಟಿಸಿದ ಕವಿಗಳ ಇತಿವೃತ್ತ

## ಪೀಠಿಕೆ

ಹನ್ನೆರಡನೆಯ ಶತಮಾನದ ವೈಚಾರಿಕ ಜಿಜ್ಞಾಸೆಯನ್ನು ಅವಲೋಕಿಸಿದರೆ ಅದೊಂದು ವಿಕಾಸಶೀಲ ತತ್ವಜ್ಞಾನವೆಂಬ ಅಭಿಪ್ರಾಯವು ಸ್ಥಿರಗೊಳ್ಳುತ್ತದೆ. ನವೀನ ಜೀವನ ಮೌಲ್ಯಗಳ ಹರಿಕಾರರಾಗಿ ಶರಣರು ದರ್ಶಿಸಿದ ವಿಚಾರವು ಕರ್ನಾಟಕದಲ್ಲಿ ಶಕ್ತಿಯುತವಾದ ಸಾಮಾಜಿಕ - ಸಾಂಸ್ಕೃತಿಕ ಆಂದೋಲನಕ್ಕೆ ಚಾಲಕ ಶಕ್ತಿಯಾಗಿತ್ತು. ವಿಚಾರ ಸ್ವಾತಂತ್ರ್ಯಗಳು ಈ ಕಾಲದಲ್ಲಿ ರಾಜನಾಯಕತ್ವಕ್ಕೆ ಬದಲಾಗಿ ಶಿವನಾಯಕತ್ವ ಮತ್ತು ಶಿವಸಾಮಾನ್ಯ ನಾಯಕತ್ವ ಮೌಲ್ಯಗಳು ಸಾಹಿತ್ಯದಲ್ಲಿ ಹುಟ್ಟಿ, ಭಾಷಿಕ ರೂಪಗಳಲ್ಲಿ ವಿದ್ವಜ್ಜನಾಭಿಮುಖತೆಗೆ ಬದಲು ಜನಾಭಿಮುಖತೆಯನ್ನು ಸಾಧಿಸಿತು. ಧರ್ಮ, ಸಾಹಿತ್ಯ, ಸಂಸ್ಕೃತಿ ಪ್ರತಿಭೆಗಳಾದ ಪಾಲ್ಕುರಿಕೆ ಸೋಮನಾಥ, ಕೆರೆಯ ಪದ್ಮರಸ, ಹರಿಹರ ರಾಘವಾಂಕಾದಿಗಳು ಶರಣತತ್ವ ಮತ್ತು ಶರಣ ವ್ಯಕ್ತಿಗಳನ್ನು ಕಾವ್ಯಗೊಳಿಸಿದರು. ವಚನಕಾರರು, ಶರಣಕವಿಗಳು ಬರಿಯ ಟೊಳ್ಳು ತತ್ವ ಹೇಳಲಿಲ್ಲ ಅಂದು ಸಮಾಜವು ಡಾಂಭಿಕರಿಂದ, ಶೋಷಕರಿಂದ ತುಂಬಿ ಕೊಳೆತು ನಾರುತ್ತಿತ್ತು. ಅಂತಹ ಸಂದರ್ಭದಲ್ಲಿ ಹೊಸ ಸಮಾಜದ ನಿರ್ಮಾಣಕ್ಕೆ ಅವರ ಸೂಳ್ನುಡಿಗಳೇ ಮುಂದಿನ ಕವಿಗಳಿಗೆ ಪ್ರೇರಕ ಶಕ್ತಿಯಾದವು; ಶರಣರ ವಚನ ವಿಚಾರಗಳು. ಭಕ್ತಿಯ ಭಾಗ್ಯವೆನಿಸಿದ ಶರಣರು ಮುಂಬರುವ ಕವಿಗಳ ನಾಯಕರಾದರು. ಭಾಷೆಯಾದರು, ಕಾವ್ಯವಾದರು.

ದೇವವಾಣಿಯ ಜನವಾಣಿಯಾಗದೇ ಇದ್ದ ಸಂದರ್ಭದಲ್ಲಿ ಜನವಾಣಿಯು ದೇವರ ಸ್ಥಾನಕ್ಕೇರಿಸಿದ ಶ್ರೇಯಸ್ಸು ಶರಣರಿಗೆ ಸಲ್ಲುತ್ತದೆ.

ಸಾಹಿತ್ಯ ಚರಿತ್ರೆಯಲ್ಲಿ ಕವಿಗಳ ಮಹಾಕಾವ್ಯಗಳು, ಭಕ್ತಿಯ ಉತ್ಕಟವಾಗಿ ಮೂಡಿಬಂದಿರುವದು, ಇಂತಹ ಸಂದರ್ಭದಲ್ಲಿ ರಾಜಾಶ್ರಯವನ್ನು ಧಿಕ್ಕರಿಸಿ ಸಾಮಾನ್ಯ ಜನರ ಬದುಕು - ಭಾಷೆಗಳ ಪ್ರೇರಣೆಯಿಂದ ಜನಾಶ್ರಯದ ಕೃತಿಗಳು ಸೃಷ್ಟಿಯಾದವು. ಅರಮನೆ - ಗುರುಮನೆಗಳನ್ನು ತೊರೆದು ಜನ ಬದುಕಬೇಕೆಂದು ಕಾವ್ಯ ರಚಿಸುವದರ ಮೂಲಕ ಸಾಹಿತ್ಯದಲ್ಲಿ ವಿನೂತನ ಯುಗವೊಂದನ್ನು ಸ್ಥಾಪಿಸಿದರು. ಸತ್ಯ, ನನ್ನಿ, ತ್ಯಾಗ, ದಾನ, ದಯೆ, ಶೀಲ, ತಪ ಮುಂತಾದ ಜೀವನದ ಸಿದ್ಧಾಂತಗಳು ಕೇವಲ ವೀರ ಪ್ರವೃತ್ತಿಯು ಮನೋಧರ್ಮಗಳಲ್ಲ, ಬದಲಾಗಿ ಧರ್ಮಪ್ರವೃತ್ತಿಯು ಜೀವನ ಪದ್ಧತಿಗಳೆಂಬುದನ್ನು ಈ ಪರಿಸರದ ಕವಿಗಳು ತೋರಿಸಿ ಕೊಟ್ಟರು. ವಿಶೇಷವಾಗಿ ಹರಿಹರ ಯುಗವನ್ನೇ ಸ್ಥಾಪಿಸಿದ ಹರಿಹರ ರಾಘವಾಂಕರು ಶಿವಶರಣರ ಜೀವನಚರಿತ್ರೆಗಳನ್ನು, ಅದರ ತತ್ವಸಿದ್ಧಾಂತಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ತುಂಬಾ ಮಹತ್ವದ ಪಾತ್ರವಹಿಸಿದರು. ಈ ಹಿನ್ನೆಲೆಯಲ್ಲಿ ರೇವಣಸಿದ್ಧರನ್ನು ಕುರಿತಾಗಿ ಕನ್ನಡದಲ್ಲಿ ಆರು ಕೃತಿಗಳು ರಚನೆಯಾಗಿದ್ದು, ಇವು ರೇವಣಸಿದ್ಧರ ವ್ಯಕ್ತಿತ್ವವನ್ನು ಕಟ್ಟಿಕೊಡಲು ತುಂಬಾ ಸಹಕಾರಿಯಾಗುತ್ತವೆ. ಹೀಗೆ ಆತನ ಕುರಿತಾದ ಪ್ರಧಾನ ಕೃತಿಗಳಲ್ಲದೆ ಹತ್ತಾರು ಕೃತಿಗಳಲ್ಲಿ ಈತನ ವಿಚಾರವಾಗಿ ಪ್ರಾಸಂಗಿತ ಉಲ್ಲೇಖಗಳನ್ನು ನೀಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ರೇವಣಸಿದ್ಧರ ಕುರಿತು ಕಾವ್ಯ ರಚಿಸಿದ ಕವಿಗಳ ಇತಿವೃತ್ತವನ್ನು ಮತ್ತು ಅವರ ಧೋರಣೆಗಳನ್ನು ಚರ್ಚಿಸಲಾಗಿದೆ.

೧. **ಹರಿಹರ :** ರೇವಣಸಿದ್ದೇಶ್ವರ ರಗಳೆಯನ್ನು ಬರೆದ ಹರಿಹರನು ಕ್ರಿ.ಶ. ೧೧೮೦ ರಿಂದ ೧೨೫೦ರ ಕಾಲಾವಧಿಯಲ್ಲಿ ಜೀವಿಸಿದ್ದನು. ಮೂಲತಃ ಹಂಪೆಯವನಾದ ಈತ ದ್ವಾರಸಮುದ್ರದ ಹೊಯ್ಸಳ ಅರಸರ ಆಶ್ರಯದ ಕರಣಿಕ ವೃತ್ತಿಯಲ್ಲಿದ್ದನು. ಅರಸು ಪರಿವಾರದವರ ನೂರೆಂಟು ಸಿಹಿ - ಕಹಿ, ಸೋಲು - ಗೆಲುವುಗಳನ್ನು ಅನುಭವಿಸಿದ ಈತ ತನ್ನ ಜೀವನ ಮತ್ತು ಕಾವ್ಯಧೋರಣೆ ಪರಿವರ್ತನೆಯಿಂದ ಕ್ರಾಂತಿಕಾರಿ ಕವಿಯೆಂದು ಹೆಸರು ಮಾಡಿದನು. ಹೀಗಾಗಿ ಪ್ರತಿಭಟನೆ ಹರಿಹರನ ಸ್ಥಾಯಿಗುಣ, ವರ್ಣಭೇದ ಮತ್ತು ಪೌರೋಹಿತ್ಯವನ್ನು ಆರಾಧಿಸುವ ವೈದಿಕರನ್ನು, ರಾಜಾಶ್ರಯ ನಂಬಿದ ಜೈನರನ್ನು ಕಡೆಗಣಿಸಿ ಪ್ರಜಾಧರ್ಮ ಮತ್ತು ಪ್ರಜಾಹಿತ ಬಯಸುವ ವೀರಶೈವವನ್ನು ನಂಬಿ ಆ ಧರ್ಮದ ತತ್ವ, ಸಿದ್ಧಾಂತ ಹಾಗೂ ಆಚಾರ - ವಿಚಾರಗಳನ್ನು ಕಾವ್ಯದ ಮೂಲಕ ಪ್ರತಿಪಾದಿಸ ಹೊರಟನು. ಈ ಪರಿಣಾಮವಾಗಿ ಶಿವಶರಣರನ್ನು ಕುರಿತು ನೂರಾರು ರಗಳೆಗಳು ಈತನಿಂದ ರಚನೆಯಾದವು.

ತನ್ನ ಪರಿಸರದ ಧಾರ್ಮಿಕ ಸಂಘರ್ಷಗಳು ಬಹು ದೇವೋಪಾಸನೆಗಳು ಮುಂತಾದ ಧರ್ಮಪರ ಚಿಂತನೆಗೆ ತನ್ನ ಮನಸ್ಸನ್ನು ತೊಡಗಿಸಿದನು. ಹರಿಹರ ಶಿವಲೀಲೆ, ಶಿವಚರಿತ್ರೆ, ಶಿವಮತ ಪ್ರಚಾರವನ್ನು

ತನ್ನ ಕಾವ್ಯದ ಮೂಲಕ ಕೈಗೊಂಡನು. ಕನ್ನಡನಾಡಿನಲ್ಲಿ ಐತಿಹಾಸಿಕವಾಗಿ ಆಗಿಹೋದ ಶಿವಭಕ್ತರ ಕುಲ ಜಾತಿಗಳನ್ನೆಣಿಸದೆ ರಗಳೆಗಳಲ್ಲಿ ಹಿಡಿದಿಟ್ಟ ಚರಿತ್ರಾರ್ಹ ಕವಿ ಹರಿಹರ. ಈತನ ವಿಶೇಷವಿರುವದು ಮಾರ್ಗ ಪರಂಪರೆಯಿಂದ ದೇಶಿ ಪರಂಪರೆಯ ಕಡೆಗೆ, ಸಿದ್ಧ ವಸ್ತುವಿನಿಂದ ಐತಿಹಾಸಿಕ ವಸ್ತುವಿನ ಕಡೆಗೆ ಮುಖ ಮಾಡಿ ಹರಿಹರ ಮಾರ್ಗವನ್ನೇ ಹಾಕಿಕೊಟ್ಟಿರುವುದುರಲ್ಲಿ. ರಗಳೆಗಳಲ್ಲದೆ ಚಂಪೂ, ಶತಕ, ಅಷ್ಟಕ ಪ್ರಕಾರಗಳಲ್ಲಿ ಕೆಲವು ಕೃತಿಗಳನ್ನು ರಚಿಸಿದ್ದಾನೆ. ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ - ವೃತ್ತಿ, ಭಕ್ತ - ಭವಿ, ಸಂಸ್ಕಾರ, ವಿವಾಹ ಮುಂತಾದ ಅಂಶಗಳನ್ನು ಮತ್ತು ಆಡಳಿತ ವ್ಯವಸ್ಥೆಯಲ್ಲಿ ದೇಶ, ರಾಜ, ಮಂತ್ರಿ, ಅರಸರ ಪರಿವಾರ ಇತ್ಯಾದಿ ಅಂಶಗಳನ್ನು ಹಾಗೇ ಧಾರ್ಮಿಕ ವ್ಯವಸ್ಥೆಯಲ್ಲಿ ಷಡ್ ದರ್ಶನ, ಶೈವಸಿದ್ಧಾಂತ, ಧಾರ್ಮಿಕ ಸಂಪ್ರದಾಯ, ದೀಕ್ಷೆ, ವ್ರತ, ಮುಂತಾದ ವಿಚಾರಗಳನ್ನು ಚರ್ಚಿಸುವದರ ಮೂಲಕ ಹರಿಹರ ತನ್ನ ಕಾಲಘಟ್ಟದ ಸಾಂಸ್ಕೃತಿಕ ಬದುಕನ್ನು ತೆರೆದ ಕಣ್ಣು ಮನಸ್ಸುಗಳಿಂದ ನೋಡಿದ್ದಾನೆ. ಸ್ವಲ್ಪ ಹೆಚ್ಚು ಕಡಿಮೆ ಹರಿಹರನ ಈ ಧೋರಣೆ ಆತನಿಂದ ರಚಿತವಾದ ಕಾವ್ಯಗಳಿಂದ ಮನವರಿಕೆಯಾಗುತ್ತದೆ. ಪ್ರಸ್ತುತ ರೇವಣಸಿದ್ದೇಶ್ವರ ರಗಳೆ ಐದು ಸ್ಥಲಗಳಲ್ಲಿ ರಚಿತವಾದ ವೀರಶೈವ ಸಿದ್ಧಾಂತಗಳನ್ನು ನಾಡಿನಲ್ಲಿ ಪ್ರಸಾದಿಸುವ ರೇವಣಸಿದ್ಧರ ವ್ಯಕ್ತಿತ್ವವನ್ನು ಅನೇಕ ಪವಾಡ ಮತ್ತು ಅತಿಮಾನುಷ ರೀತಿಯಲ್ಲಿ ಚಿತ್ರಿಸಿದ್ದಾನೆ. ಹೀಗಿದ್ದು ರೇವಣಸಿದ್ಧರ ಚಾರಿತ್ರಿಕ ವ್ಯಕ್ತಿತ್ವವನ್ನು ತಿಳಿದುಕೊಳ್ಳಲು ಈ ಕೃತಿ ಸಹಕಾರಿಯಾಗಿದೆ.

**೨. ಚೆನ್ನಬಸವ :** ಪ್ರಾಚೀನ ಕನ್ನಡ ಹಸ್ತಪ್ರತಿಗಳಲ್ಲಿ ಬಹು ಸಂಖ್ಯೆಯಲ್ಲಿ ಕಾಣಸಿಗುವ ರೇವಣ ಸಾಂಗತ್ಯದ ಕರ್ತೃ ಚೆನ್ನಬಸವ ವೀರಶೈವ ಸಿದ್ಧಕುಲ ತಪೋಮುನಿಯಾದ ರೇವಣಸಿದ್ದೇಶ್ವರ ಚರಿತ್ರೆಯನ್ನು ಬರೆದ ಈತ ತನ್ನ ಚರಿತ್ರೆಯನ್ನು ಕುರಿತು ಚಕಾರವೆತ್ತಿಲ್ಲ. ಹೀಗಾಗಿ ಈತನ ಇತಿ ವೃತ್ತವನ್ನು ಕಟ್ಟಿಕೊಡಲು ಸಾಧ್ಯವಾಗದ ಸ್ಥಿತಿ ಚರಿತ್ರೆಯಲ್ಲಿ ಇಂದು ನಿರ್ಮಾಣವಾಗಿದೆ. ಈಗಿದ್ದು ಆತನ ರೇವಣಸಿದ್ದೇಶ್ವರ ಸಾಂಗತ್ಯದಲ್ಲಿ ಆದಿ ಪದ್ಯವಾದ

"ಶ್ರೀ ಮದ್ಗುರು ರಾಮಗಿರಿಯ ಸಿದ್ದೇಶನ |
ಕೋಮಲ ಪದ್ಮಂಗಳಿಗೇ
ನಾಮದವಿತ್ತೆನ್ನ ಹೃದಯಕಮಲದಭಿ ||
ರಾಮಕುಸುಮ ವಿತ್ತೆರಗುವೆ ||

ಎಂಬುದಾಗಿ, ಅಂತ್ಯದಲ್ಲಿ

ಇದು ರಾಮಗಿರಿಯ ಕರಿಯಸಿದ್ದೇಶನ
ಪದ ಸರೋರುಹ ಮಧುಕರನು
ಸದಮಲ ಚೆನ್ನಬಸವ ಪೇಳ್ವ ಕೃತಿಯೊಳು "

ಎಂಬ ಉಲ್ಲೇಖದಿಂದ ಲಕ್ಷ್ಮೇಶ್ವರ ಸಮೀಪದ ರಾಮಗಿರಿಯ ಕರಿಸಿದ್ದಪ್ಪನವರ ಶಿಷ್ಯನಾಗಿ

ಚೆನ್ನಬಸವ ಕವಿ ಜೀವಿಸಿದ್ದ ನೆಂಬುದು ಮನವರಿಕೆಯಾಗುತ್ತದೆ. ಪ್ರಾಯಶಃ ಸಾಂಗತ್ಯ ಪ್ರಕಾರ ಸಾಹಿತ್ಯ ಚರಿತ್ರೆಯಲ್ಲಿ ಪ್ರಬುದ್ಧವಾಗಿ ಬೆಳೆದ ಕಾಲದಲ್ಲಿ ಅಂದರೆ ಸುಮಾರು ೧೫೫೦ ರಿಂದ ೧೬೫೦ರ ಸರಿಸುಮಾರಿನಲ್ಲಿ ಕವಿ ಜೀವಿಸಿರಬಹುದೆಂದು ತೋರುತ್ತದೆ. ೧೯೧೦ರಲ್ಲಿ ಬಳ್ಳಾರಿಯ ಕರ್ನಾಟಕ ಬುಕ್ ಡಿಪೋದಿಂದ ಪ್ರಕಟ ವಾದ ರೇವಣ ಸಾಂಗತ್ಯವು ಎಂಬ ಕಾವ್ಯದ ತಾಂತ್ರಿಕ ಪುಟದಲ್ಲಿ ಚೆನ್ನಬಸವ ಕವಿ ರೇಣುಕಾರಾಧ್ಯ ಚರಿತ್ರೆ ಎಂಬ ಸಂಸ್ಕೃತ ಗ್ರಂಥದಲ್ಲಿರುವ ಕಥೆಯನ್ನು ಸಂಗ್ರಹಿಸಿ ಸಾಂಗತ್ಯ ಪ್ರಕಾರದಲ್ಲಿ ಕನ್ನಡೀಕರಿಸ ಲಾಗಿದೆ ಎಂದು ಉಲ್ಲೇಖಿಸಲಾಗಿದೆ.

ರಗಳೆ, ಷಟ್ಪದಿ, ತ್ರಿಪದಿ, ಚೌಪದಿ, ಪ್ರಕಾರಗಳಂತಹ ಶುದ್ಧ ದೇಶಿ ಮಟ್ಟುಗಳಲ್ಲಿ ತಮ್ಮ ಭಾವನೆಗಳನ್ನು ಹಿಡಿದಿಟ್ಟ ಕವಿಗಳ ಮನಸ್ಸನ್ನು ಸೂರೆಗೊಂಡ ಮತ್ತೊಂದು ಪ್ರಕಾರ ಸಾಂಗತ್ಯ. ರತ್ನಾಕರ ವರ್ಣಿಯಂತಹ ಕವಿಗಳ ಕೈಯಲ್ಲಿ ಬಳುಕಿದ ಈ ಪ್ರಕಾರ ಸಂಚಿ ಹೊನ್ನಮ್ಮನಂತಹ ಕವಿಯಿತ್ರಿಯರಿಗೂ ಒಲಿದುದು ಈ ಪ್ರಕಾರದಲ್ಲಿರುವ ಶುದ್ಧ ಜನಪದ ಓಘ ಕಾರಣವೆನ್ನಬೇಕು. ಹೀಗಾಗಿ ಪವಾಡ ಪರುಷನೊಬ್ಬನ ವೈಚಾರಿಕ ವ್ಯಕ್ತಿತ್ವವನ್ನು ಹೆಣೆಯಲು ಚೆನ್ನಬಸವ ಕವಿಗೆ ಸಾಂಗತ್ಯ ಪ್ರಕಾರ ಮನ ಸೆಳೆದಿದೆ.

೩. **ಕವಿ ಮಲ್ಲಣ್ಣ :** ಕವಿ ಚರಿತೆಕಾರರ ಅಭಿಪ್ರಾಯದಂತೆ ಕ್ರಿ.ಶ. ೧೪೧೦ರಲ್ಲಿ ಬದುಕಿದ್ದನೆನ್ನಲಾದ ಕವಿ ಮಲ್ಲಣ್ಣನ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈತನ ಕೃತಿ ರೇವಣಸಿದ್ದೇಶ್ವರ ಕಾವ್ಯ ಸಂಪಾದಿಸಿದ ಡಾ. ಎಂ.ಎಸ್.ಸುಂಕಾಪುರ ಅವರು ಪೀಠಿಕೆಯಲ್ಲಿ ಹೀಗೆ ಉಲ್ಲೇಖಿಸುತ್ತಾರೆ. ಮದ್ರಾಸ್ ಪ್ರಾಚ್ಯ ಕೋಶಾಲಯದಲ್ಲಿ ದೊರೆಯುವ ರೇವಣಸಿದ್ದೇಶ್ವರ ಕಾವ್ಯವು ಶಕ ವರುಷ ೧೩೩೫ರಲ್ಲಿ ಅಂದರೆ ಕ್ರಿ.ಶ. ೧೪೧೦ರಲ್ಲಿ ರಚನೆಯಾಗಿದೆ ಎಂಬ ಉಲ್ಲೇಖನದನ್ವಯ ಕವಿ ಚರಿತೆಕಾರರು ಮೇಲಿನ ತೀರ್ಮಾನಕ್ಕೆ ಬರುತ್ತಾರೆ. ಆದರೆ "ಈ ಕೃತಿಯ ಭಾಷಾ ಬಳಕೆ, ಶೈಲಿ ಇತ್ಯಾದಿಗಳನ್ನು ನೋಡಿದರೆ ಇದು ಅಷ್ಟು ಪ್ರಾಚೀನವಲ್ಲವೆನಿಸುತ್ತದೆ. ಮೇಲಾಗಿ "ಕೇಳು ಜನಮೇಜಯ" ಎಂದು ಕವಿ ಕಥೆಯನ್ನು ಮುನ್ನಡೆಸುವ ರೀತಿಯಿಂದ ಈತನ ಕಾಲ ಕುಮಾರವ್ಯಾಸನ ತರುವಾಯವೆಂದು ಸ್ಪಷ್ಟಪಡಿಸುತ್ತದೆ. ಆದುದರಿಂದ ಈತನು ೧೬ ಇಲ್ಲವೆ ೧೭ನೆಯ ಶತಮಾನದವನೆಂದು ಹೇಳಬಹುದಾಗಿದೆ [೨] ಎಂದು ಅಭಿಪ್ರಾಯಪಡುತ್ತಾರೆ.

ಮಲ್ಲು, ಕವಿಮಲ್ಲು, ಕವಿ ಮಲ್ಲಣ್ಣ ಎಂದು ಹೇಳಿಕೊಂಡಿರುವ ಈತನು ಗ್ರಂಥಾದಿಯಲ್ಲಿ

ವಂದಿಸಿದೆ ಕವಿ ಜನರ ಚರಣಕೆ
ವಂದಿಸಿದೆ ಗುರುಪಾದ ಪದ್ಮಕೆ
ವಂದಿಸಿದೆ ಲೋಕೈಕ ರೇವಣಸಿದ್ಧ ಚರಿತೆಯನು
ಬಂದ ಪರಿಯಲಿ ತಪ್ಪ ತಿದ್ದಿರಿ
ಕಂದ ಕವಿ ಮಲ್ಲಣನೆಸಗಿದ
ಚಂದ್ರಶೇಖರ ಜಾಲವಾದಿಯ ಶಂಕರನ ಕೃತಿಯ [೩]

(ಸಂಧಿ - ೧, ಪದ್ಯ - ೩)

ಹಾಗೆಯೇ ಪ್ರತಿ ಸಂಧಿಯ ಕೊನೆಯಲ್ಲಿ "ನಾದ ಪ್ರಿಯನು ಜಾಲವಾದಿಯ ವೇದ ವಂದಿತ ಶಂಕರೇಶನ ಪಾದಪದ್ಮದ ಕೃಪೆಯ ವರಕವಿ ಮಲ್ಲ ..........." "......... ಎನುತ ತೆರಳಿದ ಜಾಲವಾದಿಯ ಘನಮಹಿಮ ತಾ ಶಂಕರೇಶನು ನೆನೆದು ವರಕವಿ ಮಲ್ಲ ....." "..... ಸಕಲ ಜನ ಕೃಪೆ ಜಾಲವಾದಿಯ ಪ್ರಕಟ ಶಂಕರ ಕಮಲಚರಣವ ....." "..... ನಿಟಿಲ ಲೋಚನ ಜಾಲವಾದಿಯ ಕರಿಣಪಟುತರ ಶಂಕರೇಶನು ....." ಹೀಗೆ ಪ್ರತಿ ಸಂಧಿಯಲ್ಲೂ ಜಾಲವಾದಿಯ ಶಂಕರಲಿಂಗವನ್ನು ನೆನೆದಿರುವುದನ್ನು ಗಮನಿಸಿದರೆ ಇಂದಿಗೂ ಬಿಜಾಪುರ ಜಿಲ್ಲೆ ಸಿಂದಗಿ ತಾಲೂಕಿನ ಜಾಲವಾದಿಯಲ್ಲಿ ಪೂಜೆಗೊಳ್ಳುತ್ತಿರುವ ಶಂಕರಲಿಂಗ ಇವನ ಆರಾಧ್ಯದೈವವಾಗಿದೆ. ಮತ್ತು ಜಾಲವಾದಿ ಇವನ ಜನ್ಮಸ್ಥಳವಾಗಿದೆ.

ಕವಿ ಮಲ್ಲಣ್ಣನ ವಿಶೇಷ ಇರುವುದು ಈತನಲ್ಲಿಯ ಪುರಾಣ ಪ್ರಜ್ಞೆಯಲ್ಲಿ. ಹರಿಹರ ರಾಘವಾಂಕರಿಂದ ಚಾರಿತ್ರಿಕ ದೃಷ್ಟಿಯನ್ನು ಪಡೆದುಕೊಂಡ ಕನ್ನಡ ಕಾವ್ಯ ಆನಂತರದ ಭೀಮಕವಿ ವಿರೂಪಾಕ್ಷ ಪಂಡಿತ ಮುಂತಾದವರಿಂದ ಪುರಾಣದ ಹಾದಿಯನ್ನು ತುಳಿಯಿತು. ಇದೇ ಮಾರ್ಗದಲ್ಲಿ ಕೆಲವು ಲಘು ಪುರಾಣಗಳು ಹುಟ್ಟಿಕೊಂಡವು. ಪ್ರಸ್ತುತ ಮಲ್ಲಣ್ಣ ಕೃತ ರೇವಣಸಿದ್ದೇಶ್ವರ ಕಾವ್ಯ ಈ ಗುಂಪಿಗೆ ಸೇರಿದ್ದು. ಹೀಗಿದ್ದು ಮಲ್ಲಣ್ಣ ಇತಿಹಾಸಕ್ಕೆ ಸಂಬಂಧಪಟ್ಟ ಕೆಲವು ಘಟನೆಗಳು ಮತ್ತು ಜನಪದ ಬದುಕಿಗೆ ಸಂಬಂಧಪಟ್ಟ ಆಚಾರಗಳಿಂದ ಸಂಯೋಜಿತವಾದ ಕೃತಿಯನ್ನು ನೀಡಿ ಒಬ್ಬ ಇತಿಹಾಸಕಾರನಾಗಿ ಮತ್ತು ಜನಪದ ಕಾಳಜಿಯುಳ್ಳವನಾಗಿ ಗೋಚರಿಸುತ್ತಾನೆ.

೪. **ಚತುರ್ಮುಖ ಬೊಮ್ಮರಸ :** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬೊಮ್ಮರಸರು ಹೆಸರಿನ ಮೂವರು ಕವಿಗಳು ಕಂಡುಬರುತ್ತಾರೆ. ಚತುರಾಸ್ಯ ನಿಘಂಟನ್ನು ಬರೆದ ಚತುರಾಸ್ಯ ಬೊಮ್ಮರಸ, ಸೌಂದರ್ಯ ಪುರಾಣ ಬರೆದ ಬೊಮ್ಮರಸ ಮತ್ತು ರೇವಣಸಿದ್ದೇಶ್ವರ ಪುರಾಣ ಬರೆದ ಚತುರ್ಮುಖ ಬೊಮ್ಮರಸ. ಸ್ವಲ್ಪ ಹೆಚ್ಚು ಕಡಿಮೆ ಈ ಮೂರು ಮಂದಿ ಕವಿಗಳು ಸಮಕಾಲೀನರೆಂಬುದು ವಿದ್ವಾಂಸರ ಕಾಲ ನಿರ್ಣಯ ಚರ್ಚೆಯಿಂದ ತಿಳಿದುಬರುತ್ತದೆ. ರೇವಣಸಿದ್ದೇಶ್ವರ ಪುರಾಣದ ಕರ್ತೃ ಚತುರ್ಮುಖ ಬೊಮ್ಮರಸ ಮುಗ್ಗೆಯ ಮಾಯಿದೇವನನ್ನು ಸ್ತುತಿಸಿರುವದರಿಂದ ಸುಮಾರು ೧೫೦೦ರಲ್ಲಿ ಜೀವಿಸಿರಬಹುದೆಂಬುದು ಕವಿ ಚರಿತೆಕಾರರ ಅಭಿಪ್ರಾಯ.[೪] ಕವಿ ತನ್ನ ವೈಯಕ್ತಿಕ ವಿಚಾರಗಳನ್ನು ರೇವಣಸಿದ್ದೇಶ್ವರ ಪುರಾಣದಲ್ಲಿ ಹೀಗೆ ಹೇಳಿಕೊಳ್ಳುತ್ತಾನೆ.

ಗುರು ಶಾಂತಮಲ್ಲಿಕಾರ್ಜುನ ಪಾದ ಪದ್ಮ ಮಧು
ಕರನು ಕಾಶ್ಯಪ ಗೋತ್ರ ಜಾತನು ಯಜುರ್ವೇದ
ಪರಿಣಿತನು ಮಾಯಣತ್ಮೋದ್ಭವನು ಶೈವಾಗಮಜ್ಞಮ ಕಲಾಭಿಜ್ಞನು.
ಪರಮ ಬೋದಾಯನ ಮಹಾಸೂತ್ರ ಶೋಭಿತನು
ಸರಸ ಗೀರ್ವಾಣ ಭಾಷಾಯುಕ್ತ ಕರ್ಣಾಟ
ವರವಚಶ್ಯೀಲಸಿತವದನ ತಾಮರಸ ಬೊಮ್ಮರಸ ಪೇಳಿದುದೀ ಕೃತಿ.[೫]

ಮಾಯಣ್ಣನ ಮಗನಾದ ಈ ಕಾಶ್ಯಪ ಗೋತ್ರ ಭೋದಾಯನ ಸೂತ್ರಕ್ಕೆ ಸೇರಿದ ಯಜುರ್ವೇದಿ. ಈತನ ಗುರು ಶಾಂತ ಮಲ್ಲಿಕಾರ್ಜುನ.

೧೩ ಸಂಧಿ ೫೬೫ ವಾರ್ಧಕ ಷಟ್ಪದಿಯಲ್ಲಿ ರಚಿತವಾದ ರೇವಣಸಿದ್ಧೇಶ್ವರ ಪುರಾಣವನ್ನು ಸಂಸ್ಕೃತದ ಈಶಾನ್ಯ ಶಿವಗುರುಗಳು ಮತ್ತು ಕನ್ನಡದ ಹರಿಹರ ಕವಿಯನ್ನು ಅನುಸರಿಸಿ ತನ್ನ ಕೃತಿಯನ್ನು ರಚಿಸಿರುವದಾಗಿ ತಿಳಿಸುತ್ತಾನೆ.

ಈಶಾನ್ಯ ಶಿವಗುರುಗಳಾದಿಯೋಳು ಗೀರ್ವಾಣ
ಭಾಷೆಯಿಂ ಕೃತಿಮೇಳ್ದ ರೇವಣಾಸಿದ್ದೇಂದ್ರ
ದೇಶಿಕನ ಪರಮಲೀಲಾ ಕಥನಮಂ ಸೂಕ್ಷ್ಮವಾಗಿ ರಘಟಾಕಾರದಿಂ
ದೇಸಾಳವಳವಡಲೊಡರ್ಚಿದಂ ಹಂಪೆಯ ಹ
ರೀಶನಿಂತೀವುಭಯ ಮತವನರಿದೊರೆದೆಂ ವಿ
ಲಾಸ ಮಿಗಲೀ ಮಹಾಕಾವ್ಯವ[೬]

'ಚೋಳ ರೇಣುಕ ಸಂವಾದ'ದಂತಹ ಐತಿಹಾಸಿಕ ಸಂಗತಿಗಳನ್ನು ಕಾವ್ಯದ ಮೂಲಕ ಹಿಡಿದಿಟ್ಟಿರುವ ಚತುರ್ಮುಖ ಬೊಮ್ಮರಸನಿಗೆ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವಿದೆ.

**೫. ಚೆನ್ನಬಸವ ಶಾಸ್ತ್ರಿ :** ಹಾಲುಮತ ಪುರಾಣದ ಕರ್ತೃ ಚೆನ್ನಬಸವ ಶಾಸ್ತ್ರೀಗಳು. ಆವರಗೆರೆ ಬೃಹನ್ನಮಠದ ಅಧ್ಯಕ್ಷರಾದ ಶ್ರೀ|ಷ|ಬ್ರ|ಚರಮೂರ್ತಿ ಸಿದ್ಧಲಿಂಗ ಶಿವಾಚಾರ್ಯರ ಅಣ್ಣನವರಾದ ಶ್ರೀ ಪಂಡಿತ ಗುರುಸಿದ್ಧ ಶಾಸ್ತ್ರೀಗಳು ಅವರ ಮಗ. ವೃತ್ತಿಯಿಂದ ಆಯುರ್ವೇದ ವೈದ್ಯ ಪಂಡಿತರಾಗಿದ್ದ ಇವರು ಪ್ರವೃತ್ತಿಯಿಂದ ಕವಿಗಳು ಆಗಿದ್ದರು. ದಾವಣಗೆರೆಯ ಜಿಲ್ಲೆಯ ಚಿಕ್ಕ ಬೂದಿಹಾಳು ಗ್ರಾಮದಲ್ಲಿ ರೇಣುಕ ಗುರುಕುಲಾಶ್ರಮವನ್ನು ಸ್ಥಾಪನೆ ಮಾಡಿ ಅಲ್ಲಿದ್ದುಕೊಂಡು ಕ್ರಿ.ಶ. ೧೯೮೬ರಲ್ಲಿ ಹಾಲುಮತ ಪುರಾಣವನ್ನು ರಚಿಸಿದರು.

ಪಂಡಿತ ಚೆನ್ನಬಸವ ಶಾಸ್ತ್ರೀಗಳು ಹಾಲುಮತ ಪುರಾಣ ಕೃತಿಯಲ್ಲದೆ ವೀರಶೈವಾಚಾರ ದರ್ಪಣ, ಬೃಹತ್ ಶಿವಪೂಜಾವಿಧಿ, ಶ್ರೀಮದ್ ವೇದವೇದಾಂತ ಶಾಸ್ತ್ರಾಂತರ್ಗತ ಶಬ್ದಸಾರ ಸಂಗ್ರಹ, ಆಯುರ್ವೇದ ಕೈಗನ್ನಡಿ ಭಾಗ - ೧, ೨, ಜ್ಞಾನಮಾರ್ಗ ಪ್ರಶಂಸೆ (ಪ್ರಶ್ನೋತ್ತರ ರೂಪಕ), ಇಷ್ಟಲಿಂಗದ ಭಜನೆ, ಸ್ತೋತ್ರ, ಹಾಡುಗಳು, ಆಧ್ಯಾತ್ಮ ಸಂಬಂಧವಾದ ಗದ್ಯ - ಪದ್ಯಗಳು, ಕೋಳೂರು ಕೊಡಗೂಸಿನ ಚರಿತ್ರೆ, ಶಾಲಾ ಮಕ್ಕಳಿಗಾಗಿ ಪ್ರಭು ವಿಜಯ ಚರಿತ್ರೆ, (ನಾಟಕ), ಜೋತಿಷ್ಯ ಸಂಗ್ರಹ ಇತ್ಯಾದಿ ಕೃತಿಗಳ ಮೂಲಕ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ.

**೬. ನಂಜನಗೂಡು ಶ್ರೀಕಂಠಶಾಸ್ತ್ರೀಗಳು :** ನಾಗನೂರು ಬೃಹನ್ ಮಠದ ಅಧ್ಯಕ್ಷರಾದ ಪಂಡಿತ ಕಾಶಿನಾಥ ಶಾಸ್ತ್ರೀಗಳು ಕಾಶಿನಾಥ ಗ್ರಂಥಮಾಲೆಯನ್ನು ಸ್ಥಾಪಿಸುವದರ ಮೂಲಕ ಹತ್ತಾರು

ಜನ ಪಂಡಿತರ ಕವಿಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಅಂತಹವರಲ್ಲಿ ರೇಣುಕವಿಜಯ ಪುರಾಣದ ಕರ್ತೃ ನಂಜನಗೂಡು ಶ್ರೀಕಂಠ ಶಾಸ್ತ್ರೀಗಳು ಒಬ್ಬರು. ಮೈಸೂರು ಅರಸರ ಆಸ್ಥಾನದ ವಿದ್ವಾಂಸರಾದ ಶ್ರೀಕಂಠಶಾಸ್ತ್ರೀಗಳು ಕನ್ನಡದಲ್ಲಿ ಕಾವ್ಯ ನಾಟಕಗಳನ್ನು ರಚಿಸಿದ್ದಾರೆ.

ಶ್ರೀಗಿರೀಂದ್ರ ಪ್ರಿಯಸುತಾವರ |
ವಾಗಧೀಶ್ವರ ವಿಧುಮುಖಾ ಮರ |
ಪೂಗಹಿತಕರ ಗರಪುರಾಲಂಕಾರ ಸುಖಸಾರಾ |
ರಾಗದೂರ ಗಭೀರ ಸಾದರ |
ನೈಗಮವ್ಯಾಹಾರ ಭಾಸುರ |
ಜಾಗು ಮಾಡದೆ ಸಲಹು ನಮ್ಮನು ವಿನತ ಮಂದಾರ [೭]
ಮನವೊಲಿದು ಕರ್ಣಾಕರಾಜ್ಯವ
ನನಿಶವಯಿಂ ಧರ್ಮದಲಿ ರಕ್ಷಿಪ |
ಜನಪ ನಾಲ್ವಡಿ ಕೃಷ್ಣಭೂಮಿಶ್ವರನ ಸಂಮುಖದೇ ||
ವಿನುತಯದುಭವವಂಶಚರಿತವ |
ನನುವಿನುಲ್ಲೇಖಿಸಿದ ಸತ್ಕವಿ
ಜನದೊಳಾದ್ಯಂ ಗರಪುರ ಶ್ರೀಕಂಠಶಾಸ್ತ್ರೀಯೆ ನಾಂ [೮]

ಈ ಮೇಲಿನ ಪದ್ಯಗಳಿಂದ ನಂಜನಗೂಡನ್ನು ಒಂದು ಕಾಲಕ್ಕೆ ಗರಪುರವೆಂದು ಕರೆದಂತಿದೆ. ವಿದ್ವತ್ ವಾತಾವರಣದಿಂದ ಕೂಡಿದ ನಂಜನಗೂಡಿನಲ್ಲಿ ಜನಿಸಿದ ಶಾಸ್ತ್ರೀಗಳು ರೇಣುಕಾಚಾರ್ಯರ ಸಂಪೂರ್ಣ ಲೀಲೆಗಳನ್ನು ಈ ಕಾವ್ಯದ ಮೂಲಕ ವರ್ಣಿಸುವ ಪ್ರಯತ್ನ ಮಾಡಿದ್ದಾರೆ.

**ಕೊನೆಟಿಪ್ಪಣಿಗಳು**

೧. ರೇವಣ ಸಾಂಗತ್ಯ ಸಂಧಿ ೧, ಪದ್ಯ೧ ಮತ್ತು ೯೯
೨. ರೇವಣಸಿದ್ದೇಶ್ವರ ಕಾವ್ಯ, ಸಂ, ಎಂ.ಎಸ್.ಸುಂಕಾಪುರ, ಪೀಠಿಕೆ - V
೩. ರೇವಣಸಿದ್ದೇಶ್ವರ ಕಾವ್ಯ, ಸಂಧಿ ೧ ಮತ್ತು ಪದ್ಯ ೩
೪. ಕರ್ನಾಟಕ ಕವಿ ಚರಿತೆ ಭಾಗ - ೨, ಆರ್.ನರಸಿಂಹಾಚಾರ್ಯ, ಪು. ೭೮
೫. ರೇವಣಸಿದ್ದೇಶ್ವರ ಪುರಾಣ ೧ - ೩೪
೬. ಅದೇ, ೧ - ೨೧
೭. ರೇಣುಕವಿಜಯ ಪುರಾಣಂ ೧ - ೧
೮. ಅದೇ, ೧ - ೧೭

❖❖

೫

# ರೇವಣಸಿದ್ಧರ ಸಾಹಿತ್ಯ : ಕಥಾವಸ್ತು ಸಮೀಕ್ಷೆ

# ೫

# ರೇವಣಸಿದ್ಧರ ಸಾಹಿತ್ಯ : ಕಥಾವಸ್ತು ಸಮೀಕ್ಷೆ

## ೧. ಪ್ರಧಾನ ಕೃತಿಗಳು

### ಅ. ಹರಿಹರನ ರೇವಣಸಿದ್ಧೇಶ್ವರ ರಗಳೆ

ಹದಿಮೂರನೆಯ ಶತಮಾನದಲ್ಲಿ ಹಂಪೆಯಲ್ಲಿ ಬದುಕಿದ ಕವಿ ಹರಿಹರ ಹೊಯ್ಸಳರ ಹಳೇಬೀಡಿನಲ್ಲಿ ಕರಣಿಕನಾಗಿ ಕಾರ್ಯನಿರ್ವಹಿಸಿದನು. ಪರಶಿವನಿಗೆ ತನ್ನ ನಾಲಗೆಯನ್ನು ಮಾರಿಕೊಂಡ ಹರಿಹರ ನೂತನ-ಪುರಾತನ ಶರಣರ ಕುರಿತಂತೆ ರಗಳೆ ಪ್ರಕಾರದಲ್ಲಿ ಕಾವ್ಯ ರಚಿಸಿದ ಈತನು ಶಿವಶರಣರ ವಿಚಾರಗಳನ್ನು ನಾಡಿಗೆ ಪರಿಚಯಿಸುವ ಕೆಲಸದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದನೆಂದೇ ಹೇಳಬೇಕು. ವಿದ್ವಾಂಸರು ಇಲ್ಲಿಯವರೆಗೆ ಈತನ ರಗಳೆಗಳನ್ನು ತಮಿಳುನಾಡಿನ ಪುರಾತನರ ರಗಳೆ, ಕನ್ನಡ ನಾಡಿನ ಶಿವಶರಣರ ರಗಳೆ ಹಾಗೂ ಸಂಕೀರ್ಣ ರಗಳೆಗಳೆಂದು ವರ್ಗೀಕರಿಸುತ್ತ ಇದುವರೆಗೆ ದೊರೆತ ಕನ್ನಡ ನಾಡಿನ ಶರಣರ ರಗಳೆಗಳಲ್ಲಿ ರೇವಣಸಿದ್ಧೇಶ್ವರ ರಗಳೆಯನ್ನು ರಚಿಸಿರುವುದು ತಿಳಿದುಬರುತ್ತದೆ.

ಪ್ರಸ್ತುತ ರಗಳೆ ಒಟ್ಟು ಐದು ಸ್ಥಲಗಳಿದ್ದು, ಭಾಷಾ ಪ್ರಯೋಗ, ಛಂದಸ್ಸು ಹಾಗೂ ರಚನೆಯ ದೃಷ್ಟಿಯಿಂದ ಹೊಸ ದಾರಿಯನ್ನೇ ನಿರ್ಮಿಸಿದ್ದಾನೆ. ಕೊಲ್ಲಿಪಾಕಿಯ ಶಿವಲಿಂಗದಲ್ಲಿ ಜನಿಸಿದ ರೇವಣಸಿದ್ಧನು ವೀರಶೈವ ಧರ್ಮ, ಸಂಸ್ಕೃತಿಯ ಅಸ್ತಿತ್ವಕ್ಕಾಗಿ ನಾನಾ ಭಾಗಗಳಿಗೆ ಸಂಚರಿಸಿ ಶಿವಧರ್ಮವನ್ನು ಪ್ರಚಾರಿಸುವ ಭಕ್ತಿಪರವಶವಾದ ಸನ್ನಿವೇಶಗಳನ್ನು ರಗಳೆಯಂತಹ ಅತಿ ಮಧುರವಾದ ದೇಶಿ ಪ್ರಕಾರದಲ್ಲಿ ಹೇಳಿರುವುದು ಮಹತ್ವದ ಸಂಗತಿ. ಪ್ರಸ್ತುತ ರೇವಣಸಿದ್ಧೇಶ್ವರ ರಗಳೆಯ ಕಥಾವಸ್ತು ಸಮೀಕ್ಷೆಯನ್ನು ಇಲ್ಲಿ ಕೊಡಲಾಗಿದೆ.

## ಸ್ಥಲ : ಒಂದು

ಶಿವಸಭೆಯಲ್ಲಿ ನಂದೀಶ, ವೀರಭದ್ರಾದಿ ದೇವಗಣತತಿಗಳು ದಾರುಕ, ರೇಣುಕ, ಗಂಧರ್ವ, ಕಿನ್ನರರೂ, ಗರುಡಗಣ ಸುರಪತಿ, ಅಸುರರು ಸುರರು ಎಲ್ಲರೂ ಶೋಭಿಸುತ್ತಾರೆ. ಶಂಭು ಸಂತಸದಿಂದ ರೇಣುಕನ ಮುಖವನ್ನು ನೋಡಿ ಕರುಣೆಯಿಂದ ಬಾಯ ತಂಬುಲವನ್ನು ಕೊಡಲೆಂದು ಕರೆಯಲು ಭಯಭಕ್ತಿಯಿಂದ ದೇವಾ ಬದುಕಿದೆನು ಎಂದು ಸಡಗರದಿಂದ ದಾರುಕನನ್ನು ದಾಟಿ ಬರುತ್ತಾನೆ. ಮೃಡನು ಈ ಎಲ್ಲವನ್ನು ವೀಕ್ಷಿಸಿ ಪ್ರಸಾದವನ್ನು ಕೊಡುತ್ತಿರಲು, ದಾರುಕನು ದುಮ್ಮಾನದಿಂದ ತಲೆ ಕೆಳಗೆ ಮಾಡಿರಲು ಮುರಾರಿಯು ರೇಣುಕನಿಗೆ ದಾರುಕನನ್ನು ದಾಟಿರುವದರಿಂದ ಜಡಜನ್ಮವಾಗುವದು ನಿನಗೆ ಎನ್ನಲು, ರೇಣುಕನು ಕೈಮುಗಿದು ನಡಗುತ್ತಾನೆ. ದೇವನೆ ಜಡಯೋನಿಯಲ್ಲಿ ಜನಿಸಲಾರೆನು ಶಂಭುವೇ, ಶಂಕರನೇ, ಶಶಿಧರನೆ ಕರುಣಿಸು ಎಂದೂ ಬೇಡಿಕೊಂಡನು. ಈಶ್ವರನು ದಾರುಕನನ್ನು ದಾಟಿದ ತಪ್ಪಿಗಾಗಿ ಭೂಮಿಯಲ್ಲಿ ಸದಮಳವೆನಿಸಿದ ಲಿಂಗದಲ್ಲಿ ಹುಟ್ಟೆಂದು ಬೆಸಸುತ್ತಾನೆ. ರೇಣುಕನು ಭೂಮಿಯ ಮೇಲೆ ಸತತವಾಗಿ ಶಿವಭಕ್ತಿಯಲ್ಲಿ ತೊಳಗುವ ಕೊಲ್ಲಿಪಾಕಿಯೆಂಬ ಹೆಸರಿನ ಶಿವಪುರದಲ್ಲಿ ಸೋಮನಾಥನ ದೇವಾಲಯದಲ್ಲಿ ಗಮಕಿ, ಕವಿ, ವಾಗ್ಮಿಗಳು ಮೆರೆಯುವಾಗ, ಮುಗ್ಧೆಯರು, ವಿದಗ್ದೆಯರು, ಕಲಾವಿದರು ಓಲೈಸುವ ಸಮಯದಲ್ಲಿ ರಂಗಮಂಟಪದ ಜವನಿಕೆ ಸರಿಯುವಾಗ ಸಕಲ ವಾದ್ಯಗಳ ಸಮೇತ ನೃತ್ಯವನ್ನು ಲಲನೆಯರು ಮಾಡುತ್ತಿರುವ ಸಂದರ್ಭದಲ್ಲಿ ಮಹಾಲಿಂಗದಿಂದ ವಜ್ರಕುಂಡಲ, ಕೈಯಲ್ಲಿ ಲಾಕುಳ ಮತ್ತು ಕೋವಣಂ ಧರಿಸಿ ಶಿವಲಿಂಗದಲ್ಲಿ ಹುಟ್ಟಿದ ರೇವಣನು ಲೋಕ ಕಲ್ಯಾಣಾರ್ಥವಾಗಿ ಭೂಮಿಯನ್ನು ಪಾವನವನ್ನಾಗಿ ಮಾಡುವದಕ್ಕೋಸ್ಕರ ಭಸಿತನಾಗಿ, ನೊಸಲಕಣ್ಣುಳ್ಳವನಾಗಿ ಶೋಭಿಸುವ ಅರಳುವ ಕಂಗಳಿಂದ ಬೆಳಗುವಂತೆ ಜ್ಯೋತಿಯಿಂದ ಜ್ಯೋತಿಯೊಗೆದ ತೆರದಂತೆ ಕಾರಣಿಕನಾದ ರೇವಣಸಿದ್ದನು ಮೈದೋರಿದನು.

ಮುಂದೆ ದಕ್ಷಿಣದೇಶಕ್ಕೆ ಹೋಗಿ ಅಗಸ್ತ್ಯರನ್ನು ಕೂಡಿ ಶಿವಭಕ್ತಿಗೋಷ್ಠಿ ಮಾಡಿ ರಾಮೇಶ್ವರಕ್ಕೆ ಬರುವನು. ರಾಮಲಿಂಗಪೂಜೆ ಮಾಡಿ ಹರುಷದಿಂದ ಯಾರು ತಿಳಿಯದಂತೆ ಮರಳನಂತೆ ಊರೂರು ಅಲೆದು ಪಿಣ್ಯಾಂಕನಾಗಿ ಚೋಳ ದೇಶದಲ್ಲಿ ಸಂಚರಿಸುವನು. ತಮಿಳು ದೇಶದ ಶಿವಪುರಗಳನ್ನು ನೋಡುತ್ತ ಪೊನ್ನಂಬಲಕ್ಕೆ ಬಂದು ಅಲ್ಲಿ ಅವರ ನಾಟ್ಯಕ್ಕೆ ಹರುಷಗೊಳ್ಳುತ್ತಾನೆ. ನಂತರ ಕಂಚೀಪುರದ ಏಕಾಮ್ರನಾಥನನ್ನು ಕಡುನಿಷ್ಠೆಯಲ್ಲಿ ದೇವಲೋಕದ ಕರಿಯಮಲ್ಲಿಗೆ ಹೂವಿಂದ ನಾಗಲೋಕದ ಕುಸುಮ ಕುಲದಿಂದ ಏಕಾಮ್ರನಾಥನನ್ನು ನಲ್ಮೆಯಿಂದ ಪೂಜಿಸುವನು. ಆಗ ಲೋಕೈಕ ಬಂಧುವಾಗಿ ವಿರಾಜಿಸುತ್ತ ಆ ಊರಿಗೆ ಈತನಿಂದ ಪಿಣ್ಯಕವೆಂಬ ಹೆಸರು ಪ್ರಾಪ್ತವಾಯಿತು. ಇತ್ತ ಚೋಳರಾಜನು ವಿಷ್ಣು ಪ್ರತಿಮೆಯನ್ನು ನಿಲ್ಲಿಸಲಾಗದೆ ಇರುವಾಗ ಏಕಾಮ್ರನಾಥನಿಗೆ ಪಂಚಾಮೃತ, ಅಭಿಷೇಕ, ದಿವ್ಯಾನ್ನದ ಆರೋಗಣೆ ಮಾಡಿ ಶಿವನಲ್ಲಿ ಮೊರೆ ಹೋಗಲು ಕನಸಿನಲ್ಲಿ ಶಿವನು ಪಿಣ್ಯಾಂಕನ ಇರುವಿಕೆಯನ್ನು ತಿಳಿಸಲು ಚೋಳ ರಾಜನು ತನ್ನ ಕರೆತರಲು ಧೂತರನ್ನು ಕಳುಹಿಸಲು ಬಾರದೆ ಇರುವಾಗ ತಾನೇ

ಹೋಗಿ ವಿನಂತಿಸಿಕೊಳ್ಳುತ್ತಾನೆ. ಆತನ ವಿನಂತಿಗೆ ರೇಣುಕನು ಬಂದು ತನ್ನ ಪುಲ್ಲಿಂಗದ ವೀರ್ಯದ ಮೂಲಕ ವಿಷ್ಣುವಿನ ಮೂರ್ತಿ ಪ್ರತಿಷ್ಠಾಪಿಸುವನು. "ಅರುಳಾಳ್ ಪೆರುಮಾಳ್" ಎಂಬ ಹೆಸರನ್ನು ಪಡೆದು ಬಡಗ ದೇಶಕ್ಕೆ ಹೋಗುತ್ತಾನೆ.

**ಸ್ಥಲ : ಎರಡು**

ರೇವಣಸಿದ್ಧನು ಉತ್ತರದೇಶವಾದ ಮಾಸನೂರಿನ ಹೊರಗಿದ್ದ ಶಿವಾಲಯದ ಸಮೀಪದಲ್ಲಿ ಸಂಧ್ಯಾ ಸಮಯದಲ್ಲಿ ರಂಗಮಂಟಪದ ನಡುವೆ ಸಾಧುವೇಷದಿಂದ ಕುಳಿತಿರಲು, ಅಲ್ಲಿಯ ಪೂಜಾರಿಯು ಶಿವಾಲಯದ ಮುಂಭಾಗದ ಮರಗಳೆರಡರಲ್ಲಿ ಕಾರಣಿಕ ತಗಣೆಗಳೆರಡು ಅಲ್ಲಿಗೆ ಬರುವ ಯಾತ್ರಿಕರನ್ನು ಕೊಲ್ಲುತ್ತಿರುವ ಸಂಗತಿ ತಿಳಿಸಿ ನೀನು ಇಲ್ಲಿರಬೇಡ ಹೋಗು ಎಂದು ಹೇಳುತ್ತಾನೆ. ಆಗ ತ್ರಿಕಾಲದರ್ಶಿಯಾದ ರೇವಣನು ರಾಕ್ಷಸ ಮಿಥುನಗಳು ಶಾಪದಿಂದ ಈ ರೀತಿ ಆಗಿರುವುದನ್ನು ತನ್ನಲ್ಲಿಯೇ ತಿಳಿದುಕೊಳ್ಳುತ್ತಾನೆ. ರೇವಣಸಿದ್ಧನು ತಗಣೆಗಳೆರಡನ್ನು ತನ್ನ ದೃಷ್ಟಿಶಕ್ತಿಯಿಂದ ಕರಗಿಸಿ ಗುಂಡುಗಳಾಗಿ ಮಾಡುವನು. ಮಾಸನೂರು ಕಮ್ಮಾರನಲ್ಲಿಗೆ ಹೋಗಿ ಹೆಣ್ಣು ಗುಂಡನ್ನು ಕಠಾರಿಯನ್ನಾಗಿ ಮಾಡಿ ಮತ್ತೊಂದು ಗುಂಡು ಬಾಗದೆ ಇದ್ದಾಗ ಮಾಂಸದ ತುಂಡೊಂದು ತೋರಿಸಿದಾಗ ಅದು ಬಾಗಿದಾಗಲೇ ಸುರಗಿಯನ್ನಾಗಿ ಮಾಡುವನು. ಮುಂದೆ ರೇವಣಸಿದ್ಧನು ವಿಕ್ರಮಾದಿತ್ಯನಲ್ಲಿಗೆ ಬಂದು ಕಠಾರಿಯನ್ನು ಕೊಟ್ಟು ಕಲ್ಯಾಣದ ಕಲ್ಲಸೆಟ್ಟಿಯ ಮನೆಗೆ ಬರುವನು.

ಗಾಣಿಗನಾದ ಕಲ್ಲಸೆಟ್ಟಿಯು ಕುರುಡನಾಗಿದ್ದನು ಅಲ್ಲದೆ ಆತನ ಹೆಂಡತಿ ಮತ್ತು ಗಾಣದ ಎತ್ತು ಸಹ ಕುರುಡರಾಗಿದ್ದರು. ಅವರ ಕುರುಡುತನವನ್ನು ಕಳೆದು ದಾರಿದ್ರ್ಯವನ್ನು ಹೋಗಲಾಡಿಸಿದನು. ಮುಂದೆ ಮಂಗಳವಾಡಕ್ಕೆ ಬರುವನು. ಮಾಯಿದೇವಿಯೆಂಬ ಸೂಳೆಯು ಶಿವಭಕ್ತಳಾಗಿದ್ದು, ಆಕೆಯ ಮನೆಗೆ ನೀರು ತರುವ ಕಾಯಕ ಮಾಡುತ್ತ ರೇವಣಸಿದ್ಧನು ಕೆಲವು ದಿನಗಳಿದ್ದನು. ಲಂಕೆಯಲ್ಲಿ ರಾವಣನ ತಮ್ಮನಾದ ವಿಭೀಷಣನು ಅಣ್ಣನ ಅಪೇಕ್ಷೆಯಂತೆ ಮೂರು ಕೋಟಿಲಿಂಗವನ್ನು ಪ್ರತಿಷ್ಠಾಪಿಸಬೇಕೆಂಬ ಸಂಕಲ್ಪವನ್ನು ಈಡೇರಿಸಲು ರೇವಣಸಿದ್ಧನು ತಮಿಳು, ಕೇರಳ, ತುಳು, ಮಲೆಯಾಳ, ಮಹಾರಾಷ್ಟ್ರ, ಆಂಧ್ರ, ಕೊಂಕಣಿ, ಕರ್ನಾಟಕ, ಕಾಶ್ಮಿರ, ಕಳಿಂಗ, ವಂಗ, ಬಂಗಾಳ, ಲಾಳ, ಗೌಳ, ಗುರ್ಜರ ದೇಶಾಗಳಾದಿಯಾಗಿ ಸಂಚರಿಸಿ ಅವರವರ ವೇಷದಲ್ಲಿ ಕಾಣಿಸುತ್ತ ಯಾರಿಗೆ ಕುರುಹು ತೋರದೆ, ವಿರೂಪಾಕ್ಷಸಿದ್ಧನೆಂಬ ಸಿದ್ಧನನ್ನು ಭೇಟಿಯಾಗಿ ಮುಂದೆ ವಿಭೀಷಣನ ಕೋರಿಕೆಯಂತೆ ಲಂಕೆಗೆ ಹೋಗುತ್ತಾನೆ. ಮೂರು ಕೋಟಿ ಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ.

**ಸ್ಥಲ : ಮೂರು**

ರೇವಣನು ಲಂಕೆಯಿಂದ ಹಿಮಾಲಯಪರ್ವತದ ಗಂಗಾನದಿ ದಡದಲ್ಲಿಯ ಪಾರಿಜಾತ ಕುಸುಮಗಳಿಂದ ಕಾಶಿ ವಿಶ್ವನಾಥನನ್ನು, ಹಂಪೆಯ ವಿರೂಪಾಕ್ಷನನ್ನು, ಶ್ರೀಶೈಲದ ಮಲ್ಲಿಕಾರ್ಜುನನ್ನು ಅರ್ಚಿಸಿ ಪುನಃ ಮಂಗಳವಾಡಕ್ಕೆ ಹಿಂತಿರುಗುವನು.

ಮಂಗಳವಾಡದ ಬಿಜ್ಜಳನ ಸಭೆಯೊಳಗೆ ರೇವಣನು ಭಿಕ್ಷೆಯನ್ನು ಬೇಡಲು ಬಿಜ್ಜಳನು ಕುದಿಯುವ ಓಗರವನ್ನು ಕೈಯಲ್ಲಿ ಸುರಿಯಲು ರೇವಣನು ನಗುತ್ತ ಸೇವಿಸಿ ಅರಮನೆಯ ಕಂಭಕ್ಕೆ ಒರೆಸುತ್ತಾನೆ. ಅರಮನೆ ಮೊದಲುಗೊಂಡು ರಾಜ್ಯವೆಲ್ಲ ಸುಡಲು ಪ್ರಾರಂಭವಾಯಿತು. ಆಗ ಬಿಜ್ಜಳನು ರೇವಣನ ಚರಣಕ್ಕೆರಗಿ ಬೇಡುವನು. ಆಗ ರೇವಣನು ತಂಪಿನ ಮಳೆ ತರಿಸಿ ಬೆಂಕಿಯನ್ನು ಶಮನಗೊಳಿಸುವನು. ನಂತರ ಬಿಜ್ಜಳನ ಊಟ ಮಾಡಲು ರೇವಣನನ್ನು ಕೇಳಿಕೊಳ್ಳಲು ಒಬ್ಬರೇ ಉಣ್ಣಲಾರೆವು ಸಕಲ ಪರಿವಾರ ಸಮೇತ ಉಣಬಡಿಸುವೆನೆಂದು ಐದು ಮಾನ ಅಕ್ಕಿ, ಐದು ಸೊಲ್ಲಿಗೆ ತುಪ್ಪದಿಂದ ಸಕಲ ರಾಜ್ಯ ಪರಿವಾರವೆಲ್ಲಾ ಊಟ ಮಾಡುವಂತೆ ರೇವಣನು ಅನುಗ್ರಹಿಸಿದನು.

ಮುಂದೆ ಕೊಲ್ಲಾಪುರದ ಗೋರಕ್ಷನನ್ನು ಭೇಟಿಯಾಗಲು ಹೋಗುವನು. ಆತನ ಹೆಂಡತಿ ಹಿರಿಯ ಲಕ್ಕಿದೇವಿಯ ಮಾತನ್ನು ಲೆಕ್ಕಿಸದೆ ಗೋರಖನಾಥನ ಕಿರಿಯ ಲಕ್ಕಿದೇವಿ ಕಠಾರಿಯನ್ನು ಭಿಕ್ಷಕ್ಕೆ ನೀಡುವಳು. ಆಗ ರೇವಣಸಿದ್ದನು ತನ್ನ ಬಿಸುಗಣ್ಣಿನಿಂದ ಕರಗಿಸಿ ಸ್ವೀಕರಿಸಲು ಕಠಾರಿಯು ಗೋರಖನ ಹೊಟ್ಟೆಯಲ್ಲಿ ಮೂಡುತ್ತದೆ. ತವಕದಿಂದ ಹಿರಿಯ ಲಕ್ಕಿದೇವಿ ರೇವಣಸಿದ್ದ ಮುನಿಗೆ ಶರಣೆಂದು ಬೇಡುವಳು. ಗೋರಖನಾಥನ ಹೊಟ್ಟೆಯಲ್ಲಿಯ ಕಠಾರಿಯು ಹೊರಗೆ ಬೀಳಲು ಎಲ್ಲರೂ ಆಶ್ಚರ್ಯ ಚಕಿತರಾಗುವರು. ಹೀಗೆ ಕೊಲ್ಲಾಪುರದಲ್ಲಿ ಮಹಿಮೆಯನ್ನು ತೋರಿ ಮುಂದೆ ವಾರಣಾಸಿಯಲ್ಲಿ ಹೋಗಿರಲು ಇತ್ತ ಬಿಜ್ಜಳನು ಮಾಸೂರಿನ ನದಿಯ ಮಡುವಿನಲ್ಲಿ ಹೂತಿಟ್ಟ ಖಡ್ಗವನ್ನು ಯಾರು ತೆಗೆದು ಕೊಡುವರೋ ಅವರಿಗೆ ಹತ್ತು ಸಹಸ್ರ ಹೊನ್ನನ್ನು ಕೊಡುವುದಾಗಿ ತಿಳಿಸಲು ಖರ್ಪರವೆಂಬ ಕಲಿ ಜೋಗಿಯೊಬ್ಬನು ಸುರಗಿಯನ್ನು ತೆಗೆಯಲು ಹನ್ನೆರಡು ಸಾವಿರ ಕನ್ನಿಕೆಯರನ್ನು ಬಲಿ ಕೊಡುವಂತೆ ಕೇಳುವನು. ಖರ್ಪರನ ಕುಟಿಲತೆಗೆ ವಶನಾದ ಬಿಜ್ಜಳನು ನಾಡೊಳಗೆ ಕನ್ನಿಕೆಯರನ್ನು ಹಿಡಿದು ತರಿಸುತ್ತಾನೆ. ನಾಡೆಲ್ಲಾ ಕಣ್ಣೀರಿನಿಂದ ಗೋಳಿಟ್ಟು ಹುಯ್ಯಲಿಡಲು, ಹನ್ನೆರಡು ಸಾವಿರಕ್ಕೆ ಒಬ್ಬಳು ಕೊರತೆಯಾಗಲು ಮಾಯಿದೇವಿಯ ಪುತ್ರಿಯಾಗಿರುವ ಚಿನ್ನ ರೇವಣದೇವಿಯನ್ನು ಕರೆತರುತ್ತಾರೆ. ಆಗ ಮಾಯಿದೇವಿ ರೇವಣಸಿದ್ದನನ್ನು ನೆನಪಿಸಿಕೊಂಡು ಕರುಣಿಸು ಸಿದ್ದನೆ ನಿನ್ನ ಹೆಸರಾದ ಹಸುಳೆಯನ್ನು ಖರ್ಪರನ ಸುರಗಿ ಕುಹಕತನದಿಂದ ಕಾಪಾಡು ಎಂದು ಬೇಡಲು ರೇವಣನು ಮಾಯಿದೇವಿಯ ಮುಂದೆ ಪ್ರತ್ಯಕ್ಷನಾಗಿ ಆಕೆಯ ಮಗಳನ್ನು ಇನ್ನಿತರರನ್ನು ಬಿಡಿಸಿಕೊಂಡು ಬರುವೆನೆಂದು ಭರವಸೆ ಕೊಡುವನು.

ರೇವಣಸಿದ್ದನು ಬಿಜ್ಜಳನ ಸಭೆಗೆ ಬರಲು ಬಿಜ್ಜಳನು ಅವಸರದಿಂದ ಇದಿರುಗೊಂಡು ಪಾದಗಳಿಗೆ ನಮಿಸಿ ಭದ್ರಾಸನದಲ್ಲಿರಿಸಿ ಚರಣಗಳನ್ನು ತೊಳೆದು, ಪಾದೋದಕವನ್ನು ತೆಗೆದುಕೊಂಡು ಕೈ ಮುಗಿಯುವನು. 'ದೇವ ಬೆಸಸು ಎಂದು ಕೇಳಲು ಭೂಪ, ಖರ್ಪರನ ಕುಟಿಲತೆಗೆ ಬಲಿಯಾಗಿ ಕನ್ನಿಕೆಯರನ್ನು ಕೊಲ್ಲಿಸುವರು ಪಾಪಕರವಾದುದು. ಸ್ತ್ರೀ ವಧೆಯಿಂದ ಅಪಕೀರ್ತಿ ಬರುತ್ತದೆ. ಅದನ್ನು ತ್ಯಜಿಸು ಎಂದು ಹೇಳಿ ಬಿಜ್ಜಳನನ್ನು ಹಾಗೂ ಸಕಲ ರಾಜ ಪರಿವಾರವನ್ನು ಕರೆದುಕೊಂಡು ಹೋಗಿ ಮಾಸೂರ ನದಿಯ ಮಡುವಿನ ಮುಂದೆ ಹೋಗಿ ಗಜದಿಂದ ರೇವಣಸಿದ್ದರು ಇಳಿದು ಹರಗೋಲುನೇರಿ

ಸುರಗಿ ಸಮೀಪ ಬಂದು ಖಡ್ಗವನ್ನು ರೇವಣಸಿದ್ದನು ಹಿಡಿಯಲು ಅದು ಹೊಳೆಯುತ್ತ, ಗರ್ಜಿಸುವುದು. ನೃಪನೇ ನೋಡು ನೋಡು ಎನುತಿರಲು ನೃಪನು ಕೈ ಚಾಚಲು ಐದು ಹೆಡೆಗಳ ಸರ್ಪವಾಗುತ್ತದೆ. ಭಯಭೀತನಾದ ಬಿಜ್ಜಳನು ಸುರಗಿಯನ್ನು ಮಡುವಿನಲ್ಲಿರಿಸಲು ರೇಣುಕನನ್ನು ಬಿನ್ನಹಿಸುತ್ತಾನೆ. ಆಗ ಸಿದ್ದ ನಗುತ್ತ ಸುರಗಿಯನ್ನು ಮತ್ತಲ್ಲಿರಿಸಿ ಬಿಜ್ಜಳನ ಅರಮನೆಯ ಒಳಹೊಕ್ಕನು. ಆಗ ಬಿಜ್ಜಳನು ತನ್ನ ಮಗಳನ್ನು ರೇವಣಸಿದ್ದನಿಗೆ ವೈಭವದಿಂದ ಮದುವೆ ಮಾಡಿ ಆನೆಗಳನ್ನು, ಕುದುರೆಗಳಲ್ಲದೆ ಸಕಲ ಸೇನಾ ಸಮೇತ ಬಳುವಳಿಯನ್ನು ಕೊಡುತ್ತಾನೆ. ಸುಖ ಸಂಭ್ರಮದ ಸಿದ್ದಕುಲ ಶೇಖರನಾದ ಸಿದ್ದ ರೇವಣನು ಜಗದಲ್ಲಿ ಅರಿವಿನ ಮೂರ್ತಿಯಾಗಿ ಶೋಭಿಸಿದನು.

**ಸ್ಥಲ : ನಾಲ್ಕು**

ಶಿವಸ್ವರೂಪವುಳ್ಳವನಾಗಿ ಶಿವಲಿಂಗ ನಿಷ್ಠೆಯಿಂದ ಮಂಗಳವಾಡದಲ್ಲಿ ಕೆಲವು ದಿನ ರಾಜ್ಯ ಸುಖವನ್ನು ಅನುಭವಿಸಿ ಸಿದ್ದ ಕುಲಕ್ಕೆ ಶ್ರೇಷ್ಠನೆಂದು ಬಿಜ್ಜಳನಿಂದ ಬೀಳ್ಕೊಂಡು ದಕ್ಷಿಣಾಭಿಮುಖವಾಗಿ ಆನೆಗಳು, ತುರುಗಗಳು, ಕಾಲಾಳು, ಸೈನ್ಯಗಳು, ಮುಂತಾದ ವಾದ್ಯಗಳ ಆಡಂಬರದಲ್ಲಿ ಚೋಳದೇಶಕ್ಕೆ ಪ್ರಯಾಣಿಸುವನು ಚೋಳಕುಮಾರಿಯನ್ನು ವಿವಾಹವಾಗಿ ಚೋಳ ರಾಜನಿಂದ ಬಳುವಳಿಯನ್ನು ಪಡೆದು ಬಿಳ್ಕೊಂಡು ಶಿವಭಕ್ತರಿಂದ ವಂದಿಸಿಕೊಳ್ಳುತ್ತ ಆ ದೇಶದ ಹಲವು ಶಿವಪುರಗಳನ್ನು ಸಂಚರಿಸುತ್ತಾನೆ. ಚೋಳ ಕೊಟ್ಟ ಚತುರಂಗ ಸಮೇತ ಬಲಗೊಂಡು ಚೇರ, ಮಲೆಯಾಳ, ಗೌಳ, ಗುರ್ಜರ, ನೇಪಾಳ ಮೊದಲಾದ ದೇಶಗಳನ್ನು ಹೊಕ್ಕು ಅಲ್ಲಲ್ಲಿ ರಾಜಪುತ್ರಿಯರನ್ನು ಮದುವೆಯಾಗುತ್ತಾನೆ. ದಾರಿಯಲ್ಲಿ ಕೆರೆಗಳನ್ನು ಕಟ್ಟಿಸುತ್ತ ಶಿವನ ದೇವಾಲಯಗಳನ್ನು, ಅರವಟ್ಟಿಗೆಗಳನ್ನು, ಛತ್ರಗಳನ್ನು ನಿರ್ಮಿಸುತ್ತ, ಕುರುಡರಿಗೆ ಕಣ್ಣುಗಳನ್ನು, ಹೆಳವರಿಗೆ ಕಾಲುಗಳನ್ನು, ಬಂಜೆಯರಿಗೆ ಮಕ್ಕಳನ್ನು, ರಾಜ್ಯವನ್ನು ಕಳೆದುಕೊಂಡ ಅರಸು ಮಕ್ಕಳಿಗೆ ರಾಜ್ಯವನ್ನು ಕೊಡುತ್ತ, ಬಡವರಿಗೆ ಸಂಪತ್ತನ್ನು ಕರುಣಿಸುತ್ತ ಜನರ ಬೇಕು ಬೇಡಗಳನ್ನು ದಯಪಾಲಿಸುತ್ತ ಜಗದ ಇತ್ಯಾರ್ಥಮೂರ್ತಿಯಾದ ರೇವಣಸಿದ್ದನು ಮಂಗಳವಾಡಕ್ಕೆ ಮರಳಿ ಬರುತ್ತಾನೆ.

ಸಿದ್ದ ಸಮಯ ಚಕೋರ ಚಂದ್ರಿಕಾಮಾನನೆಂಬ ಸಿದ್ಧಕುಲ ಜಾತಕ, ಸಾಮರ್ಥ್ಯ ಸಾಗರ, ಶಿವಲಿಂಗ ಸಂಪದನಾದ ರೇವಣಸಿದ್ಧನು ಬಂದಾಗ ಬಿಜ್ಜಳನು ಸಕಲ ಪರಿವಾರ ಸಮೇತನಾಗಿ ಕಾಣಿಕೆ ಕೊಟ್ಟು ಕೈ ಮುಗಿಯುತ್ತಾನೆ. ಆಗ ರೇವಣಸಿದ್ಧನು ಕರುಣಿಸಿ ವಿಭೂತಿಯನ್ನು ಹರಸಿ ಕೊಡುತ್ತಾನೆ. ಅರಮನೆಯ ಸೇವೆಯನ್ನು ಅನುಭವಿಸಿ ಮುಂದೆ ಮಂಗಳವಾಡದ ಹೊರವಲಯದಲ್ಲಿ ನಂದನವನವನ್ನು ನೋಡುತ್ತ ತಟಾಕಗಳನ್ನು ನಿರ್ಮಿಸಲು ತೊಡುಗುತ್ತಾನೆ. ಆಗ ಚೋಳರಾಜಕುಮಾರಿಯು ತನ್ನಿಂದ ಈ ಕೆಲಸ ವಾಗದೆಂದು ಹೇಳುತ್ತಾಳೆ. ಆಗ ರೇವಣನು ತನ್ನ ಒಡವೆಯನ್ನು ನೀಡೆಂದು ಸೌಂದರಿಯ ಮೂರುತಿಂಗಳ ಗರ್ಭದ ಪಿಂಡವನ್ನು ತೆಗೆದು ಭಸಿತವನ್ನು ಕೌಪಿಟ್ಟು ಶಿವಧ್ಯಾನದ ಮುಸುಕಿನಲ್ಲಿ, ಜ್ಞಾನದ ಮರೆಯಲ್ಲಿ, ಚಿತ್ತಭೂಮಿಯಲ್ಲಿ ಬಚ್ಚಿಡುವಂತೆ ಬಚ್ಚಿಟ್ಟು ತಾಯ ಗರ್ಭಕ್ಕಿಂತ ನೂರು ಪಾಲು ರಕ್ಷಣೆ ಮಾಡಿ

ಚೋಳ ಪುತ್ರಿಯನ್ನು ಚೋಳ ದೇಶಕ್ಕೆ ಕಳುಹಿಸುತ್ತಾನೆ. ಆರನೆಯ ಮಾಸದಲ್ಲಿ ತಟಾಕದ ಕೆಲಸವು ಮುಗಿಯುತ್ತದೆ. ಮುಂದೆ ಒಂಭತ್ತು ಮಾಸಗಳು ತೀರಿದವು ಅದನ್ನ ಅರಿತ ರೇವಣಸಿದ್ದನು ಪುತ್ರೋತ್ಸವಕ್ಕೆ ಅನುಕೂಲವಾಗುವಂತೆ ಸಕಲ ಸಿದ್ಧತೆಯಿಂದ ಕೆರೆಯ ಏರಿಯ ಮೇಲೆ ನೆರೆದರು. ಬಸಿರನ್ನು ಇಟ್ಟುಮುಚ್ಚಿದ್ದ ಮುಚ್ಚಳವನ್ನು ತೆಗೆದು ಭಕ್ತಿಭೂಮಿಯೊಳಗೆ ಜ್ಞಾನರಸದಿಂದ ಬೀಗಿ ಬಿರಿದ ಶಿವಕಳಾ ಬೀಜದಿಂದ ನಳನಳಿಸಿ ಬೆಳೆದ ಶಿವಜ್ಞಾನದ ಮೊಳಕೆ ಒಡೆದಂತೆ ತೊಳತೊಳೆಯುವ ಬಾಲಕನನ್ನು ಭೂದೇವಿಯ ಕೈಯಿಂದ ತೊಳೆದುಕೊಂಡು ಮೋಹದಿಂದ ಮುದ್ದಾಡಿ ರುದ್ರಮುನಿಯೆಂದು ಹೆಸರಿಟ್ಟನು. ಊರೊಳಗೆ ತಂದು ಅರಸಿಯರಲ್ಲಿ ಪುಣ್ಯವತಿ ಎನ್ನುವ ಅರಸಿಗೆ ಕೈಗೆ ಕೊಡುವನು. ಮಗು ಪೂರ್ವ ದಿಕ್ಕಿನಲ್ಲಿ ಬೆಳೆಯುವ ಸೂರ್ಯನಂತೆ ಬೆಳೆದು ಎಂಟನೆಯ ವರ್ಷಕ್ಕೆ ಕಾಲಿಡುತ್ತಾನೆ. ಆಗ ಸಂತೋಷದಿಂದ ರೇವಣಸಿದ್ಧನು ಅವನಿಗೆ ಶೈವೋಪದೇಶವನ್ನು ಕರುಣಿಸುವನು.

**ಸ್ಥಲ : ಐದು**

ರೇವಣಸಿದ್ದನು ರುದ್ರಮುನಿ ದೇವರಿಗೆ ಶೈವದೀಕ್ಷೆಯನ್ನು ಕೊಟ್ಟು ಮೋಕ್ಷ ಸಂಪತ್ತನ್ನು ದಯಪಾಲಿಸುತ್ತಾನೆ. ದೇಶದ ನಾನಾ ಭಾಗಗಳನ್ನು ಸಂಚರಿಸಿ ಅನಂತವಾದ ತನ್ನ ಮಹಿಮೆಯನ್ನು ತೋರಿಸುತ್ತಾನೆ. ಹಾವಿನಾಳವೆಂಬ ಅಗ್ರಹಾರದಲ್ಲಿ ಕಲ್ಲಯ್ಯನೆಂಬ ಶಿವಭಕ್ತನು ಕಲ್ಲಿನಾಥನನ್ನು ಪೂಜಿಸುತ್ತ ರೇವಣಸಿದ್ದರಿಗಾಗಿ ಕಾಯುತ್ತಿರುತ್ತಾನೆ. ಆಗ ಅಲ್ಲಿಗೆ ರುದ್ರಮುನಿ ದೇವರೊಂದಿಗೆ ಬಂದ ರೇವಣಸಿದ್ದರು ಕಲ್ಲಯ್ಯನಿಗೆ ರುದ್ರಮುನಿ ದೇವರಿಂದ ಶೈವದೀಕ್ಷೆಯನ್ನು ಕೊಡಿಸುತ್ತಾರೆ. ಇನ್ನೇನು ಪನ್ನಗಾಭರಣ ಅಣತೆಯಂತೆ ನನ್ನ ಕೆಲಸ ಮುಗಿಯತೆಂದು ಸೊನ್ನಲಿಗೆಗೆ ಹೋಗುತ್ತಾನೆ.

ಅಲ್ಲಿ ಚಾಮಲದೇವಿಯೆಂಬ ಶಿವಭಕ್ತೆಯು ರೇವಣಸಿದ್ಧರನ್ನು ಕಂಡು ಕೈಮುಗಿಯುವಳು ಬರಿಗಾಲಲ್ಲಿ ಬಂದು ತನ್ನ ಸೈನ್ಯಕ್ಕೆ ಹಿಂದಕ್ಕೆ ನಿಲ್ಲುವಂತೆ ಹೇಳಿ ಬರುತ್ತಾನೆ. ಈ ಹೊಸ ರೀತಿಯಾಗಿ ಹಾವುಗೆಗಳನ್ನು ಇಲ್ಲದೆ ಬಂದಿರುವುದನ್ನು ಆಶ್ಚರ್ಯ ಚಕಿತಳಾಗಿ ಹೀಗೇಕೆ? ಗುರುವೆ, ದೇವ ದಿವ್ಯ ಅಂಘ್ರಿಯಲಿ ನಡೆಯುವುದು. ಅದ್ಭುತವೆನಗೆ ಎನಲು, ಕೇಳು ಮಗಳೆ ಘನಮಹಿಮೆಯುಳ್ಳ ಶಿವಭೋಗವಾದ ಇಲ್ಲಿ ಮುದ್ದುಗೌಡ, ಸುಗ್ಗವ್ವೆ ಎನ್ನುವ ದಂಪತಿಗಳಿಗೆ ಕಾರಣಿಕ ಸಿದ್ಧನು ಹುಟ್ಟುವನು. ಮೂರು ಜಗಕ್ಕೆ ಇಲ್ಲಿಯ ಕೀರ್ತಿ ಹಬ್ಬುವದು ನಡೆ ಮುದ್ದುಗೌಡನ ಮನೆಗೆ ಭಿಕ್ಷಕೆ ಎಂದು ನಡೆದು ಬರುತ್ತಾನೆ. ಸುಗ್ಗವ್ವೆಯ ಪುಣ್ಯದ ಉದರದಲ್ಲಿ ಮೆರೆವನು ಸಿದ್ಧನಿರುವನೆಂದು ಮುಟ್ಟಿ ಭಸಿತವನ್ನಿಟ್ಟು ಚಾಮಲದೇವಿಗೆ ಹೇಳಿ ರುದ್ರಮುನಿಯನ್ನು ನೋಡಿ ತನ್ನ ಸಂಚಾರವನ್ನು ಮುಂದುವರಿಸುತ್ತಾನೆ.

ಅನೇಕ ತೀರ್ಥ ಕ್ಷೇತ್ರಗಳಲ್ಲಿ ಶಿವಲಿಂಗಗಳನ್ನು ನೋಡುತ್ತ ಕೊನೆಗೆ ಕೊಲ್ಲಿಪಾಕಿಗೆ ಬರುತ್ತಾನೆ. ಅಲ್ಲಿಯ ಸೋಮೇಶ್ವರ ಲಿಂಗವನ್ನು ಕಂಡು ಪುಳಕಿತನಾಗಿ ತಂದೆ ನೀನು ಕರುಣಿಸಿದಂತೆ ಧರೆಯೊಳ್ ಬಂದೆ ಇನ್ನು ನಿನ್ನ ಕೃಪೆಯನ್ನು ಕರುಣಿಸೆಂದು ಬೇಡುತಿರಲು ಹೂವಿನೊಳಗಿರುವ ಪರಿಮಳದಂತೆ

ಬಳ್ಳಿ ಬೀಜದಲ್ಲಿ ಅಡಗಿರುವಂತೆ ರೇವಣಸಿದ್ಧನು ಕೊಲ್ಲಿಪಾಕಿಯ ಶಿವಲಿಂಗದೊಳಗೆ ಹೊಕ್ಕನು. ಆಗ ಹೂಮಳೆಗರೆದವು ಮೊಳಗಿದವು ದುಂದುಭಿಗಳು ಮೇಲೆ ನೆಗೆದಿರುವ ವಿಮಾನವನ್ನು ಕಂಡು ಪುರಜನರು ಬೆರಗಾದರು. ನಾಗಭೂಷಣನ ಕೈಲಾಸದಲ್ಲಿ ಬಾಗಿಲಲ್ಲಿ ನಂದಿಯನ್ನು ಕಂಡು ಒಳಗೆ ಹೋಗಲು ಶಶಿಶೇಖರನು ತನ್ನ ಭಕ್ತನಾದ ರೇವಣಸಿದ್ಧನಿಗೆ ಉನ್ನತಿಯ ರೇಣುಕನೆನಿಪ ನಾಮವನ್ನು ನೀಡಿ ಗಣ ಪದವಿಯನ್ನು ಅನುಗ್ರಹಿಸಿದನು.

### ಆ. ಚೆನ್ನಬಸವನ ರೇವಣ ಸಾಂಗತ್ಯ

ರಾಮಗಿರಿ ಕರಿಸಿದ್ದಪ್ಪನವರ ಶಿಷ್ಯನಾದ ಚೆನ್ನಬಸವ ಕವಿಯಿಂದ ರಚಿತವಾದ ರೇವಣ ಸಾಂಗತ್ಯವು ಹದಿನೈದು ಸಂಧಿಯನ್ನು ಒಳಗೊಂಡಿದೆ. ಸಾಂಗತ್ಯ ಪ್ರಕಾರದಲ್ಲಿರುವ ಈ ಕೃತಿಯಲ್ಲಿ ಪ್ರತಿ ಸಂಧಿಯ ಆರಂಭದಲ್ಲಿ ಆ ಸಂಧಿಯ ಕಥಾವಸ್ತುವನ್ನು 'ಪದನು' ಎಂದು ಸೂಚಿಸಿ ಕೊಡಲಾಗಿದೆ. ಇಲ್ಲಿಯ ಅಧ್ಯಯನಕ್ಕೆ ಬಳಸಿಕೊಂಡ ಗ್ರಂಥವು ಬೆಂಗಳೂರು ಸಿದ್ಧಾಂತಿ ಶಿವಶಂಕರ ಶಾಸ್ತ್ರೀಗಳಿಂದ ರಚಿತವಾದ ಕಥಾಸಾರ ಎಂಬ ಭಾಗದಿಂದ ಕೂಡಿದೆ. ೧೯೧೦ರಲ್ಲಿ ಬಳ್ಳಾರಿಯ ಕರ್ನಾಟಕ ಬುಕ್ ಡಿಪೋ ಏಜೆಂಟರಾದ ಟಿ.ಎ.ಮಾಣಿಕ್ಯಂಶೆಟ್ಟಿ ಅವರಿಂದ ಮುದ್ರಿಸಲ್ಪಟ್ಟಿದೆ. ಪ್ರಾಯಶಃ ಮತ್ತೆ ಈ ಕೃತಿಯ ಪರಿಷ್ಕೃತ ಆವೃತ್ತಿ ಮುದ್ರಣಗೊಂಡಂತೆ ಕಂಡುಬರುವುದಿಲ್ಲ. ಅದೇನೆ ಇದ್ದರೂ ಹದಿನೈದು ಸಂಧಿಯಲ್ಲಿ ೧೬೭೫ ಪದ್ಯಗಳಲ್ಲಿ ರೇವಣಸಿದ್ಧರ ವ್ಯಕ್ತಿತ್ವವನ್ನು ಕಟ್ಟಿಕೊಡಲಾಗಿದೆ. ಹಾಲುಮತ ಪುರಾಣ ಬರೆದ ಪಂಡಿತ ಶ್ರೀ ಚೆನ್ನಬಸವ ಶಾಸ್ತ್ರೀಗಳಂತೆ ಸಾಂಗತ್ಯ ಪ್ರಕಾರವನ್ನು ರಚಿಸುವದರ ಮೂಲಕ ಶ್ರೀ ರೇವಣಸಿದ್ಧೇಶ್ವರರ ಪರಿಚಯವನ್ನು ಹಾಡುಗಬ್ಬದಲ್ಲಿ ಪರಿಚಯಿಸಿದ ಕೀರ್ತಿ ಚನ್ನಬಸವ ಕವಿಗೆ ಸಲ್ಲುತ್ತದೆ. ಪುಸ್ತುತ ಶಿವಶಂಕರ ಶಾಸ್ತ್ರೀಗಳಿಂದ ರಚಿತವಾದ ಕಥಾಸಾರವನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

### ಸಂಧಿ : ಒಂದು

ಪರಮೇಶ್ವರನ ಲೀಲಾ ಮಹಿಮನೆನಿಸುವ ಮಹಾಸಿದ್ಧರ ಕೋಟೆಯಲ್ಲಿ ಅವತರಿಸಿದ ರೇವಣಚಾರ್ಯರ ಸಚ್ಚಾರಿತ್ರವನ್ನು ಈ ರೀತಿಯಾಗಿ ಹೇಳುವೆನು.

ಭೂಗೋಳದಲ್ಲಿ ಸಮುದ್ರವನ್ನು ಒಳಗೊಂಡು ಮೇರೆ ಪರ್ವತ ಆವರಿಸಿಕೊಂಡು ಕೈಲಾಸವು ಮೆರೆಯುತ್ತಿರುವದು. ಶಿವಲೋಕವನ್ನು ವಿಸ್ತರಿಸಿ, ಶಿವಪುರದ ಮಂತ್ರಮಯ ಸಚ್ಚಿದಾನಂದ ದಿವ್ಯಾಕಾರವಾಗಿ ವಿವರಿಸಲು ಶಿವನ ಸಭೆಯಲ್ಲಿ ಪ್ರಮಥರು, ಸಕಲ ದೇವರುಗಳು ಕುಳಿತಿರುವರು. ಆಗ ಭೃಂಗೀಶ ನಾಟ್ಯವನ್ನು ಮಾಡುತ್ತಿರುವನು. ಅಲ್ಲಿ ರೇಣುಕಾಚಾರ್ಯನನ್ನು ಮಹಾದೇವನು ಕರೆಯುತ್ತಾನೆ. ಆಗ ರೇಣುಕನು ಬಂದು ನಮಸ್ಕರಿಸುವ ಸಂದರ್ಭದಲ್ಲಿ ದಾರುಕನನ್ನು ದಾಟಿ ಬರುತ್ತಾನೆ. ದಾರುಕನಿಗೆ ಅಸಮಾಧಾನವಾಗುತ್ತದೆ. ಅದನ್ನರಿತ ಶಿವನು ಭೂಲೋಕದಲ್ಲಿ ರೇಣುಕನಿಗೆ ಜನಿಸುವಂತೆ

ಶಾಪ ನೀಡುತ್ತಾನೆ. ಶಾಪ ಪರಿಹಾರಕ್ಕಾಗಿ ರೇಣುಕನು ಶಿವನಲ್ಲಿ ಪ್ರಾರ್ಥಿಸುವನು. ಆಗ ಶಿವನು ನೀನು ಚಿಂತಿಸಬೇಡ ಲಿಂಗೋದ್ಭವನಾಗಿ ಲಿಂಗಸಂಗಗೊಂಡು ಲಿಂಗದಲ್ಲಿ ಐಕ್ಯವಾಗಿ ಬರುವಿಯಂತೆ ಅಲ್ಲದೆ ಮರ್ತ್ಯದ ಕೋಟಲೆ ಸೋಂಕದಂತೆ ಮಂಗಳವನ್ನು ಮಾಡುವೆನು. ಮಹಿಮೆಯನ್ನು ಧಾರೆ ಎರೆದಿರುವೆ ಎಂದು ಶಿವನು ಹೇಳುತ್ತಾನೆ. ಆಗ ರೇವಣಸಿದ್ಧನು ಶಿವಶಾಸನವನ್ನು ಶಿರಸಾವಹಿಸಿ ಚಂದ್ರಶೇಖರನ ಪಾದ ಅರವಿಂದಗಳಿಗೆ ಎರಗಿ ವೀರಮಹೇಶ್ವರ ಪ್ರಥಮ ಗುರುಸಿದ್ಧ ರೇವಣಮೂರ್ತಿ ಭೂಲೋಕದೊಳದಲ್ಲಿ ವೀರಶೈವಾಚಾರ್ಯನಾಗಿ ಧರೆಗೆ ಬರುವನು.

**ಸಂಧಿ : ಎರಡು**

ಭರತ ಖಂಡದಲ್ಲಿ ದಕ್ಷಿಣಾರ್ಯವರ್ತ ಭೂಮಿಯಲ್ಲಿ ಶಿವಧರ್ಮ ಪ್ರಖರವಾದ ಕೊಲ್ಲಿಪಾಕದ ಶಿವಾಲಯದಲ್ಲಿ ಶಿವಭಕ್ತರು ಸೋಮುವಾರದಲ್ಲಿ ಮಹಾಭೀಷೆಕ ಪೂಜೆಗಳನ್ನು ಮಾಡುತ್ತಿರುವಾಗ ಸರ್ವಜನತೆಗೆ ಶಿವಲಿಂಗದೊಳಗಿಂದ ದಿವ್ಯ ಶಬ್ದವೂ ದಿವ್ಯ ತೇಶೋಪುಂಜವು ಕಾಣಿಸಿತು. ಆ ಸಂದರ್ಭದಲ್ಲಿ ಆಕಾಶದಿಂದ ದೇವದುಂದುಭಿಗಳು ಮೊಳಗುತ್ತಿದ್ದವು. ವೇದಘೋಷ ಕೇಳಿಸಿತು. ಆಗ ಸೋಮೇಶಲಿಂಗದೊಳಗಿನಿಂದ ಶಿವಸಾರೂಪ್ಯವುಳ್ಳ ಮಹಾಪುರುಷನು ರತ್ನಮಕುಟ, ಕುಂಡಲ ಅಲಂಕೃತನಾಗಿ ದಂಡ ಕಮಂಡಲುಗಳಿಂದ ಅವಿರ್ಭವಿಸಿದನು. ಫಾಲನೇತ್ರನು ಭಸ್ಮರುದ್ರಾಕ್ಷಿಗಳನ್ನು, ನಾಗಭರಣವನ್ನು, ಲಿಂಗಾಗಿ ಸಂಗಿಯಾದ ಮೃಡ ಜಂಗಮನು ಹರಕುಮಾರನಾದ ರೇವಣಸಿದ್ದಚಾರ್ಯನ ಲಿಂಗೋದ್ಭವವಾಗುವದನ್ನು ಸರ್ವಜನಗಳು ಅತ್ಯಂತ ಆನಂದ ಆಶ್ಚರ್ಯ ಮತ್ತು ಭಯಭಕ್ತಿ ಭರಿತರಾಗಿ ವೀಕ್ಷಿಸುತ್ತಿದ್ದರು.

ಚಂದ್ರಬಿಂಬದಂತೆ ಹೊಳೆಯುತ್ತಿರುವ ಸಿದ್ಧಮೂರ್ತಿಯ ದಕ್ಷಿಣಾಭಿಮುಖವಾಗಿ ತೆರಳಿ ಸೂರ್ಯನಂತೆ ಆಕಾಶಗಾಮಿಯಾಗಿ ಅಗಸ್ತ್ಯಾಶ್ರಮಕ್ಕೆ ಹೋಗುತ್ತಿರುವದನ್ನು ಸಕಲ ಜನಗಳು ಖಗಮೃಗಳು, ಜಲ ಜಂತುಗಳು ಆಶ್ಚರ್ಯ ಆನಂದದಿಂದ ಸ್ತುತಿಸುತ್ತಿದ್ದರು. ಶ್ರೀ ರೇವಣಮೂರ್ತಿಯು ಗಗನಮಾರ್ಗದಿಂದ ಅಗಸ್ತ್ಯನ ಆಶ್ರಮಕ್ಕೆ ಇಳಿಯುತ್ತಾನೆ. ಅಲ್ಲಿ ಜಟಾರುದ್ರಾಕ್ಷಿ ಭಸ್ಮಧಾರಿಗಳಾದ ಆಗಮಶಾಸ್ತ್ರ ಪುರಾಣ, ಕರ್ಮ ಭಕ್ತಿಯೋಗ ಜ್ಞಾನ ಸಾಧನದಿಂದ ಮಹಾದೇವನನ್ನು ಭಜಿಸುತ್ತಿದ್ದ ತಪಸ್ವಿಗಳ ಸಂಘಗಳನ್ನು ಶ್ರೀ ರೇಣುಕಸಿದ್ದನು ಕಾಣುತ್ತಾನೆ. ಆಗ ಅಗಸ್ತ್ಯ ಮಹಾಮುನಿಯು ಸಹಪರಿವಾರವಾಗಿ ಎದ್ದುಬಂದು ಶ್ರೀಗುರು ರೇವಣಚಾರ್ಯನನ್ನು ಇದಿರುಗೊಂಡು ತನ್ನ ನಿಜಾಲಯಕ್ಕೆ ಕರೆದೊಯ್ದು ಸತ್ಕರಿಸಿ ಕೊಲ್ಲಿಪಾಕದ ಸೋಮೇಶ್ವರ ಲಿಂಗದಿಂದ ಅವತರಿಸಿದ ಲೀಲಾಮೂರ್ತಿಯಾದ ಶಿವರೂಪವೆಂದು ರೇವಣಚಾರ್ಯನನ್ನು ಸ್ತುತಿಸಿ, ಪೂಜಿಸುವನು. ಮುಂದೆ ಪಾದಪೂಜೆ ಮಾಡಿ ತೀರ್ಥವನ್ನು ತೆಗೆದುಕೊಂಡು ಭಕ್ತಿಯಿಂದ ಆರೋಗಣೆಯನ್ನು ಸಮರ್ಪಿಸುತ್ತಾನೆ. ಆಗ ಗುರು ರೇವಣಚಾರ್ಯನು ಸಂಪೂಜೀತನಾಗಿ ಮುನಿಗಳ ಸಭಾ ಮಧ್ಯದಲ್ಲಿ ಸಿಂಹಾಸನಾರೂಢನಾಗಿ ಕುಳಿತಿರುವನು. ದರ್ಶನಕ್ಕಾಗಿ ಮುನಿ ಸಂಘ ಕೋಟೆಗಳು ಆಶ್ರಮಕ್ಕೆ ನಡೆದು ಬರುತ್ತಿದ್ದರು.

## ಸಂಧಿ : ಮೂರು

ಮಹರ್ಷಿಗಳು, ಮಹಾಮುನಿಗಳು, ಜ್ಞಾನಸಿದ್ಧರು, ಮಹಿಮ ಸಿದ್ಧರು ಹೀಗೆ ಯೋಗಿಗಳೆಲ್ಲರೂ ಅಗಸ್ತ್ಯನ ಆಶ್ರಮವನ್ನು ಸೇರಿ ಗುರು ರೇವಣಸಿದ್ಧಾಚಾರ್ಯನನ್ನು ನಮಿಸುತ್ತಿರುವಾಗ ಬ್ರಹ್ಮಸಭಾ ಮಧ್ಯದಲ್ಲಿ ಅಗ್ರಗಣ್ಯನಾದ ಅಗಸ್ತ್ಯನು ರೇವಣಚಾರ್ಯನಿಗೆ ಅತಿ ರಹಸ್ಯವಾದ ಅಷ್ಟಾಂಗಯೋಗದ ಗುಟ್ಟನ್ನು ಹೇಳಬೇಕೆಂದು ಪ್ರಾರ್ಥಿಸುತ್ತಾನೆ. ಆಗ ಶ್ರೀ ರೇವಣಸಿದ್ಧನು ಯಮನಿಯಮಾಸನ, ಪ್ರಾಣಯಾಮ, ಪ್ರತ್ಯಾಹಾರ, ಧ್ಯಾನ ಧಾರಣ ಹಾಗೂ ಸಮಾಧಿಗಳೆಂಬ ಎಂಟು ಶಿವಯೋಗಾಂಗಗಳ ಲಕ್ಷಣ, ಸ್ವರೂಪ ಮತ್ತು ತತ್ವವಿವರಗಳನ್ನು ವಿವರಿಸುವರು. ಚತುರ್ಯಾಶ್ರಮಗಳನ್ನು ವರ್ಗೀಕರಿಸಿ, ಜಾತಿ-ಮತ-ಭೇದಗಳನ್ನು, ಪೂರ್ವಪಕ್ಷ ಸಿದ್ಧಾಂತಗಳನ್ನು, ಸ್ತ್ರೀ ಪುರುಷ ಧರ್ಮಗಳನ್ನು, ಪತಿವ್ರತೆಯ ಲಕ್ಷಣಗಳನ್ನು, ಮಹಾಪುರುಷ ಚಿಹ್ನೆಗಳನ್ನು, ಶಿವಾಚಾರ, ಶಿವಯೋಗ, ಶಿವಕ್ರಿಯಾ, ಶಿವಜ್ಞಾನಗಳ ಪದ್ಧತಿಗಳನ್ನು ಹೇಳುತ್ತಾನೆ. ಆದರೆ ಅಗಸ್ತ್ಯ ಪುನಃ ಕೇಳಲು ಷಟ್ಚಕ್ರಗಳ ವಿಧಾನವನ್ನು ಆರುಶಕ್ತಿ, ಆರುಕಳೆ, ಧ್ಯಾನ ಇವೆಲ್ಲವೂ ಅನುಭವರೂಢವಾಗುವಂತೆ ಉಪದೇಶ ಮಾಡುತ್ತಾನೆ. ಅಲ್ಲದೆ, ತಪೋಮೂಲವನ್ನು ದೀಕ್ಷಾಕ್ರಮವನ್ನು ಮಂತ್ರ ರಹಸ್ಯವನ್ನು ಸಕಾಮ-ನಿಷ್ಕಾಮ ರೀತಿಗಳನ್ನು ಸ್ವರ್ಗ-ನರಕ, ಮುಕ್ತಿ ರಹಸ್ಯಗಳನ್ನು, ಜನನ-ಮರಣ, ತತ್ವರಹಸ್ಯಗಳನ್ನು ಷಡ್ದರ್ಶನ ಪೂಜೆಯಾಗಿ, ತತ್ವವಾದವನ್ನು, ಲಿಂಗೈಕ್ಯದ ಚಿದಂಬರ ರಹಸ್ಯವನ್ನು ಸಚ್ಚಿದಾನಂದ ಸಮರಸವಾಗುವಂತೆ ಹೇಳಿ ಸಕಲ ಸಂಶಯಗಳನ್ನು ಪರಿಹರಿಸುತ್ತಾರೆ. ಆಗ ಎಲ್ಲರೂ ಶ್ರೀ ರೇವಣಸಿದ್ಧರನ್ನು ಶಿವಸ್ವರೂಪಿಯೆಂದು ಕೊಂಡಾಡುತ್ತಾರೆ.

## ಸಂಧಿ : ನಾಲ್ಕು

ಪಿಣ್ಯಾಂಕನೆಂದು ಕರೆಸಿಕೊಳ್ಳುವ ರೇವಣಸಿದ್ಧನು ಚೋಳದೇಶಕ್ಕೆ ಪ್ರಯಾಣಿಸುತ್ತಾನೆ. ಅಲ್ಲಿಯ ಏಕಾಮ್ರನಾಥ ದೇವಾಲಯದಲ್ಲಿ ಮರಳನಂತೆ ಇರುತ್ತಿದ್ದನು. ಅತ್ತ ಚೋಳರಾಜ ವಿಷ್ಣು ಭಕ್ತನಾಗಿ ಕಂಚಿಪುರದಲ್ಲಿ ದೇವಾಲಯವನ್ನು ನಿರ್ಮಿಸಿ ವಿಷ್ಣುಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸುತ್ತಾನೆ. ಚೈತನ್ಯಗೊಂಡ ವಿಷ್ಣುಮೂರ್ತಿ ಶಿವಕ್ಷೇತ್ರವಾದ ಕಾಂಚಿಪುರದಲ್ಲಿ ನಿಲ್ಲಲಾರದೆ ಅಲ್ಲಾಡುತ್ತದೆ ಇದರಿಂದ ಚೋಳರಾಜನು ಚಿಂತೆಗೆ ಒಳಗಾಗಿ ಹರಿಸೇವೆಯ ಸಾರ್ಥಕವಾಗಲಿಲ್ಲವೆಂದು ಅಸಮಾಧಾನಗೊಂಡನು. ತನ್ನ ಸಂಕಲ್ಪ ಸಾಧನೆಗಾಗಿ ವ್ರತನಿಷ್ಠನಾಗಲು ಕನಸಿನಲ್ಲಿ ಏಕಾಮ್ರನಾಥನು ಪ್ರತ್ಯಕ್ಷನಾಗಿ ಪಿಣ್ಯಂಕನೆಂಬ ಹೆಸರಿನಿಂದ ಮರುಳನಂತೆ ಓಡಾಡುತ್ತಿರುವ ರೇವಣಸಿದ್ಧನನ್ನು ಕರೆಯಿಸಿದರೆ ಆತನಿಂದ ಮೂರ್ತಿ ಸ್ಥಿರವಾಗಿ ನಿಲ್ಲುವದೆಂದು ಹೇಳಿದನು. ಆನಂಧಭರಿತನಾದ ಅರಸ ತನ್ನ ಧೂತರನ್ನು ಕಳುಹಿಸಿ ರೇವಣಸಿದ್ಧರನ್ನು ಕರೆತರಲು ಆದೇಶ ಕೊಟ್ಟನು. ಧೂತರು ಎಷ್ಟೇ ಪ್ರಯತ್ನ ಮಾಡಿದರು ಲೀಲಾಮೂರ್ತಿಯಾದ ರೇವಣಸಿದ್ಧರನ್ನು ಕರೆತರಲಾಗಲಿಲ್ಲ ಕೊನೆಗೆ ಚೋಳರಾಜನೆ ಹೋಗಿ ಸಾಷ್ಟಾಂಗ ಪ್ರಣಾಮಗಳನ್ನು

ಎಸಗಿ ತನಗೆ ಬಿದ್ದ ಕನಸಿನ ನಿರೂಪವನ್ನು ಬಿನ್ನಹಿಸಿ ರೇವಣಸಿದ್ಧರನ್ನು ಮೆರವಣಿಗೆಯ ಮೂಲಕ ಕರೆತಂದನು.

ಮೂರ್ತಿಯ ಪ್ರಾಣ ಪ್ರತಿಷ್ಠೆಗೆ ಬೇಕಾದ ಎಲ್ಲಾ ಸಾಮಾಗ್ರಿಗಳನ್ನು ತರಿಸಿ ಆತನು ವಿಶ್ವೇಶರಭಕ್ತ ವಿಶ್ವಾಂಭರನಾದುದರಿಂದ ಲೋಕ ಅಲ್ಲಾಡಿತಲ್ಲದೆ ಆತನ ಅಲ್ಲಾಟವನ್ನು ನಿಲ್ಲಿಸಲಾಗುವುದೆ? ಎಂದು ಅರಸನಿಗೆ ಹೇಳಿ ಸಂಶಯ ಬಿಟ್ಟು ಭಾವಶುದ್ಧಿಯಿಂದ ಕಾರ್ಯ ಪ್ರವೃತ್ತರಾಗಬೇಕೆಂದು ಹೇಳಿ ದಿಗಂಬರನಾದ ಪಿಣ್ಯಂಕ ತನ್ನ ಪುಲ್ಲಿಂಗದ ಕಡೆಗೆ ಕೈನೀಡಿ ವೀರ್ಯವನ್ನು ಪ್ರತಿಮೆಯ ತಲೆಗೆ ಒತ್ತಿದನು. ಪ್ರತಿಮೆ ಅಲ್ಲಾಟವನ್ನು ತೊರೆದು ಸುಪ್ರತಿಷ್ಠೆಗೊಂಡು ದಿವ್ಯ ತೇಜೋಪುಂಜನಾಗಿ ಬೆಳಗುತ್ತಿತ್ತು. ಇದರಿಂದ ಜಿಗುಪ್ಸೆಗೊಂಡ ಚೋಳ ರಾಜನಿಗೆ ಸರ್ವಜ್ಞನಾದ ರೇವಣಸಿದ್ಧನು ಶುದ್ಧ - ಅಶುದ್ಧದ ಬಗೆಗೆ ಸೃಷ್ಟಿಗೆ ಕಾರಣವಾದ ಸಕಲ ಚೈತನ್ಯ ಬಿಂದುವಿನ (ವೀರ್ಯ) ಬಗೆಗೆ ತಿಳುವಳಿಕೆಯನ್ನು ನೀಡಿ ರಾಜನ ಮನಪರಿವರ್ತನೆಯನ್ನು ಮಾಡಿದನು. ನಾದ - ಬಿಂದು - ಕಳೆಗಳಲ್ಲಿ ಶಿವಬಿಂದುವೇ ಜಗನ್ನಿದಾನವು ದೇಹದೊಳು ಬಿಂದುವೇ ಸಾರ ವಸ್ತು ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಶಿವಬಿಂದು ತತ್ವವೇ ಆತ್ಮ ಚೈತನ್ಯವುಳ್ಳದ್ದು, ಅಂತಹ ಆತ್ಮ ಚೈತನ್ಯವನ್ನು ಈ ಮಹಾಶಿವಯೋಗಿಯು ನನಗೆ ಕೊಡಮಾಡಿದ್ದರಿಂದ ನಾನು ಕಳೆವೆತ್ತಿರುವೆನು ಎಂದು ಮೂರ್ತಿಯು ಅರಸನಿಗೆ ತಿಳಿಸಿ ಮೌನಗೊಂಡಿತು. ಮೂರ್ತಿಗೆ 'ಅರುಳಾಳ್ ಪೆರುಮಾಳ'ನೆಂದು ಹೆಸರನ್ನಿಟ್ಟು ಶಿವಯೋಗ ಮಹಿಮೆಯನ್ನು ಅರುಹಿ ಅಲ್ಲಿಂದ ರೇವಣಸಿದ್ಧನು ಬೀಳ್ಕೊಕೊಂಡನು.

**ಸಂಧಿ : ಐದು**

ಈಶನ ಕುಮಾರನಾದ ರೇವಣಸಿದ್ಧನು ದೇಶದೇಶಗಳಲ್ಲಿ ಶಿವಕ್ಷೇತ್ರಗಳನ್ನು ನೋಡುತ್ತಾ ಹೋಗುತ್ತಾನೆ. ಮಾಸನೂರು ಎಂಬ ಪಟ್ಟಣದಲ್ಲಿ ಸಂಪತ್ತಿಗೆ ಆಡಂಬೋಲವಾಗಿ, ಹರನಭಕ್ತಿಯ ಸಾಗರವಾಗಿ ಅಲ್ಲಿಯ ಮಹಾಲಿಂಗ ಗುಡಿಯು ವಿರಾಜಿಸುತ್ತದೆ. ರೇವಣಸಿದ್ಧನು ಅಂಬರಮಾರ್ಗವಾಗಿ ಸಂಭ್ರಮದಿಂದ ರಂಗಮಂಟಪದಲ್ಲಿ ಬಂದು ನಿಲ್ಲುವನು. ಅಲ್ಲಿರುವ ಪೂಜಾರಿಯು ರೇವಣಸಿದ್ಧರಿಗೆ ಹೀಗೆ ಹೇಳುತ್ತಾನೆ. ವಿಷ ತಗಣೆಗಳೆರಡು ಇಲ್ಲಿರುವವು ಇಲ್ಲಿ ಯಾರು ಬರುವಂತಿಲ್ಲ. ಮರಳಯತಿಯೆ ಇಲ್ಲಿ ತಿರುಗಾಡಬೇಡ ಹೊರಟುಹೋಗು ಎಂದು ಹೇಳುತ್ತಾನೆ. ಅಲ್ಲದೆ ತಗಣೆಗಳು ಮರದ ಪೊಟರಿಯಲ್ಲಿರುವವು ಈ ರಾತ್ರಿಯಲ್ಲಿ ನನ್ನ ಮನೆಯಲ್ಲಿ ಉಳಿದು ಕ್ಷೇಮವಾಗಿದ್ದು ಹೋಗು ಎನ್ನುತ್ತಾನೆ. ಪೂಜಾರಿಯ ಮಾತನ್ನು ಲಕ್ಷಿಸದ ರೇವಣಸಿದ್ಧನು ಕತ್ತಲೆಯಲ್ಲಿ ಶಿವಧ್ಯಾನ ಸಮಾಧಿಯಲ್ಲಿರುತ್ತಾನೆ. ಆಗ ತಗಣೆಗಳೆರಡು ಮನುಷ್ಯ ವಾಸನೆಯನ್ನು ತಿಳಿದು ದೂರದಿಂದ ಕಾಂತಿಯುಕ್ತವಾಗಿ ಬೆಳಗುತ್ತಿರುವ ತಪಗೈಯ್ಯುತ್ತ ಕುಳಿತಿರುವ ಸಿದ್ಧನ ಬಳಿಗೆ ಹೋಗದೆ ಹಿಂತಿರುಗಿ ಪುನಃ ಹೆಮ್ಮರವನ್ನು ಸೇರುತ್ತವೆ. ಕೆಲ ಹೊತ್ತಿನ ನಂತರ ಸಿದ್ಧನು ಬಹಿರ್‌ಮುಖನಾಗುತ್ತಾನೆ. ಕಣ್ತೆರದು ಹೆಮ್ಮರವನ್ನು ನೋಡಿದ ತಕ್ಷಣ ಆತನ ಕಣ್ಣಿನ ಬೆಳಕಿನ ಕಿಡಿಯು ಮರವನ್ನು ಸುಡುತ್ತದೆ.

ಸೂರ್ಯೋದಯದ ನಂತರ ಮರದಲ್ಲಿದ್ದ ತಗಣಿಗಳೆರಡು ಉಕ್ಕಿನ ಗುಂಡುಗಳಾಗಿ ನಿಂತವು. ಆಗ ರೇವಣಸಿದ್ಧನು ಅವುಗಳನ್ನು ಕಮ್ಮಾರನ ಬಳಿಗೆ ತರುತ್ತಾನೆ. ಒಂದನ್ನು ಕಠಾರಿಯನ್ನಾಗಿ, ಮತ್ತೊಂದನ್ನು ಸುರಗಿಯನ್ನಾಗಿ ಮಾಡಿ ಕೊಂಡುವಂತೆ ಹೇಳುತ್ತಾನೆ. ಆಗ ಕಮ್ಮಾರನು ಆ ಗುಂಡುಗಳನ್ನು ಎಷ್ಟು ಬಡಿದರೂ ಕಠಾರಿಗಳನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಕಮ್ಮಾರ ಬೇಸರದಿಂದ ಇದು ಏತರ ಉಕ್ಕಯ್ಯ ಈ ಕೆಲಸ ನನ್ನಿಂದಾಗದು ಎಂದು ಅವುಗಳನ್ನು ಅಡಿಗೆ ಮನೆಯಲ್ಲಿ ಬಿಸಾಡುತ್ತಾರೆ. ಆದರೆ ಹೆಣ್ಣು ಗಂಡು ಒಲೆಯನ್ನು ಸೋಂಕಿದ ಮಾತ್ರಕ್ಕೆ ನೀಳವಾಗಿ ನಿಲ್ಲುತ್ತದೆ. ಇದರಲ್ಲಿ ಏನೋ ರಹಸ್ಯವಿರಬಹುದೆಂದು ಯೋಚಿಸಿ ಕಮ್ಮಾರನು ತಕ್ಷಣವೇ ಅದನ್ನು ಕಠಾರಿಯನ್ನು ಮಾಡಿ ಸಿದ್ಧನಿಗೆ ಕೊಡುತ್ತಾನೆ. ಅದೇ ಸಂದರ್ಭದಲ್ಲಿ ಮನೆಗೆ ಹೋಗುವ ಮಾರ್ಗವಾಗಿ ಒಬ್ಬ ಲುಬ್ಧಕನು ಕಾಡಿನಿಂದ ಮಾಂಸವನ್ನು ಹಿಡಿದುಕೊಂಡು ಕಮ್ಮಾರನ ಮನೆಯ ಬಳಿಗೆ ಬರುತ್ತಿರಲು ಆ ಮಾಂಸವನ್ನು ಕಂಡು ಗಂಡು ಗುಂಡು ಸಹ ನೀಳವಾಗಿ ನಿಲ್ಲುತ್ತದೆ. ಇದೇನೋ ವಿಚಿತ್ರವೆಂದೆನಿಸಿ ಮಾಂಸಖಂಡಗಳನ್ನು ತರಿಸಿ ಉಕ್ಕಿನ ಗುಂಡಿಗೆ ತೋರಿಸುವಾಗ ಸೂಜಿಕಲ್ಲು ಕಬ್ಬಿಣವನ್ನು ಆಕರ್ಷಿಸುವಂತೆ ಚಲಿಸಿ ನಿಗುರುತ್ತದೆ. ಆ ತಕ್ಷಣವೇ ಕಮ್ಮಾರನು ಉಕ್ಕಿನ ಗುಂಡನ್ನು ಕಾಯಿಸಿ, ತದುಕಿ ಸುರಗಿಯನ್ನಾಗಿ ಮಾಡಿ ಸಿದ್ಧನ ಕೈಗೆ ಕೊಡುತ್ತಾನೆ.

ನಮಸ್ಕರಿಸಿ ಯತಿಯೇ ಈ ಗುಂಡುಗಳ ಮೂಲವೇನು ಎಂದು ಕೇಳಲು, ಸಿದ್ಧನು ತನ್ನ ಜ್ಞಾನದೃಷ್ಟಿಯಿಂದ ಅರಿತು ಹೇಳಿದನು. ಕಮ್ಮಾರನೇ ಪೂರ್ವದಲ್ಲಿ ಸ್ತ್ರೀ ಪುರುಷ ಯಕ್ಷ ಮಿಥುನವು ವಿಶ್ವ ದರ್ಶನಕ್ಕಾಗಿ ಕಾತುರದಿಂದ ಬಾಂದಳದಲ್ಲಿ ತಿರುಗಾಡುವಾಗ ವಿನೋದಕ್ಕಾಗಿ ಒಬ್ಬ ಶಿವಭಕ್ತನ ಪುಣ್ಯಾಶ್ರಮದ ಸಮೀಪ ರತಿ ಕೇಳಿಯಲ್ಲಿರುವಾಗ ಯತಿವರ್ಯನು ಅದನ್ನು ಕಂಡು ಕೆಟ್ಟದಾಗಿ ದುಷ್ಟಯಕ್ಷ ಮಿಥುನವೇ ನೀವು ಘೋರ ರಾಕ್ಷಸತ್ವವನ್ನು ಪಡಿಯಿರೆಂದು ಶಾಪವಿಡುತ್ತಾನೆ. ಆ ಯಕ್ಷದಂಪತಿಗಳು ಪಶ್ಚಾತಾಪದಿಂದ ಯತಿವರ್ಯನಿಗೆ ಕೊಂಡಾಡಿ ಶಾಪ ಪರಿಹಾರ ಬೇಡುತ್ತಾರೆ. ಆಗ ಮರ್ತ್ಯಲೋಕದಲ್ಲಿ ಮಾಡಿದ ಪಾಪಗಳು ಶಿವಸನ್ನಿಧಿಯಲ್ಲಿ ಹೋಗುತ್ತವೆ. ಶಿವ ಸನ್ನಿಧಿಯಲ್ಲಿ ಕೃತಾ ಅಪರಾಧಕ್ಕೆ ಪರಿಹಾರವಿಲ್ಲ ಮತ್ತು ನೀವು ಪೂರ್ಣಿಮಾ ಪರ್ವದಲ್ಲಿ ಯತಿ ಆಶ್ರಮದಲ್ಲಿ ನಿರ್ಭಯವಾಗಿ ಕಾಮಕ್ರೀಡೆಯಾಡಿದ್ದರಿಂದ ನೀವು ಚಿರಕಾಲ ತಗಣಿಗಳಾಗಿ ಶಿವಾಲಯದಲ್ಲಿ ನರರನ್ನು ಕಿತ್ತು ತಿನ್ನಬೇಕು. ಕಡೆಗೆ ಶಿವನ ಅವತಾರನಾದ ರೇವಣಸಿದ್ಧನಿಂದ ನಿಮಗೆ ಮುಕ್ತಿ ಮಾರ್ಗ ದೊರೆಯುವುದೆಂದು ಹೇಳಿ ಕಳುಹಿಸಿದನು. ಅವರೇ ಇಂದು ಕ್ರೂರ ತಗಣಿಗಳಾಗಿ ಹೆಮ್ಮರದಲ್ಲಿದ್ದು, ಯೋಗಾಗ್ನಿದಗ್ಧರಾಗಿ ಗುಂಡುಗಳೆನಿಸಿ ಆಯುಧಗಳಾಗಿದ್ದಾರೆ. ರೇವಣಸಿದ್ಧನು ಆ ಸುರಗಿಯಿಂದ ಝಳಪಿಸಲು ಬರಸಿಡಿಲು ಎರಗಿದಂತೆ ಘೋರತರ ಧ್ವನಿ ಮಾಡುವಾಗ ದೇಶವೆಲ್ಲಾ ಬೆದರಿತು. ಸಿದ್ಧನು ಅದರ ಕ್ರೂರತ್ವವನ್ನು ಕಂಡು ಇವುಗಳನ್ನು ಬಿಟ್ಟರೆ ಲೋಕಗಳನ್ನು ಧ್ವಂಸಿಸುತ್ತವೆ ಎಂದು ಯೋಚಿಸಿ ಮಾಸನೂರಿನ ಹಿರಿದಾದ ಮಡುವಿನ ನಡುನೀರಿನಲ್ಲಿ ಮಿಸುಕದಂತೆ ಹೂತಿಟ್ಟು, ಕಟ್ಟುಮಾಡಿ ಕಠಾರಿಯನ್ನು ಕೈಗೊಂಡು ಬಾಂದಳಕ್ಕೆ ಮನೋ ವಾಯುಗಳನ್ನು ಮೀರಿದ ವೇಗದಲ್ಲಿ ಜಿಗಿಯುತ್ತಾನೆ.

## ಸಂಧಿ : ಆರು

ಸಜ್ಜನಕ್ಕೆ ಸಂಪತ್ತಿಗೆ ಹೆಸರಾದ ಉಜ್ಜನಿಯನ್ನು ರೇವಣಸಿದ್ಧರು ಕಂಡು ಗಗನದಿಂದಿಳಿದು ವಿಕ್ರಮಾದಿತ್ಯನಲ್ಲಿಗೆ ಬರುತ್ತಾನೆ. ಆಗ ಭೂಮಂಡಲೇಶ್ವರನು ರೇವಣಸಿದ್ಧರ ಪಾದಗಳಿಗೆ ಎರಗಿದನು. ಸಿಂಹಪೀಠದಲ್ಲಿ ರೇವಣಸಿದ್ಧರನ್ನು ಕುಳ್ಳಿರಿಸಿ ಸತ್ಕರಿಸಿವನು. ಯಾವ ಕಾರಣಕ್ಕಾಗಿ ಬಂದಿರಿ ಜ್ಞಾನನಿಧಿಯೇ ಆಜ್ಞಾಪಿಸಿ ಎಂದು ಅರಸನು ಕೇಳುತ್ತಾನೆ. ಆಗ ರೇವಣಸಿದ್ಧನು ನಿನ್ನ ನೋಡಲು ಮನವೊಲಿದು ನಾನು ಬಂದೆ ಎನಲು ಎನ್ನ ಜನ್ಮ ಸಫಲವಾಯ್ತು. ಬದುಕಿದೆ ಮದನಾಂತಕನೆ ಎಂದು ಅರಸನು ಹರ್ಷದಿಂದ ಸದಮಲ ಹೃದಯಿಗೆ ಮೈಯಿಕ್ಕಿ ಕೈ ಮುಗಿದನು. ವಿಕ್ರಮಾದಿತ್ಯನ ಘನಭಕ್ತಿಯ ಸುಕ್ರಮವನ್ನು ಕಂಡು ಕೇಳು ಭೂಪ ವಿಕ್ರಮದ ಈ ಕಠಾರದ ಮಹಿಮೆ ನಿನಗೆ ಹೇಳುವೆನು. "ಕಾದಲು ರಣರಂಗದೊಳೆ ವೈರಿಗಳನ್ನು ಮೋದುವದು, ಉಡುವಡೆ ವಸ್ತ್ರ, ಕೊಡುವಡೆ ದಿವ್ಯಾಂಗನೆ, ತೊಡುವಡೆ ಆಭರಣ ಬಿಡದೇರುವಡೆ ವಾಹನ ನಾಲಿಗಿಗೆ ಕೊಡುವದು ಷಡ್ರುರುಚಿಯು, ಉರುತ ಬಲಗಳ ವೈರಿಗೆ ಕೊಲ್ಲುವದು, ಶರಣು ಹೋದವರಿಗೆ ಒಲಿವುದು ಕೀರ್ತಿಯು ನೆಲೆಸುವದು. ಸುಲಭ ವಿಕ್ರಮರಿಗೆ ಬುದ್ಧಿ ಹರನ ಬಲಕೆ ನಂದಿ, ಸುರರ ಬಲಕೆ ಶಿವ, ನರನ (ಅರ್ಜುನ) ಬಲಕೆ ನಂದಿ, ಉರಿಯ ಬಲಕೆ ಮಾರುತನು ಬಲವಾದಂತೆ ಸುರಗಿಯ ಬಲ ನಿನಗೆ ಭೂಪ ಎಂದನು." ಯಾವಾಗಲೂ ನಿನ್ನನ್ನು ರಕ್ಷಿಸುತ್ತಿರುವದು.

ಹೀಗೆ ಗುರುವರ್ಯಯನು ಕರುಣಿಸಿದ ದಿವ್ಯಾಯುಧವನ್ನು ವಿಕ್ರಮಾದಿತ್ಯ ರಾಯನು ಕೈಗೊಂಡು ದೇವೇಂದ್ರನಂತೆ ಪ್ರಕಾಶಿಸುತ್ತ ಕೇಳುತ್ತಾನೆ. ಸಿದ್ಧೇಂದ್ರನೇ ತನಗೆ ಕರ್ತವ್ಯವನ್ನು ನಿರೂಪಿಸಬೇಕೆಂದು ಪ್ರಾರ್ಥಿಸುತ್ತಾನೆ. ಆಗ ರೇವಣಸಿದ್ಧನು ಲೋಕಾನುಗ್ರಹ ದೃಷ್ಟಿಯಿಂದ ವಿಕ್ರಮರಾಯನಿಗೆ ಸಕಲ ಧರ್ಮಸಾರವನ್ನು ಸೂತ್ರಪ್ರಾಯವಾಗಿ ಉಪದೇಶ ನೀಡುತ್ತಾನೆ. ಅದರಲ್ಲಿ ಮುಖ್ಯವಾಗಿ "ದುಷ್ಟಶಿಕ್ಷಣ, ಶಿಷ್ಟ ಪರಿಪಾಲನೆ" ಕ್ಷತ್ರಿಯನಿಗೆ ಮುಖ್ಯ ಧರ್ಮಗಳು, ಮಹಾಜನರ ಸೇವೆ, ಶಸ್ತ್ರಾಸ್ತ್ರ ವಿಚಾರ, ಧರ್ಮಬುದ್ಧಿ, ಭೂತಹಿತಚಿಂತನ, ಕ್ಷಮೆ, ದಯೆ, ಪ್ರಜಾಕ್ಷೇಮ ವಿಚಾರ ಮುಂತಾದ ಸಿದ್ಧಿಕಾರ್ಯ ಗಳನ್ನು ದೈವರಹಸ್ಯ, ಮುಕ್ತಿರಹಸ್ಯ ಮೊದಲಾದ ನೀತಿಗಳನ್ನು ಉಪದೇಶಿಸುತ್ತಾನೆ. ಬಳಿಕ ಅನ್ನ ದಾನಾದಿ ವಿಶೇಷ ಧರ್ಮಗಳನ್ನು, ಶಿವಪೂಜಾನಾಧಿ ಪರಮ ಸಾಧನಗಳನ್ನು ಹೇಳಿ ಕೊಡುತ್ತಾನೆ.

ಬಳಿಕ ಅಲ್ಲಿಂದ ತೆರಳಿ ಗಗನ ಮಾರ್ಗದಿಂದ ಕಲ್ಯಾಣಪುರಭಸ್ಮ ಪೂಸಿಕೊಂಡು ಸಂಚರಿಸುತ್ತಾನೆ. ಆ ಊರಲ್ಲಿ ಕಲ್ಲಿಸೆಟ್ಟಿ ಎಂಬ ಗಾಣಿಗನು ಮತ್ತು ಅವನ ಎತ್ತು ಹಾಗು ಹೆಂಡತಿ ಒಕ್ಕಣ್ಣು ಪಡೆದು ಗಾಣ ಬಾಡುತ್ತಿರುವದನ್ನು ಸಿದ್ಧನು ಕಾಣುತ್ತಾನೆ. ಆತನಲ್ಲಿಗೆ ಲೀಲಾವಿನೋದದಿಂದ ಶೆಟ್ಟಿಯ ಮನೆಯಲ್ಲಿ ಇದ್ದು ಶೆಟ್ಟಿ ಆತನ ಹೆಂಡತಿ ಮತ್ತು ಎತ್ತಿಗೆ ಎರಡು ಕಣ್ಣನ್ನು ದಯಪಾಲಿಸು ಆತನ ಐಶ್ವರ್ಯವನ್ನು ಹೆಚ್ಚಿಸುತ್ತ ಪ್ರೀತಿಯಿಂದ ಇರುತ್ತಿದ್ದನು. ಆಗ ಶೆಟ್ಟಿಗೆ ಸಿದ್ಧನು ಮಹಾಪುರುಷನಾಗಿರ ಬಹುದೆಂದು ಊಹಿಸಿ ಸೇವಿಸತೊಡುಗುವಷ್ಟರಲ್ಲಿ ಒಂದು ದಿನ ಸಾಯಂಕಾಲ ಕಾಂತಿಯುಕ್ತವಾದ

ಶರೀರದೊಂದಿಗೆ ರೇವಣಸಿದ್ಧನು ಲೀಲಾವಿಭೂತಿಯನ್ನು ತೋರಿಸಿ ಸೂರ್ಯೋದಯವಾಗಲು ಮುಂದಕ್ಕೆ ತೆರಳಿದನು.

**ಸಂಧಿ : ಏಳು**

ಗಗನ ಮಾರ್ಗದಲ್ಲಿ ರೇವಣಸಿದ್ಧರು ಮಂಗಳವಾಡಕ್ಕೆ ಬರುತ್ತಾನೆ. ಧನ ಧಾನ್ಯ ಸಂಪತ್ತು ಸಮೃದ್ಧವಾದ ಮಂಗಳವೆನಿಸಿದ ಶಿವಭಕ್ತಿಗೆ ನೆಲೆಯಾಗಿರುವ ಮಂಗಳವಾಡದಲ್ಲಿ ಸಂಚರಿಸುವಾಗ ಮಾಯಾದೇವಿಯೆಂಬ ಪುಣ್ಯವತಿಯೆಂಬ ಒಬ್ಬಳು ಲಿಂಗಧಾರಿಗಳನ್ನಲ್ಲದೆ ಅನ್ಯಭವಿಗಳ ಸಂಗಕ್ಕೆ ಮನಸ್ಸನ್ನು ಕೊಡದೆ ಮುಕ್ಕಣ್ಣನಲ್ಲಿ ಮನವಿಟ್ಟುವರಿಗೆ ಭಕ್ತಿಯಿಂದ ಪೂಜಿಸುತ್ತಿದ್ದಳು. ಆಗ ರೇವಣಸಿದ್ಧನು ಬೂದಿಯನ್ನು ಬಳಿದುಕೊಂಡು ಕೃಶವಾದ ಶರೀರ, ಬೆನ್ನಿಗೆ ಹತ್ತಿದ ಹೊಟ್ಟೆ, ಅನ್ನ ಕೂಳಿಲ್ಲದೆ ಕಂಗೆಟ್ಟು ಮಾಸಿದ ಬಟ್ಟೆಯನ್ನುಟ್ಟುಕೊಂಡು ದಿವ್ಯ ತೇಜಸ್ಸುನ್ನುಳ್ಳನಾಗಿ ಆ ಮನೆಯ ಪಡಸಾಲೆಯಲ್ಲಿ ಕುಳಿತ್ತಿದ್ದನು. ಈ ಶಿವಯೋಗಿಯನ್ನು ಕಂಡು ಮಾಯದೇವಿ ಅನುತಾಪದಿಂದ ನೀನು ಪೂಜೆಗೆ ದಿನಾಲು ಉದಕವನ್ನು ತಂದುಕೊಡು ನಿನಗೆ ಅನ್ನ ಕಾವಿ ಕೊಟ್ಟು ಪೋಷಿಸುತ್ತೇನೆ ಎಂದು ಹೇಳುತ್ತಾಳೆ. ಆ ಶಿವಭಕ್ತಳ ಭಕ್ತಿಭಾವವನ್ನು ಅರಿತು ಸರ್ವಜ್ಞನಾದ ರೇವಣಸಿದ್ಧರು ಒಪ್ಪಿಕೊಂಡು ನೀರು ತರುವ ಕಾವಡಿಯ ಕಂಬಿಯನ್ನು ಶುದ್ಧ ನೀರಿನ ಬಳಿ ಹೋಗಿ ಪೊಂಗೊಡಗಳಿಂದ ನೀರು ತುಂಬಿಕೊಂಡು ಹೊತ್ತುಕೊಂಡು ಮಾಯದೇವಿಯ ಮನೆಗೆ ಬರುತ್ತಾನೆ. ಆ ಸಿದ್ಧ ಮಹಿಮನು ಹೊತ್ತಿರುವ ಕಾವಡಿಯ ಕಂಬಿಯು ಹೆಗಲಿಗೆ ಸೋಂಕದೆ ಹೆಗಲ ಮೇಲೆ ಅಂತರಾಳದಲ್ಲಿ ನಿರಾಲಂಭವಾದ ಆಕಾಶದೊಳಗೆ ಬರುತ್ತಿದ್ದನು. ಈ ರೀತಿಯಾಗಿ ಕೆಲವು ದಿನ ಕಳೆಯುತ್ತಾನೆ.

ತ್ರೇತಾಯುಗಾಂತರದಲ್ಲಿ ಹರಭಕ್ತ ಶಿರೋಮಣಿಯಾದ ರಾವಣನು ಶಿವಭಕ್ತರಿಗೆ ಎಸಗಿದ ಅಪಚಾರದಿಂದ ಪತಿವ್ರತೆಯಾದ ಸೀತೆಯನ್ನು ವರಿಸಲು ಪ್ರಯತ್ನಿಸಿ ಶಿವಾನುಗ್ರಹ ವಿಮುಖನಾಗಿ ರಾಮ ಬಾಣಗಳಿಂದ ಸಾಯಬೇಕಾಗಿ ಬಂದ ಯುದ್ಧ ಸಂದರ್ಭದಲ್ಲಿ ರಾಮನು ತನ್ನ ಅಮೋಘ ಬಾಣವನ್ನು ಪ್ರಯೋಗಿಸುತ್ತಾನೆ. ಆಗ ರಾಮನ ಬಾಣದ ವಧೆಯಿಂದ ಶಿರವು ಕಡಿಯಲ್ಪಟ್ಟರು ಉರುಳಿಗೊಂಡಾಗ್ಯೂ ಪುನರಪಿ ಅಂಕುರಿಸುತ್ತ ಸಾಯದೆ ಇರಲು ಬ್ರಹ್ಮಾಸ್ತ್ರದಿಂದ ಅಮೃತವನ್ನು ಹೀರಿ ಕೆಡವಿದಾಗ್ಯೂ ಪ್ರಾಣ ಹೋಗದೇ ಇರುವದನ್ನು ಕಂಡು ರಾಮನು ಆಶ್ಚರ್ಯಗೊಳ್ಳುತ್ತಾನೆ. ಆಗ ವಿಭೀಷಣನು ಸಹೋದರನನ್ನು ಮರುಗುತ್ತಾ ಅಣ್ಣ ನೀನು ಶಿವಯೋಗಬಲ್ಲ ವೀರಮಾಹೇಶ್ವರನಾಗಿಯೂ ದೇಹವನ್ನು ಬಿಟ್ಟು ಹೋಗಲಾರದೆ ನರಳುತ್ತಿರುವದಕ್ಕೆ ಕಾರಣವೇನು ಎಂದು ಕೇಳುತ್ತಾನೆ. ರಾವಣನು ತಮ್ಮನೇ, ನಾನು ರಾಜ್ಯ ಭೋಗಿಯಾಗಿ ದೇಹಾಭಿಮಾನದಿಂದ ನಶ್ವರ ಸುಖಕ್ಕಿಳಿಸಿದೆ. ಪರಮಾರ್ಥವನ್ನು ಸಾಧಿಸದೆ ಬಿಟ್ಟಿರುವೆ ರಾಮಭಕ್ತನಾದ ನಿನಗೆ ಸಹೋದರನ ಮೇಲೆ ವಾತ್ಸಲ್ಯವಿದ್ದರೆ ನೀನು ಕಿರಿಯನಾದುದರಿಂದ ಹಿರಿಯಣ್ಣನ ವಾಕ್ಯವನ್ನು ನಡೆಸಿಕೊಡಬೇಕು. ಅದೇನೆಂದರೆ ನಾನು ನವಕೋಟಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಬೇಕೆಂದು ಸಂಕಲ್ಪ ಮಾಡಿ ಇದುವರೆಗೆ ಆರು ಕೋಟಿ

ಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದೆನು ಇನ್ನೂ ಮೂರು ಕೋಟಿ ಶಿವಲಿಂಗ ಪ್ರತಿಷ್ಠಾಪಿಸುವ ಕೆಲಸವು ಉಳಿದಿದೆ. ಈ ನನ್ನ ಪ್ರತಿಜ್ಞೆಯನ್ನು ನೀನು ತಪ್ಪದೆ ನೆರವೇರಿಸುವದಾಗಿ ಭಾಷೆ ಕೊಟ್ಟರೆ ಸುಖದಿಂದ ಪ್ರಾಣವನ್ನು ಬಿಡುವೆನು ಎಂದು ಹೇಳುತ್ತಾನೆ. ಆಗ ವಿಭೀಷಣ ಅಣ್ಣನ ಆದೇಶದಂತೆ ಅನ್ಯ ಅಜ್ಞಾನವನ್ನು ಅಳಿದು ಶಿವಾಧಿಕ್ಯವನ್ನು ಗ್ರಹಿಸಿ ಧರ್ಮಯುಕ್ತವಾಗಿ ಅಣ್ಣ ನಾನು ಮೂರು ಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸಿ, ನಿನ್ನ ಪ್ರತಿಜ್ಞೆಯನ್ನು ಪೂರೈಸುತ್ತೇನೆ ಎಂದು ಭಾಷೆ ಕೊಡಲು ಆಗ ರಾವಣನು ಅನಾಯಸವಾಗಿ ಪ್ರಾಣ ತೊರೆಯುತ್ತಾನೆ. ವಿಭೀಷಣನು ತಾನು ಕೊಟ್ಟ ಭಾಷೆಯನ್ನು ಪೂರೈಸಲು ಶಿವನ ಅನುಗ್ರಹವಿಲ್ಲದೆ ಶಿವನನ್ನು ಕುರಿತು ಪೂಜಿಸಿ ತಪಗೈಯ್ಯುತ್ತಾನೆ. ಆಗ ರುದ್ರನು ಮೆಚ್ಚಿ ಪ್ರತ್ಯಕ್ಷನಾಗುತ್ತಾನೆ. ಮತ್ತು ವಿಭೀಷಣನ ಕೋರಿಕೆಯನ್ನು ತಿಳಿದು ಈ ಸಂಕಲ್ಪವನ್ನು ನೆರವೇರಿಸಲು ನನ್ನ ಅಂಶಿತನಾದ ರೇವಣಸಿದ್ಧನು ಭೂಲೋಕದಲ್ಲಿರುವನು ಅಲ್ಲಿಗೆ ಹೋಗೆಂದು ತಿಳಿಸಿದನು. ನಂತರ ವಿಭೀಷಣನು ವಿರೂಪಾಕ್ಷಸಿದ್ಧನೆಂಬ ವೇಷದಿಂದ ಆಕಾಶಗಾಮಿಯಾಗಿ ಹುಡುಕುತ್ತಾ ಮಂಗಳವಾಡ ಪ್ರಾಂತಕ್ಕೆ ಬರುತ್ತಾನೆ. ಅಲ್ಲಿ ಶುಭಸೂಚನೆ ಕಾಣಿಸುತ್ತದೆ. ಊರ ಬಾಗಿಲಲ್ಲಿ ಕಾಯುತ್ತ ಕುಳಿತಿರುವಾಗ ಕಂಬಿಯನ್ನು ಭುಜಕ್ಕೆ ಸೋಂಕಿಸಿಕೊಳ್ಳದೆ ಬಯಲಿನಲ್ಲಿ ಬರುತ್ತಿರುವ ಮಹಾಮಹಿಮನಾದ ರೇವಣಸಿದ್ಧನನ್ನು ಕಂಡು ಆತನ ಹಿಂದೆ ನಡೆದು ಮಾಯದೇವಿಯ ಮನೆಯ ಹಿಂಬಾಗಿಲ ಬಳಿಯಲ್ಲಿ ನಿಂದು ಸಂಧ್ಯಾಕಾಲದಲ್ಲಿ ಮಾಯದೇವಿಯ ಮನೆಗೆ ಒಳ ಸೇರುತ್ತಾನೆ. ಅಲ್ಲಿ ಮನ್ಮಥ ಮಂತ್ರದೇವತೆಯ ಹಾಗೆ ತ್ರಿಲೋಕ ಮೋಹಿನಿಯಂತೆ ಮಾಯದೇವಿಯನ್ನು ಕಂಡು ಕಾಮಭ್ರಾಂತನಾಗಿ ಶಿವಮಾಯಾ ಮೋಹತ್ವದಿಂದ ಸಿದ್ಧನ ಸೇವೆಯನ್ನು ಮರೆತು ರತಿಗೆಳಿಸಿದ್ದಾನೆ ಹೀಗೆ ಕೆಲವು ಕಾಲ ಇರುತ್ತಾನೆ. ಕಡೆಗೆ ಶಿವಾನುಗ್ರಹದಿಂದಲೇ ಸಿದ್ಧನನ್ನು ಕಂಡು ಪರಿಪರಿಯಾಗಿ ಸ್ತುತಿಸುತ್ತಾನೆ. ಸಿದ್ಧನು ತನ್ನ ಜ್ಞಾನದೃಷ್ಟಿಯಿಂದ ಅರಿತು ಕರುಣಿಸುತ್ತಾನೆ. ಆತನನ್ನು ವಿಭೀಷಣನೆಂದು ಕೇಳಿದನಂತರ ಮತ್ತು ಸಂಕಲ್ಪವನ್ನು ತಿಳಿಯುವಾಗ ಮಾಯದೇವಿಯು ಬಂದು, ಸಿದ್ಧನೇ ನಿನ್ನ ಮಹಾತ್ಮವನ್ನು ಅರಿಯದೆ ಪರಿಚಾರಕನಂತೆ ನೀರು ಹೊರಿಸುತ್ತಿದ್ದೆ ಶಿವಾ! ಶಿವಾ! ತನ್ನ ಅಪಚಾರವನ್ನು ಮನ್ನಿಸಬೇಕೆಂದು ಬೇಡಿಕೊಳ್ಳುತ್ತಾಳೆ. ಆಗ ರೇವಣಸಿದ್ಧನು ಮಾಯದೇವಿಯನ್ನು ಮನ್ನಿಸಿ ತನ್ನ ಕೈಯಿಂದ ಎರಡು ಸ್ಥಳಗಳನ್ನು ಮುಟ್ಟಿದಾಗ ಬಂಗಾರದ ಎರಡು ಸುವರ್ಣ ಲಿಂಗಗಳಾಗುತ್ತವೆ. ಕನ್ನೆಯೇ ನೀನು ಈ ಹೊನ್ನಿನ ಲಿಂಗ ಸೇವೆಯಿಂದ ಕೃತಾರ್ಥಳಾಗು ಎಂದು ಅನುಗ್ರಹಿಸುತ್ತಾನೆ. ಮುಂದೆ ಸೂರ್ಯೋದಯವಾದಾಗ ವಿಭೀಷಣನ ಪ್ರಾರ್ಥನೆಯಂತೆ ತ್ರಿಕೋಟಿ ಲಿಂಗ ಪ್ರತಿಷ್ಠೆ ಮಾಡಲು ರೇವಣಸಿದ್ಧನು ಲಂಕೆಗೆ ಹೋಗುತ್ತಾನೆ.

**ಸಂಧಿ : ಎಂಟು**

ಮಾಯದೇವಿಯನ್ನು ಬೀಳ್ಕೊಂಡು ಗುರು ಸಿದ್ಧರೇವಣನು ವಿಭೀಷಣನೊಡನೆ ಲಂಕಾ ಪಟ್ಟಣಕ್ಕೆ ಬರುತ್ತಾರೆ. ಶಿವಾಲಯದಲ್ಲಿ ಭಸಿತವನ್ನು ಧರಿಸಿ ಗುರು ಗದ್ದುಗೆಯಲ್ಲಿ ಕುಳಿತಿರಲು ವಿಭೀಷಣನು

ಸಕಲ ಸಾಮಗ್ರಿಗಳನ್ನು ವ್ಯವಸ್ಥೆಗೊಳಿಸಿ ಆ ಸುಮುಹೂರ್ತದಲ್ಲಿ ಮೂರು ಕೋಟಿ ಲಿಂಗವನ್ನು ಗುರು ಸಿದ್ಧನು ಆಚಾರ್ಯನಾಗಿ ವಿಶ್ವರೂಪವನ್ನು ತೋರಿಸುತ್ತಾನೆ ಮತ್ತು ಮೂರು ಕೋಟಿ ರೂಪಗಳಿಂದ, ಮೂರು ಕೋಟಿ ಶಿವಾಲಯಗಳನ್ನು ಬೇರೆ ಬೇರೆ ಶಿವಾಗಮೋಕ್ತ ಪ್ರಕಾರವಾಗಿ, ಭೇರೀತಾಡನ, ಧ್ವಜಾರೋಹಣ, ಕಲಶಸ್ಥಾನ, ಪಂಚಶುದ್ಧಿ, ಹೋಮ ಜಪ, ಪಾರಾಯಣಧ್ವನ, ಶಾಂತಿ, ಬಲಿ, ಅರ್ಚನೆ, ಶಿಲಾನ್ಯಾಸ, ಲಿಂಗಪ್ರತಿಷ್ಠೆ ಪ್ರಾಣಪ್ರತಿಷ್ಠೆ, ಕಲಾನ್ಯಾಸ, ಕುಂಭಾಬಿಷೇಕ, ಮಹಾಭಿಷೇಕ, ಶತರುದ್ರೀಯ ಅಖಂಡಪೂಜೆ ಮುಂತಾದವುಗಳನ್ನು ಸಾಂಗವಾಗಿ ನೆರವೇರಿಸುತ್ತಾನೆ. ವಿಶ್ವೇಶ್ವರನ ತ್ರಿಕೋಟಿ ಲಿಂಗಗಳಿಗೆ ನಿತ್ಯವೂ ಅನೇಕ ನಿಯಮಗಳನ್ನು ನಿಯಮಿಸಿ, ವಿಭೀಷಣನಿಗೆ ಶಿವಪೂಜೆಯ ವಿಧಾನಗಳನ್ನು ಅನುಗ್ರಹಿಸಿ, ಹರಸಿ ಹೊರಡುತ್ತಾನೆ.

ಗಗನಮಾರ್ಗದಿಂದ ಕಡಲದಾಟಿ ಮರಳಿ ಉತ್ತರಕ್ಕೆ ಕಲ್ಯಾಣ ಪಟ್ಟಣಕ್ಕೆ ಮೊದಲಿನಂತೆ ಬಡವೇಷದಿಂದ ಬಿಜ್ಜಳನ ಹಜಾರಕ್ಕೆ ಭಿಕ್ಷೆಗೆ ಬರುತ್ತಾನೆ. ಆಗ ಬಿಜ್ಜಳನು ಗದರಿಸುತ್ತಾನೆ ಹಾಗೂ ಚರರ ಮೂಲಕ ಸುಡುವ ಓಗರವನ್ನು ಅಂಗೈಯಲ್ಲಿ ಹಾಕಿಸುತ್ತಾನೆ. ಆಗ ಸಿದ್ಧನು ಸುಡುವ ಓಗರವನ್ನು ನುಂಗಿ ಕೈಯನ್ನು ಹಜಾರಿನ ಕಂಭಕ್ಕೆ ಒರಸುವನು ಆಗ ಹಜಾರ ಸಮೇತ ಅರಮನೆಯು ನಗರವೆಲ್ಲಾ ಹೊತ್ತಿಕೊಂಡು ಸುಟ್ಟು ಭಸ್ಮವಾಗುತ್ತದೆ. ಆಗ ಬಿಜ್ಜಳನು ಸರ್ವರನ್ನು ಕೂಡಿಕೊಂಡು ರೇವಣಸಿದ್ಧನಿಗೆ ನಮಸ್ಕರಿಸಿ, ಸ್ತುತಿಸಿ ಅಪರಾಧಕ್ಕೆ ಕ್ಷಮೆ ಮಾಡಬೇಕೆಂದು ಬೇಡುತ್ತಾನೆ. ಆಗ ಸಿದ್ಧನು ಕರುಣಿಸಿ ಬೆಂಕಿಯನ್ನು ಆರಿಸಿ ಯಥಾಪ್ರಕಾರ ನಗರ, ಅರಮನೆಯನ್ನು ಪಾಲಿಸುತ್ತಾನೆ ಹಾಗೂ ಬಿಸಿ ಓಗರವನ್ನು ನೀಡಿದ ಫಲವಿದು ಎಂದು ಹೇಳುತ್ತಾನೆ. ಅಲ್ಲದೆ ರಾಜ್ಯಧರ್ಮ ನೀತಿಗಳನ್ನು ಉಪದೇಶಿಸಿ, ಸಿದ್ಧನು ಐದು ಪಡಿ ಅಕ್ಕಿಯನ್ನು, ಐದು ಸೋಲಿಗೆ ತುಪ್ಪವನ್ನು ತರಿಸಿ ಓಗರವನ್ನು ಮಾಡಿಸಿ, ಸಕಲ ಸೇವಾ ಪರಿವಾರ, ಅರಸ ಸಹಿತ, ಆ ರಾಜ್ಯದ ಪ್ರಜೆಗಳೆಲ್ಲರು ಉಣ್ಣುವಂತೆ ಮಹಿಮೆಯನ್ನು ತೋರಿಸುತ್ತಾನೆ.

**ಸಂಧಿ : ಒಂಭತ್ತು**

ಗುರು ರೇವಣಸಿದ್ಧನು ಕಲ್ಯಾಣದಿಂದ ಹೊರಟು ಖೇಚರನಾಗಿ ಸಂಚರಿಸುತ್ತಾ ಅಲ್ಲಲ್ಲಿ ಶಿವಕ್ಷೇತ್ರಗಳನ್ನು ನೋಡಿ ಸಂತೋಷಿಸುತ್ತ ಲೋಕದಲ್ಲಿ ಹಲವು ಬಗೆಯಾದ ಸಿದ್ಧರಿಗೆಲ್ಲರಿಗೆ ಆಶ್ರಯವಾದ ಕೊಲ್ಲಾಪುರಕ್ಕೆ ಅಂತರಿಕ್ಷದಿಂದ ಇಳಿದು ಗ್ರಾಮ ಪ್ರವೇಶ ಮಾಡುತ್ತಾನೆ. ಗ್ರಾಮ ಪಾಲಕರು ಸಿದ್ಧನನ್ನು ಕಂಡು ಯತೀಶ್ವರನೇ ಈ ಪುರದಲ್ಲಿ ನಾನಾ ವಿಧವಾದ ಸಿದ್ಧರಿರುವರು. ಅವರು ಇಲ್ಲಿಗೆ ಬಂದ ಯೋಗಿಗಳನ್ನು, ಯತಿಗಳನ್ನು ಬಂಧಿಸದೇ ಬಿಡಲಾರರು. ಆದ್ದರಿಂದ ನೀನು ಹೊರಟುಹೋಗೆಂದರು ಸಿದ್ಧನು ಅವರ ಮಾತನ್ನು ಕೇಳದೆ ಇರುತ್ತಾನೆ. ಮಂತ್ರ ಸಿದ್ಧರು, ಯಂತ್ರ, ತಂತ್ರ, ಮೂಲಿಕೆ, ಘುಟಿಕೆ, ಅಂಜನ, ರಸವಾದ, ಪಾರುಕೆ, ಯಕ್ಷಣಿ, ಇಂದ್ರಜಾಲ, ಮಹೇಂದ್ರಜಾಲ, ಬೇತಾಳ, ವಾದ, ವಶ್ಯ, ಪರಕಾಯಪ್ರವೇಶ ಮುಂತಾದ ಸಿದ್ಧಿಗಳುಳ್ಳ ಸಿದ್ದರೆಲ್ಲರೂ ಬಂದು ರೇವಣಸಿದ್ಧನ ಮೇಲೆ ತಮ್ಮ ತಮ್ಮ ವಿದ್ಯಾಶಕ್ತಿಗಳನ್ನು, ದೇವತೆಗಳನ್ನು ಪ್ರಯೋಗಿಸಿ ಕೈ ಮಾಡುತ್ತಾರೆ. ಆದರೆ

ರೇವಣಸಿದ್ಧನು ಕುಡಿನೋಟದಿಂದ ಅವರನ್ನು ನೋಡುವಾಗ ಅವರೆಲ್ಲರು ಸ್ತಬ್ಧರಾಗಿ ಕೈಕಾಲು ತನು ಕರಣಗಳು ಕಟ್ಟಿಕೊಂಡು ಉಸಿರಾಡದೆ ಮಿಸುಕಲಾರದೆ ಚಿತ್ರದಲ್ಲಿ ಬರೆದ ಗೊಂಬೆಗಳ ಹಾಗೆ ನಿಲ್ಲುತ್ತಾರೆ.

ಕೊಲ್ಲಾಪುರದಲ್ಲಿ ಸಿದ್ಧಕುಲನೆನಿಸಿರುವ ಗೋರಕ್ಷ ಸಿದ್ಧನ ಮನೆಗೆ ರೇವಣಸಿದ್ಧನು ಭಿಕ್ಷೆ ಬೇಡಲು ಬರುತ್ತಾನೆ. ಆಗ ಗೋರಕ್ಷನು ತನ್ನ ಮನೆಗೆ ಇಷ್ಟು ನಿರ್ಭಯವಾಗಿ ಬಂದು ಭಿಕ್ಷೆ ಬೇಡುವಷ್ಟು ಶಕ್ತಿಯುಳ್ಳ ವಿರಕ್ತನು ಈ ಲೋಕದಲ್ಲಿರುವನೆ? ಪರೀಕ್ಷಿಸಿ ನೋಡುವೆನು ಎಂದು, ಆತನ ಹೆಂಡತಿಯು ರೇವಣಸಿದ್ಧನ ತೇಜೋ ವಿಶೇಷವನ್ನು ಕಂಡು ಈ ವಿರಕ್ತನು ಮಹಾಸಿದ್ಧನಾಗಿರಬಹುದು ಶಿವಯೋಗದ ಕಳೆ ಈತನೊಂದಿಗೆ ಜಯಿಸಲು ಸಾಧ್ಯವಾಗಲಾರದು ಎಂದು ಹೇಳುತ್ತಾಳೆ. ಆದರೂ ಗೋರಕ್ಷಕ ಹೇಳದೆ ಎಲಾ! ವಿರಕ್ತ ಭಿಕ್ಷುಕನೇ ಸುಖದುಃಖಗಳನ್ನು ಸಮವಾಗಿ ಉಣಬೇಕಾದ್ದು ಭಿಕ್ಷು ಧರ್ಮವಾದ್ದರಿಂದ ಇದನ್ನು ಊಟಮಾಡೆಂದು ಕಠಾರಿಯನ್ನು ಅಂಗೈಯಲ್ಲಿ ತಿವಿಯುತ್ತಾನೆ. ಆಗ ರೇವಣಸಿದ್ಧನು ತನ್ನ ಕೆಂಗಣ್ಣಿನಿಂದ ನೋಡಲು ಕರಗಿ ಮೂಸೆಯಲ್ಲಿ ರಸವಾದ ಬಿಸಿ ಉಕ್ಕನ್ನು ಕುಡಿಯುತ್ತಾನೆ. ಅದು ಗೋರಕ್ಷಕ ಸಿದ್ಧನ ಎದೆಯಲ್ಲಿ ಉಕ್ಕಿನ ಕಠಾರಿ ಹೊಕ್ಕು ಬೆನ್ನಲ್ಲಿ ಮೂಡುತ್ತದೆ. ಆಗ ಗೋರಕ್ಷಕನು ಆಶ್ಚರ್ಯಪರವಶ ನಾಗುತ್ತಾನೆ. ಆತನ ಹೆಂಡತಿ ಕೊಲ್ಲಾಪುರ ಮಹಾಲಕ್ಷ್ಮಿಗೆ ಬೇಡಿಕೊಳ್ಳುತ್ತಾಳೆ. ಆಗ ಆ ದೇವತೆಯು ತಾನು ವಿಷ್ಣುವಿನ ಪತ್ನಿಯೆಂಬ ಗರ್ವವನ್ನು ತೊರೆದು ಲಿಂಗವಂತಳಾದ್ದರಿಂದ ಮಾಹೇಶ್ವರ ಚರಮೂರ್ತಿಯನ್ನು ಸೇವಿಸ ಬೇಕಾದದ್ದು ತನ್ನ ಕರ್ತವ್ಯವೆಂದು ಅರಿತು ರೇವಣಸಿದ್ಧನ ಬಳಿಗೆ ಬಂದು ಸ್ತುತಿಸುತ್ತಾಳೆ. ಆಗ ರೇವಣಸಿದ್ಧನು ಕರುಣಿಸಿ ತನ್ನ ಬಾಯೊಳಗಿನ ಉಕ್ಕಿನ ರಸವನ್ನು ಹೊರತೆಗೆದಾಗ ಗೋರಕ್ಷಸಿದ್ಧನ ಎದೆಯೊಳಗಿನ ಅಲಗು ಕಳಚಿ ಹೊರ ಬೀಳುತ್ತದೆ ಮತ್ತು ರೇವಣಸಿದ್ಧನ ಕರುಣಕಟಾಕ್ಷದಿಂದ ಗೋರಕ್ಷನನ್ನು ಹಾಗು ಊರೊಳಗಿನ ಸ್ತಂಭಿತರಾದ ಸಿದ್ಧರನ್ನು ಬಿಟ್ಟುಕೊಟ್ಟು ಅನುಗ್ರಹಿಸುತ್ತಾನೆ. ಅಲ್ಲಿಂದ ಉತ್ತರದ ಅವಿಮುಕ್ತ ವಾರಣಾಸಿ ಶಿವಕ್ಷೇತ್ರಕ್ಕೆ ಬರುತ್ತಾನೆ. ಅಲ್ಲಿ ಹಿಗ್ಗುತ್ತಾ ಗಂಗೆಯ ಸಮೀಪ ಬರುತ್ತಿರುವಾಗ ಭಾಗೀರಥಿಯು ಸಿದ್ಧನ ಅಡಿಗಳನ್ನು ತೊಳೆದು ತಾನು ಕೃತಾರ್ಥಳಾದೆನೆಂದು ಭಾವಿಸುತ್ತಾಳೆ. ಸಿದ್ಧನು ವಿಶ್ವೇಶ್ವರನ ಆಲಯಕ್ಕೆ ಬಂದು ಶಿವನ ಸನ್ನಿಧಿಗೆ ಕೈಮುಗಿದು ಭಸಿತವಿಟ್ಟುಕೊಂಡು ಆ ಕ್ಷೇತ್ರವೆಲ್ಲಾ ಸಂಚರಿಸುವನು.

**ಸಂಧಿ : ಹತ್ತು**

ರೇವಣಸಿದ್ಧನು ಕಾಶಿಯಲ್ಲಿರುವಾಗ ಕಲ್ಯಾಣಪುರ ಬಿಜ್ಜಳರಾಯನಿಗೆ ಮಾಸನೂರಿನ ಮಡುವಿನೊಳಗಿನ ಸುರಗಿಯನ್ನು ಪಡೆದುಕೊಳ್ಳುವ ಆಸೆಯಾಯಿತು. ಅದನ್ನು ತೆಗೆದುಕೊಟ್ಟ ಸಮರ್ಥರಿಗೆ ಹನ್ನೆರಡು ಸಾವಿರ ವರಹಗಳನ್ನು ಬಹುಮಾನವಾಗಿ ಕೊಡುತ್ತೇನೆ ಎಂದು ಸಾರುತ್ತಾನೆ. ಮಂತ್ರವಾದಿಗಳು, ಸಿದ್ಧರೂ, ತಾಂತ್ರಿಕರೂ ಕೈಲಾಗದೆ ಸುಮ್ಮನಿರುವಾಗ ಖರ್ಪರನೆಂಬ ಜೋಗಿಯು ಬರುತ್ತಾನೆ. ಆತನು ಗುರುಮಂತ್ರ, ಮೂಳಿಕಾಂಜನ, ರಸಸಿದ್ಧಿಯುಳ್ಳವನಾಗಿದ್ದರಿಂದ ತಾನು ಅಲಗನ್ನು ಮಡುವಿನಿಂದ ತೆಗೆದುಕೊಡುವೆನೆಂದು ಹೆಮ್ಮೆಯಿಂದ ಬಿಜ್ಜಳರಾಯನಿಗೆ ಹೇಳುತ್ತಾನೆ. ಅದಕ್ಕಾಗಿ

ಹನ್ನೆರಡು ಸಾವಿರ ಕನ್ನೆಯರನ್ನು ಬಲಿ ಕೊಡಬೇಕೆಂದು ಹೇಳುತ್ತಾನೆ. ಬಿಜ್ಜಳನ ಆದೇಶದಂತೆ ಧೂತನು ಹೆಣ್ಣುಮಕ್ಕಳನ್ನು ತಂದಿರುಸುತ್ತಾರೆ. ಆದರೆ ಒಂದು ಹೆಣ್ಣು ಕಡಿಮೆಯಾಗಲು ರೇವಣಸಿದ್ಧನು ಉದಕವನ್ನು ತಂದುಕೊಡುತ್ತಿದ್ದ ಮಾಯಿದೇವಿ ಎಂಬ ಸೂಳೆಯಲ್ಲಿ ವಿಭೀಷಣನಿಂದ ಹುಟ್ಟಿದ ರೇವಕ್ಕ ನೆಂಬ ಹುಡುಗಿಯನ್ನು ಹಿಡಿದು ತರುತ್ತಾರೆ. ಆಗ ಮಾಯಿದೇವಿಯು ರೇವಣಸಿದ್ಧನಿಗೆ ಮೊರೆಯಿಟ್ಟು ಪ್ರಾರ್ಥಿಸುತ್ತಾಳೆ. ಆಗ ರೇವಣಸಿದ್ಧನು ಕಾಶಿಯಿಂದ ಕಲ್ಯಾಣಕ್ಕೆ ಬಂದು ಬಿಜ್ಜಳನಿಗೆ ನೀತಿಯನ್ನು ಉಪದೇಶಿಸಿ ಹೆಣ್ಣುಮಕ್ಕಳನ್ನೆಲ್ಲರನ್ನು ಸೆರೆಯಿಂದ ಬಿಡಿಸಿ ಸುರಗಿಯನ್ನು ಬಯಸುವ ಬಿಜ್ಜಳನನ್ನು ತೆಪ್ಪದ ಮೇಲೆ ಕುಳ್ಳಿರಿಸಿಕೊಂಡು ನಡುನೀರಿಗೆ ಕರೆದುಕೊಂಡು ಹೋಗಿ ಸುರಗಿಯನ್ನು ಹೊರ ತೆಗೆಯುವಾಗ ಅದು ಸಿಡಿಲಂತೆ ಗರ್ಜಿಸಿತು. ಇದನ್ನು ಕಂಡ ರಾಯನು ಸಹಿಸಿಕೊಳ್ಳಲಾರದೆ ಮೂರ್ಛೆ ಹೋಗಿ ತನಗೆ ಸುರಗಿ ಬೇಡವೆಂದು ಹೇಳುವನು. ಸಿದ್ಧನನ್ನು ಸ್ತುತಿಸುವನು. ರೇವಣಸಿದ್ಧನು ಸುರಗಿ ಯನ್ನು ಮರಳಿ ನೀರಲ್ಲಿ ಹಾಕಲು ಅದರ ಶಾಪ ವಿಮೋಚನೆಯಾಗಿ ಯಕ್ಷ ರೂಪದಿಂದ ಆಕಾಶದಲ್ಲಿ ನಿಂತು ಸಿದ್ಧನನ್ನು ಕೊಂಡಾಡಿ ಹೊರಟು ಹೋಗುತ್ತಾರೆ. ಮುಂದೆ ರೇವಣಸಿದ್ಧನು ಬಿಜ್ಜಳರಾಯ ನೊಂದಿಗೆ ಕಲ್ಯಾಣಪುರಕ್ಕೆ ಬರುತ್ತಾನೆ.

**ಸಂಧಿ : ಹನ್ನೊಂದು**

ಉನ್ನತ ಸಿಂಹ ಪೀಠದಲ್ಲಿ ಸಿದ್ಧನು ಆಸೀನನಾಗಿರುವಾಗ ಬಿಜ್ಜಳನು ಸಿದ್ಧನ ಅಡಿಗಳಿಗೆ ನಮಸಿ ದೇವ ನಾನು ಭಕ್ತಿಯಿಂದ ಸಮರ್ಪಿಸುವ ಕನ್ಯಾಭಿಕ್ಷುವನ್ನು ನೀವು ಸ್ವೀಕರಿಸಬೇಕು ಎಂದು ಪ್ರಾರ್ಥಿಸುತ್ತಾನೆ. ಅದಕ್ಕೆ ಸಿದ್ಧನು ಸ್ತ್ರೀಯನ್ನು ಸ್ವೀಕರಿಸುವುದು ಯತಿಧರ್ಮವಲ್ಲ ಬೇಡವೆಂದು ಹೇಳುತ್ತಾನೆ. ಆದರೂ ಭೂಪಾಲನು ಮಹಾಪುರುಷರಿಗೆ ಆ ನಿಯಮವಿಲ್ಲ ನೀವು ಸ್ವೀಕರಿಸಲೇಬೇಕೆಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ಸಿದ್ಧನು ಸಮ್ಮತಿಸುತ್ತಾನೆ.

**ಸಂಧಿ : ಹನ್ನೆರಡು**

ರೇವಣಸಿದ್ಧನು ಬಿಜ್ಜಳರಾಯನ ಮಗಳನ್ನು ಮದುವೆಯಾಗುವಂತೆ ಪ್ರಾರ್ಥಿಸಿದಾಗ ಗುರು ಸಿದ್ಧನು ಒಪ್ಪಿಕೊಳ್ಳುವನು. ಬಿಜ್ಜಳನು ಅರಮನೆಯಲ್ಲಿ ವಿಸ್ತಾರವಾದ ಚಪ್ಪರವನ್ನು ಹಾಕಿಸಿ ಸಿಂಗರಿಸಿ ಎಲ್ಲವನ್ನು ಅಣಿಗೊಳಿಸಿ ಸಕಲ ದೇಶಗಳಿಗೆ ವಿವಾಹದ ಆಹ್ವಾನ ಕಳಿಸುತ್ತಾನೆ. ಮತ್ತು ಚಾರರನ್ನು ಕಳುಹಿಸಿ ದೇಶ, ದೇಶಗಳ ಚಾತುರ್ಯವರ್ಣದ ಜನಗಳು ಮುಖ್ಯವಾಗಿ ಶಿವಭಕ್ತರು ಶರಣಸಮೂಹವು ನಿಜಲಿಂಗವಂತರು, ವೀರಶೈವರು, ಶಾಂತರು, ಕರುಣೆಗಳು, ಸತ್ಯವಂತರು, ಸದಾಚಾರಶೀಲರು, ಸುಜ್ಞಾನಿಗಳು, ಶಿವಯೋಗಿಗಳು, ಶಿವಾಚಾರನಿಷ್ಠರು ಮುಂತಾದವರನ್ನು ಲಗ್ನಕ್ಕೆ ಆಹ್ವಾನಿಸಲಾಯಿತು. ರಾಯನ ಯಥೋಚಿತವಾದ ಬಿಡಾರಗಳಲ್ಲಿ ಉಳಿಯುವ ವ್ಯವಸ್ಥೆ ಮಾಡಲಾಗಿತ್ತು. ಸುಮುಹೂರ್ತವು ಲಭಿಸಲು ವಧೂವರರಿಗೆ ಮಂಗಳ ಸ್ನಾನವನ್ನು ಮಾಡಿಸಿ ಲೋಕೋತ್ತರ ಸೌಂದರ್ಯ ಶಾಲಿಗಳಾದ

ದಿವ್ಯತೇಜ ಪೂಜೆಯಾದಿಯಾಗಿ ನಿಶ್ಚಯ ತಾಂಬುಲು, ವರಪೂಜೆ, ಕನ್ಯಾದಾನ, ಸೇಸೆಯನಿಕ್ಕಿ, ಪಾಣಿಗ್ರಹಣ ಮುಂತಾದ ಆಚಾರಗಳನ್ನು ಮುಗಿಸುತ್ತಾರೆ. ಎಲ್ಲವೂ ಸಾಂಗವಾದ ಬಳಿಕ ರಾಯನು ಮಗಳಿಗೆ ಬಳುವಳಿಯನ್ನು ಕೊಂಡು ಅಳಿಯನಿಗೆ ರಾಜಾಲಂಕಾರಗಳನ್ನು ತೊಡಿಸಿ, ಮೆರವಣಿಗೆ ಮಾಡಿಸಿದನು. ರೇವಣಸಿದ್ಧನು ಬಿಜ್ಜಳನ ಕುವರಿಯೆಂಬ 'ಕಮಲಕ್ಕೆ ಮೃಗದಂತೆ ಸಾರಗ್ರಹಿಯಾದನು' ನಿತ್ಯಬ್ರಹ್ಮಚಾರಿಯಾದ ಆ ಶಿವಯೋಗಿಯು ಸಂಸಾರಿಯಂತೆ ನಟಿಸಿ ಬಿಜ್ಜಳನಿಗೆ ಅಳಿಯನಾಗಿ ಶೋಭಿಸುತ್ತಾನೆ. ಹೀಗೆ ದಿವ್ಯಭವನದೊಳಗೆ ಗಜತುರಗ, ಛತ್ರ, ಚಾಮರಗಳೊಂದಿಗೆ, ರಾಜ ವಿಭವಗಳೊಂದಿಗೆ ಪ್ರಭುವಿನಂತೆ ಶಿವಭಕ್ತರನ್ನು ಅನುಗ್ರಹಿಸುತ್ತಾನೆ.

**ಸಂಧಿ : ಹದಿಮೂರು**

ರೇವಣಸಿದ್ಧನು ಬಿಜ್ಜಳರಾಯನಿಗೆ ಅಳಿಯನಾಗಿ ರಾಯನಿಂದಾದ ಭಾಗ್ಯವೆಂಬ ಭ್ರಾಂತಿಯು ಜನಗಳಿಗೆ ತೋರದಂತೆ ಲೀಲಾ ವಿನೋದದಿಂದ ಚತುರಂಗ ಸೈನ್ಯದೊಡನೆ ಪೂಜಿತನಾಗಿ, ವಿಭವ ವೈಭವ ಬಿರುದು ಉಪಚಾರಗಳಿಂದ ಮೆರೆಯುತ್ತಾನೆ. ನಂತರ ಗಜಾರೂಢನಾಗಿ ಕಲ್ಯಾಣಪುರದಿಂದ ದಕ್ಷಿಣದೇಶದ ಚೋಳದೇಶಕ್ಕೆ ಹೋಗುತ್ತಾನೆ. ಚೋಳದೇಶದಲ್ಲಿ ಚೋಳ ರಾಜನು ಸತ್ಕರಿಸಿ ತನ್ನ ಮಗಳನ್ನು ಕೊಟ್ಟು ಧನಕನಕ ವಸ್ತು, ವಾಹನ, ಪರಿಚಾರಕ, ಪಾತ್ರೆಗಳು, ಆಕಳಗಳು, ಧ್ಯಾನ, ಛತ್ರ ಚಾಮರಗಳನ್ನು, ಗಜ, ರಥ, ತುರಗ, ಪದಾತಿಗಳ ಸಮೇತ ಕಳುಹಿಸುತ್ತಾನೆ. ಅಲ್ಲಿಂದ ಮುಂದೆ ರೇವಣಸಿದ್ಧನು ಹೊರಟು ಚೇರ, ಪಾಂಡ್ಯ, ಕೇರಳ, ಕರ್ನಾಟಕ, ಆಂಧ್ರ ಸಕಲ ದೇಶದ ರಾಜರು ಸಕಲ ಬೋಗ ಭಾಗ್ಯಗಳನ್ನು ಕೊಡುತ್ತಾರೆ. ರೇವಣನು ಭೂಭಾಗದ ಕೆಲವು ಪ್ರದೇಶಗಳಲ್ಲಿ ಪ್ರಚುರವಾಗಿ ಕೆರೆಗಳನ್ನು ಕಟ್ಟಿಸುತ್ತಾನೆ. ಹೂತೋಟಗಳನ್ನು, ಶಿವಾಲಯಗಳಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸುತ್ತಾನೆ. ಅಲ್ಲದೆ ಅನ್ನಸತ್ರಗಳನ್ನು, ಅರವಟ್ಟಿಗೆಗಳನ್ನು ಮಾಡಿಸುತ್ತಾನೆ. ದೀನದಲಿತರಿಗೆ, ಕಷ್ಟಕ್ಕೊಳಗಾದವರಿಗೆ ಆಹಾರ, ನೆಲೆಗಳನ್ನು ಕೊಡುತ್ತಾನೆ ಮತ್ತು ಕಾಲಕಾಲಕ್ಕೆ ಮಳೆಯಾಗುವಂತೆ ಮಾಡುತ್ತಾನೆ. ದುಷ್ಟ ಮೃಗಗಳ ಉಪದ್ರವ ಇಲ್ಲದಂತೆ ಮಾಡುತ್ತಾನೆ. ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪರಿಪಾಲಿಸುವನು. ಕುರುಡರಿಗೆ, ಕಿವುಡರಿಗೆ, ಮೂಕರಿಗೆ, ಹೆಳವರಿಗೆ, ನಪುಂಸಕರಿಗೆ, ಬಂಜೆಯರಿಗೆ ಅವರವರಿಗೆ ಬೇಡಿದ್ದನ್ನು ಕೊಡುತ್ತಾ, ಬರಡು ದನಗಳಿಗೆ ಹೈನಾಗಿಸಿ ಬಂಜರು ನೆಲಗಳು ಫಲವಾಗುವಂತೆ ಮಾಡುತ್ತಾನೆ. ರೇವಣಸಿದ್ಧನು ತುಳಿದ ನೆಲವೆಲ್ಲ ಸುಕ್ಷೇತ್ರವನ್ನಾಗಿ ಮಾಡಿ ಮುಂದೆ ಕಲ್ಯಾಣಕ್ಕೆ ಹಿಂತಿರುಗಿಸುತ್ತಾನೆ.

ಕಲ್ಯಾಣದಲ್ಲಿ ಬಿಜ್ಜಳನು ಇದಿರುಗೊಂಡು ಕೆಲವು ಕಾಲ ತನ್ನ ಅರಮನೆಯಲ್ಲಿರಿಸಿ ಸಿದ್ಧ ಚಾರಿತ್ರಗಳನ್ನು ಕೇಳುತ್ತಿದ್ದನು. ಕೆಲವು ಕಾಲದ ನಂತರ ವಸಂತ ಕಾಲವು ಬರುತ್ತದೆ. ಆಗ ಬಿಜ್ಜಳನು ವನವಿಹಾರಕ್ಕೆ ಸಿದ್ದೇಂದ್ರನನ್ನು ಪ್ರಾರ್ಥಿಸುವನು. ಆಗ ಎಲ್ಲಾ ನಿಜ ಸತಿಯರನ್ನು ರಾಜವೈಭವದೊಡನೆ ವನ ಪ್ರವೇಶ ಮಾಡುತ್ತಾನೆ. ಫಲ, ಪುಷ್ಪ, ಪಲ್ಲವ, ಗಂಧ, ರಸ, ರೂಪ ಚಿತ್ರಗಳಂತೆ ನೆರಳನು ನೀಡುತ್ತವೆ. ಮುಖ್ಯವಾಗಿ ತರುಲತೆಗಳು, ವನವಾಟಿಕೆಗಳು, ಶುಕಪಿಕ ಮೊದಲಾದ ಪಕ್ಷಿಗಳ

ವಿನೋದದಿಂದ ತಂಗಾಳಿಯನ್ನು ಸೇವಿಸುತ್ತಾರೆ ಜೊತೆಗೆ ಪುಷ್ಪೋತ್ತೋತ್ಸವ, ಫಲೋತ್ಸವ, ಚಂದ್ರಿಕೋತ್ಸವ, ವಿಹಾರ ಮಾಡುತ್ತ ವಿನೋದದಿಂದ ಸಿದ್ಧನು ತರುಣಿಯೊರಡನೆ ಲೋಕೋತ್ತರವಾದ ದಿವ್ಯ ಭೋಗಗಳನ್ನು ಅನುಭವಿಸುವನು. ಸಿದ್ಧನ ಮಹಿಮೆಯನ್ನು ಕಂಡು ವನದೇವತೆಗಳೆಲ್ಲರೂ ಪುಷ್ಪ ಫಲಗಳಿಂದ ಆರಾಧಿಸುತ್ತಿರುವರೋ ಎನ್ನುವಂತೆ ತೋರುತ್ತಿದ್ದರು. ಹೀಗೆ ಬಿಜ್ಜಳರಾಯನು ಸಿದ್ಧೇಂದ್ರನೊಡನೆ ವನವಿಹಾರ ಮಾಡುತ್ತಾನೆ.

**ಸಂಧಿ : ಹದಿನಾಲ್ಕು**

ಮಂಗಳವಾಡವೆನಿಸಿದ ಕಲ್ಯಾಣಪಟ್ಟಣದಲ್ಲಿ ರಾಜ ಭೋಗಗಳನ್ನು ಸತಿಯರೊಂದಿಗೆ ಅನುಭವಿಸುವಂತೆ ನಟಿಸುವನು. ಶಿವಧರ್ಮ ಸಂಪ್ರದಾಯದಂತೆ ತಾನು ಕಾಯಕವನ್ನು ಮಾಡಬೇಕೆಂದು ಹಾಗು ಧರ್ಮ ಸೂಕ್ಷ್ಮವನ್ನು ಭೋದಿಸುವೆನೆಂದು ಸಕಲ ಪ್ರಾಣಿಗಳ ಜೀವಕ್ಕೆ ಆಧಾರವಾಗಿರುವ ನೀರನ್ನು ಒದಗಿಸಬೇಕೆಂದು ಕೆರೆಯನ್ನು ಕಟ್ಟಿಸಬೇಕೆಂದು ಸಂಕಲ್ಪ ಮಾಡುತ್ತಾನೆ. ಗುರು ಸಿದ್ಧನ ಹೆಂಡತಿಯರು ಬಿಜ್ಜಳನು, ಭಕ್ತರು ಎಲ್ಲರೂ ಹಿಂಬಾಲಿಸುತ್ತಾರೆ. ನೆಲವನ್ನು ಅಗೆಯಲು ರೇವಣನು ಗುದ್ದಲಿಯನ್ನು ಹಿಡಿದು ಪ್ರಾರಂಭಿಸಿದನು. ಎಲ್ಲರೂ ಕಷ್ಟಪಟ್ಟು ಕೆಲಸದಲ್ಲಿ ತೊಡಗಿದರು. ಕೆರೆಯ ಕೆಲಸ ನಡೆಯುತ್ತಿರುವಾಗ ಒಂದು ದಿನ ಚೋಳರಾಜನ ಮಗಳು ಮಣ್ಣು ಹೊರಲಾರದೆ ಆಲಸ್ಯದಿಂದ ತನ್ನ ಪತಿಯ ಮುಂದೆ ಬಂದು ಅಡಿಗೆ ಎರಗಿ ಪ್ರಭುವೇ ನಾನು ಮಹಾರಾಜನ ಮಗಳಾಗಿ ಹುಟ್ಟಿ ಜಗಕೆ ಆರಾಧ್ಯನಾದ ನಿಮ್ಮ ಕೈಯನ್ನು ಹಿಡಿದು ಸುಖಿಯಾಗಿದ್ದು ಈಗ ಮಣ್ಣು ಹೊರುವ ಕಷ್ಟಕ್ಕೆ ಗುರಿಯಾದನಲ್ಲವೆ? ನೋಡಿರಿ ನನ್ನ ಮೈಯನು, ಮೃದುವಾದ ದೇಹವು ಕಠಿಣವಾದ ಕೆಲಸವನ್ನು ಮಾಡಲು ಸಾಧ್ಯವಾಗದು ಎಂದು ಹೇಳುತ್ತಾಳೆ. ಆಗ ರೇವಣಸಿದ್ಧನು ಆಕೆಯನ್ನು ಕುರಿತು ರಾಜಪುತ್ರಿಯೇ ನೀನು ಪೂರ್ವಜನ್ಮದಲ್ಲಿ ಮಾಡಿದ್ದ ಶಿವಧರ್ಮಶೇಷದಿಂದ ಈ ಜನ್ಮದಲ್ಲಿ ರಾಜಪುತ್ರಿಯಾಗಿಯೂ ಗುರುರಾಜ ಪತ್ನಿಯಾಗಿಯೂ ಇದುವರೆಗೆ ಭೋಗಿಸಿರುವೆ. ಇನ್ನು ನಿನ್ನ ಪುಣ್ಯ ತೀರಿತು ಈ ಕೆಲಸವನ್ನು ಬಿಟ್ಟು ಹೋಗುವ ಪೂರ್ವದಲ್ಲಿ ನನ್ನ ಒಡವೆ ನನಗೆ ಕೊಟ್ಟು ನಿನ್ನ ತವರಿಗೆ ಹೋಗೆಂದು ಹೇಳುತ್ತಾನೆ.

ಚೋಳರಾಜಪುತ್ರಿಯು ರೇವಣಸಿದ್ಧನ ಮಾತಿನ ತಾತ್ಪರ್ಯವನ್ನು ಅರಿಯದೆ ಸುಮ್ಮನಿರುತ್ತಾಳೆ. ಗುರುವರನು ನಗುತ್ತ ಕ್ಷಣದಲ್ಲಿ ಚೋಳರಾಜಪುತ್ರಿಯ ಬಸುರನ್ನು ತನ್ನ ಕೈಯಿಂದ ಸವರಲಾಗಿ ಆಕೆಯು ಗರ್ಭಸ್ಥಲಾಗಿದ್ದ ಪಿಂಡವು ರೇವಣನ ಕೈಯಲ್ಲಿ ಬಂದು ನಿಂತಿತು. ಆ ಕ್ಷಣವೇ ಕೆರೆಯ ಏರಿಯ ಮೇಲೆ ಕಣಜ ಮಾಡಿ ಅದರೊಳಗೆ ಆ ಪಿಂಡವನ್ನು ಇಟ್ಟು ಮೇಲೆ ಹಾಸುಗಲ್ಲನ್ನು ಮುಚ್ಚುತ್ತಾನೆ. ಚೋಳ ರಾಜಕುಮಾರಿ ಹೋದ ನಂತರ ಕೆರೆಯ ಕೆಲಸವನ್ನು ಆರು ತಿಂಗಳ ತನಕ ಪೂರ್ಣಗೊಳಿಸಿದ ಬಳಿಕ ಕೆರೆಯ ಏರಿಯ ಮೇಲೆ ಗರ್ಭ ಪಿಂಡವನ್ನು ಮಡುಗಿದ್ದ ದಿನದಿಂದ ಒಂಭತ್ತು ತಿಂಗಳು ತುಂಬಿದಾಗ ಸರ್ವಜನ ಸಮೇತನಾಗಿ ಮುಚ್ಚಿದ ಹಾಸುಕಲ್ಲನ್ನು ತೆಗೆಯುತ್ತಾನೆ. ಒಳಗೆ ಪ್ರಾಕೃತ ಶರೀರ, ದೋಷವಿಕಾರ ಬೆಳಗುತ್ತಿರುವ ಸರ್ವಾಗ ಸುಮಧುರವಾದ ಪುರುಷ ಶಿಶುವು ರೇವಣಸಿದ್ಧನ ಪ್ರತಿಬಿಂಬದ ಹಾಗೆ

ಕಾಣಿಸುತ್ತದೆ. ಅಲ್ಲಿ ನೆರೆದವರೆಲ್ಲರೂ ಅತ್ಯಂತ ಆಶ್ಚರ್ಯದಿಂದ ನೋಡಿದರು ಸಿದ್ಧನು ಆ ಶಿಶುವನ್ನು ಎತ್ತಿಕೊಂಡು ಅಪ್ಪಿ ಮುದ್ದಾಡಿ ರುದ್ರಮುನಿಯೆಂದು ಹೆಸರಿಡುವನು. ನಂತರ ಕಲ್ಯಾಣಕ್ಕೆ ಬಂದ ತನ್ನ ಪಟ್ಟದ ಅರಸಿಯಾದ ಬಿಜ್ಜಳರಾಯನ ಮಗಳ ಕೈಗೆ ಕೊಡುವನು 'ಈ ನನ್ನ ಮಗನನ್ನು ಸರಿಯಾಗಿ ಸಲಹು' ಎಂದು ಸಿದ್ಧನು ಆಜ್ಞಾಪಿಸುವನು ಆಕೆಯು ಮಿಕ್ಕ ರೇವಣನ ರಾಣಿಯರೂ ಪ್ರೀತಿಯಿಂದ ರುದ್ರಮುನಿಯನ್ನು ತೊಟ್ಟಿಲಲ್ಲಿ ಮಲಗಿಸಿ ತೂಗಿ ಕ್ರಮವಾಗಿ ಎಲ್ಲರೂ ಬಾಲಲೀಲೆಗಳಿಗೆ ತಕ್ಕಂತೆ ಸಲಹುತ್ತಾರೆ. ಆ ಶಿಶುವು ಶುಕ್ಲಚಂದ್ರನಂತೆ ಪ್ರವರ್ಧ ಮಾನನಾಗಿ ಮಹಿಮೆಗಳನ್ನು ತೋರಿಸುತ್ತ ಎಂಟನೆಯ ವರ್ಷದ ಪ್ರಾಯವುಳ್ಳವನಾಗುತ್ತಾನೆ. ಆಗ ರೇವಣಸಿದ್ಧನು ರುದ್ರಮುನಿಗೆ ಶೈವದೀಕ್ಷೆಯನ್ನು ಕೊಟ್ಟು ಸಕಲ ತತ್ವ ರಹಸ್ಯಗಳನ್ನು ತಿಳಿಸುತ್ತಾನೆ. ತನ್ನ ಸಕಲಶಕ್ತಿಗಳನ್ನು ಲೋಕದಲ್ಲಿ ತನ್ನ ಪ್ರತಿಬಿಂಬವೇ ಎನ್ನುವಂತೆ ರೂಪಿಸುತ್ತಾನೆ. ಲೋಕಕ್ಕೆ ತಾನು ಮಾಡಬೇಕಾದ ಕಾರ್ಯಗಳನ್ನು ಆತನಿಗೂ ಅನುಗ್ರಹಿಸಿ ವಿಶ್ರಾಂತನಾಗುತ್ತಾನೆ.

ಮುಂದೆ ರುದ್ರಮುನಿಯು ಅನೇಕ ದೇಶಗಳನ್ನು ಸಂಚರಿಸುತ್ತ ಪುಣ್ಯಕ್ಷೇತ್ರವಾದ ಹಾವಿನಾಳು ಗ್ರಾಮಕ್ಕೆ ಬರುತ್ತಾನೆ. ಅಲ್ಲಿ ಶಿವಭಕ್ತನಾದ ಕಲ್ಲಯ್ಯನೆಂಬ ಮಹಾತ್ಮನು ಗುರುವರನ ಬಳಿ ಬಂದು, ತನಗೆ ಶಿವದೀಕ್ಷೆ ಕೊಡಬೇಕೆಂದು ಪ್ರಾರ್ಥಿಸುತ್ತಾನೆ. ಆಗ ರೇವಣಸಿದ್ಧನು ರುದ್ರಮುನಿಗೆ ಶಿವದೀಕ್ಷೆಯನ್ನು ಕೊಡಲು ಆಜ್ಞಾಪಿಸುವನು. ರುದ್ರಮುನಿಯು ಪೂರ್ವದ ಆದಿಶೈವ, ಶುದ್ಧಶೈವ, ಮಾರ್ಗಶೈವ ಹಾಗೂ ವೀರಶೈವ ದೀಕ್ಷೆ ಎಂಬ ನಾಲ್ಕು ದೀಕ್ಷೆಗಳನ್ನು ಅವುಗಳ ವ್ಯತ್ಯಾಸ ಹಾಗೂ ಲಕ್ಷಣಗಳನ್ನು ಹೇಳಲು ಕಲ್ಲಯ್ಯನು ತನ್ನ ಯೋಗ್ಯತೆಗೆ ತಕ್ಕ ಮಾರ್ಗಶೈವ ದೀಕ್ಷೆಯನ್ನು ದಯಪಾಲಿಸಬೇಕೆಂದು ಕೇಳಿಕೊಳ್ಳುತ್ತಾನೆ. ಆಗ ರುದ್ರಮುನಿಯು ಮಾರ್ಗಶೈವ ದೀಕ್ಷೆಯನ್ನು ಅನುಗ್ರಹಿಸಿ, ಆತನ ಸಂದೇಹಗಳನ್ನು ಬಗೆಹರಿಸುತ್ತಾನೆ. ಶೈವ ಸಂಪ್ರದಾಯದಲ್ಲಿ ಷಡ್ವಿಧ, ಭಕ್ತಿಭೇದಗಳನ್ನು ವಿವರಿಸುವನು. ಶಿವಧರ್ಮ ರಹಸ್ಯಗಳ ತತ್ವಗಳನ್ನು ಉಪದೇಶಿಸುತ್ತಾನೆ. ಹೀಗೆ ಕಲ್ಲಯ್ಯನಿಗೆ ಕಲ್ಲಿನಾಥ ಲಿಂಗವನ್ನು ದಯಮಾಡಿಸಿ ರುದ್ರಮುನಿ ಮತ್ತು ರೇವಣಸಿದ್ಧನು ಮುಂದಕ್ಕೆ ತೆರಳಿದರು.

**ಸಂಧಿ : ಹದಿನೈದು**

ಹಾವಿನಾಳನಿಂದ ದೇಶ ಸಂಚಾರಿಯಾಗಿ ರೇವಣಸಿದ್ಧನು ತನ್ನ ಪರಿವಾರದೊಂದಿಗೆ ಸೊನ್ನಲಿಗೆ ಎಂಬ ಪ್ರಾಂತಕ್ಕೆ ಬರುತ್ತಾನೆ. ಅಲ್ಲಿ ಶಿವಭಕ್ತಳು, ಜ್ಞಾನಿಯು ಆದ ಚಾಮಲದೇವಿ ಎಂಬ ಭಕ್ತಳು ಗುರುವಿನ ಆಗಮವನ್ನು ಕೇಳಿ ಕಲಸ ಕನ್ನಡಿಯನ್ನು ಹಿಡಿದ ಸುಮಂಗಲೆಯರೊಡನೆ ಎದುರುಗೊಳ್ಳುತ್ತಾಳೆ. ಆಗ ರೇವಣನ ಸಿದ್ಧನು ಆನೆಯ ಅಂಬಾರಿಯಿಂದ ಕೆಳಗಿಳಿದು ತನ್ನ ಸೈನ್ಯವನ್ನು ದೂರದಲ್ಲಿ ನಿಲ್ಲುವಂತೆ ಹೇಳುತ್ತಾನೆ. ನಂತರ ತಾನು ರನ್ನ ಹಾವುಗೆಗಳನ್ನು ಮೆಚ್ಚಿಕೊಳ್ಳದೆ ಕಾಲು ನಡಿಗೆಯಲ್ಲಿ ಬರುತ್ತಾನೆ. ಆಗ ಚಾಮಲದೇವಿಯು ಇದೇನು ಗುರುವೆ ಹಾವುಗೆಯನ್ನು ಬಿಟ್ಟು ಪಾದಾಚಾರಿಗಳಾಗಿ

ಬಂದಿದ್ದೀರಿ ಎಂದು ಕೇಳುತ್ತಾನೆ. ಅದಕ್ಕೆ ಸಿದ್ಧನು ನಕ್ಕು ಅಹುದವ್ವಾ ಈ ಸೊನ್ನಲಿಗೆ ಭೂಮಿಯು ಶಿವಲಿಂಗದ ಬೀಡಾಗುತ್ತದೆ. ಅಲ್ಲದೆ ಪರಶಿವನಾಂಶವು ಮಹಾಸಿದ್ಧ ಪುರುಷನಾಗಿ ಈ ಪುರದಲ್ಲಿ ಅವತರಿಸುವನು. ಈ ಮಹಾಕ್ಷೇತ್ರದಲ್ಲಿ ಹಾವುಗಗಳಿಂದ ಮೆಟ್ಟಿದೆ ಬಿಟ್ಟಿರುವೆನು ಎಂದು ಚಾಮಲದೇವಿಯೊಡನೆ ಮೊರಡಿಮುದ್ದಗೌಡನ ಮನೆಯನ್ನು ಪ್ರವೇಶಿಸಿ ಭಿಕ್ಷೆಯನ್ನು ಕೇಳುತ್ತಾನೆ. ಮುದ್ದುಗೌಡನ ಹೆಂಡತಿಯಾದ ಸುಗ್ಗವ್ವೆಯು ಭಿಕ್ಷೆಯನ್ನು ನೀಡುತ್ತಾಳೆ. ಸಿದ್ಧನ ಆರೋಗಿಸಿದ ನಂತರ ಸುಗ್ಗವ್ವೆಯ ಬಸುರಿಗೆ ಭಸಿತವನ್ನು ಪೂಸಿ ನಮಸ್ಕರಿಸುತ್ತಾನೆ. ಆಕೆ ಬೆದರಿ ಇದೇನು ಗುರುವೇ ಯಾರಿಗೆ ನಮಸ್ಕರಿಸುವಿರಿ ಎಂದು ಕೇಳುತ್ತಾಳೆ. ಆಗ ಸಿದ್ಧನು ಸುಗ್ಗವ್ವೆ ನಿನ್ನ ಉದರದಲ್ಲಿ ಪರಮೇಶ್ವರನ ಅಂಶವಾದ ಮಹಾಸಿದ್ಧ ಪುರುಷನಾದ ಆತನು ಚಿನ್ಮಮಿಯಾಗಿ ಬೆಳಗುವನು. ಆ ಸಿದ್ಧರಾಮನಿಂದ ತ್ರಿಣಯನಲಿಂಗಗಳು ಇಲ್ಲಿ ಪ್ರತಿಷ್ಠಾಪಿಸಲ್ಪಡುತ್ತವೆ. ಇಲ್ಲಿ ಶಿವತೀರ್ಥ, ಶಿವಸ್ಥಾನವಾಗುವದು ಎಂದು ಹೇಳುತ್ತಾನೆ. ಆಗ ಸುಗ್ಗವ್ವೆಯು ನಮಗೆ ಪ್ರಾಯವು ಕಳೆದುಹೋಗಿ ಕಡು ಮುದಿತನವು ಬಂದಿರುವಾಗ ಸಿದ್ಧನು ಹೇಗೆ ಹುಟ್ಟುತ್ತಾನೆ ಗುರುವೆ? ಎಂದು ಕೇಳುತ್ತಾಳೆ. ಅದಕ್ಕೆ ಸಿದ್ಧನು ಹೇಳುವನು, ಲೀಲಾ ಮಾತ್ರದಿಂದ ಅವತರಿಸಲು ನೀನು ನಿಮಿತ್ಯವಲ್ಲದೆ ನಿನ್ನ ಪ್ರಾಯವು ಬೇಕಾಗಿಲ್ಲವ್ವ ಎನಲು ಹರನೇ ನಮಗೆ ಮಗನಾಗುವದು ಹೇಗೆ? ಎಂದು ಕೇಳಲು, ಸಿದ್ಧನು ಜ್ಞಾನ ದೃಷ್ಟಿಯಿಂದ ಅರಿತು ಇಬ್ಬರು ಗಂಧರ್ವರು ಭೃಂಗಿಶಾಪದಿಂದ ಮೊರಡೆ ಮುದ್ದುಗೌಡನಾಗಿ, ಸುಗ್ಗವ್ವೆಯಾಗಿ ಹುಟ್ಟಿರುವಿರಿ ಶಿವಾಂಶವು ಸಿದ್ಧರಾಮನಾಗಿ ಅವತರಿಸಿದಾಗ ನಿಮ್ಮ ಶಾಪ ಪರಿಹಾರವಾಗುವುದು ಎಂದು ಹೇಳುತ್ತಾನೆ. ಮುಂದೆ ಚಾಮಲದೇವಿಯು ಸುಗ್ಗವ್ವೆಯನ್ನು ಆರೈಕೆ ಮಾಡಲು ಮುಂದಾಗುತ್ತಾಳೆ.

ರೇವಣಸಿದ್ಧನು ಬೀಳ್ಕೊಂಡು ಬಿಜ್ಜಳರಾಯ ಕೆಲ ವರ್ಷ ಲೋಕದಲ್ಲಿ ಬದುಕಿ ಬಳಿಕ ಶಿವಪ್ರೇರಣೆಯಿಂದ ತಾನಿನ್ನು ಈ ಲೋಕದಲ್ಲಿ ಇರಕೂಡದೆಂದು ತನ್ನ ಮಗನಾದ ರುದ್ರಮುನಿಗೆ ಪಟ್ಟಕಟ್ಟಿ ತನ್ನ ರಾಣಿಯರೆಲ್ಲರನ್ನು ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿ ಶರೀರ ಸಮೇತವಾಗಿ ಕೈಲಾಸಕ್ಕೆ ಹೋಗುವಂತೆ ಅನುಗ್ರಹಿಸುತ್ತಾನೆ. ನಂತರ ಬಿಜ್ಜಳನಿಗೆ ಕೃಪೆ ಮಾಡಿ ಕೊಲ್ಲಿಪಾಕಿ ಎಂಬ ಶಿವಕ್ಷೇತ್ರದಲ್ಲಿಯ ಸೋಮೇಶ್ವರ ಲಿಂಗವನ್ನು ಅಪ್ಪಿಕೊಳ್ಳುತ್ತಾನೆ. ಲಿಂಗವು ಇಬ್ಬುಗೆಯಾಗಲು ರೇವಣಸಿದ್ಧನು ಲಿಂಗದಲ್ಲಿ ಐಕ್ಯನಾಗುತ್ತಾನೆ.

### ೩. ಚತುರ್ಮುಖ ಬೊಮ್ಮರಸನ ರೇವಣಸಿದ್ದೇಶ್ವರ ಪುರಾಣ

ಕನ್ನಡ ಸಾಹಿತ್ಯದಲ್ಲಿ ಚತುರ್ಯಾರ ನಿಘಂಟು, ಸೌಂದರ್ಯ ಪುರಾಣ, ರೇವಣಸಿದ್ದೇಶ್ವರ ಪುರಾಣಗಳನ್ನು ರಚಿಸಿದ ಬೊಮ್ಮರಸ ಹೆಸರಿನ ಮೂರು ಮಂದಿ ಕವಿಗಳು ಕಂಡುಬರುತ್ತಾರೆ. ಇವರಲ್ಲಿ ರೇವಣಸಿದ್ದೇಶ್ವರ ಪುರಾಣ ಬರೆದ ಬೊಮ್ಮರಸನನ್ನು ಚತುರ್ಮುಖ ಬೊಮ್ಮರಸನೆಂದು ಕರೆಯುವ ರೂಢಿಯಿದೆ. ೧೩ ಸಂಧಿ, ೫೬೫ ಷಟ್ಪದಿಗಳಲ್ಲಿ ರಚಿಸಿದ ಈತನ ಕಾಲ ಕ್ರಿ.ಶ. ೧೫೦೦. ಕೃತಿಯಲ್ಲಿ

ಅಲ್ಪಸ್ವಲ್ಪ ವ್ಯತ್ಯಾಸ ಮಾಡಿಕೊಂಡಿದ್ದರೂ ಹರಿಹರ ಕವಿಯ ಪ್ರಭಾವ ಈತನ ಮೇಲೆ ಆಗಿರುವುದನ್ನು ಅಲ್ಲಗಳೆಯುವಂತಿಲ್ಲ. ಕೈಲಾಸದಲ್ಲಿ ಎಸಗಿದ ಯಾವುದೋ ತಪ್ಪಿಗಾಗಿ ಭೂಲೋಕದಲ್ಲಿ ಹುಟ್ಟಿ ಶಿವಧರ್ಮವನ್ನು ಪ್ರತಿಷ್ಠಾಪಿಸಿ ಹಲವಾರು ಮಹಿಮೆಗಳಿಂದ ರೇವಣಸಿದ್ಧನ ವ್ಯಕ್ತಿತ್ವವನ್ನು ಪುರಾಣ ಮಾರ್ಗವಾಗಿ ರಚಿಸಿದ್ದಾನೆ. ಪ್ರಸ್ತುತ ಪುರಾಣ ಕಥಾ ಸಾರ ಹೀಗಿದೆ.

ರೇವಣಸಿದ್ಧನು ಕೈಲಾಸದಲ್ಲಿ ದಾರುಕನನ್ನು ದಾಟಿದ ತಪ್ಪಿಗಾಗಿ ಶಿವನು ಧರಣಿಯಲ್ಲಿ ಕೀರ್ತಿಯನ್ನು ಹೊಂದಿರುವ ಕೊಲ್ಲಿಪಾಕಿಯ ಸೋಮನಾಥ ಲಿಂಗದಲ್ಲಿ ಉದಯವಾಗೆಂದು ಅಪ್ಪಣೆ ನೀಡುವನು. ಆ ಪರಿಣಾಮ ಈತನು ಕೊಲ್ಲಿಪಾಕಿಯ ಶಿವಲಿಂಗದಿಂದ ಉದಯಿಸಿ ಮಲಯಾಚಲಕ್ಕೆ ಹೋಗಿ ಅಲ್ಲಿ ಅಗಸ್ತ್ಯನಿಗೆ ಶಿವತತ್ವವನ್ನು ಉಪದೇಶಿಸುತ್ತಾನೆ. ಮುಂದೆ ಸೇತುವಿನ ರಾಮನಾಥನಲ್ಲಿ ಲಿಂಗಪೂಜೆಯು ಮಾಡಿ ಚೋಳದೇಶಕ್ಕೆ ಹೊರಡುವನು. ಆ ದೇಶದಲ್ಲಿ ಯಾರು ಅರಿಯದಂತೆ ಗುಪ್ತವಾಗಿರುವನು. ಚೋಳರಾಜನು ಪ್ರತಿಷ್ಠಾಪಿಸಿದ ವಿಷ್ಣುವಿನ ಪ್ರತಿಮೆಯು ಅಲ್ಲಾಡುತ್ತಿರುವಾಗ ಕನಸಿನಲ್ಲಿ ಏಕಾಂಬ್ರನಾಥನು ಬಂದು ಆ ಅರಸನಿಗೆ ಪಿಣ್ಯಾಂಕನೆಂಬುವನಿಂದ ಈ ಕಾರ್ಯವಾಗುವದೆಂದು ಹೇಳುವನು. ಆಗ ಅರಸನು ಧೂತರನ್ನು ಕಳುಹಲು ಅವರಿಗೆ ತನ್ನ ಸ್ತಂಭ ವಿದ್ಯಾ ಸಾಮರ್ಥ್ಯವನ್ನು ತೋರಿಸುವನು. ಅನಂತರ ಅರಸನು ಬಂದು ಕೇಳುತ್ತಾನೆ. ಆಗ ಕರುಣೆ ತೋರಿ ವಿಷ್ಣುವಿನ ಪ್ರತಿಮೆಯನ್ನು ನಿಲ್ಲಿಸುವದಕ್ಕಾಗಿ ತನ್ನ ಪುಲ್ಲಿಂಗದಿಂದ ವೀರ್ಯವನ್ನು ತೆಗೆದು ವಿಷ್ಣುವಿನ ಪ್ರತಿಮೆಯ ಶಿರದ ಮಧ್ಯ ಒತ್ತಿದನು. ಮುಂದೆ ಆ ಮೂರ್ತಿಗೆ ಅರುಳಾಳ್ ಪೆರುಮಾಳ್ ಎಂಬ ಹೆಸರು ಪ್ರಾಪ್ತವಾಯಿತು.

ಅರಸನಿಗೆ ಕೃಪೆ ಮಾಡಿ ಉತ್ತರ ದಿಕ್ಕಿಗೆ ಪ್ರಯಾಣಿಸಿ ಮಾಸನೂರಿಗೆ ಬರುವನು. ಅಲ್ಲಿ ಶಿವಾಲಯದ ಮುಂದೆ ಮಿಥುನ ರಾಕ್ಷಸರು ತಿಗಣಿ ರೂಪದಿಂದ ಜನರಿಗೆ ಕಿರುಕುಳ ಕೊಡುವದಾಗಿ ತಿಳಿದ ರೇವಣಸಿದ್ಧನು ಅವುಗಳನ್ನು ಎರಡು ಕಬ್ಬಿಣದ ಗುಂಡುಗಳಾಗಿ ಮಾಡಿ ಆ ಊರಿನ ಕಮ್ಮಾರನಿಂದ ಕಠಾರಿಗಳನ್ನಾಗಿ ಮಾಡಿಸಿ ಗಂಡು ಕಠಾರಿಯನ್ನು ಮಾಸೂರಿನ ಮಡುವಿನಲ್ಲಿಟ್ಟು ಮತ್ತೊಂದು ಹೆಣ್ಣು ಕಠಾರಿಯನ್ನು ಜಯಂತಿಯ ವಿಕ್ರಮಾದಿತ್ಯನಿಗೆ ಕೊಡುವನು. ಮುಂದೆ ಕಲ್ಯಾಣಕ್ಕೆ ಪ್ರಯಾಣಿಸುವನು.

ಕಲ್ಯಾಣದ ಗಾಣಿಗರ ಕಲ್ಯಾಣಶೆಟ್ಟಿಯು ಬಡವನಾಗಿದ್ದು ಆತನು ಮತ್ತು ಆತನ ಹೆಂಡತಿ ಮತ್ತು ಎತ್ತು ಒಂಟಿ ಕಣ್ಣುಳ್ಳವರಾಗಿದ್ದರು. ಅವರ ಮನೆಯಲ್ಲಿ ಗಾಣ ಹೊಡೆಯುವ ಕೆಲಸ ಮಾಡಿ ಅವರೆಲ್ಲರಿಗೆ ಕಣ್ಣನ್ನು, ಸಂಪತ್ತನ್ನು ಕೊಟ್ಟು ಮುಂದೆ ಸಂಚಾರವನ್ನು ಮುಂದುವರಿಸುತ್ತಾನೆ. ಮುಂದೆ ಮಾಯಿದೇವಿ ಮನೆಗೆ ಬಂದು ನೀರು ತರುವ ಕೆಲಸವನ್ನು ಮಾಡಿ ಆಕೆಗೂ ವರವನ್ನು ನೀಡುತ್ತಾನೆ.

ವಿಭೀಷಣನು ರೇವಣಸಿದ್ಧರಲ್ಲಿಗೆ ಬಂದು ನೀವು ಲಂಕೆಗೆ ಬಂದು ಮೂರುಕೋಟಿ ಲಿಂಗಗಳನ್ನು ಸ್ಥಾಪಿಸಬೇಕೆಂದು ಕೇಳಲಾಗಿ ಆತನ ಕೋರಿಕೆಯಂತೆ ಮೂರುಕೋಟಿ ಲಿಂಗಗಳನ್ನು ಸ್ಥಾಪಿಸಿ ಮಂಗಳವಾಡದಲ್ಲಿದ್ದ ವೀರ ಬಿಜ್ಜಳನಲ್ಲಿಗೆ ಹೊರಟನು. ಅಲ್ಲಿ ಭಿಕ್ಷೆ ಬೇಡಲು ಬಿಜ್ಜಳನು ರೇವಣಸಿದ್ಧನಿಗೆ ಕುದಿಯುವ ಪಾಯಸವನ್ನು ನೀಡುವನು. ಆಗ ರೇವಣಸಿದ್ಧನು ತನ್ನ ಕೈಯನ್ನು ಕಂಭಕ್ಕೆ

ಒರೆಸಿದಾಗ ಅರಮನೆಯು ಧಗಧಗನೆ ಉರಿಯುತ್ತದೆ. ಬಿಜ್ಜಳನಲ್ಲಿದ್ದ ಗರ್ವವು ತೊಲಗುತ್ತದೆ. ಆತನಿಗೆ ಶಿವಧರ್ಮವನ್ನು ಉಪದೇಶಿಸಿ ಗೋರಖನಾಥನಲ್ಲಿಗೆ ಹೋಗುತ್ತಾನೆ. ಗೋರಖನಾಥನ ಅಪ್ಪಣೆಯಂತೆ ಚಿಕ್ಕ ಹೆಂಡತಿಯ ಕಠಾರಿಯನ್ನು ತಂದು ರೇವಣಸಿದ್ಧರಿಗೆ ನೀಡಿದಳು. ಪುನ: ಕಠಾರಿಯು ಗೋರಖನ ವೃಕ್ಷಸ್ತಲದಲ್ಲಿ ಸೇರುತ್ತದೆ. ಆಗ ಗೋರಖನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ರೇವಣಸಿದ್ಧನಿಗೆ ಬೇಡಿಕೊಳ್ಳುತ್ತಾನೆ. ಆ ಕಠಾರಿಯನ್ನು ರೇವಣಸಿದ್ಧನು ಕಠಾರಿ ಹೊರಬರುವಂತೆ ಕೃಪೆ ಮಾಡುತ್ತಾನೆ ಮತ್ತು ಶಿವಧರ್ಮವನ್ನು ತಿಳಿಸಿ ಜಂಗಮರಿಗೆ ದಾನ ಮಾಡುವಂತೆ ಹೇಳಿ ವಾರಾಣಸಿಗೆ ಪ್ರಯಾಣಿಸುವನು. ಅಲ್ಲಿಂದ ಮಂಗಳವಾಡಕ್ಕೆ ಬರುತ್ತಾನೆ. ಬಿಜ್ಜಳನು ಮಾಸನೂರಿನ ಮಡುವಿನಲ್ಲಿರುವ ಸುರಗಿಯನ್ನು ತೆಗೆಯಲು ಖರ್ಪರನಿಗೆ ಹೇಳಲು ಕುಟಿಲ ಖರ್ಪರನು ಹನ್ನೆರಡು ಸಾವಿರ ಕನ್ಯೆಯರನ್ನು ಬಲಿ ಕೊಡಬೇಕೆಂದು ಹೇಳಿದ ಮಾತಿಗೆ ಮರುಳಾಗಿ ಬಿಜ್ಜಳನು ಹನ್ನೆರಡು ಸಾವಿರ ಕನ್ನೆಯರನ್ನು ಸಿದ್ಧಮಾಡಲು ಒಂದು ಕನ್ಯೆಯ ಕೊರತೆಯಾಗುತ್ತದೆ. ಆಗ ರೇವಣಸಿದ್ಧನ ಆಶೀರ್ವಾದದಿಂದ ಹುಟ್ಟಿದ ಮಾಯಿದೇವಿಯ ಮಗಳಾದ ರೇವಣದೇವಿಯ ಕರೆದುಕೊಂಡು ಬಂದು ನಿಲ್ಲಿಸುವರು ಆಕೆಯ ಆರ್ತನಾದ ಕೇಳಿ ರೇವಣಸಿದ್ಧನು ಬಂದು ಆ ಹನ್ನೆರಡು ಸಾವಿರ ಕನ್ಯೆಯರ ಬಂಧನವನ್ನು ಬಿಡಿಸಿ, ಬಿಜ್ಜಳನಿಗೆ ಇದ್ದ ಸುರಗಿಯ ದುರಾಸೆಯನ್ನು ಬಿಡಿಸಿ ಅವನಿಗೆ ರಾಜ್ಯ ಪರಿಪಾಲನೆ ಮಾಡುವದನ್ನು ಅರುಹಿ ಆತನ ಮಗಳನ್ನು ಮದುವೆಯಾಗುವನು. ಅಲ್ಲಿಂದ ಚೋಳದೇಶಕ್ಕೆ ಬಂದಾಗ ಚೋಳ ರಾಜೇಂದ್ರನು ತನ್ನ ಮಗಳಾದ ಸೌಂದರ್ಯದೇವಿಯನ್ನು ರೇವಣಸಿದ್ಧನಿಗೆ ಕೊಟ್ಟು ವಿವಾಹ ಮಾಡುತ್ತಾನೆ. ಚೋಳ ಪುತ್ರಿಯಿಂದ ರುದ್ರಮುನಿಯದೇವ ಹುಟ್ಟಿದನು.

ರೇವಣಸಿದ್ಧನು ಚೇರ, ಮಲೆಯಾಳ, ಗೌಳ, ಗುಜ್ಜರ, ನೇಪಾಳ ಮೊದಲಾದ ದೇಶಗಳನ್ನು ಸಂಚರಿಸುತ್ತಾ ಹಾವಿನಾಳ ಗ್ರಾಮಕ್ಕೆ ಬಂದು ಹಾವಿನಾಳ ಕಲ್ಲಯ್ಯನಿಗೆ ತನ್ನ ಪುತ್ರನಾದ ರುದ್ರಮುನಿದೇವನಿಂದ ದೀಕ್ಷೆಯನ್ನು ಕೊಡಿಸಿ ಮುಂದೆ ಸೊನ್ನಾಲಪುರಕ್ಕೆ ಬರುತ್ತಾನೆ. ಅಲ್ಲಿ ಚಾಮಲದೇವಿಯನ್ನು ಸಿದ್ಧನು ಉದಯಿಸುವನೆಂದು ಅರುಹುವನು. ಸುಗ್ಗಲೆಯ ದರ್ಶನ ಮಾಡಿ ಆಕೆಗೆ ಸಿದ್ಧರಾಮನು ಹುಟ್ಟುವನೆಂದು ತಿಳಿಸಿ, ಅನುಗ್ರಹಿಸಿ ಮುಂದೆ ಕಾಶಿಗೆ ಹೋಗಿ ಅಲ್ಲಿಂದ ಹಿಮಾಲಯಕ್ಕೆ ಹೋಗುವನು. ಅಲ್ಲಿರುವವರಿಗೆ ಲಿಂಗದ ಉತ್ಪತ್ತಿ ಕಾರಣವನ್ನು ಹೇಳಿ ಅಲ್ಲಿಂದ ತಾರಪರ್ವತ, ನೀಲಾಚಲ, ಮಂಧರಾದಿ, ಗೋಕರ್ಣ, ಪಂಚರಾಮ ಈ ಎಲ್ಲಾ ಶಿವಸ್ಥಾನಗಳನ್ನು ಕಂಡು ನಂತರ ಕೊಲ್ಲಿಪಾಕಿಗೆ ಹೋಗಿ ಅಲ್ಲಿನ ಸೋಮೇಶ್ವರನೆಂಬ ಶಿವಲಿಂಗವನ್ನು ಪೂಜಿಸಿ ಆಮೇಲೆ ಹಸ್ತದಲ್ಲಿರುವ ಶಾಂತಮಲ್ಲಿಕಾರ್ಜುನ ಎಂಬ ಮಹಾಲಿಂಗಕ್ಕೆ ನಮಸ್ಕರಿಸಿ ಆ ಲಿಂಗಕ್ಕೆ "ನಿಮ್ಮ ಅಪ್ಪಣೆಯಂತೆ ಈ ಭೂಮಿಯಲ್ಲಿ ಉದ್ಧರಿಸಿ ಸದ್ಧರ್ಮದಿಂದ ನಡೆದೆನು" ಎಂದು ವಿಸ್ತಾರವಾಗಿ ವಿಜ್ಞಾಪಿಸಿ ಸೋಮೇಶ್ವರ ಲಿಂಗದಲ್ಲಿ ರೇವಣಸಿದ್ಧನು ಬಯಲಾಗುತ್ತಾನೆ.

## ಈ. ಮಲ್ಲಣನ ರೇವಣಸಿದ್ದೇಶ್ವರ ಕಾವ್ಯ

ಮಲ್ಲು, ಕವಿಮಲ್ಲು, ಕವಿ ಮಲ್ಲಣ ಎಂಬ ಹೆಸರಿನಿಂದ ಸಾಹಿತ್ಯ ಚರಿತ್ರೆಯಲ್ಲಿ ಪರಿಚಯಿತನಾದ ಈತ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಜಾಲವಾದಿ ಗ್ರಾಮದ ಶಂಕರಲಿಂಗನ ಪರಮಭಕ್ತ. ಸುಮಾರು ೧೭ ಅಥವಾ ೧೭ನೆಯ ಶತಮಾನದಲ್ಲಿ ಜೀವಿಸಿದ್ದ ಈತ ರೇವಣಸಿದ್ದೇಶ್ವರ ಕಾವ್ಯವನ್ನು ರಚಿಸಿದ್ದಾನೆ. ಶ್ರೀ ಮಹಾಂತಸ್ವಾಮಿಗಳು ಮುರುಘಾಮಠ ಧಾರವಾಡ ಪ್ರಕಾಶನ ಸಂಸ್ಥೆಯಿಂದ ಡಾ.ಎಂ.ಎಸ್.ಸುಂಕಾಪುರ ಅವರ ಸಂಪಾದನೆಯಲ್ಲಿ ೧೯೬೮ರಲ್ಲಿ ಪ್ರಕಟಗೊಂಡ ಈ ಕೃತಿಯನ್ನು ನಾನು ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ. ಏಳು ಸಂಧಿಗಳಲ್ಲಿ ೩೮೯ ಷಟ್ಪದಿಗಳಲ್ಲಿ ರಚನೆಯಾದ ಈ ಕೃತಿ ರೇವಣಸಿದ್ಧರ ವ್ಯಕ್ತಿತ್ವವನ್ನು ಪುರಾಣ ಮಾರ್ಗದಿಂದ ಭಿನ್ನವಾಗಿ ಚರಿತ್ರೆ ಮಾರ್ಗದಲ್ಲಿ ಚಿತ್ರಿಸಿರುವದು ವಿಶೇಷವೆನಿಸಿದೆ. ಪ್ರಸ್ತುತ ಕೃತಿಯ ಕಥಾಸಾರ ಹೀಗಿದೆ.

### ಸಂಧಿ : ಒಂದು

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗಗಳಲ್ಲಿ ಮತ್ತು ಬಿಜ್ಜಳನ ರಾಜ್ಯದಲ್ಲಿ ಕ್ಷೋಭೆಗಳಿಂದ ಅಶಾಂತಿ ವಾತಾವರಣ ಸೃಷ್ಟಿಯಾದ ದೂರುಗಳು ದೇವಲೋಕಕ್ಕೆ ಬಂದವು. ಹರನು ಒಡ್ಡೋಲಗದಲ್ಲಿ ಕುಳಿತು ಹರಿ, ಬ್ರಹ್ಮ, ದಿಕ್ಪಾಲಕರು, ಬಸವ, ಕಲ್ಪತರು, ತುಂಬರರು, ಮುನಿಜನರು ಅನೇಕ ರೀತಿಯ ಭಕ್ತರು ನೆರೆದಿತ್ತು ದೇವತೆಗಳ ಮಧ್ಯದಲ್ಲಿ ನಾರದನು ಶಿವನ ಮರ್ತ್ಯದ ಗುಣಗಳೇನು ಎಂದು ಕೇಳುವನು. ದೇವರ ದೇವನಾದವನೇ ಕೇಳು. ಮರ್ತ್ಯದಲ್ಲಿ ಕೀಳುತನದಿಂದ ಅಹಂಕಾರದಲ್ಲಿ ಆಳಿಕೊಳ್ಳುವರು ಮತ್ತು ಬಡವರನ್ನು ಕಂಡು ನೋಡಲಾರರು ಹಾಗು ಮಾತಾಡಿಸಲಾರರು ಎಂದು ನಾರದನು ಹೇಳುತ್ತಾನೆ. ಹರನು ಈ ಮಾತನ್ನು ಕೇಳಿ ತಾನು ಮರ್ತ್ಯವನ್ನು ನೋಡಬೇಕೆಂದು ಒಂದು ರೂಪವನ್ನು ಧರಿಸಿ, ಆನಂದ ಪದವಿಯಿಂದ ತನ್ನ ಮುಂದೆ ತನ್ನ ಸ್ವರೂಪವನ್ನೆ ಕರೆಯಲು ಗುರುವಾಗಿ ಬರುತ್ತಿದ್ದನು.

ಸೃಷ್ಟಿಯ ಈಶ್ವರನಾದ ಸಿದ್ಧರೇವಣ ಜುಟ್ಟೂರು ಪಟ್ಟಣಕ್ಕೆ ಹೊಟ್ಟೆಗಿಲ್ಲದೆ ಬಳಲುತ್ತ ಬರುತ್ತಾನೆ. ಅಟ್ಟಡವಿಯಲ್ಲಿ ಹೊಲದಲ್ಲಿ ಸ್ತ್ರೀಯೊಬ್ಬಳು ನೀರಿನ ಕೊಡವನ್ನು ಹೊತ್ತುಕೊಂಡು ಬಂದಳು.

ಹರನು ಪರಿಪರಿ ರೂಪ ತೋರುತ್ತ ಬರುತ್ತಿದ್ದನು. ಪಟ್ಟಣದ ವಿಸ್ತಾರ ಏನು ಹೇಳಬೇಕು ಕೊತ್ತಳ ಬುರುಜುಗಳನ್ನು ಹೊಂದಿದ ಬೀದಿಯಲ್ಲಿ ನಡುವೆ ಮಂಟಪದಲ್ಲಿ ಸಭೆ ಸೇರಿತ್ತು. ಸೊಟ್ಟ ಕಾಲು ಬೆರಳುಗಳನ್ನು, ಹರಿದ ಕಂಥೆಯನ್ನು ತಲೆಯಲ್ಲಿ ಹೇನು ಸೀರುಗಳನ್ನು ತೆಗೆದು, ತೆಗೆದು ಒರೆಯುತ್ತಾನೆ. ಭಸ್ಮವನ್ನು ಧರಿಸಿ ಸಭೆಗೆ ಬಂದು ನಾನು ಬಹಳ ಹಸಿದಿದ್ದೇನೆ ಬೋನವನ್ನು ಕೊಡಿರೆಂದು ಬೇಡುತ್ತಾನೆ. ಆದರೆ ಸಂಪತ್ತಿನ ಸೊಕ್ಕಿನಲ್ಲಿದ್ದ ಕೆಲವರು ಭಸ್ಮವನ್ನು ನೆಲಕ್ಕೆ ಬಿಸಾಡಿದರು.

ಒಡೆಯನು ಅಂಬಲಿ ಬೇಡಿದರೆ ಅಲ್ಲಿರುವ ದೊರೆಗಳು ಕೈ ಹೊಡೆದು ನಕ್ಕು ಒಡವೆ ವಸ್ತ್ರ ಬೇಕಾದರೆ ಕೊಡುತ್ತೇವೆ ನಮ್ಮಲ್ಲಿ ಅಂಬಲಿ ಇಲ್ಲ ಎಂದು ಹೇಳುತ್ತಾರೆ. ಕಡೆಯ ಮನೆಯ ಆಚೆಗೊಂಡನ ಹೆಂಡತಿ ಬನದೇವಿಯ ಹತ್ತಿರ ಹೋಗು ಆಕೆ ನಿನಗೆ ಪಾದ ತೊಳೆದು ಒಲಿವಳು ಎಂದು ಹೇಳುವರು. ಕೆಲವರು ಅಣುಕ ನುಡಿವರು. ಅದಕ್ಕೆ ರೇವಣಸಿದ್ಧನು ಕೆಡಬೇಡಿರೊ ಧರ್ಮವನ್ನು ಮಾಡಿರಿ ಬಡವರಲ್ಲಿ ಸಂಪತ್ತಿಲ್ಲ ಅವರನ್ನು ತೋರಿಸುವದು ಏತಕೆ! ನಮಗೆ ಸ್ವಲ್ಪ ಅಂಬಲಿ ಸಾಕು ಎನ್ನಲು ಕೋಪದಿಂದ ಹಿಡಿದು ನೂಕಿದರು.

ಆಚೆಗೊಂಡನ ಮನೆಗೆ ಬರುವಾಗ ಕುಳಿತಿರುವ ದೊರೆಗಳಿಗೆ ಕಟ್ಟಲು ಕಾಚವಿಲ್ಲದಂತೆ ಮಾಡುತ್ತೇನೆ. ಸೊಕ್ಕಿನ ಈ ಜನರನ್ನು ಆಚೆಗೊಂಡನ ಕೈಕೆಳಗೆ ನಡೆಸುವೆ ಎನ್ನುತ್ತ ಆಚೆಗೊಂಡನ ಮನೆಯ ಸೂಚನೆ ತಿಳಿದು ಬಂದನು ಗುರುಸಿದ್ಧನು.

ಬನದ ಗೌಡ್ತಿಯು ಕೊಡವನ್ನು ಕೆಳಗೆ ಇಟ್ಟು, ಹಸಿವಾಗಿದೆ ಉಣಲು ಅಂಬಲಿಬೇಕೆಂದು ಕೇಳಲು ಬಹಳ ಸಂತೋಷದಿಂದ ಪಾದಕ್ಕೆ ನಮಸ್ಕರಿಸುವಳು ನಂತರ ಅಂಬಲಿ ಕೊಡಲು ಹೋಗಲು ಪುನ: ಬರುತ್ತೇನೆ ಎಂದು ಸಿದ್ಧನು ಊರ ಹೊರವಲಯದಲ್ಲಿ ಬಂದು ಮತ್ತೊಂದು ಹೊಸ ರೂಪತಾಳಿ ಹರಗುತ್ತಿರುವ ಆಚಗೊಂಡನ ಹತ್ತಿರ ಬರುತ್ತಾನೆ. ಒಂದು ಸಾಲಿಗೆ ಎತ್ತು ಮಲಗುತ್ತಿದೆ. ಆಗ ನಾನು ಹರಗುವೆನು ಎಂದು ರೇವಣಸಿದ್ಧ ಕೇಳುತ್ತಾನೆ. ಆಗ ಯಾವ ಕಡೆಯಿಂದ ಬಂದಿರುವೆ? ಯಾವ ಕುಲದವನು ಎಂದು ಕೇಳುತ್ತಾನೆ. ಅದಕ್ಕೆ ರೇವಣಸಿದ್ಧನು ಕುಡು ಒಕ್ಕಲಿನಗನ ಮಗನು ನಾನು ಹರಗಬಲ್ಲೆ, ಬಿತ್ತಬಲ್ಲೆ, ಹರಿದು ಬಿಸುಟುವೆನು, ಕರ್ಮಕಸಗಳನ್ನು ಕಣ್ಣಿ ಮಾಡುವೆನು ಎಂದನು. ಹಾಗಾದರೆ ನಿನ್ನ ತಂದೆ ತಾಯಿಗಳು ಇದ್ದಾರೆಯೆ? ಎಂದು ಕೇಳುತ್ತಾನೆ. ನಾನು ತಂದೆ ತಾಯಿಗಳನ್ನು ಅರಿಯಲಾರೆ ಲೋಗರ ಮನೆಯಲ್ಲಿ ಹೊಂದಿಕೊಂಡು ಬೆಳೆದು ಅಂಬಲಿ ಕೊಟ್ಟವರಿಗೆ ತುಂಬಿ ಕೊಟ್ಟೇವು ಸಾವಿರ ಗಿರಿಯ ಹಾದಿಯಲ್ಲಿ ಜನ ದಣಿಯುವಷ್ಟು ಊಟ ಮಾಡಿದರು ಎಂದು ಅರಹುತ್ತಾನೆ. ಎಲ್ಲಕೂಡಿ ಆಚೆಗೊಂಡನೆಂದು ಕರೆದರು. ಎಲ್ಲ ರೀತಿಯಲ್ಲಿ ನಿನ್ನ ಮನ ದಣಿಯುವಷ್ಟು ಕಷ್ಟಪಡುವನು ಎಂದು ಹೇಳುತ್ತಾನೆ. ಹಾಗಾದರೆ ಬಾ ನಿನಗೆ ತಿಳಿದ ರೀತಿಯಲ್ಲಿ ಒಲಿದು ನಮ್ಮನ್ನು ಸಲಹು ಎಂದು ಆಚೆಗೊಂಡನು ರೇವಣಸಿದ್ಧರಿಗೆ ಅಂಬಲಿಯನ್ನು ಕೊಡುತ್ತಾನೆ. ಅಂಬಲಿ ತಿಂದು ಕೈ ತೊಳೆಯದೆ ಅಂಗಿಗೆ ಒರೆಸಿದ ರೇವಣನು ಬೆಂಬಿಡದೆ ದೇಶವನ್ನು ತೋರಿಸುವ ಶಂಭುವನ್ನು ನಂಬಿ ಕುಂಟೆ ದಾರಿ ಕೋಲನ್ನು ಕೊಟ್ಟು, ಮನೆಗೆ ಬಂದು ಅಂಬಲಿಯನ್ನು ಉಂಡು ಹೊರಬರಲು ನೆರದ ಡೊಂಬರು ಊರಮುಂದೆ ಕರೆಸಿದರು. ದೊರೆಗಳೆಲ್ಲರೂ ಎದ್ದು ಆತನನ್ನು ಕರೆದು ತಮ್ಮ ನಡುವೆ ಕುಳ್ಳಿರಿಸಿದರು. ಅಲ್ಲಿ ನೆರೆದ ಜನವೆಲ್ಲಾ ಆಚೆಗೊಂಡನನ್ನು ಕೊಂಡಾಡಿದರು. ಇತ್ತ ರೇವಣಸಿದ್ಧನು ಹರಗಲು ದೇವತೆಗಳನ್ನೆಲ್ಲ ಕರೆಸಿದನು. ಅಲ್ಲಿಗೆ ಪಾರ್ವತಿದೇವಿಯು ಬಂದಿರಲು ದೇವತೆಯು ಮರದಲ್ಲಿ ನೆಲಸಿ ನೆರಳನ್ನಾಗಿ ಮಾಡಿ ರುದ್ರನ ಓಲೋಗ ಅಲ್ಲಿ ನೆರೆದಿತ್ತು ತುಂಬರರು ಹಾಡು ಹಾಡುತ್ತಿದ್ದರು.

ಸುವರ್ಣಮಂಚದ ಮೇಲೆ ಸಿದ್ಧನು ಮಲಗಿದ್ದಾನೆ. ಪರಿಮಳ, ಝುಂಕೃತಿ ಹೊಲದಲ್ಲಿ ಬರುತ್ತಿದೆ. ಹೀಗಿರಲು ರೇವಣಸಿದ್ಧನು ದೂರದಲ್ಲಿ ಗೌಡನು ಬರುವದನ್ನು ಕಂಡನು. ಕೆಲಸದಾಳುಗಳು ಮಾಯವಾದರು. ಮೊದಲಿನಂತೆ ಎತ್ತುಗಳನ್ನು ಬೈಯ್ಯುತ್ತ ಹೂಡುತಿದ್ದಾನೆ.

ಗೌಡನು ಬಂದು ಹೊಲದ ಚೊಕ್ಕತನವನ್ನು ಕಂಡು ಸಂತೋಷದಿಂದ ಅಪ್ಪಿ ಮೈದಡವಿ ಬೆರಗಾದನು. ಮುಂದೆ ರೇವಣಸಿದ್ಧನು ಎತ್ತು ಬಿಟ್ಟು ಮಿಣಿಗಳನ್ನು ಕಿತ್ತಿ ಹೊತ್ತುಕೊಂಡು ಮನೆಗೆ ಬರುತ್ತಾನೆ. ಬನದ ಗೌಡ್ತಿ ಪ್ರೀತಿಯಿಂದ ಬಾ ಮಗನೆ ಎಂದು ಕರೆದು ಅಂಬಲಿಯನ್ನು ಉಣಬಡಿಸುತ್ತಾಳೆ. ದಣಿಯುವಷ್ಟು ಅಂಬಲಿಯನ್ನು ಸವಿದು ರೇವಣನಿಂದ ಆಚೆಗೊಂಡನು ಮನೆಯ ಸಮೃದ್ಧಿಯಾಗಿ ಹೊಲಗಳಲ್ಲಿ ಜೋಳ, ಕಡಲೆ, ಗೋದಿ, ನವಣೆಗಳು ಎಲ್ಲಾ ತರದ ಕಾಳು ಕಡಿಗಳು ಸಾಗರದಂತೆ ಬೆಳೆದು ನಿಂತವು. ಬಂಟರು, ಕುದುರೆ, ಮಂಚಗಳು ಬಂದು ನೆರೆದವು. ಎಳ್ಳಅಮವಾಸೆಯು ಬಂತು ಎಲ್ಲವೂ ಸಂಭ್ರಮದಿಂದ ನಡೆದವು. ಇಂತಹ ಘನ ಮಹಿಮೆಯನ್ನು ಮಾಡಿದ ರೇವಣನು ಆಚೆಗೊಂಡ ದಂಪತಿಗಳಿಗೆ ಹೀಗೆ ಹೇಳುತ್ತಾನೆ. ನಿಮ್ಮ ದಾರಿದ್ರ್ಯವನ್ನು ಕಳೆಯಲು ಬಂದಿರುವೆನು. ಯಾವುದೇ ಹಮ್ಮು ಇಲ್ಲದೆ ಧನ ಧಾನ್ಯ ಸಂಪತ್ತುಗಳನ್ನು ಬಳಸಿ ಧರ್ಮದಿಂದ ಬದುಕಿರೆಂದು ಅವರ ತಲೆಗೆ ಕೈಯನ್ನು ಇಟ್ಟು ಆಶೀರ್ವದಿಸುತ್ತಾನೆ. ತಕ್ಷಣವೇ ಅವರು ಪ್ರಾಯದವರಾಗುತ್ತಾರೆ. ಮುಂದೆ ಇಲ್ಲಿರಬಾರದೆಂದು ಎಲ್ಲರನ್ನು ಹರಸಿ ಬೀಳ್ಕೊಂಡು ಕಲ್ಯಾಣಪುರಕ್ಕೆ ಹೊರಡುತ್ತಾನೆ.

**ಸಂಧಿ : ಎರಡು**

ಕಲ್ಯಾಣಪುರಕ್ಕೆ ಆಗಮಿಸಿದ ರೇಣುಕನು ದುರ್ಗ, ಕೊತ್ತಳ, ಬುರ್ಜು, ಹೆಬ್ಬಾಗಿಲುಗಳು ಪಂಚಲೋಹಗಳಿಂದ ಬಾಗಿಲುಗಳು ಕಂಗೊಳಿಸುವುದನ್ನು ಕಾಣುತ್ತಾನೆ. ಭದ್ರವಾದ ಉಕ್ಕಿನ ಲಾಳುವಂಡಿಗೆ ಇವೆಲ್ಲವನ್ನು ನೋಡುತ್ತ ಒಳಹೊಕ್ಕನು.

ಊರೊಳಗೆ ಬರುತ್ತಿರಲು ಹೆಜ್ಜೆ ಹೆಜ್ಜೆಗೆ ಅಂಗಡಿಗಳು ಮಧ್ಯದಲ್ಲಿ ಅನ್ನಛತ್ರ, ಅರವಟ್ಟಿಗೆಗಳು ಭಕ್ತರನ್ನು ಕಾಯುತ್ತ ನಿತ್ಯಭೋಜನಕ್ಕೆ ಅಲ್ಲಿಯ ಸ್ತ್ರೀಯರು ಕೈಯಲ್ಲಿ ಕೈಗಡಿಗೆಗಳನ್ನು ನೀರು ತುಂಬಿಕೊಂಡು ಪಾದಗಳನ್ನು ತೊಳೆದು ಮಂಟಪಕೆ ಕರೆತರುವರು. ಇನ್ನು ಮುಂದೆ ರೇವಣಸಿದ್ಧನು ನಡೆಯುತ್ತಿರುವಾಗ ಉಪ್ಪರಿಗೆಯ ಹೊಂಗಳಸದ ಮಂಟಪಗಳು ಚಪ್ಪರದಲ್ಲಿ ಪನ್ನೀರನ್ನು ಸಿಂಪಡಿಸಿ ಕಸ್ತೂರಿಯ ಸೌರಭದ ಅಂಗಡಿಗಳು ಉಪ್ಪರಿಗೆಯ ಹೊಂಗಳಸಡಿ ಹೊಳೆಯುವದನು ರೇವಣಸಿದ್ಧನು ನೋಡುತ್ತ ನಸು ನಗುವನು.

ಮುತ್ತು ಮಾಣಿಕ್ಯಗಳು ವಜ್ರ, ನೀಲ, ರತ್ನ, ಹವಳ ಪಚ್ಚೆಯ ಅಂಗಡಿ ತುಂಬಿರುವಾಗ ಚಿನಿವಾರನಿಗೆ ಖಂಡುಗ ಸಂಖ್ಯೆಯಲ್ಲಿ ಹೊನ್ನುಗಳು ಎಲ್ಲಿ ನೋಡಿದರಲ್ಲಿ ದೊರೆಗಳು, ಬಣಜಿಗರು, ಶೀಲವಂತರು ಇವರೆಲ್ಲರೆನೂ ಸಿದ್ಧನು ನೋಡುತ್ತ ನಡೆದನು.

ಮೃದು ನಡೆ ನುಡಿಯಿಂದ ಕೂಡಿದ ಜಾಣ, ಜಾಣೆಯರನ್ನು ರೇವಣ್ಣ ಕಾಣುತ್ತ ಬರುತ್ತಿರುವಾಗ ಏಳುನೂರೆಪ್ಪತ್ತು ಜಂಗಮರನ್ನು ಬಸವನು ಅವರ ಇಚ್ಛೆಯಂತೆ ವ್ರತಗಳನ್ನು ಸಲ್ಲಿಸುತ್ತಿರುವಾಗ ಮಹಾದೇವಿ ಎನ್ನುವ ಬಡವಳು ಲಿಂಗವಂತಳು, ವೇಶ್ಯೆಯವಳಾಗಿ ನಿಂತಿರುವದನ್ನು ಸಿದ್ಧನು ನೋಡುತ್ತಾನೆ. ವೇಶ್ಯೆಯ ಕೊರಳಲ್ಲಿ ರುದ್ರಾಕ್ಷಿ ಹಣೆಯಲ್ಲಿ ವಿಭೂತಿಯನ್ನು ನೋಡಿ ಕರುಣೆಯಿಂದ ವಿಟವೇಷವನ್ನು ಧರಿಸಿಕೊಂಡು ಆಕೆಯ ಮುಂದೆ ನಿಲ್ಲುತ್ತಾನೆ. ಆಕೆ ಸಂತೋಷದಿಂದ ಕಾಲಿಗೆ ನಮಸ್ಕರಿಸಿ ಮನೆಗೆ ಕರದೊಯ್ಯುವಳು. ಬಡತನದಲ್ಲಿದ್ದ ಆಕೆಗೆ ಸಿದ್ಧನು ವಿಭೂತಿಯನ್ನು ಕೊಡುತ್ತಿರಲು ಹೊರಸು ಬೆಳ್ಳಿಯ ಮಂಚವಾಯ್ತು, ಮುರಿದಮನೆ ಉಪ್ಪರಿಗೆಯಾಯ್ತು ಮಹಾದೇವಿಯ ಅಂಗದಲ್ಲಿ ಪ್ರಾಯವು ತುಂಬಿ ಬಂತು. ಕಬ್ಬಿಣಕ್ಕೆ ಪರುಷ ಮುಟ್ಟಲು ಬಂಗಾರವಾಯಿತು. ಬೆಳಗಾದ ನಂತರ ಸಿದ್ಧನ ಕಾಲನ್ನು ಮಹಾದೇವಿ ಹಿಡಿದು ನಿನ್ನ ಹೆಸರೇನು? ನನಗೆ ಬಿಡಿಸಿ ಹೇಳು ಕೇಳುತ್ತಾಳೆ. ಸಿದ್ಧನು ತಾನು ರೇವಣಸಿದ್ಧನೆಂದು ಬಡವಿಯೆಂದು ನಿನಗೆ ಒಲಿದು ಬಂದಿರುವದಾಗಿ ಹೇಳುತ್ತಾನೆ. ಮುಂದೆ ನಮ್ಮನ್ನು ಪೂಜಿಸೆಂದು ಕಲ್ಯಾಣಕ್ಕೆ ಹೊರಡುತ್ತಾನೆ.

ಸಾವಿರಾರು ಸಂಖ್ಯೆಯಲ್ಲಿ ಎಲ್ಲಿ ನೋಡಿದರಲ್ಲಿ ದೊರೆಗಳು, ಘನ ಶ್ರೀಮಂತರನು ನೋಡುತ್ತ ಬರುತ್ತಿರುವಾಗ ರೇವಣಸಿದ್ಧರು ಬಡವರನ್ನು ಹುಡುಕುತ್ತಿರಲು ಗಾಣಿಗರ ಸಂಪತ್ತನ್ನು ನೋಡುತ್ತಾರೆ.

ಕೆಲವರಲ್ಲಿ ಬೆಳ್ಳಿಯ ಅಡ್ಡಣಿಗೆಗಳು ದೊಡ್ಡ ದೊಡ್ಡ ಸುವರ್ಣದ ಅರವಟ್ಟಿಗೆಗಳು ಕೆಂಪಾದ ಕೈ ಉಗುರುಗಳಿಂದ ಎಣ್ಣೆಯನ್ನು ಅಡ್ಡ ಹಾಯವವರ ಮೇಲೆ ಚಿಮ್ಮುವರು. ಗಡ್ಡವನ್ನು ಒರೆಸುತ್ತಾ ತಮ್ಮ ತಮ್ಮ ಗಾಣಗಿತ್ತಿಯರು ನಗುತ್ತ ನೋಡುವರು. ಸಾವಿರದ ನಾಲ್ಕುನೂರು ಗಾಣದವರು ಘನ ದೊರೆಗಳಾಗಿರುವರು. ಆದರೆ ಅಲ್ಲಿ ಬಡತನದಲ್ಲಿರುವ ಕಲ್ಲಿಸೆಟ್ಟಿಯನ್ನು ಸಿದ್ಧನು ನೋಡುವನು. ಬೆಳಗಿನ ನಾಲ್ಕುಗಂಟೆಯಾದರೂ ಎಣ್ಣೆ ಬರುತ್ತಿಲ್ಲ ಸಾವ ಬಡತನವನ್ನು ಯಾವ ರೀತಿಯಲ್ಲಿ ನಿವಾರಿಸಿ ದೊರೆಯ ಮಾಡಬೇಕೆಂದು ಸಿದ್ಧನು ವಿಚಾರಿಸಿದನು.

ಸಿದ್ಧನು ಗಾಣಿಗನ ವೇಷಧರಿಸಿ ಪಟ್ಟಣವೆಲ್ಲ ನೋಡುತ್ತ ಎಣ್ಣೆಯ ಅರಿವೆಯನ್ನು ಧರಿಸಿಕೊಂಡು ಬರುತ್ತಿರುವನು. ಇತ್ತ ಕಡೆ ಕಲ್ಲಿಸೆಟ್ಟಿ ಎತ್ತಿಗೆ ನೀರು ಕುಡಿಸಲು ಮಧ್ಯಾಹ್ನ ಹೊಡೆದುಕೊಂಡು ಬರುತ್ತಿರುವಾಗ ಎತ್ತು ರಾಜಬೀದಿಯ ಮಧ್ಯದಲ್ಲಿ ಬೀಳುತ್ತದೆ. ಅದನ್ನು ಎಬ್ಬಿಸಲು ಪ್ರಯತ್ನಿಸಿ ಸೋತು ಬೇರೆ ಬೇರೆ ಅಂಗಡಿಯವರನ್ನು ಕಾಲಿಗೆ ನಮಸ್ಕರಿಸಿ ಎತ್ತನ್ನು ಎತ್ತಲು ಕರೆದಾಗ ತಮ್ಮ ವ್ಯವಹಾರ ಕೆಡುತ್ತದೆ ಎಂದು ಜರೆಯುವರು. ಆಗ ಸಿದ್ಧನು ಮರುಗಿ ಎತ್ತನ್ನು ಎಬ್ಬಿಸುವನು. ರೇವಣಸಿದ್ಧರನ್ನು ಕಲ್ಲಿಸೆಟ್ಟಿಯು ಮನೆಗೆ ಕರೆದುಕೊಂಡು ಬರುವನು. ರೇವಣಸಿದ್ಧನ ಪರಿಚಯವನ್ನು ಕಲ್ಲಿಸೆಟ್ಟಿ ಕೇಳಲು ಸಿದ್ಧನು ಗಾಣಿಗರ ಗಾಣದ ಬಸವನ ಮಗನೆಂದು ಹೆಸರಿರುವನೆಂದು ಹೇಳುತ್ತಾನೆ. ಆಗ ಸೆಟ್ಟಿ ತನ್ನ ಹೆಂಡತಿಗೆ ಎತ್ತನ್ನು ಎತ್ತಿರುವನು ಆತನಿಗೆ ಊಟಕ್ಕೆ ಕೊಡಲು ಹೇಳುವನು. ಮುಂದೆ ರೇವಣನು ಗಾತ್ರದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದನು.

ಶಿವನ ಒಡ್ಡೋಲಗದಲ್ಲಿ ಮೃತ್ಯು, ಮಾರಿಗಳು ಕಾಲು ಒತ್ತುದಿದ್ದವು, ಸುತ್ತಲೂ ದಿಕ್ಕಪಾಲಕರು ಪಕ್ಕಕ್ಕೆ ಬ್ರಹ್ಮ ವಿಷ್ಣು ಮತ್ತು ಪಾರ್ವತಿ, ಗಂಗೆ ಹಾಗು ತುಂಬರ ನಾರದರು ಗೀತೆಯನ್ನು ಹಾಡುತ್ತಿದ್ದರು. ಇದನ್ನು ಕಲ್ಲಿಸೆಟ್ಟಿ ತನ್ನ ಹೆಂಡತಿಯೊಡನೆ ಶಿವನ ಒಡ್ಡೋಲಗವನ್ನು ಜಾಲದಿಂದ ನೋಡುತ್ತಿದ್ದನು. ಎಲ್ಲರೂ ಹೋದ ನಂತರ ಬೆಳಗಾದೊಡನೆ ಗುರುಸಿದ್ಧನ ಚರಣಗಳನ್ನು ಹಿಡಿದು ನಿಮ್ಮನ್ನು ಬಡವರೆಂದು ಆಳುತನದಲ್ಲಿ ನಡೆಸಿಕೊಂಡೆನು ಎಂದು ಬೇಡಿಕೊಳ್ಳುತ್ತಾನೆ. ಆಗ ಗುರುಸಿದ್ಧನು ಏಳೂನೂರೆಪ್ಪತ್ತು ಕಲ್ಲುಗಾಣ, ಏಳುನೂರಾ ಮರದ ಗಾಣಕ್ಕೆ ಅವರನ್ನು (ಉಳಿದ ಗಾಣಿಗರನ್ನು) ಆಳುಗಳನ್ನಾಗಿ ಮಾಡಿ ನಿನ್ನನ್ನು ದೊರೆಯನ್ನಾಗಿ ಮಾಡುವೆನು ಎಂದು ಹೇಳುತ್ತಾನೆ. ಮರುದಿವಸ ಬಿಜ್ಜಳನು ಪುರದ ಗಾಣಿಗರೆಲ್ಲರನ್ನೂ ಕರೆಸಿ ಸಾವಿರ ಖಂಡದಷ್ಟು ಎಣ್ಣೆಯನ್ನು ಮದುವೆಯ ಸಂಭ್ರಮಕ್ಕೆ ಬೇಕೆಂದು ಹೇಳುತ್ತಾನೆ. ಆದರೆ ಕಲ್ಲಿಸೆಟ್ಟಿ ಬಡವನು ಅವನಿಗೆ ಸರತಿ ಬೇಡವೆಂದು ಹೇಳಲು, ಇತರ ಗಾಣಿಗರು ಹಿಂದೆ ಏಳೆಂಟು ಸಲ ಬಿಟ್ಟಿಯಾಗಿ ಮಾಡಿರುವೆವು ಇಂದು ಕಲ್ಲಿಸೆಟ್ಟಿ ಮಾಡಲೆಂದು ಹೇಳಿ ಹೊರಡುವರು. ಆಗ ಬಿಜ್ಜಳನು ಕಲ್ಲಿಸೆಟ್ಟಿಗೆ ಬರಹೇಳುತ್ತಾನೆ. ಮತ್ತು ನಾಳಿನ ಜಾವದಲ್ಲಿ ಸಾವಿರ ಖಂಡುಗ ಎಣ್ಣೆಯನ್ನು ಮದುವೆಗೆ ಒದಗಿಸಬೇಕೆಂದು ಕರ್ಪುರದ ವೀಳೆಯನ್ನು ಕೊಟ್ಟು ಕಳುಹಿಸುತ್ತಾನೆ. ಆಗ ಮನೆಗೆ ಬಂದ ಕಲ್ಲಿಸೆಟ್ಟಿ ರೇವಣ ದೇವನಿಗೆ ಶರಣಾಗುತ್ತಾನೆ. ಅದಕ್ಕೆ ಗುರುಸಿದ್ಧ ಭುಜಗಳಿಗೆ ಎಂದು ಸಂತೈಸುತ್ತಾನೆ.

ರೇವಣಸಿದ್ಧನು ಕಲ್ಲಿಸೆಟ್ಟಿಗೆ ಆತನ ಹೆಂಡತಿಯೊಡನೆ ಮಲಗಲು ಹೇಳಿ ಮೃತ್ಯು ಮಾರಿಗಳೊಡನೆ ಹರಿಬ್ರಹ್ಮರೊಂದಿಗೆ ಎಣ್ಣೆಯನ್ನು ತಯಾರಿಸುತ್ತಾನೆ. ಮರುದಿನ ಕಲ್ಲಿಸೆಟ್ಟಿ ಬಿಜ್ಜಳನ ಓಲಗದಲ್ಲಿ ಸಾಲಾಗಿ ಎಣ್ಣೆಯನ್ನು ತಂದಿಡುವನು. ಎಲ್ಲ ಗಾಣಿಗರು ಬಂದು ನೋಡಿ ಕಲ್ಲಿಸೆಟ್ಟಿಗೆ ನಮಸ್ಕರಿಸುವರು ಮತ್ತು ಎಣ್ಣೆಯನ್ನು ಮಾಡಿರುವ ಬಗೆ ಹೇಗೆ ಎಂದು ವಿನಯದಲ್ಲಿ ಕೇಳುತ್ತಾರೆ. ಆಗ ಸೆಟ್ಟಿಯು ಘನಮಹಿಮನಾದ ಬಸವನೆಂದು ಮನೆಗೆ ಬರುತ್ತಾನೆ. ಸಿದ್ಧನಿಗೆ ವಿನಯದಿಂದ ನಮಸ್ಕರಿಸುವಾಗ ಮುಂದೆ ರೇವಣನು ರಾಯನನ್ನು ಕಾಣಲು ಹೋಗುತ್ತಾನೆ.

**ಸಂಧಿ : ಮೂರು**

ರೇವಣಸಿದ್ಧನು ದೇಶ ದೇಶ ಸಂಚರಿಸುತ್ತ ಮಂಗಳವಾಡಕ್ಕೆ ಬರುತ್ತಾನೆ. ಏಳುಸುತ್ತಿನ ದುರ್ಗ, ತಮ್ಮನ ಭೇರಿಗಳ ಬುರುಗು ಕಹಳೆ, ಕುದುರೆ ರಾಹುತ, ಸುರಿಗೆ ಸಬಳಗಳು ತುಂಬಿರುವಂತೆ ಬಸವ ಜಂಗಮರು ಬಿಜ್ಜಳನ ಓಲಗದಲ್ಲಿ ಶೋಭಿಸಲು ಸಿದ್ಧನು ಮಾಯದಲ್ಲಿ ಬಂದು ಓಲಗದಲ್ಲಿ ಸೇರಿದಾಗ ಬಾಗಿಲ ಕಾಯವರ ಕಣ್ಣು ತಪ್ಪಿಸಿ ಬಂದಿರುವದಾಗಿ ಹಿಡಿಯುವರು. ವಿಚಾರಿಸಲು ಭಿಕ್ಷೆ ಕೇಳಲು ಬಿಜ್ಜಳನು ಕುದಿಯುವ ಹುಗ್ಗಿಯನ್ನು ಕಂಭಕ್ಕೆ ಒರೆಸುತ್ತಾನೆ. ಆಗ ಬೆಂಕಿಯು ಅರಮನೆಯನ್ನು ಸುಡುತ್ತದೆ. ಊರಿನಲ್ಲಿ ಅಗ್ನಿ ಸುಡುತ್ತಿರಲು ಎಲ್ಲರೂ ಬೊಬ್ಬಿಡುವರು. ಆಗ ಅರಸನು ಅಗ್ನಿ ಶಮನಕ್ಕಾಗಿ ಬೇಡಿಕೊಂಡನು. ಆತನ ಬೇಡಿಕೆಯಂತೆ ರೇವಣನು ಮತ್ತೆ ಅರಮನೆಯನ್ನು ಮೊದಲಿನಂತೆ ರೂಪಿಸಿಕೊಟ್ಟನು. ಇದರಿಂದಾಗಿ ಅಲ್ಲಿಗೆ ಎದ್ದು ಬಂದವರೆಲ್ಲರಿಗೆ ಈತನು ಸಿದ್ಧನು ಎಂದರಿತರು

ಬಿದ್ದು ಹೊರಳಾಡುವ ಮುದುಕ ಮುದುಕಿಯರು ಸಿದ್ಧನ ಪ್ರಸಾದ ಎಂದು ಓಡಾಡಿದರು, ವಜ್ರಕಾಯದವರಾದರು. ಕುರುಡರಿಗೆ ಕಣ್ಣುಗಳು, ಕುಂಟರಿಗೆ ಕಾಲುಗಳು, ಕಣ್ಣಿಲ್ಲವರಿಗೆ ಕಣ್ಣುಗಳು ಬಂದವು.

ಈ ಸಂಭ್ರಮವನ್ನು ಬಿಜ್ಜಳನು ಬಸವನು ಕರೆದುಕೊಂಡು ಉಪ್ಪರಿಗೆಯ ಮೇಲೆ ನಿಂತು ಹೊಸ ಪರಿಯ ಕುಸುರಿ ಕೆಲಸ ದೇವೇಂದ್ರನಾಲಯದಂತೆ ಈ ಭೂಮಿಯಲ್ಲಿ ಕೆಲಸವಾಗಿದೆ ಇದಕ್ಕೆ ಯಾವುದು ಸಾಟಿಯಿಲ್ಲವೆಂದು ಹೊಗಳುತ್ತಾರೆ. ಆಗ ಬಿಜ್ಜಳನ ಭಂಡಾರಿ ಬಸವನು ಭಾಪುರೆ ದೇವ, ವಜ್ರ ಭಂಡಾರಗಳು ಆನೆಯ ಕುದುರೆಗಳ ನೋಡಿ ಈ ಜಗತ್ತಿಗೆ ಹೊಸದಾಗಿ ಸಿದ್ಧನು ಕೊಟ್ಟಿರುವನು ಎನ್ನುತ್ತಾ ಇಬ್ಬರು ಕುದುರೆ ಮೇಲೆ ಬರುತ್ತಿದ್ದರು.

ಮರಳನಂತೆ ಕಾಣುವ ಸಿದ್ಧನಿಗೆ ಬಸವೇಶ ನಮಸ್ಕರಿಸುವನು. ಹಾಗು ಆತನ ಪಾದದ ಭಸ್ಮವನ್ನು ತನ್ನ ಹಣೆಗೆ ಹಚ್ಚಿಕೊಳ್ಳುವನು. ಆಗ ಸಿದ್ಧನು ಭಸ್ಮವನ್ನು ಆತನಿಗೆ ಹಚ್ಚಿ ಪರಸ್ಪರ ಗುಣಗಾನ ಮಾಡಿಕೊಂಡರು.

**ಸಂಧಿ : ನಾಲ್ಕು**

ಬೀಯಳ್ಳಿ ಸಿದ್ಧನು ಜಗತ್ತಿಗೆ ಮಿಗಿಲಾದ ವಿದ್ಯೆಗಳನ್ನು ಸಾಧಿಸಿರುವನು. ಕಿಚ್ಚಿನಲಿ ಕೊಂದು ಜೀವವನ್ನು ಮರಳಿ ನೀಡುವನೆಂದು ಪ್ರಾಯ ನೀಡುವದು ತನ್ನ ಕಾಯಲೆಂದು ಸಾರುತ್ತಿರುವಾಗ ಸಗರದ ಭೂಪಾಲನು ಮರುದಿವಸ ಕಬ್ಬಿಣದ ಕಡಾಯಿಯಲ್ಲಿ ಎಣ್ಣೆಯನ್ನು ಕಾಯಿಸುವಂತೆ ಆಣೆಗೊಳಿಸುವನು. ರೇವಣಸಿದ್ಧನು ಬೀಯಳ್ಳಿ ಸಿದ್ಧನನ್ನು ಬೆಳ್ಳಿಗುಂಡಾಗಿ ಮಾಡಿ ಉತ್ತರ ದೇಶವನ್ನು ನೋಡುತ್ತಾ ನಡೆದನು. ಮುಂದೆ ದಿಲ್ಲಿಯಲ್ಲಿ ಒಬ್ಬನು ಮನುಷ್ಯರನ್ನು ನುಂಗುವ ಉದ್ದವಾದ ದಾಡಿ ಮತ್ತು ಹಲ್ಲು ಮಸೆಯುತ ಒದರುತ ಬೆಟ್ಟ ಘೋಳಿಡುವಂತೆ ಬರುತ್ತಾನೆ. ಆಗ ರೇವಣ ಸಿದ್ಧನಿಗೆ ಕತ್ತಿಯಿಂದ ಹೊಯ್ದದಾಗ ಲೋಹವು ಹತ್ತು ತುಕುಡಿಗಳಾದವು. ನಂತರ ಮೊಳಕಾಲಿನಿಂದ ತಿವಿದಾಗ ತಾನೆ ತತ್ತರಿಸಿ ಬೀಳುತ್ತಾನೆ. ಕೊನೆಗೆ ರೇವಣಸಿದ್ಧನ ಪಾದವನು ಹಿಡಿಯುವನು. ಇನ್ನು ಮುಂದೆ ಮನುಷ್ಯರನ್ನು ಭಕ್ಷಿಸಬೇಡ ಎಂದು ವಿಭೂತಿಯನ್ನು ಕೊಟ್ಟು ಮುಂದೆ ಸಿಂಹಳದೇಶಕ್ಕೆ ರೇವಣಸಿದ್ಧನು ಹೊರಡುತ್ತಾನೆ. ಅಲ್ಲಿ ಸ್ತ್ರೀ ರಾಜ್ಯವನ್ನು ಕಂಡು ಬರುವಾಗ ಸಿದ್ಧನು ದುರ್ಗಿಯನ್ನು ಕಾಣುವನು. ದುರ್ಗಿಯನ್ನು ಪಾಂಡುಪುತ್ರರ ವಿಷಯವನ್ನು ಹೇಳಿದ ನಂತರ ದೇಶಸಂಚಾರ ಮುಂದುವರಿಸುತ್ತಾನೆ. ಓರಂಗಲ್ಲಿಗೆ ನಡೆದು ಮುಂದೆ ಗದಗ, ಹಂಪೆ, ಕಂಚಿಗೆ ಹೋಗಿ ಹರಿಹರ, ದ್ವಾರಸಮುದ್ರ, ಗೋವ, ಕೊಂಕಣಿಗೆ ನಡೆದು ಬರುತ್ತಾನೆ. ಮುಂದೆ ಚಾಕೂರಿಗೆ ಬಂದು ಜಕ್ಕಲೆಯನ್ನುವ ಬಂಜೆಗೆ ಮಕ್ಕಳನ್ನು ಕರುಣಿಸುತ್ತಾನೆ. ಸಿದ್ಧನ ಕೃಪೆಯಿಂದ ಹೆಣ್ಣುಮಗುವನ್ನು ಜಕ್ಕವ್ವೆ ಪಡೆದು ಆ ಮಗುವಿಗೆ ರೇವಣಸಿದ್ಧಳು ಎಂದು ಹೆಸರಿಡುತ್ತಾಳೆ. ಸಿದ್ಧನು ಯಾತ್ರೆಯನ್ನು ಮಾಡುತ್ತ ಮಂಗಳವಾಡಕ್ಕೆ ಬರುತ್ತಾನೆ.

ಸಂಧಿ : ಐದು

ಧರೆಯನ್ನು ಮಂಥಣ ಮಾಡಿ ಅಂಗರವನ್ನು ತಿರುಗುವ ತಡಗೋಲು ಮಾಡಿ ಸರ್ಪವನ್ನು ಹಗ್ಗವನ್ನಾಗಿ ಮಾಡಿ ಅಸುರರು ಸುರರು ಕೂಡಿ ಸಮುದ್ರವನ್ನು ಮಂಥಿಸಿದರು. ತಾರೆ, ವರುಣ, ಇಂದ್ರ, ಲಕ್ಷ್ಮಿ ಹುಟ್ಟಿದವು. ನಂತರ ವಿಷಯ ಬಂತು, ಅಮೃತವು ಬಂದಿತು. ಆಗ ಹರನು ವಿಷವನ್ನು ಸೇವಿಸಿದನು. ಹರಿಯು ಕಮಂಡಲದೊಂದಿಗೆ ಅಮೃತವನ್ನು ಎರಚಲು ಭೇದ ಉಂಟಾಗುತ್ತದೆ. ಅಸುರರಿಗೆ ಮತ್ತು ಸುರರಿಗೆ ಯುದ್ಧ ಪ್ರಾರಂಭವಾಯಿತು. ಒಂದು ಹನಿ ರಕ್ತ ನೆಲಕ್ಕೆ ಬೀಳಲು ಸುರರು ಜನಿಸುತ್ತಿದ್ದರು. ತಕ್ಷಣವೇ ದೇವತೆಗಳು ಬಂದು ಸೆರೆಗೆ ಮುತ್ತುತಿದ್ದರು.

ಅಂಧಕಾಸುರ, ತಾರಕಾಸುರ, ಮಹಾಷಾಸುರ, ಗಜಾಸುರ, ಸಿಂಧಳನು, ಸಿಂಹಳನು, ಮುಂಡಾಸುರನು, ವ್ಯಘ್ರಾಸುರನು ಮೊದಲಾದ ದೈತ್ಯರು ಅರ್ಭಟಿಸಿದರು. ಒಬ್ಬ ದೈತ್ಯ ಮರವನ್ನು ಮುರಿದರೆ, ಮತ್ತೊಬ್ಬ ದೈತ್ಯ ಉರಿಯನ್ನು ನುಂಗುವನು ಮತ್ತೊಂದೆಡೆ ಸಾವಿರದ ಬಂಟಗವನ್ನು ಎಂಬುತ್ತಾನೆ ದೈತ್ಯನು. ಬೆಟ್ಟಗಳನ್ನು ಕಿತ್ತದರೆ, ಮತ್ತೊಬ್ಬ ಇಡುವನು ಮಗದೊಬ್ಬ ನೆಲಗುದ್ದಿದರೆ ಹೊಳೆಯು ಮಗುಚುವುದು. ಆಗ ಚಂಡಿಕಾದೇವಿಯು ತನ್ನ ದೈತ್ಯ ರೂಪವನ್ನು ತಾಳಿ ಕರವಲ್ಲಿ ಖಡ್ಗವನ್ನು ಚರ್ತುಭುಜಗಳನ್ನು ಹೊಂದಿ ಗಂಡು ಉಡಿಗೆಯುಳ್ಳವನಾಗಿ ದಂಡೆ, ಮೂಗುತಿ ಕೋರೆವಾಡಿಗಳನ್ನು ಹೊಂದಿಕೊಂಡು ಹರನಿಗೆ ದೈತ್ಯರನ್ನು ಸಂಹರಿಸಲು ಆಜ್ಞೆ ಕೊಡೆಂದು ಕೇಳುತ್ತಾಳೆ. ಮತ್ತು ವೀರೇಶ, ವೀರಭದ್ರ, ಭೂತಗಣ, ಗಣಪತಿ, ಪರಶುರಾಮ ಒಬ್ಬೊರಾಗಿ ಭಯಂಕರ ರೂಪ ತಾಳಿ ಯುದ್ಧವನ್ನು ಮಾಡುವರು. ಚಾಮುಂಡಿ ದೈತ್ಯರನ್ನು ಕಡಿದಳು ಹೆಣವನ್ನು ತುಳಿತುಳಿದು ಸಂಹರಿಸುವಳು. ಜೊತೆಗೆ ವೀರೇಶನು ಕಾದಾಡುವನು ಆಗ ಬಂದು ಎಲ್ಲರ ನೋವುಗಳನ್ನು ಆರಿಸಿದ ಈಶ್ವರ ಇಬ್ಬರಿಗೂ ನೀವು ಬಳಲಿದ್ದೀರಿ ಎಂದು ಅಭಯವನ್ನು ನೀಡಿ ಕಳುಹಿಸುವನು. ಶಿವನು ಬರುವಾಗ ಬಿಸಿಯ ರಕ್ತದ ಹನಿಗಳು ತ್ರಿಶೂಲದಿಂದ ಒಸರಿ ಬಿದ್ದವು. ಆ ಹನಿಗಳು ಅಸದಳದ ತಗಣೆಗಳಾಗಿ ಹರನ ಪಾದಕ್ಕೆ ಎರಗುತ್ತವೆ. ಈಶ್ವರನು ನೊಸಲನ್ನು ಹಿಡಿದು ಹೆಸರು ಕೇಳುವನು ಆಗ ಅಂಧಕಾಸುರ ಎಂದು ಹೇಳಲು ನೀವು ಮರ್ತ್ಯದಲ್ಲಿ ಜನಿಸಿರೆಂದು ಹೇಳುವನು. ಈ ರೀತಿಯಾಗಿ ಹೇಳಿದ ನಂತರ ಮಾಸನೂರಿನ ಬೊಪ್ಪಲೇಶ್ವರ ದೇವಸ್ಥಾನ ಮುಂದೆ ಹೂದೋಟ ಹಾಸಿ ಹಬ್ಬಿದ ಬಿಸಿಯ ಮರ ನೋಡಿ ಬೊಪ್ಪಲೇಶ್ವರನಿಗೆ ಬೇಡಿ ಕೇಳಲು ಬೊಪ್ಪಲೇಶ್ವರನು ಆಶ್ರಯ ಕೊಡುತ್ತಾನೆ. ಬನ್ನಿಮರದ ಪೊಟರೆಯ ಒಳಗೆ ತಗಣೆ ಇರುತ್ತಿರಲು ಬತ್ತೀಸ ಆಯುಧಗಳನ್ನು ಹೊಂದಿರುವ ಮಾನವರು ಮರದ ನೆರಳಲ್ಲಿ ವಿಶ್ರಾಂತಿಗೆ ಬಂದರೆ ಹಿರಿಯ ಹಂದಿಗಳಾಗಿ ರಕ್ತ ಕುಡಿದು ಬಿಸಾಡುತ್ತಿದ್ದವು. ಹೀಗೆ ಹತ್ತೆಂಟು ವರ್ಷಗಳು ಮನುಷ್ಯರನ್ನು ತಗಣೆ ಕೊಲ್ಲುತ್ತಿರುವಾಗ ಜಗದ ಜನವು ದೇವರಿಗೆ ಮೊರೆ ಇಡುವರು. ಆಗ ವೀರಭಟ್ಟನನ್ನು ಶಿವನು ಕಳುಹಿಸುವನು. ಅದರಂತೆ ವೀರಭಟ್ಟನು ಬಂದು ತಗಣೆಯನ್ನು ಸುಡಲು ಅವು ಗುಂಡುಗಳಾಗಿ ಮಾರ್ಪಟ್ಟವು. ವಿಶ್ವಕರ್ಮನಲ್ಲಿ ಒಯ್ದು ಸುರಗಿಯನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ. ಆದರೆ ಅದು

ಚಾಚದೆ ಬೆಂಡಾಗದೆ ಇರುತಿರಲು ಗೌರಿಯ ವ್ರತಮಾಡುವ ಬಾಲೆಯರು ದಾಸವಾಳದ ಹೂವನ್ನು ಒಯ್ಯುತ್ತಿರುತ್ತಾರೆ ಆಗ ಅದು ಮಾಂಸವೆಂದು ನಾಲಗೆಯಂತೆ ಗುಂಡು ನಿವುಚುವುದು ಆಗ ಅದನ್ನು ವಿಶ್ವಕರ್ಮ ಎರಡು ಗುಂಡುಗಳನ್ನಾಗಿ ಮಾರ್ಪಾಡಿಸುತ್ತಾನೆ. ಮಾಸೂರಿನ ಮಡುವಿನಲ್ಲಿ ವೀರನು ಸುರಗಿಯನ್ನು ಮಡುಗುವನು.

**ಸಂಧಿ : ಆರು**

ಕೈಯಲ್ಲಿ ಲಾಕುಳ, ಶಿರದಲ್ಲಿ ಟೊಪ್ಪಿಗೆ, ಕೊರಳಲ್ಲಿ ರುದ್ರಾಕ್ಷಿ ಭಸ್ಮವನ್ನು ಹಚ್ಚಿಕೊಂಡು ಕಮಂಡಲವನ್ನು ಹಿಡಿದು ಚರಣದಲ್ಲಿ ಹಾವುಗೆಗಳನ್ನು ಧರಿಸಿ ಸಿದ್ಧನು ಬಂದು ಅಂಬಿಗನಿಗೆ ತೊರೆ ದಾಟಿಸುವಂತೆ ಕೇಳುತ್ತಾನೆ. ಸಿಟ್ಟನಿಂದ ಅಂಬಿಗನು ಕೊಡಲಿಲ್ಲ, ಕೊಳ್ಳಲಿಲ್ಲ ಜಂಗಮನೇ ಒಳಗೆ ಬರಬೇಡವೆಂದು ಬೈದು ಒಡೆಯರನ್ನು ಕರೆದುಕೊಂಡು ಹೋಗುವನು. ಆಗ ಸಿದ್ಧನು ತನ್ನ ಕಂಥೆಯನ್ನೆ ಹಾಸಿ ಲಾಕುಳವನ್ನು ಹುಟ್ಟು ಮಾಡಿ ಚಖಳವಿಕ್ಕಿ ಕುಳಿತು ಪಶ್ಚಿಮಕ್ಕೆ ಹೊರಟನು. ಜಲದ ಮಧ್ಯದಲ್ಲಿ ಸುರಗಿಗಳು ಕನ್ನಿಕೆಯರಾಗಿ ಹರಿವಾಣದಲ್ಲಿ ಥಳಥಳಿಸುವ ಆರತಿಯನ್ನು ಬೆಳಗಿ ಚರಣಗಳಿಗೆ ನಮಿಸುವರು. ಮತ್ತು ತನ್ನನ್ನು ಕಾಪಾಡುವಂತೆ ಕೇಳುತ್ತವೆ. ಆಗ ಚಾಮುಂಡಿಯನ್ನು ನೆನೆಯಲು ಹೇಳುತ್ತಾನೆ. ನೆನೆದ ತಕ್ಷಣ ಚಾಮುಂಡಿ ಬಂದು ಬ್ರಹ್ಮನಾದರು ಕೊಡೆನು ಎಂದು ತನ್ನ ಜಟ್ಟಿಗರ ಬೇತಾಳಗಳನ್ನು ಕಾವಲಿಟ್ಟಳು. ಯಾರು ಮುಟ್ಟಬಾರದು ಸುರಗಿಯನ್ನು ನರ ಮನುಷ್ಯನು, ದೈವಗಳು ಜನದ ನಟ್ಟ ನಡುವೆ ಇರಲೆಂದು ಸಿದ್ಧನು ಅಭಯವಿಟ್ಟನು ಇದನ್ನು ಕಂಡು ಅಂಬಿಗರ ಭೂಪಯ್ಯನು ಎಲ್ಲರೂ ಸಿದ್ಧನಿಗೆ ನಮಸ್ಕರಿಸಿ ಬಿಜ್ಜಳನಿಗೆ ಬಂದು ಸುರಿಗಿಯ ಮಹತ್ವವನ್ನು ಅಂಬಿಗರ ಭೂತಯ್ಯನು ಹೇಳುತ್ತಾನೆ. ಆಗ ಬಿಜ್ಜಳನು ಡಂಗುರ ಸಾರುತ್ತಾನೆ ಸುರಿಗಿಯನ್ನು ತಂದುಕೊಟ್ಟವರಿಗೆ ಅರ್ಧ ರಾಜ್ಯವನ್ನು ಕೊಡುವುದಾಗಿ ತಿಳಿಸುತ್ತಾನೆ.

ಎಲ್ಲಾ ಜೋಗಿಗಳು ಕೈಗೊಳ್ಳಲಾರದೆ ಗೋರಕನಾಥನನ್ನು ಬಿಜ್ಜಳನು ಕರೆಸುವನು ಘನವ ಸಾವಿರ ಬಾಲೆಯರನ್ನು ಬಲಿಕೊಟ್ಟರೆ ಸುರಗಿಯನ್ನು ಕೊಡುವುದಾಗಿ ಗೋರಖನಾಥನು ಹೇಳುತ್ತಾನೆ. ಆಗ ಬಿಜ್ಜಳನು ತೆಲಗು, ಕೊಂಕಣಿ, ಮಲೆಯಾಳ, ತೆಂಕಣದೇಶಗಳಿಂದ ಬಾಲೆಯರನ್ನು ಎಳೆದೆಳೆದು ತಂದರು. ತೆಂಕಣನಾಡಿನಲ್ಲಿ ಲಂಕೆಗೆ ಗೂಳೆ ಹೋಗುವವರನ್ನು ಹಿಡಿದೆಳೆದು ಗೋವ, ದಿಲ್ಲಿ ಹೀಗೆ ನಾನಾ ದೇಶದಿಂದ ಹೆಣ್ಣುಮಕ್ಕಳನ್ನು ಕರೆತರಿಸಲಾಯಿತು. ಆದರೆ ಸಾವಿರಕೆ ಒಬ್ಬ ಹೆಂಗಸು ಕಡಿಮೆಯಾದಳು. ಚಾಕೂರಿನ ಜಕ್ಕವ್ವೆಯ ಮಗಳನ್ನು ಎಳೆದುಕೊಂಡು ಹೋಗುವರು. ಆಗ ಶೋಕದಲ್ಲಿ ಜಕ್ಕವ್ವೆಯು ರೇವಣಸಿದ್ಧನಿಗೆ ಮೊರೆ ಹೋಗುತ್ತಾಳೆ.

ರುದ್ರಾಕ್ಷಿ, ಭಸ್ಮ ಲಾಕುಳ ಸಮೇತ ಸಿದ್ಧನು ಭಕ್ತರ ಮನೆಗೆ ಭಿಕ್ಷೆ ಬೇಡುತ್ತ ಜಕ್ಕವ್ವೆಯ ಮನೆಗೆ ಬರುತ್ತಾನೆ. ಆಕೆಯ ಶೋಕಕ್ಕೆ ಕಾರಣ ತಿಳಿದುಕೊಳ್ಳುತ್ತಾನೆ. ಜಕ್ಕವ್ವೆಗೆ ಮಗಳನ್ನು ತಂದು

ಕೊಡುವ ಅಭಯವನ್ನು ನೀಡುತ್ತಾನೆ. ಜಕ್ಕವ್ವೆಯ ಪಾದರ್ಚನೆಯ ಮಾಡಿ, ಮಜ್ಜನಕ್ಕೆರೆದು, ಲಿಂಗಾರ್ಚನೆ ಮಾಡುವಳು. ನಂತರ ಸಿದ್ಧನು ಕೆಟ್ಟ ಜೋಗಿಯರು ಹಿಡಿದಿರುವ ಬಾಲೆಯರ ಪಟ್ಟಣಕ್ಕೆ ಬರುತ್ತಾನೆ.

**ಸಂಧಿ : ಏಳು**

ಪೊಡವಿ ಪತಿಯಾದ ಬಿಜ್ಜಳನು ಹಿಡಿದಿರುವ ಬಾಲೆಯರನ್ನು ಮಜ್ಜನವ ಮಾಡಿಸಿ ಶಲ್ಯ ವಸ್ತ್ರಾದಿಗಳು ಗಂಧ, ಪುಷ್ಪಗಳನ್ನು ಧರಿಸಿ ಮಡುವಿನ ಸಮೀಪ ಕರೆತಂದರು. ಹಿಡಿದ ಚಂದ್ರಾಯುಧಕ್ಕೆ ರಾಯನು ಪೂಜೆ ಮಾಡಿದನು. ಇದನ್ನು ನೋಡಲು ರಾಣಿವಾಸವು ಸೈನ್ಯ ಪರಿವಾರವು ತಮ್ಮಟ ನಿಸ್ಸಾಳ ಗಡಿಬಿಡಿ ಗಂಭೀರ ಭೇರಿಗಳಿಂದ ತೊರೆಯ ಸಮೀಪ ಆವರಿಸಿದವು. ಅರಸು ಬಿಜ್ಜಳನಿಗೆ ಗದ್ದುಗೆ ಹಾಕಿದರು. ಪ್ರಧಾನಿ ಬಸವ ಭಂಡಾರಿಯು ಅಲ್ಲಿರುತ್ತಾರೆ. ಗೋರಖನು ಹನ್ನೆರಡುಸಾವಿರ ವೀರ ಜೋಶಿಯರು ಎಲ್ಲಾ ನಾರಿಯರನ್ನು ಸಾಲಾಗಿ ಹಿಡಿದು ತಂದು ನಿಲ್ಲಿಸಿದರು. ನೀರಿನ ತಡಿಯಲ್ಲಿ ಖಡ್ಗಗಳು ಕಂಡು ಕನ್ಯೆಯರು ಕಂಗಳ ನೀರು ಹರಿದು ಬೋರಿಟ್ಟರು. ಮತ್ತು ತಮ್ಮೊಳಗೆ ತಮ್ಮನ್ನು ಯಾರು ಬಿಡುಸುತ್ತಾರೆ ವೀರ ಬಿಜ್ಜಳನೇ ನಿಂತು ಕೊಲ್ಲಿಸುವಾಗ ದೂರದಲ್ಲಿ ತಮ್ಮ ತಂದೆ, ತಾಯಿಗಳು ತಮ್ಮ ಕುಮಾರಿಯನ್ನು ಕಂಡು ಗೋಳಿಡುತ್ತಾರೆ.

ಸಾಲಾಗಿ ನಿಂತ ಬಾಲೆಯರನ್ನು ಬಿಜ್ಜಳನು ಕಾಣುತ್ತಾನೆ. ಮಧ್ಯದಲ್ಲಿ ಗೊಂಬೆಯಂತೆ ಸುಂದರವಾಗಿರುವ ಕನ್ಯೆಯನ್ನು ಕಂಡ ಆತನ ಮನಸ್ಸು ಬಿಡದೆ ಒಂದೇ ಸವನೆ ಸಿದ್ಧನ ಹೆಸರಾದ ಬಾಲೆಯನ್ನು ನೋಡುತ್ತಾನೆ. ಆಗ ಆಕೆಯನ್ನು ಕಂಡ ನೋಟದ ಇಂಗಿತವನ್ನು ಕಂಡು ಗೋರಖನು ಈಕೆಯು ಲೋಕದಲ್ಲಿ ರೂಪವಂತಳು. ಆದರೆ ಈಕೆಯನ್ನು ಬಲಿಕೊಟ್ಟರೆ ಮಾತ್ರ ಸುರಗಿ ಸಿಗಲು ಸಾಧ್ಯವೆಂದು ಹೇಳುತ್ತಾನೆ. ಆಗ ಬಿಜ್ಜಳನು ಮುಖ ತಿರುಗಿಸಿಕೊಂಡು ಬಲಿಕೊಡುವಂತೆ ಹೇಳುತ್ತಾನೆ. ಕತ್ತಿಯ ಮಿಂಚುವ ಮೊನೆಯನ್ನು ಜನವು ಗುಬ್ಬಿಯಂತೆ ನೋಡುತ್ತಿರುವಾಗ ರೇವಣಸಿದ್ಧನು ಮಾಯೆಯಿಂದ ಅಲ್ಲಿಗೆ ಬರುತ್ತಾನೆ. ಬಿಜ್ಜಳನಿಗೆ ವಿಭೂತಿ ಇಟ್ಟು ಹರಸುತ್ತಾನೆ. ಈ ವಿಚಿತ್ರ ಸಿದ್ಧನು ಯಾವ ಕಡೆಯಿಂದ ಬಂದನೆಂದು ಎಲ್ಲಾ ಜೋಗಿಗಳು ಮತ್ತು ಗೋರಖನು ತಮ್ಮ ಕುತಂತ್ರವು ತಿಳಿಯುತ್ತದೆ ಎಂದು ತಮ್ಮ ಕಂಥೆಯ ಸಂಧಿಯಲ್ಲಿ ಬಚ್ಚಿಟ್ಟುಕೊಳ್ಳುವರು. ಬಿಜ್ಜಳನು ಗೋರಖನನ್ನು ಕಟ್ಟಿ ನಿಲ್ಲಿಸುವರು. ಇತ್ತ ಸಿದ್ಧನು ಕಂಥೆಯ ಮೇಲೆ ನಡೆದನು. ಲಾಕುಳ ಹಿಡಿದು ಹುಟ್ಟು ಹಾಕುತ್ತ ನಡು ನೀರಿಗೆ ನಡೆದು ಬಂದನು. ಬಿಜ್ಜಳನು ಅಂಬಿಗನ ಜೊತೆ ಹರಿಗೋಲಲ್ಲಿ ಎರುತ್ತಿರುವಾಗ ಸಿದ್ಧನು ಸಾವಿರ ಬಾಲೆಯರಲ್ಲಿ ತನ್ನ ಹೆಸರಿನ ಮಗಳನ್ನು ಕರೆಯುತ್ತಾನೆ. ಆಕೆಯು ನೆಲದ ಮೇಲೆ ನಡೆಯುವಂತೆ ನೀರನ್ನು ಮೆಟ್ಟುತ್ತ ಬರುತ್ತಾಳೆ. ನಡೆದು ಬಂದು ಸಮೀಪದ ಬಾಲೆಯನ್ನು ರೇವಣಸಿದ್ಧನು ತನ್ನ ತೊಡೆಯ ಮೇಲೆ ಕುಳ್ಳಿರಿಸಿ ಭಸ್ಮವ ಕೊಟ್ಟು ತಲೆಯ ಮೇಲೆ ಕೈ ಇಡುತ್ತಾನೆ ಎಲ್ಲರೂ ಜಯಕಾರ

ಮಾಡುತ್ತಿರುವಾಗ ನೀರಿನ ನಡುವೆ ಇರುವ ಖಡ್ಗವು ಎರಡು ನಾಲಗೆಯುಳ್ಳ ಹಾವಾಗಿ ಹೆಡೆ ಎತ್ತಿ ಭೋರಿಡುವದನ್ನು ಬಿಜ್ಜಳನು ನೋಡುತ್ತಾನೆ. ಹಾಗೂ ಅದು ತನಗೆ ಎರಗಿ ಮೈಮೇಲೆ ಬಂದರೆ ಯಾರು ತನ್ನನ್ನು ರಕ್ಷಿಸುವರು ಎಂದು ಭೀತಿಯಲ್ಲಿ ನಡುಗುವನು. ಮತ್ತು ಸಿದ್ಧನಿಗೆ ಸಿದ್ಧನೇ ಸುರಗಿಯ ಚಿಂತೆ ಮಾಡಲಾರೆನು. ನಿಮ್ಮಾಣೆ ಅದನ್ನು ನೀವು ಹಿಡಿದುಕೊಳ್ಳಿ ಎಂದು ಗೋಗೆರೆಯುತ್ತಾನೆ ಅಲ್ಲಿದ್ದವರು ಚಪ್ಪಾಳೆ ತಟ್ಟಿ ನಗುವರು. ಸಿದ್ಧನು ಸುರಗಿಯನ್ನು ಹಿಡಿದುಕೊಂಡು ಬಂದಾಗ ಅದು ಉರಿಯ ಉಗುಳುತ್ತ ಮಿಂಚುತ್ತ ಸಿಡಿಲಂತೆ ಅರ್ಭಟಿಸುತಿತ್ತು ಬಿಜ್ಜಳನು ಬೇಡ ಬೇಡ ಸಿದ್ಧನೆ ನನಗೆ ಸುರಗಿಯಗೊಡವೆ ನಾನೊಲ್ಲೆ ಎನ್ನುತ್ತಾನೆ. ಆಗ ಸಿದ್ಧನು ತನ್ನ ಹೆಸರಿನ ಮಗಳನ್ನು ಕರೆದುಕೊಂಡು ಸುರಗಿಯನ್ನು ಮಡುವಿನಲ್ಲಿರಿಸಿ ದಡಕ್ಕೆ ಬರುವನು. ರಾಯನು ಮಡುವಿನ ತಡಿಗೆ ಬಂದ ನಂತರ ರೇವಣಸಿದ್ಧನ ಪಾದಗಳನ್ನು ಹಿಡಿದು ಆ ಬಾಲೆಯನ್ನು ತನಗೆ ಧಾರೆ ಎರೆಯಬೇಕೆಂದು, ಸೇಸೇ ತುಂಬಬೇಕೆಂದು ಬೇಡಿ ಕೊಳ್ಳುತ್ತಾನೆ. ಆಗ ಸಿದ್ಧನು ಜಕ್ಕಲೆಯನ್ನು ಕರೆಯಿಸುತ್ತಾನೆ. ಜೋಗಿಗಳನ್ನು ಕಡಿದು ಹಾಕಬೇಕೆಂದು ಕೋಪದಿಂದ ನುಡಿಯುತ್ತಾನೆ ಆಗ ಅವರು ಸಿದ್ಧನನ್ನು ಮೊರೆ ಹೋಗುವರು. ಗುರು ಸಿದ್ಧನು ಜೋಗಿಗಳನ್ನು ಬಿಡಿಸುವನು. ಜಕ್ಕವ್ವೆಯು ಬಂದು ರೇವಣಸಿದ್ಧನ ಒಲವಿನಂತೆ ಬಿಜ್ಜಳನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಲು ಒಪ್ಪಿ ಸಂಭ್ರಮಗೊಳ್ಳುವಳು. ಪಟ್ಟಣದ ಜನವೆಲ್ಲ ಉತ್ಸಾಹದಲ್ಲಿ ಪಾಲ್ಗೊಳ್ಳುತ್ತಾರೆ. ಬಹು ವಾದ್ಯಗಳೊಡನೆ, ಕಳಸ ಕಂಚಕ್ಕಿಗಳೊಡನೆ ರಾಯ ರಾಣಿವಾಸಗಳು ಬೆಳಗಿದವು. ಗುರುವಿನ ಕೃಪೆಯಿಂದ ಸಾವಿರ ಬಾಲೆಯರು ತಮ್ಮ ತಮ್ಮ ತಂದೆ ತಾಯಿಗಳನ್ನು ಸೇರಿದರು.

**ಈ. ಚೆನ್ನಬಸವಶಾಸ್ತ್ರಿಗಳ ಹಾಲುಮತ ಪುರಾಣ**

ಪಂಡಿತ ಶ್ರೀ ಚನ್ನಬಸವಶಾಸ್ತ್ರಿ ವಿರಚಿತ ಹಾಲುಮತ ಪುರಾಣವು ಹದಿನೈದು ಸಂಧಿಗಳನ್ನೊಳಗೊಂಡಿದೆ. ದ್ವಿಪದಿ ಛಂದಸ್ಸಿನಲ್ಲಿರುವ ಈ ಕೃತಿಯಲ್ಲಿ ಪ್ರತಿಸಂಧಿಯ ಆರಂಭದಲ್ಲಿ ಆ ಸಂಧಿಯ ಕಥಾವಸ್ತುವನ್ನು ಸೂಚನೆ' ಎಂಬ ಶಿರ್ಷಿಕೆಯಲ್ಲಿ ಕೊಡಲಾಗಿದೆ. ಅಲ್ಲಲ್ಲಿ ಕಾವ್ಯದೊಳಗೆ ಶ್ಲೋಕ ಅಲ್ಲದೇ ಕವಿ ತನ್ನ ವಿಚಾರವನ್ನು ಮಂಡಿಸಿದಾಗ ಆ ವಿಚಾರಗಳ ಪ್ರಮಾಣ ಗ್ರಂಥಗಳ ಉಲ್ಲೇಖನವನ್ನು ನೀಡುತ್ತಾನೆ. ಪ್ರಾಚೀನ ಇತಿಹಾಸಗಳನ್ನು ಬಹುತರ ಸಂಗ್ರಹಿಸಿ ಸಾಧ್ಯವಾದಮಟ್ಟಿಗೆ ಪಂಡಿತರ ಸಹಾಯದಿಂದ ಸಂಶೋಧಿಸಿ, ವಿರಚಿಸಿ, ವಿದ್ವಾಂಸರಿಂದ ಪರಿಶೋಧಿಸಿ ಇದನ್ನು ಅಚ್ಚುಹಾಕಿಸಲಾಗಿದೆ ಎಂದು ಹೇಳಿಕೊಂಡಿದ್ದಾನೆ. ಶಾಲಿವಾಹನ ಶಕ ೧೮೧೮ರಲ್ಲಿ ಬರೆದ ಈ ಕೃತಿ ಹಾಡುಗಬ್ಬ ಸಾಹಿತ್ಯ ಪ್ರಕಾರಕ್ಕೆ ಸೇರಿದ್ದಾಗಿದೆ. ಹದಿನೈದು ಸಂಧಿಗಳಲ್ಲಿ ೧೭೨೫ ಪದ್ಯಗಳಿಂದ ಕೂಡಿರುವ ಪ್ರಸ್ತುತ ಕಾವ್ಯ ರೇವಣಸಿದ್ಧರ ಲೋಕ ಪರ್ಯಟನೆ, ಧರ್ಮಪ್ರಸಾರ, ಲೋಕಕಲ್ಯಾಣಗಳ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಸಂಧಿ : ಒಂದು

ಮೇರು ಪರ್ವತದ ಕೈಲಾಸದ ವರ್ಣನೆಯನ್ನು ಶಿವ ಸಭೆಯನ್ನು ಕೈಲಾಸ ಮಧ್ಯದಲ್ಲಿ ಅನಂತ ವೈಭವದಿಂದ ಮೆರೆಯುವ ಮಂಟಪದಲ್ಲಿ ಪಚ್ಚೆ ರತ್ನಗಳಿಂದ, ಸ್ವಚ್ಛ ಮುತ್ತುಗಳಿಂದ ಅಚ್ಚ ಬಿಳಿದು ಕೆಂಪು ನೀಲ ನವರತ್ನ ಕೆತ್ತನೆಯ ಕೆಲಸದಿಂದ ಶೋಭಿಸಿ ನೋಡಲು ಆಶ್ಚರ್ಯಕರವಾಗಿರುವದು. ಪರಮಾತ್ಮನು ತನ್ನ ತೊಡೆಯಲ್ಲಿ ಗೌರಿ, ಜಡೆಯಲ್ಲಿ ಗಂಗೆಯನ್ನು ಹೊಂದಿ ಕುಳಿತಿರುವನು. ಎಡಬಲದಲ್ಲಿ ಷಣ್ಮುಖ ವಿನಾಯಕರು ನಿಂತಿರುವರು. ನಾಲ್ಕು ಮುಖಗಳಿಂದ ನಾಲ್ಕು ವೇದಗಳನ್ನು ಏಕಕಾಲದಲ್ಲಿ ಪಠಿಸುತ್ತ ಅನೇಕ ಬ್ರಹ್ಮರು ಬ್ರಹ್ಮನೊಳಗಾಗಿ ಪಂಚಾಕ್ಷರಿ ಮಂತ್ರವನ್ನು ಪಠಿಸುತಿಹರು. ಜೊತೆಗೆ ಲಕ್ಷ್ಮಿಯನ್ನು ಒಳಗೊಂಡ ಹರಿಯು ಇರುತ್ತಿರಲು ಭೃಂಗೇಶ ಸಕಲ ನಾಟ್ಯಕಲಾ ಕೋವಿದನಾಗಿರುವನು. ಭೃಂಗೇಶ್ವರನಿಗೆ ತ್ರಿಚರಣ ಪ್ರಾಪ್ತಿ ಪ್ರಸಂಗವು ನಡೆಯುತ್ತದೆ ಮತ್ತು ಶಿವಮತೋದ್ಧಾರಕ್ಕಾಗಿ ಭೂಲೋಕದಲ್ಲಿರುವ ಶಿವಲಿಂಗದಲ್ಲಿ ಅವತರಿಸುವಂತೆ ಶ್ರೀ ರೇಣುಕ ಗಣಾಧೀಶ್ವರನಿಗೆ ಶಿವನು ಅಪ್ಪಣೆ ಕೊಡುವನು.

ಸಂಧಿ : ಎರಡು

ಶಿವನ ಅಪ್ಪಣೆಯಂತೆ ಗುರುವರನಾದ ರೇವಣಸಿದ್ಧನು ಭುವನದಲ್ಲಿ ಕೊಲ್ಲಿಪಾಕಿಯಲ್ಲಿ ಶಿವಲಿಂಗದಲ್ಲಿ ಉದ್ಭವಿಸುವನು. ದೇಶ ಸಂಚರಿಸುತ್ತ ಬರುವಾಗ ಗುರುಭಕ್ತಿಶೀಲನಾಗಿದ್ದ ಸರೂರ ಶಾಂತಮುತ್ತಯ್ಯನಲ್ಲಿಗೆ ಬರುತ್ತಾನೆ. ಆತನ ಭಕ್ತಿಪರನಾದ ಆಪೇಕ್ಷೆಯಂತೆ ಲಿಂಗವನ್ನು ಪ್ರಧಾನ ಮಾಡಿ ಉಪದೇಶಿಸುತ್ತಾನೆ. ಹಾಲು ಮತದವರಿಗೆ ಗುರುವಾಗಿರು ಎಂದು ಶಾಸನ ಮಾಡಿಸುವನು. ಆಚಾರ ಮತ್ತು ಆಚಾರ್ಯರ ನಿಲುವು ಲಿಂಗಪೂಜಾ ಮಹತ್ವ, ಪೂಜಾವಿಧಾನ, ಮಂತ್ರದ ಮಹತ್ವ ಶಿವಜೀವದ ಶಕ್ತಿ, ಸಮನ್ವಯ ವಿಚಾರ ಅಂದರೆ ಶಿವಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಶಿವಜೀವರ ಸಾಮರಸ್ಯ ಇಪ್ಪತ್ತೊಂದು ಸಾವಿರದ ಆರುನೂರು ಜಪಗಳು ಮಂತ್ರಗಳ ಸ್ವರೂಪ, ಜಪಾಧಿದೇವತೆಗಳು ಶಿವಯೋಗದ ಇರುವು ಅಷ್ಟಾವರಣಗಳ ಮಹತ್ವ ಪಂಚಾಕ್ಷರಿ ಮಂತ್ರ, ಜಪದ ಸ್ವರೂಪ ಅಷ್ಟ ಗುರುಗಳ ವಿಚಾರಾದಿ ಮಹಾವಿಚಾರಗಳನ್ನು ಭೋದಿಸುತ್ತಾನೆ. ಉಪದೇಶವನ್ನು ಕೇಳಿದ ಶಾಂತಮುತ್ತಯ್ಯನು ಸಂತುಷ್ಟನಾಗಿ ತನುಮನ ತುಂಬಿದ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಗುರುವಿನ ಆದೇಶದಂತೆ ಹಾಲುಮತದವರಿಗೆ ಗುರುವಾಗಿ ಭಕ್ತರಿಗೆ ನೀತಿ ಕ್ರಿಯಾಚಾರಗಳನ್ನು ನೀಡುತ್ತಿರುತ್ತಾನೆ.

ರೇವಣಸಿದ್ಧನು ಆಕಾಶ ಮಾರ್ಗದಿಂದ ಹೊರಟು ಜಗತ್ತಿಗೆ ಕಲ್ಯಾಣ ಮಾಡುತ್ತ, ಭಕ್ತರ ಅಭೀಷ್ಟಗಳನ್ನು ಈಡೇರಿಸುತ್ತಾ ಶ್ರೀಶೈಲ ಪರ್ವತದ ಮಲ್ಲಿಕಾರ್ಜುನ ಲಿಂಗದ ಸಾನಿಧ್ಯದಲ್ಲಿ ಪರಮೇಶ್ವರನ ದರ್ಶನ ಮಾಡಿಕೊಂಡು ಪುನ: ಸರೂರ ಶಾಂತ ಮುತ್ತಯ್ಯನಲ್ಲಿಗೆ ಬರುತ್ತಾನೆ. ಆತನೊಡನೆ ಕೊಲ್ಲಾಪುರಕ್ಕೆ ಹೋಗುತ್ತಾನೆ. ಶಿಷ್ಯನಾದ ಶಾಂತಮುತ್ತಯ್ಯನಿಗೆ ಕೊಟ್ಟ ಆಜ್ಞೆಯಂತೆ

ಶಾಂತಮುತ್ತಯ್ಯನು ಊರೊಳಗೆ ಹೋಗಿ ಎದುರಾಗಿ ಕುಟಿಲಗಳನ್ನೆಸಗಿದ ಕುಟಿಲ ಸಿದ್ಧರನ್ನು ಶಪಿಸಿ ನರಕುರಿಗಳನ್ನಾಗಿ ಮಾಡಿದಾಗ ಅವು ಈತನನ್ನು ಹಿಂಬಾಲಿಸಿ ಬರುವಾಗ ಮಂಡಾಸರನೆಂಬ ರಾಕ್ಷಸನು ಎದುರಾಗುತ್ತಾನೆ. ಆತನನ್ನು ಗುರುಮಂತ್ರ ಖಡ್ಗದಿಂದ ಮೂರು ತುಂಡುಗಳಾಗುವಂತೆ ಸಂಹರಿಸಿ ಗುರುವಿನ ಬಳಿಗೆ ಬರುತ್ತಾನೆ. ಗುರು ಮೆಚ್ಚುವನು ಮತ್ತು ಗುರುವಿನ ಅಪ್ಪಣೆಯಂತೆ ಮೂರು ತುಂಡುಗಳನ್ನು ಕೂಡಿ ಮುರುಡಿನ ಕಂಥೆಯನ್ನಾಗಿ ಮಾಡಿ ಧರಿಸಿ ಗುರುವಿನ ಪಾದೋದಕದ ಸಂಪ್ರೋಕ್ಷಣೆಯಿಂದ ನರ ಕುರಿಗಳನ್ನು ಮೊದಲಿನಂತೆ ಮಾಡಿ ಅವರಿಗೆ ಕ್ಷಮೆ ನೀಡುತ್ತಾನೆ. ಆಗ ಗುರುವರನು ಕರುಣೆಯಿಂದ ಅವರಿಗೆ ನೀತಿಗಳನ್ನು ಅರುಹಿ ಕುಟಿಲತೆಯನ್ನು ಮಾಡಿದ ದೋಷಕ್ಕಾಗಿ ನೀವೂ ಮತ್ತು ನಿಮ್ಮ ವಂಶದವರು ಲೋಕದಲ್ಲಿ ಹಟಮಾರಿಗಳೆನಿಸಿಕೊಂಡು ಕುಟಿಲದ ಜ್ಞಾಪಕವಿದೆಂಬಂತೆ ಕಾಡುಸಿದ್ಧರು ಎನ್ನುವ ಹೆಸರಿನಿಂದ ಗಂಟೆ ಅಥವಾ ಜಂಗನ್ನು ಹಿಡಿದು ನನ್ನ ಹೆಸರು ಹೇಳುತ್ತ ಸಟೆಧಿಟಗಳ ಲೆಕ್ಕವಿಲ್ಲವೆಂಬಂತೆ ಚಟುವಟಿಕೆಗಳನ್ನು ನಡೆಸುತ್ತಾ ಭಿಕ್ಷಾವೃತ್ತಿಯಿಂದ ಮನಸ್ಸಿಗೆ ಶಾಂತಿ, ನೆಮ್ಮದಿಯಿಲ್ಲದೆ ಜೀವನವನ್ನು ನಡೆಸಿರೆಂದು ಆಜ್ಞೆಯಂತೆ ಅವರು ಜೀವನ ನಡೆಸಲು ತೊಡಗಿದರು. ಆತನ ಅನುಗ್ರಹದ ಸ್ಮರಣೆಗಾಗಿ ಆತನೇ ಮೂಲ ಗುರುವೆಂದು ಆತನನ್ನು ಪೂಜಿಸುತ್ತಾ ಧ್ಯಾನಿಸುತ್ತಾ ಬಂದರು. ಮುಂದೆ ಗುರುಶಿಷ್ಯರು ಪುನಃ ಸರೂರಿಗೆ ಬಂದು ಇರಲು ಗುರುವರನು ಮತ್ತೆ ಶಾಂತಮುತ್ತಯ್ಯನಿಗೆ ನಿಯಮಾಚಾರಗಳನ್ನು ಅರುಹಿ ಆತನಿಂದ ಬೀಳ್ಕೊಂಡು ಆಕಾಶ ಮಾರ್ಗದಿಂದ ತೆರಳುವನು.

**ಸಂಧಿ : ಮೂರು**

ಒಂದು ದಿವಸ ಶಿವನ ವೈಭವದ ಒಡ್ಡೋಲಗಕ್ಕೆ ಹರಿ, ಯಜ, ಇಂದ್ರ, ಕುಬೇರ, ನಂದಿ, ನಾರದ, ಕಿನ್ನರ, ಕಿಂಪುರುಷ, ಚಂದ್ರಾದಿತ್ಯರೂ ಬರುವಂತೆ ಶಂಭ ಶಂಕರ ಮಹಾದೇವ ಎಂದು ಹೊಗಳುತ್ತ ಇರುವಾಗ ಸುರಮುನಿಗಳು ಅಲ್ಲಿ ಬರುತ್ತಾರೆ. ಅವರಲ್ಲಿ ಕುರೂಪಿಯಾದ ಮುನಿಯನ್ನು ಕಂಡು ಅಲ್ಲಿದ್ದ ಗಂಧರ್ವರಿರ್ವರು ಹಾಸ್ಯಮಾಡಿ ನಗುತ್ತಾರೆ. ಆಗ ಕೋಪಗೊಂಡ ಮುನಿವರನು ಅವರಿಗೆ ನಿಂದೆಯಿಂದ ಬರುವ ದೋಷಗಳೇನೆಂಬುವುದನ್ನು ತಿಳಿಸುತ್ತಾ ನೀವೀಗ ಭೂಲೋಕದಲ್ಲಿ ಹಾಲುಮತದವರಲ್ಲಿ ಹುಟ್ಟಿ ಸತಿಪತಿಗಳಾಬೇಕೆಂದು ಶಾಪವನ್ನು ಕೊಡುವನು ಆಗ ಹೆದರಿ ಗಂಧರ್ವರು ಮುನಿಯನ್ನು ಹೊಗಳಿ ತಮ್ಮ ಅಪರಾಧಕ್ಕೆ ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತಾರೆ. ಮತ್ತು ಹಾಲುಮತದವರ ಸಮಾಚಾರವನ್ನು ತಿಳಿಸಬೇಕೆಂದು ಬೇಡಿಕೊಳ್ಳುವರು. ಆಗ ಕರುಣೆಯಿಂದ ಮುನಿವರನು ಹಾಲೋತ್ಪತ್ತಿಯನ್ನು ಹೇಳಿ, ಅವರಿಷ್ಟದಂತೆ ಅವರ ಶಾಪಕ್ಕೆ ಕಾರಣವನ್ನು ಅರುಹಲು ಅವರು ಆ ರೀತಿ ಭೂಲೋಕದಲ್ಲಿ ಹಾಲುಮತದವರಲ್ಲಿ "ಆದಿಗೊಂಡ ಚುಂಚಲೆಯರೆಂಬ" ಹೆಸರಿನಿಂದ ಸತಿಪತಿಗಳಾಗಿ ಬಾಳುವರು. ಐದು ಜನ ಮಕ್ಕಳನ್ನು ಪಡೆದದ್ದು ಸದ್ಗತಿದಾಯಕನಾದ ಮಗನು ಹುಟ್ಟಲಿಲ್ಲವೆಂದು ಚಿಂತಿಸುತ್ತಿದ್ದರು. ಶ್ರೀ ರೇವಣಸಿದ್ಧ ಗುರುವರನು ದಯಮಾಡಿಸಿ ಅನುಗ್ರಹಿಸುವನು. ಆತನ ಆರ್ಶೀವಾದದಿಂದ ಶ್ರೀ ಶಿವಪದ್ಮನ ಜನನವಾಗುತ್ತದೆ.

## ಸಂಧಿ : ನಾಲ್ಕು

ಶ್ರೀ ಶಿವಪದ್ಮನು ಹುಟ್ಟಲು ಸಂಭ್ರಮದಲ್ಲಿ ಮಾತಾ ಪಿತರುಗಳ ಆನಂದದಲ್ಲಿ ನಾಮಕರಣದ ವೈಭವದಲ್ಲಿ ಲಾಲಿ ಹಾಡುವರು. ಈ ವೈಭವದಲ್ಲಿ ಅತ್ತೆ, ಅತ್ತಿಗೆ, ನಾದಿನಿ, ಅಕ್ಕ, ತಂಗಿಯರು, ಮುದ್ದಿನ ಗೆಳತಿಯರು ಮುದದಿಂದ ಪಾಲ್ಗೊಳ್ಳುವರು. ಚುಂಚವೆಯ ಬಾಗಿನ ಪೂಜೆಯ ಎಲ್ಲ ಉಪಕರಣಗಳನ್ನು ಮುಂದಿಟ್ಟುಕೊಂಡು ಮಗುವನ್ನು ತೊಟ್ಟಿಲಲ್ಲಿ ಮಲಗಿಸುವರು. ಕೂಡಿದ ಮುತ್ತೈದೆಯರು ಮಗುವಿಗೆ ಲಾಲಿ ಹಾಡುತ್ತ ಆನಂದದಿಂದ ಶಿವಪದ್ಮನೆಂಬ ಹೆಸರಿಟ್ಟು ಕೂಗುವರು. ಈ ಆನಂದವು ಮಾತಾ-ಪಿತರಿಗೆ ಮುದ ಕೊಡುವದು. ನಂತರ ಲಾಲನೆ ಪಾಲನೆಯಲ್ಲಿ ತೊಡಗುವರು.

## ಸಂಧಿ : ಐದು

ಶಿವಪದ್ಮನು ತನ್ನ ಬಾಲಲೀಲೆಗಳು ಐದು ವರ್ಷದವರೆಗೆ ಕಳೆಯುವಾಗಲೆ ಶಿವಚಿಂತನೆಯಲ್ಲಿಯೇ ಬೆಳೆಯುತ್ತ ಯೌವ್ವನ ಬರುತ್ತಿರಲು ಮದುವೆಗಾಗಿ ಮಾತಾ ಪಿತರು ಜಿಂಕಾದೇವಿಯೊಡನೆ ವಿವಾಹವನ್ನು ಮಾಡುತ್ತಾರೆ. ವಿವಾಹದ ಸಂಭ್ರಮವು ಸಾರಣಿ ಕಾರಣಿ ರಂಗವಲ್ಲಿಯ ತೋರಣ ಸಂಭಾ ಸ್ತಂಭಗಳು, ಬಣ್ಣದ ವಸ್ತ್ರಗಳು, ಮಂಟಪದಲ್ಲಿ ಹೆಚ್ಚಾಗಿರಲು ಕರಡೆ, ಕಹಳೆ, ಡೊಳ್ಳು, ಜಾಗಟೆ, ಚೆನ್ನಾಳೆ, ಬುರುಗು, ಭಜಂತ್ರಿ, ಕೈತಾಳ, ಭೇರಿಸಮ್ಮೇಳ, ಮೃದಂಗಗಳ ವಾದ್ಯಗಳ ಸಮೇತ ವೈಭವಿಸಲು ಮಂಗಳಕಾರ್ಯಯು ಸಾಂಗವಾಗಿ ನಡೆಯುತ್ತದೆ. ಅಂಗನೆಯರು ಆರತಿಮಾಡಿ ಸೇಸೆಯನಿಟ್ಟು ವಧುವರರಿಂದ ಪರಿಚಿತ ಪಂಥಗಳನ್ನು ಆಡಿಸಿ ತೋರಿಸದೆ ಶೋಭಾವನ್ನು ಸುವಾಸಿನಿಯರು ಹಾಡಿದರು. ಮುಂದೆ ಇದರ ವೈವಾಹಿಕ ಜೀವನವು ಆದರ್ಶವಾಗಿ ನಡೆಯುತ್ತಿರಲು, ಶ್ರೀ ರೇವಣಸಿದ್ದೇಶ್ವರನು ಜಾಗ್ರತಿಪುರಕ್ಕೆ ಉನ್ನತೋನ್ನತವಾಗಿ ಬೆಳೆದು ಕಂಗೊಳಿಸುತ್ತಿರುವಾಗ ಊರಿನ ವೈಭವವನ್ನು ರೇವಣಸಿದ್ಧನು ನೋಡುತ್ತ ಆನಂದಿಸುತ್ತ ಪುರದ ಒಳಗೆ ಬರುತ್ತಾನೆ.

ಗುರುಲಿಂಗ ಜಂಗಮ ಸೇವನಿರತಳಾಗಿರುವ ಬಡವಿ ಗಂಗಮ್ಮ ಸಂತೃಪ್ತಳೂ, ಸದ್ಭಕ್ತಳು ಆಗಿದ್ದು, ಶ್ರೀ ರೇಣವಸಿದ್ಧರಿಗೆ ಶುದ್ಧವಾದ ಉದಕದಿಂದ ಪಾದ ತೊಳೆದು ಸುಭಕ್ತಿಯಿಂದ ನಮಿಸಿ ತಾನು ಧನ್ಯಳಾದಳೆಂದು ಹೇಳುವಳು. ಆಗ ರೇವಣಸಿದ್ಧನು ಆಕೆಯ ದೃಢಭಕ್ತಿಗೆ ಮೆಚ್ಚಿ ಅಷ್ಟೈಶ್ವರ್ಯವನ್ನು ಅನುಗ್ರಹಿಸುವನು. ನಂತರ ಆದಿಗೊಂಡನ ಮನೆಗೆ ಹೋಗುವನು. ಶಿವಪದ್ಮ ಜಿಂಕಾದೇವಿಯವರಿಗೆ ಲೋಕ ನೀತಿಗಳನ್ನುರುಹಿ ಶಿವಪದ್ಮನ ಬೇಡಿಕೆಯಂತೆ ಲಿಂಗವನ್ನು ಅನುಗ್ರಹಿಸುವನು. ಉಪದೇಶವನ್ನು ನೀಡಿ ರೇವಣಸಿದ್ಧನು ಶಿವಪದ್ಮನಿಗೆ ನೀನು ಕುರಿಗಳನ್ನು ಕಾಯುತ್ತಿರಬೇಕೆಂದು ಅಪ್ಪಣೆಯನ್ನು ಕೊಟ್ಟು ಅವರೆಲ್ಲರಿಗೂ ಆಶೀರ್ವಾದ ಮಾಡಿ ಅವರಿಂದ ಬೀಳ್ಕೊಂಡು ತೆರಳುವನು.

ಸಂಧಿ : ಆರು

ಗುರುವಿನ ಅಪ್ಪಣೆಯಂತೆ ಶಿವಪದ್ಮನು ಕುರಿಗಳನ್ನು ಕಾಯುತ್ತಿರುವಾಗ ಇತ್ತ ಶಿವನ ಸಭೆಯಲ್ಲಿ ಸುರಮುನಿಯಿಂದ ಖೇಚರನೊಬ್ಬನು ಶಾಪಗ್ರಸ್ತನಾಗುತ್ತಾನೆ. ಶಿವನ ಆಜ್ಞೆಯಂತೆ ಜಾಬಾಲ ಮುನಿ ಎಂಬ ಹೆಸರಿನಿಂದ ಭೂಲೋಕಕ್ಕೆ ಬಂದು ತಪಸ್ಸು ಮಾಡವನು. ಈ ಸಂದರ್ಭದಲ್ಲಿ ಶಮದಮಾದಿಗಳು, ಮನೋನಿಗ್ರಹ, ಮುನಿಗಳ ಲಕ್ಷಣ, ವಿರತಿಲಕ್ಷಣ, ಬಾಹ್ಯ ದಶೇಂದ್ರಿಯ ಅಂತಶ್ಚತಾರಿಂದ್ರಿಯಗಳ ವಿವರ, ಅಂತರ್ಲಕ್ಷ್ಯ, ಬಹಿರ್ಲಷ್ಯ ಮಧ್ಯಲಷ್ಯ ಎಂಬ ಲಷ್ಯತ್ರಯಗಳು ನಿರ್ಣಯ ಮತ್ತು ಬೇಚರಿ, ಭೂಚರಿ, ಸಹಚರಿ, ಷನ್ಮುಖಿ, ಶಾಂಭವಿ ಇತ್ಯಾದಿ ಮುದ್ರಾ ಲಕ್ಷಣಗಳು, ಕಳೆಬಿಂದು ನಾದಗಳು ಇವುಗಳನ್ನು ಗುರುವಿನಿಂದ ಅನುಗ್ರಹೀತನಾಗಿ ಜಾಬಾಲಮುನಿಯು ಬಾಹ್ಯೋಪಚಾರ, ಬಾಹ್ಯಾಲಾಪಗಳನ್ನು ಮರೆತು ತಪಸ್ಸಿನಲ್ಲಿ ಪರಮಾತ್ಮನ ಧ್ಯಾನದಲ್ಲಿ ಪರವಶನಾಗಿರುವನು.

ಇತ್ತ ಕಾರಣಾಂತರದಿಂದ ನೂತನಪುರದ ಅರಸ ಗಂಗಾಧರ ರಾಜನಿಂದ ಸಂಹರಿಸಲ್ಪಟ್ಟ ಈ ಜಾಬಾಲ ಮಹರ್ಷಿಯ ವಕ್ರದಿಂದ ಪರಿಮಿತವಾಗಿ ಕುರಿಗಳು ಉದ್ಭವಿಸುತ್ತವೆ. ಗಂಗಾಧರ ಮಹಾರಾಜನು ಆಶ್ಚರ್ಯ ಚಕಿತನಾಗಿ ಆ ಕುರಿಗಳ ರಕ್ಷಣೆಗಾಗಿ ತನ್ನ ಕೆಲವು ರಾವುತರನ್ನು ನೇಮಿಸುತ್ತಾನೆ. ಆದರೆ ಅವರು ಕಾಯುತ್ತ ಕೆಲವು ದಿನಗಳ ನಂತರ ಬೇಸತ್ತು ಈ ಕೆಲಸವನ್ನು ತಮ್ಮಿಂದಾಗದು ಎಂದು ಮೊರೆ ಇಡುವರು. ಆಗ ಅರಸನು ತನ್ನ ಮಂತ್ರಿಯೂ ರಕ್ಷಣೆಗೆ ನಿಲ್ಲುತ್ತಾರೆ. ಕೆಲವು ದಿನಗಳ ನಂತರ ಬೇಸರಿಸುತ್ತಾರೆ. ಆಗ ಶಿವನನ್ನು ಕುರಿತು ಪ್ರಾರ್ಥಿಸುತ್ತಾರೆ. ಶಿವನ ಇವರನ್ನು ತಪ್ಪಿಸಿ ಹರಿ ಬ್ರಹ್ಮರನ್ನು ನೇಮಿಸುವರು. ಅವರೂ ಕಾದು ಕಂಗಾಲಾಗುತ್ತಾರೆ. ಆಗ ಶಿವನು ತಾನೇ ಈ ಕೆಲಸಕ್ಕೆ ನಿಂತು ಬೇಸತ್ತು ಹಿಂಜರಿಯುತ್ತಾನೆ. ಕೊನೆಗೆ ಗಣಪತಿಯೊಡನೆ ಪಾರ್ವತಿ ದೇವಿಯು ಕಾಯುತ್ತಾಳೆ ಸಾಕು ಸಾಕಾಗಿ ಆ ಕುರಿಗಳನ್ನೆಲ್ಲಾ ಮೂರು ಕಣ್ಣಿರುವ ಹುತ್ತದಲ್ಲಿ ಹೊಗಿಸಿ ತನ್ನ ಮೂಗುತಿಯ ಮುದ್ದೆಯನ್ನು ಇಟ್ಟು ಗಣಪತಿಯೊಡನೆ ಕೈಲಾಸಕ್ಕೆ ಬರುತ್ತಾಳೆ. ಹಾಗು ಶಿವನನ್ನು ಪ್ರಾರ್ಥಿಸಲು ಎಲ್ಲರೂ ನೆಮ್ಮದಿಯಿಂದ ಇರುತ್ತಿದ್ದರು.

ಸಂಧಿ : ಏಳು

ಶಿವಪದ್ಮನು ರೇವಣಸಿದ್ಧನನ್ನು ಪ್ರಾರ್ಥಿಸುವನು. ಪ್ರಾರ್ಥನೆ ಮೆಚ್ಚಿದ ರೇವಣಸಿದ್ಧನು ಆರ್ಶೀವದಿಸುವನು. ಶಿವಪದ್ಮನ ಹೆಂಡತಿ ಜಿಂಕಾದೇವಿಯು ಗರ್ಭವತಿಯಾಗುತ್ತಾಳೆ. ಗುರುವಿನ ಅಪ್ಪಣೆಯಂತೆ ಪುತ್ರನು ಹುಟ್ಟುವನು. ಅವನಿಗೆ ರೇವಣನೆಂದು ಹೆಸರಿಟ್ಟು ಸಂತೋಷದಿಂದ ಇರುವರು.

ಇತ್ತ ಶಿವಪದ್ಮನು ತನ್ನ ಅಣ್ಣಂದಿರರ ಮತ್ಸರಕ್ಕೆ ಬೇಸರಿಸುವನು. ತಂದೆಯ ಅಪ್ಪಣೆಯ ಮೇರೆಗೆ ಹೊಲದ ಕೆಲಸಕ್ಕೆ ಹೋಗುವನು. ಅಲ್ಲಿ ಕಷ್ಟಪಡುವನು ಆದರೆ ತಾಯಿ ತಂದಿರುವ ಬುತ್ತಿಯನ್ನು ಅಣ್ಣಂದಿರರು ಹೊಟ್ಟೆಕಿಚ್ಚಿನಿಂದ ಉಳಿಸದೆ ತಿಂದು ಉಳಿದಿದ್ದರೆ ಚೆಲ್ಲಿ ಹಾಸ್ಯ ಮಾಡುತ್ತಾರೆ. ಆಗ

ಶಿವಪದ್ಮನು ಗುರುವನ್ನು ನೆನೆದು ಪ್ರಾರ್ಥಿಸುತ್ತ ಪರಮಾನ್ನವನ್ನು ಊಟ ಮಾಡಿ ತಣಿಯುತ್ತಾನೆ. ಶಿವಪದ್ಮನ ತಾಯಿಯು ಮಗನನ್ನು ಕಂಡು ಸಂತೋಷದಿಂದ ಗುರುಪುತ್ರನೆಂದು ಹಾಡಿ ಹರಸುತ್ತಿದ್ದಳು. ಸಂತುಷ್ಟನಾದ ಶಿವಪದ್ಮನು ಪುನಃ ನೇಗಿಲು ಹೊಡೆಯುತ್ತಿರುವಾಗ ಹಿಂದೆ ಪಾರ್ವತಿದೇವಿಯಿಂದ ಪ್ರತಿಷ್ಠಿತವಾಗಿದ್ದ ಮೂರು ಕಣ್ಣಿರುವ ಹುತ್ತಕ್ಕೆ ನೇಗಿಲು ಹರಿಯುತ್ತದೆ. ಆಗ ಆ ಹುತ್ತದಿಂದ ನಾನಾ ಬಣ್ಣದ ಕುರಿಗಳು ಅಪರಿಮಿತವಾಗಿ ಹೊರಬರುತ್ತವೆ ಅವುಗಳನ್ನು ಕಂಡ ಶಿವಪದ್ಮನು ಆಶ್ಚರ್ಯಚಕಿತನಾಗಿ ಇದು ಗುರುವಿನಾಟವೆಂದು ಅರಿತು ಅವುಗಳ ರಕ್ಷಣೆಗಾಗಿ ಸಿದ್ಧನಾಗಿ ಮನೆಯ ಕಡೆ ಲಕ್ಷ ವಹಿಸಿದೆ ಆ ಕುರಿಗಳ ಹಿಂಡಿನೊಡನೆ ಕಾನನದಲ್ಲಿ ಹೊರಡುವನು. ಈತ ಕೆಲವು ದಿನಕ್ಕೆ ಕುರಿ ಕಾಯುವದರಲ್ಲಿ ಜಿಗುಪ್ಸೆ ಹೊಂದುತ್ತಾನೆ. ಪರೋಕ್ಷವಾಗಿ ರೇವಣಸಿದ್ದೇಶ್ವರನ ಅಪ್ಪಣೆಯಂತೆ ಶಿವನನ್ನು ಧ್ಯಾನಿಸುತ್ತಾನೆ. ಅಗ ಶಿವನು ಪ್ರತ್ಯಕ್ಷನಾಗಿ ಆಶೀರ್ವದಿಸಿ ಮುಂದಿನ ಆಗಮನಗಳನ್ನು ಸೂಚಿಸಿ ಪರೋಕ್ಷವಾಗಿ ಶ್ರೀ ವೀರೇಶ್ವರನನ್ನು ಕಳುಹಿಸಿ ಅಂತರ್ದಾನನಾಗುವನು. ನಂತರ ಶಿವಪದ್ಮನು ಪ್ರಸನ್ನ ಮನಸ್ಸಿನವನಾಗಿ, ಸಂತೋಷದಿಂದ ಕುರಿಗಳ ರಕ್ಷಣೆಯನ್ನು ಮಾಡಿ ಸುಖದಿಂದರುವನು.

**ಸಂಧಿ : ಎಂಟು**

ಒಂದು ದಿನ ಶಿವನ ಒಡ್ಡೋಲಗವು ವೈಭವದಿಂದ ಕೂಡಿರಲು ಅಲ್ಲಿ ಹರಿಬ್ರಹ್ಮಾದಿಗಳು, ಸುರಮುನಿಗಳು ಬರಲು, ಅವರಲ್ಲಿ ಒಬ್ಬ ಮುನಿಯೊಬ್ಬನನ್ನು ಕಂಡು ಕುಳಿತಿರುವ ಮೂವರು ಗಂಧರ್ವರು ಅಪಹಾಸ್ಯ ಮಾಡಿ ನಗುತ್ತಾರೆ. ಆಗ ಕೋಪಗೊಂಡ ಆ ಮುನಿಯು ಅವರಿಗೆ ಲೋಕದ ಅನುಭವಗಳನ್ನು, ನೀತಿಗಳನ್ನು ತಿಳಿಸುತ್ತಾ, ನೀವು ಭೂಲೋಕದಲ್ಲಿ ರಕ್ಕಸಿ, ಕಾಕ, ಕಂಟಿವಾಳದ ಮರಗಳಾಗಿ ಹೀಗೆ ಉದಯಿಸಿರಿ ಕಾಕನು ಕಂಚಿವಾಳದ ಮರದ ಮೇಲೆ ಗೂಡು ಕಟ್ಟಿಕೊಂಡು ಬಾಳಲಿ, ರಕ್ಕಸಿಯು ಆಹಾರವನ್ನು ಕಂಚಿವಾಳದ ಮರದ ಕೆಳಗೆ ಕೊಳ್ಳುತ್ತಿರುಬೇಕೆಂದು ಎಂದು ಶಾಪವನ್ನು ಕೊಡಲು ಅಂಜಿದ ಗಂಧರ್ವರು ಹೊಗಳಿ ನಮಸ್ಕರಿಸಿ ಶಾಪಪರಿಹಾರವನ್ನು ಕೇಳಿಕೊಳ್ಳುತ್ತಾರೆ. ಆಗ ಮುನಿವರನಿಗೆ ಕರುಣೆ ಬಂದು ಕಾಕನನ್ನು ಕೊಲ್ಲಲು ಮರ ಬೀಳುತ್ತದೆ. ಆವಾಗ ರಕ್ಕಸಿಗೆ ಮರಣವಪ್ಪುವದು ಎಂದು ಹೇಳಿದಂತೆ ಅವರು ರಕ್ಕಸಿ, ಕಾಕ, ಕಂಟಿವಾಳದ ಮರಗಳಾಗಿ ಹುಟ್ಟುವರು. ಬೆಳೆದು ಬಂದ ರಾಕ್ಷಸಿಯು ಜಾಗ್ರತಿಪುರದರಸ ಚಕ್ರವತಿ ಭೂಪನ ಮಗಳಾದ ಚುಮಲಾದೇವಿಯನ್ನು ಒಯ್ದು ಕರುಣೆಯಿಂದ ಮಗಳೆಂದು ಭಾವಿಸಿ ತನ್ನ ಮನೆಯಲ್ಲಿ ಪ್ರೀತಿಯಿಂದ ಸಾಕಿ ಕೊಂಡಿರುವಳು.

ಇತ್ತ ಶಿವಪದ್ಮನು ಶ್ರೀ ರೇಣುಕ ಗುರುವನ್ನು ಧ್ಯಾನದಿಂದ ನಿದ್ರೆ ಮಾಡುತ್ತಿರಲು ಸ್ವಪ್ನದಲ್ಲಿ ಕಾಣಿಸಿಕೊಂಡ ಗುರು ಬಂಕಾಪುರದ ಕಾಡಿನಲ್ಲಿರುವ ರಕ್ಕಸಿಯ ಮನೆಗೆ ಹೋಗಿ ಬರಲು ಆಜ್ಞಾಪಿಸುವನು. ಅದರಂತೆ ಶಿವಪದ್ಮನು ರಕ್ಕಸಿಯ ಮನೆಗೆ ಹೋಗಲು ರಕ್ಕಸಿಯು ಮನೆಯಲ್ಲಿ ಇರಲಾರಳು ಆಗ ಚುಮಲಾದೇವಿಯೊಡನೆ ಮಾತನಾಡಿ ಬಂದು ಪುನಃ ಗುರುವನ್ನು ನೆನೆಯಲು ಗುರು ರೇವಣಸಿದ್ಧನು ಪ್ರತ್ಯಕ್ಷನಾಗುವನು. ಗಣ ಸಮೂಹದೊಂದಿಗೆ ಬಂದಿದ್ದ ಎಲ್ಲರಿಗೆ ಶಿವಪದ್ಮ ಕ್ಷೀರದಿಂದ

ತೃಪ್ತಿಪಡಿಸುವನು. ಇವನ ನಿಜಭಕ್ತಿಗೆ ಮೆಚ್ಚಿ ಗುರುವು ಪುನ: ರಕ್ಕಸಿಯ ಮನೆಗೆ ಹೋಗಿಬರಲು ಆಜ್ಞೆ ಮಾಡುವನು.

**ಸಂಧಿ : ಒಂಭತ್ತು**

ಅತ್ತ ರೇವಣಸಿದ್ದೇಶ್ವರನು ಹೋಗಲು ಇತ್ತ ಕಡೆ ಶಿವಪದ್ಮನು ಚುಮಲಾದೇವಿಗೆ ಕೊಟ್ಟಿರುವ ವಚನವನ್ನು ಪಾಲಿಸಲು ಗುರುವಿನ ಅಪ್ಪಣೆ ಪಡೆದು ಗುರುಪ್ರಸಾದವನ್ನು ತೆಗೆದುಕೊಂಡು ಬಂದು ಚುಮಲಾದೇವಿಗೆ ಕೊಡುವನು. ಸಂತಸಗೊಂಡಿರುವ, ಪ್ರಸಾದ ಸ್ವೀಕರಿಸಿ ಧನ್ಯಳಾದೆನು ಎನ್ನುವ ಚುಮಲಾದೇವಿಯ ಪ್ರಾರ್ಥನೆಯಂತೆ ಲೋಕಾನುಭವ ಧರ್ಮನೀತಿಗಳನ್ನು ಅರುಹುತ್ತಿರಲು ಆಗ ರಾಕ್ಷಸಿಯು ಬರುತ್ತಿರುವದನ್ನು ಕಂಡು ಗಾಬರಿಯಿಂದ ಇರುವ ಚುಮಲಾದೇವಿಯನ್ನು ಶಿವಪದ್ಮನು ಸಮಧಾನಿಸಿ ಗುರುವಿನ ಅನುಗ್ರಹದಿಂದ ಭಸಿತದ ಮಹಾತ್ಮೆಯಿಂದ ತಾನು ಹಲ್ಲಿಯಾಗಿ ಗೋಡೆಗೆ ಹತ್ತಿಕೊಂಡಿರುವನು. ಆಗ ರಾಕ್ಷಸಿ ಬಂದ ನರಕ ಕಂಡಿದೆ ಎಂದು ಕೋಪಗೊಳ್ಳುತ್ತಾನೆ. ಅವಳನ್ನು ಚುಮಲಾದೇವಿ ಸಂತೈಸುವಳು ಹಾಗು ಉಪಾಯದಿಂದ ಆಕೆಯ ಪ್ರಾಣದ ನೆಲೆಯನ್ನು ಕೇಳಿ ತಿಳಿದುಕೊಳ್ಳುವಳು. ರಾಕ್ಷಸಿಯು ಪುನ: ಕಾಡಿಗೆ ಹೋದಾಗ ಹಲ್ಲಿಯಾಗಿದ್ದ ಶಿವಪದ್ಮನು ಪುನ: ಮನುಷ್ಯನಾಗಿ ಬಂದು ಚುಮಲಾದೇವಿಯೊಡನೆ ಆಲೋಚಿಸಿ ರಕ್ಕಸಿ ಬರುವದರೊಳಗಾಗಿ ಗುರುವಿನ ಪ್ರೇರಣೆಯಿಂದ ಉಪಾಯವಾಗಿ ಕಂಚಿವಾಳದ ಮರದ ಮೇಲೆ ಗೂಡು ಕಟ್ಟಿಕೊಂಡಿದ್ದ ಶಾಪಗ್ರಸ್ತ ಕಾಕವನ್ನು ಕೊಲುತ್ತಾನೆ. ಆಗ ಮರವು ಬೀಳುವದು ಕಾಡಿನಿಂದ ಬಂದ ರಕ್ಕಸಿಯು ಮರಣ ಹೊಂದುವಳು. ಹೀಗೆ ಶಾಪ ನಿವೃತ್ತಿಯಾದ ಮೂರು ಜನ ಗಂಧರ್ವರು ಶಿವಪದ್ಮನನ್ನು ಹರಸುತ್ತ ಕೈಲಾಸಕ್ಕೆ ಹೊರಡುವರು.

ಇತ್ತ ಶಿವಪದ್ಮನು ರಕ್ಕಸಿಯನ್ನು ಕೊಂದ ಜ್ಞಾಪಕಾರ್ಥವಾಗಿ ಗುರುವಿನ ಆಜ್ಞೆಯ ಪರೋಕ್ಷವಾಣಿ ಯಂತೆ ರಕ್ಕಸಿಯ ಅವಯವಗಳಿಂದ ಬಾವನ್ನ ಬಿರುದುಗಳನ್ನು ಮಾಡಿ ಹಾಳು ಬಂಕಾಪುರದಲ್ಲಿ ಯಾರಿಗೂ ತಿಳಿಯದಂತೆ ಇರಿಸಿ ಚುಮಲಾದೇವಿಯೊಡನೆ ತನ್ನ ಕುರಿಯ ತಾಣಕ್ಕೆ ಬರುವನು.

ಅತ್ತ ಕೈಲಾಸದಲ್ಲಿ ನಾರದನ ಮಾತಿನಂತೆ ಈ ಬಾವನ್ನ ಬಿರುದುಗಳ ಕಾವರಿಗಾಗಿ ಬಂಕಣ್ಣನೆಂಬು ವನನ್ನು ಕಳುಹಿಸಲಾಗಿ ಶಿವನ ಅಪ್ಪಣೆಯಂತೆ ಮರ್ತ್ಯಕ್ಕೆ ಬಂದ ಬಂಕಣ್ಣನು ಬಿರುದುಗಳನ್ನು ಕಾಯ್ದುಕೊಂಡಿರುವನು.

ಇತ್ತ ಶಿವಪದ್ಮ ಚುಮಲಾದೇವಿಯರು ವಿಷಯದ ಆಸೆಗಳಿಗೆ ಹೋಗದೆ ನೀತಿ ನಿಷ್ಠಪರರಾಗಿ ಗುರುಧ್ಯಾನ ಮಾಡಿಕೊಂಡಿರುವಾಗ ಗುರು ರೇವಣಸಿದ್ದೇಶ್ವರನು ಗಣ ಸಮೂಹದೊಡನೆ ಇವರಲ್ಲಿಗೆ ಬಂದು ಲೋಕಾನುಭವಗಳನ್ನು ತಿಳಿಸಿ ಅಲ್ಲಿಯೆ ಅವರಿಗೆ ವಿವಾಹ ಮಾಡಿ ಆರ್ಶೀವದಿಸಿ ಹೊರಡುವರು. ಮುಂದೆ ಶಿವಪದ್ಮ ಚುಂಚಲೆಯರು ಪರಮಾನಂದದಿಂದಿರುವರು.

## ಸಂಧಿ : ಹತ್ತು

ಶಿವಪದ್ಮನು ಮತ್ತು ಚುಮಲಾದೇವಿ ಕುರಿಯ ಹಿಂಡಿನೊಡನೆ ತಮ್ಮ ಪೂರ್ವದ ವಾಸ ಸ್ಥಳವಾದ ಜಾಗ್ರತಿಪುರಕ್ಕೆ ಎಂದು ತಮ್ಮ ಹೊಲದ ನೆನಪಿನಿಂದ ಹೊಲದಲ್ಲಿ ಕುರಿಯ ಹಿಂಡನ್ನು ಕೂಡಿರಲು ಕಂಡು ಆಗ್ರಹಗೊಂಡ ಇವನ ಅಗ್ರಜರುಗಳು ಬಂದು ಇವನ ಗುರುತರಿಯದೆ ಬೈದು, ಭಂಗಿಸಿ, ಹತ್ತಿರ ಸಾದುನ ಕಾಲ್ತುಳಿದು ನೂಂಕುತ್ತಾ ತಮ್ಮನ ಗುರುತರಿದು ಸಂತಸಗೊಂಡ ಅವ ಕರೆಗೆ ಮನೆಗೆ ಹೋಗಲು ಒಪ್ಪದಿರಲು ವರ್ತಮಾನ ತಿಳಿದುಬಂದ ತಾಯಿ ತಂದೆಗಳ ಕರೆಗೂ ಒಪ್ಪದಿರುತ್ತಾರೆ. ಆ ಸಮಯದಲ್ಲಿ ಚುಂಚಲೆಯ ಪ್ರಾರ್ಥನೆಗೆ ಜಂಗಮ ರೂಪದಿಂದ ಬಂದು ಬೋಧಿಸಿದ ಶಿವನ ಅಪ್ಪಣೆಯನ್ನು ಅಂಗೀಕರಿಸಿ ತಾಯಿ ತಂದೆ ಅಗ್ರಜರುಗಳಿಗೆ ನಮಸ್ಕರಿಸಿ ಚುಮಲಾದೇವಿ ಮತ್ತು ಕುರಿ ಹಿಂಡಿನೊಡನೆ ಮನೆಗೆ ಹೋಗುವನು. ಇವನ ಆಗಮನದಿಂದ ಸಂತುಷ್ಟರಾದ ಎಲ್ಲರೂ ಅವನ ಪೂರ್ವಾಪರ ವಿಚಾರಗಳನ್ನು ಇವನಿಂದ ತಿಳಿದು ಸಂತಸಗೊಂಡು ಕೊಂಡಾಡುವರು. ಮೊದಲಿನ ಹೆಂಡತಿ ಜಂಕಾದೇವಿ ಮಗ ರೇವಣ್ಣ ತಾಯಿ ತಂದೆ ಸಹೋದರರು ಕೂಡಿಕೊಂಡು ಏನೂ ಭೇದವಿಲ್ಲದೆ ಸುಖದಿಂದ ಬಾಳಿ ಕೊಂಡಿರುವರು.

ಇತ್ತ ಚುಮಲಾದೇವಿಗೆ ರೇಣುಕನೆಂಬುವ ಒಬ್ಬ ಗಂಡು ಮಗನೂ ಹಾಗು ರೇವಣಂಬೆ ಎನ್ನುವ ಹೆಣ್ಣು ಮಗು ಹುಟ್ಟಿ ಸಂತೋಷದಿಂದರುವರು.

ಇವರು ಹೀಗೆ ಸುಖದಿಂದ ಬಾಳಿಕೊಂಡಿರಲು ಇತ್ತ ನಡೆದ ಪ್ರಸಂಗದಲ್ಲಿ ಪುಷ್ಪದತ್ತನೆಂಬುವನ ಭಕ್ತನು ಶಿವಲಿಂಗವನ್ನು ಪೂಜಿಸುತ್ತಿರಲು ಪೂಜೆಗಾಗಿ ಪುಷ್ಪಗಳನ್ನು ಸಂಗ್ರಹಿಸುತ್ತ ಸಹಸ್ರ ದಳ ಕಮಲವನ್ನು ಕೀಳಲು ಕಿತ್ತಂತೆಲ್ಲಾ ಕಮಲಗಳು ಉದ್ಭವಿಸಲಾಗಿ ತನಗೆ ಬೇಕಾಗುವಷ್ಟು ತಂದು ಶಿವಲಿಂಗವನ್ನು ಪೂಜಿಸಿ ತೆರಳುವನು.

ಶಿವಲಿಂಗವನ್ನು ನಿತ್ಯ ನಿಯಮದಿಂದ ಪೂಜಿಸುತ್ತಿದ್ದ ವೈಕುಂಠಪುರದರಸ ಹರಿದೇವನೆಂಬುವನು ಬಂದು ಪುಷ್ಪದತ್ತನು ಮಾಡಿದ್ದ ಕಮಲ ಪುಷ್ಪದ ಪೂಜೆಯನ್ನು ತೆಗೆಯಲು ಪುಷ್ಪಗಳನ್ನು ಕೆಡವಲು ಅವು ಶಿವನ ಪಾದದಲ್ಲಿ ಬೀಳುತ್ತವೆ. ಆಗ ಶಿವನು ಸಂಪ್ರೀತಿಯಿಂದ ಅವನ್ನು ಜಂಗುಗಳನ್ನಾಗಿ ಮಾಡಿ ಧರಿಸಿ ಹರಿದೇವನ ಮೇಲೆ ಆಗ್ರಹಗೊಂಡು ಯುಕ್ತಾಯುಕ್ತಗಳನ್ನರಿಯದೆ ಪೂಜಿಸಿದ ಪೂಜೆಯನ್ನಳಿಸದೆ ಯಾದುದರಿಂದ ನೀನು ದೋಷಿಯಾದೆ ಎಂದು ಆಕಾಶವಾಣಿಯು ನುಡಿಯುತ್ತದೆ. ಆಗ ಶಿವವಾಣಿಯನ್ನು ಕೇಳಿ ಬೆದರಿದ ಹರಿದೇವನು ಅಪರಾಧಕ್ಕಾಗಿ ಮೊರೆಯಿಡಲು ಕಾಶಿಯಿಂದ ಗಂಗಾಜಲವನ್ನು ತಂದು ಅಭಿಷೇಕಿಸಿ ಪೂಜಿಸಿದರೆ ಮುಕ್ತನಾಗುವೆ ಎಂದು ಪುನಃ ಶಿವನ ಆಕಾಶವಾಣಿಯ ಅಪ್ಪಣೆಯಂತೆ ಕಾಣಿಕೆ ಹೋಗುವ ಮುನ್ನ ತಾನು ಬರುವವರಿಗೂ ತನ್ನ ನಿತ್ಯದ ನಿಯಮ ಕೆಡದಂತೆ ಶಿವನನ್ನು ಪೂಜಿಸಲು ಚಂದ್ರಗಿರಿಯ ಅರಸನಾದ ನಿಲಂಕಾರ ಮಹಾರಾಜನ ಮಗ ಭರಮಭೂಪಾಲನನ್ನು ಅವನ ಇಷ್ಟದ

ಪ್ರಕಾರ ತನ್ನ ತಂಗಿ ಸುರಾವತಿಯನ್ನು ಕೊಟ್ಟು ವಿವಾಹ ಮಾಡಿ ತಾನು ಕಾಶಿಗೆ ಹೊರಡಲು ಇತ್ತ ಭರಮ ಭೂಪಾಲರು ನಿತ್ಯ ಶಿವಲಿಂಗವನ್ನು ಪೂಜಿಸುತ್ತಿರುವನು. ಹರಿದೇವನು ಶಿವನ ಕೃಪೆಯಿಂದ ನಿರಾತಂಕವಾಗಿ ಕಾಶಿಯಿಂದ ಗಂಗಾಜಲವನ್ನು ತಂದು ಶಿವಲಿಂಗಕ್ಕೆ ಅಭಿಷೇಕಿಸಿ ಶಿವಾನುಗ್ರಹಕ್ಕೆ ಪಾತ್ರನಾಗಿ ತನ್ನ ನಿತ್ಯದ ವ್ರತದಂತೆ ತಾನೇ ಶಿವಲಿಂಗವನ್ನು ಪೂಜಿಸಿಕೊಂಡಿರುವನು. ಬಳಿಕ ಭರಮ ಭೂಪಾಲನಿಗೆ ಮಕ್ಕಳಿಲ್ಲದಿರಲು ಶಿವಲಿಂಗದಾಲಯಕ್ಕೆ ಸತಿಯೊಡಗೂಡಿ ಬಂದು ಭಕ್ತಿಯಿಂದ ಪೂಜಿಸಿ ಧ್ಯಾನಿಸಿ ಪ್ರಸಾದವನ್ನು ಕೊಂಡು ಮನೆಗೆ ಬರಲು ರಾತ್ರಿ ಶಿವನು ಸುರಾವತಿಯ ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ಹೊನ್ನಿನ ಹೊಕ್ಕಳು ಸುವರ್ಣದ ಜಡೆಗಳಿಂದ ಶೋಭಿಸಿ ಜಗನ್ಮಾನ ಪುತ್ರನು ಹುಟ್ಟುವನು. ಅವನಿಗೆ ಶಿವಸಿದ್ಧ ಬೀರನೆಂಬ ಹೆಸರನ್ನು ಇಡಬೇಕೆಂದು ಸೂಚಿಸುವನು. ಹಾಲು ಮತದ ದೈವವಾಗುತ್ತಾನೆಂದು ತಿಳಿಸಿ, ಪ್ರಸಾದವನ್ನು ಕೊಟ್ಟು ತೆರಳುವನು. ಇತ್ತ ಶ್ರೀ ರೇವಣಸಿದ್ಧ ಗುರುವರ್ಯರಿಂದ ಶಿವಪದ್ಮನಿಗೆ ಈಶ್ವರ ಸಂಕೇತದಂತೆ ಕೈಲಾಸಕ್ಕೆ ತೆರಳಬೇಕೆನ್ನುವ ಮುನ್ಸೂಚನೆಯಾಗುತ್ತದೆ. ತನ್ನ ತಂದೆ ತಾಯಿಗಳಿಗೆ ಅರಿಕೆ ಮಾಡಿಕೊಳ್ಳುವನು. ಅವರು ಅದನ್ನು ತಿಳಿದು ಶಿವನನ್ನು ಧ್ಯಾನಿಸಲು ಶಾಪನಿವೃತ್ತರಾಗಿ ಆದಿಗೊಂಡ ಚುಂಚಲೆಯರು ಮೊದಲಿನಂತೆ ಗಂಧರ್ವರಾಗಿ ಶಿವಪುರಿಗೆ ಹೋಗುವರು. ನಂತರ ಶಿವಪದ್ಮನು ಎಲ್ಲರಿಗೂ ಸತ್ಯ, ಧರ್ಮ, ನೀತಿ, ನಡವಳಿಕೆಗಳನ್ನು ಬೋಧಿಸುವನು. ಶಿವಪದ್ಮನಿಗೆ ಕೈಲಾಸ ಪ್ರಾಪ್ತಿಯಾಗುತ್ತದೆ.

ಈ ರೀತಿಯಾಗಿ ಕೈಲಾಸಕ್ಕೆ ಹೋದ ಶಿವಪದ್ಮನನ್ನು ಶಿವನು ಸಂತೈಸಿ ಹಿಂದೆ ಭಿಲ್ಲಾಸುರನೆಂಬ ದೈತ್ಯನನ್ನು ಸಂಹರಿಸಲು ಭೂಲೋಕಕ್ಕೆ ವೀರೇಶ್ವರನನ್ನು ಕಳುಹಿಸಲು ಆತನು ಭೀರೇಶನೆಂಬ ಹೆಸರಿನಿಂದ ಹುಟ್ಟಿ ಭಿಲ್ಲಾಸುರನನ್ನು ಸಂಹರಿಸಿ ಹಾಲು ಮತದವರಿಗೆ ದೇವರಾಗಿ ಆ ಮತವನ್ನುದ್ಧರಿಸಿ ಬಂದ ಪ್ರಸಂಗವನ್ನರುಹಿ ಆ ರೀತಿ ನೀನೀಗ ಚಂದ್ರಗಿರಿಪುರದರಸನಾದ ಭರಮ ಭೂಪಾಲನು ಪತ್ನಿ ಸುರಾವತಿಯ ಗರ್ಭದಲ್ಲಿ ಶಿವಸಿದ್ಧ ಬೀರನೆಂಬ ಹೆಸರಿನಿಂದ ಉದಯಿಸಿ ಮಹಿಮಾಶಾಲಿಯಾಗಿ ಮೆರೆ ಎಂದಪ್ಪಣೆ ಮಾಡುವನು. ಅದಕ್ಕೆ ಸಮ್ಮತಿಸಿ ನಮಿಸಿದ ಶಿವಪದ್ಮನು ನನಗೋರ್ವ ಶಿಷ್ಯನನ್ನು ಗ್ರಹಿಸಬೇಕೆಂದು ಬೇಡಲು ಅದಕ್ಕೆ ಬಿಲ್ವಾಡಪುರದರಸ ತುಕ್ಕಪ್ಪನ ಮಗ ಆಶೀರ್ವಾದವನ್ನು ಪಡೆದು ಶಿವನ ಸಭೆಯಲ್ಲಿ ಸಂತಸಗೊಂಡಿರುವನು.

**ಸಂಧಿ : ಹನ್ನೊಂದು**

ಇತ್ತ ಪಾರ್ವತಿ ಪರಮೇಶ್ವರರ ಭೂಲೋಕ ಸಂಚಾರದಲ್ಲಿ ಹಾಲ ಹೇವಲ ಹಳ್ಳದ ಹತ್ತಿರವಿದ್ದ ಆಲದಮರದ ತಂಪಿನಲ್ಲಿ ವಿಶ್ರಮಿಸಿಕೊಂಡರು. ಇಲ್ಲಿ ವಿಶ್ರಮಿಸಿಕೊಳ್ಳಲಿರುವ ಸುರಕನ್ಯೆಯರು ಗರ್ಭವತಿಯರಾಗಲಿ ಎಂದು ವರವನ್ನು ಕೊಟ್ಟು ತೆರಳಲಾಗಿ ಬಳಿಕ ವಿಹಾರಾರ್ಥವಾಗಿ ಬಂದು ಅಲ್ಲಿ ವಿಶ್ರಮಿಸಿಕೊಂಡ ಸುರಕನ್ಯೆಯಕ್ಕಿಯರಿಗೆ ನವಮಾಸ ತುಂಬಿದಂತೆ ಕಾಣಿಸಿಕೊಂಡು ಗರ್ಭ ಎನ್ನುವದು ಭೇದಿಸಿ ಶಿಶುಗಳನ್ನು ಹೊರಗೆ ತೆಗೆಯುತ್ತಾರೆ. ಆಗ ಅವು ಐದೂ ಹೆಣ್ಣು ಶಿಶುಗಳಾಗಿ

ಸುರಕ್ಷಿತವಾಗಿರುತ್ತವೆ. ಅವರು ಆ ಮಕ್ಕಳನ್ನು ತಮ್ಮ ಜೊತೆ ಒಯ್ಯಲು ಹೆದರಿ ಅಲ್ಲಿದ್ದ ಹೊಳೆಯ ತೆಪ್ಪದ ಮೇಲೆ ಸುರಕ್ಷಿತವಾಗಿರುವಂತೆ ಸಜ್ಜುಗೊಳಿಸಿ ಅದರ ಮೇಲಿರಿಸಿ ತೆಪ್ಪವನ್ನು ಸಾಗ ಹಾಕಿ ತಾವು ಹೊರಡುತ್ತಾರೆ. ತೆಪ್ಪವು ಶಿವನ ಕೃಪೆಯಿಂದ ಸುರಕ್ಷಿತವಾಗಿ ಬಂದರಿಗೆ ಸೇರಿ ಅಲ್ಲಿ ಕುರಿ ಕಾಯುತ್ತಿದ್ದ ಚಾಮರಾಯನೆಂಬುವವನಿಗೆ ಕಾಣಲು ಅವನು ಆ ಶಿಶುಗಳನ್ನು ಮನೆಗೆ ತಂದು ಹೆಂಡತಿ ಶಾಂಭವಿಗೆ ಕೊಡುವನು. ಪ್ರೀತಿಯಿಂದ ಅಕ್ಕಮ್ಮ, ಮಾಯಮ್ಮ, ಲಕ್ಷ್ಮಮ್ಮ, ಮಾಕಾಳಿ, ಮಂಕಮ್ಮ ಎಂಬ ಹೆಸರುಗಳನ್ನು ಇಟ್ಟು ಸಾಕಿಕೊಂಡಿರಲು ಆ ಪಂಚದೇವಿಯರು ಅವರಲ್ಲಿ ಸುರಕ್ಷಿತವಾಗಿ ಬೆಳೆಯುವರು.

ಬಳಿಕ ಶಿವನ ಅಪ್ಪಣೆಯಂತೆ ಶಿವಪದ್ಮನು ಚಂದ್ರಗಿರಿ ಪುರದರಸದ ಪತ್ನಿ ಸುರಾವತಿಯ ಗರ್ಭದಲ್ಲಿ ಹೊನ್ನು ಹೊಕ್ಕಳ ಸುವರ್ಣದ ಜಡೆಗಳಿಂದ ಕೂಡಿ ಅವತರಿಸುವನು (ಶ್ರೀ ಶಿವಸಿದ್ಧ ಬೀರೇಶನ ಜನನವು) ಶ್ರೀ ಶಿವಸಿದ್ಧ ಬೀರೇಶನ ಸೋದರಮಾವನಾದ ಹರಿದೇವನಿಗೆ ಮುಂದೆ ಇವರ ನೆಂಟಸ್ತನದ ಸಂಬಂಧವು ಬೇಡವಾಗಿದ್ದು ಈ ಶಿಶು ಇದ್ದರೆ ಮುಂದೆ ಅವೆಲ್ಲಾ ಸಂಬಂಧದ ತೊಡಕಿಗೆ ಕಾರಣವಾಗುತ್ತದೆ. ಈ ಶಿಶುವನ್ನು ಈಗಲೇ ಮುಗಿಸಿ ಬಿಡಬೇಕೆಂದು ಯೋಚಿಸಿ ಗರ್ಭದಲ್ಲಿರುವಾಗಲೇ ತಂಗಿಗೆ ವಿಷವನ್ನು ಉಣಸಲು ಪ್ರಯತ್ನಿಸಿ ಅದು ಸಾಗದಾಗಿ ಶಿಶುವು ಹುಟ್ಟಿದ ಬಳಿಕ ಕಪಟ ಜೋಯಿಸನ ವೇಷದಿಂದ ಬಂದು ಇವರ ಮನಸ್ಸನ್ನು ಕೆಡಿಸಿ ಹುಟ್ಟಿದ ಏಳು ದಿನಗಳಲ್ಲಿಯೇ ಶಿಶುವನ್ನು ಕಾಡಿನಲ್ಲಿ ಬಿಡುವಂತೆ ಮಾಡುವನು. ಇವರು ನಂಬಿ ಆ ರೀತಿ ಮಾಡಲು ಚಾರರ ಕೈಲಿ ಕಳುಹಿಸುವರು. ಶಿವಾನುಗ್ರಹದಿಂದ ಶಿಶುವು ಯಾವ ಧಕ್ಕೆಗೂ ಸಿಕ್ಕದರೆ ಪಂಚದೇವಿಯಲ್ಲಿರಲ್ಲೊಬ್ಬಳಾದ ಅಕ್ಕಮ್ಮನ ಕೈ ಸೇರಲು ಆಕೆಯ ಮನಸ್ಸಿನ ಆಕಾಂಕ್ಷೆಯಂತೆ ಶಿವನು ಪ್ರತ್ಯಕ್ಷನಾಗಿ ಪೂರ್ವಾಪರ ವಿಚಾರಗಳನ್ನೆಲ್ಲಾ ತಿಳುಹಿಸಿ ಶಿವಸಿದ್ಧ ಬೀರೇಶನೆಂದು ಹೆಸರಿಡಬೇಕೆಂದು ಅಪ್ಪಣೆ ಮಾಡಿ ಶಿಶುವಿಗೂ ಅಕ್ಕಮ್ಮನಿಗೂ ಸಹ ಆಶೀರ್ವದಿಸಿ ಶಿವನು ಕೈಲಾಸಕ್ಕೆ ಹೋಗುವನು.

**ಸಂಧಿ : ಹನ್ನೆರಡು**

ಶಿವನಿಂದ ಅನುಗ್ರಹಿತಳಾದ ಅಕ್ಕಮ ತನ್ನ ಸಹೋದರಿಯರೊಡನೆ ಶಿಶು ಸಹಿತ ತನ್ನ ಮನೆಗೆ ಬರುತ್ತಾಳೆ. ಇವರ ಸಾಕು ತಂದೆ ತಾಯಿಗಳಾದ ಚಾಮರಾಯ ಶಾಂಭವಿಯರು ತಂದ ಮಗುವನ್ನು ನೋಡುತ್ತಾರೆ. ಹಾಗು ಆ ಮಗುವಿನ ವಿಚಾರಗಳನ್ನು ಕೇಳಿ ಸಂತಸಗೊಂಡು ಅದನ್ನು ಸಾಕಬೇಕೆಂದು ನಿರ್ಣಯಿಸುವರು.

ಇವರಲ್ಲಿ ಶಿವಸಿದ್ಧ ಬೀರೇಶನು ಬಾಲಲೀಲೆಯಿಂದ ಬೆಳೆಯುತ್ತಿರುವಾಗ ಕುರಿಮರಿಗಳು ಕುಡಿದು ಬಿಟ್ಟ ಎಂಜಲ ಹಾಲನ್ನು ಕುಡಿಯುವದಿಲ್ಲವೆಂದು ಹಟ ಮಾಡುವನು. ಆಗ ಅಕ್ಕಮ್ಮ ಚಿಂತಿಸುವಳು ಶಿವನನ್ನು ಸ್ಮರಿಸಲು ಆತನ ಆಜ್ಞೆಯಂತೆ ಬಂದ ಖೇಚರನಿಂದ ವಿಷಯ ತಿಳಿದ ಅಕ್ಕಮ್ಮನು ಕುರಿಯ ಕತ್ತಿನ ಮೊಲೆ ಹಾಲನ್ನು ತಂದು ಉಣಿಸಲು ಅದರಿಂದ ತೃಪ್ತನಾಗುತ್ತಾನೆ. ಆ ಮಗು ಅಕ್ಕಮ್ಮನಿಗೆ

ಚೆಂಡನ್ನು ಕೊಡಿಸಲು ಹಟಮಾಡುವದು. ಅದೇ ಸಮಯಕ್ಕೆ ರೇವಣಸಿದ್ದೇಶ್ವರ ಗುರುವರನು ಬಂದು ಲಿಂಗವನ್ನು ಅನುಗ್ರಹಿಸಿ ಮಂತ್ರೋಪದೇಶವನ್ನು ಮಾಡಿ ತೆರಳುವನು.

ಇತ್ತ ಶಿವಸಿದ್ಧ ಬೀರನು ಗುರು ಮುಟ್ಟಿ ಶುದ್ಧನಾದನೆಂದು ಹಿಗ್ಗುತ್ತಾ ಚೆಂಡಿನಾಟವನ್ನು ಆಡುತ್ತಿರುವಾಗ ಇವನ ಚೆಂಡಿನೇಟಿನಿಂದ ಶ್ರೀಮಂತ ಸಂಗನಬಸವಪ್ಪನ ಮಗ ಲಿಂಗಬಸವನು ಸಾಯುತ್ತಾನೆ. ಗುರು ಮಂತ್ರ ಭಸಿತದ ಮಹಾತ್ಮೆಯಿಂದ ಅವನನ್ನು ಬದುಕಿಸುವನು. ಇದನ್ನು ಕಂಡ ಎಲ್ಲರೂ ಶಿವನ ಅವತಾರಿ ಎಂದು ಹೊಗಳುತ್ತಾರೆ. ಇನ್ನು ತಾನು ಇಲ್ಲಿರಕೂಡದೆಂದು ಯೋಚಿಸಿ ಬೀರೇಶನೊಡನೆ ಹೊರಡುವಾಗ ಜನರು ಹೋಗಬೇಡಿರೆಂದು ಅಡ್ಡಬಂದಿದ್ದ ಜನರು ನೋಡುತ್ತಿದ್ದಂತೆಯೇ ಇಬ್ಬರೂ ಸರ್ಪಾಕೃತಿಯಿಂದ ತೆರಳಿದ ಬಳಿಕ ಮನುಷ್ಯಾಕೃತಿಯನ್ನು ತಾಳಿ ಇಲ್ಲಿ ನಾಗರಾಣೆಂಬ ಊರಾಗಲೆಂದು ಹರಸಿ ಬೆಳ್ಳಿಗುತ್ತಿಗೆ ಬರುವರು.

ಇವರ ಇರುವಿಕೆಗೆ ಚಕಿತರಾದ ಆ ಊರ ಪ್ರಮುಖರು ವಿನಯದಿಂದ ಅವರ ಪರಾಂಬರಿಕೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಕೆಲವರು ಸತ್ತ ಕುರಿಗಳನ್ನು ಹೊತ್ತು ತರುತ್ತಿರುವದನ್ನು ಕಂಡು ವಿಚಾರಿಸಿ ಗುರುಮಂತ್ರ ಭಸಿತದ ಪ್ರಭಾವದಿಂದ ಅವುಗಳನ್ನು ಬದುಕಿಸಿರುವ ಮಹಿಮೆಯನ್ನು ಕಂಡ ಆ ಪ್ರಮುಖರು ಇವರು ಇರುವದಕ್ಕೆಲ್ಲಾ ಸಿದ್ಧತೆಗಳನ್ನು ಒದಗಿಸಿ ಪೂಜ್ಯ ಭಾವನೆಯಿಂದ ನೋಡಿಕೊಳ್ಳುತ್ತಿರುವಾಗ ಬೀರೇಶನು ಬೇಡವೆಂದರೂ ಕೇಳದೆ ಅಕ್ಕಮ್ಮನಿಂದ ಬಿಲ್ಲನ್ನು ತರಿಸಿಕೊಂಡು ಬಾಣವೆಸೆಯುತ್ತಾ ವಿನೋದವನ್ನು ನೀಡುತ್ತ ಇರುವಾಗ ಒಂದು ದಿವಸ ನೀರು ತರುತ್ತಿದ್ದ ಬಹು ಜನ ಹೆಣ್ಣುಮಕ್ಕಳ ಕೊಡಗಳಿಗೆ ಎಲ್ಲವಕ್ಕೂ ಒಮ್ಮೆಗೆ ರಂಧ್ರಗಳಾಗುವಂತೆ ಬಾಣವನ್ನು ಎಸೆಯುವನು. ಇದರಿಂದ ಹೆಣ್ಣು ಮಕ್ಕಳು ತಾಯಿ ತಂದೆಗಳ ಗುರುತರಿಯದಂತಿರುವ ಪೋರನೇ ಎಂದೆಲ್ಲಾ ಕುಂದಿಟ್ಟು ನುಡಿಯಲಾಗವರ ಕೊಡಗಳ ರಂಧ್ರಗಳೆಲ್ಲಾ ಮುಚ್ಚುವಂತೆ ಮಯಣದ ಬಾಣವೆಸೆದು ಆಗ್ರಹಗೊಂಡ ಮನೆಗೆ ಬರುವನು.

ಬಳಿಕ ಅಕ್ಕಮ್ಮನಿಗೆ ತನ್ನ ತಂದೆ ತಾಯಿಗಳಾರು ಎಂದು ಕೇಳಿ ತನ್ನ ಪೂರ್ವದ ವೃತ್ತಾಂತವನ್ನು ತಿಳಿದುಕೊಂಡು ತನ್ನ ಸೋದರ ಮಾವನಾದ ವೈಕುಂಠಪುರದರಸ ಹರಿದೇವನ ಮೇಲೆ ಕೋಪದಿಂದ ಅವನು ಕುವರಿ ಕನ್ನಿಕಾಮಾಲಿಯನ್ನು ತರುವೆನೆಂದು ಶಪಥ ಮಾಡಿ ಹೊರಟು ಬಂದು ಪರೋಕ್ಷವಾಣಿಯ ಗುರುವಿನ ವಾಣಿಯಂತೆ ಬಳಿಗಾರನ ವೇಷವನ್ನು ತೊಟ್ಟುಕೊಂಡು ಕನ್ನಿಕಾಮಾಲೆಯ ಅಂತಃಪುರವನ್ನು ಹೊಕ್ಕು ಆಕೆಯೊಡನೆ ಮಾತಾಡಿ ಬಂದು ಪುನ: ಇನ್ನೊಂದು ದಿವಸ ಜವಳಿ ವ್ಯಾಪಾರಿಯ ವೇಷದಿಂದ ಬಂದು ಕಂಡಾಗ ರೇವಣಸಿದ್ದೇಶ್ವರ ಗುರುವರನು ಅಲ್ಲಿಗೆ ದಯಮಾಡಿಸಿ ಮುಂದಿನ ಆಗಮಗಳನ್ನೆಲ್ಲಾ ಸೂಚಿಸಿ ಅಲ್ಲಿಯೇ ಅವರಿಗೆ ಗಂಧರ್ವ ವಿವಾಹವನ್ನು ಮಾಡಿ ಆಶೀರ್ವದಿಸಿ ಅವರನ್ನು ಬೀಳ್ಕೊಡುವನು. ಬಳಿಕ ಬೀರೇಶನು ಗುರುವಿನ ಅಪ್ಪಣೆಯಂತೆ ರಾವುತರ ವೇಷದಿಂದ ಹರಿದೇವನೆಂಬುವ ಆ ಅರಸನನ್ನು ಕಂಡು ಮಾತೊಪ್ಪಿಸಿ ಅವನಿಂದಲೆ ಅಲ್ಲಿ ತಾಯದಲ್ಲಿದ್ದ ಪಂಚ ವರ್ಣದ ಕುದುರೆಯು ಮೀರಿದ ಕುದುರೆಯಾಗಿದ್ದು ಅದನ್ನು ಏರಿ ಸವಾರಿ ಮಾಡುತ್ತ ಎಲ್ಲರನ್ನು ಆಶ್ಚರ್ಯಗೊಳಿಸಿ ಅವರು

ನೋಡುತ್ತಿದ್ದಂತೆಯೆ ಕನ್ನಿಕಾಮಾಲಿಯ ಸೌಧವನ್ನು ಹೊಕ್ಕು ಆಕೆಯನ್ನು ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ರಾಜನಿಗೆ ಹೇಳುತ್ತಲೇ ಕನ್ನಿಕಾಮಾಲಿಯೊಡನೆ ತೀವ್ರಗಾಮಿಯಾಗಿ ಹೊರಡುವನು.

ನಂತರ ಅರಸನ ಅಪ್ಪಣೆಯಂತೆ ಹಿಂಬಾಲಿಸಿದ ಸೈನ್ಯದ ಹುರಿಯಾಳುಗಳೆಲ್ಲಾ ಆಗ್ರಹಗೊಂಡು ಪರಾಜಿತರಾಗಿ ಹಿಂದಿರುಗುವರು. ಅರಸನಿಗೆ ತಿಳಿದು ಅದು ಅದೃಷ್ಟವಿದೆಂದು ಸಮಾಧಾನಗೊಂಡು ಬೀರೇಶನು ಕನ್ನಿಕಾಮಾಲೆಯೊಡನೆ ಸುರಕ್ಷಿತವಾಗಿ ಬೆಳ್ಳಿಗುತ್ತಿಗೆ ಬಂದು ಅಕ್ಕಮ್ಮನಿಗೆ ನಮಸ್ಕರಿಸುವನು. ಅವರಿಗೆ ಆಕೆಯ ಆಶೀರ್ವದಿಸಿ, ಎಲ್ಲರೂ ಸಂತಸದಿಂದರುವರು.

**ಸಂಧಿ : ಹದಿಮೂರು**

ಶಿವಸಿದ್ಧ ಬೀರೇಶನು ಶಿವನನ್ನು ಧ್ಯಾನಿಸಲು ಇವನ ಧ್ಯಾನಕ್ಕೆ ಮೆಚ್ಚಿ ಪ್ರತ್ಯಕ್ಷನಾಗಿ ಇವನ ಬೇಡಿಕೆಯಂತೆ ಶಿಷ್ಯನನ್ನು ದೊರಕಿಸಲು ಹೇಳಿದಂತೆ ಶಿವಸಿದ್ಧ ಬೀರೇಶನು ಬ್ರಾಹ್ಮಿದೇವಿಯನ್ನು ಕಂಡು ಪ್ರಾರ್ಥಿಸುವನು. ಪ್ರಸನ್ನಳಾದ ಬ್ರಾಹ್ಮಿದೇವಿಯಿಂದ ಶಿಷ್ಯ ವೀರಮಾಳಿಂಗನ ಪೂರ್ವೇತಿಹಾಸವನ್ನು ಕೇಳಿ ದೇವಿಯಿಂದ ಅನುಗ್ರಹಿತನಾಗಿ ವೀರಮಾಳಿಂಗನ ನಿಜಸ್ಥಾನವಾದ ಬಿಲ್ವಾಡ ನಗರಿಗೆ ಬಂದು ಪರೋಕ್ಷವಾಗಿ ಗುರುವಿನ ಅಪ್ಪಣೆಯಂತೆ ಆ ಊರ ಜಲಮಾಯಿಯ ಕೆರೆಯ ಬಳಿ ಕಾದಿದ್ದು ತನ್ನ ಮಹಿಮೆಯ ಅತಿಶಯದಿಂದ ಆತನನ್ನು ಗೆದ್ದು ಕರೆದುಕೊಂಡು ಬಂದು ಶಿವನನ್ನು ಧ್ಯಾನಿಸಲು ಶಿವನ ಪ್ರತ್ಯಕ್ಷನಾಗಿ ನೀವಿಬ್ಬರು ಗುರುಶಿಷ್ಯರಾಗಿ ಅನ್ಯೋನ್ಯವಾಗಿ ಮಹಿಮೆಗಳನ್ನು ತೋರುತ್ತಾ ಭುವನೋದ್ಧಾರ ಕಾರ್ಯಗಳನ್ನು ಮಾಡುತ್ತಾ ಪ್ರಸಿದ್ಧರಾಗಿರಿ ನಿಮ್ಮ ಕಾರ್ಯಗಳು ಎಲ್ಲಾ ಸಿದ್ಧಿಸಲು ಎಂದು ಹರಸಿ ಅಂತರ್ಗತನಾಗುವನು.

ಬಳಿಕ ಇಬ್ಬರೂ ಮನೆಗೆ ಬಂದು ಅಕ್ಕಮ್ಮನಿಗೆ ವಂದಿಸಿ ನಡೆದ ಸಂಗತಿಯನ್ನೆಲ್ಲಾ ಅರಿಕೆ ಮಾಡಿಕೊಳ್ಳಲು ಅಕ್ಕಮ್ಮನು ಸಂತೋಷಗೊಂಡು ಹರಸಲು ನಮಸ್ಕರಿಸಿದ ಕನ್ನಿಕಾಮಾಲಿಗೆ ಶಿವಸಿದ್ಧ ಬೀರೇಶನು ಆಶೀರ್ವದಿಸಲಾಗಿ ಎಲ್ಲರೂ ಸಂತೋಷದಿಂದ ಇರುವರು.

**ಸಂಧಿ : ಹದಿನಾಲ್ಕು**

ಒಂದು ದಿವಸ ಶಿವಸಿದ್ಧ ಬೀರೇಶನು ಬೀದಿಯಲ್ಲಿ ನಡೆಯುತ್ತಿರುವಾಗ ಮದವೇರಿದ ಕೋಣವೊಂದು ಮೇಲೆ ಹಾಯ್ದು ಬರಲು ಹಿಂದಕ್ಕೆ ಅಟ್ಟಲು ಮಣಿಯದೆ ಮೀರಿ ಬಂದಾಗ ಗುರುಮಂತ್ರ ಖಡ್ಗದಿಂದ ಕೊಲ್ಲುತ್ತಾನೆ. ಕೋಣ ಬಿದ್ದೆಡೆಯಲ್ಲಿ "ಕೋಣನೂರಾಗ"ಲೆಂದೂ ಮುಂಡವು ಬಿದ್ದೆಡೆಯಲ್ಲಿ "ಮುಂಡುಗನೂರಾಗ"ಲೆಂದೂ ಆಶಿಸಿ ಮನೆಗೆ ಬಂದು ಈ ವಾರ್ತೆಯನ್ನು ತಿಳಿದ ಗುರುವರನು ಕಾಯ್ದನೆಂದು ಎಲ್ಲರೂ ಆನಂದಿಸುವರು. ಬಳಿಕ ಶಿವಸಿದ್ಧ ಬೀರೇಶನು ಶ್ರೀ ರೇವಣಸಿದ್ದೇಶ್ವರನನ್ನು ಧ್ಯಾನಿಸಲಾಗಿ ಪ್ರತ್ಯಕ್ಷನಾದ ಗುರುವರನು ಶಿವಸಿದ್ಧ ಬೀರೇಶನ ತೋರಿಕೆಯಂತೆ ತನಗೂ ಶಿಷ್ಯ ವೀರಮಾಳಿರಾಗನಿಗೂ ಆಶೀರ್ವದಿಸುತ್ತಾ ಭೂಮಿಯ ಉದ್ಧಾರಾರ್ಥವಾಗಿ ನೀವಿಬ್ಬರೂ

ಮಹಿಮೆಗಳನ್ನು ತೋರುತ್ತಾ ಪ್ರಸಿದ್ಧರಾಗಿರಿ ನಿಮ್ಮ ಕಾರ್ಯಗಳೆಲ್ಲಾ ಜಯಪ್ರದವಾಗಲಿ ಕೊನೆಗೆ ಶಿವಪುರಕ್ಕೆ ಹೋಗಿರೆಂದು ಸಂತೈಸಲು ನಮಸ್ಕರಿಸಿ ಶಿವಸಿದ್ಧ ಬೀರೇಶನ ಬೇಡಿಕೆಯಂತೆ ಶ್ರೀ ಗುರು ರೇವಣಸಿದ್ದೇಶ್ವರನು ಹಾಲುಮತದವರ ಮತ್ತು ವೇದೋಪನಿಷತ್ತುಗಳ ಆಧಾರಗಳಿಂದ ಸಾಂಗೋಪಾಂಗ ವಾಗಿ ತಿಳಿಸುತ್ತಾ ವೀರಗೊಲ್ಲಾಳನ ಕಥೆಯನ್ನು ಹೇಳಿ ಸಂತೈಸಲು ಕೇಳಿ ಭಕ್ತಿಪಾರವಶ್ಯದಿಂದ ಆನಂದಗೊಂಡ ಶಿವಸಿದ್ಧ ಬೀರೇಶನು ಸಾಷ್ಟಾಂಗವೆರಗಿ ಕೈಮುಗಿದು ಕೈಂಕರ್ಯದಿಂದ ನಿಂತಿರಲು ಬಳಿಕ ರೇವಣ ಗುರುವರನು ಅವನನ್ನು ಕುರಿತು "ಮಗನೇ ನಾವು ಮರ್ತ್ಯಕ್ಕೆ ಬಂದು ಹದಿನಾಲ್ಕುನೂರು ವರ್ಷಗಳಾದವು ಈಶ್ವರನ ಇಚ್ಛೆಯಂತೆ ನಾವಿನ್ನು ಆತನ ಸನ್ನಿಧಿಗೆ ತೆರಳುತ್ತೇವೆ. ಗುರು ಶಿಷ್ಯರು ನಿವೇಲ್ಲರೂ ಸಂತಸದಿಂದ ಬಾಳಿರೆಂದು ಆಶೀರ್ವದಿಸಿ ಆ ಗುರು ಶಿಷ್ಯರನ್ನು ಬೀಳ್ಕೊಂಡು ರಂಬಾಪುರಿಯ ತಮ್ಮ ಮಠಕ್ಕೆ ಬಂದು ತಮ್ಮವರಗುರು ರುದ್ರಮುನಿ ಶಿವಾಚಾರ್ಯರಿಗೆ ವೀರ ಸಿಂಹಾಸನದ ಪಟ್ಟಾಭಿಷೇಕವನ್ನು ಮಾಡಿ ಪೀಠದ ಸಕಲ ಆಡಳಿತಗಳನ್ನು ತಿಳಿಸಿ, ಸಂತೈಸಿ, ಆರ್ಶೀವದಿಸಿ, ಆತನಿಂದ ಬೀಳ್ಕೊಂಡು ತಾವು ಉದಿಸಿದ ಕೊಲ್ಲಿಪಾಕಿಗೆ ಬಂದು ಶ್ರೀ ಸೋಮೇಶ್ವರ ಲಿಂಗದಲ್ಲಿ ದಿವ್ಯ ದೇಹಧಾರಿಗಳಾಗಿ ಐಕ್ಯವಾಗುವರು.

## ಸಂಧಿ : ಹದಿನೈದು

ಇತ್ತ ಶಿವಸಿದ್ಧ ಬೀರೇಶನೂ ವೀರಮಾಳಿಂಗನೂ ಸಹ ಶ್ರೀ ರೇವಣಸಿದ್ದೇಶ್ವರ ಗುರುವರನ ಧ್ಯಾನಮಾಡುತ್ತಾ ದೇಶಸಂಚಾರಾರ್ಥವಾಗಿ ಹೊರಟು ಹಾಲ್ಬಾವಿ ಎಂಬುವ ಗ್ರಾಮಕ್ಕೆ ಬರುವರು. ಗುರುವಿನ ಅಪ್ಪಣೆಯಂತೆ ಶಿಷ್ಯ ವೀರಮಾಳಿಂಗನು ಊರಿನೊಳಗೆ ಬಂದು ಬಡವಿ ಹೆಂಡೆ ದೇವಮ್ಮನ ಮನೆಯಲ್ಲಿ ಭಿಕ್ಷೆಯನ್ನು ಬೇಡಿ ಆಕೆ ನೀಡಿದ ಅಂಬಲಿಯನ್ನು ಸವಿದು ಸಂತುಷ್ಟನಾಗಿ ಆಕೆಗೆ ಹೊನ್ನಿನ ದೇವಮ್ಮನಾಗೆಂದು ಹರಸಿ ವರವನ್ನು ಕೊಟ್ಟು, ಬಂದು ಗುರುವಿಗೆ ಅರಿಕೆ ಮಾಡಲೆಂದು ಸಮ್ಮತಿಸದಿದ್ದರೂ ಮಿಂಚಿದ್ದಕ್ಕೆ ಯತ್ನವಿಲ್ಲವೆಂದು ಸಮ್ಮತಿಸಲು ಆಕೆಯು ಐಶ್ವರ್ಯದಿಂದ ತುಂಬಿ ಹೆಂಡೆದೇವಮ್ಮನ ಬದಲು ಹೊನ್ನಿನ ದೇವಮ್ಮನಾಗುವಳು. ಆಗ ಈ ಗುರು ಶಿಷ್ಯರು ಕೂಡಿ ಹೊರಟು ಅನಂತಾನಂತ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ಪುನ: ಹಾಲ್ಬಾಬಿ ಗ್ರಾಮಕ್ಕೆ ಬಂದು ಗುರುವಿನ ಪ್ರಾಣಿಯಂತೆ ಹೊನ್ನಿನ ದೇವಮ್ಮನ ಮನೆಗೆ ಹೋಗಿ ಭಿಕ್ಷೆ ಬೇಡಲು ಹೊನ್ನಿನ ದೇವಮ್ಮ ಮದದಿಂದ ಇವನನ್ನು ತಿರಸ್ಕರಿಸುತ್ತಾಳೆ ಆಗ ಇದನ್ನರಿತ ಗುರುವು ಕೋಪಗೊಂಡು ಶಾಪ ಕೊಡಲು ಆಕೆಯ ಐಶ್ವರ್ಯವೆಲ್ಲಾ ಹೋಗಿ ಮೊದಲಿನಂತೆ ಹೆಂಡೆದೇವಮ್ಮನಾಗುತ್ತಾಳೆ. ಇವರು ಮರಳಿ ಬೆಳ್ಳಿಗುತ್ತಿ ಗ್ರಾಮಕ್ಕೆ ಬಂದು ಅಕ್ಕಮ್ಮ ಕುಳಾಮಾಲಿಯರೊಡನೆ ಸಂತಸಗೊಂಡಿದ್ದು ಬಳಿಕ ಇವರನ್ನು ಕರೆದುಕೊಂಡು ಸುಕ್ಷೇತ್ರಗಳನ್ನು ನೋಡುತ್ತಾ ಬಂಕಾಪುರಕ್ಕೆ ಬಂದು ಹಿಂದೆ ತಾನು ಶಿವಪದ್ಮಾವಚಾರದಲ್ಲಿಕುದಯ ರಕ್ಕಸಿಯನ್ನು ಕೊಂದು ಮಾಡಿಟ್ಟಿದ್ದ ಬಾವನ್ನ ಬಿರುದುಗಳನ್ನಿವರಿಗೆರ್ಪಿಸಿದ ಬಂಕಣ್ಣನಿಗೆ ಕೈಲಾಸ ಪ್ರಾಪ್ತಿಯಾಗುವದು.

ಇವರು ಬಿರುದುಗಳನ್ನು ಹೊಂದು ಮುಂದಕ್ಕೆ ನಡೆದು ಕೊಲ್ಲಿಪಾಕಿಯ ಪುರಕ್ಕೆ ಬಂದು ತಮ್ಮ ಗುರು ರೇವಣಸಿದ್ದೇಶ್ವರನು ಐಕ್ಯಗೊಂಡಿದ್ದ ಸೋಮೇಶ್ವರ ಲಿಂಗದ ಆಲಯವನ್ನು ಹೊಕ್ಕು ಸಾಷ್ಟಾಂಗವೆರಗಿ ಆನಂದಿಸಿ ಆ ಊರಿನೊಳಗೆ ಹೋಗುವರು.

ಅಲ್ಲಿ ಕುರುಬರಿಗೆ ಒಡೆಯನಾಗಿದ್ದ ಭೂತಾಳ ಸಿದ್ದೇಂದ್ರನೆಂಬುವನ ಸತ್ತ ಮಗನನ್ನು ಬದುಕಿಸಿ ಅವರಿಂದ ಸನ್ಮಾನಿತನಾದ ಬೀರೇಶನು ತನ್ನ ಬಿರುದುಗಳನ್ನು ಮೆರೆಸುವಂತೆ ಅಪ್ಪಣೆ ಇತ್ತು ಅವರಿಂದ ಆ ರೀತಿ ಮಾಡಿಸುವಿಕೆ ಮತ್ತು ಅಲ್ಲಿಂದ ಬಿರುದುಗಳೊಂದಿಗೆ ಹೂವಿನೂರೆಂಬ ಪಟ್ಟಣಕ್ಕೆ ಬಂದು ಆ ಪುರದ ಅರಸ ಭೋಜೇಂದ್ರ ಭೂಪಾಲನೆಂಬುವನ ಮಗನನ್ನು ಬದುಕಿಸಿ ಅವನಿಂದ ಸನ್ಮಾನಿತನಾಗಿ ಅವನ ಕೋರಿಕೆಯಂತೆ ರಾಜಾಶ್ರಯದಿಂದ ಕಟ್ಟಲ್ಪಟ್ಟ ದಿವ್ಯತರವಾದ ಮಠದಲ್ಲಿ ಬಿರುದುಗಳಿಂದ ಮೆರೆಯುತ್ತ ವೈಭವದಿಂದ ಇದ್ದನು.

ಇತ್ತ ಶಿಷ್ಯ ವೀರಮಾಳಿಂಗ ಸೇವಾಸಕ್ತಿಗೆ ಮೆಚ್ಚಿದ ಶಿವಸಿದ್ಧ ಬೀರೇಶನು ಮಠದ ಸೇವಾಪ್ರಭಾವದ ಮಹಾಶಕ್ತಿಯನ್ನು ಜಗಕ್ಕೆ ತೋರಿಸಬೇಕೆಂದು ಇಚ್ಛಿಸಿ ಕಲಕದ ಜಲ ತುಂಬಿ ಮುಟ್ಟದ ಪುಷ್ಪಗಳನ್ನು ತಂದು ಪೂಜಿಸಬೇಕೆಂದು ಕೊಟ್ಟ ಅಪ್ಪಣೆಯಂತೆ ವೀರಮಾಳಿಂಗನು ಪಾಂಡ್ರಕೋಟೆಗೆ ತೆರಳುವನು. ಶಿಷ್ಯನ ಪರೀಕ್ಷೆ ಮಾಡುವದಕ್ಕಾಗಿ ಬೀರೇಶನು ವೇಷ ಮರೆಮಾಡಿಕೊಂಡು ದಾರಿಗೆ ಅಡ್ಡಬಂದು ಪಾಂಡ್ರಕೋಟೆಗೆ ಹೋಗಿ ಬರಲು ಇರಬಹುದಾದ ಗಂಡಾಂತರಗಳ ಬಗ್ಗೆ ಹೆದರಿಸುವನು. ಆದರೆ ಗುರುವಿನ ಗುರುತನ್ನು ಅರಿಯದೆ ಗುರುವಾಜ್ಞೆ ಮೀರಿ ನಡೆಯಲಾರೆನೆಂದು ಹೇಳಿ ಹೊರಟು ಇದ್ದ ಗಂಡಾಂತರಗಳನ್ನು ಗುರುನಾಮ ಸ್ಮರಣೆಯಿಂದ ಜಯಿಸಿ ಅವುಗಳನ್ನು ತೆಗೆದುಕೊಂಡು ಸುರಕ್ಷಿತವಾಗಿ ಗುರುವಿನ ಬಳಿ ಬರುವನು.

ಇವನ ಶ್ರದ್ಧಾಭಕ್ತಿಗೆ ಆನಂದಗೊಂಡ ಗುರು ಬೀರೇಶನು ತನ್ನ ಇನ್ನುಳಿದ ಶಿಷ್ಯರಿಗೆಲ್ಲಾ ಈತನ ಶ್ರದ್ಧೆಯನ್ನು ಕಲಿಸುವ ನಿಮಿತ್ತವೋ ಏನೋ ಎಂಬುವಂತೆ ಮಠದಲ್ಲಿರಲು ಅರಸುತ್ತಾ ಬಂದ ಶಿಷ್ಯ ವೀರಮಾಳಿಂಗನು ನೋಡುತ್ತಿದ್ದಂತೆಯೇ ಸರ್ಪಾಕೃತಿಯಿಂದ ಹುತ್ತವನ್ನು ಸೇರಲು ಪಶ್ಚಾತ್ತಾಪ ಪಡುತ್ತಾರೆ. ಧ್ಯಾನಿಸಲು ಆ ಪಶ್ಚಾತ್ತಾಪಕ್ಕೆ ಮರುಗಿ ಮೆಚ್ಚಿದ ಗುರು ಬೀರೇಶನು ಪ್ರತ್ಯಕ್ಷನಾಗಿ ಅವನೊಡನೆ ಮಠಕ್ಕೆ ಬಂದು ಅವನು ತಂದಿದ್ದ ವಸ್ತುಗಳಿಂದ ಪೂಜಿಸಿಕೊಂಡು ಆನಂದಿಸಿ ನೀನು ಶಿಷ್ಯೋತ್ತಮನಹುದೆಂದು ಆಶೀರ್ವದಿಸುವನು.

ಬಳಿಕ ಗುರುವಿನ ಅಪ್ಪಣೆ ಪಡೆದ ಶಿಷ್ಯೋತ್ತಮ ವೀರಮಾಳಿಂಗನು ದೇಶಸಂಚಾರ ಹೊರಟು ಕಲ್ಯಾಣಪುರವೆಂಬ ಪಟ್ಟಣಕ್ಕೆ ಬಂದು ಅಲ್ಲಿ ಮೆರವಣಿಗೆಯಿಂದ ತರುತ್ತಿದ್ದ ಸತ್ತ ಗೂಳಿ ಬಸವನ ಗುರುಮಂತ್ರ ಪ್ರಭಾವದಿಂದ ಬದುಕಿಸಿದನು.

ಈ ಸಂದರ್ಭದಲ್ಲಿ ತನ್ನೆದುರಿನಲ್ಲಿ ಅಕಾರ್ಯಗೈದವರಿಗೆ ನೀವು ಟಗರ ಜೋಗಿಗಳಾಗಿ ತಿರಿದುಂಡು ಸಂತೋಷವಿಲ್ಲದೆ ಬಾಳಲಿ ಎಂದು ಅತ್ತ ಶಾಪಕ್ಕೆ ಬೆದರಿದ ಅವರು ಅಪರಾಧ ಕ್ಷಮೆಯನ್ನು ಬೇಡಲಾಗಿ ಕರುಣೆಯಿಂದ ಅವರಿಗೆ ನೀವು ಕುರಿಗಳನ್ನು ಸಲಹುತ್ತಾ ಹಾಲುಮತದ ಬಿರುದುಗಳನ್ನು ಮೆರೆಸುತ್ತಾ ಬಾಳಿರಿ ನಿಮಗೆ ಸುಖವಾಗುವದೆಂದು ಹೇಳಿ ಅವರನ್ನು ಸಂತೈಸಲು ಸಂತಸಗೊಂಡ ಅವರು ವಂದಿಸಿ ಕೊಂಡಾಡುವರು (ಇದೇ ಬಗರು ಜೋಗಿಗಳ ಪೂರ್ವ ಇತಿಹಾಸ) ಇಂತಹ ಈ ಪವಾಡಕ್ಕೆ ಆಶ್ಚರ್ಯಚಕಿತರಾದ ಅಲ್ಲಿಯವರು ಕೊಂಡಾಡುತ್ತಿರಲು ಅವರಿಂದಲೂ ಮತ್ತು ಆ ಕಲ್ಯಾಣಪುರದರಸ ಬಸವರಾಜನಿಂದಲೂ ಸನ್ಮಾನಿತನಾಗಿ ಅವರ ಸಂತೈಸಿ ಗುರುವಿನ ಬಳಿಗೆ ಬರುವರು.

**ಉ. ನಂಜನಗೂಡು ಶ್ರೀಕಂಠಶಾಸ್ತ್ರಿಗಳ ರೇಣುಕವಿಜಯ ಪುರಾಣಂ**

ಶ್ರೀ ಕಾಶೀನಾಥ ಗ್ರಂಥಮಾಲೆಯನ್ನು ಸ್ಥಾಪಿಸಿ ವೀರಶೈವ ಧರ್ಮ, ಸಾಹಿತ್ಯ ಕುರಿತಂತೆ ಹತ್ತಾರು ಕೃತಿಗಳನ್ನು ಪ್ರಕಟಿಸಿದ ನಾಗನೂರು ಬೃಹನ್ಮಾಠಾಧ್ಯಕ್ಷರಾದ ವೇ.ಪಂ.ಕಾಶಿನಾಥಶಾಸ್ತ್ರೀಗಳು ಆಸ್ಥಾನ ವಿದ್ವಾಂಸರಾದ ನಂಜನಗೂಡು ಶ್ರೀಕಂಠಶಾಸ್ತ್ರೀಗಳಿಂದ 'ರೇಣುಕ ವಿಜಯ ಪುರಾಣ' ಎಂಬ ಕೃತಿಯನ್ನು ತಮ್ಮ ಮೈಸೂರಿನ ಶ್ರೀ ಪಂಚಾಚಾರ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಪ್ರಕಟಿಸಿದರು. ಈ ಕೃತಿ ೧೯೭೩ರ ಅವಧಿಯಷ್ಟೊತ್ತಿಗೆ ಮೂರನೇ ಆವೃತ್ತಿಯನ್ನು ಕಂಡಿದೆ. ೧/೮ ಕ್ರೌನ್ ಅಳತೆಯ ಈ ಕೃತಿ ಇಪ್ಪತ್ತು ಸಂಧಿಗಳನ್ನೊಳಗೊಂಡಿದೆ. ಗ್ರಂಥಕರ್ತರು ರೇಣುಕರು ಅಗಸ್ತ್ಯರಿಗೆ ಶಿವತತ್ವೋಪದೇಶ ಮಾಡುವುದು, ಶಂಕರಾಚಾರ್ಯರಿಗೆ ಚಂದ್ರಮೌಳೇಶ್ವರ ಲಿಂಗವನ್ನು ಅನುಗ್ರಹಿಸುವುದು ಹಾಗೆಯೇ ಅವರು ಭೂಸ್ಪರ್ಶದಿಂದ ರುದ್ರಮುನಿ ಶಿವಾಚಾರ್ಯರು ಜನಿಸುವುದು, ರುದ್ರಮುನಿಗಳಿಗೆ ಪಟ್ಟಾಭಿಷೇಕ ಮಾಡುವುದು ಕೊನೆಗೆ ಸೋಮನಾಥಲಿಂಗದಲ್ಲಿ ಐಕ್ಯವಾಗುವ ಸುಂದರವಾದ ಭಾವಚಿತ್ರಗಳನ್ನು ನೀಡಿದ್ದಾರೆ. ದೇವತಾಸ್ತೋತ್ರದ ಪೀಠಿಕಾ ಸಂಧಿಯಿಂದ ಆರಂಭವಾಗಿ ಮಂಗಳದೊಂದಿಗೆ ಮುಕ್ತಾಯವಾಗುವ ಈ ಕೃತಿಯು ಭಾಮಿನಿಷಟ್ಪದಿಯಲ್ಲಿ ರಚನೆಯಾಗಿದೆ.

**ಸಂಧಿ : ಒಂದು**

ಶ್ರೀಕಂಠಶಾಸ್ತ್ರೀಗಳು ಕಾವ್ಯ ರಚನೆಯ ಪೂರ್ವದಲ್ಲಿ ದೇವತಾಸ್ತುತಿ, ಪುರಾಣದ ಮಹತ್ವ ಹಾಗೂ ಅದರಿಂದ ಪಡೆಯುವ ಮುಕ್ತಿ ಸಾಧನೆಯನ್ನು ವರ್ಣಿಸುತ್ತಾರೆ.

**ಸಂಧಿ : ಎರಡು**

ಬೆಳಗುತ್ತಿರುವ ಹದಿನಾಲ್ಕು ಲೋಕಗಳಲ್ಲಿ ತಾನು ಆಧಾರವೆನ್ನುವಂತೆ ಮೂವತ್ತೆರೆಡು ಕೋಟಿ ಅಂಬರೆಗಳನ್ನು ಬಳಸಿ, ಸೊಗಯಿಸುತ್ತ ಆಕಾಶವನ್ನು ಸೋಂಕುವ ಮೇರುಪರ್ವತಗಳು ಈ ಪರ್ವತದ ಮಧ್ಯದಲ್ಲಿ ಶಾಂತಿ, ಸಂಯಮಕ್ಕೆ ಆಶ್ರಯವೆನಿಸಿದ ಗೌರಿಕಾಂತನು ಸುಖವಿಲಾಸದಿಂದ ಮೆರೆಯುತ್ತಿದ್ದನು. ಇದನ್ನೆಲ್ಲ ವೀಕ್ಷಿಸುತ್ತಿದ್ದ ಶಂಕರನು ಗಿರಿಜೆಗೆ ತೋರಿಸುತ್ತ ಕಣ್ ಸನ್ನೆಯಿಂದ ರೇಣುಕ ಗಣಾಧೀಶನನ್ನು

ತನ್ನ ಬಳಿಗೆ ಕರೆಯುವನು. ತಾಯಿಯನ್ನು ಕಂಡ ಮಗುವಿನಂತೆ ವಾರಿಧಿಯನ್ನು ಕಂಡ ಜಾತಕಪಕ್ಷಿಯಂತೆ ರೇಣುಕನು ಶಿವನ ಹತ್ತಿರ ಬರುತ್ತಾನೆ. ಆಗ ಶಿವನು ನಿನಗೊಂದು ಘನವಾದ ಕಾರ್ಯವನ್ನು ಹೇಳುವೆನು ನೀನು ಪೂರೈಸಿಕೊಡಬೇಕೆಂದು ಆದೇಶಿಸಿದನು. ಅದೇನೆಂದರೆ ಭೂಮಿಯಲ್ಲಿ ಶೈವಧರ್ಮಕ್ಕೆ ಕುಂದು ಬಂದಿರುವುದು ನಾಸ್ತಿಕರಿಂದ ಆಸ್ತಿಕ ಜನರಿಗೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸುವ ಸಲುವಾಗಿ ಧರ್ಮೋದ್ಧಾರಕ್ಕಾಗಿ ನೀನು ಭೂಮಿಯಲ್ಲಿ ಅವತರಿಸಬೇಕು. ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ಆವಿರ್ಭವಿಸು. ನನ್ನ ಕಾರುಣ್ಯವು ನಿನಗಿರುವುದು ಎಂದು ಹೇಳಿ ಅಪ್ಪಣೆ ಕೊಡಿಸಿದ.

**ಸಂಧಿ : ಮೂರು**

ಏರು ಜವ್ವನೆಯರು, ವಿದಗ್ಧೆಯರು, ಮುಗ್ದೆಯರು, ಅಂದಗಾತಿಯರು ಕಂಡು ಬರುತ್ತಿದ್ದಂತೆ ತಪಸ್ವಿಗಳು, ಯೋಗಿಗಳು, ಕವಿ, ಗಮಕಿ, ಶಿವಕಥಾ ವ್ಯಾಖ್ಯಾನಕಾರರು, ವೇದ ಅಧ್ಯಾಯಿಗಳು ಬಡವ ಬಲ್ಲಿದರು ತಮ ತಮಗೆ ಸರಿಕಂಡ ರೀತಿಯಲ್ಲಿ ಶಿವನ ಆರಾಧನೆಯಲ್ಲಿದ್ದರು. ಆಶ್ಚರ್ಯವೆನ್ನುವಂತೆ ಅಮರ ದುಂದುಭಿಗಳು ಸುಮಗಳು ಮಳೆಗರೆದವು. ಪ್ರಥಮನಾಥನ ಆಜ್ಞೆಯಂತೆ ರೇಣುಕನು ಕೊಲ್ಲಿಪಾಕಿಯ ಸೋಮೇಶ್ವರಲಿಂಗದಿಂದ ಆವಿರ್ಭವಿಸಿದನು.

**ಸಂಧಿ : ನಾಲ್ಕು**

ರೇಣುಕನು ಮಲಯಾದ್ರಿಗೆ ಹೋಗಿ ಅಗಸ್ತ್ಯನಿಗೆ ಶಿವ ತತ್ವವನ್ನು ಉಪದೇಶಿಸಿವನು ಮಲಯಾದ್ರಿಯಲ್ಲಿ ಕ್ರೂರ ಪ್ರಾಣಿಗಳಾದ ಸಿಂಹ, ವ್ಯಾಘ್ರ, ಜಂಬುಕ ಮುಂತಾದ ಅತ್ಯಂತ ಉಗ್ರವಾದ ವರಾಹಗಳು, ಪಿಕ ಶುಕನಗಳು ಮಲಯ ಪರ್ವತದ ದಕ್ಷಿಣದಲ್ಲಿ ಕಂಡುಬಂದವು. ತರುಲತೆಗಳು, ಕುಸುಮಗಳು ಸೊಬಗಿನಲಿ ಕಂಡವು ಶಿಷ್ಯರು ಕಂದಮೂಲವನ್ನು ಸೇವಿಸಿ ಶಿವನಾಮವನ್ನು ಹಾಡುತ್ತ ಗುರುಗಳ ಸೇವೆ ಮಾಡುತ್ತಿರುವರು. ಅಗಸ್ತ್ಯ ಮುನಿಯ ಆಶ್ರಮದ ವರ್ಣನೆ, ರೇಣುಕರು ಬರುವ ವರ್ಣನೆ ಹಾಗು ಅಗಸ್ತ್ಯರಿಗೆ ಶಿವತತ್ವೋಪದೇಶವನ್ನು ಮಾಡುತ್ತಾರೆ.

**ಸಂಧಿ - ಐದು**

ಶ್ರೀ ರೇವಣಸಿದ್ಧರು ಮಲಯಪರ್ವತದ ಮಧ್ಯಭಾಗದಿಂದ ಬಳಸುತ್ತ ರಂಭಾಪುರಿ ಪೀಠವನ್ನು ದರ್ಶನಮಾಡಿ ದಕ್ಷಿಣಕ್ಕೆ ಬರುತ್ತಾನೆ. ಅಲ್ಲಿ ರಾಮೇಶ್ವರನನ್ನು ಸ್ತುತಿಸಿ ಲಂಕೆಗೆ ಬರುತ್ತಾನೆ. ಲಂಕಾಧಿಪತಿಯಾದ ರಾವಣನ ತಮ್ಮನಾದ ವಿಭೀಷಣನು ಅಣ್ಣನ ಬಯಕೆಯಂತೆ ಮುಕ್ಕೋಟಲಿಂಗವನ್ನು ಸ್ಥಾಪಿಸಬೇಕೆಂಬುದನ್ನು ರೇವಣಸಿದ್ಧರಲ್ಲಿ ಅರುಹಿದನು. ಆತನ ಭಕ್ತಿ - ಪೂಜೆಗೆ ಪುಳಕಿತನಾದ ರೇಣುಕರು ನನ್ನಿಂದಾಗಬೇಕಾದ ಕಾರ್ಯವೇನೆಂದು ಕೇಳಿದರು. ಗುರುವೇ, ನನ್ನ ಅಣ್ಣನಾದ ರಾವಣನು ಮೂರು ಲೋಕಗಳಲ್ಲಿ ಗೆಲುವನ್ನು ಪಡೆದ ರಾವಣನು ಪರಮಶಿವಭಕ್ತನು ಆದರೆ ದುರಹಂಕಾರಿಯಾದ ಆತನಿಗೆ ಕೆಟ್ಟಕಾಲವು ಪ್ರಾಪ್ತವಾಯಿತು. ಸೀತಾಮಾತೆಗೆ ಮರುಳಾಗಿ ಮೋಸದಿಂದ

ಆಕೆಯನ್ನು ಅಪಹರಿಸಿಕೊಂಡು ಬಂದು ರಾಮನಿಂದ ಹತನಾದನು. ಆ ಸಂದರ್ಭದಲ್ಲಿ ನನ್ನನ್ನು ಕರೆದು ಈಗಾಗಲೇ ಆರುಕೋಟಿಲಿಂಗ ಪ್ರತಿಷ್ಠಾಪನೆಯನ್ನು ಮಾಡಿದ್ದೇನೆ. ಇನ್ನು ಮೂರುಕೋಟಿಲಿಂಗ ಪ್ರತಿಷ್ಠಾಪಿಸಬೇಕೆಂಬ ಸಂಕಲ್ಪವನ್ನು ಹೊಂದಿರುವೆ. ಹೀಗಾಗಿ ನನಗೆ ಸದ್ಗತಿಯಾಗಬೇಕಾದರೆ ನನ್ನ ಅಪೂರ್ಣವಾಗಿರುವ ಈ ಲಿಂಗ ಪ್ರತಿಷ್ಠಾಪನ ಕಾರ್ಯವನ್ನು ಪೂರೈಸಿಕೊಡಬೇಕೆಂದು ನನ್ನಿಂದ ಭಾಷೆ ತೆಗೆದುಕೊಂಡು ಪ್ರಾಣಬಿಟ್ಟನೆಂದು ರೇಣುಕರಲ್ಲಿ ನಿವೇದಿಸಿಕೊಂಡನು. ಮತ್ಸ್ಯೇಶ್ವರನ ಅರ್ಚನೆಯಿಂದ ಶಿವನು ಆತನ ರೂಪದಲ್ಲಿ ಬಂದು ನಿಮ್ಮ ಬರುವಿಕೆಯನ್ನು ತಿಳಿಸಿ ಅವರಿಂದ ನಿಮ್ಮ ಅಣ್ಣನ ಲಿಂಗಪ್ರತಿಷ್ಠಾಪನೆಯ ಕನಸು ನನಸಾಗುವುದೆಮಬ ಶಿವನ ಸೂಚನೆಯನ್ನು ರೇಣುಕರಲ್ಲಿ ಬಿನ್ನವಿಸಿಕೊಂಡನು. ಆತನ ಬಯಕೆಯಂತೆ ರೇಣುಕರು ಮುಕ್ಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸಿ ವಿಭೀಷಣನಿಗೆ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರ, ಶಿವಯೋಗ ಸಿದ್ಧಾಂತಗಳನ್ನು ಭೋದಿಸಿ ಕಾಶೀಕ್ಷೇತ್ರಕ್ಕೆ ಹೋಗುತ್ತಾರೆ.

**ಸಂಧಿ : ಆರು**

ಪರಮ ಮುಮುಕ್ಷುಗಳಾದ ನೆಲವೀಡು, ಶೈವಬ್ರಹ್ಮಚಾರಿಗಳ ವಿದ್ಯಾಕೇಂದ್ರವಾಗಿದ್ದ ಗುರುಕುಲ ಕಾಶೀಕ್ಷೇತ್ರಕ್ಕೆ ಆಗಮಿಸಿದ ರೇವಣಸಿದ್ಧರು ಅತ್ತ ಶಿವಧರ್ಮವನ್ನು ಧರೆಗೆ ತಿಳಿಸುವುದಕ್ಕೋಸ್ಕರ ಲಿಂಗೋದ್ಭವರಾಗಿದ್ದ ವಿಶ್ವಾರಾಧ್ಯರನ್ನು ಕಂಡು ಪರಸ್ಪರ ಧರ್ಮಸಮಾಲೋಚನೆ ನಡೆಸುತ್ತಾರೆ. ಅಲ್ಲಿಯ ಮಹರ್ಷಿಗಳಿಗೆ ಗಂಗಾವತರಣ ತತ್ವವನ್ನು ನಿರೂಪಿಸುತ್ತಾರೆ.

**ಸಂಧಿ : ಏಳು**

ರೇಣುಕರು ಕೇದಾರ ಕ್ಷೇತ್ರವನ್ನು ಪ್ರವೇಶಿಸಿ ಅಲ್ಲಿಯ ಮಹರ್ಷಿಗಳಿಗೆ ಮಹಿಷಾಕಾರವನ್ನು ಧರಿಸಿದ ಶಿವನ ಲೀಲೆಯನ್ನು ನಿರೂಪಿಸುತ್ತಾನೆ. ಹಿಮವತ್ಪರ್ವತದಲ್ಲಿ ಶ್ರೀಮದೇಕೋರಾಮಾರಾಧ್ಯರನ್ನು ಸಂದರ್ಶಿಸುತ್ತಾರೆ. ನಂತರದಲ್ಲಿ ಕಕುದ್ಗಿರಿಯ ಪೂರ್ವ ವೃತ್ತಾಂತವನ್ನು ಋಷ್ಯಶೃಂಗಮುನಿಗೆ ತಿಳಿಸುತ್ತಾರೆ. ರೇಣುಕರು ಜೊತೆಗೆ ಪರಶಿವನ ಇಪ್ಪತ್ತೈದು ಲೀಲೆಗಳಾದ ಚಂದ್ರಧರ, ಉಮಾಮಹೇಶ್ವರ, ವೃಷಭವಾಹನ, ತಾಂಡವೇಶ್ವರ, ಗಿರಿಜಾಕಲ್ಯಾಣ, ಭಿಕ್ಷಾಟನ, ಕಾಮದಹನ, ಕಾಲಸಂಹರ, ತ್ರಿಪುರಹರ, ಜಲಂಧರ, ಬ್ರಹ್ಮಶಿರಶ್ಛೇದ, ವೀರಭದ್ರ, ಶರಭ, ಅರ್ಧನಾರೀಶ್ವರ, ಕಿರಾತ, ಕಂಕಾಳಧರ, ಚಂಡೇಶಾನುಗ್ರಹ, ವಿಷಧರ, ವಿಷ್ಣುಚಕ್ರಪ್ರಧಾನ, ಗಣೇಶಬೋಧ, ಕುಮಾರೋತ್ಪತ್ತಿ, ಏಕಪಾದ, ಸುಖಾವಹಮೂರ್ತಿ, ದಕ್ಷಿಣಾಮೂರ್ತಿ, ಮಹಾಲಿಂಗೋದ್ಭವ ಲೀಲೆಗಳನ್ನು ಹಾಗೂ ಕೂಷ್ಮಾಂಡ ಪರ್ವತಕ್ಕೆ ನಂದಿಗಿರಿಯೆಂಬ ಹೆಸರು ಬಂದ ಕಾರಣವನ್ನು ತಿಳಿಸುತ್ತಾನೆ.

**ಸಂಧಿ : ಎಂಟು**

ಮಂಗಳವೇಡೆಯನ್ನು ವೀರಬಿಜ್ಜಳನು ಆಳುತ್ತಿರುವಾಗ ಅಷ್ಟಮದಗಳ ಅಹಂಕಾರ ಮೂರ್ತಿಯಾದ ಈತನು ಧರ್ಮಬಾಹಿರನಾಗಿದ್ದನು. ದಾನ, ಧರ್ಮ, ಕಾರುಣ್ಯಗಳನ್ನು ದಿಕ್ಕರಿಸಿ ಈತನಿಗೆ ಒಂದುದಿನ ಒಬ್ಬ ಭಿಕ್ಷುಕನಿಂದ ಜ್ಞಾನೋದಯವಾಗುತ್ತದೆ. ಬೇಡಿಬಂದ ಭಿಕ್ಷುಕನಿಗೆ ಕುದಿಯುವ ಪಾಯಸವನ್ನು ತಂದು ನೀಡಲು ಅಡಿಗೆಯವನಿಗೆ ಬಿಜ್ಜಳ ಆದೇಶಿಸುತ್ತಾನೆ. ಆಗ ಭಿಕ್ಷುಕ ಸುಡುವ ಕೈಯನ್ನು ಹೊನ್ನ ಕಂಭಕ್ಕೆ ಒರೆಸುತ್ತಾನೆ ಇದರಿಂದ ಅರಮನೆಯ ಬೆಂಕಿ ಹತ್ತಿಕೊಂಡು ಉರಿದುಹೋಗುತ್ತದೆ. ಪೂರ್ವಸುಕೃತದ ಬಲವನ್ನು ಚಿಂತಿಸಿದ ಭೂಪತಿ ಭಿಕ್ಷುಕ ವೇಷದಲ್ಲಿ ಬಂದವನು ತಿರುಕನಲ್ಲ, ಸಾಕ್ಷಾತ್ ಪರಶಿವನಿರಬೇಕೆಂದು ಅರಿತು ಆತನಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡು ಪರಿಪರಿಯಾಗಿ ಬೇಡಿಕೊಂಡನು. ಶಾಂತನಿರ್ಮಲನಾದ ಪರಮಮಂಗಳ ಮೂರ್ತಿಯಾದ ಗುರುರೇಣುಕರ ಸುಕೃತದಿಂದ ಮತ್ತೆ ಧನ, ಕನಕ, ಭಕ್ಷ್ಯ ಭೋಜ್ಯಗಳೆಲ್ಲ ರಾಶಿರಾಶಿಯಾಗಿ ಬಿದ್ದವು. ಪಶ್ಚಾತ್ತಾಪದಿಂದ ಅಹಂಕಾರವನ್ನು ನಿರಸನ ಮಾಡಿಕೊಂಡ ರಾಜನಿಗೆ ರೇಣುಕರು ಶಿವತತ್ವೋಪದೇಶವನ್ನು ನೀಡಿ ಮುಂದೆ ಶ್ರೀಶೈಲಕ್ಕೆ ಹೊರಡುತ್ತಾರೆ.

**ಸಂಧಿ : ಒಂಭತ್ತು**

ರೇಣುಕರು ಶ್ರೀಶೈಲದ ಪಂಡಿತಾರಾಧ್ಯರನ್ನು ದರ್ಶಿಸಿ, ಪಾತಾಳಗಂಗೆಯಲ್ಲಿ ಮಿಂದು ಮಲ್ಲಿಕಾರ್ಜುನನಿಗಭಿಷೇಕ ಮಾಡಿದರು. ಶಿವಸಾಮ್ರಾಜ್ಯರಾಸಕನೆನಿಪ ಬಿರುದನ್ನು ಶಿವನಿಂದಲೇ ಪಡೆದು ಪಂಡಿತಾರಾಧ್ಯರಿಂದೊಡಗೂಡಿದ ಮುನಿಜನರಿಗೆ ಶಿವತತ್ವ ಸಿದ್ಧಾಂತಗಳನ್ನು ಅರುಹಿದರು. ಚಂದ್ರಮೌಳಿಯನ್ನು ಕಾಣುವ ಆತುರದಲ್ಲಿದ್ದ ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೇಶ್ವರ ಲಿಂಗವನ್ನು ಅನುಗ್ರಹಿಸಿ ಶಿವತತ್ವವನ್ನು ಬೋಧಿಸುತ್ತಾರೆ.

**ಸಂಧಿ : ಹತ್ತು**

ಶ್ರೀಶೈಲದಲ್ಲಿ ಶಿವಯೋಗ ಸೌಖ್ಯದಿಂದ ಕೆಲದಿನ ಕಾಲ ಕಳೆದ ಬಳಿಕ ರೇಣುಕರು ಚೋಳದೇಶಕ್ಕೆ ಬರುತ್ತಾರೆ. ಕಾಳಹಸ್ತಿಯನ್ನು ಕಂಡು ಕಾಂಚಿಪುರಕ್ಕೆ ಯಾರು ಅರಿಯದ ರೀತಿಯಲ್ಲಿ ಮಾರುವೇಷದಲ್ಲಿ ಅಲೆಯುತ್ತಿರುತ್ತಾನೆ. ಕುರುಡನಂತೆ, ಮೂಕನಂತೆ, ಮರುಳನಂತೆ ಕಾಣುವ ರೇಣುಕರು ಜನರ ಪರಿಹಾಸ್ಯವನ್ನು, ಬೈಗಳನ್ನು, ಹೊಡೆತಗಳನ್ನು ತಿಂದನು. ಪುಂಡರೀಕಪುರದ ಪೂರ್ವವೃತ್ತಾಂತವನ್ನು ನಿರೂಪಿಸಿದ ರೇಣುಕರು ಕಾಂಚೀಪುರದಲ್ಲಿ ಅಲೆಯುತ್ತಿದ್ದಾಗ ಅಲ್ಲಿಯ ವರದರಾಜ ವಿಗ್ರಹದ ಶಿರ ಕಂಪನವಾಗುತ್ತಿತ್ತು. ಚೋಳ ಅರಸನು ದಾನ, ಜಪ, ತಪ, ಏನೆಲ್ಲ ಮಾಡಿದರೂ ಮೂರ್ತಿಯ ಶಿರಕಂಪನ ನಿಲ್ಲಲಿಲ್ಲ. ಚಿಂತೆಯಲ್ಲಿ ಮುಳುಗಿದ ಅರಸ ನಿದ್ರೆ ಹೋದನು. ಆಗ ಕನಸಿನಲ್ಲಿ ಶಿವ ಬಂದು ಕಂಚಿಯಲ್ಲಿರುವ ರೇಣುಕರಿಂದ ಈ ಕೆಲಸ ನೆರವೇರುವುದೆಂದು ಹೇಳುವನು. ಚೋಳರಾಜನು ತನ್ನ

ಚರರನ್ನು ಕಳಿಸಿ ಹಿಡಿದು ತರಲು ಹೇಳುವನು. ಇದರಿಂದ ವಿಫಲರಾದ ಚರರು ಆತನ ಮಹಿಮೆಯನ್ನು ರಾಜನಿಗೆ ವಿವರಿಸಿದರು. ಸ್ವತಃ ರಾಜನೇ ಕಂಚಿಪುರಕ್ಕೆ ಹೋಗಿ ತನ್ನ ತಪ್ಪನ್ನು ಒಪ್ಪಿಕೊಂಡು ರೇಣುಕರನ್ನು ಆದರದಿಂದ ವರದರಾಜನ ಆಲಯಕ್ಕೆ ಕರೆತಂದನು. ತೆರೆಯಮರೆಯಲ್ಲಿ ನಿಂತು ವಿಗ್ರಹದ ಶಿರವನ್ನು ಅಲ್ಲಾಡದಂತೆ ಮಾಡಲು ನೆರೆದ ಭಕ್ತ ಸಮೂಹವೆಲ್ಲ ಆಶ್ಚರ್ಯ ಚಕಿತರಾಗಿ ನೋಡಿದರು. ನಂತರ ಚೋಳರಾಜನಿಗೆ ಸಂಸಾರದ ನಿಸ್ಸಾರತೆಯನ್ನು ತಿಳಿಸಿ ಶಿವಭಕ್ತಿಯಸಾರವನ್ನು ಪಠಿಸಿದರೆ ಮುಕ್ತಿಗೆ ಸಾಧನವಾಗುವುದೆಂದು ಬೋಧಿಸಿದನು.

**ಸಂಧಿ : ಹನ್ನೊಂದು**

ಸಂಪತ್ತಿಗೆ ತವರುಮನೆಯಾದ ಮಾಸೂರಿನಲ್ಲಿ ಸೋಮಾರ್ಧಶೇಖರ ದೇವಸ್ಥಾನ ಪ್ರತಿದಿನವೂ ಅನೇಕ ಭಕ್ತಜನರು ಪೂಜೆಯಿಂದ ಶೋಭಿಸುತ್ತಿತ್ತು. ದೇವಸ್ಥಾನದ ಆಲದ ಮರವೊಂದು ಹಗಲಲ್ಲಿ ಆಯಾಸವನ್ನು ಪರಿಹರಿಸಿಕೊಳ್ಳುವವರಿಗೆ ಸಹಾಯಕವಾದರೆ, ಇರುಳಲ್ಲಿ ಅದರಲ್ಲಿದ್ದ ರಾಕ್ಷಸರೂಪಧಾರಿಗಳಾದ ಯಕ್ಷದಂಪತಿಗಳು ಪ್ರಯಾಣಿಕರನ್ನು ಹಿಡಿದುಕೊಂಡು ರಕ್ತ ಕುಡಿದು ಸಾಯಿಸುತ್ತಿದ್ದವಲ್ಲದೆ ಉಪಟಳವನ್ನು ಕೊಡುತ್ತಿದ್ದವು.

ಸಂಚಾರ ಮಾಡಿಕೊಂಡು ರೇಣುಕರು ಅಲ್ಲಿಗೆ ಬರುತ್ತಾರೆ. ಇರುಳಿನಲ್ಲಿ ದೇವಸ್ಥಾನದ ಮುಂದಿನ ಆಲದ ಮರದಡಿ ವಿಶ್ರಾಂತಿ ತೆಗೆದುಕೊಳ್ಳಲು ಬಯಸುತ್ತಾರೆ. ಪೂಜಾರಿಯಿಂದ ಯಕ್ಷದಂಪತಿಗಳ ರಾಕ್ಷಸ ಪ್ರವೃತ್ತಿ ಗೊತ್ತಾಗುತ್ತದೆ. ದಾನಿಗಳು ಅನ್ನಸತ್ರಗಳನ್ನು ವಿಶ್ರಾಂತಿ ಧಾಮಗಳನ್ನು ದೇವಸ್ಥಾನದಂತಹ ಪವಿತ್ರ ಸ್ಥಾನಗಳಲ್ಲಿ ನಿರ್ಮಿಸುವುದು ಅಪಚರಿತರಿಗೆ ಅನುಕೂಲವಾಗಲೆಂದು ಹೀಗಾಗಿ ನಾನು ಇಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಧರ್ಮಪ್ರತಿಷ್ಠಾಪನೆಗೆ ಬಂದ ರೇವಣಸಿದ್ಧರು ನಿದ್ದೆಯನ್ನು ಮಾಡುತ್ತಿರುವಂತೆ ನಟಿಸುತ್ತಾರೆ. ಕವಿದ ಕತ್ತಲೆಯಲ್ಲಿ ರಾಕ್ಷಸ ರೂಪದ ಯಕ್ಷದಂಪತಿಗಳು ಮರದಿಂದ ಇಳಿದುಬಂದು ರೇವಣಸಿದ್ಧರನ್ನು ಸಮೀಪಿಸುತ್ತವೆ. ರೇವಣಸಿದ್ಧರ ಫಾಲನೇತ್ರದ ದೃಷ್ಟಿಗೆ ಬಿದ್ದ ರಾಕ್ಷಸರ ಒಡಲು ಹೊಡೆದು ಸುಟ್ಟು ಭಸ್ಮವಾಗಿ ಎರಡು ಕಬ್ಬಿಣದ ಗುಂಡುಗಳಾದವು. ಬೆಳಗಿನ ಜಾವ ಮೃತ್ಯಂಜನ ಆರಾಧನೆಗಾಗಿ ಬಂದ ಜನರು ಈ ಎರಡು ಕಬ್ಬಿಣದ ಗುಂಡುಗಳನ್ನು ಕಂಡು ಬೆರಗಾದರು. ಶಿವಯೋಗಿಯ ದುಷ್ಟ ನಿಗ್ರಹ ವ್ರತವನ್ನು ಕೊಂಡಾಡಿದರು. ಅಲ್ಲಿ ನೆರೆದ ಭಕ್ತರಿಗೆ ಶಿವಮಂತ್ರದ ಮಹಿಮೆಯನ್ನು ಉಪದೇಶ ಮಾಡಿ ಆ ಎರಡು ಕಬ್ಬಿಣದ ಗುಂಡುಗಳನ್ನು ಹಿಡಿದುಕೊಂಡು ಹೊರಟನು.

ಕಬ್ಬಿಣದ ಗುಂಡುಗಳನ್ನು ತೆಗೆದುಕೊಂಡು ರೇವಣಸಿದ್ಧರು ಕಮ್ಮಾರನ ಬಳಿಗೆ ಬರುತ್ತಾರೆ. ಕಾಸಿ ಖಡ್ಗಗಳನ್ನು ಮಾಡಲು ನಿವೇದಿಸುತ್ತಾರೆ. ಅದರಂತೆ ಎರಡು ಗುಂಡುಗಳನ್ನು ಖಡ್ಗ ಮಾಡಲು ಕಾಸಿ ಬಡಿಯುತ್ತಿರುವಾಗ ಹೆಣ್ಣುರೂಪದ ಕಬ್ಬಿಣದ ಗುಂಡು ತಮ್ಮ ಪೂರ್ವ ವೃತ್ತಾಂತವನ್ನು ಹೀಗೆ

ಹೇಳುತ್ತವೆ. ಪುಣ್ಯಾರಣ್ಯರೆಂಬ ಅಡವಿಯಲ್ಲಿ ಸತಿಪತಿಗಳು ರತಿಕ್ರೀಡೆಯಲ್ಲಿ ತೊಡಗಿರುವಾಗ ಅಲ್ಲಿಯೇ ತಪಸ್ಸಿಗೆ ಕುಳಿತಿದ್ದ ಯತಿಯೋರ್ವನ ಶಾಪಕ್ಕೆ ಬಲಿಯಾಗಿ ರಾಕ್ಷಸರಾಗಿದ್ದೆವು. ತಪ್ಪನ್ನು ಮನ್ನಿಸಿ ನಮಗೆ ಮುಕ್ತಿಕೊಡೆಂದು ಬೇಡಲು ಮುಂದೆ ರೇವಣಸಿದ್ಧನೆಂಬ ಸಿದ್ಧಪುರುಷನಿಂದ ನಿಮಗೆ ಮೋಕ್ಷ ದೊರೆಯುತ್ತದೆಂದು ಯತಿಯು ಆಶೀರ್ವದಿಸಿದ್ದನ್ನು ಅರುಹಿದವು. ರೇಣುಕರು ಒಂದು ಖಡ್ಗವನ್ನು ಮಾಸೂರಿನ ಕೆರೆಯಲ್ಲಿ ಕೆಳಮುಖಮಾಡಿ ಇಟ್ಟು ಇನ್ನೊಂದನ್ನು ಉಜ್ಜಯನಿಗೆ ತೆಗೆದುಕೊಂಡು ಹೋದರು.

**ಸಂಧಿ : ಹನ್ನೆರಡು**

ಶೈವಗುರುವೆನಿಸಿದ ಶ್ರೀ ಮರಳಸಿದ್ಧರ ಸುಕ್ಷೇತ್ರವಾದ ಉಜ್ಜಯನಿಗೆ ರೇವಣಸಿದ್ಧರು ಆಗಮಿಸುತ್ತಾರೆ. ಪರಸ್ಪರ ಶಿವಯೋಗಿಗಳು ಶಿವತತ್ವ ಸಾಧನೆಯಲ್ಲಿ ತೊಡಗುತ್ತಾರೆ. ಉಜ್ಜಯನಿಯನ್ನು ವಿಕ್ರಮಾಂಕ ಅರಸನು ಆಳುತ್ತಿದ್ದನು. ಈತನು ಅತಿಶಯ ಧರ್ಮಪರನಾಗಿದ್ದು ದಯಾಳು ಗುರುಸೇವಾ ಧುರೀಣನಾಗಿದ್ದನು. ಒಂದು ದಿನ ಕನಸಿನಲ್ಲಿ ರೇವಣಸಿದ್ಧರ ಆಗಮನವನ್ನು ಕಂಡು ಸೈನ್ಯ ಸಮೇತನಾಗಿ ಅವರ ದರ್ಶನಕ್ಕೆ ಬರುತ್ತಾನೆ. ಭಕ್ತಿಭಾವಗಳಿಂದ ಗುರುಗಳ ಪಾದಗಳಿಗೆ ವಂದಿಸಿದ ಅರಸ ತನ್ನ ಅರಮನೆಗೆ ಸಡಗರದಿಂದ ಕರೆದೊಯ್ಯುತ್ತಾನೆ. ಗುರುವಿನ ಆಗಮನದಿಂದ ನನ್ನ ಪ್ರಜೆಗಳು ಕೃತಾರ್ಥರಾದರು, ನನ್ನ ರಾಜ್ಯ ಪಾವನವಾಯಿತು ಮುಂದಿನ ಕಾರ್ಯವನ್ನು ಅನುಗ್ರಹಿಸು ಸ್ವಾಮಿ ಎಂದು ಬಿನ್ನವಿಸಿಕೊಳ್ಳಲು ರೇವಣಸಿದ್ಧರು ಮಾಸೂರಿನಿಂದ ತನ್ನೊಂದಿಗೆ ತಂದಿದ್ದ ಖಡ್ಗದ ಪೂರ್ವವೃತ್ತಾಂತವನ್ನು ತಿಳಿಸಿ ಅದನ್ನು ವಿಕ್ರಮಾಂಕನಿಗೆ ಕೊಟ್ಟನು. ನಂತರ 'ತತ್ತ್ವಮಸಿ' ವಚನವನ್ನು ವಿಸ್ತರಿಸಿ ಹೇಳಿ ಶಿವಮಹಿಮೆಯನ್ನು ಉಪದೇಶಿಸಿ ಮುಂದೆ ಕೊಲ್ಲಾಪುರಕ್ಕೆ ತೆರಳುವರು.

**ಸಂಧಿ : ಹದಿಮೂರು**

ಧರ್ಮಬಾಹಿರನಾದ ಗೋರಕ್ಷನು ತನ್ನ ಸರಿಸಮಾನ ಯಾರು ಇಲ್ಲವೆಂದು ಹಮ್ಮಿನಿಂದ ಬಾಳುತ್ತಿದ್ದನು. ಇವನ ಉಪಟಳವನ್ನು ತಾಳಲಾರದೆ ಜನರು ತತ್ತರಿಸಿ ಹೋಗಿದ್ದರು. ಇದನ್ನರಿತ ಗುರು ರೇವಣಸಿದ್ಧರು ಕೊಲ್ಲಾಪುರಕ್ಕೆ ಆಗಮಿಸಿ ಭಿಕ್ಷುಕನ ರೂಪವನ್ನು ತಾಳಿ ಗೋರಕ್ಷಕನಲ್ಲಿ ಬರುತ್ತಾನೆ. ದಾರಿಯಲ್ಲಿ ಗೋರಕ್ಷನ ಶಿಷ್ಯರನ್ನು ಮುರಿದಿಕ್ಕಿ ರಾಣಿವಾಸಕ್ಕೆ ಬರುತ್ತಾರೆ. ತನ್ನ ಪತ್ನಿಯರೊಂದಿಗೆ ಗೋರಕ್ಷನು ಮಲಗಿರುವಾಗ ಹೊರಗಡೆಯಿಂದ ರೇವಣಸಿದ್ಧರು ಭಿಕ್ಷೆ ನೀಡಬೇಕೆಂದು ಕೂಗುತ್ತಾರೆ. ನಿದ್ರೆಯಲ್ಲಿದ್ದ ಗೋರಕ್ಷನು ಸಿಟ್ಟಿನಿಂದ ಪಕ್ಕದಲ್ಲಿದ್ದ ಖಡ್ಗವನ್ನು ಭಿಕ್ಷೆ ನೀಡೆಂದು ಹೆಂಡತಿಯ ಕೈಗೆ ಕೊಟ್ಟು ಕಳುಹಿಸಲು ಪ್ರಯತ್ನಿಸುತ್ತಾನೆ. ಅದಕ್ಕೊಪ್ಪದ ಆತನ ಹೆಂಡತಿ ಹಸಿದ ಅತಿಥಿಗಳಿಗೆ ಮನೆಯೊಳಗೆ ಕರೆದು ಉಪಚರಿಸುವುದೇ ಧರ್ಮವು ಅದನ್ನು ಬಿಟ್ಟು ಈ ರೀತಿ ಖಡ್ಗ ಕೊಡುವದು ಉಚಿತವಲ್ಲವೆಂದು ತಿಳಿಸಿ ಹೇಳುತ್ತಾಳೆ. ಮದೋಮತ್ತನಾದ ಗೋರಕ್ಷನು ಹಠ ಹಿಡಿದಾಗ ಲಕ್ಕಾದೇವಿಯು ಗುರುವಿನ

ಪಾದಕ್ಕೆ ನಮಸ್ಕರಿಸಿ ಪತಿಯ ಆಜ್ಞೆಯ ಮೇರೆಗೆ ಈ ವಿಲಕ್ಷಣವಾದ ಭಿಕ್ಷೆಯನ್ನು ನೀಡುತ್ತಿದ್ದೇನೆ. ದಯವಿಟ್ಟು ಸ್ವೀಕರಿಸಿ ಎಂದು ರೇವಣಸಿದ್ಧರ ಕೈಗೆ ಖಡ್ಗವನ್ನು ಕೊಡಲು ಆ ಖಡ್ಗವು ಗೋರಕ್ಷನ ಹೊಟ್ಟೆಯಲ್ಲಿ ಸಿಡಿಲಂತೆ ಮೂಡುತ್ತದೆ.

ಸಂಕಟವನ್ನು ತಾಳಲಾರದ ಗೋರಕ್ಷ ಕುಲದೇವತೆಯಾದ ಮಹಾಲಕ್ಷ್ಮಿಯನ್ನು ಒಲಿಸಿಕೊಂಡು ತನ್ನ ಸಂಕಟವನ್ನು ನಿವಾರಿಸಬೇಕೆಂದು ಹೆಂಡತಿಗೆ ತಿಳಿಸುತ್ತಾನೆ. ಆಗ ರಾಣಿಯು ದೇವಿಯನ್ನು ಪ್ರಾರ್ಥಿಸುತ್ತಾಳೆ. ಪ್ರತ್ಯಕ್ಷಳಾದ ಲಕ್ಷ್ಮೀದೇವಿ ರೇಣುಕರು ನಿಮ್ಮ ಸಂಕಟವನ್ನು ಪರಿಹರಿಸುವನೆಂದು ಅವನಲ್ಲಿ ಕರೆದುಕೊಂಡು ಬಂದು ಗುರುದೇವ ಗೋರಕ್ಷ ದುರಹಂಕಾರಿ ಆದರೆ ಆತನ ಪತ್ನಿ ಧರ್ಮನಿಷ್ಠಳು ಆದ್ದರಿಂದ ಈಕೆಯ ಸೌಭಾಗ್ಯವನ್ನು ಕರುಣಿಸೆಂದು ಹೇಳಲು, ಗುರು ರೇಣುಕರು ತನ್ನ ಹಸ್ತದಿಂದ ಗೋರಕ್ಷನ ಹೊಟ್ಟೆಯನ್ನು ಸ್ಪರ್ಶ ಮಾಡಲು ಹೊಟ್ಟೆಯೊಳಗಿನ ಖಡ್ಗ ನೆಲಕ್ಕೆ ಬೀಳುತ್ತದೆ. ಮನಪರಿವರ್ತಿತನಾದ ಗೋರಕ್ಷ ಗುರುವಿನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

**ಸಂಧಿ : ಹದಿನಾಲ್ಕು**

ಮಂಗಳವೇಡೆಯಲ್ಲಿ ಮಾಯೆ ಎನ್ನುವ ಸುವಿನೀತೆಯು ಮಕ್ಕಳಿಗಾಗಿ ರೇಣುಕರನ್ನು ಬೇಡಿ ಹೆಣ್ಣುಮಗುವಿಗೆ ತಾಯಿಯಾಗುತ್ತಾಳೆ. ಆ ಮಗುವಿಗೆ ರೇವಣಾಂಬೆ ಎಂದು ಹೆಸರಿನಲ್ಲಿ ಮಗು ಬೆಳೆಯುತ್ತದೆ. ಇತ್ತ ಮಂಗಳವೇಡೆಯನ್ನು ಆಳುತ್ತಿದ್ದ ಬಿಜ್ಜಳನಿಗೆ ಬಾಂಧವನೊಬ್ಬ ರೇವಣಸಿದ್ಧರು ಹುದುಗಿಸಿದ ಅಲಗಿನ ವಿಷಯವನ್ನು ತಿಳಿಸುತ್ತಾನೆ. ಹೇಗಾದರೂ ಮಾಡಿ ಖಡ್ಗವನ್ನು ದೊರಕಿಸಿಕೊಳ್ಳಬೇಕೆಂದು ಪ್ರಯತ್ನಿಸಿದ ಬಿಜ್ಜಳನು ಖಡ್ಗ ತಂದು ಕೊಟ್ಟವರಿಗೆ ಅರ್ಧರಾಜ್ಯ ಕೊಡುವುದಾಗಿ ಘೋಷಿಸುತ್ತಾನೆ. ಇದನ್ನು ತಿಳಿದ ದೇಶದ ಮೂಲೆ ಮೂಲೆಯಿಂದ ಅನೇಕ ಜನ ಮಂತ್ರಜ್ಞರು ಬಿಜ್ಜಳನ ಆಸ್ಥಾನಕ್ಕೆ ಆಗಮಿಸಿದರು. ಖರ್ಪರನೆಂಬ ಕೊಂಕಣಿಯ ಮಾಯಾ ಪರಿಣಿತನಾದ ಕುಟಿಲಸಿದ್ಧನು ಬಿಜ್ಜಳನಲ್ಲಿಗೆ ಬಂದು ಖಡ್ಗವು ವಶವಾಗಬೇಕಾದರೆ ಹನ್ನೆರಡು ಸಾವಿರ ಕನ್ಯೆಯರನ್ನು ಬಲಿಕೊಡಬೇಕೆಂದು ಹೇಳುತ್ತಾನೆ. ಬಿಜ್ಜಳನು ಅವರ ಹೇಳಿಕೆಯಂತೆ ಸೈನಿಕರನ್ನು ಕಳುಹಿಸಿ ಕನ್ಯೆಯರನ್ನು ಸೆರೆ ಹಿಡಿಯಲು ನಿರತನಾಗುತ್ತಾರೆ. ಇದರಲ್ಲಿ ಮಾಯಾದೇವಿಯ ಮಗಳು ರೇಣುಕಾಂಬೆಯನ್ನು ಹಿಡಿದು ತರುತ್ತಾರೆ. ತಾಯಿ ಮಾಯಾದೇವಿ ಮಗಳ ರಕ್ಷಣೆಗಾಗಿ ರೇವಣಸಿದ್ಧರನ್ನು ಧ್ಯಾನಿಸುತ್ತಾಳೆ. ರೇವಣಸಿದ್ಧರು ಆಕೆಯ ಮೊರೆಯನ್ನು ಕೇಳಿ ಅಲ್ಲಿಗೆ ಆಗಮಿಸುತ್ತಾರೆ. ರೇವಣಾಂಬೆಯನ್ನು ಬಿಡಿಸಿ ತರುವುದಾಗಿ ಅಭಯಹಸ್ತ ನೀಡಿ ಬಿಜ್ಜಳನಲ್ಲಿಗೆ ಹೋಗುತ್ತಾನೆ. ಪ್ರೀತಿಯಿಂದ ರಾಜನಿಗೆ ನೀನು ಹನ್ನೆರಡು ಸಾವಿರ ಕನ್ಯೆಯರನ್ನು ಬಲಿ ಕೊಡುವದರಿಂದ ಸ್ತ್ರೀಹತ್ಯೆ ದೋಷ ಅಂಟಿಕೊಳ್ಳುವದು ಎಂದು ಉಪದೇಶಿಸಿ ಖಡ್ಗವಿರುವ ನೀರಿನ ಮಡುವಿನ ಹತ್ತಿರ ರಾಜನನ್ನು ಕರೆದುಕೊಂಡು ಬರುತ್ತಾರೆ. ಖಡ್ಗವು ಹಾವಾಗಿ ಬುಸುಗುಟ್ಟುವದನ್ನು ಕಂಡು ಅರಸ ಬಿಜ್ಜಳ ಭಯಭೀತನಾಗುತ್ತಾನೆ. ಅದನ್ನು ರೇವಣಸಿದ್ಧರು ಹಿಡಿಯಲು ಅದು ಯಕ್ಷರೂಪವಾಗಿ ನಿಂತು ರೇವಣಸಿದ್ಧರಿಗೆ ಭಕ್ತಿಯಿಂದ ಕೈ ಮುಗಿಯುತ್ತದೆ. ಗುರುವೆ

ಅಂದು ನಾನು ಮಾಡಿದ ಅಪರಾಧಕ್ಕೆ ರಾಕ್ಷಸ ಜನ್ಮ ತಾಳಿ ನಿಮ್ಮ ಕಣ್ಣಿನ ಕಿಡಿಯಿಂದು ಸುಟ್ಟು ಖಡ್ಗವಾಗಿದ್ದೆ ಈಗ ನಿಮ್ಮ ಅನುಗ್ರಹದಿಂದ ಹಾವಾಗಿ ಪಾವನವಾದೆ ಎಂದು ತನ್ನ ಹಿಂದಿನ ಜನ್ಮ ವೃತ್ತಾಂತವನ್ನು ಹೇಳಿತು. ಇದನ್ನೆಲ್ಲಾ ಮೂಕವಿಸ್ಮಯನಾಗಿ ನಿಂತು ನೋಡುತ್ತಿದ್ದ ಬಿಜ್ಜಳನಿಗೆ ರೇವಣಸಿದ್ಧರು ಶೈವ ಧರ್ಮಮಾರ್ಗವನ್ನು ಉಪದೇಶಿಸಿ ರೇವಣಾಂಬೆಯನ್ನು ಮಾಯಾದೇವಿಗೆ ಒಪ್ಪಿಸಿ ಮಲಯಾಚಲಕ್ಕೆ ಹೊರಡುತ್ತಾರೆ.

**ಸಂಧಿ : ಹದಿನೈದು**

ಕೇರಳದ ಪಾಂಡ್ಯರೊಡನೆ ಸ್ವರ್ಗಕ್ಕೆ ಹೋದ ಚೋಳ ಅರಸನು ದೇವೇಂದ್ರನಿಗೆ ವಿನಯ ತೋರಿಸಲಿಲ್ಲವೆಂಬ ಕಾರಣದಿಂದ ಪುನ: ಅಮರಾವತಿಗೆ ಬರಲು ಚೋಳನಿಗೆ ಆದೇಶವಾಗುತ್ತದೆ. ಕೋಟೆಯ ಹೆಬ್ಬಾಗಿಲಿನ ಮೇಲುಗಡೆ ತನ್ನ ಹಾವುಗೆಗಳನ್ನು ದೇವೇಂದ್ರನು ಕಟ್ಟಿಸುತ್ತಾನೆ. ಇದನ್ನು ಕಂಡ ಚೋಳ ಭೂಪಾಲ ತಾನು ತಂದ ರಥವನ್ನು ಹೆಬ್ಬಾಗಿಲಿನ ಮೇಲಿಂದ ಹಾರಿಸಿ ದಾಟಿ ಬರುತ್ತಾನೆ. ಈ ಸಾಹಸವನ್ನು ಕಂಡು ಇಂದ್ರನು ಆತನನ್ನು ರಾಜೇಂದ್ರಚೋಳನೆಂಬ ಬಿರುದಿನಿಂದ ಸತ್ಕರಿಸಿ ಕಳುಹಿಸಿಕೊಡುತ್ತಾನೆ. ಚೋಳದೇಶಕ್ಕೆ ಹಿಂತುರಿಗಿದ ಅರಸನು ಹೆಂಡತಿಯ ಸೌಖ್ಯವನ್ನು ವಿಚಾರಿಸಲಾಗಿ ಆಕೆ ತನಗೆ ಪುತ್ರ ಸಂತಾನವಿಲ್ಲದ ನೋವನ್ನು ಪತಿಯಲ್ಲಿ ನಿವೇದಿಸಿಕೊಳ್ಳುತ್ತಾಳೆ. ಇದನ್ನು ಕೇಳಿದ ಅರಸ ರೇಣುಕರ ಅನುಗ್ರಹದಿಂದ ನಮಗೆ ಸಂತಾನಭಾಗ್ಯ ಫಲಿಸುತ್ತದೆ ಎಂದು ಸಮಾಧಾನ ಮಾಡುತ್ತಾನೆ.

ರಾಜ ದಂಪತಿಗಳಿಗೆ ಒಂದು ದಿನ ಕನಸಿನಲ್ಲಿ ಶಿವನು ಬಂದು ನಿಮಗೆ ಅನುರೂಪನಾದ ಮಗನು ಜನಿಸುವನೆಂದು ಹೇಳಿ ಮಾಯವಾಗುತ್ತಾನೆ. ಮುಂದೆ ಗುರುವಿನ ಕರುಣೆಯಿಂದ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಚೋಳ ರಾಜೇಂದ್ರನ ಪತ್ನಿ ಕುಶಶೇಖರಿ ಇಂತಹ ಪುತ್ರ ಸಂಪತ್ತನ್ನು ನೀಡಿದ ರೇಣುಕರನ್ನು ಕೊಂಡಾಡುತ್ತ ಸಂತೋಷದಿಂದ ರಾಜದಂಪತಿಗಳು ಕಾಲ ಕಳೆಯುತ್ತಿದ್ದರು.

**ಸಂಧಿ : ಹದಿನಾರು**

ಹೀಗೆ ಚೋಳರಾಜನು ಪುತ್ರೋತ್ಸವ ಸಂತಸದಲ್ಲಿ ಕಾಲ ಕಳೆಯುತ್ತ ಭಕ್ತಿಯಿಂದ ಶಿವನನ್ನು ನೆನೆಯುತ್ತ ಧರ್ಮಮಾರ್ಗದಲ್ಲಿ ರಾಜ್ಯವನ್ನು ಆಳುತ್ತಿರುವಾಗ ರೇವಣಸಿದ್ಧರು ಆಗಮಿಸುತ್ತಾರೆ. ಭಯಭಕ್ತಿಯಿಂದ ಸತ್ಕರಿಸುತ್ತಾರೆ. ಇದರಿಂದ ಸಂತುಷ್ಟರಾದ ರೇವಣಸಿದ್ಧರು ನಿಮ್ಮ ರಾಜ್ಯ ವಂಶ ಏಳ್ಗೆ ಆಗುವುದೆಂದು ಹರಸಿ ಭಕ್ತರ ದರ್ಶನಕ್ಕಾಗಿ ರಾಜ್ಯದಲ್ಲಿ ಪ್ರವಾಸ ಕೈಗೊಂಡರು. ದಾರಿಯುದ್ದಕ್ಕೂ ಋಷಿಮುನಿಗಳ ಶಿವಲಿಂಗ ಪ್ರತಿಷ್ಠಾನಗಳನ್ನು ಕಂಡ ರೇಣುಕರು ಚೋಳರಾಜನಿಗೆ ನಿನ್ನ ನಾಡು ಶಿವತತ್ವವನ್ನು ಸಾರುವ ಕೇಂದ್ರವಾಗಿ ಹೆಸರು ಮಾಡಲಿ ಮತ್ತು ನಿನ್ನ ಪುತ್ರ ರಾಜ್ಯಮಾನ್ಯತೆಯನ್ನು ಹೊಂದಿ ಧರ್ಮದಿಂದ ರಾಜ್ಯಭಾರ ಮಾಡಲೆಂದು ಹರಸುತ್ತಾನೆ.

**ಸಂಧಿ : ಹದಿನೇಳು**

ರೇವಣಸಿದ್ಧರು ಕಂಚಿಯ ಏಕಾಮ್ರನಾಥನ ನಿಲಯಕ್ಕೆ ಬಂದು ಅಲ್ಲಿಯ ಭಕ್ತಜನರಿಗೆ ಸಕಲ ಸಂಪತ್ತನ್ನು ದಯಪಾಲಿಸಿದನು. ನಂತರ ಏಕಾಮ್ರನಾಥನ ಮುಂದೆ ರೇವಣಸಿದ್ಧರು ನಿಂತು ಸಹಾಯಸ್ತಕಕ್ಕಾಗಿ ಬಿನ್ನಹಿಸಿಕೊಳ್ಳುತ್ತಾರೆ. ಆಗ ಏಕಾಮ್ರನಾಥನು ಪರಶಿವನ ಆಜ್ಞೆಯಂತೆ ನೀನು ಭೂಗರ್ಭದಿಂದ ರುದ್ರಮುನಿ ಶಿವಾಚಾರ್ಯನನ್ನು ಪಡೆದು ಆತನಿಗೆ ನಿನ್ನ ನಂತರದ ಧರ್ಮಪೀಠವನ್ನು ನೀಡಿ ಬಳಿಕ ಶಿವಲೋಕಕ್ಕೆ ಹೋಗುವಂತೆ ಅನುಗ್ರಹಿಸಿದನು. ಗುರುವಿನ ಅನುಗ್ರಹದಂತೆ ರೇವಣಸಿದ್ಧರು ಶಿವನ ಧ್ಯಾನದಲ್ಲಿರಲು ಮಹಾ ಅದ್ಭುತವೆಂಬಂತೆ ರುದ್ರಮುನಿ ದೇವನು ಭೂಗರ್ಭದಿಂದ ಉದಯಿಸುತ್ತಾರೆ. ಇದನ್ನು ಕೇಳಿದ ಚೋಳರಾಜನು ರೇವಣಸಿದ್ಧರ ಮಹಿಮೆಯನ್ನು ಕೊಂಡಾಡಿದನು.

**ಸಂಧಿ : ಹದಿನೆಂಟು**

ಗುರು ರೇಣುಕರ ತನ್ನ ಪುತ್ರನಾದ ರುದ್ರಮುನಿ ದೇವರಿಗೆ ಪಟ್ಟಾಭಿಷೇಕವನ್ನು ಮಾಡಿ, ಶಿವನ ಅಂಶವಾದ ನೀನು ಶಿವತತ್ವವನ್ನು ಬಿಡದೆ ಆಚರಿಸು ಎಂದು ರುದ್ರಮುನಿಗೆ ಉಪದೇಶಿಸಿ ರಾಜ ಪರಿವಾರದವರಿಂದ ಸಕಲ ರಾಜ ಮರ್ಯಾದೆಗಳನ್ನು ಬಿರುದು ಬಾವಲಿಗಳನ್ನು ರುದ್ರಮುನಿ ದೇವರಿಗೆ ಕೊಡ ಮಾಡಿಸಿದರು.

**ಸಂಧಿ : ಹತ್ತೊಂಬತ್ತು**

ರೇವಣಸಿದ್ಧರು ರುದ್ರಮುನಿ ದೇವರೊಡನೆ ನಾನಾದೇಶಗಳನ್ನು ಸಂಚರಿಸುತ್ತ ಹಾವಿನಾಳ ಗ್ರಾಮಕ್ಕೆ ಬರುತ್ತಾರೆ. ಆ ಊರಿನಲ್ಲಿ ಹಾವೊಂದು ವಿನಾ ಕಾರಣ ಪ್ರಾಣ ಕಳೆದುಕೊಂಡದ್ದನ್ನು ಕಂಡ ಕಲ್ಲಿನಾಥ ನೊಂದನು ಇದನ್ನು ಕಂಡ ಪರಶಿವನು ಹಾವಿಗೆ ಪ್ರಾಣವನ್ನು ದಯಪಾಲಿಸಿ ಆ ಪುರಕ್ಕೆ ಭುಜಗಾರಣ್ಯ ಎಂದು ನಾಮಕರಣ ಮಾಡಿದನು. (ರೂಢಿಯಲ್ಲಿ ಹಾವಿನಾಳ ಗ್ರಾಮವೆಂದು ಕರೆಯಲ್ಪಟ್ಟಿದೆ) ಮುಂದೆ ಹಾವಿನಾಳ ಕಲ್ಲಯ್ಯ ಪರಶಿವಲಿಂಗವನ್ನು ಭಕ್ತಿಯಿಂದ ಧ್ಯಾನಿಸುತ್ತ ರೇವಣಸಿದ್ಧರ ಬರುವಿಕೆಗಾಗಿ ಆತೊರೆಯುತ್ತಿದ್ದನು. ಆತನ ಅಭಿಲಾಷೆಯಂತೆ ರುದ್ರಮುನಿ ಶಿವಚಾರ್ಯರೊಂದಿಗೆ ಆಗಮಿಸಿದ ರೇವಣಸಿದ್ಧರು ಹಾವಿನಾಳ ಕಲ್ಲಯ್ಯನಿಗೆ ಶೈವಧರ್ಮ ತತ್ತ್ವೋಪದೇಶವನ್ನು ನೀಡಿ ಶ್ರೀಶೈಲಕ್ಕೆ ತೆರಳಿದರು.

**ಸಂಧಿ : ಇಪ್ಪತ್ತು**

ರೇವಣಸಿದ್ಧರು ಪುತ್ರ ರುದ್ರಮುನಿಯೊಡನೆ ಶ್ರೀಶೈಲಕ್ಕೆ ತೆರಳಿ ಮಲ್ಲಿಕಾರ್ಜುನನ ಮಹಿಮೆಯನ್ನು ರುದ್ರಮುನಿಗೆ ತಿಳಿಸಿದರು. ಮಲ್ಲಿಕಾರ್ಜುನರ ಆದೇಶದಂತೆ ರುದ್ರಮುನಿಯನ್ನು ರಂಭಾಪುರಿ ಪೀಠದಲ್ಲಿ ಕುಳ್ಳರಿಸಿ ಶೈವಧರ್ಮವನ್ನು ಉದ್ಧರಿಸುವ ಪುಣ್ಯದ ಕೆಲಸಕ್ಕೆ ಆತನನ್ನು ತೊಡಗಿಸಿ ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ರೇವಣಸಿದ್ಧರು ಐಕ್ಯರಾದರು.

## ೨. ಆನುಷಂಗಿಕ ಕೃತಿಗಳು

ಕನ್ನಡ ಸಾಹಿತ್ಯದಲ್ಲಿ ಒಬ್ಬ ಕಥಾನಾಯಕನನ್ನು ಕೇಂದ್ರವಾಗಿಟ್ಟುಕೊಂಡು ಇಡಿಯಾಗಿ ಒಂದು ಕೃತಿ ರಚನೆಯಾದಂತೆ ಆ ಕಥಾ ನಾಯಕನಿಗೆ ಪೂರಕವಾಗಿ, ಪೋಷಕವಾಗಿ ಅಲ್ಲದೆ ಸಾಂದರ್ಭಿಕವಾಗಿ ಹಲವು ಪಾತ್ರಗಳು ಹೆಣೆದುಕೊಂಡಿರುತ್ತವೆ. ಹೀಗಾಗಿ ಹರಿಹರ, ಚೆನ್ನಬಸವ, ಚತುರ್ಮುಖ ಬೊಮ್ಮರಸ, ಮಲ್ಲಣ, ಚೆನ್ನಬಸವಶಾಸ್ತ್ರಿ ಹಾಗು ಶ್ರೀಕಂಠಶಾಸ್ತ್ರೀಗಳಂತ ಕವಿಗಳು ರೇವಣಸಿದ್ಧರನ್ನು ಕುರಿತು ಅಖಂಡ ಕೃತಿಗಳನ್ನು ರಚಿಸಿದ್ದಾರೆ. ಹಾಗೆಯೇ ಕೆಲವು ಬೇರೆ ಬೇರೆ ಕಾವ್ಯಗಳಲ್ಲಿ ಸಾಂದರ್ಭಿಕವಾಗಿ ರೇವಣಸಿದ್ದೇಶ್ವರರ ವ್ಯಕ್ತಿತ್ವವನ್ನು ಚಿತ್ರಿಸುವುದು ತಿಳಿದುಬರುತ್ತದೆ. ಇಂತಹ ಕೃತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ "ಆನುಷಂಗಿಕ ಕೃತಿಗಳು" ಎಂಬ ಶೀರ್ಷಿಕೆ ಅಡಿಯಲ್ಲಿ ಚರ್ಚಿಸಲಾಗಿದೆ.

ಸಿದ್ಧನಂಜೇಶನ ಗುರುರಾಜ ಚಾರಿತ್ರ, ಶಾಂತಲಿಂಗದೇಶಿಕರ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ರಾಘವಾಂಕನ ಸಿದ್ಧರಾಮ ಚಾರಿತ್ರ, ವಿರುಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಷಡಕ್ಷರ ಕವಿಯ ರಾಜಶೇಖರ ವಿಳಾಸ ಹಾಗೂ ಬಸವರಾಜ ವಿಜಯಂ, ಸಂಪಾದನೆ ಪರ್ವತೇಶನ ಚತುರಾಚಾರ್ಯರ ಪುರಾಣ, ಗುರುಲಿಂಗ ದೇಶಿಕ ವಿರಚಿತಲಿಂಗಪುರಾಣಂ, ಪಾಲ್ಕುರಿಕೆ ಸೋಮನಾಥರ ಗಣಸಹಸ್ರ ನಾಮವಳಿ, ಹಾಲುಮತ ಪುರಾಣ, ಶಿವಯೋಗಿ ಶಿವಾಚಾರ್ಯರ ಶಿವಾಧಿತ್ಯ ಶಿಖಾಮಣಿ, ಕೊಡೇಕಲ್ ಪರಂಪರೆ ಸಾಹಿತ್ಯ, ಶಾಸನ ಸಾಹಿತ್ಯ, ಜನಪದ ಸಾಹಿತ್ಯ, ಸಮಕಾಲೀನ ಶರಣರ ವಚನಗಳು ನಂತರದ ಕಾಲಜ್ಞಾನ ವಚನಗಳು ಮುಂತಾದ ಕೃತಿಗಳಲ್ಲಿ ಸಾಂದರ್ಭಿಕವಾಗಿ ರೇವಣಸಿದ್ಧರ ಚರಿತ್ರೆಯನ್ನು ನಿರೂಪಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಈ ಕೃತಿಗಳನ್ನು ಸಮೀಕ್ಷಿಸುವದರ ಮೂಲಕ ರೇವಣಸಿದ್ಧರ ಚಾರಿತ್ರಿಕ ಬದುಕನ್ನು ಕಟ್ಟಿಕೊಡಲಾಗಿದೆ.

### ಅ. ರಾಘವಾಂಕನ ಸಿದ್ಧರಾಮ ಚಾರಿತ್ರ್ಯ

ಜನ ಬದುಕಬೇಕೆಂದು ಕಾವ್ಯ ರಚನೆಗೆ ತೊಡಗಿದ ಹಂಪೆಯ ರಾಘವಾಂಕನು ೧೩ನೆಯ ಶತಮಾನದಲ್ಲಿ ರಗಳೆ ಕವಿಯೆಂದು ಹೆಸರಾದ ಹರಿಹರನ ಸೋದರಳಿಯ. ಮಾವ ಹರಿಹರ ರಗಳೆ ಪ್ರಕಾರವನ್ನು ಹುಲುಸಾಗಿ ಬೆಳೆಸಿದಂತೆ ಅಳಿಯ ರಾಘವಾಂಕ ಷಟ್ಪದಿ ಪ್ರಕಾರದಲ್ಲಿ ಕಾವ್ಯ ರಚಿಸಿ ಷಟ್ಪದಿಬ್ರಹ್ಮನೆಂದು ಕೀರ್ತಿಶೇಷನಾಗಿದ್ದಾನೆ. ಶರಭಚಾರಿತ್ರ, ಸೋಮನಾಥ ಚಾರಿತ್ರ, ವೀರೇಶ ಚರಿತೆ ಮುಂತಾದ ಕೃತಿಗಳ ಜೊತೆಗೆ ಸಿದ್ಧರಾಮ ಚಾರಿತ್ರವನ್ನು ಬರೆದಿದ್ದಾನೆ.

ಈ ಕೃತಿಯಲ್ಲಿ ರೇವಣಸಿದ್ಧರ ವ್ಯಕ್ತಿತ್ವ ಕುರಿತು ಚಿತ್ರಿಸುವಾಗ ಬಿಜ್ಜಳನು ಆಪೇಕ್ಷಿಸಿದ ಮಾಸನೂರಿನ ಮಡುವಿನಲ್ಲಿ ನೆಟ್ಟ ಸುರಗಿಯನ್ನು ತೆಗೆದುಕೊಟ್ಟು, ಸುರಗಿಯ ಪಡೆಯುವದಕ್ಕಾಗಿ ತರುಣೆಯನ್ನು ಬಲಿಕೊಡುವ ಖರ್ಪರನ ಕುಟಿಲತೆಯನ್ನು ಬಯಲು ಮಾಡಿ ಸೊಲ್ಲಾಪುರಕ್ಕೆ ಪ್ರಯಾಣ ಬೆಳಸಿದ ರೇವಣಸಿದ್ಧರು ತನ್ನ ಶಿಷ್ಯರಿಗೆ ಆ ಕ್ಷೇತ್ರದ ಮಹತ್ವವನ್ನು ಅರಹುತ್ತ ನಂತರದಲ್ಲಿ ತನ್ನ

ಕಾಲಿನ ಹಾವುಗೆಗಳನ್ನು ಕಳೆದು ಬರಿಗಾಲಲ್ಲಿ ಸೊಲ್ಲಾಪುರದೊಳಗೆ ಪ್ರವೇಶ ಮಾಡುತ್ತಾನೆ. ಇದನ್ನು ಕಂಡ ಶಿಷ್ಯರು ಬರಿಗಾಲಲ್ಲಿ ಪುರ ಪ್ರವೇಶಿಸಲು ಕಾರಣವೇನೆಂದು ಕೇಳಿದಾಗ ಮುಂದೆ ಶಿವ ದಂಪತಿಗಳಾದ ಮುದ್ದುಗೌಡ ಮತ್ತು ಸುಗ್ಗವ್ವೆ ದಂಪತಿಗಳಿಗೆ ಸಿದ್ಧರಾಮ ಶಿವಯೋಗಿ ಜನಿಸುವ ವೃತ್ತಾಂತವನ್ನು ತಿಳಿಸಿ ಅವನಿಂದ ಲಿಂಗದ ಬೀಡಾಗಿ, ಪುಣ್ಯದ ಪುಂಜವಾಗಿ, ಮುಕ್ತಿ ಕ್ಷೇತ್ರವಾಗಿ ಮೆರೆಯುತ್ತದೆಯೆಂಬ ಭವಿಷ್ಯವಾಣಿಯನ್ನು ನುಡಿಯುತ್ತಾನೆ.

ಈ ಕವಿಯ ಮತ್ತೊಂದು ಕೃತಿಯಾದ ಸೋಮನಾಥ ಚಾರಿತ್ರದಲ್ಲೂ ರೇವಣಸಿದ್ಧರ ಜನನ ವೃತ್ತಾಂತ ಇದೇ ರೀತಿ ನಿರೂಪಿತವಾಗಿದೆಯಾದರೂ ಸುಗ್ಗವ್ವೆಯನ್ನು ಸಂದರ್ಶಿಸಿದ ರೇವಣರು ಆಕೆಯ ಗರ್ಭಕ್ಕೆ ನಮಸ್ಕರಿಸಿ ಮುಂದೆ ಜನಿಸಬಹುದಾದ ಸಿದ್ಧರಾಮ ಶಿವಯೋಗಿಯ ಮಹತ್ವವನ್ನು ಕೊಂಡಾಡುತ್ತಾನೆ.[೧]

### ಆ. ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ

ಹಂಪಿಯ ಹಿರಿಯ ಮಠಾಧ್ಯಕ್ಷನಾದ ವಿರುಪಾಕ್ಷಪಂಡಿತನು (ಕ್ರಿ.ಶ. ೧೫೫೦) ಹನ್ನೆರಡನೆ ಶತಮಾನದ ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನ ಚರಿತ್ರೆಯನ್ನು ಪುರಾಣವಾಗಿ ರಚಿಸಿದನು. ಮೂಲತ: ಮತ ಪ್ರಚಾರದಲ್ಲಿ ತೊಡಗಿದ ಧರ್ಮಾಧಿಕಾರಿಗಳಿಗೆ ಪುರಾಣ, ಕಿರ್ತನೆ ಹಾಗೂ ಹರಿಕಥೆಗಳಂತಹ ಮಾಧ್ಯಮಗಳು ಪ್ರಮುಖವಾಗಿದ್ದವು. ಹೀಗಾಗಿ ಚನ್ನಬಸವ ಪುರಾಣವನ್ನು ರಚಿಸಿದ ವಿರೂಪಾಕ್ಷಪಂಡಿತ ವೀರಶೈವ ಧರ್ಮದ ಪ್ರಸಾರವನ್ನು ಕೈಗೊಂಡನು. ಅರವತ್ಮೂರು ಸಂಧಿಗಳಲ್ಲಿ ೫೯೦೬ ಷಟ್ಪದಿಗಳಿಂದ ಕೂಡಿದ ಬೃಹತ್ ಕಾವ್ಯವನ್ನು ರಚಿಸಿದ ವಿರೂಪಾಕ್ಷ ಪಂಡಿತನು ಪಿಂಡೋತ್ಪತ್ತಿ, ಕರುಣಹಸುಗೆ, ದೀಕ್ಷಾವಿಧಾನ ಲಿಂಗಾರ್ಚನೆ, ಷಟ್ಸ್ಥಲಗಳ ನಿರ್ಣಯ ಮುಂತಾದ ವೀರಶೈವ ಆಚರಣೆಗಳನ್ನು ಪ್ರತಿಪಾದಿಸುವುದರ ಜೊತೆಗೆ ಅನೇಕ ಶಿವಶರಣರ ವಿಚಾರಗಳನ್ನು ಅವರ ಸಾಧನೆಗಳು ಕಟ್ಟಿಕೊಡುತ್ತಾನೆ. ಈ ಹಿನ್ನೆಲೆಯಲ್ಲಿ ಎರಡನೇ ಸಂಧಿ ೨೩ನೇ ಪದ್ಯದಲ್ಲಿ ರೇವಣಸಿದ್ಧರ ವ್ಯಕ್ತಿತ್ವವನ್ನು ಚಿತ್ರಿಸುತ್ತಾನೆ. ಶಿವನ ಒಡ್ಡೋಲಗದಲ್ಲಿ ಅಲಂಕೃತರಾಗಿದ್ದ ಶಿವಶರಣರನ್ನು ವರ್ಣಿಸುವಲ್ಲಿ ವಿರೂಪಾಕ್ಷ ಪಂಡಿತನಿಗೆ ರೇವಣಸಿದ್ಧನು ಕಂಡ ರೀತಿಯದು.

"ಆ ರುದ್ರನ ಸಮ್ಮುಖದಲ್ಲಿ ಮಹಾವೈಭವದಿಂದ ವಿಜಯ ವೀರಭದ್ರ, ನಂದಿ, ಕಾರ್ತಿಕೇಯ, ಭೃಂಗಿ, ವೀರನಾದ ವೀರಕ ಪರಾಕ್ರಮಿಯಾದ ರೇಣುಕ, ದಾರುಕ, ಕಂಸಾಳಧರ, ಗಣೇಶ ಮುಂತಾದವರು ಭೈರವ, ಚಂಡೇಶ, ಕೂಷ್ಮಾಂಡ, ಅಂಗಾರಕಧಾರ, ಗಗನಾಂಗ, ಧೋಮಾಂಗ, ಶೈಲಾಂಗ ಎಂಬ ಬಹಳ ಭಯಂಕರವಾದ ರೂಪವನ್ನು ಹೊಂದಿದ ಮಹಾಗಣಗಳು ಮೆರೆಯುತ್ತಿದ್ದವು ಅದರ ಆಶ್ಚರ್ಯವನ್ನು ಏನೆಂದು ಹೇಳಲಿ?"[೨]

ಶಿವನ ಒಡ್ಡೋಲಗವನ್ನು ವರ್ಣಿಸುವ ಕವಿ ವಿರೂಪಾಕ್ಷ ಪಂಡಿತನು ಅನೇಕ ಮಹಾಮಹಿಮರ, ಸಿದ್ಧಪುರುಷರ ಹೆಸರುಗಳಲ್ಲಿ ರೇಣುಕರನ್ನು ಉಲ್ಲೇಖಿಸುತ್ತ ಇವೆರಲ್ಲರೂ ಮಹಾಗಣಂಗಳಾಗಿ ಮೆರೆದವರು ಎಂದು ಬಣ್ಣಿಸಿದ್ದಾನೆ. ಹೀಗಾಗಿ ಮುಂದೆ ಚೆನ್ನಬಸವಣ್ಣನವರಂಥಹ ಷಟಸ್ಥಲಜ್ಞಾನಿಯ ಜನನಕ್ಕೆ ಕಾರಣವಾಗಬಹುದಾದ ಶುಭಸೂಚಿತ ಶಿವಸಭೆಯಲ್ಲಿ ರೇವಣಸಿದ್ಧರಿಗೂ ಒಂದು ಸ್ಥಳ ಮೀಸಲಾಗಿರುವದು ಇವರ ಗಣಪದವಿಯ ಮಹತ್ವ ತಿಳಿದುಬರುತ್ತದೆ.[೨]

## ೩. ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ

ಶಿವಕವಿ ಸಿದ್ಧನಂಜೇಶನು ಕ್ರಿ.ಶ. ೧೬೫೦ರಲ್ಲಿ ಜೀವಿಸಿದ್ದನೆಂಬುದನ್ನು ಕವಿಚರಿತೆಕಾರರು ಅಭಿಪ್ರಾಯ ಪಡುತ್ತಾರೆ. ತನ್ನ ಬಗ್ಗೆ ಕವಿ ಹೆಚ್ಚಿಗೆ ಏನನ್ನೂ ಹೇಳಿಕೊಳ್ಳದಿದ್ದರೂ ಈತನ ಕೃತಿಗಳಿಂದ ಸಂಸಾರ ಪರಿತ್ಯಾಗಿಯಾಗಿ ಹೂಲಿಯ ಬೃಹನ್ಮಠ ಅಧಿಪತಿಯಾಗಿ ವೀರಶೈವ ಧರ್ಮ ಸಾಹಿತ್ಯ ಮತ್ತು ಸಂಸ್ಕೃತಿಯ ಪರಿಚಲನೆಗೆ ಕಾರಣನಾಗಿದ್ದಾನೆ. ಡಾ. ಎಂ.ಎಂ.ಕಲಬುರ್ಗಿಯವರು ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಕೃತಿಯಲ್ಲಿ ಅಭಿಪ್ರಾಯ ಪಡುವಂತೆ ಬಸವರಾಜ ರಗಳೆಯನ್ನು ಹರಿಹರ, ಹರಿಹರನ ಮಹತ್ವವನ್ನು ರಾಘವಾಂಕ, ರಾಘವಾಂಕ ಚರಿತ್ರೆಯನ್ನು ಸಿದ್ದನಂಜೇಶನಂತಹ ಕವಿಗಳು ಬರೆಯುವದರ ಮೂಲಕ ವೀರಶೈವ ಕವಿಗಳು ಚರಿತ್ರೆ ನಿರ್ಮಾಣಕ್ಕೆ ಮುಂದಾದರು ಎಂದಿದ್ದಾರೆ.[೪] ವಿದ್ವಾಂಸರ ಈ ಮಾತನ್ನು ಗಮನಿಸಿದಾಗ ಧರ್ಮಪ್ರಚಾರವನ್ನು ತನ್ನ ಕಾವ್ಯದ ಗುರಿಯನ್ನಾಗಿ ಮಾಡಿಕೊಂಡ ಸಿದ್ದನಂಜೇಶ ಇನ್ನೊಂದು ಕಡೆ ಐತಿಹಾಸಿಕ ಕೃತಿ ನಿರ್ಮಾಣದಲ್ಲಿ ತೊಡಗಿರುವದು ಈತನಲ್ಲಿಯ ಇತಿಹಾಸ ಪ್ರಜ್ಞೆಗೆ ಸಾಕ್ಷಿಯಾಗಿದೆ. ಅದೇನೇ ಇದ್ದರೂ ತನ್ನ ಕಾವ್ಯದ ವಸ್ತು-ತಂತ್ರ-ತತ್ವವಿವೇಚನೆಗಳಲ್ಲಿ ವೀರಶೈವತ್ವವನ್ನು ಮೆರೆದಿದ್ದಾನೆ.

ಪ್ರಸ್ತುತ ಕೃತಿಯಲ್ಲಿ ವೀರಶೈವತತ್ವ ಹಾಗು ಶರಣಚರಿತ್ರೆಯನ್ನು ನಿರೂಪಿಸಲಾಗಿದೆ. ಹತ್ತಾರು ಶರಣರ ಜೀವನ ಸಾಧನೆಗಳನ್ನು ಪರಿಚಯಿಸುವ ಕವಿ ಸಿದ್ಧ ನಂಜೇಶನು ರೇವಣಸಿದ್ಧರನ್ನು ಕುರಿತಂತೆ ಆತನೊಬ್ಬ ಸಿದ್ಧಪುರುಷನಾಗಿ ತ್ರಿಕಾಲಜ್ಞಾನಿಯಾಗಿರುವಂತೆ ಚಿತ್ರಿಸಿದ್ದಾನೆ. "ಶಿವನ ಅಪ್ಪಣೆ ಪಡೆದು ರೇಣುಕ ಗಣನಾಥನು ಕೊಲ್ಲಿಪಾಕಿಯ ಶಿವಲಿಂಗದಿಂದ ಉದಯಿಸಿದನು. ಸಿದ್ಧಕುಲ ಚಕ್ರೇಶನೆನಿಸಿ ರೇವಣಸಿದ್ಧ ಗುರುಮೂರ್ತಿಯು ಜಗವನ್ನು ಪಾಲಿಸುತ್ತ ಲೀಲೆಯಿಂದೊಪ್ಪಿದನು ಎಲ್ಲ ದೇಶಗಳಲ್ಲಿ ಶೋಭಿಸುವ ದಿವ್ಯ ಕ್ಷೇತ್ರದ ಋಷಿಸಮೂಹಕ್ಕೆ ಇಷ್ಟಾರ್ಥ ಸಿದ್ಧಿಯನ್ನು ಕೊಟ್ಟನು. ವೇಶ್ಯೆಯಾದ ಮಾಯದೇವಿಯ ಮನೆಯಲ್ಲಿ ಸೇವಕನಾಗಿದ್ದು ಆಕೆಯಭಕ್ತಿಗೆ ಮೆಚ್ಚಿ ಪರುಷಲಿಂಗವನ್ನು ದಯಪಾಲಿಸಿದನು. ರಕ್ಕಸಿ ದಂಪತಿಗಳಾಗಿ ಹುಟ್ಟಿರುವ ತಗಣೆಗಳನ್ನು ಕೊಂದು ಸುರಗಿ ಮಾಡಿಸಿ ಮಡುವಿನಲ್ಲಿರಿಸಿದನು. ವಿಭೀಷಣನಿಗೆ ಒಲಿದು ಲಂಕೆಗೆ ಬಂದು ಮೂರು ಕೋಟಿ ಲಿಂಗಗಳನ್ನು ಸ್ಥಾಪಿಸಿದನು. ಅತಿ ಶೀಘ್ರದಲ್ಲಿ ಬಂದು ಕನ್ನೆಯರ ಪ್ರಾಣವನ್ನು ಉಳಿಸಿ ಚಾಲುಕ್ಯ ರಾಜನಿಗೆ ಸುರಗಿಯನ್ನು ತೆಗೆದುಕೊಟ್ಟನು ಅದನ್ನು ಹಿಡಿಯಲಾರದೆ ಭಯದಿಂದ ನಡುಗಲು ನಗುತ್ತ ಆ ಸುರಗಿಯೊಂದನ್ನು

ಕೊಂಡು ಮಡುವಿನಲ್ಲಿರಿಸಿದನು. ಸುರಗಿಯೊಂದನ್ನು ತಂದು ವಿಕ್ರಮನಿಗೆ ಕೊಟ್ಟನು. ಅಗಸ್ತ್ಯನಿಗೆ ನೂರೊಂದು ಸ್ಥಲವನ್ನು ತಿಳಿಸಿದನು ದೇಶಾಂತರ ಮಾಡುತ್ತ ಗೋರಖನ ಹೆಂಡತಿ ಕಠಾರಿಯನ್ನು ಭಿಕ್ಷೆಯನ್ನಾಗಿ ನೀಡಲು ರೇವಣಸಿದ್ಧನು ಅದನ್ನು ನುಂಗಿದನು. ಆಗ ಕಠಾರಿಯು ಸಿದ್ಧನ ಎದೆಯಲ್ಲಿ ಮೂಡಲು ಭಯದಿಂದ ರೇವಣಸಿದ್ಧನ ಅಡಿಗೆ ಎರಗಿದ ದಂಪತಿಗಳನ್ನು ಪೊರೆದನು. ಮುಂದೆ ಚಾಳುಕ್ಯನ ಅರಮನೆಗೆ ಬಂದು ಭಿಕ್ಷೆ ಬೇಡಲು ಕುದಿಯುವ ಹುಗ್ಗಿಯನ್ನು ಚಾಳುಕ್ಯನು ನೀಡಿಸಿದನು. ಆಗ ರೇವಣಸಿದ್ಧನು ಅದನ್ನು ಸೇವಿಸಿ ಮಡ್ಡಿ ಹತ್ತಿದ ಕೈಯ ಚಾವಡಿಯ ಕಂಭಕ್ಕೆ ಒರೆಸಲು ಓಲಗಶಾಲೆ, ಹಯ ಶಾಲೆಗಳು ನಿಮಿಷದಲ್ಲಿ ಸುಟ್ಟು ಬೂದಿಯಾದವು. ಚಾಳುಕ್ಯನು ಬೇಡಲು ಅವನ್ನೆಲ್ಲಾ ಮೊದಲಿನಂತೆ ಮಾಡಿದನು. ಒಂದು ಸೊಲಗ ಅಕ್ಕಿಯನ್ನು ತರಿಸಿ ಅನ್ನವನ್ನು ಮಾಡಿ ರಾಜ್ಯವನ್ನು ತಣಿಸಿದನು.

ಮುಂದೆ ಚಾಮಲವ್ವೆಗೆ ಅನುಗ್ರಹ ಮಾಡಿ ಸೊನ್ನಲಾಪುರ ಸಿದ್ಧರಾಮನ ಜನನವನ್ನು ತಿಳಿಸುವನು. ಕಲ್ಲಶೆಟ್ಟಿಯ ಗಾಣ ತಿರುಗಿಸಿ ಆತನಿಗೆ ಆತನ ಹೆಂಡತಿಗೆ ಆತನ ಎತ್ತಿಗೆ ಕಣ್ಣು ಕೊಟ್ಟನು. ಮುಂದೆ ವೈಷ್ಣವ ಚೋಳನ ನೂರೊಂದು ಸಮಯ ವಾದವನ್ನು ಗೆದ್ದು ತನ್ನ ನಿಜವೀರ್ಯದಿಂದ ವಿಷ್ಣು ಪ್ರತಿಮೆಯನ್ನು (ಧರ್ಮ) ಅಲ್ಲಾಡದಂತೆ ಮಾಡಿ ನಿಲ್ಲಿಸಿದನು. ಚೋಳ ರಾಜೇಂದ್ರ ಮೊದಲಾದ ಅರಸರ ಏಳುನೂರು ಕನ್ನಿಕೆಯರನ್ನು ಲಗ್ನವಾಗಿ ಲಿಂಗಸಂಗಿಯಾಗಿ, ಸರ್ವಸುಖಗಳನ್ನು ಅನುಭವಿಸಿ ತನ್ನ ಪತಿ ಸೌಂದರಿಯ ಉದರದಿಂದ ಹುಟ್ಟಿದ ರುದ್ರಮುನಿಯನ್ನು ಸಲಹಲು ಭೂದೇವಿಯ ಕೈಗೆ ಕೊಟ್ಟನು. ಸಾವಿರದ ನಾನೂರು ವರುಷ ಧರೆಯಲ್ಲಿ ಬಾಳಿ ಸಕಲರ ಪಾಲಿಸಿ ಭಕ್ತರ ಹೃತ್ಕಮಲವನರಳಿಸಿ, ಶ್ರೀಗುರು ರೇವಣಸಿದ್ಧ ಚಕ್ರೇಶನು ಲಿಂಗದಲ್ಲಿ ಐಕ್ಯನಾದನು.”[೫] ಹೀಗೆ ರೇವಣಸಿದ್ಧರ ಹುಟ್ಟಿನಿಂದ ಮೊದಲುಗೊಂಡ ಅವರ ಸಾಧನೆಗಳನ್ನು ಕೊನೆಯಲ್ಲಿ ಸೋಮೇಶ್ವರ ಲಿಂಗದಲ್ಲಿ ಐಕ್ಯವಾದ ಪರಿಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ”[೬] ಕವಿ ಸಿದ್ಧನಂಜೇಶ.

**ಈ. ಷಡಕ್ಷರಿ ಕವಿಯ ರಾಜಶೇಖರ ವಿಳಾಸ**

ಕ್ರಿ.ಶ. ೧೬೫೦ರಲ್ಲಿ ಬದುಕಿದ್ದ ಕವಿರಾಜಶೇಖರನಿಗೆ ಕನ್ನಡ ಸಾಹಿತ್ಯದಲ್ಲಿ ಬಹುದೊಡ್ಡ ಸ್ಥಾನವಿದೆ. ದನುಗೂರಿನ ಮಠಾಧಿಪತಿಯಾಗಿದ್ದ ಈತ ಕನ್ನಡ ಮತ್ತು ಸಂಸ್ಕೃತ ಎರಡರಲ್ಲೂ ಸವ್ಯಸಾಚಿ. ತನ್ನ ಬಾಲ್ಯವನ್ನು ಎಳಂದೂರಿನಲ್ಲಿ ಕಳೆದ ಈತನು ಸಂಸ್ಕೃತ ಕೃತಿಗಳಲ್ಲದೆ, ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ಬಸವರಾಜ ವಿಜಯಂ ಇತ್ಯಾದಿ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ನೀಡಿದ ಪಂಡಿತ ಕವಿ.

ಪ್ರಸ್ತುತ ರಾಜಶೇಖರ ವಿಳಾಸ ಸತ್ಯೇಂದ್ರಚೋಳನ ಕಥೆಯನ್ನು ನಿರೂಪಿಸುವದರ ಜೊತೆಗೆ ವೀರಶೈವ ಅಷ್ಟಾವರಣಗಳಲ್ಲಿ ಒಂದಾದ ಮಂತ್ರ ಮಹತ್ವವನ್ನು ತಿಳಿಸುತ್ತದೆ. ಅದಕ್ಕೂ ಮೊದಲು ಕವಿ ಷಡಕ್ಷರಿ ತನ್ನ ಗುರುಪರಂಪರೆಯನ್ನು ವಿವರಿಸುತ್ತ “ಕೊಲ್ಲಿಪಾಕಿ ಲಿಂಗೋದ್ಭವ ರೇಣುಕಾಚಾರ್ಯ

ಆತನ ಪುತ್ರ ನಿಗಮಾಗಮ ಶಾಸ್ತ್ರಪಾರಂಗತನಾದ ರುದ್ರಮುನೀಶ್ವರ ಆತನ ವಂಶದಲ್ಲಿ ಜನಿಸಿದವನು ಉದ್ಧಾನ ಶಿವಯೋಗಿ. ಆತನ ಹಸ್ತ ಕಮಲೋದ್ಭವ ಅನ್ನದಾನೀಶ ತದೀಯ ಕರಕುಂಬಜ ರೇವಣಸಿದ್ಧ ದೇಶಿಕ ಆತನ ಕರಕಂಜಾತ ಚಿಕವೀರದೇಶಿಕ ಚಿಕವೀರದೇಶಿಕನ ಕರತತ ಮಲೋದ್ಭವನು, ಷಡಕ್ಷರಿದೇವ, ಷಡಕ್ಷರಿದೇವನು ತನ್ನ ವಂಶಪರಂಪರೆಯನ್ನು ವೀರಶೈವ ಪೂರ್ವಾಚಾರ್ಯರಾದ ರೇಣುಕಾಚಾರ್ಯರಿಂದ ಆರಂಭಿಸಿರುವುದು ಸಾಂಪ್ರದಾಯಿಕವಾದುದು. ಏಕೆಂದರೆ ರೇಣುಕರ ಶಾಖೆಗೆ ಸಂಬಂಧಪಟ್ಟ ಅನೇಕ ಮಠಗಳು ದಕ್ಷಿಣಖಂಡದಲ್ಲಿ ಗೋಚರವಾಗುತ್ತದೆ. ಆ ಮಠದಲ್ಲಿ ತಮ್ಮ ವಂಶಪರಂಪರೆಯನ್ನು ರೇಣುಕಾಚಾರ್ಯರಿಂದಲೇ ಆರಂಭಿಸುವುದು ವಾಡಿಕೆ ಷಡಕ್ಷರಿಯೂ ಆ ವಾಡಿಕೆಯಂತೆ ರೇಣುಕಾಚಾರ್ಯರನ್ನು ಭಕ್ತಿಯಿಂದ ಬಣ್ಣಿಸಿ ತನ್ನ ವಂಶ ಅವರಿಂದ ಪ್ರಾರಂಭವಾಯಿತೆಂದು ಹೇಳಿಕೊಳ್ಳುತ್ತಾನೆ[೭] ಎಂಬ ಅಭಿಪ್ರಾಯದಲ್ಲಿ ಷಡಕ್ಷರದೇವ ಕಾಲದಲ್ಲಾಗಲೇ ರೇವಣಸಿದ್ಧರು ನಾಡಿನಲ್ಲಿ ಪ್ರಸಿದ್ಧಿಯಾಗಿರುವುದು ತಿಳಿದುಬರುತ್ತದೆ.

ಹೀಗೆ ತನ್ನ ಗುರುಪರಂಪರೆಯಲ್ಲಿ ರೇವಣಸಿದ್ಧರನ್ನು ಪರಿಚಯಿಸುವ ಕವಿ ಷಡಕ್ಷರಿ ಆತನ ಸಾಧನೆಯನ್ನು ಕುರಿತಂತೆ ಆಶ್ವಾಸ ಒಂದರಲ್ಲಿ ಪದ್ಯ ೫೩ ರಿಂದ ೬೭ರವರೆಗೆ ಒಟ್ಟು ೧೫ ಪದ್ಯಗಳಲ್ಲಿ ವರ್ಣಿಸುತ್ತಾನೆ. ಕೊಲ್ಲಿಪಾಕಿಯಲ್ಲಿ ಹುಟ್ಟಿದ ಈ ಜಂಗಮ ಜಗವನ್ನು ಸುತ್ತಿ ಲಂಕೆಯ ವಿಭೀಷಣನ ಮೂರುಕೋಟಿ ಲಿಂಗ ಪ್ರತಿಷ್ಠಾಪನೆಯ ಅಭೀಪ್ಸೆಯನ್ನು ಈಡೇರಿಸಿ, ಬಿಜ್ಜಳನ ಅಹಂಕಾರವನ್ನು ತುಳಿದು ತಲ್ಲಿಗನಿಗೆ ಕಣ್ಣನ್ನು ಕೊಟ್ಟು ಕಂಚಿಯ ವಿಷ್ಣುವಿನ ನಡುಕವನ್ನು ನಿಲ್ಲಿಸಿ ಬಿಜ್ಜಳನ ಸೆರೆಯಲ್ಲಿದ್ದ ಕನ್ನಿಕೆಯರನ್ನು ಬಿಡಿಸಿ ಯಕ್ಷ ದಂಪತಿಗಳ ಶಾಪ ವಿಮೋಚನೆ ಮಾಡಿ ರುದ್ರಮುನಿಗೆ ದೀಕ್ಷೆಕೊಟ್ಟು ಕೊನೆಗೆ ಕೊಲ್ಲಿಪಾಕಿಯಲ್ಲಿ ಐಕ್ಯನಾಗುತ್ತಾನೆ.[೮]

**೮. ಶಾಂತಲಿಂಗದೇಶಿಕರ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ**

ಕ್ರಿ.ಶ. ೧೬೭೨ರಲ್ಲಿ ಜೀವಿಸಿದ್ದ ಶಾಂತಲಿಂಗದೇಶಿಕರು ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಎಂಬ ಕಾವ್ಯವನ್ನು ರಚಿಸಿದ್ದಾರೆ. ಈ ಕೃತಿಗೆ ಅನ್ವರ್ಥಕ ಎನ್ನುವಂತೆ ಶಿವಶರಣರ ಕಥೆಗಳನ್ನು ಒಟ್ಟುಗೂಡಿಸಿ ಹೆಣೆಯಲ್ಪಟ್ಟ ಕಥಾಸೂತ್ರವಾಗಿದೆ. ಬಸವಾದಿ ಪುರಾತನರು ನಿರೂಪಿಸಿದ ಶೂನ್ಯ ಸಂಪಾದನೆ, ವಚನಗಳು, ಪುರಾಣಗಳು ಮುಂತಾದವುಗಳಿಂದ ಸಂಗ್ರಹಿಸಿ ರಚಿಸಿದ ಬೃಹತ್ ಗ್ರಂಥವಿದು. ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಮೂರು ಭಾಗಗಳಲ್ಲಿ ದೊರೆಯುವ ಈ ಕೃತಿಯು ಗದ್ಯಪ್ರಕಾರದಲ್ಲಿ ರಚನೆಯಾಗಿದೆ. ನಿಘಂಟು, ಶಾಸ್ತ್ರ, ಸಾಹಿತ್ಯ, ಪುರಾಣ ಮುಂತಾದ ಬಹು ವಿಷಯ ಜ್ಞಾನವನ್ನು ಸಂಪಾದಿಸಿಕೊಂಡಿದ್ದ ಶಾಂತಲಿಂಗದೇಶಿಕರು ಮಾಸೂರಿನ ಮಡುವಿನಲ್ಲಿ ರೇವಣಸಿದ್ದೇಶ್ವರ ಮಡುಗಿದ ಸುರಗಿಯನ್ನು ಬಿಜ್ಜಳನಿಗೆ ತೆಗೆದುಕೊಡುತ್ತೇನೆ ಎಂದು ಬರುವ ಖರ್ಪರನ ಕಥೆ ಮತ್ತು ಮಾಯಾದೇವಿಗೆ ಭಸಿತದಿಂದ ಲಿಂಗ ಮತ್ತು ಹೊನ್ನನ್ನು ಕೊಡುವುದರ ಮೂಲಕ ರೇವಣಸಿದ್ಧ ಪುರಾಣಪುರುಷನಾದ ಕಥೆಯನ್ನು ಇಲ್ಲಿ ಸಂಯೋಜಿಸಿದ್ದಾರೆ.

ಎಲ್ಲಾ ಸಿದ್ಧಿಯನ್ನು ಬಲ್ಲವನಾದ ಖರ್ಪರನು ಕಲ್ಯಾಣದ ಬಿಜ್ಜಳನ ಅಭಿಲಾಷೆಯಂತೆ ಮಾಸನೂರಿನ ಮಡುವಿನಲ್ಲಿ ರೇವಣಸಿದ್ದೇಶ್ವರರು ಮಡುಗಿದ ಸುರಗಿಯನ್ನು ತೆಗೆದುಕೊಡುವ ನಿಮಿತ್ಯ ಹನ್ನೆರಡು ಸಾವಿರ ಕನ್ನಿಕೆಯರನ್ನು ಬೇಡುವದು, ರೇವಣಸಿದ್ಧರ ಭಕ್ತೆಯಾದ ಮಾಯಾದೇವಿಯ ಮಗಳು ರೇವಕ್ಕನು ಹನ್ನೆರಡು ಸಾವಿರ ಕನ್ನಿಕೆಯರಲ್ಲಿ ಸೆರೆ ಸಿಗುವಳು. ನಂತರ ಮಾಯಾದೇವಿ ಮೊರೆಯಿಡುವದರಿಂದ ರೇವಣಸಿದ್ಧರು ಪ್ರತ್ಯಕ್ಷವಾಗಿ ಆ ಹನ್ನೆರಡು ಸಾವಿರ ಕನ್ನಿಕೆಯರನ್ನು ಬಿಡಿಸಿ ಖರ್ಪರನೆಂಬ ಸಿದ್ಧನನ್ನು ಸೋಲಿಸುವದು ಸಿದ್ಧರಾಮನ ಯಜ್ಞಕುಂಡವನ್ನು ಖರ್ಪರನು ನಂದಿಸುವದು ಕೊನೆಗೆ ಸಿದ್ಧರಾಮನಿಂದ ಸೋತು ಹೋಗುವದು.

ಹಾಗೆಯೇ ಶಿವನ ಅಣತೆಯಂತೆ ಗಣೇಶ್ವರನಾದ ರೇಣುಕರು ಸೋಮೇಶ್ವರ ಲಿಂಗದಲ್ಲಿ ಜನಿಸಿ ಅಗಸ್ತ್ಯಮುನಿಗೆ ವೀರಶೈವ ತತ್ವ ಬೋಧಿಸಿ ಕಂಚಿಯ ವಿಷ್ಣುಮೂರ್ತಿಯ ಅಲುಗಾಟವನ್ನು ನಿಲ್ಲಿಸಿ ಕಲ್ಯಾಣದ ಮಾಯಾದೇವಿಯ ಮನೆಯಲ್ಲಿ ಸೇವಕನಾಗಿ, ಆಕೆಯ ಭಕ್ತಿಗೆ ಮೆಚ್ಚಿ ವಿಭೂತಿಯನ್ನು ನೀಡಿ ಅದು ಲಿಂಗ ಮತ್ತು ಹೊನ್ನಿನ ಗಟ್ಟಿಯಾಗುವದು. ಜಂಗಮಾರ್ಚನೆ ಮಾಡುತ್ತ ರೇವಕ್ಕನೆಂಬ ಪುತ್ರಿಯನ್ನು ಪಡೆದು, ಮುಂದೆ ರೇವಣಸಿದ್ಧರು ಗಾಣಿಗ ಕಲ್ಲಿಶೆಟ್ಟಿ ಆತನ ಸತಿ ಮತ್ತು ಎತ್ತಿಗೂ ಕಣ್ಣನ್ನು ನೀಡಿ ನಂತರದಲ್ಲಿ ಬಿಜ್ಜಳನಲ್ಲಿ ಭಿಕ್ಷಕ್ಕೆ ಹೋಗಿ ಕುದಿಯುವ ಓಗರವನ್ನು ಅಂಗೈಯಲ್ಲಿ ಹಾಕಿಸಿಕೊಂಡು ಕಂಭಕ್ಕೆ ಕೈಯನ್ನು ಒರೆಸಿ ಅರಮನೆಯನ್ನು ಬೆಂಕಿಗೆ ಆಹುತಿ ಮಾಡಿ ಬಿಜ್ಜಳನಿಂದಾದ ಅಪರಾಧವನ್ನು ಮನ್ನಿಸಿ ಅಗ್ನಿಯನ್ನು ಶಮಗೊಳಿಸಿ ಕಾಶಿಯ ಕಡೆಗೆ ಯಾತ್ರೆ ಬೆಳೆಸುತ್ತಾನೆ.

ಹೀಗೆ ರೇವಣಸಿದ್ದೇಶ್ವರ ಕುರಿತು ಒಂದೊಂದು ಮಹಾಕಾವ್ಯಗಳಲ್ಲಿ ವಿವರಿಸಲ್ಪಟ್ಟ ಸಮಗ್ರವಾದ ಎಲ್ಲ ಘಟನೆಗಳನ್ನು ಒಂದು ಚಿಕ್ಕ ಕಥೆಯಲ್ಲಿ ಶಾಂತಲಿಂಗದೇಶಿಕರು ಅಳವಡಿಸಿರುವ ತಂತ್ರ ಇವರ ಕಥಾಪರಂಪರೆಗೆ ನಿದರ್ಶನವಾಗಿದೆ. ಘಟನೆಗಳ ನಂತರ ಘಟನೆಗಳನ್ನು ಹೆಣೆಯುತ್ತ ರೇವಣಸಿದ್ಧರಂತಹ ಮಹಾತ್ಮರ ಸಾಧನೆಗಳನ್ನು ಸೂತ್ರಿಕರಿಸುವಲ್ಲಿ ಇಲ್ಲಿಯ ಕಥೆಗಳಿಗೆ ಮಹತ್ವವಿದೆ.[೮]

### ಊ. ಗುರುಲಿಂಗ ದೇಶಿಕರ ಲಿಂಗಪುರಾಣ

ಗುರುಲಿಂಗ ದೇಶಿಕನಿಂದ ೧೫೦೩ರಲ್ಲಿ ರಚಿತವಾಗಿರುವ ಲಿಂಗಪುರಾಣ ಕಾವ್ಯವು ೩೯ ಸಂಧಿಗಳಲ್ಲಿ ೧೮೨೦ ವಾರ್ಧಕ ಷಟ್ಪದಿಗಳನ್ನು ಒಳಗೊಂಡಿವೆ. ಮೇಲುನೋಟಕ್ಕೆ ಅಷ್ಟಾವರಣಗಳಲ್ಲಿ ಒಂದಾದ ಲಿಂಗ ಆವರಣವನ್ನು ಕುರಿತು ಇಲ್ಲಿಯ ಕಥೆ ಮೀಸಲಾಗಿರಬಹುದು ಎಂದು ಭಾವಿಸಲು ಸಾಧ್ಯವಿದೆ. ಆದರೆ ಕಲ್ಯಾಣಕ್ರಾಂತಿಯ ಹಿಂದು, ಮುಂದಿನ ಘಟನೆಗಳಾದ ಹರಳಯ್ಯ ಮತ್ತು ಮಧುವರಸ ಎಳೆದೋಟೆ ಪ್ರಸಂಗಗಳನ್ನು ಗಮನಿಸಿದರೆ ಈ ಕೃತಿಯ ಐತಿಹಾಸಿಕ ಮಹತ್ವವು ಮನವರಿಕೆಯಾಗುತ್ತದೆ. ಅದೇನೇ ಇದ್ದರೂ ಶಿವಶರಣರಾದ ಅಲ್ಲಮ, ಬಸವ, ಚೆನ್ನಬಸವ, ಸಿದ್ಧರಾಮ, ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ ಅಮ್ಮವ್ವೆ, ಗುಡ್ಡವ್ವೆ, ಬೊಮ್ಮವ್ವೆ, ಮುಕ್ತಾಯಕ್ಕ, ಕೊಡಗೂಸು

ನೀಲಲೋಚನೆ, ಗಂಗಾಂಬಿಕೆ ಹಾಗು ಅರಸರುಗಳಾದ ರಾಜೇಂದ್ರಚೋಳ ಸತ್ಯೇಂದ್ರಚೋಳ, ವೀರಚೋಳ ಮುಂತಾದವರ ಸ್ಮರಣೆಯ ಜೊತೆಗೆ ಸಿದ್ಧಪುರುಷರಾದ ಮರುಳಸಿದ್ಧ, ರೇವಣಸಿದ್ಧ, ಪಂಡಿತಾರಾಧ್ಯ, ಏಕೋರಾಮ, ಪರಶುಪಾಣಿ, ವಿಜಯಕ್ಷರ, ಕಪಿಲಾಕ್ಷ ಮುಂತಾದವರ ಮಹಿಮೆಯನ್ನು ಲಿಂಗಪುರಾಣದಲ್ಲಿ ಕೊಂಡಾಡಲಾಗಿದೆ. ರೇವಣಸಿದ್ಧರನ್ನು ಕುರಿತಂತೆ ಹಲವು ಕೃತಿಗಳು ಹಲವು ಪವಾಡಗಳನ್ನು ಉಲ್ಲೇಖಿಸಿವೆ. ಹಾಗೆಯೇ ಲಿಂಗಪುರಾಣದಲ್ಲಿ ಇಪ್ಪತ್ನಾಲ್ಕನೆಯ ಸಂಧಿಯಲ್ಲಿ ಬಿಜ್ಜಳನ ಅರಮನೆಗೆ ರೇಣುಕರಿಂದ ಬೆಂಕಿಬಿದ್ದು ಸುಟ್ಟುಹೋಗುವ ಪ್ರಸಂಗ ಮತ್ತು ಬಸವೇಶನಿಂದ ರೇವಣಸಿದ್ಧರ ದರ್ಶನದ ಬಯಕೆಯನ್ನು ಚಿತ್ರಿಸಲಾಗಿದೆ. ಇಪ್ಪತ್ತೈದನೆಯ ಸಂಧಿಯು ಸಂಪೂರ್ಣವಾಗಿ ರೇವಣಸಿದ್ಧರನ್ನು ಕುರಿತು ಚಿತ್ರಿಸುತ್ತದೆ.

ಬಸವಣ್ಣ ಮತ್ತು ಬಿಜ್ಜಳರು ರೇಣುಕರನ್ನು ಕಂಡದ್ದು ಮಹಾ ಮಾಯಿದೇವಿಯ ಮನೆಯು ಕೈಲಾಸದಂತೆ ನಿರ್ಮಾಣವಾದದ್ದು ಇದನ್ನು ಕಂಡ ಬಸವಣ್ಣ ಮಾಯಿದೇವಿಯ ಭಕ್ತಿಗೆ ಮೆಚ್ಚಿ ಸ್ತುತಿಸುವ ಘಟನೆ ನಂತರದಲ್ಲಿ ರೇಣುಕರು ಪಿಣ್ಯಾಕ ದೇವನಾಗಿ ಗಾಣ ಹೊಡೆದು ಕಲ್ಲಶೆಟ್ಟಿ ಆತನ ಹೆಂಡತಿ ಹಾಗೂ ಗಾಣದ ಎತ್ತಿಗೆ ಕಣ್ಣನ್ನು ಕೊಟ್ಟು ಲಂಕಾಪುರಕ್ಕೆ ಹೊರಟು ವಿಭೀಷಣನಿಗೆ ಲಿಂಗದರ್ಶನ ಕೊಟ್ಟು, ಮುಂದೆ ಕೊಲ್ಲಾಪುರಕ್ಕೆ ಹೋಗಿ ಬನ್ನಿಮಹಾಕಾಳಿಯಿಕ್ಕಿದ ನಂಜನ್ನುಂಡು, ಮಸಕಸುರನ್ನು ಹೊಸೆದು ಸುರಗಿಯ ಮಾಡಿ, ಮಾಸೂರಿನ ಮಡುವಿನಲ್ಲಿ ನೆಟ್ಟು, ಕಂಚಿಯ ಗೋವಿಂದನ ಶಿಖಾಗ್ರ ಅಲ್ಲಾಡದಂತೆ ಮಾಡಿ ಹೀಗೆ ಹತ್ತಾರು ಪವಾಡಗಳನ್ನು ಮೆರೆದ ರೇವಣಸಿದ್ಧರ ಮಹಿಮೆಯನ್ನು ಈ ಕೃತಿಯಲ್ಲಿ ಕೊಂಡಾಡಲಾಗಿದೆ.[೧೦]

**೫೬. ಪರ್ವತೇಶನ ಚುತುರಾಚಾರ್ಯರ ಚಾರಿತ್ರ**

ಕ್ರಿ.ಶ. ೧೬೯೮ರಲ್ಲಿ ಬದುಕಿದ ಪರ್ವತೇಶನು ಆರು ಕಾಂಡಗಳಲ್ಲಿ ೫೪ ಸಂಧಿಗಳಲ್ಲಿ ೩೧೮೭ ಪದ್ಯಗಳಲ್ಲಿ ವಾರ್ಧಕ ಷಟ್ಪದಿಯ ಪ್ರಕಾರದಲ್ಲಿ ಬರೆದ ದೊಡ್ಡ ಕೃತಿ ಚತುರಾಚಾರ್ಯರ ಪುರಾಣ, ಚುತುರಾಚಾರ್ಯರ ಚಾರಿತ್ರ ಎಂಬ ಹೆಸರುಗಳಿಂದ ಪ್ರಸಿದ್ಧಿಯಾದ ಪ್ರಸ್ತುತ ಕೃತಿಯಲ್ಲಿ ರೇಣುಕ ಮರುಳಸಿದ್ಧ ಏಕೋರಾಮ ಹಾಗೂ ಪಂಡಿತಾರಾಧ್ಯ ಆಚಾರ್ಯರನ್ನು ಕುರಿತು ಕಾವ್ಯ ರಚಿಸಿದ್ದಾನೆ. ತನ್ನ ಕೃತಿಯ ಪ್ರಾರಂಭದಲ್ಲಿ

ಆಚಾರ್ಯ ರೇವಣಸಿದ್ದೇಶ ಮರುಳಸಿ
ದ್ದಾಚಾರ್ಯ ಪಂಡಿತಾರಾಧ್ಯ ಏಕೋರಾಮ
ಆಚಾರ್ಯ ವಿಶ್ವೇಶ್ವರಾಚಾರ್ಯರೆನಿಪ ಪಂಚಕಲಶದಾಚಾರ್ಯರ
ಸ್ವಾಚಾರ್ಯ ಚಾರಿತ್ರ ಸಕಲ ಶಿವಶರಣರ್ಗೆ
ಗೋಚರಿಸುವಂದದಿಂ ರಚಿಸುಮೆ ಕೃತಿಯನ
ತ್ಯಾಶ್ಚರ್ಯವಪ್ಪುದಿದು ಗುರು ಚರಣಕಂಜವಿಕಸನ ಮಾಗೆ ಹೃದಯದಲ್ಲಿ[೧೧]

ಸಕಲ ಶಿವಶರಣರಿಗೆ ಗೋಚರಿಸುವ ರೀತಿಯಲ್ಲಿ ನಾಲ್ಕು ಮಂದಿ ಆಚಾರ್ಯರ ಕಥೆಯನ್ನು ಬರೆಯುವದಾಗಿ ತಿಳಿಸುವನು ಪರ್ವತೇಶ. ರೇವಣಸಿದ್ಧರನ್ನು ಕುರಿತು ಪ್ರಥಮಕಾಂಡ ಎಂಟನೆಯಸಂಧಿ, ಎಂಟನೆಯ ಪದ್ಯದಿಂದ ಪ್ರಾರಂಭಿಸಿ ಎರಡನೆಯ ಕಾಂಡ, ಏಳನೆಯ ಸಂಧಿ, ತೊಂಭತ್ತೈದನೆಯ ಪದ್ಯಕ್ಕೆ ಮುಗಿಸುತ್ತಾನೆ. ಎಲ್ಲಾ ಕವಿಗಳಂತೆ ಕೊಲ್ಲಿಪಾಕಿ ಶಿವಲಿಂಗದಲ್ಲಿ ಹುಟ್ಟಿ, ಅಗಸ್ತ್ಯನಿಗೆ ಪರಮ ವೀರಶೈವ ರಹಸ್ಯವನ್ನು ಭೋದಿಸಿ ಕಲ್ಲಿಶೆಟ್ಟಿ ಮೊದಲಾದವರಿಗೆ ಒಲಿದು ಕಕುದ್ಗಿರಿ ಮುಂತಾದ ಗಿರಿಪರ್ವತಗಳನ್ನು ಸಂಚಾರಮಾಡಿ ಖರ್ಪರನ ಅಹಂಕಾರವನ್ನು ಮುರಿದು ನಿಜ ಕಲ್ಯಾಣವನ್ನು ನಿರ್ಮಾಣಮಾಡಿ ಸಕಲ ಮೇದಿನೀಶ್ವರ ಪುತ್ರಿಯರನ್ನು ಮದುವೆಯಾಗಿ ನಂತರ ರುದ್ರಮುನಿ ದೇವರಿಗೆ ಚರಲಿಂಗ ಪಟ್ಟಕಟ್ಟಿ, ಹಾವಿನಾಳ ಕಲ್ಲಯ್ಯನಿಗೆ ಹರದೀಕ್ಷೆ ಕೊಡಿಸಿ, ಸೊನ್ನಾಲಪುರ ಚಾಮಲಾದೇವಿಗೆ ಸಿದ್ಧರಾಮನ ಜನನ ವೃತ್ತಾಂತವನ್ನು ಅರುಹಿ ಮಂಗಳವಾಡಕ್ಕೆ ಹೋಗಿ ರುದ್ರಮುನಿ ಜೊತೆಗೆ ಸುಖದಿಂದ ಇರುತ್ತಿದ್ದನು ಎಂಬುದಾಗಿ ಕಥೆ ಹೆಣೆದಿದ್ದಾನೆ.

ನಾಲ್ಕು ಮಂದಿ ಆಚಾರ್ಯ ಪುರುಷರ ಸಾಧನೆಯನ್ನು ಪರಿಚಯಿಸುವ ಪ್ರಸ್ತುತ ಕೃತಿಯ ರೇವಣಸಿದ್ಧೇಶ್ವರ ಕಥಾಭಾಗವು ಸ್ವಲ್ಪ ಹೆಚ್ಚು ಕಡಿಮೆ ಪ್ರಧಾನ ಕೃತಿಯಂತೆ ಭಾಸವಾದರು ಉಳಿದ ಮೂವರು ಆಚಾರ್ಯರ ಕಥಾಭಾಗ ಇದರಲ್ಲಿ ಸಮಾವೇಶಗೊಂಡಿರುವದರಿಂದ ಪ್ರಸ್ತುತಕೃತಿಯನ್ನು ಆನುಷಂಗಿಕ ಕೃತಿಗಳ ಸಾಲಿನಲ್ಲಿಟ್ಟು ಅಧ್ಯಯನ ಮಾಡುವದು ಅನಿವಾರ್ಯವಾಗಿದೆ.[೨]

**೫೭. ರಾಚಪ್ಪಯ್ಯನ ಪ್ರಭುಚರಿತೆ**

ಕಲ್ಯಾಣದ ಕಡೆಯಕಲ್ಲು ಎಂದು ಹೆಸರಾದ ಕೊಡೇಕಲ್ಲು. ಅಲ್ಲಿಯ ಬಸವಣ್ಣ ಆತನ ಹಿರಿಯ ಮಗ ರಾಚಪ್ಪಯ್ಯ, ಎರಡನೆಯವ ಗುಹೇಶ್ವರ ಮತ್ತು ಕೊನೆಯ ಮಗ ಸಂಗಪ್ಪಯ್ಯ ಕೊಡೇಕಲ್ಲು ಪರಂಪರೆಗೆ ಸೇರಿದವರು. ಕಾಲಜ್ಞಾನ ಸಾಹಿತ್ಯ ಮತ್ತು ಶಿವಶರಣರ ಕುರಿತ ಕೃತಿಗಳು ಈ ಪರಂಪರೆಯಲ್ಲಿ ರಚನೆಯಾದವುಗಳಾಗಿವೆ. ವಿಶೇಷವಾಗಿ ರಾಚಪ್ಪಯ್ಯ 'ರಾಚ' ಎಂಬ ಅಂಕಿತದಿಂದ ಹಾಡುಗಳನ್ನು ಅಕ್ಕಮಾದೇವಿಯಕ್ಕನ ಸಾಂಗತ್ಯ, ಪ್ರಭುಚರಿತೆ, ಮಾಯೆಯ ಸಾಂಗತ್ಯ, ಕಾಯ ಸಾಂಗತ್ಯ, ನಂಬಿಯಣ್ಣ ಪುರಾಣ, ಗಿರಿಜಾಕಲ್ಯಾಣ, ಸ್ವರ್ಗಾರೋಹಣ ಮುಂತಾದ ಪ್ರೌಢ ಕಾವ್ಯಗಳನ್ನು ರಚಿಸಿದ್ದಾನೆ.

ಪ್ರಭು ಚರಿತೆಯಲ್ಲಿ ರೇವಣಸಿದ್ಧರ ಮಹತ್ವವನ್ನು ಹದಿನೆಂಟು ಪದ್ಯಗಳಲ್ಲಿ ವರ್ಣಿಸಲಾಗಿದೆ. ರಾಜಯೋಗಿಯಾದ ರೇವಣಸಿದ್ಧನನ್ನು ಅಲ್ಲಮಪ್ರಭುದೇವರು ಅವಾಚ್ಯವಾಗಿ, "ಆರಲೋ ಪಾಷಂಡಿ ಸಿದ್ಧನೆಲ್ಲಿಹನು ಏಳುನೂರು ಕತ್ತೆಯ ಕಾಯುವ ಡೊಂಬ" ಎಂದು ಬೈಯ್ಯುತ್ತಾನೆ. ಹೀಗೆ ತನ್ನನ್ನು ಜರಿಯಬೇಕಾದರೆ ಈತ ಶಿವ ಸ್ವರೂಪ ಜಂಗಮನೇ ಆಗಿರಬೇಕೆಂದು ಭಾವಿಸಿರುವ ರೇವಣಸಿದ್ಧನು ತನ್ನ ಅರಮನೆಗೆ ಆಹ್ವಾನಿಸುತ್ತಾನೆ. ಇದನ್ನು ನಿರಾಕರಿಸಿದ ಪ್ರಭುದೇವನು ಮೇದಿನಿಯಲ್ಲಿ ಬಸವ ಬೆಳಗು ಬಂದಿರುವದು ಆತನನ್ನು ಕಂಡು ಮುಕ್ತಿ ಪಡೆಯಬೇಕೆಂದು ಕಲ್ಯಾಣಕ್ಕೆ ನಡೆಯುತ್ತಾನೆ. ಹೀಗೆ

ಪ್ರಭು ಮತ್ತು ರೇವಣಸಿದ್ಧರ ಸಂಭಾಷಣೆ ಮೂಲಕ ರಾಚಪ್ಪಯ್ಯ ಸಿದ್ಧಪುರಷ ರೇವಣಸಿದ್ಧನನ್ನು ತನ್ನ ಕಾವ್ಯದಲ್ಲಿ ಚಿತ್ರಿಸಿದ್ದಾನೆ.[೧]

**ಕ. ಜನಪದ ಹಾಲುಮತ ಮಹಾಕಾವ್ಯ**

ಸಿದ್ಧಪ್ಪಮೇಟಿ ಹೆಸರಿನ ಹಾಡುಗಾರನಿಂದ ಸಂಗ್ರಹಿಸಿದ ಈ ಕೃತಿಯನ್ನು ಡಾ.ವೀರಣ್ಣ ದಂಡೆಯವರು ಸಂಪಾದಿಸಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಮಹಾಕಾವ್ಯ ಬೀರಪ್ಪನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ಆತನ ಜನನ, ಮದುವೆ, ಲೀಲಾ ವೃತ್ತಾಂತ, ಮಾಳಿಂಗರಾಯ, ಅಮೋಗಸಿದ್ಧ, ಪಾಂಡುರಂಗ, ಬಾಲವೀರಣ್ಣ ಮುಂತಾದವರ ಕುರಿತು ಕಥೆ ರಚಿಸಿದಂತೆ; ವೃತ್ತಾಂತಗಳು ಎಂಬ ಅಧ್ಯಾಯದಲ್ಲಿ ಹಾಯಿ ಲಿಂಗಮ್ಮನ, ವೃತ್ತಾಂತ, ಗಂಗಿ ಮಾಳಮ್ಮನ ವೃತ್ತಾಂತ ಜೊತೆಗೆ ರೇವಣಸಿದ್ಧನ ವೃತ್ತಾಂತ ಹೆಸರಿನ ಕಥೆಗಳು ಇಲ್ಲಿ ಹೆಣೆಯಲ್ಪಟ್ಟಿವೆ.

ಪ್ರಸ್ತುತ ನಮ್ಮ ಅಧ್ಯಯನದ ರೇವಣಸಿದ್ಧನನ್ನು ಕುರಿತಂತೆ ಆತ ಭಿಕ್ಷೆ ಬೇಡುವ ಪ್ರಸಂಗ ಮತ್ತು ಸಿದ್ಧರಾಮನ ಜನನ ಪ್ರಸಂಗಗಳನ್ನು ಇಲ್ಲಿ ನಿರೂಪಿಸಲಾಗಿದೆ. ಗುರು ರೇವಣಸಿದ್ಧ ಹಾರೋರು ಗುಂಡಮ್ಮನ ಮನೆಗೆ ಕಡೀ ಸೋಮವಾರ ಹಾಲಿನ ಭಿಕ್ಷೆಗಾಗಿ ಹೋಗುತ್ತಾನೆ. ಆಕೆ ಭಿಕ್ಷೆ ನೀಡಲು ನಿರಾಕರಿಸಿದಾಗ ಮುಂದೆ ಕುರುಬರ ಸಿದ್ದವ್ವನ ಮನೆಗೆ ಬಂದು ಮೀಸಲು ಹಾಲು ಕುಡಿದು ಆಕೆಯ ಆತಿಥ್ಯಕ್ಕೆ ಮೆಚ್ಚಿ ಹರಸುತ್ತಾನೆ. ಮುಂದೆ ರೇವಣಸಿದ್ಧರು ಮಡಿವಾಳನ ಮನೆಗೆ ಭಿಕ್ಷೆಗೆ ಬರುತ್ತಾನೆ. ಆತ ಮರದ ತುಂಬ ಮುತ್ತುರತ್ನಗಳನ್ನು ತುಂಬಿಕೊಂಡು ರೇವಣಸಿದ್ಧರಿಗೆ ನೀಡಲು ಹೋದರೆ ಈ ಭಿಕ್ಷೆಯನ್ನು ನಿರಾಕರಿಸಿದ ರೇವಣಸಿದ್ಧ ತನ್ನಲ್ಲಿರುವ ಹನ್ನೆರಡು ವರ್ಷ ಮತ್ತು ಇಪ್ಪತ್ತು ವರ್ಷದ ಎರಡು ಕಂತಿಗಳಿಗೆ ಗಂಜಿಮಾಡಿ ಕೊಡಲು ಆದೇಶಿಸುತ್ತಾನೆ. ಆದರೆ ಕಟ್ಟಿಗೆ, ಸುಣ್ಣ, ಬಟ್ಟೆ, ನೀರು, ಬೆಂಕಿಕಡ್ಡಿ, ಕಲ್ಲು, ಸಾಬೂನು ಇತ್ಯಾದಿ ಯಾವುದನ್ನು ಉಪಯೋಗಿಸಬಾರದೆಂದು ನಿರ್ಬಂಧ ಹಾಕುತ್ತಾನೆ. ಇದರಿಂದ ಚಿಂತೆಗೊಳಗಾದ ಮಡಿವಾಳ ತನ್ನ ಹೆಂಡತಿಗೆ ತಿಳಿಸುತ್ತಾನೆ. ಆಗ ಮಡಿವಾಳನ ಹೆಂಡತಿ ಮನೆಯಲ್ಲಿರುವ ಖಡ್ಗವನ್ನು ತೆಗೆದುಕೊಂಡು ರೇವಣಸಿದ್ಧರು ನೀಡಿದ ಕಂತಿಗಳನ್ನು ಗಂಡನಿಗೆ ಹೊರಿಸಿ ಊರ ಮುಂದಿನ ಹಳ್ಳಕ್ಕೆ ಬರುತ್ತಾಳೆ. ಕೈಯಲ್ಲಿರುವ ಖಡ್ಗವನ್ನು ಗಂಡನ ಕೈಗೆ ಕೊಟ್ಟು ತನ್ನ ಕುತ್ತಿಗೆಯನ್ನು ಕತ್ತರಿಸಲು ಹೇಳಿ ಒಂದು ತಲೆ ಎರಡು ಮೊಲೆ ಸಹಾಯದಿಂದ ಒಲೆಯ ಹೂಡು ಕೈ ಕಾಲು ಕಡಿದು ಕಟ್ಟಿಗೆ ಮಾಡು ಮೈಮ್ಯಾಲಿನ ಕೂದಲನ್ನು ಕಡ್ಡಿಮಾಡಿ ರಕ್ತವನ್ನು ಆಳಿ ಮಾಡಿ ಅಂಗೈಯನ್ನೇ ಒಗಿಯುವ ಬಂಡಿ ಮಾಡಿ ತಲೆ ಬುರಡಿಯನ್ನು ಪಾತ್ರೆಯನ್ನಾಗಿ ಮಾಡಿ ಕಂತಿಗಳಿಗೆ ಗಂಜಿ ಹಾಕಬೇಕು ಎಂದು ಹೇಳುತ್ತಾಳೆ. ಮಡಿವಾಳ ಹಾಗೆಯೇ ಮಾಡುತ್ತಾನೆ. ಮರುದಿನ ಕಂತಿಗಳನ್ನು ತೆಗೆದುಕೊಂಡು ಹೋಗಿ ರೇವಣಸಿದ್ಧನಿಗೆ ಕೊಡಲು ಮುಂದಾದಾಗ ಗಂಡ ಹೆಂಡಿರು ಕೂಡಿ ಕೊಡ ಬೇಕೆಂದು ಆಜ್ಞೆ ಮಾಡುತ್ತಾನೆ. ನನ್ನ ಮದುವೆಯೇ ಆಗಿಲ್ಲವೆಂದು ಮಡಿವಾಳ ಸುಳ್ಳು ಹೇಳುತ್ತಾನೆ. ಕಂತಿಗಳನ್ನು ಜಗಲಿಯ ಮೇಲಿಟ್ಟು ನಿನ್ನ ಹೆಂಡತಿಯನ್ನು ಕರೆಯಲು ಹೇಳಿದನು. ಅದರಂತೆ ಮಡಿವಾಳ

ತನ್ನ ಹೆಂಡತಿಯ ಹೆಸರು ಹಿಡಿದು ಕೂಗಲು ಆಕೆ ಓಗುಡುತ್ತ ಬಂದಳು. ಪ್ರಸನ್ನನಾದ ರೇವಣಸಿದ್ಧನು ದಂಪತಿಗಳ ತ್ಯಾಗ ಭಕ್ತಿಗೆ ಮೆಚ್ಚಿ ಬೇಡಿದ ವರವನ್ನು ಕೊಟ್ಟು ಮಾಯವಾಗುತ್ತಾನೆ.

ಸಿದ್ಧರಾಮನ ಜನನ ವೃತ್ತಾಂತಕ್ಕೆ ಸಂಬಂಧಿಸಿದಂತೆ "ರೇವಣಸಿದ್ಧನು ಒಂದು ದಿನ ಮುದ್ದುಗೌಡ ಸುಗ್ಗಲವ್ವೆಯ ಮನೆಗೆ ಬಂದನು. ಮಕ್ಕಳಿಲ್ಲದ ಮನೆಯಲ್ಲಿ ಊಟ ಮಾಡುವುದಿಲ್ಲವೆಂದು ಹಟ ಹಿಡಿದರು. ನೀನೇ ಮಕ್ಕಳನ್ನು ಕರುಣಿಸಿಲ್ಲ ಈಗೆಲ್ಲಿಯ ಮಕ್ಕಳು ಎಂದು ನುಡಿದರು. ಆಗ ರೇವಣಸಿದ್ಧ ಮಕ್ಕಳ ವರವನ್ನು ದಯಪಾಲಿಸಿ ತಿರುಗಿ ಹೋದನು. ಸುಗ್ಗಲವ್ವನಿಗೆ ಗರ್ಭ ನಿಂತಿತು. ಒಂಭತ್ತು ತಿಂಗಳ ನಂತರ ಸುಂದರವಾದ ಗಂಡುಮಗು ಜನಿಸಿತು. ರೇವಣಸಿದ್ಧ ಬಂದ ಸಿದ್ಧರಾಮನೆಂದು ಹೆಸರಿಟ್ಟು ಕರೆದನು."[೧೪]

ಈ ಮೇಲಿನ ರೇವಣಸಿದ್ಧರ ಎರಡು ವೃತ್ತಾಂತಗಳನ್ನು ಗಮನಿಸಿದಾಗ ಭಿಕ್ಷೆಯ ಸನ್ನಿವೇಶ ಹೊಸ ನಿರೂಪಣೆಯಾಗಿದ್ದು ಮಿಕ್ಕ ಕೃತಿಗಳಲ್ಲಿ ಬಿಜ್ಜಳನಲ್ಲಿಗೆ ಭಿಕ್ಷೆಕ್ಕೆ ಹೋಗುವದು. ಬಿಸಿ ಓಗರವನ್ನು ಅಂಗೈಯಲ್ಲಿ ಸ್ವೀಕರಿಸುವದು, ಅದನ್ನು ಕಂಭಕ್ಕೆ ಒರಸಿ ಅರಮನೆಯನ್ನು ಭಸ್ಮಗೊಳಿಸುವದು ಹೀಗೆ ಚಿತ್ರಿತವಾದರೆ ಇಲ್ಲಿ ಮಡಿವಾಳ ಮತ್ತು ಹೆಂಡತಿ ನೀಲಮ್ಮಳನ್ನು ಪರೀಕ್ಷಿಸುವ ಸನ್ನಿವೇಶವಿದೆ. ಆದರೆ ಎರಡನೆ ವೃತ್ತಾಂತವಾದ ಸಿದ್ಧರಾಮನ ಜನ್ಮ ಪ್ರಸಂಗವು ಈ ಹಿಂದೆ ರೇವಣಸಿದ್ಧರ ಕುರಿತಾಗಿ ರಚನೆಯಾದ ಕೃತಿಗಳಂತೆ ಇಲ್ಲಿಯ ಸನ್ನಿವೇಶ ಇರುವುದನ್ನು ನೋಡಬಹುದು.[೧೫]

### ಖ. ವಚನಗಳು

ಕಾವ್ಯ ಮತ್ತು ಶಾಸನಗಳಂತೆ ವಚನ ಸಾಹಿತ್ಯದಲ್ಲೂ ರೇವಣಸಿದ್ಧರನ್ನು ಕುರಿತು ಪ್ರಸ್ತಾಪಿಸ ಲಾಗಿದೆ. ಬಸವಪೂರ್ವಯುಗದ ವಚನಕಾರ ಸಕಲೇಶ ಮಾದರಸ, ಮೆರೆಮಿಂಡಯ್ಯ ನಂತರದಲ್ಲಿ ಅಕ್ಕಮಹಾದೇವಿ, ಅಕ್ಕನಾಗಮ್ಮ, ಆದಯ್ಯ, ಮಡಿವಾಳ ಮಾಚಿದೇವ, ಸಿದ್ಧರಾಮ, ಹಾವಿನಾಳು ಕಲ್ಲಯ್ಯ, ಅಂಬಿಗರ ಚೌಡಯ್ಯ, ಬಾಲ ಬೊಮ್ಮಣ್ಣ, ಸಂಗನಬಸವನ, ಮರಳಸಿದ್ದೇಶ್ವರ, ರೇಕಮ್ಮ ಮುಂತಾದವರ ವಚನಗಳು ರೇವಣಸಿದ್ಧರ ವ್ಯಕ್ತಿತ್ವವನ್ನು ಪ್ರಸ್ತಾಪಿಸುತ್ತವೆ.

ಅಕ್ಕಮಹಾದೇವಿ "ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ ಇಂಗಿತವೇನೆಂದು ಬೆಸೆಗೊಂಬರಯ್ಯ ಎಂದು ಪ್ರಾರಂಭಿಸುವ ವಚನದಲ್ಲಿ ರೇವಣಸಿದ್ಧರ ಜನನ ವೃತ್ತಾಂತವನ್ನು ಸೂಚಿಸುತ್ತಾರೆ. ಹಾಗೆಯೇ ಅಕ್ಕನಾಗಾಲಾಂಬಿಕೆಯು, ಶರಣ ಮಡಿವಾಳ, ಸಿದ್ಧರಾಮಯ್ಯ, ಅಕ್ಕಮಹಾ ದೇವಿ, ಬಸವಣ್ಣ, ಚೆನ್ನಬಸವಣ್ಣನಂತಹ ಶಿವಶರಣರು ಹುಟ್ಟಿದ ಪರಿಯನ್ನು ತಿಳಿಸುತ್ತ ಲಿಂಗದಿಂದು ದಯವಾದಾತ ರೇವಣಸಿದ್ಧಯ್ಯ ಎನ್ನುತ್ತಾಳೆ. ಆದಯ್ಯ ತನ್ನ ವಚನವೊಂದರಲ್ಲಿ ಒಬ್ಬೊಬ್ಬ ಶರಣರನ್ನು ಒಂದೊಂದು ಸ್ಥಲದಲ್ಲಿ ನಿರ್ದೇಶನ ಮಾಡುವದರ ಜೊತೆಗೆ ಅದರ ಗುಣವಿಶೇಷತೆಯನ್ನು ಬಣ್ಣಿಸು ತ್ತಾನೆ. ಈ ಹಿನ್ನೆಲೆಯಲ್ಲಿ ನಿಷ್ಠೆಗೆ ರೇವಣಸಿದ್ಧರು ಎಂದು ಪ್ರತಿಪಾದಿಸುತ್ತಾನೆ. ಮಡಿವಾಳ ಮಾಚಿದೇವ

ಬಸವ ಸ್ತುತಿಯನ್ನು ಮಾಡುವ ತನ್ನದೊಂದು ವಚನದಲ್ಲಿ ಲಂಬೋದರ, ಕುಂಬೋದರ, ದಾರುಕ, ರೇಣುಕ, ನಾರೀಸುತ ತಾಂಡವರೆಲ್ಲರೂ ಸಕಲ ಜೀವ ಚೈತನ್ಯ ಮಾತ್ರ ಬಸವ ಎಂದೆಂಬೆನು ಎಂದು ಬಣ್ಣಿಸುತ್ತಾನೆ.

ಹಾವಿನಾಳ ಕಲ್ಲಯ್ಯ ತನ್ನ ಅಂಗಾಂಗಳಲ್ಲಿ ಸ್ವಾಯತವಾದ ಶಿವಶರಣರ ಪಟ್ಟಿಯನ್ನು ಮಾಡುತ್ತ ಹೋಗಿ ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯ ರೇವಣಸಿದ್ಧೇಶ್ವರ ದೇವರು ಎನ್ನುತ್ತಾನೆ. ಶಿವಯೋಗಿ ಸಿದ್ಧರಾಮ ತನ್ನದೊಂದು ವಚನದಲ್ಲಿ ಮಾಯಾದೇವಿ ಮನೆಯಲ್ಲಿ ನೀರು ತರುವ ಕಾಯಕದಲ್ಲಿ ನಿರತನಾಗಿದ್ದನೆಂಬ ಕಾವ್ಯೋಕ್ತ ಹೇಳಿಕೆಯನ್ನು ತೆಗೆದುಕೊಂಡು ಅಪ್ಪ ರೇವಣಸಿದ್ಧ ನೀರು ಹೊತ್ತನೆಂಬರು ನೀರು ಹೋರುವವರು ಕೂಲಿಕಾರೇನಯ್ಯ? ಎಂದು ಪ್ರಶ್ನಿಸುತ್ತಾನೆ. ಮೆರೆಮಿಂಡಯ್ಯನೆಂಬ ಶರಣನು ತನ್ನ ಪಂಚೇಂದ್ರಿಯಗಳು ಶುದ್ಧವಾದ ಬಗೆಯನ್ನು ವಿವರಿಸುವ ವಚನವೊಂದರಲ್ಲಿ ಏಕೋರಾಮಿ ತಂದೆಗಳ ಧರ್ಮದಿಂದ ಮೂಗು, ಪಂಡಿತಾರಾಧ್ಯರ ಧರ್ಮದಿಂದ ನಾಲಿಗೆ, ಸಿದ್ಧರಾಮೇಶ್ವರ ಧರ್ಮದಿಂದ ಚರ್ಮ ಶುದ್ಧವಾದಂತೆ ರೇವಣಸಿದ್ಧರ ಧರ್ಮದಿಂದ ಕಣ್ಣುಗಳು ಪಾವನವಾದ ರೀತಿಯನ್ನು ಬಣ್ಣಿಸುತ್ತಾನೆ. ಅನಿಮಿಷದೇವರು ಲಿಂಗದಲ್ಲಿ ನಿಬ್ಬೆರಗಾದಂತೆ, ಪ್ರಭುದೇವರು ಜಂಗಮರಾಗಿ ಸುಳಿದಾಡಿದಂತೆ, ಬಿಬ್ಬಿ ಬಾಚಯ್ಯಗಳು ಪ್ರಸಾದ ಕೊಂಡವರಿಗೆ ಪಥವ ತೋರಿಸಿದಂತೆ ರೇವಣಸಿದ್ಧರು ತನಗೆ ಗುರುವಾಗಿ ಬಂದರೆಂಬುದನ್ನು ತಿಳಿಸುತ್ತಾನೆ, ವಚನಕಾರ ಬಾಲ ಬೊಮ್ಮಣ್ಣ.

ಸಂಗನಬಸವನೆಂಬ ವಚನಕಾರನು ತನ್ನ ವಚನದ ಮೂಲಕ ತತ್ವಸಿದ್ಧಾಂತಗಳನ್ನು ಪ್ರಸಾರಿಸುವ ಗುರುಪರಂಪರೆಯನ್ನು ಗುರುತಿಸುತ್ತ ರೇವಣಸಿದ್ಧರ ಪರಿಸರಕ್ಕೆ ಬಂದ ಶಿವಶರಣರಿಗೆ ಸ್ವಾನುಭವಸೂತ್ರವ ಬೋಧಿಸುವ ಪರಿಯನ್ನು ತಿಳಿಸುವ ವಚನದ ಆಶಯ ಹೀಗಿದೆ. ನಿರ್ಲಜ್ಜ ಶಾಂತಯ್ಯನೆಂಬ ದೇಶಿಕೇಂದ್ರ ರೇವಣಸಿದ್ದೇಶ್ವರರಿಗೆ ತತ್ವಬೋಧನೆ ಮಾಡಿದನು. ಇದೇ ಪ್ರಸಾದವನ್ನು ತಮ್ಮಡಿಗೆರಗಿದ ಶಿವಶರಣರಿಗೆ ರೇವಣಸಿದ್ಧನು ಬೋಧಿಸಿದನೆಂದು ತಿಳಿಸುತ್ತಾನೆ. ಹಾಗೆಯೇ ರೇವಣಪ್ರಭುವೇ ಅಂಕಿತದಲ್ಲಿ ವಚನ ರಚಿಸಿದ ಮರುಳಸಿದ್ದೇಶ್ವರರು ಮತ್ತು ಶ್ರೀ ಗುರುಸಿದ್ದೇಶ್ವರ ಅಂಕಿತದಲ್ಲಿ ವಚನ ರಚಿಸಿದ ರೇವಣಸಿದ್ಧಯ್ಯಗಳ ಪುಣ್ಯಶ್ರೀ ರೇಕಮ್ಮಳು ಇವರ ವ್ಯಕ್ತಿತ್ವವನ್ನು ಕುರಿತು ಏನನ್ನೂ ಹೇಳದಿದ್ದರೂ, ರೇವಣಸಿದ್ದೇಶ್ವರನ ಅಂಕಿತದಲ್ಲಿ ವಚನ ರಚನೆಗೆ ತೊಡಗಿರುವುದನ್ನು ಗಮನಿಸಿದರೆ ಮರುಳಸಿದ್ಧರಿಗೆ ಗುರುವಾಗಿ, ರೇಕಮ್ಮನಿಗೆ ಒಡೆಯನಾಗಿ ರೇವಣಸಿದ್ಧರು ಆರಾಧ್ಯ ದೈವ ಸ್ವರೂಪವಾಗಿ ಕಂಡಿದ್ದಾರೆ.

ಅಜ್ಞಾತ ಶರಣನೊಬ್ಬನು "ನಿಜಗುರು ನಿರಾಲಂಬ ಪ್ರಭುವೆ" ಅಂಕಿತದಲ್ಲಿ ಬರೆದ ವಚನ ವೊಂದರಲ್ಲಿ "ವಿವೇಕತ್ವದಿಂದ ಅವಿರಳ ಜ್ಞಾನವನ್ನು ದಯಪಾಲಿಸಿದ ಮಹಾತ್ಮರನ್ನು ಕೊಂಡಾಡುತ್ತ" ಸುದ್ದಿ ಸುಳಿವಿಲ್ಲದೆ ಸಿದ್ಧ ಪ್ರಸಿದ್ಧನಾಗಿ ಗುರು ರೇವಣಸಿದ್ದೇಶ್ವರನು ಲದ್ದಿ ಸೋಮಾರಾಧ್ಯರಿಗೆ ಒಳ್ಳೆಯ ಬುದ್ಧಿಯನ್ನು ದಯಪಾಲಿಸಿದನೆಂದು ಬಣ್ಣಿಸುತ್ತದೆ.

ಹೀಗೆ ವಚನಗಳಲ್ಲಿ ರೇವಣಸಿದ್ಧರು ಸಿದ್ಧಪುರುಷರಾಗಿ ಆರಾಧ್ಯದೈವವಾಗಿ, ತತ್ವಪ್ರಸಾದಕರಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು.

**ಗ. ಸಿದ್ಧಾಂತ ಶಿಖಾಮಣಿ**

ಶ್ರೀ ಮರಿತೋಂಟದಾರ್ಯರ "ರೇಣುಕಾಗಸ್ತ್ಯ ಸಂವಾದಂ ನಿಗಮಾಗಮ ವಿಶ್ರುತಂ | ಪ್ರದೀಪಯತಿ ಗುಪ್ತಾರ್ಥಮುದ್ಧತ್ಯ ಶಿವಯೋಗಿರಾಟ್ || ಉಕ್ತಿಯಿಂದ ಶ್ರೀ ಜಗದ್ಗುರು ರೇಣುಕಾ ಚಾರ್ಯರು ಅಗಸ್ತ್ಯಮಹರ್ಷಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತವನ್ನೇ ಶ್ರೀ ಶಿವಯೋಗಿ ಶಿವಾ ಚಾರ್ಯರ ಸಿದ್ಧಾಂತ ಶಿಖಾಮಣಿ ಹೆಸರಿನಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ ಎಂಬುದು ತಿಳಿದುಬರುತ್ತದೆ. ಹೀಗಾಗಿ ರೇವಣಸಿದ್ಧರನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಆತನಿಂದ ಉಪದೇಶಿಸಲ್ಪಟ್ಟ ಕೃತಿಯನ್ನು ಅವಲೋಕಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಈ ಕೃತಿಯ ಕಾಲದ ಬಗ್ಗೆ ವಿದ್ವಾಂಸರಲ್ಲಿ, ಧರ್ಮಾಭಿಮಾನಿಗಳಲ್ಲಿ ಭಿನ್ನಾಭಿಪ್ರಾಯಗಳಿವೆಯಾದರೂ ಸದ್ಯಕ್ಕೆ ಇಲ್ಲಿಯವರಿಗೆ ರೇವಣಸಿದ್ಧರನ್ನು ಕುರಿತಾಗಿ ಸೃಷ್ಟಿಯಾದ ಈಶಾನ್ಯ ಗುರು ವಿರಚಿತ ರೇಣುಕ ಚಂಪು, ಚತುರ್ಮುಖ ಬೊಮ್ಮರಸ ವಿರಚಿತ ರೇವಣಸಿದ್ದೇಶ್ವರ ಲೀಲೆಗಳು ಮತ್ತು ಇವೇ ಲೀಲೆಗಳನ್ನೊಳಗೊಂಡಂತೆ ಹರಿಹರನು "ದಕ್ಷಿಣಾದಿಶಾ ವರಕೆ ಬಂದಗಸ್ತ್ಯನ ಕೂಡಿ ಶಿವಭಕ್ತಿಗೋಷ್ಠಿಯೊಳು ನಿಂದು ಪುಳಕಿಸುತೆ ಪೊರಮೊಟ್ಟು"[೧] ಎಂದು ತನ್ನ ರೇವಣಸಿದ್ದೇಶ್ವರ ರಗಳೆಯಲ್ಲಿ ಹೇಳುವ ಉಲ್ಲೇಖವನ್ನು ಗಮನಿಸಿದರೆ ಪ್ರಾಯಶಃ ಸಿದ್ಧಾಂತ ಶಿಖಾಮಣಿಯ ರಚನೆಕಾರರು ೨೯ನೆಯ ಪೀಠಾಚಾರ್ಯರಾದ ಜಗದ್ಗುರು ರೇವಣಸಿದ್ದೇಶ್ವರರಿರ ಬಹುದು. ಇವರ ಕಾಲ ಕ್ರಿ.ಶ. ೧೦೦೦ ರಿಂದ ೧೧೫೭. ಹೀಗಾಗಿ ಸಿದ್ಧಾಂತ ಶಿಖಾಮಣಿ ಕಾಲವನ್ನು ಹನ್ನೆರಡನೆಯ ಶತಮಾನವೆಂದು ಭಾವಿಸಬಹುದು. ೨೧ ಪರಿಚ್ಛೇದಗಳಲ್ಲಿ ಹಬ್ಬಿಕೊಂಡಿರುವ ಈ ಬೃಹತ್ ಧಾರ್ಮಿಕ ಗ್ರಂಥ ವೀರಶೈವ ಅನೇಕ ಸಿದ್ಧಾಂತಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಮಹತ್ವ ಪೂರ್ಣವಾಗಿದೆ. ಈ ಕಾರಣವಾಗಿ ಇದನ್ನು ರೇವಣಸಿದ್ಧರ ಜೀವನವನ್ನು ಕುರಿತು ಸೃಷ್ಟಿಯಾದ ಕೃತಿ ಎನ್ನುವದಕ್ಕಿಂತ ರೇವಣಸಿದ್ಧರು ಸಿದ್ಧಪುರುಷರಾಗಿ ಮತ್ತು ತತ್ವ ಸಿದ್ಧಾಂತಿಯಾಗಿ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳನ್ನು ಕುರಿತು ಅವರಿಂದ ರಚಿತವಾದ ಧರ್ಮಗ್ರಂಥವೆನ್ನ ಬಹುದು. ಒಂದರ್ಥದಲ್ಲಿ ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ಉಪದೇಶಿಸಿದನ್ನು ಶ್ರೀ ವಾಸ್ಯ ಮಹರ್ಷಿಯು ಭಗವದ್ಗೀತೆಯ ಹೆಸರಿನಲ್ಲಿ ಸಂಗ್ರಹಿಸಿಕೊಟ್ಟಂತೆ, ಶ್ರೀ ರೇವಣಸಿದ್ಧ ಮತ್ತು ಅಗಸ್ತ್ಯ ಮಹರ್ಷಿಗಳ ಸಂವಾದವನ್ನು ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ ಹೆಸರಿನಿಂದ ಸಂಗ್ರಹಿಸಿ ಕೊಟ್ಟಿದ್ದಾರೆ.

ಘ. ಶಾಸನಗಳು

ರೇವಣಸಿದ್ಧರನ್ನು ಕುರಿತಂತೆ ಸುಮಾರು ೧೭ ಶಾಸನಗಳು ಲಭ್ಯವಿದ್ದು, ಕ್ರಿ.ಶ. ೧೧೮೭ರ ಸಿರಿವಾಳ ಶಾಸನದಿಂದ ಕ್ರಿ.ಶ. ೧೬೦೬ರ ಗುಮ್ಮಳಾಪುರದ ಶಾಸನದವರೆಗೆ ಈತನ ವ್ಯಕ್ತಿತ್ವವನ್ನು ವರ್ಣಿಸಲಾಗಿದೆ. ಅಂದರೆ ಈ ಹೊತ್ತಿಗಾಗಲೇ ರೇವಣಸಿದ್ಧರು ಜನಮನದಲ್ಲಿ ಸಿದ್ಧಪುರುಷನಾಗಿ ಆರಾಧ್ಯದೈವರಾಗಿ ಪೂಜೆಗೊಳ್ಳುತ್ತಿರುವುದು ತಿಳಿದುಬರುತ್ತದೆ. ಈತನ ಹೆಸರಿನ ದೇವಾಲಯ, ದಾನದತ್ತಿ ಬಿಟ್ಟ ವಿಷಯವನ್ನು ಬಹುತೇಕ ಶಾಸನಗಳು ಉಲ್ಲೇಖಿಸಿದರೆ ಸಿರಿವಾಳ ಶಾಸನವು ಇದರ ಗುರುಪರಂಪರೆಯನ್ನು ತಿಳಿಸುವ ಐತಿಹಾಸಿಕ ಮನ್ನಣೆ ಪಡೆದುಕೊಂಡಿದೆ.

ಕ್ರಿ.ಶ. ೧೧೫೫ರ ಯಡ್ರಾಮಿ ಶಾಸನದ ಪ್ರತಿ "ಸಾಲಿನ ಮುಂದಿನ ಅಕ್ಷರಗಳು ಲೋಪವಾಗಿರುವುದರಿಂದ ವಾಕ್ಯ ಅಪೂರ್ಣವಾಗಿದೆ. ರೇವಣದೇವ ಹೆಸರಿನ ಹಿಂದಿರುವ ಕುಮಾರ ಪದದ ಬಗ್ಗೆ ವಿದ್ವಾಂಸರು ಏನೂ ಹೇಳಿಲ್ಲ. ಮಹಾಮಂಡಳೇಶ್ವರನ ಮಗನಾದ ಕುಮಾರನು ರೇವಣದೇವರ ಉಪಾಸಕನಾಗಿರಬಹುದೆಂದು ತಿಳಿಯಲವಕಾಶವಿದೆ. ಅಥವಾ ಕುಮಾರನು ರೇವಣದೇವನ ಹೆಸರಿನಿಂದ ಕರೆಯಲ್ಪಡುತಿದ್ದನೆಂದೂ ಊಹಿಸಬಹುದು. ಎರಡನೆ ಊಹೆ ನಿಜವಿದ್ದಲ್ಲಿ ಆ ಕಾಲದಲ್ಲಿಯೂ ಈಗಿನಂತೆ ತಂತಮ್ಮ ಮಕ್ಕಳಿಗೆ ಆಚಾರ್ಯರ ಹೆಸರು ಇಡುತ್ತಿದ್ದರೆಂದು ಖಚಿತವಾಗಿ ಹೇಳಬಹುದು. ಆಲೂರು (ಕ್ರಿ.ಶ. ೯೯೯), ಬೇವಿನಹಳ್ಳಿ (ಕ್ರಿ.ಶ. ೯೬೮) ಬಾಗಳಿ (ಕ್ರಿ.ಶ. ೧೦೬೮), ಆಲೂರು (ಕ್ರಿ.ಶ. ೧೦೭೯), ಗೊಬ್ಬೂರು ಇತ್ಯಾದಿ ಶಾಸನಗಳಲ್ಲಿ ರೇವರಸ, ರೇವಣಕುಮಾರ ರೇವರಸ, ಕುಮಾರ ರೇವಣದೇವ ಮುಂತಾದ ಹೆಸರುಗಳು ಉಕ್ತಗೊಂಡಿರುವುದು ಗಮನಾರ್ಹವಾದ ಸಂಗತಿ. ಇದಲ್ಲದೆ ವಸೂತಿ (ಕ್ರಿ.ಶ. ೧೧೫೨), ನರೇಗಲ್ಲ (ಕ್ರಿ.ಶ. ೧೧೫೨) ಮುಂತಾದ ಶಾಸನಗಳಲ್ಲಿ ರೇವಣಸಿದ್ಧರ ಉಲ್ಲೇಖಗಳಿವೆ."

"ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಕೊಲ್ಲೂರಿನ ಕ್ರಿ.ಶ. ೧೧೯೯ರ ಶಾಸನದಲ್ಲಿ ರೇವಣೇಶ್ವರ (ರೇವಣಸಿದ್ದೇಶ್ವರ) ದೇವರ ನಿತ್ಯಸೇವೆಗೆಂದು ಪ್ರಸನ್ನ ರಾಮೇಶ್ವರದೇವರ ಮತ್ತು ಅಲೇಶ್ವರದೇವರ ಮಠದ ಆಚಾರ್ಯರಿಗೆ ಕಲಚೂರಿ ಚಕ್ರವರ್ತಿ ಸೋವಿದೇವನ ಮಾಂಡಲಿಕ ಸಗರ ೩೦೦ ಬಾಡದ ಸೌಧರೆ ಮಹಾಪ್ರಭುಗಳು ದತ್ತಿ ನೀಡಿರುವ ವಿಷಯ ಉಲ್ಲೇಖಗೊಂಡಿದೆ. ಇಲ್ಲಿ ಬಂದಿರುವ ಗೊಗ್ಗೇಶ್ವರ, ಏಚಲೇಶ್ವರ, ರನ್ನೇಶ್ವರ ರಾಮೇಶ್ವರ ಮತ್ತು ಅಲೇಶ್ವರ ದೇವರುಗಳು ಮಠದ ಹೆಸರುಗಳಾಗಿರಬಹುದು? ಅವುಗಳ ಗುರುಗಳನ್ನು ಸ್ಥಾನಾಧಿಪತಿ ಇಲ್ಲವೆ ಸ್ಥಾನಾಚಾರ್ಯರೆಂದು ಗುರುತಿಸಲಾಗಿದೆ. ಇವರನ್ನು ವೀರಶೈವರ ಇಂದಿನ ಶಿವಾಚಾರ್ಯರನ್ನು ಹೋಲಿಸಬಹುದು."

ಕ್ರಿ.ಶ. ೧೧೭೫ರ ಹೋತ್ಗಲ್ ಶಾಸನದಲ್ಲಿ "ಕಲ್ಯಾಣ ಚಾಲುಕ್ಯರ ದೊರೆ ಸೋಮೇಶ್ವರನ ಮಹಾಮಂಡಳೇಶ್ವರ ದಂಡನಾಯಕ ವರಕುಮಾರ ಬಮ್ಮಿದೇವರಸ ಅಲ್ಲಪುಲಿ ದೇವರನು ಸಿದ್ಧರೇವಣ (ರೇವಣಸಿದ್ಧ) ಯ್ಯಗಳ ಪಾದ ಪ್ರಕ್ಷಾಲನಮಾಡಿ, ಸಗರ ೫೦೦ ಬಾಡದ ಬಳಿಯ ಹೋತಗಲ್‌ನ

ಸಮಸ್ತರ ಸಮ್ಮುಖದಲ್ಲಿ ದೇವಕಾರ್ಯಕ್ಕಾಗಿ ದತ್ತಿ ನೀಡಿರುವುದು ಈ ಶಾಸನದ ಪಠ್ಯವಾಗಿದೆ. ಇದು ಸಿರಿವಾಳ ಶಾಸನದ ..... ಸಿದ್ಧಶಿವಯೋಗಿ ಶಾನ್ತಿಮಯ್ಯ ..... ಸಿರಿವೊಳನ ..... ಸಿದ್ಧರೇವಣ ..... ರನ್ನು ಉಲ್ಲೇಖಿಸಿ, ಆ ಶಾಸನದ ಐತಿಹಾಸಿಕ ಸಂಗತಿಗೆ ಪುಷ್ಠಿಯೊದಗಿಸುತ್ತದೆ."

ಕ್ರಿ.ಶ. ೧೧೭೬ರ ಏವೂರು ಶಾಸನದಲ್ಲಿ "ಕಳಚೂರಿ ಸಂಕಮದೇವನ ಮಾಂಡಲಿಕ ಏವೂರು ಮಹಾಪ್ರಭು ತ್ರಿಪುರಾಂತಕದೇವರಸನು ಎಳಮೇಲ ಸಿಂಹಪರ್ಷೆಯ ಮಳೆಯಾಳ ದೇವರ ಶಿಷ್ಯಪರಂಪರೆಯ ಜ್ಞಾನರಾಶಿಪಂಡಿತನಿಗೆ ಭೂದತ್ತಿಯನ್ನು ನೀಡಿದ ಈ ಶಾಸನದಲ್ಲಿ 'ರೇವಣಂ' ಎನ್ನುವ ಪದ ರೇವಣಸಿದ್ಧರನ್ನು ಸೂಚಿಸಿರುವಂತೆ ಕಾಣುತ್ತದೆ.

ಲಕುಲೀಶ ಪಾಶುಪತದ ಪ್ರಮುಖ ಪ್ರಭೇದವಾಗಿ ಕಂಡುಬರುವ ಸಿಂಹಪರ್ಷೆಯ ಕರ್ನಾಟಕದಲ್ಲಿ ಕಾಣಿಸಿಕೊಂಡಿರುವುದು ಕ್ರಿ.ಶ. ೧೦೦೦ದಷ್ಟು ಹಿಂದೆ. ಸದ್ಯದ ಮಟ್ಟಿಗೆ ಕ್ರಿ.ಶ.ಸು. ೯೮೦ ಎಂದಿಟ್ಟುಕೊಳ್ಳಬಹುದು. ಸಿಂಹಪರ್ಷೆಯ ಅತ್ಯಂತ ಪ್ರಾಚೀನ ಉಲ್ಲೇಖವಿರುವುದು ಆಂಧ್ರದ ತಾಂಡಿಕೊಂಡದ ಕ್ರಿ.ಶ. ೯೫೮ರ ಶಾಸನದಲ್ಲಿ. ಈ ಸಿಂಹಪರ್ಷೆಯ ಉಪಪ್ರಭೇದವಾದ ಎಳಮೇಲ ಸಿಂಹಾಪರ್ಷೆಯ ಮೂಲಪುರುಷ ಮಲೆಯಾಳ ಪಂಡಿತ. ಎಲಮೇಳ (ಆಲಮೇಲ) ಗ್ರಾಮದ ಯಾವುದೇ ದೇವಾಲಯದ ಸ್ಥಾನಾಚಾರ್ಯನಾಗಿದ್ದ ಉಲ್ಲೇಖ ಸಿಗುವುದಿಲ್ಲ. ಆದರೆ ಈತನು ಕ್ರಿ.ಶ. ೧೦೭೦ರಲ್ಲಿ ಮುದನೂರು ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದುದು ತಿಳಿಯುತ್ತದೆ.

ಆದ್ಯ ವಚನಕಾರನಾದ ದೇವರ (ಜೇಡರ) ದಾಸಿಮಯ್ಯನ ಕಾರ್ಯಕ್ಷೇತ್ರವೂ ಇದೇ ಮುದನೂರು. ಮಲೆಯಾಳ ಪಂಡಿತನು ದಾಸಿಮಯ್ಯನಕ್ಕಿಂತ ಪೂರ್ವದಲ್ಲಿ ಮುದನೂರಿನಲ್ಲಿದ್ದು ಪಾಶುಪತಮತದ ಮುದನೂರಿನ ರಾಮನಾಥ ದೇವಾಲಯ ಲಕುಲೀಶ ಪಾಶುಮತದ ಚಟುವಟಿಕೆಗಳನ್ನು ನಡೆಸುತ್ತಿದ್ದನೆಂದು, ದೇವಾಲಯ ಲಕುಲೀಶ ಪಾಶುಪತಮತದ ಚಟುವಟಿಕೆಯ ಕೇಂದ್ರಸ್ಥಾನವಾಗಿ ಗಮನಸೆಳೆಯುತ್ತದೆ."

ಕ್ರಿ.ಶ. ೧೧೮೦ರ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಕೊಳಕೂರಿನಲ್ಲಿರುವ ಈ ಶಾಸನವನ್ನು ಕಲ್ಯಾಣಚಾಲುಕ್ಯ ಅರಸ ವೀರಸೋಮೇಶ್ವರನ ಮಹಾಮಂಡಳೇಶ್ವರನಾದ ದೇವರಸನು ಕೆತ್ತಿಸಿದ್ದಾನೆ. ಬಡಗಣ ನಾಡಿನೊಳಗೆ ಪ್ರಸಿದ್ಧವಾಗಿರುವ ರೇವಣೇಶ್ವರ ದೇವರ ನಿತ್ಯಸೇವೆಗೆಂದು ದತ್ತಿನೀಡಿರುವ ಸಂಗತಿ ಇದು ಒಳಗೊಂಡಿದೆ. ಸಮಾಜದಲ್ಲಿ ಗಣ್ಯ ವ್ಯಕ್ತಿಗಳೂ ಸಹ ಆಚಾರ್ಯರ ಪವಿತ್ರ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರೆಂದೂ ಈ ಶಾಸನದಿಂದ ತಿಳಿಯುತ್ತದೆ. ಕಲ್ಯಾಣ ಚಾಲುಕ್ಯರ ಸಮಯದಲ್ಲಿಯೇ ರೇವಣಸಿದ್ಧರು ದಂತಕಥೆಯಾಗಿ ಹೋಗಿದ್ದರೆನ್ನುವುದು ಇದು ಶೃತಪಡಿಸುತ್ತದೆ.

ಕ್ರಿ.ಶ. ೧೧೮೭ರ ತುಮಕೂರು ತಾಲೂಕಿನ ಗುಬ್ಬಿ ಹತ್ತಿರ ಬಯಿರಿತ್ತಿ ಗ್ರಾಮದ ಉತ್ತರಕ್ಕಿರುವ ಜಡೆಮುನಿಯಪ್ಪನ ಬಂಡೆಯ ಮೇಲೆ ಕೆತ್ತಲಾಗಿದೆ. ಅದು ಹೀಗಿದೆ.

ಮುಸಕುಂದ ಮಹಾರುಸಿಯ ಪಿತಾಮ ರೇವಣಸಿದ್ಧಯ
ದೇವರಿದ್ದ ..... ತಾವ ನಾ ಸಿಮ ಮುನಿಗಳು ಪೂಜೆ
ಮಾಡಿದ ಮುಲತಾಣ

ಮುಸಕುಂದ ಮಹಾರುಸಿಯ ಪಿತಾಮಯ ರೇವಣಸಿದ್ಧಯ್ಯ ದೇವರು ಇದ್ದ ಸ್ಥಳವನ್ನು ಆ ಸೀಮೆಯ ಮುನಿಗಳು ಪವಿತ್ರ ಭಾವನೆಯಿಂದ ಪೂಜೆಯನ್ನು ಮಾಡಿದ ಸ್ಥಳ ಇದಾಗಿದೆ ಎಂಬುದು ಶಾಸನ ವಿಷಯವಾಗಿದೆ. ಮಹಾತಪಸ್ವಿ ಎಂದು ಹೆಸರು ಪಡೆದಿರುವ 'ಮುಸಕುಂದ' ಎನ್ನುವವನು ಜಡೆಮುನಿಯಪ್ಪನ ಅಂದರೆ ಅಗಸ್ತ್ಯಮಹರ್ಷಿಯ ಮಗ ಇಲ್ಲವೆ ಶಿಷ್ಯನಾಗಿದ್ದವ. ಅವನು ತನ್ನ ತಂದೆಗೆ ಬೋಧೆಮಾಡಿದ ಆಚಾರ್ಯ ರೇವಣಸಿದ್ಧ ಗುರುವನ್ನು ತನ್ನ 'ಅಜ್ಜ' (ಪಿತಾಮಹ) ಎಂದು ಭಾವಿಸಿ ಆಚಾರ್ಯರು ಪಾದ ಪ್ರಕ್ಷಾಲನ ಮಾಡಿದ್ದ ಆ ಜಾಗವನ್ನು ಇಲ್ಲವೇ ಪ್ರದೇಶವನ್ನು ಪುಣ್ಯತಾಣವೆಂದು ಭಾವಿಸಿ ಶಾಸನ ಕೆತ್ತಿಸಿದ್ದಾನೆ.

ಕ್ರಿ.ಶ. ೧೧೮೭ರ ಸಿರಿವಾಳ ಶಾಸನದಲ್ಲಿ ಸಿದ್ಧ ಶ್ರೀಮತ್ ಸಿದ್ಧ ಸಾತೇಶ್ವರ ದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ, ಜೀರ್ಣೋದ್ಧಾರಕ್ಕೆ ಕೊಟ್ಟ ದಾನದ ವಿವರಣೆಯಿದೆ. ಈ ದಾನವನ್ನು ಕೊಡುವಾಗ ಬಿಜ್ಜಳನ ಗರ್ವಭಂಗ ಮಾಡಿದ್ದು, ಮಾಸೂರಿನ ಕೆರೆಯಲ್ಲಿ ಹೂಳಿದ ಖಡ್ಗವನ್ನು ತೆಗೆದುಕೊಡುವುದಕ್ಕಾಗಿ ಹರಿಗೋಲಿನಲ್ಲಿ ಹೊಳೆದಾಟಿದ ವಿಷಯ ಮತ್ತು ನಾಥ ಪಂಗಡದವನಾಗಿ ಇದ್ದಾಗ ಜನರ ನಿಂದನೆಗೆ ಗುರಿಯಾಗಿ ಮುಂದೆ ವೀರಶೈವನಾಗಿ ರೇವಣಸಿದ್ಧನಾದ ರೀತಿಯನ್ನು ಇದು ವರ್ಣಿಸುತ್ತದೆ. ಹಾಗೆಯೇ ಚಿದಂಬರದಲ್ಲಿ ಪೊನ್ನಾಂಬಲದ ನಟೇಶ್ವರ ಮೂರ್ತಿಯ ಮುಂದೆ ಹಾಡಿ ಕುಣಿದಾಡಿದ ಸಂಗತಿಯನ್ನು ಈ ಶಾಸನ ಮನದುಂಬಿ ಬಣ್ಣಿಸುತ್ತದೆ.

ಆಚಾರ್ಯ ರೇವಣಸಿದ್ಧರ ಹಾಗೂ ಆಚಾರ್ಯ ಮರುಳಸಿದ್ಧರ ಸಂಬಂಧವನ್ನು ಹೇಳುವ ಕ್ರಿ.ಶ. ೧೧೯೩ರ ಅವ್ವೆರಹಳ್ಳಿ ಶಾಸನ ಹೀಗಿದೆ :

೧. ಆನಂದ ಸಂವಚರದ ಆಗೊರತ್ರೆಗೆ
೨. ಹಜರ ಗವಿ ಬಗಿಲ ತೆಗೆದು ಮುಲೋ
೩. ಕ ಅರಿವಹಿ ಪವಡವ ತೋರಿದರು
೪. ರೇವಣಸಿದ್ಧೇಶ್ವರನ ಮಗ
೫. ಮರುಳಸಿದ್ಧೇಶ್ವರನು ......

ಇನ್ನುಳಿದ ಸಾಲುಗಳು ಅಸ್ಪಷ್ಟವಾಗಿವೆ. ಅವ್ವೆರಹಳ್ಳಿಯ ಭೀಮೇಶ್ವರ ದೇವಾಲಯದ ಮುಂದಿನ ಗಾಳೀಮಂಟಪದ ಹಿಂಭಾಗದಲ್ಲಿರುವ ಈ ಶಾಸನ ಪವಾಡ ಮೆರೆದ ಆಚಾರ್ಯ ಮರುಳಸಿದ್ಧರು ರೇವಣಸಿದ್ಧರ ವರಪುತ್ರ ಎಂದು ಹೇಳುತ್ತದೆ. ರೇವಣಸಿದ್ಧರು ಮರುಳಸಿದ್ಧರಿಗೆ ಮಾರ್ಗತೋರಿ ಸಹಕರಿಸುವುದರಿಂದ ಹೀಗೆ ಭಾವಿಸಬಹುದು. ಇಲ್ಲಿ ಬಂದಿರುವ 'ಪವಾಡಪದ' ಗಮನಾರ್ಹವಾದುದು.

ಮಹಾರಾಷ್ಟ್ರದ ಪಂಡರಪುರ ಹತ್ತಿರದ ಪುಳಜೆಯಲ್ಲಿ ರೇವಣಸಿದ್ಧರ ಹೆಸರಿನಲ್ಲಿರುವ ಪವಿತ್ರ ತೀರ್ಥವನ್ನು ಅಮುಗಿದೇವನ ಕ್ರಿ.ಶ. ೧೨೦೦ರ ಈ ಶಾಸನದಲ್ಲಿ ಹೀಗೆ ಉಲ್ಲೇಖಗೊಂಡಿದೆ.

..... ಶ್ರೀಸಿದ್ಧಸೋಮನಾಥ ದೇವರ್ಗೆ ಅಸುರಿಯಲ್ಲಿ

ಡವಳ ಪಳದ ಬಟ್ಟೆ ಬಿವಡಳೆಯಂ? ಪಡುವಲು

ವೃತ್ತಿ ೧ ಜಕ್ಕಿಯರ ಬಾವಿ ರೇವಣಮಡು

ಹೂದೋಟ ೧ ..... ಸರ್ವ ನಮಸ್ಯ ಧಾರಾಪೂರ್ವಕಂ

ಮಾಡಿಕೊಟ್ಟರು .....

ಎಂದು ಬರುವ ಶಾಸನದಲ್ಲಿ ರೇವಣಸಿದ್ಧರ ಹೆಸರಿನಲ್ಲಿರುವ ತೀರ್ಥ (ಮಡು) ಕುಂಡದ ಪ್ರಸ್ತಾಪವಿದೆ. ತೀರ್ಥದ ಸಂರಕ್ಷಣೆಗೆಂದು ಕೆಲವು ಆದಾಯಗಳನ್ನು ನೀಡಿರುವುದು ಇದರ ಸಂಗತಿಯಾಗಿರಬಹುದು 'ಅಮುಗಿದೇವ' ಮಾಹೇಶ್ವರ ಗಣಕುಲಕ್ಕೆ ಸೂರ್ಯನಂತೆ ಇದ್ದವನೆಂದು ಕೀರ್ತಿಸಲಾಗಿದೆ. ಶಾಸನದಲ್ಲಿ ಈತನನ್ನು ..... ಸಿದ್ಧಕುಲಾನ್ವಯಾರ್ಣವ ಸುಧಾಕರ' ಎಂದು ಕರೆಯಲಾಗಿದೆ. ಈತ 'ಗೃಹಸ್ಥಯತಿ'ಯಾಗಿ ಪ್ರಸಿದ್ಧಿಪಡೆದಿರುವ 'ಸಿದ್ಧ'ನಾಗಿದ್ದವನು. ಈತನಲ್ಲಿ ಆ ಶಕ್ತಿಬರಲು (ತಪಸ್ಸಿದ್ದಿ) ಆಚಾರ್ಯ ರೇವಣಸಿದ್ಧರೆ ಕಾರಣರೆಂದು ಬಹುತೇಕ ವಿದ್ವಾಂಸರ ಒಟ್ಟಾಭಿಪ್ರಾಯವಿದೆ. ಆಚಾರ್ಯ ರೇವಣಸಿದ್ಧರನ್ನು 'ಸಿದ್ಧಕುಲಚಕ್ರವರ್ತಿ' ಎಂದು ಕರೆದಿರುವುದಕ್ಕೆ ಮಹತ್ವದ ಹಿನ್ನೆಲೆಯಿದೆ. ಎನ್ನುವುದು ಅಮುಗಿದೇವನ ಈ ಶಾಸನ ಮೇಲಿನ ಮಾತಿಗೆ ಪುಷ್ಠಿನೀಡುತ್ತದೆ.

ಕ್ರಿ.ಶ. ೧೨೦೦ರ ಗುಲಬರ್ಗಾ ಜಿಲ್ಲೆಯ ನಡಾಲ ಗ್ರಾಮದಲ್ಲಿರುವ ಶಾಸನವು ಆಚಾರ್ಯ ರೇವಣಸಿದ್ಧರ ಹೆಸರಿನಲ್ಲಿರುವ ರೇವಣೇಶ್ವರ ದೇವರ ನೈವೇದ್ಯಕ್ಕೆಂದು ೧೦೦ ಮತ್ತು ೭೫೦ ಮತ್ತರು ಭೂಮಿಯನ್ನು ದತ್ತಿ ನೀಡಿರುವುದನ್ನು ಉಲ್ಲೇಖಿಸಿದೆ.

..... ವಿಜಯನಗರದಲ್ಲು ಆದಿ ಪ್ರತಮಾಚಾರ್ಯ ಪೀಟಸ್ತರಾದ ರೇವಣಾರಾಧ್ಯಸ್ವಾಮಿಯರ ಗೋತ್ರಕದೇವರು ಕೊಲ್ಲಿಪಾಕಿ ವೀರಭದ್ರಸ್ವಾಮಿಯವರು ..... ರಾಚವಟ್ಟೆ ವೀರಭದ್ರ ಕುಲದೇವರು ..... ಷಟಸ್ಥಲವರ್ಗ ಸಿಂಹಾಸನ ಸ್ಥಾಪಕಾಯ ..... ರೇಣುಕ ಗೋತ್ರ ಶಿವಲಿಂಗಸ್ವಾಮಿಯವರಿಗೆ ಶಿಷ್ಯರಾದ ಹರಿಹರ ಮಹಾರಾಯ ..... ಸೋಸಲೆಯಲ್ಲಿ ಮಠ ಸ್ಥಾಪಿಸಿಕೊಟ್ಟ .....

ಗುಲಬರ್ಗಾ ಜಿಲ್ಲೆಯ ಇಂಗಳಗಿ (ಕ್ರಿ.ಶ. ೧೨೦೬ರ ಶಾಸನದಲ್ಲಿ)ಯ ರೇವಣೇಶ್ವರ (ರೇವಣಸಿದ್ಧ) ದೇವರ ನಿತ್ಯಸೇವೆಗೆಂದು ಸೇವುಣರ ಅರಸ ಸಿಂಘಣನ ಮಹಾಮಾಂಡಲಿಕ ಇಂಗಳಗಿಯ ಪ್ರಭುನಾಗರಸನು ದತ್ತಿ ನೀಡಿದ ಸಂಗತಿಯು ಈ ಶಾಸನದ ವಸ್ತುವಾಗಿದೆ. ಶಾಸನದಲ್ಲಿ ಉಕ್ತವಾಗಿರುವ ಪಂಚಮಠಗಳು ಮತ್ತು ಗಣಮಠಗಳು ಪಂಚಪೀಠಗಳ ಶಾಖಾಮಠವಾಗಿರುವುದಕ್ಕೆ ಸಾಧ್ಯತೆಗಳಿವೆ. ಶ್ರೀಶೈಲದಲ್ಲಿ ಇಂತವೇ ಪಂಚಮಠ, ಗಣಮಠಗಳಿದ್ದು ಇವೆಲ್ಲಾ ಶಾಸನೋಕ್ತವಾಗಿವೆ. ಸಾರಂಗಮಠ

(ರಂಭಾಪುರಿ), ಸಂದಿಮಠ (ಉಜ್ಜಯಿನಿ), ಘಂಟಾಮಠ (ಕೇದಾರ), ವಿಭೂತಿಮಠ (ಶ್ರೀಶೈಲ) ಮತ್ತು ರುದ್ರಾಕ್ಷಿಮಠ (ಕಾಶಿ)ಗಳು ಆಯಾ ಪೀಠಗಳನ್ನು ಪ್ರತಿನಿಧಿಸುತ್ತಿವೆ. ಈ ಪಂಚಮಠಗಳ ಮೇಲೆ ಪೀಠಗಳ ಒಡೆತನವಿದ್ದರೂ ಈಗ ಅವೆಲ್ಲಾ ದೇವಸ್ಥಾನದ ಅಧೀನದಲ್ಲಿವೆ ಎಂದು ಹೇಳಲಾಗುತ್ತಿದೆ. ಈ ಪಂಚಮಠಗಳು ಜೀರ್ಣಾವಸ್ಥೆಯಲ್ಲಿವೆ. ಇವಲ್ಲದೆ ಗಣಮಠ, ಅರಸಮಠ, ಪರ್ವತಮಠಗಳೂ ಶಾಸನೋಕ್ತವಾಗಿವೆ.

ಕ್ರಿ.ಶ. ೧೨೬೩ರ ರಾಣೇಬೆನ್ನೂರು ತಾಲೂಕಿನ ಚೌಡದಾನಪುರ ಶಾಸನ ತೋರಗಲ್ ನಾಡಿನಲ್ಲಿ ದಾಸೋಹಂಭಾವದಿಂದ ಜೀವಿಸಿದ್ದ ಬಲ್ಲಾಳದೇವನಿಗೆ ರೇವಣಸಿದ್ಧರು ಅನುಗ್ರಹಿಸಿರುವುದನ್ನು ಮತ್ತು ಕಲ್ಲರಸನ ಹೆಂಡತಿ ಕನ್ನಾದೇವಿಗೆ ಭಕ್ತದೀಕ್ಷೆಯನ್ನು ಬಲ್ಲಾಳನಿಂದ ಕೊಡಲ್ಪಟ್ಟ ಸಂಗತಿಯನ್ನು ಹಾಗೆಯೇ ಆಕೆಯ ಪತಿಯ ಮರಣ ಸೂಚಕವೆಂಬಂತೆ ರೇವಣಸಿದ್ಧರು ಕೊರಳ ಮಾಂಗಲ್ಯವನ್ನು ತೆಗೆಯುವ ಸೂಚನೆಯನ್ನು ನೀಡುತ್ತದೆ. ತುಂಗಭದ್ರೆಯ ದಡದಲ್ಲಿರುವ ಮುಕ್ತೇಶ್ವರ ಕ್ಷೇತ್ರಕ್ಕೆ ಕನ್ನಾದೇವಿ ಬಂದು ಲಿಂಗಜಂಗಮಾರ್ಚನೆ ಕೈಗೊಂಡು ಕಲಿದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಸಂಗತಿಯನ್ನು ಪ್ರಸ್ತುತ ಶಾಸನ ಕಾವ್ಯಮಯವಾಗಿ ಕಟ್ಟಿಕೊಡುತ್ತದೆ.

ಕ್ರಿ.ಶ. ೧೨೫೦ರ ಮಂಡ್ಯ ಜಿಲ್ಲೆಯ ಮರಡಿಪುರ ಶಾಸನದಲ್ಲಿ ಸಕಲ ಶಿವಶರಣರನ್ನು ಸ್ಮರಿಸುವಾಗ 'ದಾರುಕ, ರೇಣುಕ, ಸಾರೂಪ್ಯಸಾಯುಜ್ಯ' ಎಂದು ವರ್ಣಿಸಲಾಗಿದೆ. ಹಾಗೆಯೇ ಕ್ರಿ.ಶ. ೧೩೪೭ರ ತೊಂಡವಾಡ ಶಾಸನದಲ್ಲಿಯೂ 'ವಿಜಯನಗರದ ಆದಿಪ್ರಮಥಾಚಾರ್ಯ ಪೀಠಸ್ಥರಾದ ರೇವಣಾರಾಧ್ಯ ಸ್ವಾಮಿಯವರ ಗೋತ್ರಕ ದೇವರು ಕೊಲ್ಲಿಪಾಕಿಯ ವೀರಭದ್ರಸ್ವಾಮಿಯವರು ...... ರಾಚವಟ್ಟಿ ವೀರಭದ್ರ ಕುಲದೇವರು....... ಷಟ್‌ಸ್ಥಲವರ್ಗ ಸಿಂಹಾಸನಸ್ಥಾಪಕಾಯ...... ರೇಣುಕ ಗೋತ್ರ ಶಂಭುಲಿಂಗ ಸ್ವಾಮಿಯವರಿಗೆ ಶಿಷ್ಯರಾದ ಹರಿಹರ ಮಹಾರಾಯ...... ಸೋಸಲೆಯಲ್ಲಿ ಮಠ ಸ್ಥಾಪಿಸಿಕೊಟ್ಟು' ಎಂಬ ಉಲ್ಲೇಖವನ್ನು ಎಂ.ಜಿ.ನಾಗರಾಜ ಅವರು ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ ಎಂಬ ಲೇಖನದಲ್ಲಿ ಉಲ್ಲೇಖಿಸುತ್ತಾರೆ.

ಕ್ರಿ.ಶ. ೧೫೧೩ರ ಗದಗ ಹತ್ತಿರವಿರುವ ಲಕ್ಷ್ಮೇಶ್ವರ ಗೊಡಚಿ ವೀರಭದ್ರದೇವಾಲಯದ ಪೂರ್ವಾಭಿಮುಖವಾಗಿ ಗೋಡೆಯಲ್ಲಿಯ ಶಾಸನ 'ವೀರಶೈವ ಕಾವ್ಯ, ಚರಿತ್ರೆ, ಪುರಾಣದಲ್ಲಿ ಉಕ್ತವಾಗಿರುವಂತೆ ಆಚಾರ್ಯ ರೇಣುಕ, ರೇವಣಸಿದ್ಧ, ದಾರುಕ ಮತ್ತು ಮರುಳಸಿದ್ಧರ ಅವತಾರ, ವೃತ್ತಾಂತ ಮುಂತಾದವುಗಳು ಈ ಶಾಸನದಲ್ಲಿ ಮೂಡಿಬಂದಿವೆ. ರೇವಣಸಿದ್ಧರು ಹದಿನಾಲ್ಕುನೂರು ವರುಷ ಮರ್ತ್ಯದಲ್ಲಿದ್ದು ಸೋಮೇಶನಲ್ಲಿ ಐಕ್ಯವಾಗಿ ಮತ್ತೆ ಪೂಲಿಯ ಮರಳಸಿದ್ಧೇಶ್ವರನಾಗಿ ಜನಿಸಿ, ಕೊನೆಗೆ ಸಗುಣ ಲೀಲೆ ಸಾಕೆಂದು ಶಾಲಿವಾಹನ ಶಕೆ ೧೪೩೫ (ಕ್ರಿ.ಶ. ೧೫೧೩)ರಲ್ಲಿ ಪುಲಿಗೆರೆಯಲ್ಲಿ ಲಿಂಗರೂಪತಾಳಿ (ಐಕ್ಯ)ದನೆಂದು ಈ ಶಾಸನ ಉಲ್ಲೇಖಿಸುತ್ತದೆ. ಆಚಾರ್ಯರ 'ಲಿಂಗೋದ್ಭವ' ಸಂಗತಿಗೆ ಇದು ಚಾರಿತ್ರಿಕ ಒತ್ತು ನೀಡುತ್ತದೆ ಎಂದು ಹೇಳಬಹುದು. ರೇಣುಕರು, ರೇವಣಸಿದ್ಧರು,

'ಲಿಂಗದುದರೋದ್ಭವ', 'ಶಿವಲಿಂಗೋದ್ಭವ'ರಾಗಿ ಅವತರಿಸಿದರೆಂದು ಶಾಸನ ಸ್ಪಷ್ಟವಾಗಿ ಹೇಳುತ್ತದೆ. ರೇಣುಕರು ರೇವಣಸಿದ್ಧರು ಭಿನ್ನರೆಂದೂ, ಹದಿನಾಲ್ಕುನೂರು, ವರುಷ ಬಾಳಿ, ಅನೇಕ ಪವಾಡ ಮಾಡಿದರೆಂದು ಹೇಳುವಲ್ಲಿ ವಿಶೇಷ ಬೆಳಕು ಚೆಲ್ಲುತ್ತದೆ.'

ಕ್ರಿ.ಶ. ೧೬೦೭ರ ಗುಮ್ಮಳಾಪುರದ ಶಾಸನದಲ್ಲಿ 'ಭಾರದ್ವಜ ಗೋತ್ರದ ಪಡಿವಿಡಿ ವರ್ಗದ ಕೊಲ್ಲಿಪಾಕಿ ರೇವಣಸಿದ್ಧೇಶ್ವರ ಸಂಪ್ರದಾಯದವರಾದ ಗುಮ್ಮಳಾಪುರದ ಸಿಂಹಾಸನ ಕರ್ತರಾದ....' ಎಂಬ ಉಲ್ಲೇಖವಿದೆ.

ಹೀಗೆ ಶಾಸನಗಳಲ್ಲಿ ಮಾಂಡಲೀಕರ ಉಪಾಸಕನಾಗಿ, ಸ್ಥಾನಾಚಾರ್ಯನಾಗಿ, ಸಿದ್ಧಶಿವಯೋಗಿಯಾಗಿ, ಸಿದ್ಧಕುಲಚಕ್ರವರ್ತಿಯಾಗಿ ಮೆರೆದ ರೇವಣರು ರೇವರಸ, ರೇವಣಕುಮಾರ, ರೇವಣದೇವ ಮುಂತಾದ ಹೆಸರುಗಳಿಂದ ಕೀರ್ತಿವೆತ್ತನಾಗಿದ್ದಾನೆ. ಇಲ್ಲಿಯವರೆಗೆ ಕಥಾವಸ್ತುವನ್ನು ಸಮೀಕ್ಷೆ ಮಾಡಿದಾಗ ಕೆಲವು ಐತಿಹಾಸಿಕ ಸಂಗತಿಗಳು ಬೆಳಕಿಗೆ ಬರುತ್ತವೆ. ವೀರಶೈವ ಇತಿಹಾಸದಲ್ಲಿ ರೇಣುಕರ ಹೆಸರು ತುಂಬಾ ಪ್ರಾಚೀನವಾದದ್ದು. ಈಗಾಗಲೇ ತಿಳಿದಿರುವಂತೆ ರೇಣುಕಾಗಸ್ತ್ಯ ಸಂವಾದವೇ ಸಿದ್ಧಾಂತ ಶಿಖಾಮಣಿ ಎಂಬುದು. ಅದ್ವೈತಮತ ಪ್ರತಿಷ್ಠಾಪನಾಚಾರ್ಯರಾದ ಶಂಕರಾಚಾರ್ಯರಿಂದ ಭಾಷ್ಯಗಳು ರಚನೆಗೊಂಡಂತೆ; ವೀರಶೈವ ಪ್ರತಿಷ್ಠಾಪನಾಚಾರ್ಯರೆನಿಸಿದ ರೇಣುಕರಿಂದ ಭಾಷ್ಯಗಳು ರಚನೆಯಾದವೆಂಬುದು ಶ್ರೀಪತಿ ಪಂಡಿತರ ಶ್ರೀಕರ ಭಾಷ್ಯದಿಂದ ತಿಳಿದಬರುತ್ತದೆ. ಇದರಿಂದ ಈತನೊಬ್ಬ ಐತಿಹಾಸಿಕ ವ್ಯಕ್ತಿಯೇ ಹೊರತು ಪೌರಾಣಿಕ ವ್ಯಕ್ತಿಯಲ್ಲ.

ಮುಂದೆ ಇದೇ ಪರಂಪರೆಯಲ್ಲಿ ಬಂದ ರೇವಣಸಿದ್ಧರು ಬಾಳೆಹೊನ್ನೂರಿನಲ್ಲಿ ನೆಲೆಸಿದ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಪ್ರಾಚೀನ ಶಾಸನ ಹಾಗೂ ಸಾಹಿತ್ಯದಲ್ಲಿ ಈತನದು ಬಹುದೊಡ್ಡ ಹೆಸರಾಗಿ ಕಾಣಿಸುತ್ತದೆ. ವೀರಶೈವ ಆಚಾರ್ಯರನ್ನು ಕುರಿತು ರಚನೆಯಾದ ಇದುವರೆಗಿನ ಸಾಹಿತ್ಯದಲ್ಲಿ ಈತನದೇ ಸಿಂಹಪಾಲು. ಹಾಗೆಯೇ ತೀರ್ಥಗಳು, ಪುಣ್ಯಕ್ಷೇತ್ರಗಳು, ಸ್ಮಾರಕಗಳು, ದೇವಸ್ಥಾನಗಳು ವಿಪುಲವಾಗಿ ಕಾಣುತ್ತವೆ. ಇವುಗಳ ಹಾದಿಯನ್ನೇ ಹಿಡಿದು ರೇವಣಸಿದ್ಧರ ಲೋಕಸಂಚಾರದ ನೀಲನಕ್ಷೆಯನ್ನು ರಚಿಸಲು ಸಾಧ್ಯವಿದೆ.

ಕಾವ್ಯೋಕ್ತ ಮಂಗಳವಾಡ, ಮಾಸನೂರು, ಸಿದ್ಧನಕೆರೆಗಳಲ್ಲಿ ರೇವಣಸಿದ್ಧರ ಗುಡಿ, ಸ್ಮಾರಕ ಮತ್ತು ಮಠಗಳಿವೆ. ಸೊಲ್ಲಾಪುರದಲ್ಲಿ ಹಾವುಗೆಯಿರಿಸಿದ ಗದ್ದುಗೆ ಮತ್ತು ಗುಡಿಯಿದೆ. ಕಲ್ಯಾಣಕ್ಕೆ ಬಂದರೆ ರೇವಣಸಿದ್ಧನ ಹೆಸರಿನ ಮಠ, ರುದ್ರಮುನಿದೇವರ ಗವಿಗಳಿರುವುದನ್ನು ಕಾಣಬಹುದು. ಹಾಗೆಯೇ ಕಕುದ್ಗಿರಿ ಇಲ್ಲವೇ ಶಿವಗಂಗೆಯಲ್ಲಿ ರೇವಣಸಿದ್ಧರಿದ್ದರೆಂಬುದಕ್ಕೆ ಆ ಬೆಟ್ಟದ ಪೂರ್ವ ದಿಕ್ಕಿನಲ್ಲಿ ರೇವಣಸಿದ್ಧರ ಗುಡಿಯಿದೆ. ಅಲ್ಲಿಯೇ ಮೇಲಣ ಗವಿಮಠದಲ್ಲಿ ರುದ್ರಮುನಿಯ ಸ್ಮಾರಕವಿದೆ; ವೀರಸಿಂಹಾಸನ ಮಠವಿದೆ. ಇವೆಲ್ಲವನ್ನು ಬೊಮ್ಮರಸ ತನ್ನ ಕಾವ್ಯದಲ್ಲಿ ಉಲ್ಲೇಖಿಸುತ್ತಾನೆ. ಕಂಚಿಯಲ್ಲಿ ರೇವಣಸಿದ್ಧರ ಗುಡಿ, ಕೆಲವು ಲಿಂಗವಂತರ ಮಠಗಳು ಇರುವುದನ್ನು ಗಮನಿಸಬೇಕು. "ರೇವಣಸಿದ್ಧನು

ರಾಮೇಶ್ವರಕ್ಕೆ, ಲಂಕೆಗೆ ಹೋದ ಸಂಗತಿ ಎಲ್ಲರೂ ಹೇಳಿದ್ದಾರೆ. ಲಂಕಾದ್ವೀಪದ ಜಾಫಾರ್ನ ಜಿಲ್ಲೆಯಲ್ಲಿ ಕಿರುಮಲ್ಯೆ ಗ್ರಾಮದಲ್ಲಿ ರೇಣುಕಾಶ್ರಮ ಎಂಬ ಒಂದು ಲಿಂಗವಂತರ ಮಠವಿದೆ. ಅಲ್ಲಿ ಸಾವಿರಾರು ಮಂದಿ ಲಿಂಗವಂತರಿದ್ದಾರೆ. ಆ ಮಠಕ್ಕೆ ಕೈಲಾಸದೇಶಿಕರ್ ಎಂಬ ಸ್ವಾಮಿಗಳಿದ್ದಾರೆ. ಇದರಿಂದ ರೇವಣಸಿದ್ಧನು ಲಂಕೆಗೆ ಹೋಗಿ ಬಂದ ವಿಷಯ ನಿಜವೆನಿಸುತ್ತದೆ.''[೧೭] ಸಿದ್ಧಗಿರಿ ಮಠದಲ್ಲಿಯ ನಿದರ್ಶನದಿಂದ ರೇವಣಸಿದ್ಧರು ಕೊಲ್ಲಾಪುರಕ್ಕೆ ಹೋಗಿರುವ ಸಂಗತಿ, ಅಲ್ಲಿಯೇ ಮರಳಸಿದ್ಧನಿಗೆ ಶಿವದೀಕ್ಷೆ ನೀಡಿದನೆಂಬ ವಿಚಾರವಿದೆ. ಕುಟಿಲಸಿದ್ಧರನ್ನು ಕುಂಭಕೋಣಂನಲ್ಲಿ ಭಂಗಿಸಿದನೆಂಬ ಸಂಗತಿ ಸೋಸಲೆ ರೇವಣಾಚಾರ್ಯರಿಂದ ತಿಳಿದುಬರುತ್ತದೆ. ಇಂದಿಗೂ ಅಲ್ಲಿಯ ಅರುವ ಪೆರಿಯಮಠ ವೀರಸಿಂಹಾಸನ ಮಠವೆಂದು ಪ್ರಸಿದ್ಧವಾಗಿದೆ. ಹೀಗಾಗಿ ಕಾವ್ಯ ಪುರಾಣೋಕ್ತ ಸಂಗತಿಗಳು ಬಹುಮಟ್ಟಿಗೆ ಚರಿತ್ರೆಗೆ ಹತ್ತಿರವಾಗಿವೆ.

''ಪಸೆನಿಂದು ಮಹೀಶ್ವರ ಪುತ್ರಿಯರ್ಕರೊಳ್ ಹರುಷದೆ ತಡೆದ ರೇವಣಸಿದ್ಧ ಮಹಾಪ್ರಭು ರುದ್ರಮುನೀಶ್ವರನೆಂಬ ಪುತ್ರನ''[೧೮] ಎಂಬ ಉಲ್ಲೇಖದಿಂದ ಪುರಾಣಕಾರರು ಹೇಳುವಂತೆ ಕಂಚಿಯ ರಾಜೇಂದ್ರಚೋಳ, ಮಂಗಳವಾಡದ ವೀರಬಿಜ್ಜಳರ ಮಕ್ಕಳನ್ನು ರೇವಣಸಿದ್ಧ ಮದುವೆಯಾಗಿದ್ದನು. ಮಂಗಳವಾಡದಲ್ಲಿ ಕೆರೆಕಟ್ಟಿಸುವ ಸಂದರ್ಭದಲ್ಲಿ ತನ್ನ ಕೈಯಿಂದ ಕೆಲಸ ಮಾಡಲಾಗದೆಂಬ ಚೋಳರಾಜನ ಮಗಳ ಹೊಟ್ಟೆಯಲ್ಲಿರುವ ಶಿಶುವನ್ನು ನವಮಾಸಗಳ ಕಾಲ ಕೆರೆಯ ಏರಿಯಲ್ಲಿ ಸಂರಕ್ಷಿಸಿದ ಉಲ್ಲೇಖವನ್ನು ಕಾವ್ಯಗಳು ವರ್ಣಿಸುತ್ತವೆ. ಇದರ ಸತ್ಯಾಸತ್ಯತೆ ಏನೇ ಇರಲಿ, ಇಂದಿಗೂ ಅಲ್ಲಿ ರೇವಣಸಿದ್ಧನ ಮಠವಿದೆ; ಸಿದ್ಧನ ಕೆರೆಯೆಂದು ಜನ ಈಗಲೂ ಕರೆಯುತ್ತಾರೆ ಮತ್ತು ರುದ್ರಮುನಿಯು ಹುಟ್ಟಿದ ಸ್ಥಳವನ್ನು ಜನರು ಇಂದಿಗೂ ತೋರಿಸುತ್ತಾರೆ.

ಇನ್ನು ಈತನ ಸಾಮಾಜಿಕ ಕಾರ್ಯವೈಖರಿಯನ್ನು ಮನದುಂಬಿ ಕಾವ್ಯಗಳು ವರ್ಣಿಸುತ್ತವೆ. ವೈದ್ಯ, ಜ್ಯೋತಿಷ್ಯ ಹಾಗೂ ಶಿವಯೋಗಗಳಲ್ಲಿ ಗುರುವಾಗಿದ್ದ ರೇವಣಸಿದ್ಧರು ತನ್ನ ಹೆಂಡತಿಯ ಗರ್ಭದಲ್ಲಿನ ಮೂರುತಿಂಗಳ ಪಿಂಡವನ್ನು ಸಂಸ್ಕಾರದಿಂದ ಹೂಳಿದುದು, ನವಮಾಸ ತುಂಬಿ ಕೂಸಾದುದು, ಸೊನ್ನಲಿಗೆಯ ಸುಗ್ಗವ್ವೆಯ ಗರ್ಭದಿಂದ ಶಿವಯೋಗಿ ಸಿದ್ಧರಾಮ ಜನಿಸುವ ಭವಿಷ್ಯವಾಣಿ ನುಡಿಯುವುದಲ್ಲದೆ ''ರಾಜರ ಜೊತೆಗೆ ಸಂಬಂಧ ಬೆಳೆಸಿದ್ದರೂ ಬಡವರ ಉದ್ಧಾರ ಕಾರ್ಯವನ್ನು ನಿರ್ಲಕ್ಷಿಸಬಾರದೆಂಬುದು ರೇವಣಸಿದ್ಧನ ನೀತಿಯಾಗಿತ್ತು. ಕಲ್ಯಾಣದ ಬಡ ಗಾಣಿಗ ಕಲ್ಲಿಸೆಟ್ಟಿಯ ಮನೆಯಲ್ಲಿ ಗಾಣ ನಡೆಸಿ ಅವರಿಗೆ ಸಂಪತ್ತು ಬರುವಂತೆ ಮಾಡಿದುದಲ್ಲದೆ ಆ ದಂಪತಿಗಳಿಗೆ ಕಣ್ಣುಗಳನ್ನು (ಅವರಿಗೆ ಒಂದೊಂದು ಕಣ್ಣಿರುವುದಿಲ್ಲ) ಕೊನೆಗೆ ತದನಿಧಿಯನ್ನೂ ಕೊಡುತ್ತಾನೆ. ಕಲ್ಲಿಸೆಟ್ಟಿಯ ಗ್ರಾಮದ ಕೊಟ್ಟಿಗೆಯಲ್ಲಿ ಪರದೇಶಿಯಂತೆ ಅವರ ಮನಸ್ಸನ್ನು ಪರೀಕ್ಷಿಸಲು ರೇವಣಸಿದ್ಧ ನಿಂತಾಗ ಅನುಕಂಪದೋರಿ, ಅವನಿಗೆ ಕಲ್ಲಿಸೆಟ್ಟಿ ಗಾಣದ ಕೆಲಸ ಒಪ್ಪಿಸಿರುತ್ತಾನೆ. ಮಂಗಳವಾಡದ ಪುಣ್ಯಾಂಗನೆ ಮಾಯಿದೇವಿ ಬಡವಿ ಆದರೂ ತುಂಬಾ ಬಳಲಿದವನಂತೆ ತನ್ನ ಮನೆಗೆ ಬಂದ ರೇವಣಸಿದ್ಧನ ಮೇಲೆ

ಕರುಣೆದೋರಿ ಅವನಿಗೆ ಊಟವಿತ್ತು ನೀರುತರುವ ಕೆಲಸಕ್ಕೆ ಇಟ್ಟುಕೊಳ್ಳುತ್ತಾಳೆ. ಅವಳ ಮನೆಯಿಂದ ಲಂಕೆಗೆ ಹೋಗುವ ಸಂದರ್ಭ ರೇವಣಸಿದ್ಧರಿಗೆ ಬಂದಾಗ ಅವನು ಅವಳಿಗೆ ಒಂದು ವಿಭೂತಿಗಟ್ಟಿಯನ್ನು ಲಿಂಗವಾಗಿಸಿ, ಇನ್ನೊಂದನ್ನು ಚಿನ್ನವಾಗಿಸಿಕೊಟ್ಟು ಹೋಗುತ್ತಾನೆ. ಅಷ್ಟೇ ಅಲ್ಲ ಮುಂದೆ ಅವಳ ಮಗಳನ್ನು ಬಲಿಕೊಡಲು ಒಯ್ಯುತ್ತಿದ್ದಾಗ ಅವಳನ್ನು ಉಳಿಸಿದ್ದಾನೆ. ಮನಶುದ್ಧಿಯ ಬಡವರ ಬಗೆಗಿನ ರೇವಣಸಿದ್ಧನ ದೃಷ್ಟಿಯನ್ನು ಈ ಘಟನೆಗಳು ಎತ್ತಿ ತೋರಿಸುತ್ತವೆ"[೧೯] ಎಂಬುದಾಗಿ ಡಾ.ಬಿ.ವಿ. ಮಲ್ಲಾಪುರ ವಿಶ್ಲೇಷಿಸುತ್ತಾರೆ.

ವ್ಯತಿರಿಕ್ತವಾಗಿ ರೇವಣಸಿದ್ಧನು ಗರ್ವಪಡುವವರನ್ನು ಸಹಿಸದೆ ಅವರಿಗೆ ಬುದ್ಧಿ ಕಲಿಸಬೇಕೆಂಬ ಧೋರಣೆಯುಳ್ಳ ಅನೇಕ ಘಟನೆಗಳು ಕಾವ್ಯಗಳಲ್ಲಿ ಚಿತ್ರಿತಗೊಂಡಿವೆ. ಕೊಲ್ಲಾಪುರದ ಗೋರಕ್ಷನ ಗರ್ವಭಂಗ, ಬಿಜ್ಜಳನ ಕುದಿವ ಓಗರದ ಅಪಾತ್ರ ಭಿಕ್ಷೆ ಸಂದರ್ಭ, ಮಾಸೂರಿನ ಶಿವಾಲಯದ ಮುಂದಿನ ಮರದಲ್ಲಿ ಮನೆಮಾಡಿಕೊಂಡು ಪ್ರಾಣವಧೆ ಮಾಡುತ್ತಿದ್ದ ತಗಣಿರೂಪದ ರಾಕ್ಷಸ ದಂಪತಿಗಳನ್ನು ಶಿಕ್ಷಿಸಿದ್ದು ಇವೆಲ್ಲ ರೇವಣಸಿದ್ಧರು ಅಸಹಾಯಕರನ್ನು ರಕ್ಷಿಸುವ ಆದರ್ಶಗಳಾಗಿವೆ. 'ಸಕಲಪ್ರಾಣಿಗಳ್ಗೆ ಹಿತಕರಮಪ್ಪ' ತಟಾಕವನ್ನು ನಿರ್ಮಿಸುವುದು, ಶಿವಪುರಗಳನ್ನು ಸ್ಥಾಪಿಸುವುದು, ಅನ್ನಸತ್ರಗಳನ್ನು ನಿರ್ಮಿಸುವುದು ಈತನಲ್ಲಿದ್ದ ಭೂತಾನುಕಂಪೆ ಗುಣಕ್ಕೆ ನಿದರ್ಶನಗಳಾಗಿವೆ.

ಶೈವಧರ್ಮ ಪಾರಮ್ಯವನ್ನು ಪ್ರತಿಪಾದಿಸುವ ಈ ಎಲ್ಲ ಕೃತಿಗಳು ಅನ್ಯಧರ್ಮದ ಅನುಯಾಯಿಗಳು ಮನಪರಿವರ್ತನೆಗೆ ಕಾರಣವಾಗಬಹುದಾದ ಕೆಲವು ಸನ್ನಿವೇಶಗಳನ್ನು ನಿರ್ಮಿಸಿಕೊಳ್ಳುತ್ತವೆ. ಉದಾಹರಣೆಗೆ ಕಂಚಿಪುರದಲ್ಲಿ ವಿಷ್ಣುಮೂರ್ತಿ ಪ್ರತಿಷ್ಠಾಪನೆಯ ಪ್ರಯತ್ನ, ಆ ಪ್ರಯತ್ನದಲ್ಲಿ ವಿಫಲತೆ ಕೊನೆಗೆ ರೇವಣಸಿದ್ಧ ಶೈವಶಿವಾಚಾರ್ಯರ ತತ್ವ ಪ್ರತಿಪಾದನೆ ಹೀಗೆ ಸ್ವಧರ್ಮ ಮಹಿಮೆಯನ್ನು ಕೊಂಡಾಡುವ ಅನೇಕ ಘಟನೆಗಳು ಕೃತಿಗಳಲ್ಲಿ ಎಡೆಪಡೆದಿವೆ. ಕೊನೆಗೆ ಎಲ್ಲ ಕೃತಿಗಳು ರೇವಣಸಿದ್ಧರ ವ್ಯಕ್ತಿತ್ವವನ್ನು ಹರಿಹರ ತನ್ನ ರಗಳೆಯಲ್ಲಿ ಉಲ್ಲೇಖಿಸಿದಂತೆ

ಪೋರ್ದಿಯುಂಪೊದನೀಜಗದ ಸಂಸಾರಮಂ
ಸಾರ್ದು ಸಾರಂ ನೋಡ ಭವಕುಲದ ಭಾರಮಂ [೨೦]

ಎಂದು ಪ್ರತಿಪಾದಿಸುವುದರ ಜೊತೆ ಜೊತೆಗೆ "ಬಹಿರ್ಭಾವದ ಮಾಯಾ ಸುಖಸಂಭಮಂ ಶರೀರಕ್ಕಾಗುತ್ತಿರೆ ನಿರ್ಲೇಪನಾಗಿ ಸಾಕ್ಷಿಯಾಗಿ" ನಿಲ್ಲುವ ಪರಮಸಿದ್ಧನಾಗಿದ್ದಾನೆಂಬುದನ್ನು ಕಾವ್ಯಗಳು ನಿರೂಪಿಸುತ್ತವೆ.

**ಕೊನೆಟಿಪ್ಪಣಿಗಳು**

೧. ಸಿದ್ಧರಾಮ ಚಾರಿತ್ರದಲ್ಲಿ ಉಲ್ಲೇಖಿತವಾದ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನು ಅನುಬಂಧ ೩ರಲ್ಲಿ ಕೊಡಲಾಗಿದೆ.
೨. ಚೆನ್ನಬಸವ ಪುರಾಣ (ಗದ್ಯಾನುವಾದ), ಎಂ.ಚಂದ್ರಶೇಖರ, ಪದ್ಯ ೨೩, ಪುಟ ೨೫,
೩. ಚೆನ್ನಬಸವ ಪುರಾಣದಲ್ಲಿ ಉಲ್ಲೇಖಿತದಲ್ಲಿಗೊಂಡ ರೇವಣಸಿದ್ಧರ ಪಠ್ಯಭಾಗವನ್ನು ಅನುಬಂಧ ೩ ರಲ್ಲಿ ಕೊಡಲಾಗಿದೆ.

೪. ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಡಾ.ಎಂ.ಎಂ.ಕಲಬುರ್ಗಿ, ಪುಟ ೩

೫. ಗುರುರಾಜಚರಿತೆ (ಸಂ), ಸಂ.ಶಿ.ಭೂಸನೂರುಮಠ, ಕಥಾಸಾರ, ಪುಟ ೫

೬. ಗುರುರಾಜ ಚಾರಿತ್ರದಲ್ಲಿಯ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನು ಅನುಬಂಧ ೩ರಲ್ಲಿ ಕೊಡಲಾಗಿದೆ.

೭. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿಯ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನ ಅನುಬಂಧ ೩ರಲ್ಲಿ ಕೊಡಲಾಗಿದೆ.

೮. ರಾಜಶೇಖರ ವಿಳಾಸ (ಸಂ), ಡಾ.ಆರ್.ಸಿ.ಹಿರೇಮಠ, ಡಾ.ಎಂ.ಎಸ್.ಸುಂಕಾಪುರ, ಪುಟ X- XI

೯. ರಾಜಶೇಖರ ವಿಳಾಸದಲ್ಲಿಯ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನು ಅನುಬಂಧ ೩ ರಲ್ಲಿ ಕೊಡಲಾಗಿದೆ.

೧೦. ಚತುರಾಚಾರ್ಯರ ಚಾರಿತ್ರ (ಸಂ), ಎನ್. ಬಸವರಾಧ್ಯ, ಪೀಠಿಕೆ, ಪುಟ ೨

೧೧. ಚತುರಾಚಾರ್ಯರ ಚಾರಿತ್ರದಲ್ಲಿಯ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನು ಅನುಬಂಧ ೩ರಲ್ಲಿ ಕೊಡಲಾಗಿದೆ.

೧೨. ಲಿಂಗಪುರಾಣದಲ್ಲಿ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನು ಅನುಬಂಧ ೩ರಲ್ಲಿ ಕೊಡಲಾಗಿದೆ.

೧೩. ಪ್ರಭು ಚರಿತೆಯಲ್ಲಿಯ ರೇವಣಸಿದ್ಧರಿಗೆ ಸಂಬಂಧಿಸಿದ ಪಠ್ಯಭಾಗವನ್ನು ಅನುಬಂಧ ೩ ರಲ್ಲಿ ಕೊಡಲಾಗಿದೆ.

೧೪. ಜನಪದ ಹಾಲುಮತ ಮಹಾಕಾವ್ಯ (ಸಂ), ವೀರಣ್ಣದಂಡೆ, ಪುಟ CXLV

೧೫. ಜನಪದ ಹಾಲುಮತ ಮಹಾಕಾವ್ಯದಲ್ಲಿಯ ರೇವಣಸಿದ್ಧರಿಗೆ ಸಂಬಂಧಿಸಿದಂತೆ ಪಠ್ಯಭಾಗವನ್ನು ಅನುಬಂಧ ೩ ರಲ್ಲಿ ಕೊಡಲಾಗಿದೆ.

೧೬. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ಪುಟ ೨೮೯

೧೭. ಬಸವೇಶ್ವರ ಸಮಕಾಲೀನರು, ಬಸವಸಮಿತಿ, ಬೆಂಗಳೂರು, ಪು. ೨೨೫

೧೮. ರಾಜಶೇಖರ ವಿಳಾಸ, ಆಶ್ವಾಸ - ೧, ಪದ್ಯ - ೫೫

೧೯. ವೀರಶೈವ ದರ್ಶನ (ಸಂ), ಡಾ.ಆರ್.ಸಿ.ಹಿರೇಮಠ, ಪು. ೩೦೯

೨೦. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ಸ್ಥಲ - ೧, ಪದ್ಯ - ೯೦

೬

# ರೇವಣಸಿದ್ಧರು : ಕೃತಿಗಳ ವಿಶ್ಲೇಷಣೆ

೬

# ರೇವಣಸಿದ್ಧರು : ಕೃತಿಗಳ ವಿಶ್ಲೇಷಣೆ

ರೇವಣಸಿದ್ದೇಶ್ವರನನ್ನು ಕುರಿತು ಹರಿಹರಾದಿಯಾಗಿ ಚೆನ್ನಬಸವ, ಚತುರ್ಮುಖ ಬೊಮ್ಮರಸ, ಮಲ್ಲಣ್ಣ, ಚೆನ್ನಬಸವಶಾಸ್ತ್ರಿ, ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಕೃತಿಯನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಆ ಕೃತಿಗಳ ಹಿಂದೆ ಕವಿಗಳ ಆಲೋಚನೆ, ಧೋರಣೆ, ಅನುಭವ, ತತ್ವಗಳ ಬದ್ಧತೆ ಮುಂತಾದ ಅಂಶಗಳು ಪ್ರಕಟಗೊಂಡಿರುವ ಸಾಧ್ಯತೆ ಇರುತ್ತದೆ. ಈ ಎಲ್ಲಾ ಅಂಶಗಳನ್ನು ತನ್ನ ಕಾವ್ಯ ಉದ್ದೇಶಕ್ಕನುಗುಣವಾಗಿ ಸನ್ನಿವೇಶ, ಪಾತ್ರಚಿತ್ರಣ, ವರ್ಣನೆ, ಭಾಷೆ ಇತ್ಯಾದಿಗಳಲ್ಲಿ ಪ್ರತಿಪಾದಿಸುವ ಪ್ರಯತ್ನ ಮಾಡಿರುತ್ತಾರೆ. ಈ ಅಂಶಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಯಾವುದೇ ಕಾವ್ಯದ ಹುಟ್ಟಿಗೆ ಒಂದು ಘಟನೆ ಇರಲೇಬೇಕು ಅದು ಸನ್ನಿವೇಶ ಇಲ್ಲವೆ ಒಂದು ಪ್ರಸಂಗವನ್ನು ಸೃಷ್ಟಿಸುತ್ತದೆ. ಹಾಗೆಯೇ ಕವಿಗಳ ಬದುಕಿನ ಪರಿಸರಕ್ಕೆ, ಪ್ರಾದೇಶಿಕತೆಗೆ ಅನುಗುಣವಾಗಿ ಭಾಷೆ, ಶೈಲಿ, ಕಾವ್ಯಪ್ರಯೋಗ ಭಿನ್ನವಾಗಿರುತ್ತದೆ. ಹೀಗಾಗಿ ರೇವಣಸಿದ್ಧರನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ಕಾವ್ಯರಚಿಸಿದ ಬೇರೆ ಬೇರೆ ಕವಿಗಳ ರಚನಾ ಕೌಶಲ್ಯ ಬೇರೆ ಬೇರೆಯಾಗಿರುತ್ತದೆಂಬುದು ಇಲ್ಲಿ ಗಮನಿಸ ಬೇಕಾದ ಸಂಗತಿ. ಪ್ರಸ್ತುತ ರೇವಣಸಿದ್ಧರನ್ನು ಕುರಿತು ರಚನೆಯಾದ ಕೃತಿಗಳ ವಿಶ್ಲೇಷಣೆ ಯನ್ನು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಮಾಡಿಕೊಡಲಾಗಿದೆ.

### ೧. ಸಾಹಿತ್ಯಿಕ ವಿಶ್ಲೇಷಣೆ

### ಅ. ಸನ್ನಿವೇಶ

ರೇವಣಸಿದ್ದೇಶ್ವರ ರಗಳೆಯನ್ನು ಬರೆದ ಹರಿಹರ ಕೈಲಾಸದಲ್ಲಿ ರೇವಣಸಿದ್ಧರು

ಮಾಡಿದ ತಪ್ಪಿಗೆ ಶಿವನಿಂದ ಶಾಪಗ್ರಸ್ತನಾಗಿ ಭೂಲೋಕದಲ್ಲಿ ಜನಿಸುವಂತೆ ತಾನು ರಚಿಸಿದ ಶಿವಶರಣರ ಎಲ್ಲ ರಗಳೆಗಳಲ್ಲಿ ಚಿತ್ರಿಸುವಂತೆ ಇಲ್ಲಿಯೂ ರೇವಣಸಿದ್ಧನಿಗೆ ಶಾಪವನ್ನು ಆರೋಪಿಸುವುದು ಅದರ ವಿಮೋಚನೆಗಾಗಿ ಭೂಲೋಕದಲ್ಲಿ ಜನಿಸುವುದೆಂಬ ಸನ್ನಿವೇಶವನ್ನು ಹೀಗೆ ನಿರ್ಮಿಸುತ್ತಾನೆ.

"..... ರೇಣುಕನ ಮಗಂ ನೋಡಿ
ಕರುಣದಿಂ ಬಾಯ ತಂಬುಲವನೀಯಲ್ಕೆಂದು
ಕರೆಯೆ ಭಯಭಕ್ತಿಯಿಂದ ದೇವ ಬದುಕಿದೆನೆಂದು
ಸಡಗರಿಸುತಂ ದಾರುಕನನಲ್ಲಿ ದಾಂಟಿ ಬರೆ
ಮೃಡನೀಕ್ಷಿಸುತ್ತಂ ಪ್ರಸಾದಮುಮನೀವುತಿರೆ
ದಾರುಕಂ ದುಮ್ಮನವನೊಳಕೊಂಡು ತಲೆವಾಗೆ
ಮಾರಾರಿ ಬೆಸಸುತಿರ್ದ ಸುರರರ್ಬೆರಗಾಗೆ
ದಾರುಕನ ನಿಂತು ದಾಂಟುವರೆ ರೇಣುಕ ನಿನಗೆ
ಧಾರಣಿಯೊಳೊಗೆವ ಜಡಜನ್ಮವಾದುದು ನಿನಗೆ" [೧]

ಶಿವನ ಅಣತೆಯಂತೆ ಬಾಯ ತಂಬೂಲವನ್ನು ತೆಗೆದುಕೊಳ್ಳುವ ಹುಮ್ಮಸ್ಸಿನಿಂದ ದಾರುಕನನ್ನು ದಾಟಿದ ತಪ್ಪಿಗೆ ರೇವಣಸಿದ್ಧ ಜಡಜನ್ಮ ಪಡೆದು ಭೂಮಿಯಲ್ಲಿ ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ಜನಿಸುವಂತೆ ಚಿತ್ರಿಸುತ್ತಾನೆ.

ಹರಿಹರನಿಂದ ಪ್ರಭಾವಿತನಾದ ಕವಿ ಚೆನ್ನಬಸವ ರೇವಣರ ಜನನ ವೃತ್ತಾಂತವನ್ನು ಹರಿಹರನ ರೀತಿಯಲ್ಲಿಯೇ ಚಿತ್ರಿಸಿದರೂ, ರೇಣುಕರನ್ನು ಕರೆಯಲು ಕಾರಣವನ್ನು ಮಾತ್ರ ಕವಿ ಸ್ಪಷ್ಟಪಡಿಸಿಲ್ಲ. "......... ಅಲ್ಲಿರ್ಪ ರೇಣುಕಾಚಾರ್ಯನಂಪೇಳಿ ಮಹಾದೇವನು ರೇಣುಕನಂ ಕರೆಯಲಿಕ್ಕೆ ಬಂದೆರುಗುವ ಸಂದರ್ಭದಲ್ಲಿ ದಾರುಕನು ದಾಂಟಬರಲು ದಾರುಕನು ಅಸಮಾಧಾನಗೊಂಡುದನರಿತು ರೇಣುಕನಂ ಭೂಲೋಕದೊಳು ಜನಿಸುವಂತೆ ಆಜ್ಞಾಪಿಸಲು, ರೇಣುಕನು ಶಿವನಂ ಪ್ರಾರ್ಥಿಸಲಾಗಿ ನೀನು ಚಿಂತಿಸದೆ ಲಿಂಗೋದ್ಭವನಾಗಿ ಲಿಂಗಸಂಗಗೊಂಡು ಲಿಂಗೈಕ್ಯವಡೆಯುವೆಯಾಗಿ ನಿನಗೆ ಮರ್ತ್ಯದ ಕೋಟಲೆಸೋಂಕದಂತೆ ಮಂಗಳವಂ ಮಾಳ್ಪೆನು ಮಹಿಮೆವೆತ್ತಿರುವೆ ಪೋಗೆಂದು ನಿರೂಪಿಸಿದ ಶಿವಶಾಸನವಂ ಶಿರಸಾವಹಿಸಿ ಚಂದ್ರಶೇಖರ ಪಾದಾರವಿಂದಮಗಳಿಗೆರಗಿ ವೀರಮಾಹೇಶ್ವರ ಪ್ರಥಮಗುರುಸಿದ್ಧರೇವಣಮೂರ್ತಿ ಭೂಲೋಕದೊಳು" [೨] ರೇವಣಸಿದ್ದೇಶ್ವರ ಪುರಾಣವನ್ನು ಬರೆದ ಚತುರ್ಮುಖ ಬೊಮ್ಮರಸ ರೇಣುಕರ ಜನನ ವೃತ್ತಾಂತಕ್ಕೆ ದಾರುಕನನ್ನು ದಾಟಿದ ತಪ್ಪನ್ನೆ ಹಿಡಿದಿದ್ದಾನೆ.

ಧರಣಿಯೊಳು ಕೀರ್ತಿಯನು
ಪಡೆದಂದೇಶದೊಳು

ಮೆರೆವ ಕೊಲ್ಲಿಪಾಕಿಯೊಳು ಇಂದುಧರ
ಸೋಮನಾಥ ಲಿಂಗದೊಳು
ದಯವಾದನು ರೇವಣಸಿದ್ದೇಶನು[1]

ಎಂದು ಭೂಮಿಯಲ್ಲಿ ಜನಿಸಿ ಕೀರ್ತಿಯನ್ನು ಪಡೆದು ಬರುವಂತೆ ಆದೇಶಿಸುತ್ತಾನೆ.

ಈ ಮೇಲೆ ಪ್ರಸ್ತಾಪಿಸಿದ ಕವಿಗಳಗಿಂತ ಭಿನ್ನವಾದ ರೀತಿಯಲ್ಲಿ ರೇವಣಸಿದ್ದೇಶ್ವರರ ಜನನದ ಕಾರಣವನ್ನು ಕಟ್ಟಿಕೊಡುವ ರೇವಣಸಿದ್ದೇಶ್ವರ ಕಾವ್ಯದ ಕರ್ತೃ ಚಾಲವಾದಿ ಮಲ್ಲಣ್ಣ ಮತ್ತು ರೇಣುಕ ವಿಜಯ ಪುರಾಣದ ಕರ್ತೃ ನಂಜನಗೂಡು ಶ್ರೀಕಂಠಶಾಸ್ತ್ರೀಗಳು ಚಿತ್ರಿಸುತ್ತಾರೆ. ಭೂಲೋಕದಲ್ಲಿ ಧರ್ಮಕೆಟ್ಟು ಅಧರ್ಮ ತಾಂಡವಾಡುವ, ಗರ್ವತನದಿಂದ ಸೊಕ್ಕಿಮೆರೆಯುವ ಧನವಂತರು ಸಾಮಾನ್ಯರ ಸುಖ-ದುಃಖಗಳನ್ನು ಕಡೆಗಣಿಸಿದ್ದಾರೆ. ಇದಕ್ಕೆ ಸೂಕ್ತ ಪರಿಹಾರವನ್ನು ಮಾರ್ಗೋಪಾಯವನ್ನು ನೀಡುವುದಕ್ಕೋಸ್ಕರ ರೇವಣಸಿದ್ಧರಂತಹ ಸಿದ್ಧ ಪುರುಷರು ಮರ್ತ್ಯಲೋಕದಲ್ಲಿ ಜನಿಸಿ ದೇವಲೋಕದ ಆಶಯವನ್ನು ಪ್ರಚಾರಿಸುವ ಅಭೀಪ್ಸೆಯನ್ನು ಈ ಕವಿಗಳು ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಪರಶಿವನೇ ರೇವಣಸಿದ್ಧನಾಗಿ ಭೂಲೋಕದಲ್ಲಿ ಜನಿಸಿದನೆಂಬ ಸಂಗತಿಯನ್ನು ಜಾಲವಾದಿ ಮಲ್ಲಣ್ಣ ಹೀಗೆ ಹೇಳುತ್ತಾನೆ. ನಾರದನ ಬಾಯಿಂದ ಮರ್ತ್ಯದ ಗುಣಗಳನ್ನು ಕೇಳಿದ ಶಿವ

ಎಂದ ನುಡಿಯನು ಕೇಳಿ ಹರ ತಾ
ನಿಂದು ಮರ್ತ್ಯವ ನೋಡಬೇಕೆನು
ತೊಂದು ರೂಪವ ಧರಿಸಿದನು ಆನಂದಪದವಿಯಲಿ
ಚಂದ್ರಶೇಖರ ಕೊಟ್ಟು ಕಳುಹಿದ
ನಂದದಲಿ ಸ್ವರೂಪ ತನ್ನಯ
ಮುಂದೆ ತೋರುವೆನೆನುತ ಕರುಣದಿ ಗುರುವೆ ಬರುತಿರ್ದ[2]

ಸೃಷ್ಟಿಗೀಶ್ವರ ಸಿದ್ಧರೇವಣ
ಜಟ್ಟೂರ ಪಟ್ಟಣಕೆ ಬಂದನು
ಹೊಟ್ಟೆಗಿಲ್ಲದೆ ಬಳೆದನೀಗಲೆ ಒಬ್ಬನೆಂದೆನುತ
ಅಟ್ಟಡವಿ ಅರಣ್ಯದೊಳು ತಾ
ನಟ್ಟ ನೇಗಿಲ ಹೊಡೆವ ಸ್ತ್ರೀಯಳು
ಕೊಟ್ಟಣವ ಕೊಡ ನೀರ ಹೊಯ್ವಳು ನಿಟ್ಟುಪಾಸದಲಿ[3]

ಶಿವನೇ ರೇವಣಸಿದ್ದೇಶ್ವರನ ಹೆಸರಿನಲ್ಲಿ ಜನಿಸಿದರೆ ರೇಣುಕವಿಜಯ ಪುರಾಣದಲ್ಲಿ ಶಿವನ ಅಣತಿಯಂತೆ ರೇಣುಕರು ಮರ್ತ್ಯದಲಿ ಜನಿಸಿದರೆಂದು

ಕಂದಲಾಲಿಸು ಶೈವಧರ್ಮಕೆ
ಕುಂದು ಬಂದಿಹುದ್ಯೆದೆ ಧಾತ್ರಿಯೊ
ಳಿಂದು ನಾಸ್ತಿಕಹತಕಕರಕಟಾ ಸೊಕ್ಕುತಾಸ್ತಿಕರಂ
ದಂದುಗಕ್ಕೆಡೆಮಾಡಿ ನೋಯಿಸು
ವಂದವನು ಸೊಲ್ಲಿಸುವುದರಿದದ
ರಿಂದ ಧರ್ಮೋದ್ಧಾರಣಮೆಸಗುವುದಲ್ತೆ ಕರ್ತವ್ಯಂ [೬]

ಹೀಗೆ ರೇವಣರ ಜನನ ಸಂದರ್ಭದ ಸನ್ನಿವೇಶಗಳನ್ನು ನಿರ್ಮಿಸಿದ ಕವಿಗಳು ಕಥಾನಾಯಕನ ಜೀವನದಲ್ಲಾಗುವ ಪರಿವರ್ತನೆಗಳು, ಪರಿಸರಗಳನ್ನು ಗಣನೆಯಲ್ಲಿಟ್ಟುಕೊಂಡು ಸನ್ನಿವೇಶಗಳು ರೂಪುಗೊಂಡಿವೆ. ಲೋಕ ಕಲ್ಯಾಣಕ್ಕಾಗಿ ಹೊರಟ ರೇಣುಕರು ಮಾಸನೂರಿನ ಶಿವಾಲಯದ ಕಾರಣಿಕ ತಗಣಿಗಳನ್ನು ಕಠಾರಿಯನ್ನಾಗಿ ಮಾಡುವ ಸನ್ನಿವೇಶ, ಕಂಚಿಪುರದ ವಿಷ್ಣು ಪ್ರತಿಮೆಯನ್ನು ನಿಲ್ಲಿಸುವ ಸನ್ನಿವೇಶ, ಮಂಗಳವಾಡದಲ್ಲಿ ಬಿಜ್ಜಳನಿಂದ ಕುದಿಯುವ ಓಗರವನ್ನು ಭಿಕ್ಷೆಯೆಂದು ಪಡೆದು ರಾಜ್ಯದ ವಿನಾಶಕ್ಕೆ ಕಾರಣವಾಗುವ ಸನ್ನಿವೇಶವು ಇವುಗಳ ಜೊತೆಗೆ "ಲೋಕಕ್ಕೆ ತಾ ಮರಳೊ ತನಗೆ ಲೋಕ ಮರಳುವೆಂಬಂತೆ", ದುಷ್ಟರ ನಿಗ್ರಹ ಶಿಷ್ಟ ಪರಿಪಾಲನೆಯ ಪ್ರಸಂಗಗಳನ್ನು ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಒಟ್ಟಿನಲ್ಲಿ ಧರ್ಮ-ಅಧರ್ಮ, ಶಿಷ್ಟ-ದುಷ್ಟ, ಆಚರಣೆ-ಅನುಸಂಧಾನ, ವೀರಶೈವ ತತ್ವ ಮತ್ತು ಅದರ ದರ್ಶನ ಮೇಳವಿಸಿಕೊಂಡ ಸನ್ನಿವೇಶಗಳನ್ನು ಕಟ್ಟಿಕೊಡುವಲ್ಲಿ ಕವಿಗಳು ಯಶಸ್ವಿಯಾಗಿದ್ದಾರೆ.

### ಆ. ಪಾತ್ರ ಚಿತ್ರಣ

ಒಂದು ಕಾವ್ಯದಲ್ಲಿ ಕಥಾವಸ್ತು ಘಟನಾ ಪ್ರಧಾನವಾದಂತೆ ಆ ಕಾವ್ಯದಲ್ಲಿ ಚಿತ್ರಿತವಾದ ಪಾತ್ರಗಳು ಅಷ್ಟೇ ಪ್ರಮುಖವಾಗುತ್ತವೆ. ಒಂದರ್ಥದಲ್ಲಿ ಕಾವ್ಯದ ಜೀವನಾಡಿ ಪಾತ್ರಗಳು. ಕವಿಯ ಆಲೋಚನೆ, ವಿಚಾರ ಪರತೆ ಅನುಭವನಿಷ್ಠ ಮನಸ್ಸಿನ ಪ್ರತಿಬಿಂಬಗಳಾಗಿ ಪಾತ್ರಗಳು ಬಂದು ನಿಲ್ಲುತ್ತವೆ. ಒಟ್ಟಾರೆಯಾಗಿ ಪ್ರಸ್ತುತ ರೇವಣಸಿದ್ದೇಶ್ವರ ಕಾವ್ಯಗಳ ಪಾತ್ರ ಚಿತ್ರಣವನ್ನು ಪ್ರಧಾನ, ಪೂರಕ ಪಾತ್ರಗಳೆಂದು ವರ್ಗೀಕರಿಸಿ ವಿಶ್ಲೇಷಿಸಬಹುದಾಗಿದೆ.

#### ಪ್ರಧಾನಪಾತ್ರಗಳು

ಕಾವ್ಯ ನಾಯಕನ ಪಾತ್ರವೇ ಪ್ರಧಾನ ಪಾತ್ರ ಆಗುವದರಿಂದ ಕೃತಿಯ ಶೀರ್ಷಿಕೆ ಹೊತ್ತ ರೇವಣಸಿದ್ಧರು ಅಂತಹ ಪ್ರಾಧನ್ಯತೆಯನ್ನು ಪಡೆದುಕೊಳ್ಳುತ್ತಾರೆ. ಹೀಗಾಗಿ ಈತ ಕಥಾನಾಯಕನಾಗಿ ಚಿತ್ರಿತನಾದಾಗ ಆತನ ಬಾಲ್ಯ, ಜನನ, ತಾರುಣ್ಯ, ಸಾಧನೆ ಮುಂತಾದ ಎಲ್ಲಾ ನೆಲೆಯಲ್ಲಿಯೂ ಕವಿ ತುಂಬಾ ವಿಶೇಷತೆಯಿಂದ ಬಣ್ಣಿಸಿರುವದು ಇಲ್ಲವೆ, ಆ ಪಾತ್ರಕ್ಕೆ ಕಳೆಯನ್ನು ತಂದಿರುವದು ಗೋಚರಿಸುತ್ತದೆ.

ಅದೆ ಕಂಥೆಯದೆ ವದನವದೆ ವಜ್ರಕುಂಡಲಂ
ಅದೆ ವಕ್ಷವದೆ ಹಸ್ತವದೆ ಹಿಡಿದ ಲಾಕುಳಂ
ಅದೆ ಕೋವಣಂ ನೋಡೆನುತ್ತಮಿರಲುದಿಸಿದಂ
ಸದಮಳವೆನಿಪ್ಪ ಶಿವಲಿಂಗದಿಂ ಪುಟ್ಟಿದಂ
ಲೋಕಮಂ ಪಾವನಂ ಮಾಡುವುದ್ಯೋಗದಿಂ
ಆಕಸ್ಮಿಕಂಗಳಂ ತೋರುವನುರಾಗದಿಂ
ಭಸಿತದಿಂ ನೊಸಲಕಣ್ಣಂ ಮುಸುಂಕಿಟ್ಟಲ್ಲಿ
ಎಸೆವರಳ್ಕಂಗಳಿಂ ಬೆಳ ಬೆಳಗುತಂತಲ್ಲಿ
ಜ್ಯೋತಿಯಿಂದಂ ಜ್ಯೋತಿಯೊಗೆದ ತೆರದಂತಾಗೆ [೭]

ಹರಿಹರ ಕವಿಯ ಈ ಮೇಲಿನ ವರ್ಣನೆಯನ್ನು ಗಮನಿಸಿದರೆ ಒಬ್ಬ ಕಲಾವಿದ ನಾಲ್ಕಾರು ರೇಖೆಗಳ ಸಹಾಯದಿಂದ ಸುಂದರವಾದ ರೇವಣಸಿದ್ದೇಶ್ವರನ ಚಿತ್ರವನ್ನು ರಚಿಸುವಂತೆ ಸ್ವಲ್ಪದರಲ್ಲಿ ಪಾತ್ರ ಚಿತ್ರಣವನ್ನು ಶಬ್ದ ಚಿತ್ರಣದ ಮೂಲಕ ಚಿತ್ರಿಸುವ ಕಲೆಗಾರಿಕೆ ಗೋಚರಿಸುತ್ತದೆ. ಅಲ್ಲದೆ ಹರಿಹರ ಕವಿಯ ಕಥಾನಾಯಕನ ಸ್ಥಾಯಿಭಾವ ಭಕ್ತಿ. ಅದನ್ನು ಬಿಟ್ಟರೆ ಮಿಕ್ಕಿದ್ದೆಲ್ಲಾ ಗೌಣ. ಹೀಗಾಗಿ, ಪಾತ್ರ ಚಿತ್ರಗಳ ಉದಯದಲ್ಲಿಯೇ ಭಕ್ತಿಯ ಉದಯ ಇಲ್ಲವೆ ಆವಿಷ್ಕಾರವನ್ನು ಕಾಣುತ್ತಾನೆ. ಪ್ರಾಯಶಃ ಇನ್ನಿತರ ಕವಿಗಳು ಕೂಡ ತಮ್ಮ ಕಥಾನಾಯಕನ ಕುರಿತು ಇಂತಹದ್ದೇ ಉತ್ಪ್ರೇಕ್ಷೆ ಚಿತ್ರಣವನ್ನು ಮಾಡಿರಲು ಸಾಕು

ತಾರೆಗಣದಮಧ್ಯದೊಳುರೆ ಚಂದ್ರಮ
ಸೇರಿವೊಪ್ಪಿದತೆರನಂತೆ
ಸಾರ ಹೃದಯ ಮುನಿಜನದ ಮಧ್ಯದಿಗುರು
ರಾಯರೇವಣನೊಪ್ಪಿದನು. [೮]

ಎಂಬ ಚೆನ್ನಬಸವ ಕವಿಯ ಚಿತ್ರಣವಾಗಲಿ

ಮರಳಿ ಪ್ರಾಯವು ಆಗಲವರಿಗೆ
ಹರಸಿ ರೇವಣಸಿದ್ಧನೆಂದನು
ಇರಲುಬಾರದು ನಾವು ದೇಶವ ಚರಿಸಬೇಕೆನಲು
ನೆರೆದ ಜನರುಗಳೆಲ್ಲ ಬೀಳ್ಕೊಡೆ
ಮರಳಿ ನೋಡಲು ಮಾಯವಾದನು
ತೆರಳಿ ಬಂದನು ಪರಮಗುರು ಕಲ್ಯಾಣಪುರಕಾಗಿ [೯]

ಎಂಬ ಮಲ್ಲಣ್ಣ ಕವಿಯ ವರ್ಣನೆಯಾಗಲಿ

ಅಮರದುಂದುಭಿ ಮೊಳಗುತಿರಲಾ
ಸುಮನಸರು ಸುಮವೃಷ್ಟಿಗರೆಯಲು
ವಿಮಲಶಿವ ಪದ ಶರಣರೆಸಗಿದ ತಪವು ಫಲವೊಂದೇ
ಪ್ರಮಥನಾಥನ ಬೆಸನನೊಡರಿಸ
ಲಮಮ ರೇಣುಕಗಣಪನಿಳೆಸಂ
ಭ್ರಮಿಸಲಾವಿರ್ಭವಿಸಿದನು ಸೋಮೇಶಲಿಂಗದಿ ತಾಂ ⁽¹⁰⁾

ಎಂದು ಬಣ್ಣಿಸುವ ನಂಜನಗೂಡು ಶ್ರೀಕಂಠಶಾಸ್ತ್ರೀಗಳ ಪಾತ್ರ ಚಿತ್ರಣ, ಕಥಾನಾಯಕನ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

**ಪೂರಕ ಪಾತ್ರಗಳು**

ರೇವಣಸಿದ್ದೇಶ್ವರ ಕಾವ್ಯಗಳಲ್ಲಿ ಕಂಡುಬರುವ ಇನ್ನಿತರ ಪಾತ್ರಗಳು ಪ್ರಧಾನ ಪಾತ್ರದಷ್ಟು ಗಮನ ಸೆಳೆಯದಿದ್ದರೂ ಕೃತಿಯೊಳಗೆ ಸನ್ನಿವೇಶಕ್ಕೆ ತಕ್ಕಂತೆ ಕಾಣಿಸಿಕೊಂಡು ಪ್ರಧಾನ ಪಾತ್ರಕ್ಕೆ ಪೂರಕವೆನ್ನುವಂತೆ ಇಲ್ಲವೆ ಪ್ರಧಾನ ಪಾತ್ರದ ವ್ಯಕ್ತಿತ್ವಕ್ಕೆ ಕಾರಣವೆನ್ನುವಂತೆ ಬೆಳೆದು ಹೊರಗುಳಿಯುವ ನೂರೆಂಟು ಪಾತ್ರಗಳು ಕಂಡುಬರುತ್ತವೆ. ಇವುಗಳನ್ನೇ ಪೂರಕ ಪಾತ್ರಗಳೆಂದು ಹೇಳಲಾಗುತ್ತದೆ. ಅವುಗಳಲ್ಲಿ ಚೋಳರಾಜ, ಬಿಜ್ಜಳ, ಖರ್ಪರ, ಗೋರಖನಾಥ, ಕಲ್ಲಶೆಟ್ಟಿ, ಮಾಯಿದೇವಿ ಮುಂತಾದ ಪಾತ್ರಗಳನ್ನು ಗಮನಿಸಬಹುದು.

ಕಂಚಿಪುರದ ಚೋಳರಾಜನು ತಾನು ಸ್ಥಾಪಿಸಿದ ವಿಷ್ಣುಪ್ರತಿಮೆಯನ್ನು ಸ್ಥಿರಗೊಳಿಸುವ ರೇವಣಸಿದ್ಧರನ್ನು ಕರೆತರಲು ಹೇಳಿಕಳುಹಿಸುವ ಬಗೆಯನ್ನು ನೋಡಬೇಕು.

"ಬಾರೆನೆಂತುಂ ಬಾರೆನೆನೆ ಮಗುಳೆ ಪರಿತಂದು ಬಾರನವರ್ತದಿಂ ದೇವ ಬೆಸಸಯೆನಗೆಂದು ..... ಒಲ್ಲೆನೆಂದಡೆ ಜಡಿದು ಕೈವಿಡಿದು ಬರಸೆಳೆಯೆ" ಎಂದು ಹೇಳಿಕಳಿಸುವ ರೀತಿ ಮತ್ತು ರೇವಣರನ್ನು ಕರೆತರುವಲ್ಲಿ ವಿಫಲರಾದಾಗ, ಸ್ವತಃ ಚೋಳ ಅರಸನೇ ಹೋದ ಪರಿಯನ್ನು ನೋಡಬೇಕು. ಹಾಗೆಯೇ "ಚೋಳಂ ಕೇಳ್ದು ನಡನಡನೆ ನಡುಗುತಂ ರಾಗದಿಂದಲ್ಲಿಂದೆ ಮೈಯ್ಯಿಕ್ಕಿ ಹೊಗಳುತಂ ಬಂದು ಪದದೊಳ್ಬಿದ್ದ" ಚೋಳರಾಜನ ಸ್ಥಿತಿಯನ್ನು ಬಣ್ಣಿಸುವಲ್ಲಿ ಮತ್ತು ವಿಕ್ರಮಾದಿತ್ಯನಂ ರೇವಣಸಿದ್ಧರನ್ನು ಭಯ ಭಕ್ತಿಯಿಂದ ಸತ್ಕರಿಸುವ ಸನ್ನಿವೇಶ ವಿಕ್ರಮಾದಿತ್ಯನ ಪಾತ್ರಕ್ಕೆ ಕಳೆಕಟ್ಟಿದೆ. "ಕೊಂಡಾಡುತ ರೇವಣನಡಿಗೆ ಭೂಮಂಡಲೇಶ್ವರನೆರಗುತಲಿ ಜಯಜಯ ಕುಲ್ದ ತಿಲಕಲಲಾಮನೆ ಜಯಜಯ ತ್ರಿಭುರಾಧ್ಯ ಜಯಜಯ ರೇವಣ್ಣಸಿದ್ಧ ಎನುತ ರಾಯ ಭಯ ಭಕ್ತಿಯಿಂದ ವಂದಿಸಿದ ಮುಂದುವರಿದು ತ್ರಾಹಿಲೋಕೇಶನೆ ಭವಭಯನಾಶನೇ ತ್ರಾಹಿ ಮನ್ಮಾಥವ್ರತ್ ಪೀತ ತ್ರಾಹಿ ರೇವಣ್ಣ ದರಿದ್ರ ವಿದ್ರಾವಣ

..... ಇದ್ದಂತ ಮಕುಟವರ್ಧನ ಮಂಡಲೇಶ್ವರ ಎದ್ದು ಕರವಮುಗಿದೆರಗಿ ಸದ್ಯೋನ್ಮುಕ್ತರಾದವುನಾವೆಂದೆಲ್ಲ ಸಿದ್ಧನ ಕೊಂಡಾಡಿದರು.''[೧೧] ಇಲ್ಲಿ ವಿಕ್ರಮಾದಿತ್ಯನ ಭಕ್ತಿಯ ಪರಾಕಾಷ್ಠೆಯನ್ನು ವರ್ಣಿಸುವ ರೀತಿ ಅನನ್ಯವಾಗಿದೆ. ಇದೇ ರೀತಿ ವಿಭೀಷಣ, ವೀರಬಿಜ್ಜಳ ಮುಂತಾದ ರಾಜ ಪರಿವಾರದವರನ್ನು ಗೋರಕ್ಷಸಿದ್ಧ, ಮರುಳಾರಾಧ್ಯ, ರುದ್ರಮುನಿಗಳಂತಹ ಸಿದ್ಧ ಶಿವಯೋಗಿಗಳನ್ನು, ಕಲ್ಲಿಶೆಟ್ಟಿ, ಹಾವಿನಾಳ ಕಲ್ಲಯ್ಯ, ಮಾಯಿದೇವಿಯಂತಹ ಭಕ್ತ ಸಮುದಾಯದ ಪಾತ್ರ ವರ್ಣನೆಯನ್ನು ಕವಿಗಳು ಸುಂದರವಾಗಿ ಚಿತ್ರಿಸಿದ್ದಾರೆ.

ಇ. ಭಾಷೆ

ಭಾಷೆಯ ದೃಷ್ಟಿಯಿಂದ ರೇವಣಸಿದ್ದೇಶ್ವರ ರಗಳೆ ಬರೆದ ಹರಿಹರ ಒಂದು ಅಧ್ಯಯನದ ವಸ್ತುವಾಗಿ ನಿಲ್ಲುತ್ತಾನೆ. ಕಾವ್ಯಭಾಷೆಗೆ ಜನಭಾಷೆಯ ಲೇಪನವನ್ನು ಮಾಡಿದ ಹರಿಹರ ಜನರತ್ತ ತನ್ನ ಕಾವ್ಯವನ್ನು ತೆಗೆದುಕೊಂಡು ಹೋಗುವ ಉದ್ದೇಶವನ್ನಿರಿಸಿಕೊಂಡಿದ್ದಾನೆ. ಕೃತಿ ಪ್ರಕಾರದ ನಿರ್ಮಾಣ, ಛಂದಸ್ಸು, ಕಥಾವಸ್ತು ಮೊದಲಾದ ವಿಷಯಗಳಲ್ಲಿ ಕ್ರಾಂತಿಕಾರಕ ಮನೋಧರ್ಮವನ್ನು ಇರಿಸಿಕೊಂಡ ಹರಿಹರ ಭಾಷೆಯ ವಿಷಯದಲ್ಲೂ ವಿಶಿಷ್ಟತೆಯನ್ನು ರೂಪಿಸಿಕೊಂಡನು. ದೇಶಿ ಕಾವ್ಯಶೈಲಿಯನ್ನು ಹುಟ್ಟುಹಾಕಿದ ಈತ ''ಭಾಷಾ ಸತ್ಯವೆಂಬುದು ಅಭಿಮಾನದ ನೆಲೆಗಿಂತ ವಾಸ್ತವ ನೆಲೆಯಲ್ಲಿ ಕೃತಾರ್ಥವಾಗುವದೆಂಬುದನ್ನು ಅರ್ಥಮಾಡಿಕೊಂಡ ಹರಿಹರನು, ನಯಸೇನ, ಆಂಡಯ್ಯ ಸೋತ ನೆಲೆಯಲ್ಲಿಯೇ ಗೆದ್ದ. ಆಂಧ್ರಪ್ರದೇಶದಲ್ಲಿ ನನ್ನಯಾದಿ ಬ್ರಾಹ್ಮಣರಿಂದ ಕಟ್ಟಲ್ಪಟ್ಟ ಸಂಸ್ಕೃತಪ್ರಧಾನ ಕಾವ್ಯಶೈಲಿಯ ಕೋಟೆ ಪಾಲ್ಕುರಿಕೆ ಸೋಮೇಶ್ವರಾದಿ ಶೈವರಿಂದ ಕೆಡವಲ್ಪಟ್ಟ, ದೇಶಿಪ್ರಧಾನ ಕಾವ್ಯಶೈಲಿಯ ಪರಂಪರೆಯು ಅಲ್ಲಿ ಕಣ್ಣು ತೆರೆಯಿತು. ಅದೇ ರೀತಿ ಕರ್ನಾಟಕದಲ್ಲಿ ಪಂಪಾದಿ ಜೈನಕವಿಗಳಿಂದ ಕಟ್ಟಲ್ಪಟ್ಟ ಸಂಸ್ಕೃತಪ್ರಧಾನ ಕಾವ್ಯಶೈಲಿಯ ಕೋಟೆ ಹರಿಹರಾದಿ ಶೈವರಿಂದ ಕೆಡವಲ್ಪಟ್ಟು, ದೇಶೀಪ್ರಧಾನ ಕಾವ್ಯಶೈಲಿ ಪರಂಪರೆಯು ಇಲ್ಲಿ ಕಣ್ಣು ತೆರೆದುದು ಆಶ್ಚರ್ಯಕರವೆನ್ನಬಹುದಾದ ಹೋಲಿಕೆಯಾಗಿದೆ. ಅಂದರೆ ಎರಡೂ ಪ್ರಾಂತಗಳಲ್ಲಿ ದ್ರಾವಿಡಭಾಷೆಗಳು ಆಕ್ರಮಣಕ್ಕೆ ತುತ್ತಾದಾಗ ಶೈವರೇ ಸಿಡಿದೆದ್ದುದು, ಮೂಲೆಗುಂಪಾಗುತ್ತಲಿದ್ದ ಸ್ವದೇಶಿ ಪರಂಪರೆಯನ್ನು ತುಂಬು ಉತ್ಸಾಹದಿಂದ ಅವರೇ ಮತ್ತೆ ವೇದಿಕೆಯ ಮೇಲೆ ನಿಲ್ಲಿಸಿದುದು, ಅಗತ್ಯ ಗಮನಿಸಬೇಕಾದ ಅಂಶವಾಗಿದೆ.''[೧೨] 'ಬೆರ್ಚಿ, ಜವನಿಕೆ, ಪುಳಕಿಸುತೆ, ಓರಂತೆ, ಮಿಕ್ಕು, ಹೇಸಿ, ಎಯ್ದೆ, ಟೆಂಟಣಿಸು, ಬಸುರಂ, ಲೇಸಾದ ಮುಂತಾದ ಪದಪ್ರಯೋಗಗಳನ್ನು ನೋಡಬಹುದು. ವಿಭುರೇವಣಸಿದ್ಧರು ನಾನಾದೇಶಗಳನ್ನು ಸುತ್ತುವ ಪರಿಯನ್ನು ತನ್ನ ಭಾಷಾ ಪ್ರಯೋಗದಿಂದ ಹೀಗೆ ಪರಿಚಯಿಸುತ್ತಾನೆ; ಹರಿಹರ.

''ನಡೆತಂದು ವಂಗಂ ಕಳಿಂಗಂ ದೇಶಂಗಳೊಳು
ಸಕಳ ದೇಶಂಗಳೊಳು ಸುಖದಂತೆ ಸುಳಿವುತಂ

ಸುಕರವೆನೆ ಮೂಜಗಕೆ ಸಖಿನಂತೆ ಸುಳಿವುತಂ
ಶಶಿಯಂತೆ ಸಿರಿಯಂತೆ ಸುಧೆಯಂತೆ ಸುಳಿವುತಂ
ಎಸೆವ ಸುರದೇನು ಸುರಕುಜದಂತೆ ಸುಳಿವುತಂ
ವರ ಸುಕೃತದಂತೆ ಸತ್ಯದ ತೆರದೆ ಸುಳಿವುತಂ
ಉರು ಶಾಂತಿಯಂತೆ ನಿತ್ಯದ ತೆರದೆ ಸುಳಿವುತಂ
ಧರೆಯೊಳಗನಂತ ದೃಷ್ಟಾಂತಮಂ ತೋರುತಂ
ಹರುಷದಿಂ ಪಲವು ಸಾಮರ್ಥ್ಯಮಂ ಬೀರುತಂ"[೧೩]

ಹೀಗೆ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಸಹಜೋಕ್ತಿ ಸೂರೆಗೊಂಡ ಭಾಷಾಪ್ರಯೋಗ ಹರಿಹರನದು. "ಒಟ್ಟಿನಲ್ಲಿ ಹರಿಹರನ ಭಾಷೆ ಶ್ರೀಮಂತವಾದದ್ದು ಹಾಗೂ ಅಷ್ಟೇ ಶಕ್ತಿಯುತವಾದದ್ದು ಅದು ಪಂಡಿತ ಪಾಮರರಿಗಷ್ಟೆ ಅಲ್ಲ ಸಾಮಾನ್ಯರಿಗೂ ತಲುಪುವಂಥದ್ದು ಅಲ್ಲಿ ಭಾಷೆಯ ಬಳಕೆ ಹೀಗೆಯೇ ಆಗಬೇಕು ಎಂಬ ನಿಯಮವೇನಿಲ್ಲ. ಆಯಾಯ ಸಂದರ್ಭಗಳಿಗೆ ತಕ್ಕಂತೆ ಭಾಷೆ ಬದಲಾವಣೆ ಹೊಂದುತ್ತದೆ. ಸಂಸ್ಕೃತದ ಅವಶ್ಯಕತೆ ಇದ್ದಲ್ಲಿ ಸಂಸ್ಕೃತವನ್ನು, ತಮಿಳಿನ ಅವಶ್ಯಕತೆಯಿದ್ದಲ್ಲಿ ತಮಿಳನ್ನು, ಹಳೆಗನ್ನಡದ ಅವಶ್ಯಕತೆಯಿದ್ದಲ್ಲಿ ಹಳೆಗನ್ನಡವನ್ನು, ಹೊಸಗನ್ನಡದ ಅವಶ್ಯಕತೆಯಿದ್ದಲ್ಲಿ ಹೊಸಗನ್ನಡವನ್ನು ಹರಿಹರ ಬಳಸುತ್ತಾನೆ. ಅವನ ಕಾವ್ಯದಲ್ಲಿ ಭಾವಕ್ಕೆ ತಕ್ಕಂತೆ ಭಾಷೆ ಸೃಷ್ಟಿಗೊಳ್ಳುತ್ತದೆ."[೧೪]

ರೇವಣಸಿದ್ದೇಶ್ವರ ಕಾವ್ಯ ಬರೆದ ಕವಿ ಮಲ್ಲಣ್ಣ ಮೂಲತಃ ಜಾಲವಾದಿಯಂತಹ ಜಾನಪದ ದ್ವೀಪದಲ್ಲಿ ಬದುಕಿದ್ದವನು. ಹೀಗಾಗಿ ಈತನೊಬ್ಬ ಲೋಕಾನುಭವಿಯಾದ ಕವಿಯಾಗಿದ್ದಂತೆ, ಶ್ರೇಷ್ಠ ಶಾಸ್ತ್ರಜ್ಞನೂ ಹೌದು. ಈ ಕಾರಣವಾಗಿ "ಕವಿ-ಶಾಸ್ತ್ರಜ್ಞರ, ಕಾವ್ಯ-ಶಾಸ್ತ್ರಗಳ ಸಂಪರ್ಕ ಸಾಧ್ಯವಾಗಿಲ್ಲವೆಂಬುದೇ ಹೇಳಬೇಕು. ಹೀಗಾಗಿ ಭಾಷೆ, ಛಂದಸ್ಸುಗಳ ವಿಷಯವಾಗಿ ಆಗಾಗ ಎಡವಿದ್ದಾನೆ. ಆದರೆ ಹಾಡುವಾಗ ಪದ್ಯಗಳು ಸರಿಹೋಗುವುದರಿಂದ ಮಾತ್ರಗಣ ಚೌಕಟ್ಟಿಗಿಂತ ಅಂಶಗಣ ಚೌಕಟ್ಟಿಗೆ ಹೊಂದುವಂತೆಯೇ ಇದನ್ನು ಬರೆದಿರುವನೆಂದು ಹೇಳುವದು ಲೇಸು."[೧೫] ಎಂದು ಡಾ.ಎಂ.ಎಸ್. ಸುಂಕಾಪುರ ಅವರು ಅಭಿಪ್ರಾಯ ಪಟ್ಟಿರುವದರಲ್ಲಿ ಸತ್ಯಾಂಶವಿದೆ. ಕಾರಣ ಕೃತಿ ಪರಿಷ್ಕರಣದಲ್ಲಿ ಅವರೇ ಅಭಿಪ್ರಾಯ ಪಡುವಂತೆ ಪೂರ್ವ ಶಿಷ್ಟಪದವೂ ಅಲ್ಲದ ಪೂರ್ಣ ಜಾನಪದವೂ ಅಲ್ಲದ ಮಾದರಿಯದು ಎಂದಿದ್ದಾರೆ. ಆದರೂ "ಕೇಳು ಜನಮೇಜಯ" ಎಂದು ಕವಿ ತನ್ನ ಕಾವ್ಯವನ್ನು ಮುನ್ನಡೆಸುವ ರೀತಿ ಕುಮಾರವ್ಯಾಸನನ್ನು ನೆನಪಿಗೆ ತರಿಸುತ್ತದೆ. ಈ ನೆನಪು ಕೇವಲ ಕಥೆಯನ್ನು ಮುನ್ನಡೆಸುವ ರೀತಿಗಷ್ಟೇ ಸೀಮಿತವಾಗಿಲ್ಲ ಷಟ್ಪದಿ, ಛಂದಸ್ಸು, ಭಾಷಾ ಬಳಕೆಗೂ ಅನ್ವಯಿಸುತ್ತದೆ. ಉದಾಹರಣೆಗೆ

"ಒಂದು ಸುತ್ತಿಲೆ ಕುದುರೆ ರಾಹುತ
ಒಂದು ಸುತ್ತಿಲೆ ಹರಿಗೆ ಖಡ್ಗವು
ಒಂದು ಸುತ್ತಿಲೆ ಹರಿದ ದಸಿಗಳು ಸುರಿಗೆ ಸಬಳಗಳು
ಒಂದು ಸುತ್ತಿಲೆ ತರಿಯ ಕೆಂಡವು
ಒಂದು ಸುತ್ತಿಲೆ ಕಾದ ಮಳಲವು
ಕೊಂದು ಹೋಗುವರೆನುತ ಬಿಜ್ಜಳ ತನಗೆ ಹೊರಕಾಹು"[೧೬]

ಇಂತಹಲ್ಲಿ ಜಾಲವಾದಿ ಮಲ್ಲಣ್ಣ ಭಾಷಾಓಘ ಪರಿಚಯವಾಗುತ್ತದೆ. ಎತ್ತಿನಗೂಟ, ಒಡೆದು ಬುತ್ತಿಯ, ಕಾಲಲಂದುಗೆ, ಜೋಗುಳ, ಢಕ್ಕೆ, ತಮ್ಮಟ, ತಲ್ಲಿಗರು, ಹರಿಗೋಲು, ಬನದ ಗೌಡಿತಿ, ಬೆಣ್ಣೆ-ಬಜಿಗಳ, ಬೆಂಡಾಗಿ, ಮದ್ದುಮಂತ್ರ, ಮೊಲಗಿಡುಗ, ಸುಟ್ಟಕಾಸಿಗೆ, ದಡ, ಬರೆ, ಹಾಕವಿಸು ಇತ್ಯಾದಿ ಪದಪ್ರಯೋಗಗಳು ಕಾವ್ಯದುದ್ದಕ್ಕೂ ಸೂರಿಯಾಗಿವೆ.

ರೇವಣ ಸಾಂಗತ್ಯವನ್ನು ಸಂಗ್ರಹಿಸಿಕೊಟ್ಟ ಚೆನ್ನಬಸವ ಸಂಸ್ಕೃತಭಾಷೆಯಲ್ಲಿಯೂ ಪಾಂಡಿತ್ಯವುಳ್ಳವನಾಗಿದ್ದಾನೆ. ಸಾಂಗತ್ಯ ಪ್ರಕಾರಕ್ಕೆ ಹೊಂದಿಕೆಯಾಗುವ ಭಾಷಾ ಪ್ರಯೋಗದಲ್ಲಿ ಸಿದ್ಧಹಸ್ತನೆಂಬುದನ್ನು ಕೆಲವು ನಿದರ್ಶನಗಳಿಂದ ತಿಳಿಯಬಹುದಾಗಿದೆ.

"ಕ್ಷೋಣಿಗೊಡೆಯ ಚೋಳನೊಳುಜನಿಸಿ ಜಗೆ
ತ್ರಾಣ ನಿಮ್ಮಯರಾಣಿಯಾಗಿ
ಹೂಣಿದ ಮಂಣುಗೆಲಸ ಮಾಡುವದಕ್ಕೆ
ತ್ರಾಣವಿಲ್ಲೆಂದಳಾತರಳೆ."[೧೭]

ಭೂಮಂಡಲವನ್ನು ತನ್ನ ಸಾಮಾರ್ಥ್ಯದಿಂದ ಆಳಿದ ಚೋಳರಾಜನ ಮಗಳಾಗಿ, ರೇವಣಸಿದ್ಧರಂತಹ ಧರ್ಮಪುರುಷನ ಪ್ರಾಣವಲ್ಲಭೆಯಾಗಿ ಬೆಳೆದ ಸುಂದರಿ ಕೆರೆಯ ಮಣ್ಣುಗೆಲಸವ ಮಾಡದಷ್ಟು ತ್ರಾಣವಿಲ್ಲದವಳಾಗಿ ಚಿತ್ರಿಸುವ ರೀತಿ, ಕವಿಯ ಭಾಷಾ ಮೂಲದಿಂದಲೇ ಆಕೆ ಹುಟ್ಟಿದ, ಬೆಳೆದ ಅರಮನೆ-ಗುರುಮನೆಗಳ ಪರಿಸರವನ್ನು ಕಣ್ಣುಮುಂದೆ ಕಟ್ಟಿಕೊಡುತ್ತಾನೆ.

ಸಂಸ್ಕೃತ - ಕನ್ನಡ ಬಳಕೆಯ ಸಮನ್ವಯತೆಯನ್ನು ಕಾಯ್ದುಕೊಂಡು ಬಂದ ರೀತಿ ಕಾವ್ಯದುದ್ದಕ್ಕೂ ಎದ್ದು ಕಾಣುತ್ತದೆ. ಉದಾಹರಣೆಗೆ

"ಕ್ಷೇತ್ರತೆಯೆಂಬ ಸಂಜ್ಞೆಯ ಮೇಲಕ್ಕೆ
ಮಾತೃಕಸ್ಥಾನಭಮಕಾರ
ಕರ್ತುಸಾದಾಖ್ಯದಂಡಾಕಾರದವರ
ಮಾತ್ರೆಯೊಳಿಹುದು ಸ್ವಾಧಿಷ್ಠಾನ"[೧೮]

ಎಂಬ ಸಂಸ್ಕೃತ ಭಾಷಾ ಸರಮಾಲೆ ಒಂದೆಡೆ ಕಂಡುಬಂದರೆ ಇನ್ನೊಂದೆಡೆ ಕನ್ನಡಮಯ ಪದ್ಯರಚನೆ ಮಾತ್ರ ಕಾಣಬಹುದು.

"ಹತ್ತೆಸಳಿನಕಮಲವು ನೀಲವರ್ಣವು
ಮತ್ತದು ಅನಲಾಧೀನ
ಉತ್ತಮ ವಿದ್ಯೆಯಕಳೆ ಇಚ್ಛಾಶಕ್ತಿಯು
ಬತ್ತರಿಪುದುಸಾಮವೇದ"[೧೯]

ಸಟೆ, ವಟು, ಕಂಟಕಿ, ಸದನ, ಯಸಕ, ಸೋಜಿಗ, ಉಪದ್ರವ, ಲಂಡ, ಮುಂತಾದ ಪದಭಂಡಾರವನ್ನು ತನ್ನ ಕಾವ್ಯದಲ್ಲಿ ಕವಿ ಹೇರಳವಾಗಿ ಬಿಟ್ಟು ಹೋಗಿದ್ದಾನೆ.

ವಾರ್ಧಕ ಷಟ್ಪದಿಯಲ್ಲಿ ರೇವಣಸಿದ್ದೇಶ್ವರ ಪುರಾಣ ಬರೆದ ಚತುರ್ಮುಖ ಬೊಮ್ಮರಸನು ರಾಘವಾಂಕಾದಿ ಮೊದಲಾದ ಪ್ರಾಚೀನ ಕವಿಗಳನ್ನು ಅನುಸರಿಸಿ ಶಷಸರ ಮೊದಲಾದ ಅಕ್ಷರಗಳನ್ನು ಪ್ರಾಸ ಸ್ಥಾನದಲ್ಲಿ ನಿರ್ವಹಿಸಿಕೊಂಡಂತೆ ಹೇಳಿಕೊಂಡಿದ್ದಾನೆ.

"ಓರಂತೆ ಶಷಸರರಲವಿಮಿವಂ ಪ್ರಾಸಕ್ಕೆ
ಸೇರಿಸಿದೆನೀ ಕಾವ್ಯದೊಳಗೆ ವರ್ಣಕಕವಿ
ಶ್ರೀ ರಾಘವಾಂಕ ಪಂಡಿತನಾದಿಯಾದ ಕಬ್ಬಿಗರು ನಿಜಕೃತಿಯೊಳೊರೆದಾ
ಕಾರಣಂ ನಾಗವರ್ಮ ವಿನಿರ್ಮಿಸಿದ ಲರ
ಡ್ಯರೇವ ಲರಳಾಃ ಪ್ರಯತ್ನಾಶ್ರಯಾತೆನಿಪ
ಚಾರು ಕರ್ಣಾಟಕ ವ್ಯಾಕರಣಸೂತ್ರ ಮೊದಲಾದುವುಂಟದುನಿಮಿತ್ತಂ" [೨೦]

ಕವಿ ಚೆನ್ನಬಸವನಂತೆ ಈತನು ಕೂಡ ಕನ್ನಡ ಸಂಸ್ಕೃತಗಳೆರಡರಲ್ಲೂ ಪಾಂಡಿತ್ಯ ಹೊಂದಿರು ವುದನ್ನು ಈ ಕೆಳಗಿನ ಪದ್ಯದಿಂದ ನೋಡಬಹುದು.

ಕನ್ನಡಂ ಪಕ್ಕದದೊಳೊಂದಿ ಪುಟವಿಟ್ಟಟೆಂ
ಬೊನ್ನೊಳೊಂದಿದ ತರಂಗಿಸುವ ಕಡುರಂಗಿಡಿದ
ರನ್ನದಂತಿರಲೆಸೆವ ಪದಬಂಧವಚ್ಚಸಿರ ಪಚ್ಚಗಪ್ಪುರವೆರಸಿದ
ಉನ್ನತಿಯ ಸವಿಗಂಪ ಸಾಲಿಡುವ ಜಾತಿ ಬಾ
ವನ್ನದಂತಿರೆ ಪೇಳ್ವೆನೀ ಕಾವ್ಯಮಂ ಬೆಡಂ
ಗಿಂ ನಿಖಿಳ ವಿದ್ವಜ್ಜನಂ ಮೆಚ್ಚೆ ಶಿವಶರಣ ಕರ್ಣಮಂಡಲವೆನಿಸಲು"[೨೧]

ರೇಣುಕ ವಿಜಯ ಪುರಾಣವನ್ನು ಬರೆದ ಕವಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ತಮ್ಮ ಕಾವ್ಯದ ಮೊದಲ ಸಂಧಿಯಲ್ಲಿ ಕೃತಿ ರಚನೆಯ ರೀತಿಯನ್ನು ಹೇಳುವಲ್ಲಿ ಭಾಷಾರಚನೆಯ ಸೊಬಗನ್ನು ಹೆಣೆದು ತೋರಿಸುತ್ತಾನೆ.

"ಸರಸ ಕರ್ಣಾಟಕದ ಸೊಗಸಿನ
ಪರಿಯ ಬಲ್ಲರು ಕಾವ್ಯಪದ್ಧತಿ
ಪರಿಣತರು ವರವೀರಶೈವಸುಧೀಂದ್ರರೀಕೃತಿಯಂ
ಹರಿಸದಲಿ ಕೈಗೊಂಬರಲೆ ಶಿವ
ಶರಣರಿಹಪರವೆರಡುಮಿದರಿಂ
ದೊರೆಯದಿರದೆನಗೆಂದು ಬಗೆದಾನೊರೆದೆನೀಕೃತಿಯಂ" [೨೨]

ಹಾಗೆಯೇ ಓದುಗರಿಗೆ ಇಂಪು, ಆಲಿಪ ರಸಿಕವೃಂದಕೆ ಮೋದ, ಕೋದ ಮುತ್ತಿನ ಸರದವೊಲ್ ಸಕಲಾಧರಕ್ಕೆ ಕಾರಣವಾದ ಕೃತಿಯಲ್ಲಿ ಕವಿ ಭಾಷಾ ಚಮತ್ಕೃತಿಯನ್ನು ಬಿಂಬಿಸುತ್ತಾನೆ. ಅರರೆ, ಏನೆಲ್ಲೆ, ಹರಹರ ನಿರ್ದೋಷಿ, ಜಯಾ ಜಯಾ ಧ್ವನಿಯಿಂ, ಝುಗ ಝುಗೆಸೆ, ಗದ್ಗದ ಧ್ವನಿಯಿಂ ಮುಂತಾದ ಪದಬಳಕೆಯಲ್ಲದೆ, ಕವಿಯ ಭಾಷಾ ಅನುರಣನಕ್ಕೆ ಈ ಕೆಳಗಿನ ಪದ್ಯವನ್ನು ನೋಡಬಹುದು.

ವಿಜಯಿಸ್ಯೆ ಗುರುಸಾರ್ವಭೌಮಾ
ವಿಜಯಿಸ್ಯೆ ಕಾರುಣ್ಯಧಾಮಾ
ವಿಜಯಿಸ್ಯೆ ಶರಣಗತಾವಳಿಪಾಲನೆ ಪ್ರೇಮಾ
ವಿಜಯಿಸ್ಯೆ ವಿಖ್ಯಾತ ನಾಮಾ
ವಿಜಯಿಸ್ಯೆ ಭಕ್ತಾಬ್ಧಿ ಸೋಮಾ
ವಿಜಯಿಸ್ಯೆ ಲೋಕಾಭಿರಾಮ ವಿಶೇಷತರಮಹಿಮಾ" [೨೩]

ರೇವಣಸಿದ್ಧರಿಂದ ತನ್ನ ಗರ್ವವನ್ನು ನಾಶಪಡಿಸಿಕೊಂಡ ಗೋರಕ್ಷನು ಅತಿಯಾದ ರೇವಣಸಿದ್ದೇಶ್ವರನ ಮೇಲಿನ ಪ್ರೀತಿ ಭಕ್ತಿ ಪ್ರಕಟಗೊಂಡ ರೀತಿಯನ್ನು ಕವಿ ಭಾಷಿಕ ಚೌಕಟ್ಟಿನಲ್ಲಿ ಹಿಡಿದಿಟ್ಟಿರುವದು ಆತನ ಭಾಷಾ ರಚನಾ ಸಾಮರ್ಥ್ಯಕ್ಕೆ ನಿದರ್ಶನವೆನಿಸಿದೆ.

ಹಾಲುಮತ ಪುರಾಣದ ಕರ್ತೃ ಪಂಡಿತ ಚೆನ್ನಬಸವ ಶಾಸ್ತ್ರೀಗಳು

"ತರಳನತೊದುಲ್ನುಡಿಯರಿದು ರೇವಣಗುರು
ವರಮನದುಂಬಿ ಪ್ರೇರಿಸಿದ
ಪರಿಯಂತೆ ಪೇಳ್ದದನರಿದುನೀವ್ ಸಂಶಯ
ಮರೆದು ಕೇಳುವುದು ಭಕ್ತಿಯಲಿ" [೨೪]

ತಾನು ತರಳನೆಂದು, ತನಗೆ ಗುರು ರೇವಣ ಪ್ರೇರಕನೆಂದು ತಾವು ಭಕ್ತಿಯಿಂದ ಆಲಿಸಬೇಕೆಂದು ಭಿನ್ನಯಿಸಿಕೊಳ್ಳುತ್ತನಾದರೂ ತುಂಬಾ ಸರಳಭಾಷೆಯಲ್ಲಿ ಗೇಯತ್ಮಕವಾಗಿ ಕಾವ್ಯ ಕಟ್ಟಿಸಿಕೊಂಡು, ಓದಿಸಿಕೊಂಡು ಹೋಗುತ್ತಾನೆ.

“ಅತ್ತಿತ್ತ ಪೋಗದೆಕತ್ತೆತ್ತಿ ತಿರುಗದೆ
ಸುತ್ತಮುತ್ತಿನ ಜನಗಳೊಳು
ಮತ್ಸರವೆಸಗದೆ ಸತ್ಯವಂ ಮರೆಯದೆ
ಉತ್ತಮರೆನಿಸಿಕೊಂಡಿಹನು.”[೨೫]

ಹಾಗೂ ಕೊಬ್ಬಿದ, ಇಬ್ಬಣ, ಅಬ್ಬರ, ಪರಿತಪಿಸು, ಟ್ರೆಜರಿ, ಮುಜರೆ, ದುರುಳ ಮುಂತಾದ ಪದ ಪ್ರಯೋಗಗಳಲ್ಲಿ ಇಂಗ್ಲಿಶ್ ಮತ್ತು ಉರ್ದು ಭಾಷಾ ಪ್ರಯೋಗವನ್ನು ಕಾಣಬಹುದಾಗಿದೆ.

ಒಟ್ಟಿನಲ್ಲಿ ಕವಿಗಳ ಕಾಲಮಾನಕ್ಕನುಗುಣವಾಗಿ ಅವರು ಬದುಕಿದ ಸಾಮಾಜಿಕ ಭಾಷಾ ಪ್ರಯೋಗ, ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಇವರ ಕಾವ್ಯಗಳ ಭಾಷಿಕ ನೆಲೆಯಲ್ಲಿ ಗಮನಿಸಲು ಸಾಧ್ಯವಿದೆ.

**ಈ. ಶೈಲಿ**

ರೀತಿ, ಪಂಥ ಮುಂತಾದ ಪಾರಿಭಾಷಿಕ ಶಬ್ದಗಳಿಂದ ಚರ್ಚೆಗೆ ಒಳಗಾದ ಮೀಮಾಂಸ ಪರಿಧಿಯ ಪದ ಶೈಲಿ. ಈ ಕುರಿತು ವ್ಯಾಖ್ಯಾನ ವಿವರಗಳು ಸಾಕಷ್ಟು ನೀಡಿವೆ. “ಶೈಲಿಯನ್ನು ಸ್ಥೂಲವಾಗಿ ಕವಿಯ ಭಾವಲೋಕದಲ್ಲಿ ಮೂಡಿನಿಂತ ದೃಶ್ಯ, ಪಾತ್ರ, ಸನ್ನಿವೇಶಾದಿಗಳನ್ನು ಸಾಕ್ಷಾತ್ತುಗೊಳಿಸುವ ರೀತಿ ಎಂದು ಹೇಳಬಹುದು. ಇದು ಕವಿಬ್ರಹ್ಮನ ಅನುಭವ ಹಾಗು ಭಾವ ಪ್ರಪಂಚವನ್ನು ತೆರೆದು ತೋರಿಸುವಂತದಾಗಿದ್ದು ಆತನ ಪ್ರತಿಭೆ, ಪಾಂಡಿತ್ಯ, ಪರಿಸರ, ಸಂಸ್ಕೃತಿ ಇತ್ಯಾದಿಯಾಗಿ ಕವಿಯ ಇಡೀ ಮನೋವ್ಯಾಪಾರವನ್ನೇ ಬಿಂಬಿಸುವಂತಹದಾಗಿದೆ.”[೨೬] ಅದೇನೇ ಇರಲಿ ರೇವಣಸಿದ್ಧರನ್ನು ಕುರಿತಾಗಿ ರಚನೆಯಾದ ಕಾವ್ಯಗಳನ್ನು ಅವಲೋಕನ ಮಾಡುವುದರ ಮೂಲಕ ಕವಿಗಳ ಶೈಲಿಯನ್ನು ವಿಶ್ಲೇಷಿಸಲಾಗುವುದು.

ಹರಿಹರ ರೇವಣಸಿದ್ದೇಶ್ವರ ರಗಳೆಯ ಕರ್ತೃ. ರಗಳೆಯ ಮೂಲಕ ಕಾವ್ಯವನ್ನು ಮುನ್ನೆಡೆಸುವ ಹರಿಹರ ವರ್ಣನೆಯಲ್ಲಿ ಒಂದು ರೀತಿಯ ಬಿಗಿ ಮತ್ತು ಸಂಕ್ಷಿಪ್ತವೆನ್ನಬಹುದಾದ ಅಡಕ ಗುಣವನ್ನು ಕಾಣಬಹುದು. ಹೀಗಿದ್ದು ಕೆಲವೇ ಪಂಕ್ತಿಗಳಲ್ಲಿ ತುಂಬಾ ಪರಿಣಮಕಾರಿಯಾಗಿ ಓದುಗರ ಹೃದಯಕ್ಕೆ ತಟ್ಟುವ ಹಾಗೆ ವರ್ಣಿಸುವ ಶಕ್ತಿ ಹರಿಹರನಿಗಿದೆ. ಇದನ್ನೇ ಹರಿಹರನ ಶೈಲಿ ಎಂದರೆ ತಪ್ಪಾಗಲಿಕ್ಕಿಲ್ಲ.

“ನಡನಡನೆ ನಡುಗಿ ಕರುಣಿಪುದು ಕರುಣಿಪುದೆಂದು
ಮುಂದುವರಿವರೇ ಹಸುಳೆಗಳು ಸಿದ್ಧಕುಲಪತಿಯೆ
ಇಂದು ಕರುಣಿಸಿಸುವುದೆನನಾಗಿ ಸಿದ್ಧರಗತಿಯೆ
ಎಂದಡಾ ಪಾಲ್ಗಡಲ ಮಗಳ ಮಾತಂ ಸಲಿಸಿ
ಅಂದುಗುಳ್ದನಾ ಲೋಹರಸವನದನೋಕರಿಸಿ
ಉಗುಳಲ್ಕತಾರಂ ಕಳಲ್ಕಿ ಬಿದ್ದುದು ನೋಡ
ಮಿಗೆ ಕೌತುಕಂಬ್ಬರಾ ದಿವ್ಯರುಂ ನೋಡ”[೨೭]

ಗೋರಕ್ಷನ ಹೊಟ್ಟೆಯಿಂದ ಕಠಾರಿ ಬೀಳುವ ಸನ್ನಿವೇಶ ಕಣ್ಣಿಗೆ ಕಟ್ಟುವಂತೆ ಕೌತುಕವನ್ನುಂಟು ಮಾಡುತ್ತದೆ. ಕವಿಸಮಯ, ಸಂಪ್ರದಾಯಗಳ ಸಮನ್ವಯತೆಯನ್ನು ಕಾಯ್ದುಕೊಂಡು ಬಂದಿದ್ದಾನೆ. ಈ ಕಾರಣವಾಗಿ "ಚಿತ್ರಮಯವಾದ ಶೈಲಿ ದೊಡ್ಡ ಕವಿಯ ಆಸ್ತಿ. ಹರಿಹರನ ರಗಳೆಗಳು ಒಂದೊಂದು ಹಲವು ಚಿತ್ರಗಳ ಸುರುಳಿ ಅವನ್ನು ಬಿಚ್ಚಿ ವೇಗವಾಗಿ ತಿರುಗಿಸುತ್ತಾನೆ ಅವನ ಕಣ್ಣುಮುಂದೆ ಚಿತ್ರಗಳ ಮಾಲೆ ಸಂಜೀವವಾಗಿ ಸಂಚಾರ ಮಾಡುತ್ತದೆ. ಚಲನಚಿತ್ರ ನೋಡಿದಂತೆ ಅನುಭವವಾಗುತ್ತದೆ.[೨೮] ಅನುಕರಣ, ಉದ್ಗಾರ, ಪುನರುಕ್ತಿ ಈ ಎಲ್ಲವುಗಳಿಗೆ ಹಿನ್ನಲೆಯಾಗಿರುವುದು ಹರಿಹರ ಕವಿಯ ಉತ್ಸಾಹಾಧಿಕ್ಯ ಆವೇಶಗಳ ಶೈಲಿ. "ಭಾಷೆಯನ್ನು ಹೆಚ್ಚು ಗ್ರಾಂಥಿಕಗೊಳಿಸಿ ಅಂದರೆ ಕೃತಕಗೊಳಿಸದೆ, ಅಗತ್ಯವೆನಿಸಿದಲ್ಲಿ ಮಾತ್ರ ಏಣುಗಳನ್ನು ಮುರಿದು, ಓದುಗರ ಮನಕ್ಕೆ ಹತ್ತಿರವಾಗುವಂತೆ ಅದನ್ನು ಬಳಸುತ್ತಾನೆ. ಜೊತೆಗೆ ಭಾಷೆಯ ನಾದಗುಣವನ್ನು ಉಳಿಸಿಕೊಳ್ಳುತ್ತಾನೆ. ಇವುಗಳಿಂದಾಗಿ ಭಾವನಿಷ್ಠತೆ, ಗೇಯನಿಷ್ಠತೆ, ಈತನ ರಚನೆಯಲ್ಲಿ ಸಂಗಮಿಸಿ ಪ್ರವಹಿಸುತ್ತವೆ."[೨೯] ಗದ್ಯ-ಪದ್ಯ ಸಂಮಿಶ್ರಿತವಾದ ರಗಳೆಯ ಬಂಧ ಈತ ಆರಿಸಿಕೊಂಡ ಸನ್ನಿವೇಶ, ಲಯ, ಉತ್ಕಟವಾದ ಆವೇಶಕ್ಕೆ ತಕ್ಕಂತೆ ರಚನೆಯಾಗಿದೆ. ಇದಕ್ಕೆ ನಿದರ್ಶನವಾಗಿ ರೇವಣಸಿದ್ಧ ಚೋಳರಾಜ್ಯದಲ್ಲಿ ಕಾಣಿಸಿಕೊಳ್ಳುವ ರೀತಿಯನ್ನು ಹರಿಹರನ ಮಾತಿನಿಂದಲೇ ಕೇಳಿ ನೋಡುವಂತಹ ಅನುಭವವನ್ನು ತಂದುಕೊಳ್ಳಬಹುದು.

"ಇಂತು ದಕ್ಷಿಣದೇಶಮಂ ಪೊಕ್ಕು ಚೋಳಂಗೆ ಪ್ರತ್ಯಕ್ಷಮಂ ತೋರಿ,
ಕಂಥೆಯ ಕಮನೀಯರೂಪಂ, ವಜ್ರಲಕುಂಡಲದ ವಜ್ರಧರಂ ಲಾಕುಳದ
ಲೋಕೈಕ ಬಂಧು ಮೆಟ್ಟಿದ ಹಾವುಗೆಯ ಕಟ್ಟಿದಿಕಂ, ಕೋವಣದ ಬಾವಕಂ
ಭಾವಜರಿಪುವೆನಿಪ ರೇವಣಸಿದ್ಧಂ ಸಿದ್ಧಕುಲಚಕ್ರವರ್ತಿ"[೩೦]

ರೇವಣ ಸಾಂಗತ್ಯ ಬರೆದ ಚೆನ್ನಬಸವ ಕವಿ ಲೋಕಾನುಭವವನ್ನು ರೂಢಿಸಿಕೊಂಡವನು. ಹೇಳಿಕೇಳಿ ಒಂದು ಕಾಲಕ್ಕೆ ಕನ್ನಡಿಗರಿಗೆ, ತೆಲುಗರಿಗೆ, ತಮಿಳು ಸಹೃದಯರು ಮೈ ಉಬ್ಬಿ ಕೇಳಿ ಆಸ್ವಾಧಿಸುವ ದೇಶಿ ಪ್ರಕಾರವಾದ ಸಾಂಗತ್ಯದಲ್ಲಿ ಕಾವ್ಯ ರಚಿಸಿದ್ದಾನೆ. ಸಾಂಗತ್ಯ ಪ್ರಕಾರವು ದೇಶಿಯ ಬದುಕಿನೊಂದಿಗೆ ಹಾಸುಹೊಕ್ಕಾಗಿ ಬೆಳೆದ ದೇಶಿಮಟ್ಟು ಇದನ್ನು ಕರಗತ ಮಾಡಿಕೊಂಡ ಕವಿ ತನ್ನದೇ ಆದ ಶೈಲಿಯನ್ನು ಈ ಕೃತಿಯ ಮೂಲಕ ಬಿಟ್ಟುಹೋಗಿದ್ದಾನೆ. ಉದಾಹರಣೆಗೆ ಹರಿಹರ, ಬ್ರಹ್ಮರ ಕರ್ತವ್ಯಗಳನ್ನು ತಿಳಿಸುವ ಈ ವರ್ಣನೆಯ ಸಾಲುಗಳನ್ನು ನೋಡಬೇಕು.

"ಹರನಂತೆಲೋಕ ಸಂಹರಗಳ ಮಾಳ್ಪುದು
ಹರಿಯಂತೆ ಜಗವ ರಕ್ಷಿಪುದು
ಸರಸಿಜಭವನಂತೆ ಧರೆಯವುಟ್ಟಿವವರ
ಶರಧಿವೊಪ್ಪಿತು ಮೂರು ಗುಣದಿ"[೩೧]

ಕುಮಾರವ್ಯಾಸನಂತೆ "ಕೇಳು ಜನಮೇಜಯ ಧರಿತ್ರಿಯ" ಎಂದು ಪ್ರಾರಂಭಿಸುವ ಚಾಲವಾದಿ ಮಲ್ಲಣ್ಣನ ಶೈಲಿ ಹಾಡಿನ ರೂಪದ್ದು. ಇದನ್ನು ಕಾಯ್ದುಕೊಂಡು ಹೋಗಬೇಕೆಂಬ ಮಲ್ಲಣ್ಣ "ಮಾತ್ರಗಣ ಚೌಕಟ್ಟಿಗಿಂತ ಅಂಶಗಣ ಚೌಕಟ್ಟಿಗೆ ಹೊಂದುವಂತೆ ಇದನ್ನು ಬರೆದಿರುವನೆಂದು ಹೇಳುವದು ಲೇಸು"[೨] ಎಂಬುದು ಡಾ. ಎಂ.ಎಸ್. ಸುಂಕಾಪುರ ಅವರ ಅಭಿಪ್ರಾಯವಾಗಿದೆ.

ನಂಜನಗೂಡ ಶ್ರೀಕಂಠಶಾಸ್ತ್ರೀಗಳು ರೇಣುಕ ವಿಜಯ ಪುರಾಣದಲ್ಲಿ ಸಂಸ್ಕೃತ ಭೂಮಿಷ್ಠವಾದ ಭಾಷಾಶೈಲಿಯನ್ನು ಅಳವಡಿಸಿಕೊಂಡಿದ್ದಾರೆ. ಕವಿ ಹೇಳುವಂತೆ

"ಕವಿ ಚಮತ್ಕೃತಿಲಸದಲಂಕೃತಿ
ನವರಸಂಗಳ ಹೃದ್ಯಸಂತತಿ
ವಿವಿಧವಿಷಯಸ್ಥಿತಿ ಮಹೋನ್ನತಿಗಿದೆನೆ ನಿಜವಸತಿ
ಶಿವಕಥಾಮೃತನಿಯತಿ ಭವ್ಯೋ
ತ್ಸವಸುನೀತಿಯರೀತಿಯಾಕೃತಿ
ಯವಿರತಂ ಶಿವಶರಣಪದ್ಧತಿಯಿಂದೆ ಶಿವತಾತೀ"[೨೩]

ಈತನ ಕಾವ್ಯ ಚಮತ್ಕೃತಿ, ಅಲಂಕಾರ, ನವರಸಗಳಿಂದ ಕೂಡಿದ್ದಾಗಿದೆ.

ಒಟ್ಟಿನಲ್ಲಿ ರೇವಣಸಿದ್ಧರನ್ನು ಕುರಿತು ಕಾವ್ಯ ರಚಿಸಿದ ಎಲ್ಲಾ ಕವಿಗಳು ಭಾಷಾ ಪ್ರಭುತ್ವ, ವ್ಯಾಕರಣ, ಛಂದಸ್ಸು ಶಾಸ್ತ್ರದಲ್ಲಿ ಪರಿಣಿತಿವುಳ್ಳರಾಗಿದ್ದವರು. ಹೀಗಾಗಿ ಅಲಂಕಾರಗಳಾದ ಉಪಮೆ, ರೂಪಕ ಮುಂತಾದ ಛಂದೋಬಂಧಗಳಿಂದ, ಗೇಯತೆಯನ್ನು, ಬಂಧುರತೆಯನ್ನು ಕಾವ್ಯಗಳಿಗೆ ತುಂಬಿ ಕೊಟ್ಟಿದ್ದಾರೆ.

## ೨. ಸಾಂಸ್ಕೃತಿಕ ವಿಶ್ಲೇಷಣೆ

ಯಾವುದೇ ಒಂದು ಕಾವ್ಯ ಅಥವಾ ಸಾಹಿತ್ಯ ಸೃಷ್ಟಿಯ ಹಿಂದೆ ಒಂದೊಂದು ಉದ್ದೇಶವನ್ನು ಇರಿಸಿಕೊಂಡು ರಚನೆಯಾಗಿರುತ್ತದೆ. ಪ್ರಾಯಶಃ ಈ ಉದ್ದೇಶ ಸಾಹಿತ್ಯ ರಚನೆಯ ಕವಿಗಳ ಧೋರಣೆಯು ಆಗಿರಬಹುದು. ಪಾತ್ರಗಳ ಮೂಲಕ ಘಟನೆಗಳ ಮೂಲಕ ತಮ್ಮ ಆಶಯವನ್ನು ಇಲ್ಲವೆ ಸಿದ್ಧಾಂತವನ್ನು ಪ್ರತಿಪಾದಿಸುವಲ್ಲಿ ಕವಿಯ ಪ್ರಯತ್ನ ನಡೆದಿರುತ್ತದೆ. ಇದನ್ನು ಮೀಮಾಂಸ ಪರಿಧಿಯಲ್ಲಿ, ಕಾವ್ಯಧ್ವನಿ ಎನ್ನಬಹುದು. ಇನ್ನೂ ಸ್ವಲ್ಪ ಮುಂದೆ ಹೋಗಿ ಇಂತಹ ಕವಿಗಳ ಧೋರಣೆಗೆ ಅವರು ವ್ರತದಂತೆ ಆಚರಿಸಿ ಅದನ್ನು ಮೌಲ್ಯದ ಅರ್ಥದಲ್ಲಿ ಗ್ರಹಿಸಿ ಸಂಸ್ಕೃತಿಯೆಂಬ ವ್ಯಾಪ್ತಿಯನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಸ್ಕೃತಿಯೆನ್ನುವದು ಒಂದು ಜನವರ್ಗದವರಿಂದ ಸಾಮೂಹಿಕ ಸಮ್ಮತಿ ಪಡೆದು ಆಚರಣೆಯಲ್ಲಿ ಉಳಿದುಬರುವ ಜೀವನ ಪದ್ಧತಿ ಎನಿಸಿಕೊಳ್ಳುತ್ತದೆ. ಅಂತಹ ಜೀವನ ಪದ್ಧತಿಗಳನ್ನು ರಾಜಕೀಯ ವಲಯದಲ್ಲಿ, ಧಾರ್ಮಿಕ ವಿಚಾರದಲ್ಲಿ, ಸಾಮಾಜಿಕ ಬದುಕಿನಲ್ಲಿ ಅನ್ವಯಿಸುವ ಇಲ್ಲವೆ,

ಅನ್ವಯಿಸಿ ನೋಡಿ ಪ್ರಸ್ತುತ ಆ ಕ್ಷೇತ್ರಗಳ ಬದುಕನ್ನು ತಿದ್ದಿಕೊಳ್ಳುವ ಕಡೆಗೆ ಸಂಸ್ಕೃತಿ ಕೊಂಡೊಯ್ಯುತ್ತದೆ. ಅಂದರೆ ರಚನಾತ್ಮಕ ಪರಿವರ್ತನಾಶೀಲ ಬದುಕಿನತ್ತ ಕೊಂಡೊಯ್ಯುವುದೇ ಸಂಸ್ಕೃತಿ. ಬಹುತೇಕ ಎಲ್ಲಾ ಕಾವ್ಯಗಳು ಈ ಉದ್ದೇಶವನ್ನು ಇರಿಸಿಕೊಂಡು ರಚನೆಯಾಗಿರುವ ಸಂಭವ ಹೆಚ್ಚು. ನೆರೆ ಸೈರಿಸಲಾರ್ಪುದು ಪರಧರ್ಮಮಂ ಪರವಿಚಾರಮಂ ಎಂಬ ಶ್ರೀ ವಿಜಯನ ಮಾತು, ಮನುಷ್ಯಕುಲಂ ತಾನೊಂದೆ ವಲಂ ಎಂಬ ಪಂಪನ ಮಾತು, ಕೆರೆಯಂ ಕಟ್ಟಿಸು, ಬಾವಿಯಂ ಸವಿಸು, ದೇವಗಾರಮಂ ನಿರ್ಮಿಸು ಸಜ್ಜಯೊಳ್ ಸಿಲ್ಕಿದ ಅನಾಥರಂ ಬಿಡಿಸು, ಮಿತ್ರಂಗಿ ಂಬುಗ್ಯೆ ಎಂಬ ಶಾಸನೋಕ್ತ ಮಾತುಗಳಲ್ಲದೆ, ಅಯ್ಯಾ ಎಂದರೆ ಸ್ವರ್ಗ, ಅರಿವೇಗುರು, ಸತ್ಯವೆಂಬುದೇ ಹರ ಇತ್ಯಾದಿ ವಿಚಾರಗಳೆಲ್ಲಾ ಸಂಸ್ಕೃತಿಯ ಪರಿಧಿಗೆ ಬಂದು ಸೇರುತ್ತವೆ.

ಪ್ರಸ್ತುತ ರೇವಣಸಿದ್ಧರ ವ್ಯಕ್ತಿತ್ವದ ಹಿನ್ನಲೆಯಲ್ಲಿ ಮತ್ತು ಅವರನ್ನೇ ಕೇಂದ್ರವಾಗಿಟ್ಟುಕೊಂಡು ರಚನೆಯಾದ ಕಾವ್ಯಗಳಲ್ಲಿಯ ಕವಿಗಳ ಲೋಕಾನುಭವಗಳನ್ನು ಕ್ರೋಢಿಕರಿಸಿಕೊಂಡು ಸಾಂಸ್ಕೃತಿಕ ಮಹತ್ವವನ್ನು ಕಟ್ಟಿಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ರೇವಣಸಿದ್ದೇಶ್ವರ ರಗಳೆ ಬರೆದ ಹರಿಹರ ಮನುಜರ ಮೇಲೆ, ಸಾವವವರ ಮೇಲೆ, ಕನಿಷ್ಟರ ಮೇಲೆ ಮತ್ತು ಇಂದ್ರ ಚಂದ್ರ ಇತ್ಯಾದಿ ಬಿರುದು ಬಾವುಲಿಗಳಿಂದ ಮೆರೆಯುತ್ತಿರುವ ಅರಸರ ಮೇಲೆ ತಾನು ಕಾವ್ಯ ಬರೆಯುವುದಿಲ್ಲವೆಂಬ ಪಣತೊಟ್ಟು ಶಿವನ ಬಗ್ಗೆ, ಶಿವಶರಣರ ಬಗ್ಗೆ, ಕೃತಿ ರಚಿಸುವದರ ಮೂಲಕ ಶಿವಕವಿಯೆಂದೇ ಹೆಸರಾದನು. ಈ ಮಾತನ್ನು ರೇವಣಸಿದ್ಧರನ್ನು ಕುರಿತು ಕಾವ್ಯ ಬರೆದ ಎಲ್ಲ ಕವಿಗಳಿಗೆ ಅನ್ವಯಿಸಿ ಹೇಳಿದರೆ ತಪ್ಪಾಗಲಿಕ್ಕಿಲ್ಲ.

**ಅ. ಸಾಮಾಜಿಕ**

ಒಂದು ಕೃತಿಗೆ ಸಾಹಿತ್ಯ ಮತ್ತು ಸಾಹಿತ್ಯೇತರ ಎಂಬ ಎರಡು ಮುಖಗಳಿರುತ್ತವೆ. ಅದರಲ್ಲೂ ಸಾಹಿತ್ಯೇತರ ಮುಖ ಸಾಂಸ್ಕೃತಿಕ ಹಾಗು ದಾರ್ಶನಿಕ ಆಯಾಮಗಳ ಮೊತ್ತ. ಇಲ್ಲಿ ಸಾಂಸ್ಕೃತಿಕವೆನ್ನುವುದು ಸಾಮಾಜಿಕ ಆಚರಣೆ, ಸಾಮಾಜಿಕ ಮೌಲ್ಯಪಡೆದುಕೊಂಡಿದ್ದರೆ, ದಾರ್ಶನಿಕತೆ ಕವಿ ಕಂಡುಕೊಂಡ ತತ್ವ ಸಿದ್ಧಾಂತಗಳನ್ನು ದರ್ಶಿಸುವಲ್ಲಿ ತೊಡಗಿರುತ್ತದೆ. ರೇವಣಸಿದ್ಧರಂತಹ ಸಿದ್ಧಪುರುಷ ದಾರ್ಶನಿಕ ವ್ಯಕ್ತಿಯ ತತ್ವಸಿದ್ಧಾಂತಗಳ ಪ್ರತಿಪಾದನೆಗೆ ತೊಡಗಿರುವ ಈ ಕೃತಿಗಳಲ್ಲಿ ಸಾಮಾಜಿಕ ಮೌಲ್ಯಗಳು ಹೇಳರವಾಗಿ ಕಾಣಸಿಗುತ್ತವೆ. ಅದರಲ್ಲೂ ಹರಿಹರನಂತೂ "ಪುರುಷ-ಸ್ತ್ರೀ, ರಾಜ-ಪ್ರಜೆ, ಸ್ಪೃಶ್ಯ-ಅಸ್ಪೃಶ್ಯ, ಗುರು-ಶಿಷ್ಯ, ವಿರಕ್ತ-ಅನುರಕ್ತ, ಹೀಗೆ ವೈವಿಧ್ಯಪೂರ್ಣ ವ್ಯಕ್ತಿಗಳ, ವೈಯಕ್ತಿಕ-ಸಾಮಾಜಿಕ ಜೀವನವನ್ನು ಕುರಿತು ಬರೆದವು. ಪುರಾತನರಲ್ಲಿ "ಬ್ರಾಹ್ಮಣ, ಕುಂಬಾರ, ಅಗಸ, ಮೀನುಗಾರ, ಗಾಣಿಗ, ಹೊಲಗೂಲಿ, ತುರುಕಾರ, ಕ್ಷತ್ರಿಯ, ವೈಶ್ಯ, ಮಾದಿಗ, ಬೇಡ ಮತ್ತು ಸ್ತ್ರೀ ಹೀಗೆ ಎಲ್ಲ ಜಾತಿಯವರು, ಎಲ್ಲ ವರ್ಗದವರು, ಎಲ್ಲ ಕಸುಬಿನವರು, ಸ್ತ್ರೀಯರೂ, ಕವಿಗಳಿದ್ದಾರೆ. ಅನುಭಾವಿಗಳು, ಸಂಗೀತಗಾರರು, ಗಮಕಿಗಳು ಇದ್ದಾರೆ. ಸನ್ಯಾಸಿಗಳಿದ್ದಾರೆ, ಸಂಸಾರಿಗಳೂ ಇದ್ದಾರೆ." ಇವರು

ತಮಿಳುನಾಡಿನವರಾದರೂ ಬರೆದ ಹರಿಹರ ಕನ್ನಡಿಗನಾದುದರಿಂದ ಇವರ ಕಥೆಗಳಿಗೂ ಕನ್ನಡ ಮನಸ್ಸಿನ ಸಂಸ್ಪರ್ಶವಿದೆ. ಹೀಗಾಗಿ ಕನ್ನಡಿಗರ ವೈವಿಧ್ಯಮಯ ಜನಜೀವನ ರಗಳೆ ಮಾಧ್ಯಮದಲ್ಲಿ ಕಲೆಯಾಗಿ ಅರಳಿದೆ.

ಸಾಮಾಜಿಕ ಆಚರಣೆಯನ್ನು ಕುರಿತು ಹೇಳುವುದಾದರೆ ಇಲ್ಲಿ ಜಾತಕರ್ಮ ವಿವಾಹಕರ್ಮಗಳಂಥ ವಿಶಿಷ್ಟ ಆಚರಣೆ, ಪುಷ್ಪ ಮಾಲಾಬಂಧ, ಓಕುಳಿ, ವೈಹಾಳಿ, ಉಪ್ಪಾರತಿ, ಎತ್ತುವಿಕೆ, ಕಪೋಲಮೋಕ್ಷ, ಪಂಚಭಕ್ಷಕ, ಕೇಳಿಕೆ, ಗಣಪರ್ವ, ಉಳ್ಳಿಪರ್ವ, ಮದುವೆ ಚತುರ್ಥಿ, ಪಸಾಯ, ಚಡಾಯ ಕೊಟ್ಟಣ ಗಳಂತ ಸಾಂದರ್ಭಿಕ ಆಚರಣೆ, ದಿಟ್ಟಿವಾರಿ, ಸಂಬೋಳಿ, ದಿವ್ಯ ದೇವರಿಗಾಗಿ ನಡೆಸುವ ಕುರುಳು-ಬೆರಳು-ಮಡುಹು-ಮುಂದಲೆ ಸಮರ್ಕಣ-ವ್ರತ, ಕಂಕಣ ಕಟ್ಟುವುದು, ಗಣಸಮಿತಿ, ನಂದಿಮೊಗವಾಡ, ಜೋಳವಾಳಿ, ವೇಳವಾಳಿ, ಪಾದಪೆಂಡೆಗಳಂಥ ಸಾಂಸ್ಕೃತಿಕ ಆಚರಣೆಗಳು, ಹರಿವಾಣದವರು, ಮಾಸಾಳ್ಗಳು, ಅಂಕರು, ತಿಂಕರು, ತೊತ್ತುಗಳು, ಮನ್ನೆಯರು, ಪ್ರಭುವೃತ್ತಿ, ಸೇವಕಾವೃತ್ತಿಕಾರರು, ಬಾವನ್ನವೀರರು, ಛತ್ರೀಸಕುಲದ ರಾಜಪುತ್ರರು, ಬಾರಸಂಕಲೆಯರು, ಗಣಕರು, ಕರಣಿಕರು, ಲೆಕ್ಕಿಗರು ಮೊದಲಾದ ವೃತ್ತಿಯವರು, ಮೈಲಾರ, ಬಾದುಮಯ್ಯ, ಭೈರವ, ಸಪ್ತಮಾತೃಕೆ, ವೀದಿವಿಟಕೇಶ್ವರ, ಕೊತ್ತಲದ ಮಾರಿ-ಮಸಣಗಳಂತ ಕ್ಷುದ್ರ ದೇವತೆಗಳು, ಕಲುಮಠ, ಹುಲುಮಠ, ಅರವೆ, ತಟಾಕ, ಸತ್ರ, ಮಹಾಮನೆ, ಓಲಗ, ಕರಣಶಾಲೆ, ಶಿವಪುರ, ಹಿರಿಯಕೇರಿ, ಅಗ್ರಹಾರಗಳಂತಹ ನೆಲೆಗಳು, ಹೆಗಲಮಿಳಿ, ಕೈಯಕಂಕರಿ, ದಂಡಿಗೆ ಹರಿಗೋಲು, ನಂದಿಯುಂಡಿಗೆ, ಅಯ್ದೆದಾಳಿ, ಕೊಲ್ಲಾರಬಂಡಿ, ಗಳಿಗೆ ಬಟ್ಟಲು, ಭಾಷಾಪತ್ರ, ಕಕ್ಷಪುಟ, ಶಿವದಾರಗಳಂಥ ವಸ್ತು ಉಪಕರಣಗಳು, ಶಂಖ, ಘಂಟೆ, ನಿಸ್ಸಾಳ, ಪಟ್ಟಹ, ತಾಳ, ಡಿಂಡಿಮ, ಕೌಸಾಳ, ಮುರಜ, ಕಹಳೆ, ಆಪೂಜ, ಕೊಳಲು, ಕರಡೆ, ಗಿರುಗಟ್ಟೆ, ಕಿನ್ನರಿ, ವೀಣೆ, ಘಟ ಮೊದಲಾದ ವಾದ್ಯಗಳು. ಆಡುವಗಣರಿ, ಆಡುವ ಕಥನ, ಪ್ರಸಂಗ ಪಾತ್ರಗಳಂಥ ಅಭಿನಯ ಕಲೆಗಳು, ಚಿಟ್ಟುಮುರಿಯಾಟ, ಕೋಡುಗಿಯಾಟಗಳಂಥ ಆಟಗಳು, ಕಳವೆಯೋಗರ, ಹಾಲುಂಡೆ, ಹಾಲಲವುಗೆ, ಮಂಡಗೆ, ಗಾರಿಗೆ, ಹೂಲಿಗೆ, ಸೇವಗೆ, ಸರವಳಿಗೆ, ಹೂಸಣಂಬ, ಪರಡಿಯ ಪಾಯಸ, ಹಾಲಮಂಡಗೆ, ತರಗ, ಇಡ್ಡಲಿಗೆ, ಬೀಸುವೂರಿಗೆ ಅಣ್ಣಿವಾಲ, ಪಾಯಸಗಳಂಥ ಉಣಸು - ತಿನಿಸುಗಳು ರಗಳೆಗಳಲ್ಲಿ ರಾಶಿರಾಶಿಯಾಗಿ ಕಂಡುಬರುತ್ತವೆ. ಕವಿ ಅಗತ್ಯವಿರುವಲ್ಲಿ ಇವುಗಳನ್ನು ಎರಕ ಹೊಯ್ದಿದ್ದು, ಇವುಗಳ ಅಭ್ಯಾಸವೇ ಒಂದು ಸ್ವತಂತ್ರ ಗ್ರಂಥವಾಗಬಹುದಾಗಿದೆ.''[೩೪] ರೇವಣಸಿದ್ಧರು ಸಾಮಾಜಿಕವಾಗಿ ''ತಟಾಕಂಗಳಂ ಕಟ್ಟಿಸುತ್ತಂ, ಶಿವನಿಳಯಂಗಳನೆತ್ತಿಸುತ್ತಂ, ಅರವೆಗಳನಿಕ್ಕಿಸುತಂ, ಶಿವಪುರಗಳಂ ಮಾಡಿಸುತಂ, ಸತ್ರಂಗಳಂ ನಿಮಿರ್ಚಿಸುತಂ''[೩೫] ಇಂತಹ ಅನೇಕ ಕಾರ್ಯಗಳನ್ನು ಪೂರೈಸಿಕೊಂಡು ಹೋಗುವದನ್ನು ಚಿತ್ರಿಸುವದು ರೇವಣಸಿದ್ಧನ ಮೂಲಕ ಮನುಷ್ಯ ಮಾಡಬೇಕಾದ ಸಾಮಾಜಿಕ ಕೆಲಸಗಳ ಕಡೆಗೆ ಬೆರಳು ಮಾಡಿ ತೋರಿಸುತ್ತಾನೆ.

ಚೆನ್ನಬಸವಶಾಸ್ತ್ರಿಗಳು ಹಾಲುಮತ ಪುರಾಣದಲ್ಲಿ ಅತಿಥಿ ಸತ್ಕಾರ ಪ್ರಾಮುಖ್ಯತೆಯನ್ನು ಕುರಿತು

"ಗತಿಯಿರಲಿ ಇಲ್ಲದಿರಲಿ ಅತಿಥಿಗಳು
ಸತತ ಬರಲಿ ಎನ್ನ ಮನದಿ
ಅತಿಶಯ ಭಕ್ತಿಯುಂಟಾಗಲಿ ಸದ್ಗತಿ
ದಾತನ ದಯವೊಂದಿರಲಿ"[೨೬]

ಇದು ಕವಿಯ ಕುಟುಂಬ ಜೀವನದ ಸಿದ್ಧಾಂತವಾದರೆ ವ್ಯಕ್ತಿಜೀವನದ ಮನಸ್ಥಿತಿಯನ್ನು ಹೇಳುವ ರೀತಿ ಇನ್ನೂ ವಿಶೇಷವಾಗಿದೆ.

"ನಿಂದ ವಂಚನೆಯೆಂದು ಚಂದದಾಟವಿದ್ದೆಂದು
ಕುಂದು ಕುಂದದ ಪುಷ್ಪವೆಂದು
ಬಂಧಿಸಿ ಮನದೊಳು ಮಂದಿಯೊಳು ಮತ್ಸರ
ತಂದುಕೊಳ್ಳದೆ ಇರುತಿಹೆನು."[೨೭]

ರೇವಣಸಿದ್ದೇಶ್ವರ ಸಾಂಗತ್ಯ ಬರೆದ ಚೆನ್ನಬಸವ ಕವಿ ರೇವಣರ ಸಾಮಾಜಿಕ ಕಾರ್ಯಗಳ ಪಟ್ಟಿಯನ್ನೇ ನೀಡುತ್ತಾನೆ.

"ಧರೆಯ ಮನುಜರ ಮೈಯುರಿಯ ತಗ್ಗಿಸಲೆಂದು
ವರಗುರು ರಾಯಕರುಣದಿ
ಹರುಷದಿ ಕೆರೆಯ ಕಟ್ಟಿಸುವ ರೇವಣ್ಣ
........................"[೨೮]

ಹಾರಿ, ಗುದ್ದಲಿ, ಕುಳ, ಮಂಕರಿ, ಬಂಡಿ, ಕೋಣ ಮುಂತಾದವುಗಳ ಸಹಾಯದಿಂದ ಕೆರೆಯ ಮಣ್ಣನ್ನು ತೆಗೆಯುವ ಚಿತ್ರಣ ಮನೋಹರವಾಗಿದೆ. ಇಲ್ಲೆಲ್ಲ ಕವಿಗಳ ಸಾಮಾಜಿಕ ಪ್ರಜ್ಞೆಯನ್ನು ನೋಡಬಹುದು.

**ಆ. ಧಾರ್ಮಿಕ**

ಕೀರ್ತನೆ, ಪ್ರವಚನಗಳ ಮೂಲಕ ಧರ್ಮವನ್ನು ಪರಿಚಯಿಸುವ ಮೌಖಿಕ ಪರಂಪರೆ ಒಂದು ಕಡೆ, ಕಾವ್ಯ ಪುರಾಣ ರಚನೆಗಳ ಮೂಲಕ ಧರ್ಮವನ್ನು ಪ್ರಚಾರಿಸುವ ಲಿಖಿತ ಪರಂಪರೆ ಮತ್ತೊಂದು ಕಡೆ ಹೀಗೆ ಈ ಎರಡು ಪರಂಪರೆಗಳ ಉದ್ದೇಶ ಧರ್ಮದ ತಿರುಳನ್ನು ಸಮಾಜದಲ್ಲಿ ಅನುಷ್ಠಾನಗೊಳಿಸುವುದು ಆಚರಣೆಗೆ ಬರುವಂತೆ ಪ್ರಯತ್ನಿಸುವದು. ಇದಕ್ಕೆ ಧರ್ಮವೇ ಮೈವೆತ್ತಿ ಬಂದಂತಹ ವ್ಯಕ್ತಿಯೊಬ್ಬನ ಲೀಲೆ, ಪವಾಡ ಹಾಗೂ ವಿಚಾರಗಳನ್ನು ಕತೆಕಟ್ಟಿ ಹೇಳುತ್ತಾ ಬಂದಿದ್ದವು. ಹೀಗಾಗಿ ರೇವಣಸಿದ್ದೇಶ್ವರ ಕುರಿತ ಕೃತಿಗಳು ಆತನ ಮೂಲಕ ಧರ್ಮಪ್ರಚಾರ, ದಾರ್ಶನಿಕ ವಿಚಾರಗಳನ್ನು ಕಟ್ಟಿಕೊಟ್ಟಿವೆ.

ಈತನ ಜೀವನ ಚರಿತ್ರೆಯನ್ನು ಅವಲೋಕಿಸಿದಾಗ ತುಂಬಾ ಪ್ರಭಾವಿಶಾಲಿ ವ್ಯಕ್ತಿತ್ವವುಳ್ಳವನೆಂಬುದು ತಿಳಿದುಬರುತ್ತದೆ. ಈಗಲೂ ಈತನ ಹೆಸರಿನ ಕವಿಗಳು, ದೇವಾಲಯಗಳು, ಗುಡಿ ಗುಂಡಾರಗಳು ಪುಣ್ಯಕ್ಷೇತ್ರಗಳು ಅಸ್ತಿತ್ವದಲ್ಲಿರುವುದನ್ನು ಗಮನಿಸಿದರೆ, ಜನ ಮನದಲ್ಲಿ ಈತನ ಬಗ್ಗೆ ಇರುವ ಭಕ್ತಿ, ಗೌರವಗಳು ಮನವರಿಕೆಯಾಗುತ್ತವೆ. ಲೋಕಕೆ ತಾ ಮರಳೋ ತನಗೆ ಲೋಕ ಮರಳೋ ಎಂಬಂತೆ ಈತ ಇಡೀ ಲೋಕವನ್ನೇ ಪರ್ಯಟನ ಮಾಡಿದರೂ ಅನೇಕ ಜನ ರಾಜ ಮಹಾರಾಜರನ್ನು ಸಂದರ್ಶಿಸಿಸಿ ಅವರಿಗೆ ಶಿವತತ್ವ ಭೋದನೆ ಮಾಡಿದನು. ಧರ್ಮದ ಮುಂದೆ ಅಧರ್ಮ ಎಂದೂ ನಿಲ್ಲುವದಿಲ್ಲ ಎಂಬ ಸಂದೇಶ ಈತನ ಕೆಲವು ಲೋಕಸಂಚಾರ ವೃತ್ತಾಂತದಿಂದ ತಿಳಿದುಬರುತ್ತದೆ.

"ಅತ್ತ ಖರ್ಪರನ ಮಂತ್ರವನು ಜಪಿ
ಸುತ್ತಲಿರೆ ನಾಲಗೆಯು ಸೇದಲು
ಹಸ್ತದೊಳಗಿಹ ಖಡ್ಗಬೀಳಲು ನಡುಗುಪುಟ್ಟುದುದು
ತತ್ತರಿಸುತಲಿ ನಿಲಲು ಶಿಷ್ಯರು
ಸತ್ತನೆಂದೆನುತ್ತಲಿ ನಿಲ್ಲದಲೋಡಿದನುಭಯದಿ"[೩೯]

'ದಯವೇ ಧರ್ಮದ ಮೂಲ' ಎಂಬುದು ಶರಣರ ಮೂಲಮಂತ್ರ. ಆದರೆ ಅರಸನಾದವನು ತನ್ನ ಯಾವುದೋ ಬೇಕು - ಬೇಡುಗಳನ್ನು ಈಡೇರಿಸಿಕೊಳ್ಳಲು ಹಿಂಸೆಗೆ ಕೈಹಾಕಿದಾಗ ಅಂತಹವರನ್ನು ಎಚ್ಚರಿಸಿ ಸರಿದಾರಿಗೆ ತರುವದು ರೇವಣಸಿದ್ಧರಂತಹ ಸಿದ್ಧಪುರುಷರ ಜವಬ್ದಾರಿಯಾಗಿರುವುದರ ಜೊತೆಗೆ ಲೋಕ ಕಲ್ಯಾಣಕರ ವಿಚಾರಗಳನ್ನು ಸಾರುವ ಉಪಕ್ರಮಗಳಾಗಿವೆ. ಆ ಹಿನ್ನಲೆಯಲ್ಲಿ

"ಲೋಕದೊಳ್ಕನ್ನಿಕೆಯರಂ ಕೊಲ್ವುದತಿ ಪಾಪ
ಆವನುಂ ತರಬರ್ಪುದೇ ಸುರಗಿಯುಜ್ಜಳಂ
ಸ್ತ್ರೀವಧೆಯುಮಪಕೀರ್ತಿಯುಂ ಸಾರ್ಪುದಗ್ಗಳಂ"[೪೦]

ಧರ್ಮವೆನ್ನುವದು ಮನಬಿಟ್ಟು, ಮಾರುಬಿಟ್ಟು ಏಕಾಂಗಿತನದಿಂದ ಆಚರಿಸುವ ತಪಸ್ಸಲ್ಲವೆಂದು ಶರಣರ ಸಂದೇಶ. ಹೀಗಾಗಿ ಅವರು ಕಾಯಕದಲ್ಲಿ, ಸಂಸಾರದಲ್ಲಿ, ಸಾಮಾಜಿಕ ಕೆಲಸಗಳಲ್ಲಿ ಧರ್ಮವನ್ನು ಕಾಣುವ ಇಲ್ಲವೆ ಇದೇ ನಿಜವಾದ ಧರ್ಮವೆಂಬ ಪ್ರತಿಪಾದನೆಗೆ ತೊಡಗುವ ನಿರ್ಧಾರವನ್ನು ಹುಟ್ಟುಹಾಕಿದರು. ಬದುಕಿನ ಕರ್ಮಗಳನ್ನು ಹರಿದು ಹಾಕಿ ಧರ್ಮವನ್ನು ಆಚರಿಸಬೇಕು ಎಂಬುದನ್ನು ಕವಿ ಮಲ್ಲಣ್ಣ ರೇವಣಸಿದ್ಧನ ಒಕ್ಕಲುತನ ಕಾಯಕದ ಮೂಲಕ ಹೀಗೆ ನಿರೂಪಿಸುತ್ತಾನೆ.

ಹರಗಬಲ್ಲೆನು ಬಿತ್ತ ಬಲ್ಲೆನು
ಹರಿದು ಬಳಿಸಾಲುಗಳ ಹೊಡೆವೆನು
ಹರಿದು ಬಿಸುಟುವೆ ಕರ್ಮಕಸಗಳ ಎಡಿಯ ಹರಗುವೆನು

ಹೊರೆಯ ಹೊರುವೆನು ನಟ್ಟಿ ಕಡಿವೆನು
ಹುರಿಯ ಬಿಡುವೆನು ಹಗ್ಗ ಕಣ್ಣಿಯ
ಕೊರಡ ಕಡಿವೆನು ಹೆಡಿಗೆ ಹೆಣೆವೆನು ಕೆಲಸ ಈಡಿಲ್ಲ [೯೧]

ಆತನೆ ಮುಂದುವರಿಗೆ "ಕೆಡಲೊ ಬೇಡಿರೊ ಧರ್ಮಮಾಡಿರೊ ಹಣವು ಒಳಿತಲ್ಲ" ಎಂದು ಧರ್ಮದಿಂದ ನಡೆದರೆ ಎಲ್ಲಾ ಸೌಭಾಗ್ಯವುಂಟೆಂಬ ಸಂದೇಶ ಇಲ್ಲಿದೆ.

ಬಳ್ಳಿ ಮಿಂಚಿನ ತೆರದಿ ಜೀವನ
ದಲ್ಲಿ ಜೀವಿಗೆ ಸೌಖ್ಯವೆನಿಸುದು
ದಿಲ್ಲಲ್ಲಾ ಕ್ಷಣ ಭಂಗುರವು ನಿಸ್ಸಾರ ಸಂಸಾರ
ಒಲ್ಲೆಯಾದೊಡೆ ನೀನಿದನು ಜಗ
ಕೆಲ್ಲ ಶಿವನೇ ಪಿರಿಯನದರಿಂ
ತಲ್ಲಣಿಸದಾತನನ ನಂಬಲು ಮುಕ್ತನೆಂದ [೯೨]

ಎಂದು ರೇಣುಕ ವಿಜಯ ಪುರಾಣದಲ್ಲಿ ಶ್ರೀಕಂಠಶಾಸ್ತ್ರೀಗಳು ಶಿವಸಾಕ್ಷಾತ್ಕಾರದ ಮುಂದೆ ಜೀವನದ ಎಲ್ಲಾ ಸೌಖ್ಯಗಳು ನಶ್ವರವೆಂಬುದನ್ನು ಸಾರಿ ಜನರನ್ನು ಪಾರಮಾರ್ಥದ ಕಡೆಗೆ ಕೊಂಡೊಯ್ಯುವ ಪ್ರಯತ್ನ ಮಾಡಲಾಗಿದೆ.

ಹೀಗೆ ರೇವಣಸಿದ್ದೇಶ್ವರ ಕೃತಿಗಳ ಮೂಲಕ ಒಂದೊಂದು ಸನ್ನಿವೇಶದಲ್ಲಿ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರ, ಕಾಯಕ ವಿಚಾರ, ದಾಸೋಹ ಕುರಿತು ವಿವರಿಸುತ್ತ ಧರ್ಮದ ಮೌಲ್ಯಗಳನ್ನು ಇಂತಲ್ಲೆ ಹುಡುಕಬೇಕೆಂಬುದರ ಸಂದೇಶವನ್ನು ಹಿಡಿದಿಡಲಾಗಿದೆ.

**೩. ರಾಜಕೀಯ**

ರೇವಣಸಿದ್ದೇಶ್ವರರ ಲೋಕ ಸಂಚಾರದಲ್ಲಿ ಶ್ರೀ ಸಾಮಾನ್ಯರು ಎದುರಾದಂತೆ, ರಾಜ ಮಹಾರಾಜರು ಬರುತ್ತಾರೆ. ಇವೆರೆಲ್ಲರೂ ರೇವಣಸಿದ್ಧರಿಂದ ನಿಜವಾದ ರಾಜಧರ್ಮವನ್ನು ಅರಿತುಕೊಂಡವರು. ಇವರಲ್ಲಿಯ ಅಹಂಕಾರ, ಅಜ್ಞಾನ, ಅಂಧಕಾರ ಇವು ಅಂದಿನ ಸಾಮಾಜಿಕ ಜನಜೀವನದ ಮೇಲೆ ಎಂತಹ ದುಷ್ಪರಿಣಾಮವನ್ನುಂಟು ಮಾಡಿದ್ದವು ಎಂಬುದನ್ನು ತಿಳಿಸಿಕೊಡುತ್ತದೆ. ಇಂತಹವನ್ನು ತಿದ್ದಿ, ನೇರ್ಪಡಿಸುವ ಹೊಣೆಯನ್ನು ರೇವಣಸಿದ್ಧರು ಹೊರುತ್ತಾರೆ.

ಬಿಜ್ಜಳ ಮತ್ತು ರೇವಣರ ಸಂದರ್ಶನದಲ್ಲಿ ಕುದಿಯುವ ಪಾಯಸವನ್ನು ನೀಡುವ ಸನ್ನಿವೇಶ ರಾಜರ ದಾನಗುಣದಲ್ಲಿಯ ದರ್ಪವನ್ನು ತೋರಿಸುವದಕ್ಕೆ ನಿದರ್ಶನವಾಗಿದೆ.

ಜಾಣನಲ್ಲದ ನೃಪತಿ ಪರಿಕಿಸುವ ಚಿತ್ತದೊಳೂ
ಕುದಿವೋಗರವನಿಕ್ಕಿಸಲ್ನಗುತೆ ಕೈಕೊಂಡು
ಸದಮಳು ಕಂಬದೊಳ್ಬೈದೊಡೆಯಲುರಿ ಕೊಂಡು
ಅರಮನೆಯ ಮನೆಗಳೊಳಗುರಿ ಭುಗಿಲು ಘುರಿಲೆನಲು
ಓಲಗದ ಮನೆವುರಿಯಲಾನೆಸಾಲೆಗಳುರಿಯೆ
ಮೇಲೆನಿಪ ತುರಗನಿಳಯಂ ಪಟ್ಟಮದುರಿಯೆ
ಕಂಡು ಬಿಜ್ಜಳನಲ್ಲಿ ನಡುಗಿ ಚರಣಕ್ಕೆರಗೆ [೪೨]

ಹಾಗೆಯೇ ಹೆಂಡತಿಯ ಮೂಲಕ ಗೋರಕ್ಷ ಖಡ್ಗವನ್ನು ನೀಡಿದ ಹಠಯೋಗಿ. ಈತನ ಗರ್ವಭಂಗ ನೋಡಬೇಕು

ಚಿಕ್ಕ ಲಕ್ಕಾದೇವಿ ಪಾಣಿಪಾತ್ರೆಗೆ ತಂದು
ಇಕ್ಕಿದಳು ನಸುನಗುತೆ ಹೊಸ ಕಠಾರಿಯನಂದು
ಇಕ್ಕೆ ರೇವಣಸಿದ್ಧ ತನ್ನ ಬಿಸುಗಣ್ಣಿಂದೆ
ಮಿಕ್ಕುನೋಡಿದಡೆ ಲೋಹಂ ಕರಗಿ ಭರದಿಂದೆ
ನೋಡಿ ಕೈಕೊಂಡನಾ ಲೋಹರಸ ಭಿಕ್ಷಮಂ
ಮೂಡಿತ್ತು ತಾನೊಡೆದು ಗೋರಖನ ವಕ್ಷಮಂ [೪೪]

ರೇವಣರು ಉಗುಳಿದ ಲೋಹರಸ ಕಠಾರಿಯಾಗಿ ಗೋರಖನ ಎದೆಯಲ್ಲಿ ಹೊಕ್ಕು ಆತನ ಅಹಂಕಾರ ಅಡಗಿ ಹೋಗುತ್ತದೆ. ಅದೇ ರೀತಿ ಬಿಜ್ಜಳನು ಸುರಗಿಗಾಗಿ ಹನ್ನೆರಡು ಸಾವಿರ ಜನ ಕನ್ಯೆಯರನ್ನು ಬಲಿಕೊಡುವ ಪ್ರಸಂಗ, ಆತನ ಸಹಾಯಕ್ಕೆ ಬರುವ ಖರ್ಪರನ ಕುಟಿಲತೆ ಎಲ್ಲವೂ ರಾಜ ಮತ್ತು ರಾಜನ ಸುತ್ತ ಬೆಳೆದಿರುವ ಅರಾಜಕತೆಯನ್ನು ತಿಳಿಸಿಕೊಡುತ್ತದೆ. ಇದನ್ನು ತೊಡೆದು ಹಾಕುವ ರೇವಣಸಿದ್ಧರು ರಾಜನನ್ನೆ ಸುರಗಿ ಇದ್ದ ಕಡೆ ಕರೆದೊಯ್ದು ಅವನ ಅಹಂಕಾರ ನಿರಸನ ಮಾಡುವ ಪ್ರಸಂಗವೊಂದು ಹೀಗಿದೆ.

ಕಂಡಾ ನೃಪತಿ ನೋಡು ನೋಡೆಂದು ತೆಗೆವುತಿರೆ
ಕಂಡು ಪಿಡಿಯಲ್ಕೆಂದು ನೃಪತಿ ಕೈನೀಡುತಿರೆ
ಐದು ಪೆಡೆಗಳನುಳ್ಳ ಹಾವಾಗಿ ಭುಸ್ಸೆನಲು
ಮೈದೆಗೆದು ವಿಷದ ಸೆಕೆತಾಗಿ ತನು ಝುಮ್ಮೆನಲು
ಬಿಜ್ಜಳಂ ಹರಿಗೋಲು ಮೇಲೆ ನೆರೆ ಹಮ್ಮೈಸೆ
ಸಜ್ಜನಂ ಸಿದ್ಧರೇವಣನಲ್ಲಿ ಸಂತೈಸೆ
ಏಳುತಲಗು ಕಂಡು ಬಿಡುದೇವ ಬಿಡುದೇವ
ಆಳವುಳ್ಳಲ್ಲಿರಿಸು ಬೇಗವಿರಿಸೆಲೆದೇವ [೪೫]

ಚೋಳರಾಜನ ವಿಷ್ಣು ಪ್ರತಿಮೆಯ ಪ್ರತಿಷ್ಠಾನ ಪ್ರಸಂಗ ಮುಂತಾದವುಗಳು ರೇವಣಸಿದ್ಧರ ಸಮಯದಲ್ಲಿ ನಾಡನ್ನು ಆಳಿದ ಅರಸರ ಉಲ್ಲೇಖ ಮತ್ತು ಅವರ ಆಡಳಿತ ವೈಖರಿ ತಿಳಿದುಬರುತ್ತದೆ. ವಿಕ್ರಮಾದಿತ್ಯನಿಗೆ ತನ್ನ ಕೈಯಲ್ಲಿದ್ದ ಖಡ್ಗವನ್ನು ನೀಡಿ ಅದರ ಮಹತ್ವವನ್ನು ಹೀಗೆ ವಿವರಿಸುತ್ತಾನೆ.

"ತನ್ನ ಕೈಯ ಕಠಾರಿಯಂ ತೋರಿಸುತಿಂತಿದುಡುವಡೆ ದಿವ್ಯವಸ್ತ್ರಂ, ತೊಡುವಡೆ ನವ್ಯಾಭರಣಂ, ಉಂಬಡಭೃಷ್ಟಾನ್ನಂ ಏರುವಡೆ ವಾಹನಂ ಕೂಡುವಡೆ ದೇವಾಂಗನೆ, ಕಾದುವಡೆ ನಿಶಿತಾಯುಧಮಪ್ಪುದಿಂತಿದಂ ಕುಡಲ್ಬಂದೆವೆನುತಾ ಕಠಾರಿಯಂ ಕರುಣಿಸಿ "[೪೭]

ಹೀಗೆ ರಾಜರ ಆತ್ಮರಕ್ಷಣೆ, ಪ್ರಜಾರಕ್ಷಣೆ ಹಾಗೂ ರಾಷ್ಟ್ರರಕ್ಷಣೆ ಕುರಿತು ಕಾವ್ಯದುದ್ದಕ್ಕೂ ರೇವಣಸಿದ್ಧರು ಪ್ರತಿಪಾದಿಸುವುದು ತಿಳಿದುಬರುತ್ತದೆ.

**ಉ. ಆಚಾರ - ವಿಚಾರಗಳು**

ಕಾವ್ಯ ಸಮಾಜದ ಕನ್ನಡಿ. ಹೀಗಾಗಿ ಸಾಮಾಜಿಕ ಚಟುವಟಿಕೆಗಳನ್ನು ಪ್ರತಿಪಾದಿಸುವ ಪ್ರಯತ್ನ ನಡೆದಿರುತ್ತದೆ. ಲೌಕಿಕ ಪರವಾದ ಕೃತಿಗಳು ಜನ ಸಾಮಾನ್ಯರ ದಟ್ಟ ಆಚರಣೆಗಳನ್ನು ಕಟ್ಟಿಕೊಟ್ಟರೆ ಧಾರ್ಮಿಕ ಅಂಶಗಳನ್ನು ಪ್ರತಿಪಾದಿಸುವ ಕೃತಿಗಳಲ್ಲಿ ಧರ್ಮದ ಆಚರಣೆಗಳಿಗೆ ಪ್ರಾಧನ್ಯತೆ ಇರುವುದು ಸರ್ವಸಾಮಾನ್ಯ. ಈ ಕಾರಣವಾಗಿ ರೇವಣಸಿದ್ಧರನ್ನು ಕುರಿತ ಕೃತಿಗಳು ಬಹುತೇಕ ಧಾರ್ಮಿಕ ಆಚಾರ - ವಿಚಾರಗಳನ್ನು ವರ್ಣಿಸುತ್ತವೆ. ರುದ್ರಮುನಿ ಶಿವಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ರೇವಣಸಿದ್ಧರ ಸನ್ನಿವೇಶವನ್ನು "ಪಟ್ಟ ಸಂಸ್ಕೃತಿ" ಎಂದು ಕರೆಯುವ ಕವಿ ಶ್ರೀಕಂಠಶಾಸ್ತ್ರಿ ನಿರಾಭಾರ ಪಟ್ಟಾಧಿಕಾರ ಕ್ರಿಯೆಯನ್ನು ಕುರಿತು

ಕರವಿಡಿದು ರುದ್ರಮುನಿದೇವನ
ಕರೆತರುತ್ತಲಿ ಪಟ್ಟ ಸಂಸ್ಕೃತಿ
ವಿರಚಿಸುತೆ ಸಿಂಹಾಸನದೆ ಕುಳ್ಳಿರಿಸಿ ನಲವಿಂದೆ
ಗುರುವರೇಣ್ಯನು ಮಣಿಕಿರೀಟವ
ನಿರಿಸೆ ಸಿರದಲಿ ಮರಲ ಸರಿಯದು
ಕರೆಯೆ ಪಂಚಾಚಾರ್ಯರುಂ ತಾವೊಲ್ಲು ಪರಸಿದರು."[೪೮]

ಅದೇ ರೀತಿ ರುದ್ರಮುನಿದೇವರ ಜನನ ವೃತ್ತಾಂತವನ್ನು ವರ್ಣಿಸುವ ಕವಿ ಹರಿಹರ ಜನನ ಆದಿಯಾಗಿ ನಾಮಕರಣದವರೆಗೆ ನಡೆಯುವ ಮಂಗಳಕಾರ್ಯಗಳನ್ನು ವರ್ಣಿಸುವಲ್ಲಿ ಶೈವ ಆಚಾರ-ವಿಚಾರಗಳನ್ನೇ ಚಿತ್ರಿಸುತ್ತಾನೆ. "ಬಾಲಗರ್ಭಕ್ಕೆ ನವಮಾಸಂ ತೀವಿತೆಂಬುದನರಿದು ರೇವಣಸಿದ್ಧಂ ಪುತ್ರೋತ್ಸಾಹಕ್ಕನು ಕೂಲವೆನಿಪಮೃದು ಮೃದಂಗ ಮಂಗಳ ಕಳಸ ದರ್ಪಣದಾರತಿಯ ಸುವಾಸಿನೀ ಜನಂಬೆರಸು ಪಟ್ಟಣಮಂ ಪೊರಮಟ್ಟು ಬಂದು, ಕೆರೆಯೇರಿಯ ಮೇಲೆ ಮುನ್ನಿರಿಸಿದ ಮುಚ್ಚೂಳಂ

ತೆಗೆಯೆ, ಭಕ್ತಿಭೂಮಿಯೊಳ್ ಜ್ಞಾನರಸದಿಂ ತೊಯ್ದು ಬೀಗಿ ಬಿರಿದ ಶಿವಕಳಾಬೀಜದಿಂ ನಳನಳಿಸಿ ಬೆಳೆದ ಶಿವಜ್ಞಾನ ಅಂಕುರದಂತೆ ತೊಳತೊಳಪ ಬಾಲಕನಂ ಕೈಲೆಡೆಗೊಟ್ಟ ಭೂದೇವಿಯ ಕೈಯೊಳೀಸಿಕೊಂಬಂದದಿಂ ತೆಗೆದುಕೊಂಡು ಕೃಪಿಯಿಂ ನೋಡಿ ಮೋಹದಿಂ ಮುದ್ದಾಡಿ ಮೂರ್ಧ್ನಿ ಘ್ರಾಣಮಂ ಮಾಡಿ ತಾಯಗರ್ಭದಿಂ ಬಪ್ಪ ನೋವನರಿಯದೆ ದುಃಖಮಂ ನೀಗಿ ಹುಟ್ಟಿದವನಾಗಿ ರುದ್ರಮುನಿದೇವರೆಂಬ ನಾಮಕರಣಂ ಮಾಡಿ ಪುರಕ್ಕೆ ತಂದು ತಮ್ಮರಸಿಯರೊಳೊರ್ವ ಪುಣ್ಯವತಿಯ ಕೈಯೊಳ್ಕುಡೆ”[೪೮] ಹೀಗೆ ದೀಕ್ಷೆ, ಸಂಸ್ಕಾರ ಮುಂತಾದವುಗಳನ್ನು ನೋಡಬಹುದು.

ಶಿವಪೂಜಾ ವಿಧಿ-ವಿಧಾನಗಳು ಮತ್ತು ಅತಿ ರಹಸ್ಯವಾದ ಅಷ್ಟಾಂಗ ಯೋಗವನ್ನು ಯಮ, ನಿಯಮ, ಪ್ರಾಣಯಾಮ, ಪ್ರತ್ಯಾಹಾರ, ಧಾನ್ಯ-ಧಾರಣ, ಸಮಾಧಿಗಳೆಂಬ ಶಿವಯೋಗಾಂಗಳಾದ ಅಷ್ಟಾಂಗಯೋಗದ ಲಕ್ಷಣ ಸ್ವರೂಪಗಳನ್ನು ವಿವರಿಸುವಲ್ಲಿ ಧಾರ್ಮಿಕ ಆಚರಣೆಗಳನ್ನೇ ಕವಿ ಚೆನ್ನಬಸವ ತನ್ನ ರೇವಣ ಸಾಂಗತ್ಯದಲ್ಲಿ ತಿಳಿಸುತ್ತಾನೆ.

ಧಾರ್ಮಿಕ ಆಚರಣೆಗಳಂತೆ, ಸಂಸ್ಕೃತಿಯ ಆಚರಣೆಗಳಾದ ಹಬ್ಬ ಹರಿದಿನಗಳು ಕಾವ್ಯದಲ್ಲಿ ಉಲ್ಲೇಖಗೊಂಡಿದೆ. ಆಚೆಗೊಂಡನೆಂಬ ಹೆಸರಿನಿಂದ ಒಕ್ಕಲಿಗರ ಮನೆಯಲ್ಲಿ ಬೆಳೆದ ರೇವಣಸಿದ್ಧರನ್ನು ಮತ್ತು ಮಳೆ, ಬೆಳೆ, ಸುಗ್ಗಿ ಮುಂತಾದವುಗಳನ್ನು ವರ್ಣಿಸುವ ರೇವಣಸಿದ್ದೇಶ್ವರ ಕಾವ್ಯದ ಕರ್ತೃ ಜಾಲವಾದಿ ಮಲ್ಲಣ್ಣ ಎಳ್ಳು ಅಮವಾಸ್ಯೆಯ ಹಬ್ಬವನ್ನು ಮನದುಂಬಿ ವರ್ಣಿಸುತ್ತಾನೆ.

ಅಗಸೆ ಅಲಸಂದಿಗಳು ಲಚ್ಚಣಿ
ಸೊಗಸಿ ಕಳವೆಯು ಉದ್ದು ಹಾರಕ
ಮಿಗಲೆನಿಪ ಹಕ್ಕಿಗಳು ಕುಸುಬೆಯು ತೊಗರೆ ಚಿಣಗೆಗಳು
ಯುಗದ ದೇವರ ಕೃಪೆಗಳಾಗಲು
ಬಗೆಬಗೆಯ ಧಾನ್ಯಗಳು ಬೆಳೆಯಲು
ಜಗಕೆ ಎಳ್ಳಮವಾಸ್ಯೆ ಹಬ್ಬವು ಬಂತು ಹರುಷದಲಿ.[೪೯]

ಜಕ್ಕಲೆವ್ವೆಯ ಉದರದಿಂದ ಹುಟ್ಟುವ ರೇವಣಸಿದ್ಧ ಶಿಶುವಿನ ತೊಟ್ಟಿಲ ಕ್ರಿಯೆಯನ್ನು ವರ್ಣಿಸುವ ಕವಿ ಮಲ್ಲಣ್ಣ ತನ್ನ ಪರಿಸರದ ನಾಮಕರಣದ, ಗ್ರಾಮೀಣ ಆಚರಣೆಗಳನ್ನೇ ಚಿತ್ರಿಸುತ್ತಾನೆ.

ಸಪ್ತದಿವಸಕೆ ಸೂತಕವ ತೊಳೆ
ಯುತ್ತ ಗೃಹ ಗುಗ್ಗಳದಿ ಸಾರಿಸಿ
ಮುತ್ತೈದೆಯರಿಗೆಣ್ಣೆ ಅರಿಷಣಗಳನ್ನು ಕಳುಹಿದರು
ಅಸ್ತಮಾನ ಸಮಯದಲಿ ತಾ
ವಿಸ್ತರಿಸಿ ನೆರೆದೆಲ್ಲ ಪಾಡುತ
ಚಿತ್ರ ತೊಟ್ಟಿಲ ಕಟ್ಟಿ ಶಿಶುವನು ತೂಗಿ ಹರಿಸಿದರು.[೫೦]

ಹಾಗೆಯೇ ವೀಳ್ಯ ಕೊಡುವುದು, ಕರ್ಪೂರ ವೀಳ್ಯ ಕೊಡುವದು. ಇಂತಹ ಆಚರಣೆಗಳು ಮಂಗಳಕಾರ್ಯಕ್ಕೆ ಆಹ್ವಾನಿಸುವ ಸುಸಂಸ್ಕೃತ ಬದುಕಿನ ದ್ಯೂತಕವಾಗಿವೆ.

ಊ. ಸ್ಥಳನಾಮಗಳು

ಅಧ್ಯಯನದ ಕ್ಷೇತ್ರ ವ್ಯಾಪಕವಾಗುತ್ತಿರುವ ಇಂದಿನ ದಿನಗಳಲ್ಲಿ ಸ್ಥಳನಾಮಗಳು ಸೇರಿಕೊಳ್ಳುತ್ತವೆ. ನಾಡಿನ ಚರಿತ್ರೆಯನ್ನು ಪುನರಚಿಸುವಲ್ಲಿ ಬಹು ಮೂಲದ ಆಕರಗಳಂತೆ ಸ್ಥಳನಾಮಗಳನ್ನು ಬಳಸಿಕೊಳ್ಳುವದು ಅರ್ಥಪೂರ್ಣವೆನಿಸುತ್ತದೆ. ಸ್ಥಳನಾಮಗಳು ಪ್ರಾಚೀನ ಜನಜೀವನದ ಪದ್ಧತಿ, ನಾಗರಿಕತೆ, ಭೌಗೋಳಿಕ ವಿವರಣೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ. ಸ್ಥಳನಾಮಗಳ ಹುಟ್ಟಿಗೆ ಸುತ್ತಲಿನ ಪರಿಸರದ ವೈಶಿಷ್ಟ್ಯ ಇಲ್ಲವೆ ಬೇರೆಯದೇ ಆದ ಅಂದರೆ ಜನಾಂಗ ಆಧಾರಿತ, ವ್ಯಕ್ತಿ ಆಧಾರಿತ, ದೈವವಾಚಿಕ ಆಧಾರಿತ, ವೃತ್ತಿ ಆಧಾರಿತ ಮತ್ತು ಐತಿಹಾಸಿಕ ಹಿನ್ನೆಲೆಯಲ್ಲಿ ಸ್ಥಳಗಳಿಗೆ ನಾಮ ಪ್ರಾಪ್ತವಾದಂತೆ ಐತಿಹಿಕೃತ ಸ್ಥಳನಾಮಗಳು ಇರುವುದನ್ನು ಅಲ್ಲಗಳೆಯುವಂತಿಲ್ಲ. ಈ ಐತಿಹ್ಯಗಳಿಗೆ ಯಾವುದೇ ಪೂರಕವಾದ ಆಕರ ಇರಲಿಕ್ಕಿಲ್ಲ. ಆದರೆ ಅಲ್ಲಿಯ ಜನವದಂತಿಯಲ್ಲಿ ಯಾವುದಾದರೂ ಘಟನೆ ಪ್ರಚಲಿತದಲ್ಲಿರುತ್ತದೆ. ಇಂತಹ ಐತಿಹ್ಯವನ್ನೇ ಇಲ್ಲಿ ಜನವಂದತಿಯನ್ನೇ ಹಿನ್ನಲೆಯಾಗಿಟ್ಟುಕೊಂಡು, ಒಂದು ಪ್ರದೇಶದ ಇಲ್ಲವೆ ಸ್ಥಳದ ನಾಮನಿರ್ದೇಶನ ಮಾಡುತ್ತೇವೆ. ಪ್ರಸ್ತುತ ರೇವಣಸಿದ್ದೇಶ್ವರನ್ನು ಕುರಿತು ರಚನೆಯಾದ ಕಾವ್ಯಗಳಲ್ಲಿ ಸ್ಥಳನಾಮಗಳಿಗೆ ಸಂಬಂಧಿಸಿದ ಒಂದೆರಡು ಸಾಂಸ್ಕೃತಿಕ ವಿಚಾರಗಳು ಎಡೆಪಡೆದಿವೆ.

ಹಾಲುಮತಪುರಾಣ ಸಂಧಿ - ೧೪ರಲ್ಲಿ ಕವಿ ಚೆನ್ನಬಸವಶಾಸ್ತ್ರೀಗಳು ಶಿವಸಿದ್ಧ ಬೀರೇಶನ ಮೇಲೆ ಏರಿ ಬಂದ ಮದಿಸಿದ ಕೋಣವನ್ನು ಸಂವರಿಸಿದ ಪರಿಯನ್ನು ವರ್ಣಿಸುವಲ್ಲಿ ಕೋಣನೂರು, ಮುಂಡಗನೂರು ಎಂಬ ಎರಡು ಸ್ಥಳನಾಮಗಳ ಉಗಮಕ್ಕೆ ಘಟನೆಯೊಂದನ್ನು ಹೀಗೆ ನಿರೂಪಿಸುತ್ತಾರೆ.

ಒಂದು ದಿವಸ ಶಿವಸಿದ್ಧ ಬೀರೇಶನು
ಬಂದಿರೆ ಬೀದಿಯೊಳಾಗೆ
ನಿಂದಲ್ಲ ನಿಲ್ಲದೆ ಮದವಾಂತ ಕೋಣನು
ಬಂದು ಬೀರೇಶನಂ ತಾಗೆ
ಒಂದಕ್ಕಟ್ಟಲು ಪೋಗದೊಂದೆ ಕುಪ್ಪಳಿಕೆಯಂ
ಮುಂದಕ್ಕೆ ಹಾರಲಾಕ್ಷಣದಿ
ಕಂದುಗೊರಳನ ಧ್ಯಾನಿಸಿ ಸಿದ್ಧಬೀರನು
ಕೊಂದ ಸೊಕ್ಕಿದ ಕೋಣವನ್ನು
ಕೋಣನು ಬಿದ್ದಸುವಳಿದ ಸ್ಥಳದಿ ಮುಮದೆ
ಕೋಣನೂರಾಗಲಿ ಮತ್ತೆ

ಆಣತಿಯು ಮುಂಡ ಬಿದ್ದೆಡೆಯೊಳು ಜನ
ಶ್ರೇಣಿಯ ಮುಂಡಗನೂರು.[೫೧]

ಬೀರೇಶನಿಂದ ಹತವಾದ ಕೋಣ ಬಿದ್ದ ಸ್ಥಳ ಕೋಣನೂರು ಆಗಿ, ಅದರ ಮುಂಡ ಬಿದ್ದ ಸ್ಥಳ ಮುಂಡಗನೂರಾಗಿ ಪ್ರತೀತಿ ಪಡೆಯಿತು ಎಂಬ ಉಲ್ಲೇಖ ಐತಿಹ್ಯ ಮೂಲ ಸ್ಥಳನಾಮದ ಗುಂಪಿಗೆ ಸೇರುತ್ತದೆ.

ಹಾವಿನಾಳ ಗ್ರಾಮಕ್ಕೆ ಹೆಸರು ಬಂದಿರುವ ಐತಿಹ್ಯವೊಂದನ್ನು ನಂಜನಗೂಡು ಶ್ರೀಕಂಠಶಾಸ್ತ್ರಿಗಳು ತಮ್ಮ ರೇಣುಕ ವಿಜಯ ಪುರಾಣದಲ್ಲಿ ಉಲ್ಲೇಖಿಸುತ್ತಾರೆ.

ಬೇಡುತಿಂತತ್ಯುಗ್ರತಪವನು
ಮಾಡುತಿರಲಾಕಲ್ಲಿನಾಥನು
ನೋಡಿ ತಾರಾನಾಥಶೇಖರ ಭಕ್ತವತ್ಸಲನು
ನೀಡಿದನು ಪಾವಿಂಗೆ ಹರಣವ
ನಾಡುತ್ಯೆದಿದುದದು ಬಳಿಕ್ಕಂ
ರೂಢಿಯಾಯ್ತಿಪುರಕೆ ಭುಜಗಾರಣ್ಯಸನ್ನಾಮಂ.[೫೨]

ತಾರಾನಾಥಶೇಖರನ ಭಕ್ತವತ್ಸಲನಾದ ಕಲ್ಲಿನಾಥನು ಹಾವಿಗೆ ಪ್ರಾಣವನ್ನು ನೀಡಿದುದರ ಪರಿಣಾಮ, ಹಾವಿನಾಳ ಎಂಬ ಹೆಸರು ರೂಢಿಯಾಯಿತು ಎಂಬುದನ್ನು ವಿವರಿಸುತ್ತಾನೆ. ಕಲ್ಲಿನಾಥನ ಆ ವಾಸಸ್ಥಳವಾದ ಪರಿಣಾಮ ಶರಣ ಕಲ್ಲಯ್ಯನಿಗೆ ಕಲ್ಲಯ್ಯನೆಂಬ ಹೆಸರು. ಹಾವಿಗೆ ಹರಣ ನೀಡದ ಕಾರಣ ಕಲ್ಲಯ್ಯನ ಪುರಕ್ಕೆ ಹಾವಿನಾಳು ಎಂಬ ಪರ್ಯಾಯನಾಮ ಪ್ರಾಪ್ತವಾದದ್ದು, ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಕುರಿತು ಬೆಳೆದುಬಂದ ಐತಿಹ್ಯ ಇಂತಹ ಧಾರ್ಮಿಕ ಕೃತಿಗಳಲ್ಲಿ ಒಳಸೇರಿರುವದು ಅಧ್ಯಯನ ಯೋಗ್ಯವಾಗಿದೆ.

ಕೂಷ್ಮಂಡ ಎಂಬ ಪರ್ವತವು ನಂದಿಗಿರಿಯೆಂಬ ಸ್ಥಳನಾಮವನ್ನು ಪಡೆದುಕೊಂಡ ರೀತಿಯನ್ನು ರೇಣುಕ ವಿಜಯ ಪುರಾಣ ಹೀಗೆ ಉಲ್ಲೇಖಿಸುತ್ತದೆ. ಕೂಷ್ಮಂಡ ಬೆಟ್ಟದಲ್ಲಿ ನಂದೀಶ ತಪಗೈದ ಪರಿಣಾಮ ಇದಕ್ಕೆ ನಂದಿಗಿರಿಯೆಂಬ ಹೆಸರು ಬಂದಿರುವುದನ್ನು ಇಲ್ಲಿಯ ಪದ್ಯಗಳು ಹೀಗೆ ಹಿಡಿದಿಟ್ಟಿವೆ.

ಈ ನುಡಿಯ ನಂದೀಶ ಲಾಲಿಸಿ
ಸೂನೃತವದೆಂದರಿದು ತಾಳುತೆ
ಮಾನಸದೆ ಸಂಮುದ್ರವ ಲೋಕಕ್ಕೆ ನಡೆತಂದು
ಸಾನುರಾಗದೆ ನುತಿಸಿ ಭಕ್ತಾ
ದೀನನನು ಕೂಷ್ಮಾಂಡಮೆಂಬಂಧಿ

ಧಾನದೀಗಿರಿವರದೆ ಪಾಪವ ಕಳೆದು ನೆರೆಮೆರೆದಂ
ಅಂದಿನಿಂದೀ ಪುಣ್ಯಶೈಲಕೆ
ನಂದಿಗಿರಿಯೆಂಬಘನಾಮವು
ಸಂದುದೀಯೆಡೆ ನೆಲಸಿದರ ದುಷ್ಕೃತದ ದಳ್ಳುರಿಯು
ನಂದುವುದು ವೈರಾಗ್ಯಸುಪದ
ವಂದದಿಂ ಕೈಸೇರಿ ನಿತ್ಯಾ
ನಂದವೊದಗುವುದೈಸೆ ನೀವೇ ಧನ್ಯರಿಲಿಹರು ೧೬

ಇದೇ ರೀತಿ ರೇವಣಸಿದ್ದೇಶ್ವರ ಬೆಟ್ಟ ಕುರಿತಾದ ಐತಿಹ್ಯವು ಕೂಡ ಸ್ಥಳನಾಮವನ್ನು ಪ್ರತಿಪಾದಿಸುತ್ತದೆ.

ಹೀಗೆ ರೇವಣಸಿದ್ದೇಶ್ವರನ್ನು ಕುರಿತು ರಚನೆಯಾದ ಕೃತಿಗಳ ಸಾಂಸ್ಕೃತಿಕ ಮಹತ್ವವನ್ನು ಸಾಮಾಜಿಕ, ಧಾರ್ಮಿಕ, ರಾಜಕೀಯ, ಆಚಾರ - ವಿಚಾರ ಮತ್ತು ಸ್ಥಳನಾಮಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ. ಭಕ್ತ ಕವಿ ಹರಿಹರನ ಮತ್ತು ಅವನ ಮಾರ್ಗದಲ್ಲಿಯೇ ನಡೆದ ಚೆನ್ನಬಸವ ಕವಿಯ ಧಾರ್ಮಿಕ ಸಂಸ್ಕೃತಿಯನ್ನಾಗಲಿ, ಜನಪದ ಕವಿಯಾದ ಜಾಲವಾದಿ ಮಲ್ಲಣ್ಣ ಮತ್ತು ಆತನ ಮಾರ್ಗದಲ್ಲಿಯೇ ನಡೆದ ಚೆನ್ನಬಸವಶಾಸ್ತ್ರೀಗಳ ಸಮಾಜಕೇಂದ್ರಿತವಾದ ಲೋಕಾನುಭವ ಸಂಸ್ಕೃತಿಯಾಗಲಿ ಒಂದು ಕಾವ್ಯದ ರಚನೆ, ಪ್ರತಿಪಾದನೆ, ಫಲಶೃತಿಗಳು ಹೇಗಿರಬೇಕೆಂಬುದಕ್ಕೆ ನಿದರ್ಶನವಾಗಿ ನಿಲ್ಲುತ್ತವೆ.

**ಕೊನೆ ಟಿಪ್ಪಣಿಗಳು**

೧. ರೇವಣಸಿದ್ದೇಶ್ವರ ರಗಳೆ, ಸ್ಥಲ ೧ - ೧೦
೨. ರೇವಣ ಸಾಂಗತ್ಯ, ೧ - ೧
೩. ರೇವಣಸಿದ್ದೇಶ್ವರ ಪುರಾಣ ೧
೪. ರೇವಣಸಿದ್ದೇಶ್ವರ ಕಾವ್ಯ ೧ - ೮
೫. ಅದೇ, ೧ - ೯
೬. ರೇಣುಕ ವಿಜಯ ಪುರಾಣಂ ೨ - ೨೩
೭. ರೇವಣಸಿದ್ದೇಶ್ವರ ರಗಳೆ ೧ - ೬೦
೮. ರೇವಣ ಸಾಂಗತ್ಯ ೨ - ೬೩
೯. ರೇವಣಸಿದ್ದೇಶ್ವರ ಕಾವ್ಯ ೧ - ೩೮
೧೦. ರೇಣುಕ ವಿಜಯ ಪುರಾಣಂ ೩ - ೨೩
೧೧. ರೇವಣ ಸಾಂಗತ್ಯ ೬ - ೪, ೫, ೬ ಪದ್ಯಗಳು
೧೨. ಹರಿಹರನ ರಗಳೆಗಳು (ಸಂ), ಡಾ. ಎಂ.ಎಂ.ಕಲಬುರ್ಗಿ, ಪೀಠಿಕೆ - ೫
೧೩. ಅದೇ, ಪು. ೧೯೭- ೧೯೮
೧೪. ಹರಿಹರನ ರಗಳೆಗಳ ಸಾಹಿತ್ಯಿಕ ಅಧ್ಯಯನ, ಡಾ. ಕೆ.ಪಿ.ಮಹದೇವಯ್ಯ, ಪು. ೨೨೦
೧೫. ರೇವಣಸಿದ್ದೇಶ್ವರ ಕಾವ್ಯ (ಸಂ), ಡಾ. ಎಂ.ಎಸ್.ಸುಂಕಾಪುರ, ಪು. VIII
೧೬. ಅದೇ, ಸಂಧಿ - ೩, ಪದ್ಯ - ೫

೧೭. ರೇವಣ ಸಾಂಗತ್ಯ ೧೪ - ೧೯
೧೮. ಅದೇ, ೩ - ೨೯
೨೦. ರೇವಣಸಿದ್ದೇಶ್ವರ ಪುರಾಣ ೧ - ೨೩
೨೧. ಅದೇ, - ೨೫
೨೨. ರೇಣುಕವಿಜಯ ಪುರಾಣಂ ೧ - ೧೯
೨೩. ಅದೇ, ೧೩ - ೪೨
೨೪. ಹಾಲುಮತ ಪುರಾಣ ೧ - ೪೪
೨೫. ಹಾಲುಮತ ಪುರಾಣ ೧ - ೪೪
೨೫. ಅದೇ, ೨ - ೨೦
೨೬. ಶಂಕರ ದಾಸಿಮಯ್ಯ ಪುರಾಣ : ಒಂದು ಅಧ್ಯಯನ, ಡಾ.ಅನ್ನಪೂರ್ಣ ಎಂ. ಜಾಲವಾದಿ, ಪು. ೧೯೩
೨೭. ರೇವಣಸಿದ್ದೇಶ್ವರ ರಗಳೆ ೩ - ೬೦
೨೮. ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ - ೪, ಮೈಸೂರು ವಿಶ್ವವಿದ್ಯಾಲಯ, ಪು. ೧೩೬೧
೨೯. ಹರಿಹರನ ರಗಳೆಗಳು (ಸಂ), ಡಾ. ಎಂ.ಎಂ.ಕಲಬುರ್ಗಿ, ಪೀಠಿಕೆ, ಪು. XIX
೩೦. ರೇವಣಸಿದ್ದೇಶ್ವರ ರಗಳೆ ೨ - ಗದ್ಯ
೩೧. ರೇವಣ ಸಾಂಗತ್ಯ ೧ - ೨೬
೩೨. ರೇವಣಸಿದ್ದೇಶ್ವರ ಕಾವ್ಯ (ಸಂ), ಡಾ.ಎಂ.ಎಸ್.ಸುಂಕಾಪುರ, ಪು. VII
೩೩. ರೇಣುಕವಿಜಯ ಪುರಾಣಂ ೧ - ೨೨
೩೪. ಹರಿಹರನ ರಗಳೆಗಳು (ಸಂ), ಡಾ.ಎಂ.ಎಂ.ಕಲಬುರ್ಗಿ, ಪೀಠಿಕೆ, ಪು. XX
೩೫. ರೇವಣಸಿದ್ದೇಶ್ವರ ರಗಳೆ ೪ - ಗದ್ಯ
೩೬. ಹಾಲುಮತ ಪುರಾಣ ೨ - ೬
೩೭. ಅದೇ, ೨ - ೫
೩೮. ರೇವಣ ಸಾಂಗತ್ಯ ೧೪ - ೨
೩೯. ಜಗದ್ಗುರು ರೇವಣಸಿದ್ದೇಶ್ವರ ಪುರಾಣ, ಶಿವಾಚಾರ್ಯಸ್ವಾಮಿ ೪ - ೧೨
೪೦. ರೇವಣಸಿದ್ದೇಶ್ವರ ರಗಳೆ ೩ - ೧೪೦
೪೧. ರೇವಣಸಿದ್ದೇಶ್ವರ ಕಾವ್ಯ ೧ - ೧೯
೪೨. ರೇಣುಕವಿಜಯ ಪುರಾಣಂ ೪ - ೪೧
೪೩. ರೇವಣಸಿದ್ದೇಶ್ವರ ರಗಳೆ ೩ - ೧೦
೪೪. ಅದೇ, ೩ - ೫೦
೪೫. ರೇವಣಸಿದ್ಧರ ರಗಳೆ, ೩ - ೧೭೦
೪೬. ಅದೇ, ೨ ಸ್ಥಲ, ಗದ್ಯ
೪೭. ರೇಣುಕವಿಜಯ ಪುರಾಣಂ, ೧೮ - ೫೭
೪೮. ರೇವಣಸಿದ್ಧೇಶ್ವರ ರಗಳೆ, ೪ ಸ್ಥಲ, ಗದ್ಯ
೪೯. ರೇವಣಸಿದ್ಧೇಶ್ವರ ಕಾವ್ಯ, ೧ - ೩೩
೫೦. ಅದೇ, ೪ - ೩೦
೫೧. ಹಾಲುಮತ ಪುರಾಣ, ಸಂಧಿ ೧೪ - ೨,೩,೪
೫೨. ರೇಣುಕವಿಜಯ ಪುರಾಣಂ, ೧೦ - ೮
೫೩. ಅದೇ, ೭ - ೬೨, ೬೩

# ೭

# ರೇವಣಸಿದ್ಧರು : ಪುಣ್ಯಕ್ಷೇತ್ರಗಳು

# ೭

# ರೇವಣಸಿದ್ಧರು : ಪುಣ್ಯಕ್ಷೇತ್ರಗಳು

ರೇವಣಸಿದ್ಧರು ಐತಿಹಾಸಿಕ ವ್ಯಕ್ತಿಯೆಂಬುದನ್ನು ಅವರ ಕುರಿತಾದ ಕಾವ್ಯಗಳು, ಪುರಾಣಗಳು, ಸಮಕಾಲೀನ ವಚನಕಾರರ ವಚನಗಳು, ಶಾಸನಗಳಿಂದ ತಿಳಿದುಬರುತ್ತದೆ. ಇವುಗಳ ಜೊತೆಗೆ ಈತನಿಗೆ ಇರುವ ಐತಿಹಾಸಿಕತೆಗೆ ಮತ್ತೊಂದು ಆಕರ ಪುಣ್ಯಕ್ಷೇತ್ರಗಳು. ಯಾವುದೇ ಒಂದು ಜನ ಸಮುದಾಯದ ಹಿಂದೆ ಆ ಸಮುದಾಯ ವಾಸ ಮಾಡಿದ ಸ್ಥಳ, ಅವರ ಅಸ್ತಿತ್ವವನ್ನು ಕಟ್ಟಿಕೊಡಲು ಸಹಾಯಕವಾಗುತ್ತವೆ. ಹೀಗಾಗಿ ಸ್ಥಳ ಪುರಾಣಗಳು ಇಲ್ಲವೆ ಸ್ಥಳನಾಮಗಳು, ನಾಮಶಾಸ್ತ್ರ ಹೆಸರಿನಲ್ಲಿ ಒಂದು ಅಧ್ಯಯನದ ಶಿಸ್ತಾಗಿ ಬೆಳೆದು ಬಂದಿರುವದನ್ನು ಗಮನಿಸಬೇಕು. ಈ ಕಾರಣಕ್ಕಾಗಿಯೇ ಸಾಂಸ್ಕೃತಿಕ ಮಹತ್ವದ ಜೊತೆಗೆ ಚಾರಿತ್ರಿಕ ಮಹತ್ವವು ಸ್ಥಳ ಪುರಾಣಗಳಿಗೆ ಪ್ರಾಪ್ತವಾಗುತ್ತದೆ. "ಕನ್ನಡ ಚಾರಿತ್ರಿಕ ಸಾಹಿತ್ಯ ವಿರಳವಾಗಿ ರಚನೆಯಾಗಿರುವದಲ್ಲದೆ ಸ್ತುತಿ, ಪವಾಡ, ವದಂತಿ, ಐತಿಹ್ಯ, ದಂತಕಥೆಗಳಿಂದ ಕೂಡಿದ್ದಾಗಿದೆ. ಉದಾಹರಣೆಗೆ ರಾಘವಾಂಕನು ಹರಿಶ್ಚಂದ್ರ ಕಾವ್ಯ ಬರೆದು ನರಸ್ತುತಿ ನಿಂದೆಗೆ ಕಾರಣವಾಗಿ ಹರಿಹರನಿಂದ ದಂತ ಭಗ್ನ, ಹರಸ್ತುತಿ ಕಾವ್ಯಗಳ ಸೃಷ್ಟಿ. ಹರಿಹರನಿಗೆ ಸಂಬಂಧಿಸಿದಂತೆ ಹಂಪೆಯ ವಿರುಪಾಕ್ಷ ದೇವಸ್ಥಾನದ ತೆರೆಗೆ ಬೆಂಕಿ ಹತ್ತಿದ ಪ್ರಸಂಗ ಹಾಗೂ ಹರಿಹರ ಕ್ಷೇತ್ರದಿಂದ ಬ್ರಹ್ಮ ಪಿಶಾಚಿಗಳನ್ನು ಓಡಿಸಿದ್ದು, ಕುಮಾರವ್ಯಾಸನ ಒದ್ದೆ ಬಟ್ಟೆಯ ಕಾವ್ಯರಚನಾ ಸ್ಫೂರ್ತಿ ಚಾಮರಸ ಕುಮಾರವ್ಯಾದರ ಭಾರತದ ಕಥಾಸ್ಪರ್ಧೆ, ನೇಮಿನಾಥನ ಲೀಲಾವತಿ ಪ್ರಬಂಧವನ್ನು ಆನೆಯ ಮೇಲಿರಿಸಿ ಮೆರವಣಿಗೆ ಮಾಡಿದ ಪ್ರಸಂಗ ಆ ನಿಮಿತ್ತ, ಷಡಕ್ಷರಿ ಕವಿಯ ರಾಜಶೇಖರ ವಿಳಾಸ ಸೃಷ್ಟಿಯಾದುದು ಇಂಥ ಅನೇಕ ವದಂತಿ, ಪವಾಡ, ಐತಿಹ್ಯಗಳು, ಧರ್ಮ, ವ್ಯಕ್ತಿಯಾಭಿಮಾನಗಳ ಉದ್ದೇಶಗಳಿಗಾಗಿ ಸಾಹಿತ್ಯ ಸೃಷ್ಟಿಯಲ್ಲಿ

ಸ್ಥಾನ ಪಡೆಯುತ್ತವೆ. ಹಾಗೆಯೇ ಚಿಕ್ಕ ನಂಜೇಶನ ರಾಘುವಾಂಕ ಚರಿತೆ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಥಾಸೂತ್ರ ರತ್ನಾಕರ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಕೋಳೂರು ಶಂಕರ ಕವಿಯ ಚೋರಬಸವ ಚಾರಿತ್ರ, ಸಿದ್ಧನಂಜೇಶನ ಗುರುರಾಜ ಚಾರಿತ್ರ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ, ಕೆಳದಿ ಕವಿಪರಮೇಶ್ವರಿ ಗಂಗಾದೇವಿಯ ಕೆಳದಿ ರಾಜ್ಯಾಭುದಯಂ, ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯ, ದೇವಚಂದ್ರನ ರಾಜಾವಳಿ ಕಥೆ, ನಂಜುಂಡ ಕವಿಯ ರಾಮನಾಥ ಚರಿತೆಗಳಂತ ಚಾರಿತ್ರಿಕ ಕಾವ್ಯ ಪರಂಪರೆಯೇ ಬೆಳೆದುಬಂದಿತು. ಹೀಗೆ ವ್ಯಕ್ತಿಯೊಬ್ಬನನ್ನು ಕುರಿತು ಐತಿಹ್ಯ, ವದಂತಿಗಳು ಕಾವ್ಯ ರೂಪ ಪಡೆದು ಚಾರಿತ್ರಿಕ ಕಾವ್ಯಗಳಾದಂತೆ ಸ್ಥಳವೊಂದನ್ನು ಕುರಿತು ಮಹಾತ್ಮೆಗಳು ಹುಟ್ಟಿಕೊಂಡವು.”[೧] ಮುಂದೆ ಚಾರಿತ್ರಿಕ ಮಹತ್ವ ಹೊಂದಿದ ಸ್ಥಳ ಮಹಾತ್ಮೆಗಳು ಜನಸಾಮಾನ್ಯರ ಆರಾಧನ ಕೇಂದ್ರಗಳಾಗಿ, ಭಕ್ತಿಯ ನೆಲವೀಡಾಗಿ, ಪುಣ್ಯಕ್ಷೇತ್ರಗಳಾಗಿ ಪ್ರಚಲಿತಕ್ಕೆ ಬಂದವು. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ವ್ಯಕ್ತಿಯಾಗಿ ಬದುಕಿ ತಮ್ಮ ನಡೆ-ನುಡಿಗಳಿಂದ ಸಮಾಜದ ಗೌರವಕ್ಕೆ ಪಾತ್ರರಾಗಿ ಮುಂದೆ ಜನರ ಮನಸ್ಸಿನಲ್ಲಿ ಪೂಜ್ಯರಾಗಿ ಉಳಿದುಕೊಂಡ ಅನೇಕ ವ್ಯಕ್ತಿಗಳ ಸುತ್ತ ಪವಾಡ, ದಂತಕಥೆಗಳು ಸೃಷ್ಟಿಯಾದವು. ಈ ಮಾತು ಅವರ ಜಾಗ್ರತ ಸ್ಥಳಗಳೆನಿಸುವ ಪುಣ್ಯ ಕ್ಷೇತ್ರಗಳಿಗೂ ಅನ್ವಯಿಸಿತು. ಪ್ರಸ್ತುತ ರೇವಣಸಿದ್ಧರನ್ನು ಕುರಿತು ಸಾಹಿತ್ಯ ಹುಟ್ಟಿಕೊಂಡಂತೆ ಸ್ಥಳ ಮಹಾತ್ಮೆಗಳು ಹುಟ್ಟಿಕೊಂಡವು. ಕರ್ನಾಟಕದ ಒಳಗೆ ಮತ್ತು ಹೊರಗೆ ಹತ್ತಾರು ಪುಣ್ಯಕ್ಷೇತ್ರಗಳಿಗೂ ಮತ್ತು ರೇವಣಸಿದ್ಧರಿಗೂ ಸಂಬಂಧಗಳಿರುವದನ್ನು ಪ್ರತಿಪಾದಿಸುತ್ತವೆ. ಅವುಗಳನ್ನು ಈ ನಮ್ಮ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದರಿಂದ ಪ್ರಸ್ತುತ ಸಂದರ್ಭದಲ್ಲಿ ಆ ಪುಣ್ಯಕ್ಷೇತ್ರದ ಪರಿಸರದಲ್ಲಿ ರೇವಣಸಿದ್ಧರ ಬಗೆಗೆ ಶ್ರೀಸಾಮಾನ್ಯರ ಭಕ್ತಿ, ಶ್ರದ್ಧೆ, ನಂಬಿಕೆ ಮುಂತಾದ ಸಾಂಸ್ಕೃತಿಕ ಅಂತ:ಸತ್ವವನ್ನು ಕಟ್ಟಿಕೊಡಲು ಸಾಧ್ಯವಿದೆ.

ನಾಡಿದ ಹೊರಗೆ ಮತ್ತು ಒಳಗೆ ಸಂಚರಿಸಿದ ರೇವಣಸಿದ್ಧರ ಕುರುಹುಗಳು “ಆಂಧ್ರಪ್ರದೇಶದ ಕೊಲ್ಲಿಪಾಕಿ, ಶ್ರೀಶೈಲಗಳಲ್ಲಿಯೂ, ಕರ್ನಾಟಕದಲ್ಲಿರುವ ಸೊನ್ನಲಿಗೆ, ಮಂಗಳವಾಡ, ಮಾಸನೂರು, ಸಿದ್ದನಕೆರೆ, ಇಂಗಳೇಶ್ವರ, ಶಿವಗಂಗೆ ರೇವಣಸಿದ್ದೇಶ್ವರ ಬೆಟ್ಟ, ರಂಭಾಪುರಿ, ಕಲ್ಯಾಣಗಳಲ್ಲಿಯೂ ತಮಿಳುನಾಡಿನ ಕಂಚಿ, ಮಹಾರಾಷ್ಟ್ರದ ರೇಣುಕಾಶ್ರಮ ರೇಣವಿ ಮತ್ತು ಸಿದ್ದಗಿರಿ ಹಾಗೂ ಲಂಕಾದ್ವೀಪದಲ್ಲಿಯೂ ಮೊದಲಾದ ಕಡೆಗಳಲ್ಲಿ ರೇಣುಕಾಚಾರ್ಯ ಅಥವಾ ರೇವಣಸಿದ್ದೇಶ್ವರ ಸ್ಮಾರಕ ಕ್ಷೇತ್ರಗಳಿವೆ. ಹಿಮಾಲದಲ್ಲಿ ‘ರೇವಣ ತಲಾದ್’ ಇದೆ.”[೨] ಇವುಗಳ ಪರಿಚಯವನ್ನು ಮಾಡಿಕೊಡುವುದರ ಮೂಲಕ ರೇವಣಸಿದ್ಧರಿಗೂ ಪುಣ್ಯಕ್ಷೇತ್ರಗಳಿಗೂ ಇರುವ ಸಂಬಂಧವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

## ೧. ಕೊಲ್ಲಿಪಾಕಿ

ಶ್ರೀ ರೇವಣಸಿದ್ಧರು ಕೊಲ್ಲಿಪಾಕಿಯಲ್ಲಿ ಜನಿಸಿರುವ ವಿಷಯವನ್ನು ಕವಿ ಹರಿಹರಾದಿಯಾಗಿ ಚನ್ನಬಸವ, ನಂಜನಗೂಡ ಶ್ರೀಕಂಠಶಾಸ್ತ್ರಿ ಹಾಗೂ ಕನ್ನಡ ಕವಿಗಳ ಕೆಲವು ಕೃತಿಗಳು ಪ್ರಾಸಂಗಿಕವಾಗಿ ಉಲ್ಲೇಖಿಸುತ್ತವೆ. ಅದರ ವರ್ಣನೆಯನ್ನು ಹರಿಹರ ವಿವರಿಸುವ ರೀತಿಯಿದು.

"ಎಂತೆಂದಡಂಬುಧಿಪರೀತ ವಸುಮತಿಯೊಳಗೆ
ಸಂತತು ರಂಜಿಪುದು ಶಿವಭಕ್ತಿ ತೊಳತೊಳಗೆ
ಕೊಲ್ಲಿಪಾಕಿಯೆನಿಪ್ಪ ಪೆಸರೆಸವ ಶಿವಪುರಂ
ಬಳ್ಳಿ ವರಿದೀಶ್ವರನ ಭಕ್ತಿ ಪರ್ವಿದ ಪುರಂ"[೩]

ಭೂಮಿಯಲ್ಲಿ ಸದಾ ರಂಜಿಸುವ ಕೊಲ್ಲಿಪಾಕಿಯಲ್ಲಿ ಭಕ್ತಿ ತೊಳೆ ತೊಳೆದು ಹೊಳೆಯುತ್ತಿತ್ತು. ಶಿವಪುರವೆಲ್ಲಾ ಭಕ್ತಿಯೆಂಬ ಬಳ್ಳಿ ಹಬ್ಬಿತ್ತೆಂಬುದನ್ನು ಹರಿಹರ ವರ್ಣಿಸುತ್ತಾನೆ. ಇಲ್ಲಿ ಜನಿಸಿದ ರೇವಣಸಿದ್ಧ ಅಲ್ಲಿಯ ಶಿವಲಿಂಗದಲ್ಲಿ ಐಕ್ಯವಾದುದನ್ನು ವರ್ಣಿಸುವಲ್ಲಿ

"ಗಗನದಲ್ಲಿ ನಡೆ ತಂದನಾ ಕೊಲ್ಲಿಪಾಕಕ್ಕೆ
ಬಗೆವರಘುವಂ ಕೆಡಿಪ ಪುಣ್ಯ ಸುಸ್ಥಾನಕ್ಕೆ
..........................................
..........................................
ಕೊಲ್ಲಿಪಾಕದ ಸೋಮನಾಥನೊಳ್ತೀವಿದಂ
ಶಿವಲಿಂಗದೊಳಗೆ ಪೊಕ್ಕಂ ಸಿದ್ಧರೇವಣಂ
ಶಿವನ ಸದ್ಭಕ್ತಿ ಪರ್ವಿದ ಸುಖದ ಕಾರಣಂ"[೪]

ಇದು ಪುಣ್ಯ ಸುಸ್ಥಾನವಾಗಿ, ಶಿವಪುರವಾಗಿ ಗೋಚರಿಸಿದೆ. ಈ ಪ್ರದೇಶವು ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ ಭುವನಗಿರಿ ತಾಲ್ಲೂಕಿಗೆ ಸೇರಿರುವ ಪ್ರದೇಶವಾಗಿದೆ. ರೇವಣಸಿದ್ಧರು ಹದಿನೆಂಟು ಜಾತಿಯ ಜನಕ್ಕೆ ಪೂಜ್ಯನೀಯರಾಗಿದ್ದರು ಅಲ್ಲದೆ ಹದಿನೆಂಟು ಜಾತಿಯವರಿಗೆ ಹದಿನೆಂಟು ಮಠಗಳನ್ನು ಸ್ಥಾಪಿಸಲ್ಪಟ್ಟಿದ್ದರು. ಜೊತೆಗೆ ಆಚಾರ್ಯರ ಮಠಗಳಿದ್ದು, ಶಾಸನೋಕ್ತ, ಕಾವ್ಯೋಕ್ತ ವರ್ಣನೆಯಿಂದ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿರುವುದು ತಿಳಿದುಬರುತ್ತದೆ. ಆ ಹಿಂದಿನ ವೈಭವದಿಂದ ಈಗ ವಂಚಿತವಾಗಿ ನಿರ್ಜನ ಪ್ರದೇಶವಾಗಿ ಬಿಕೋ ಎನ್ನುತ್ತಿದೆ ಕೊಲ್ಲಿಪಾಕಿ ಪುಣ್ಯಕ್ಷೇತ್ರ.

## ೨. ಮಂಗಳವಾಡ

ರೇವಣಸಿದ್ಧರು ಸಂಚರಿಸುತ್ತ ಸಿರಿ ಸಂಪತ್ತಿಗೆ ತವರಮನೆ ಎನಿಸಿರುವ ಮಂಗಳವಾಡಕ್ಕೆ ಬರುತ್ತಾರೆ. ಹರಿಹರನು ತನ್ನ ಕಾವ್ಯದಲ್ಲಿ ರೇವಣಸಿದ್ಧರು ಪುರ ಪ್ರವೇಶ ಮಾಡುವಾಗ ಮಂಗಳವಾಡದ ವರ್ಣನೆಯನ್ನು ಹೀಗೆ ನಿರೂಪಿಸುತ್ತಾನೆ.

"ವಿಪುಳಫಳಮಾದ ಮಂಗಳವಾಡದ ಭೂಮಿ
ಸೊಂಪು ಸಂಪದಂ"[೫]

ಆದ ಮಂಗಳವಾಡದಲ್ಲಿ ನಡೆಯುವ ಬಿಜ್ಜಳನ ಸಭೆಗೆ ರೇವಣಸಿದ್ಧರು ಆಗಮಿಸುವದನ್ನು ಹರಿಹರ ತನ್ನ ರಗಳೆಯಲ್ಲಿ

"ಅಂತಿರ್ದು ಮತ್ತೆ ಮಂಗಳವಾಡಮಂ ಪೊಕ್ಕು
ಸಂತತಂ ಬಿಜ್ಜಳನ ಸಭೆಯೊಳ್ಪನಂ ಮಿಕ್ಕು
ಪಾಣಿಪತಾರೆಯನಾಂತು ನಿಂದಿರ್ಪ ಸಮಯದೊಳು"[೬]

ಹೀಗೆ ಭಿಕ್ಷೆಗೆ ಬಂದಿರುವಾಗ ಬಿಜ್ಜಳ ಅರಸನು ಬಿಸಿ ಓಗರವನ್ನು ಹಾಕಿಸುತ್ತಾನೆ. ಮತ್ತೊಂದು ಸಂದರ್ಭವಾದ ಮಾಸನೂರಿನ ಸುರಗಿಗಾಗಿ ಭಕ್ತಳಾದ ಮಾಯಿದೇವಿಯ ಮಗಳು ಹನ್ನೆರಡು ಸಾವಿರ ಕನ್ನೆಯರು ಬಲಿಯಾಗುವಲ್ಲಿ ಒಬ್ಬಳಾಗಿದ್ದಳು. ಆಗ ಆ ಸಂದರ್ಭಕ್ಕನುಗುಣವಾಗಿ ಮಾಯಿದೇವಿಯು ಪ್ರಾರ್ಥಿಸಲು ಈ ಪ್ರದೇಶಕ್ಕೆ ರೇವಣಸಿದ್ಧರು ಬರುತ್ತಾರೆ. ಹಾಗೆಯೇ ರೇವಣ ಸಾಂಗತ್ಯದಲ್ಲೂ ಚೆನ್ನಬಸವ ಕವಿ ತನ್ನ ಕಾವ್ಯದಲ್ಲಿ ಮಂಗಳವಾಡ ಕುರಿತು

"ಕಾಶೀ ಸತಿಯ ಭಜಿಸುತಲಿರೆ ರೇವಂಣ
ದೇಶದೊಳಗೆ ಮತ್ತಿತ್ತ
ಮಾಸನೂರಿನ ಸುರಗಿಯನು ಮಂಗಳವಾಡ
ದೇಶಗೆಚರರರುಹಿದರು"[೭]

ಹಾಗೆಯೇ ಶ್ರೀಕಂಠಶಾಸ್ತ್ರಿಗಳ ರೇಣುಕವಿಜಯ ಪುರಾಣದಲ್ಲಿ ಮಂಗಳವಾಡದ ಚಿತ್ರವನ್ನು ಹೀಗೆ ಹೇಳುತ್ತಾನೆ.

"ಎಸೆವ ಮಂಗಳವೇಡೆಯೊಳಗಿ
ರ್ಪಸಿಯಯೊರ್ವಳ್ ಶುಭಗುಣಾವಳಿ
ಲಸಿತೆ ರೇವಣ ಪದ ಸಮರ್ಚನಮುದಿತೆ ಸುವಿನೀತೆ"[೮]

ಹೀಗೆ ಕಾವ್ಯಗಳಲ್ಲಿ ಮಂಗಳವಾಡವು ವರ್ಣಿತವಾಗಿದೆ. ಬಿಜ್ಜಳನು ಆಳಿದ ಪ್ರದೇಶವಾಗಿ ಶ್ರೀ

ರೇವಣಸಿದ್ಧರು ಹೆಚ್ಚಾಗಿ ವಾಸಿಸುವ ಕೇಂದ್ರಸ್ಥಳವಾಗಿತ್ತು. ಮಹಾರಾಷ್ಟ್ರದ ಸಾಂಗ್ಲಿಗೆ ಸೇರಿರುವ ಈ ಮಂಗಳವಾಡಕ್ಕೆ ಮಂಗಳವೇಡೆ ಎಂದೂ ಕರೆಯುತ್ತಾರೆ. ಹಾಗೂ ಬಿಜ್ಜಳನ ಮಗನಾದ ರಾಯ ಮುರಾರಿ ಸೋವಿದೇವನು (ಕ್ರಿ.ಶ. ೧೧೭೬ರಲ್ಲಿ) ಈ ಪ್ರದೇಶವನ್ನು ಆಳಿರುವುದಾಗಿ ತಿಳಿದುಬರುತ್ತದೆ. ಇಲ್ಲಿ ರೇವಣಸಿದ್ಧರ ದೇವಾಲಯವಿದೆ.

## ೩. ಮಾಸನೂರು

ರೇವಣಸಿದ್ದೇಶ್ವರರನ್ನು ಕಥಾನಾಯಕನನ್ನಾಗಿ ಚಿತ್ರಿಸಿದ ಕಾವ್ಯಗಳಲ್ಲಿ ಮಾಸನೂರಿನ ಪಾತ್ರ ವಿಶಿಷ್ಟವಾದದ್ದು. ಹರಿಹರ, ಚೆನ್ನಬಸವ ಹಾಗು ಶ್ರೀಕಂಠಶಾಸ್ತ್ರಿ ಕವಿಗಳು ಹೇಳುವ ಘಟನೆಗಳಲ್ಲಿ ಬಹು ಸಾಮ್ಯತೆ ಕಂಡುಬರುತ್ತದೆ. ಆದರೆ ಕವಿ ಮಲ್ಲಣ್ಣನ ರೇವಣಸಿದ್ದೇಶ್ವರ ಕಾವ್ಯದಲ್ಲಿ ಹೆಚ್ಚಾಗಿ ಊರುಗಳ ವಿಷಯದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಈ ಊರು ಹಾಗೂ ಮೇಲಿನ ಕಾವ್ಯಗಳಲ್ಲಿ ಕಂಡುಬರುವ ಪ್ರದೇಶಗಳು ಮಲ್ಲಣ್ಣ ಕವಿಯ ಕಾವ್ಯದಲ್ಲಿ ಕಾಣಸಿಗುವುದಿಲ್ಲ. ಹಾಗೆಯೇ ಈ ವಿಷಯದಲ್ಲಿ ಹಾಲುಮತ ಪುರಾಣವು ಹೊರತಾಗಿಲ್ಲ.

ಕವಿ ಹರಿಹರನು ಮಾಸನೂರಿನ ಸುರಗಿ ಪ್ರಸಂಗವನ್ನು ಹೀಗೆ ಚಿತ್ರಿಸುತ್ತಾನೆ.

"ನರಪ ಬಿಜ್ಜಳರಾಯನೋಲಗದೊಳೆಸೆದಿರ್ಪ
ಸಮಯದೊಳ್ಮಾತುಮಾತಿಂ ಮಾಸನೂರಲ್ಲಿ
ವಿಮಳ ನದಿಯೊಳಗೆ ತೋರ್ಪುದು ಸುರಗಿತಾನಲ್ಲಿ"[೯]

ಎಂದು ಓಲಗದಲ್ಲಿ ನಡೆದ ಮಾತಿನಿಂದ ಬಿಜ್ಜಳನಿಗೆ ಮಾಸನೂರಿನ ಮಡುವಿನಲ್ಲಿರಿಸಿದ ಖಡ್ಗವನ್ನು ಬಯಸಿ ಕುಟಿಲ ಖರ್ಪರ ಮಾತಿಗೆ ಮರುಳಾಗಿ ಹನ್ನೆರಡು ಸಾವಿರ ಕನ್ನೆಯರನ್ನು ಬಲಿ ಕೊಡುವದಕ್ಕೆ ಒಪ್ಪಿ ಆದೇಶ ನೀಡುತ್ತಾನೆ. ಅದರಂತೆ ಚೆನ್ನಬಸವ ಕವಿಯ ಸಾಂಗತ್ಯದಲ್ಲಿ

"ಮಾಸನೂರಿನ ಸುರಗಿಯನುತೆಗೆವೆರೆ
ಕೂಸಯಿರಾರು ಸಾವಿರದ
ದೇಶದೊಳುಗೆತಂ ಸಲವೊಂದು ಕುಂದಲು
ಈ ಶಿಶು ಪಿಡಿದೆವೆಂದೆನುತ"[೧೦]

ಹೀಗೆ ಹನ್ನೆರಡು ಸಾವಿರಕ್ಕೆ ಒಬ್ಬ ಕನ್ನೆ ಕಡಿಮೆಯಾಗಲು ಮಾಯಿದೇವಿಯ ಮಗಳನ್ನು ಕರೆತರುವರು. ಮುಂದೆ ರೇವಣರನ್ನು ಪ್ರಾರ್ಥಿಸಲು ರೇವಣಸಿದ್ಧರು ಆ ಖಡ್ಗವನ್ನು ಬಿಜ್ಜಳನಿಗೆ ಕೊಡಲು ಮುಂದಾದಾಗ ಅದರ ಅರ್ಭಟದ ಭೀಕರತೆಯನ್ನು ಕಂಡು ಹೆದರಿದ ಬಿಜ್ಜಳ ನಿರಾಕರಿಸುವನು. ಹೀಗೆ ರೇಣುಕವಿಜಯ ಪುರಾಣದಲ್ಲಿಯೂ ಈ ಪ್ರಸಂಗ ವರ್ಣಿತವಾಗಿದೆ.

ಈ ಪ್ರದೇಶವು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಪಂಡರಾಪುರ ತಾಲ್ಲೂಕಿನಲ್ಲಿದೆ. ಇದು ಭೀಮಾನದಿಯ ದಂಡೆಗೆ ರೇವಣಸಿದ್ಧರ ದೇವಸ್ಥಾನವಿದೆ. ಸ್ವಲ್ಪ ಹತ್ತಿರದಲ್ಲೇ ಇರುವ ಮಲ್ಲಿಕಾರ್ಜುನ ದೇವಾಲಯವು ಶಿಲ್ಪಕಲೆಯಿಂದ ಕೂಡಿದ್ದಾಗಿದೆ. ಗೊರವರು ಈ ದೇವಸ್ಥಾನದ ಅರ್ಚಕರಾಗಿದ್ದಾರೆ. ಮಾಸನೂರು ಊರಿನ ನಿಷ್ಪತ್ತಿಯು ಕೆಲವು ಪ್ರಾದೇಶಿಕ ಐತಿಹ್ಯ ಹಾಗು ನಂಬಿಕೆಗಳ ಪ್ರಕಾರ ಮಾಂಸ > ಮಾಸ > ಮಾಸನೂರು ಎಂದಾಗಿರುವುದಾಗಿ ಜನವದಂತಿಗಳಿವೆ.

ಮಾಸನೂರು ಎಂಬ ಹೆಸರು ಬರಲು ಎರಡು ಕಾರಣಗಳನ್ನು ಅಲ್ಲಿಯ ದೇವಸ್ಥಾನದಲ್ಲಿ ವಾಸವಾಗಿರುವ ೭೫-೮೦ ವರ್ಷದ ವಯೋವೃದ್ಧರಾದ ವಿಠಲ ಮಹಾರಾಜ ಎಂಬುವವರು ಹೀಗೆ ಹೇಳುತ್ತಾರೆ : '೧೯೭೧ರ ವರೆಗೆ ದೊಡ್ಡ ದೊಡ್ಡ ಮೀನುಗಳು' ಈ ನದಿಯಲ್ಲಿ ವಾಸವಾಗಿದ್ದವು ಅವುಗಳಿಗೆ ತಾವು ಸೇರಿದಂತೆ ಭಕ್ತಾದಿಗಳು ಬೃಹದಾಕಾರವಾಗಿರುವ ಮೀನುಗಳಿಗೆ ಪ್ರತಿದಿನ ಎರಡು ಚೀಲ ರೊಟ್ಟಿಗಳನ್ನು ಹಾಕುತ್ತಿದ್ದರಂತೆ ಒಮ್ಮೆ ೨-೩ ವರ್ಷದ ಹೆಣ್ಣು ಮಗುವೊಂದು ನೀರಿನ ಮಡುವಿನಲ್ಲಿ ಬಿದ್ದಾಗ ಯಾರೂ ನೋಡಿರಲಿಲ್ಲ, ಆ ನದಿಯಲ್ಲಿಯ ಮಿನುಗಳು ತಮ್ಮ ಬೆನ್ನಿನ ಮೇಲೆ ಹೊತ್ತು ತಂದು ಆ ಮಗುವನ್ನು ದಂಡೆಗೆ ಹಾಕಿದವು ಎಂದು ತಮ್ಮ ಎದುರಲ್ಲೆ ನಡೆದ ಘಟನೆಯೆಂದು ಹೇಳುತ್ತಾರೆ. ಆದರೆ ೧೯೭೨ ರಿಂದ ಈಚೆಗೆ ಮೀನುಗಳು ಕಾಣಲಿಲ್ಲ. ಅಲ್ಲದೆ ಮರಾಠಿಯಲ್ಲಿ ಮೀನಿಗೆ 'ಮಾಸಿ' ಎಂದು ಕರೆಯುತ್ತಾರೆ. ಮಾಸಿಗಳಿದ್ದ ಊರು ಮಾಸನೂರು ಎಂದು ಕರೆಸಿಕೊಂಡಿದೆ.

ಮತ್ತೊಂದು ಹೇಳಿಕೆ ಪ್ರಕಾರ ಈ ಊರಿಗೆ ಈ ಹೆಸರು ಬರಲು ಔರಂಗಜೇಬನ ಖಿಲವು ಅಲ್ಲೇ ಸಮೀಪವಿರುವುದು. ಆತನ ಮಗಳಾದ ಬೇಗಂ ಪ್ರತಿದಿನ ರೇವಣಸಿದ್ದೇಶ್ವರ ದೇವಸ್ಥಾನಕ್ಕೆ ಪೂಜೆಗಾಗಿ ಹೂವುಗಳನ್ನು ತಟ್ಟೆಯಲ್ಲಿ ಮುಚ್ಚಿಕೊಂಡು ಬರುತ್ತಿರುವಾಗ ಒಂದು ದಿನ ಔರಂಗಜೇಬನು ಮಗಳ ತಟ್ಟೆಯಲ್ಲಿ ಆಕೆಗೆ ತಿಳಿಯದಂತೆ ಆಕಳ ಮಾಂಸವನ್ನು ಮುಚ್ಚಿ ಕಳುಹಿಸುತ್ತಾನೆ. ಆದರೆ ಆ ಮಾಂಸ ಗುಡಿಯಲ್ಲಿ ಹೂವಾಗಿರುತ್ತದೆ. ಮುಂದೆ ಔರಂಗಜೇಬನು ರೇವಣಸಿದ್ಧರ ಭಕ್ತನಾದನು ಎನ್ನುವ ವಿಚಾರಗಳನ್ನು ಹೇಳುತ್ತಾರೆ. ಈ ದೇವಸ್ಥಾನಕ್ಕೆ ಸರಕಾರವು ವರ್ಷಕ್ಕೆ ೪೮೦ ರೂಪಾಯಿ ಮಾತ್ರ ಪೂಜೆಗಾಗಿ ಹಣ ಸಲ್ಲಿಸುತ್ತದೆ. ಮಹಾರಾಷ್ಟ್ರ ಸರಕಾರ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದೆ.

## ೪. ಸೊನ್ನಲಿಗೆ

ಸೊನ್ನಲಿಗೆ ಸಿದ್ಧರಾಮನ ಜನ್ಮಸ್ಥಳವಾಗಿ, ಲಿಂಗದವೀಡಾಗಿ ಭಕ್ತಿಯ ಪರಾಕಾಷ್ಠೆಗೆ ಪ್ರತೀಕವಾಗಿದೆ. ಹರಿಹರನ ರೇವಣಸಿದ್ದೇಶ್ವರ ರಗಳೆಯಲ್ಲಿ, ಚತುರ್ಮುಖ ಬೊಮ್ಮರಸ, ಚೆನ್ನಬಸವ, ಶ್ರೀಕಂಠಶಾಸ್ತ್ರಿಗಳ ಕಾವ್ಯಗಳಲ್ಲಿ ಈ ಊರಿನ ಪ್ರಸ್ತಾವನೆ ತುಂಬಾ ವೈಭವಪೂರ್ಣವಾಗಿ ಚಿತ್ರಿತವಾಗಿದೆ.

ಹರಿಹರನ ರಗಳೆಯಲ್ಲಿ

“ಸಂದ ಸೊನ್ನಲಿಗೆಯಿಂದೊಲಿದು ಚಾಮದೇವಿ
ಮುಂದೆ ಮೈಯಿಕ್ಕುತಂ ಬಂದು ಗುರುಪದಭಾವಿ
ತನ್ನ ಗುರುವಂ ಕಂಡು ಚೆನ್ನ ಗುರುವಂ ಕಂಡು
..............................................
..............................................
ಎನೆ ಕೇಳ ಮಗಳೆ ಶಿವಲಿಂಗವಾದಪವಿಲ್ಲಿ
ಘನ ಮಹಿಮೆಯುಳ್ಳ ಶಿವಭೋಗವಾದಪವಿಲ್ಲಿ
ಇಲ್ಲಿ ಮೊರಡಿಯ ಮುದ್ದುಗೌಡನರ್ಧಾಂಗಿಯೊಳು
ಸಲ್ಲಲಿತ ಸುಗ್ಗವ್ವೆಯೆಂಬ ಕಾರಣಿಕೆಯೊಳು
ಕಾರಣಿಕ ಸಿದ್ದನುದಯಿಸುವನೊರ್ವ ಕೇಳ”[೧೧]

ಎಂದು ಸಿದ್ಧರಾಮನ ಜನನವನ್ನು ಶ್ರೀ ರೇವಣಸಿದ್ಧರು ಚಾಮಲದೇವಿಗೆ ತಿಳಿಸಿ ಮುಂದೆ ಪ್ರಯಾಣಿಸುತ್ತಾರೆ. ಹಾಗೆಯೇ ರೇವಣ ಸಾಂಗತ್ಯದಲ್ಲಿ, ರೇವಣಸಿದ್ದೇಶ್ವರ ಪುರಾಣದಲ್ಲಿ ಸೊನ್ನಲಿಗೆಯ ಪ್ರಸ್ತಾಪವನ್ನು ಕಾಣಬಹುದು. ಇಂದು ಈ ಪ್ರದೇಶವು ಸೊಲ್ಲಾಪುರ ಎನಿಸಿಕೊಂಡು ಮಹಾರಾಷ್ಟ್ರಕ್ಕೆ ಸೇರಲ್ಪಟ್ಟಿದೆ. ಈ ಊರಿನಲ್ಲಿ ಕಪಿಲೆ ಮಲ್ಲಿಕಾರ್ಜುನ ಹಾಗೂ ಸಿದ್ಧರಾಮನ ದೇವಸ್ಥಾನಗಳಿರುತ್ತವೆ. ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ವಿಶಿಷ್ಟವಾಗಿ ಆರು ಲಿಂಗಗಳು ಒಂದೇ ಪಾಣಿಪಟದಲ್ಲಿದ್ದು, ಭೂಮಿಯ ಕೆಳಗೆ ೫ ಅಡಿ ತಗ್ಗಿನಲ್ಲಿದೆ. ಆವರಣ ವಿಶಾಲವಾಗಿದ್ದು, ರಮಣೀಯವಾಗಿದೆ. ದೇವಸ್ಥಾನದ ಎದುರುಗಡೆ ರೇವಣಸಿದ್ಧನ ಕೆರೆ ಕಾಣಿಸುತ್ತದೆ. ಆದರೆ ಇಂದು ಆ ಕೆರೆಯು ಕಮಲಗಳಿಂದ ಕೂಡಿರುವುದರಿಂದ ‘ಕಮಲತಲಾಬ’ ಎಂದು ಕರೆಯುತ್ತಾರೆ. ಈ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಡುವಿನ ಸೋಮವಾರದಂದು ಜಾತ್ರೆ ಮಹೋತ್ಸವ ನಡೆಯುತ್ತದೆ.

### ೫. ಕೊಲ್ಲಾಪುರ

ಶ್ರೀ ರೇವಣಸಿದ್ಧರು ಗೋರಕ್ಷ ಸಿದ್ಧನ ಗರ್ವವನ್ನು ಮುರಿಯುವದಕ್ಕಾಗಿ ಮಂಗಳವಾಡದಿಂದ ಕೊಲ್ಲಾಪುರಕ್ಕೆ ಪ್ರಯಾಣಿಸುತ್ತಾರೆ. ಗೋರಕ್ಷನ ಮನೆಗೆ ಬಂದು ಬಾಗಿಲೊಳಗೆ ಬರುವ ಚಿತ್ರವನ್ನು ಹರಿಹರನು ಹೀಗೆ ಚಿತ್ರಿಸುತ್ತಾನೆ.

“ಬಂದಲ್ಲಿ ಪಾಣಿಪಾತ್ರೆಯೆನೊಪ್ಪದಿಂ ಬೇಡೆ
ಅಂದು ಗೋರಖನಾಥನಲ್ಲಿ ಕಟಕಿಯನಾಡೆ
ದೇವಶಿವಸಿದ್ಧನೀತಂ ಭೀತಿಯಾದವುದು
ಭಾವಿಸುವಡೀ ನಿಲವು ದನುಜ ಮನುಜರ್ಗರಿದು” [೧೨]

ಎಂದು ಹಿರಿಯ ಲಕ್ಕಾದೇವಿಯು ತನ್ನ ಪತಿಯಾದ ಗೋರಕ್ಷನಿಗೆ ಭೀತಿಯಿಂದ ನುಡಿಯಲು, ಕಿರಿಯ ಲಕ್ಕಾದೇವಿ ಕಠಾರಿಯನ್ನು ರೇವಣಸಿದ್ಧನ ಪಾಣಿಪಾತ್ರೆಗೆ ಹಾಕುತ್ತಾಳೆ. ಆಗ ಬಿಸುಗಣ್ಣಿನಿಂದ ರೇವಣಸಿದ್ಧರು ನೋಡಲು ಲೋಹವು ಕರಗಿ, ಸ್ವೀಕರಿಸಲು ಕಠಾರಿಯು ಗೋರಕ್ಷನ ಹೊಟ್ಟೆಯಲ್ಲಿ ಮೂಡುತ್ತದೆ. ನಂತರ ಹಿರಿಯ ಲಕ್ಕಿದೇವಿ ಮಹಾಲಕ್ಷ್ಮಿಯ ಕೃಪೆ ಪಡೆದು ಸಿದ್ಧರೇವಣನನ್ನು ಬೇಡಲು, ಲೋಹರಸವನ್ನು ಸಿದ್ಧರೇವಣನು ಉಗಳಿದಾಗ ಕಠಾರಿಯು ಕಳಚಿ ಬೀಳುತ್ತದೆ. ನಂತರ ಗೋರಕ್ಷನಿಗೆ ಅನುಗ್ರಹಿಸಿ ತನ್ನ ಪ್ರಯಾಣ ಮುಂದುವರಿಸುತ್ತಾನೆ.

ಶ್ರೀಕಂಠಶಾಸ್ತ್ರಿಯವರು ರೇಣುಕ ವಿಜಯ ಪುರಾಣದಲ್ಲಿ ಕೊಲ್ಲಾಪುರದ ವರ್ಣನೆಯನ್ನು ಹೀಗೆ ಚಿತ್ರಿಸುತ್ತಾರೆ.

"ಧನಕನಕ ನವರತ್ನ ವರವಾ
ಹನ ವಿಭೂಷಣ ವಸನಮತಿಶಯ
ಮೆನೆ ವಿರಾಜಿಸಲಬ್ಬಿನಂದನೆಗಿಂಬು ತಾನೆನಸಿ
ಅನುಪಮದ ಸೌಭಾಗ್ಯಕೌಗರ
ಮೆನೆಸಿ ಭೋಗವಿಲಾಸಗಳು ಮನೆ
ಮನೆಯೊಳುಂ ಮೆರೆದಿರಲು ಸೊಗಯಿಪ
ಪುರವನೇವೊರೆವೆ" ೧೩

ಧನಕನಕ, ನವರತ್ನಗಳಿಂದ ಭೋಗವಿಲಾಸಗಳ ಜೊತೆ ಜೊತೆಗೆ ಗೋರಕ್ಷನು ಪೌರರ ಸಿರಿಯನ್ನೆಲ್ಲಾ ಸೂರೆ ಮಾಡಿದ ಈ ಖಳನ ಶಿಷ್ಯರು ಕುಟಿಲಸಿದ್ಧರು ಕೆಲವರು ಮಾಯಾ ಬಲದಿಂದ ಹುಲಿಗಳ ಮೇಲೆ ಕುಳಿತು ಸಂಚರಿಸುತ್ತಿದ್ದರು ಮತ್ತು ಸಿಂಹಗಳನ್ನು ಬಸವಳಿಸಿ ಗೋಳಾಡಿಸಿ ವ್ಯವಸಾಯ ಮಾಡುತ್ತ ಬಾಳುತ್ತಿದ್ದರು. ಇಂಥವರ ಸೊಕ್ಕನು ಮುರಿಯುವದಕ್ಕಾಗಿ ಕೊಲ್ಲಾಪುರಕ್ಕೆ ಬಂದು ಗೊರಕ್ಷನ ಸೊಕ್ಕನ್ನಡಗಿಸುತ್ತಾನೆ. ನಂತರ ಮಾಯೆಯ ಗರ್ವಭಂಗ ಮಾಡಿ, ಗೋರಕ್ಷನಿಗೆ ಅನುಗ್ರಹಿಸಿ ತನ್ನ ಪ್ರಯಾಣ ಮುಂದುವರಿಸುತ್ತಾನೆ. ಈ ಪ್ರದೇಶದಲ್ಲಿ ಮಹಾಲಕ್ಷ್ಮಿಯ ದೇವಸ್ಥಾನವು ತುಂಬಾ ಪ್ರಸಿದ್ಧಿಯನ್ನು ಹೊಂದಿರುತ್ತದೆ. ಅಲ್ಲದೆ, ಬೀದಿಯ ಪಕ್ಕಕ್ಕೆ ಗೋರಕ್ಷನ ಚಿಕ್ಕ ಗುಡಿ (ಸಮಾಧಿಯು) ನಿರ್ಮಾಣವಾಗಿದೆ.

**೬. ಕಂಚಿ**

ರೇವಣಸಿದ್ಧರು ಚೋಳದೇಶಕ್ಕೆ ಬರುತ್ತಾರೆ. ನಿರ್ಲೆಪಚಾರಿತ್ರದ ಈತನು ತನ್ನ ಅರಿತವರ ಕತ್ತಲೆಯನ್ನು ಓಡಿಸುತ್ತ ದ್ರವಿಡ ದೇಶದದಲ್ಲಿಯ ಶಿವಪುರಗಳ ನೋಡುತ್ತ ಶಿವನಂತೆ ಹೊಳೆಯುತ್ತ ಬರುವ ರೇವಣಸಿದ್ಧರು ಮಾಡುವ ಪೂಜೆಯನ್ನು

"ದೇವಲೋಕದ ಕರಿಯ ಮಲ್ಲಿಗೆಯ ಹೂವಿಂದ
ಆವಗಂ ನಾಗಲೋಕದ ಕುಸುಮ ಕುಲದಿಂದ
ಏಕಾಮ್ರನಾಥನಂ ನಲ್ಮೆಯಿಂ ಪೂಜಿಸುತೆ"[೧೪]

ಎಂದು ವರ್ಣಿಸುತ್ತ ಕವಿ ಹರಿಹರನು ಕಂಚಿಯ ವಿಷ್ಣು ಪ್ರತಿಮೆ ಅಲ್ಲಾಡಲು ಪಿಣ್ಯಾಂಕನಿಂದ ಮಾತ್ರ ನಿಲ್ಲಿಸಲು ಸಾಧ್ಯವೆಂದು ಚೋಳ ಅರಸನಿಗೆ ಏಕಾಮ್ರನಾಥನು ಕನಸಿನಲ್ಲಿ ಹೇಳುತ್ತಾನೆ. ನಂತರ ರೇವಣಸಿದ್ಧರನ್ನು ಕರೆಯಿಸಿ ಪ್ರತಿಮೆ ಅಲ್ಲಾಡದಂತೆ ನಿಲ್ಲಿಸಲು ಕೇಳಿಕೊಳ್ಳುತ್ತಾನೆ. ಚೋಳ ಅರಸರ ಕೋರಿಕೆಯನ್ನು ಈಡೇರಿದ ಈ ಘಟನೆಯು ಅರಳಾಳ್ ಪೆರುಮಾಳ ಎಂದು ಹೆಸರು ಪಡೆದನು. ಮೇಲಿನ ಘಟನೆಯು ರೇವಣ ಸಾಂಗತ್ಯದಲ್ಲಿ ಕಂಡುಬರುತ್ತದೆ. ಆದರೆ ರೇಣುಕ ವಿಜಯ ಪುರಾಣದಲ್ಲಿ ಮೇಲಿನ ಘಟನೆ ಪ್ರಸ್ತಾಪವಿರದೆ, ಚೋಳಭೂಪಾಲನು ರೇವಣಸಿದ್ಧರ ಅನುಗ್ರಹದಿಂದ ಗಂಡುಮಗುವನ್ನು ಪಡೆದು ಆಶೀರ್ವಾದವನ್ನು ಪಡೆಯುತ್ತಾನೆ.

ಈ ಪ್ರದೇಶವು ತಮಿಳುನಾಡಿನಲ್ಲಿ ಕಾಂಚಿಪುರವೆಂದು ಪ್ರಸಿದ್ಧಿಯಾಗಿದೆ. ಇಲ್ಲಿ ವಿಷ್ಣುಕಂಚಿ, ಶಿವಕಂಚಿ ಎಂಬುದಾಗಿ ಎರಡು ಸ್ಥಳಗಳಿಗೆ ಭಕ್ತಾದಿಗಳು ಯಾವಾಗಲೂ ದರ್ಶನಕ್ಕಾಗಿ ಬರುತ್ತಿರುತ್ತಾರೆ. ಶಿವಕಂಚಿಯೇ ಕಾವ್ಯಗಳಲ್ಲಿ ಕಂಡುಬರುವ ಏಕಾಮ್ರದೇವಸ್ಥಾನವೆಂದು ತೋರುತ್ತದೆ. ಈ ದೇವಸ್ಥಾನದ ಆವರಣದಲ್ಲಿ ಒಂದು ಮಾವಿನ ಮರದ ಕೆಳಗೆ ಈಶ್ವರನಿಗಾಗಿ ಕಾಮಾಕ್ಷಿಯು ಒಂಟಿಕಾಲಿನಿಂದ ನಿಂತು ತಪಸ್ಸು ಮಾಡುತ್ತಿರುವ ಮೂರ್ತಿಯಿದೆ. ಏಕ + ಅಂಬರ + ಈಶ್ವರ = ಏಕಾಂಬರೇಶ್ವರವೆಂದು ಇದರ ಸ್ಥಳನಾಮ ನಿಷ್ಪತ್ತಿಯನ್ನು ಹೇಳುತ್ತಾರೆ. ಕಾಮಾಕ್ಷಿಯ ಈ ಕಠಿಣವಾದ ತಪಸ್ಸಿಗೆ ಮೆಚ್ಚಿ ಶಿವನು ಒಲಿದು ವಿವಾಹವಾದನೆಂಬ ನಂಬಿಕೆಗಳು ಪ್ರಚಲಿತವಾಗಿವೆ. ವಿಶೇಷವಾಗಿ ಮಾವಿನಮರದಲ್ಲಿ ಸಿಹಿ, ಕಹಿ, ಹುಳಿ, ಒಗರು, ನಾಲ್ಕು ವಿಧದ ರುಚಿಯನ್ನು ಹೊಂದಿರುವ ಈ ಮರವು ಸುಮಾರು ವರ್ಷಗಳಿಂದ ಹಣ್ಣು, ಹೂವು, ಕಾಯಿಗಳಿಂದ, ಹಸುರಿನಿಂದ ಸಮೃದ್ಧಿಯಾಗಿದೆ ಎಂದು ಅಲ್ಲಿಯ ಹಿರಿಯರು ತಿಳಿಸುತ್ತಾರೆ. ದೊಡ್ಡ ದೊಡ್ಡ ಗಾತ್ರದ ನಾಲ್ಕು ಕೊಂಬೆಗಳಿದ್ದು, ಆ ಮರದ ಕೆಳಗೆ ಶಿವ ಪಾರ್ವತಿಯರ ಮೂರ್ತಿಗಳು ಪ್ರತಿಷ್ಠಾಪಿಸಲ್ಪಟ್ಟಿವೆ.

**ತಂಜಾವೂರು-ಕುಂಭಕೋಣ**

ರೇವಣಸಿದ್ಧರು ಅನೇಕ ರಾಜಪುತ್ರಿಯನ್ನು ವಿವಾಹವಾಗಿ ಚೋಳದೇಶಕ್ಕೆ ಹೊರಟ ಸಂಗತಿಯನ್ನು ಹರಿಹರನ ರಗಳೆಯಲ್ಲಿ ಹೀಗೆ ಹೇಳುತ್ತಾ "ಚೋಳಕುಮಾರಿಯಂ ವಿವಾಹವಾಗಿ ಚೋಳ ಮಹಾರನಿಂ ಪೊಡವಡಸಿಕೊಂಡು ....."[೧೫] ಹಾಗೆಯೇ ರೇವಣ ಸಾಂಗತ್ಯದಲ್ಲೂ ಅನೇಕ ರಾಜಕುಮಾರಿಯರನ್ನು ಮದುವೆಯಾಗಿರುವುದನ್ನು ತಿಳಿಸುತ್ತದೆ. ಚತುರ್ಮುಖ ಬೊಮ್ಮರಸನು ರೇವಣಸಿದ್ಧರು ಚೋಳ ರಾಜಕುಮಾರಿ ಸೌಂದರಿಯ ಜೊತೆ ತಂಜಾವೂರಿನಲ್ಲಿ ವಿವಾಹವಾಯಿತು ಎಂಬುದನ್ನು ಹೇಳುತ್ತಾರೆ.

ತಮಿಳುನಾಡಿನ ತಂಜಾವೂರ ಜಿಲ್ಲೆಯಲ್ಲಿ ಕುಂಭಕೋಣವಿದ್ದು, ಅಲ್ಲಿ ಸಾರಂಗ ಮಠವಿದ್ದು, ಆ ಮಠ ರೇವಣಸಿದ್ಧರ ಪೀಠಕ್ಕೆ ಸಂಬಂಧಿಸಿರುವುದಾಗಿದೆ ಎಂದು ಅಲ್ಲಿಯ ಜನರ ವದಂತಿ. ಈ ಕಾರಣದಿಂದ ಈ ಎರಡು ಪ್ರದೇಶಗಳು ರೇವಣಸಿದ್ಧೇಶ್ವರರ ಪುಣ್ಯಕ್ಷೇತ್ರಗಳೆಂದು ಹೆಸರು ಮಾಡಿವೆ.

**ಕಲ್ಯಾಣ**

ಕಲ್ಯಾಣದ ತೆಲ್ಲಿಗ ವೃತ್ತಿಯ ಕಲ್ಲಿಸೆಟ್ಟಿಯ ದಾರಿದ್ರ್ಯವನ್ನು ಹೋಗಲಾಡಿಸುವದಕ್ಕಾಗಿ ಬಂದ ರೇವಣಸಿದ್ಧರು

"ಕಲ್ಯಾಣದ ತೆಲ್ಲಿಗ ಕಲ್ಲಿಸೆಟ್ಟಿಯ ಗಾಣದ
ಕೊಟ್ಟಿಗೆಗೆ ಬಂದು, ಮುಗಿಲ ಮರೆಯ ಸೂರ್ಯನಂತೆ
ಮಾಸಿದ ಪುರುಷದಂತೆ .............
ಗಾಣಮಂ ತಿರುಗಿಸುತ್ತ ತೆರದಿಂ ಕೆಲವು ದಿನಮಿರೆ."[೧೬]

ಎನ್ನುವ ಉಲ್ಲೇಖದಂತೆ ರೇವಣಸಿದ್ಧರು ಸಿರಿ, ಸಂಪತ್ತು, ಕಣ್ಣನ್ನು ಕೊಟ್ಟು ಹೋಗುತ್ತಾನೆ. ಕಲ್ಯಾಣದ (ಮಂಗಳವಾಡ)ಲ್ಲಿ ಕೆರೆಯನ್ನು ಕಟ್ಟಿಸಲು ತನ್ನ ಎಲ್ಲಾ ಹೆಂಡತಿಯರ ಸಮೇತ ಮಣ್ಣು ತೆಗೆಯುವ ಕಾರ್ಯದಲ್ಲಿ ತೊಡಗಿರುವಾಗ, ಚೋಳ ರಾಜಕುಮಾರಿ "..... ಮೂರು ತಿಂಗಳ ಗರ್ಭದ ನೀರೆ ನಿಂದು, ದೇವ ದೇವಾ ಚೋಳರಾಜೇಂದ್ರನ ಬಸುರೊಳ ಬಂದು ದಿವ್ಯಜ್ಞಾನಿಗಳಪ್ಪ ನಿಮ್ಮಡಿಗಳರಸಿಯಾಗಿಯುಮಿಂತಪ್ಪ ....."[೧೭] ಎಂದು ಮಣ್ಣು ಎತ್ತುವದಕ್ಕೆ ನಿರಾಕರಿಸುತ್ತಾಳೆ. ಈ ಸನ್ನಿವೇಶ ರೇವಣ ಸಾಂಗತ್ಯದಲ್ಲೂ ಕಂಡುಬರುತ್ತದೆ. ಅದೇ ರೀತಿಯಾಗಿ ಕವಿಮಲ್ಲಣ್ಣನ ರೇವಣಸಿದ್ದೇಶ್ವರ ಕಾವ್ಯದಲ್ಲೂ ಉಲ್ಲೇಖವಾಗಿದೆ.

ಈ ಪ್ರದೇಶವು ಈಗ ಕರ್ನಾಟಕದ ಬೀದರ ಜಿಲ್ಲೆಯಲ್ಲಿ ಬಸವಕಲ್ಯಾಣವೆಂದು ಪ್ರಸಿದ್ಧಿಯಾಗಿರುವದು. ಇಲ್ಲಿ ಅನುಭವ ಮಂಟಪದ ಅಸ್ತಿತ್ವಕ್ಕೆ ಬರಲು ಇದಕ್ಕೆ ಪೂರ್ವಸಿದ್ಧತೆಯಂತೆ ಬಸವಪೂರ್ವಯುಗದ ಶರಣರು ಚಂಗೆಣಗಿಲ ಮಂಟಪವನ್ನು ಕಲ್ಯಾಣದಲ್ಲಿ ಸ್ಥಾಪಿತವಾಗಿದ್ದರಿಂದಲೇ ಅನುಭವ ಮಂಟಪದ ವ್ಯಾಪಕವಾಗಿ ಬೆಳೆಯಲು ಕಾರಣವಾಗಿದೆ ಎಂಬ ಅಭಿಪ್ರಾಯವೂ ಇದೆ. "ಶ್ರೀ ರೇವಣಸಿದ್ಧರಿಗೆ ಇಲ್ಲಿನ ಚಂಗೆಣಗಿಲ ಮಂಟಪದಲ್ಲಿ ನಿರ್ಲಜ್ಜ ಶಾಂತಯ್ಯನವರಿಂದ ಗುರುಕರುಣೆಯಾಯಿತೆಂದು ರುದ್ರಮುನಿಯ ಪಿಂಡವನ್ನು ಭೂಗರ್ಭದಲ್ಲಿ ಇಟ್ಟುದು ಈ ತ್ರಿಪುರಾಂತಕ ಕೆರೆಯ ಏರಿಯಲ್ಲಿ ಮುಂದೆ ಸಲುಹಿದುದು ಇಲ್ಲಿನ ಚಂಗೆಣಗಿಲ ಮಂಟಪ"[೧೮]ದಲ್ಲಿ ಎಂದು ಚೆನ್ನಮಲ್ಲಿಕಾರ್ಜುನರು ಹೇಳುತ್ತಾರೆ.

## ೭. ಮಾಸೂರು

ರೇವಣಸಿದ್ಧರು ದಕ್ಷಿಣ ದೇಶದ ಪ್ರಯಾಣದ ನಂತರ ಮಾಸೂರಿಗೆ ಬರುತ್ತಾರೆ. ಹರಿಹರ, ಚೆನ್ನಬಸವ, ಶ್ರೀಕಂಠಶಾಸ್ತ್ರಿ ಕವಿಗಳು ಹೇಳುವ ಮಾಸೂರು ಘಟನೆಯಲ್ಲಿ ಬಹು ಸಾಮ್ಯತೆ ಕಂಡುಬರುತ್ತದೆ. ತಗಣಿಗಳೆರಡು ಮಾಸೂರಿನ ಹೊರಗಿದ್ದ ಶಿವಾಲಯದ ಮುಂದಿನ ವೃಕ್ಷದ ಪೊಟರೆಯಲ್ಲಿರುತ್ತಿದ್ದವು. ಈ ರಾಕ್ಷಸ ಮಿಥುನಗಳಿಂದ ಪ್ರಾಣವಧೆಯನ್ನು ನಿಲ್ಲಿಸುವದಕ್ಕಾಗಿ ತ್ರಿಕಾಲಜ್ಞಾನಿಯಾದ ರೇವಣಸಿದ್ಧರು ನೋಡಲು "..... ಸಿದ್ಧರೇವಣ ತಂದರೆ ಭೋಂಕನೆ ಕಂಡು ನೊಸಲ ಕಣ್ಗಚ್ಚಿಗೆ ಬೆಸನೀಯ ಬಿಸುಗಣ್ಣ ಬೆಂಕಿಯಂ ಮರಗಳೆರಡುಂ ಕರಿಮುರಿಯಾಗಿ ..... ಬೆಂದು"[೧೯] ಉಕ್ಕಿನ ಉಂಡಿಗಳಾಗಿ ಮಾರ್ಪಡುತ್ತವೆ. ಆಗ ರೇವಣಸಿದ್ಧರು ಮಾಸೂರಿನ ಕಮ್ಮಾರನ ಮೂಲಕ ಸುರಗಿಗಳನ್ನು ಮಾಡಿಸುತ್ತಾನೆ. ಈ ಮಾಸೂರು ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕಿಗೆ ಸೇರಿದೆ. ಕುಮದ್ವತಿ ನದಿಯ ಪಕ್ಕದಲ್ಲಿ ರೇವಣಸಿದ್ಧರ ಗುಡಿಯು ಕಂಡುಬರುತ್ತದೆ. ಹಾಗೂ ಸಿದ್ಧರಾಮರ ಗುಡಿ ಇರುವದು. ಸಮೀಪದಲ್ಲಿ ಅರಳಿಯ ಮರವಿರುವುದು ಮರ ತುಂಬಾ ಹಳೆಯದಾಗಿದ್ದರಿಂದ ಕೆಲವು ಭಾಗ ನಾಶವಾಗಿದೆ. ಮಾಸನೂರಿನ ೨-೩ ಮೈಲು ದೂರದಲ್ಲಿ ಮದಗದ ಕೆರೆ ಇದೆ. ಸುರಗಿಯನ್ನು ರೇವಣಸಿದ್ಧರು ಆ ಕೆರೆಯಲ್ಲಿ ಹೂತಿದ್ದರಿಂದ ಈ ಊರಿಗೆ ಸುರಗಿಹಳ್ಳಿ ಎಂಬ ಹೆಸರು ಬಂದಿರುವ ವದಂತಿಯನ್ನು ಹೇಳುತ್ತಾರೆ. ಅಲ್ಲದೆ ರಾಕ್ಷಸ ಮಿಥುನ ದಂಪತಿಗಳನ್ನು ಕಾವಲಿಯಲ್ಲಿ ಕಾಸಿದ್ದರಿಂದ ಜ್ಞಾಪಕಾರ್ಥವಾಗಿ ಕವಾಸಪುರ, ಕಾಸಿ ಬಡಿದು ಕಬ್ಬಿಣದ ಕಿಟ್ಟವು ಉದುರಿದ ಜ್ಞಾಪಕಾರ್ಥದ ಕಿಟ್ಟದ ಹಳ್ಳಿ ಎಂಬ ಗ್ರಾಮನಾಮಗಳು ಪ್ರಾಪ್ತವಾದದ್ದನ್ನು ಜನ ಇಂದಿಗೂ ಕಥೆ ಮಾಡಿ ಹೇಳುತ್ತಾರೆ. ಈ ಊರಿಗೆ ಮದಗಮಾಸೂರು ಎಂದು ಕರೆಯುತ್ತಾರೆ.

## ೮. ಹೂಲಿ

ಶ್ರೀ ರೇವಣಸಿದ್ಧರು ಕಾವ್ಯಗಳಲ್ಲಿ ಉಲ್ಲೇಖವಾದಂತೆ ಅಗಸ್ತ್ಯ ಮಹರ್ಷಿಗಳಲ್ಲಿಗೆ ಬಂದು ಶೈವೋಪದೇಶವನ್ನು ಮಾಡುತ್ತಾನೆ. ಆದರೆ ಈ ಪ್ರದೇಶವು ಮಲಯಾಚಲವೆಂದು ಜನರ ವದಂತಿ. ಈ ವಿಷಯವನ್ನು ಕುರಿತು ಅಗಸ್ತ್ಯರ ವಿಚಾರ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಅಗಸ್ತ್ಯರಿಗೆ ಜಡೆಮುನಿ ಎಂದು ಕರೆಯುತ್ತಾರೆ. ಇಲ್ಲಿ ಪಂಚಾಚಾರ್ಯರ ಮಠಗಳಿದ್ದು, ಪಂಚಲಿಂಗೇಶ್ವರ ದೇವಸ್ಥಾನವು ಬಹು ಕಲಾತ್ಮಕವಾಗಿ ಕಟ್ಟಲ್ಪಟ್ಟಿದೆ. ಈ ಪ್ರದೇಶದ ಮಹತ್ವವೇನೆಂದರೆ ಶ್ರೀಶೈಲದಲ್ಲಿ ಮೊಟ್ಟಮೊದಲು, ನಂತರ ಕೊಲ್ಲಿಪಾಕಿ, ಶಿವಗಂಗೆ, ಪಂಚಾಚಾರ್ಯರ ಮಠಗಳು ಸ್ಥಾಪಿತವಾಗಿರುವಂತೆ ನಾಲ್ಕನೆಯದಾಗಿ ಹೂಲಿಯಲ್ಲಿ ಪಂಚಾಚಾರ್ಯರ ಮಠಗಳು ಸಿಗುತ್ತವೆ. ಆದರೆ ಎಲ್ಲಾ ಮಠಗಳು ಜೀರ್ಣಸ್ಥಿತಿಯಲ್ಲಿದ್ದರೆ, ಇಂದು ವಿಶ್ವಾರಾಧ್ಯರ ಮಠವು ಬೆಳವಣಿಗೆ ಹಂತದಲ್ಲಿ ಕಾಣುತ್ತದೆ.

## ೯. ಮುನವಳ್ಳಿ

ಮುನವಳ್ಳಿಯಲ್ಲಿ ಕಲಾತ್ಮಕವಾಗಿ, ಬೃಹದಾಕಾರವಾಗಿ ಪಂಚಲಿಂಗೇಶ್ವರ ದೇವಸ್ಥಾನವು ಊರಿನ ದಕ್ಷಿಣದಲ್ಲಿ ಕಾಣಸಿಗುತ್ತದೆ. ಹತ್ತನೆಯ ಶತಮಾನದಲ್ಲಿ ಇದು ಜೈನರ ಬಸದಿಯಾಗಿದ್ದಿತ್ತು. ಹನ್ನೆರಡನೆಯ ಶತಮಾನದಲ್ಲಿ ಅನೇಕ ಋಷಿಮುನಿಗಳು ಈ ಪ್ರದೇಶದಲ್ಲಿ ವಾಸಿಸಿದ್ದು, ಮುನಿಗಳು ವಾಸವಾಗಿರುವ ಈ ಪ್ರದೇಶ ಮುನಿವಳ್ಳಿಯಾಗಿ ಹೆಸರು ಪಡೆದಿದೆ. ಪಂಚಲಿಂಗೇಶ್ವರ ದೇವಸ್ಥಾನದ ಗರ್ಭಗುಡಿಯಲ್ಲಿ ಐದು ಈಶ್ವರಗಳ ಹಿಂದೆ ಅಗಸ್ತ್ಯರ (ಜಡೆಮುನಿಯ) ಮೂರ್ತಿ ಇದೆ. ಅಲ್ಲದೆ ದೇವಸ್ಥಾನದ ಆವರಣದಲ್ಲಿಯೇ ಅಗಸ್ತ್ಯರ ಸಮಾಧಿಯ ಚಿಕ್ಕ ಗುಡಿ ಇದೆ. ಗುಡಿಯ ಮುಂಭಾಗದಲ್ಲಿ ಒಂದು ಶಿಲಾಶಾಸನವಿದೆ. ಅದು ಹಳಗನ್ನಡ ಹಾಗೂ ತೆಲುಗು ಮಿಶ್ರಿತವಾದ ಭಾಷೆಯಿಂದ ಕೂಡಿರುವದು. ಗುಡಿಯ ಸುತ್ತಲೂ ಬನಶಂಕರಿ, ಮೂರು ಲಿಂಗಗಳು, ಮಲ್ಲಿಕಾರ್ಜುನ, ಬೋರಮ್ಮ, ಎಲ್ಲಮ್ಮ, ಎಡೆಯೂರು ಸಿದ್ಧಲಿಂಗೇಶ್ವರರ ಅನುಯಾಯಿಗಳು ಮತ್ತು ಎರಡು ಸಮಾಧಿಗಳಿರುವದು ಎಂದು ಅಲ್ಲಿಯ ಜನರ ನಂಬಿಕೆ. ಮಹಾಶಿವರಾತ್ರಿಯಂದು ಇಲ್ಲಿ ಜಾತ್ರೆಯಾಗುತ್ತದೆ.

ಈ ಪ್ರದೇಶವು ಈಗ ಬಹು ಮಹತ್ವವನ್ನು ಪಡೆದಿರುವದು. ಊರಿನ ಕೆಲ ಹಿರಿಯರು ಟ್ರಸ್ಟ್ ಮಾಡಿ ಗುಡಿಯ ಜೀರ್ಣೋದ್ಧಾರ ಕೈಗೊಂಡಿದ್ದಾರೆ. ಅಂಥವರಲ್ಲಿ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರು, ಚೆನ್ನಪ್ಪ, ಪಂಚಪಣ್ಣ ಗೋಪಶೆಟ್ಟಿ, ಗಚ್ಚಿನ ಹಿರೇಮಠ, ಅಸೂಟಿ ಉಪಾಧ್ಯಾಯರು ಇವರ ಜೊತೆ ಇನ್ನು ಹಲವಾರು ವ್ಯಕ್ತಿಗಳ ಪರಿಶ್ರಮದಿಂದ ಪಂಚಲಿಂಗೇಶ್ವರ ದೇವಸ್ಥಾನವು ಸಾಂಸ್ಕೃತಿಕ ಕೇಂದ್ರವಾಗಿದೆ. ದಾಸೋಹ, ಶಿವಾನುಭವ ಗೋಷ್ಠಿಗಳು, ಮದುವೆ ಮುಂಜಿಗಳು ಸಾಂಗವಾಗಿ ನಡೆಯಲು ತುಂಬಾ ಅನುಕೂಲವಾಗಿದೆ.

## ೧೦. ಶ್ರೀಶೈಲ

ಶ್ರೀ ರೇವಣಸಿದ್ಧರು ಸಂಚರಿಸುತ್ತ ಶ್ರೀಶೈಲಕ್ಕೆ ಬರುವುದನ್ನು ಕವಿ ಚೆನ್ನಬಸವನು ಭೂಮಿಯ ಮೇಲಿರುವ ಜನರು ಮಾಡುವ ಪಾತಕಗಳನ್ನು ನಿವಾರಿಸುವುದಕ್ಕೋಸ್ಕರ ಶ್ರೀಶೈಲಕ್ಕೆ ಬರುತ್ತಾರೆ ಎಂದು ಈ ಪದ್ಯದ ಮೂಲಕ ಸಾರುತ್ತಾನೆ.

> "ಭೂತಳದೊಳುಗುಳ್ಳನರರು ಮಾಡಿದ ಘನ
> ಪಾತಕವನು ಹಿಂಗಿಸುತ
> ಪಾತಾಳಗಂಗೆ ನೋಡುತ್ತ ರೇವಣನು
> ಜ್ಯೋತಿಲಿಂಗವನು ಕಾಣುತಲಿ"[೨೦]

ಎನ್ನುವ ಚಿತ್ರ ನೀಡಿದರೆ ಶ್ರೀಕಂಠಶಾಸ್ತ್ರಿಗಳು ಶ್ರೀಶೈಲದ ಗಿರಿಗಳನ್ನು, ಗಿಳಿಗಳ ಸಂಕುಗಳನ್ನು, ಕಾಡು ಮೃಗಗಳನ್ನು ಪರಸ್ಪರ ಸ್ನೇಹದಿಂದ ಇರುವದನ್ನು ವರ್ಣಿಸುತ್ತಾನೆ.

"ತೊರೆದು ವೈರವ ಮೃಗ ಸಮೂಹವು
ಪರಮ ಮೈತ್ರಿಯಿನೊಪ್ಪುತಿರ್ದುದು
ಪರಿಪರಿಯ ಮೃಗಪಕ್ಷಿನಿಕರವು ತೊಳಗುತಿರ್ದುದು ತಾಂ
ಗುರುವರೇವಣನು ರುದ್ರಮುನಿಗಾ
ದರದೆ ತೋರುತಲಾಪ್ರದೇಶವ
ನೊರೆದ ನೊಲವಿಂ ಮಲ್ಲಿಕಾರ್ಜುನ ಮಹಿಮೆಯನು ನಲವಿಂ"[೨೧]

ಈ ಪ್ರದೇಶವು ಆಂಧ್ರಪ್ರದೇಶದಲ್ಲಿದ್ದು ಸಾರಂಗಪೀಠವು ರೇವಣಸಿದ್ಧರ ಪೀಠಕ್ಕೆ ಸೇರಿದುದಾಗಿದೆ. ಇಲ್ಲಿ ಮೊಟ್ಟಮೊದಲು ಆಚಾರ್ಯ ಪೀಠಗಳನ್ನು ಸ್ಥಾಪಿಸಿರುವುದಾಗಿ ತಿಳಿದುಬರುತ್ತದೆ. ಘಂಟಾಮಠದಲ್ಲಿ ರೇವಣನ ಕುರುಹು ಇರುವುದಾಗಿ, ವೀರಗೋತ್ರ ಹೊಂದಿರುವಂತೆ, ಗೋತ್ರಗಳ ಹೆಸರಿನ ಮೂರ್ತಿಗಳು ಅಂದರೆ ವೀರಭದ್ರ, ಭೃಂಗಿ, ಷಣ್ಮುಖ, ಬಸವ ವಿಗ್ರಹಗಳು ಆಯಾ ಆಚಾರ್ಯರ ಮಠಗಳ ಮುಂದೆ ಕಂಡುಬರುತ್ತವೆ.

೧೧. ಸಿರವಾಳ

ಕೊಲ್ಲಾಪುರದ ಕರಾಡದ ಶಿಲಾಹಾರವಂಶದ ರಾಜರ ಆಶ್ರಯದಲ್ಲಿನ ಪಸಾಮಿತನು ರೇವಣರಿಗೆ ದಾನವನ್ನು ಕೊಟ್ಟ ಸ್ಥಳವಾಗಿದೆ. ಈ ಪ್ರದೇಶದಲ್ಲಿ ರೇವಣರು ಕೆಲವು ಕಾಲ ವಾಸವಾಗಿದ್ದರು.

ಸಿರಿವಾಳ ಶಾಸನವು (೧೧೮೭) ರೇವಣಸಿದ್ಧರ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತ ಆ ವೇಳೆಗಾಗಲೆ ಸಿದ್ಧಪುರುಷರಾಗಿ ಸಂಚರಿಸುತ್ತಿದ್ದರು ಎಂಬುದು ಶಾಸನದಿಂದ ತಿಳಿದುಬರುತ್ತದೆ.

"ಶ್ರೀ ಮದಣ ಮಾದ್ಯಷ್ಟಗುಣಸಂ
....................................
.......ಶಾನ್ತಿಮಯ್ಯದೇವಂಗಳ ಪುತ್ರ ರೇವಣದೇವಯ್ಯಂಗಳ ಪ್ರಸಿದ್ಧತಿಕೆಯೆಂತೆವೆ
ಒರ್ಬ್ಬಳ ತಂಡುಳದಿಂ
ದುಮ್ಮಬರ್ಬ್ಬಿಶನ ರಾಯನಕಟಕಮಂ ತಣಪಿಪಿದನಾ ಸರ್ವಜ್ಞಮೂರ್ತ್ತಿಜಗದೊಳ
ಗೊರ್ಬ್ಬನೆ ಶಿವಸಿದ್ಧ ಚ
ಕ್ರಿ ರೇವಣದೇವಂ x ತೊರೆ ತುಂಬಿ ಬಂದಡರೆ ತಾ ಹರುಗೋಲಂ ತನ್ನಿ
ವೆಂನದಾಜ್ಞಾನಬಲದಿಂ ತೊಜೆ..............
.................................................."

ಬಿಜ್ಜಳನ ಗರ್ವಭಂಗ, ಬಿಜ್ಜಳನಿಗೆ ಮಾಸೂರು ಕೆರೆಯಲ್ಲಿ ಹೂಳಿದ ಕತ್ತಿಯನ್ನು ತೆಗೆದು ಕೊಡುವುದಕ್ಕಾಗಿ ಹೊಳೆದಾಟಿದ ವಿಷಯ, ನಂತರ ನಟೇಶ್ವರನ ದೇವಸ್ಥಾನದ ಲಿಂಗದ ಮುಂದೆ

ಕುಣಿದಾಗ ಲಿಂಗ ಬೆವರಿನ ಪ್ರಸಂಗವನ್ನು ಉಲ್ಲೇಖಿಸುತ್ತದೆ. ಈ ಶಾಸನವು ಗುಲಬರ್ಗಾ ಜಿಲ್ಲೆಯ ಶಹಪುರ ತಾಲ್ಲೂಕಿನ ಸಿರಿವಾಳ ಗ್ರಾಮದ ಸಿದ್ಧೇಶ್ವರ ದೇವಾಲಯದ ದಕ್ಷಿಣ ರಂಗಮಂಟಪದಲ್ಲಿದೆ. ಹೀಗಾಗಿ ಸಿರಿವಾಳ ಗ್ರಾಮಕ್ಕೆ ಇಂತಹ ಐತಿಹಾಸಿಕ ಶಾಸನವನ್ನು ಸಂರಕ್ಷಿಸಿದ ಕೀರ್ತಿ ಸಲ್ಲುವುದಲ್ಲದೆ ರೇವಣಸಿದ್ಧರ ಪುಣ್ಯಕ್ಷೇತ್ರ ಎಂಬ ಅಭಿದಾನವು ಸಲ್ಲುತ್ತದೆ.

### ೧೧. ಇಂಗಳೇಶ್ವರ

ಕೊಡೇಕಲ್ ಬಸವಣ್ಣನ ಮಗನಾದ ರಾಚಪ್ಪಯ್ಯನ ಪ್ರಭುಚರಿತೆಯಲ್ಲಿ ಇಂಗಳೇಶ್ವರದಲ್ಲಿ ಶ್ರೀ ರೇವಣಸಿದ್ಧರು ಇರುವ ಉಲ್ಲೇಖವೆನಿಸುತ್ತದೆ. ಪ್ರಭು ರೇವಣಸಿದ್ಧರನ್ನು "ಆರಲೋ ಪಾಷಂಡಿ ಸಿದ್ಧನೆಲ್ಲಿಹನು ಏಳುನೂರು ಕತ್ತೆಯ ಕಾಯುವ ಡೊಂಬ" ಎಂದು ಕರೆಯುತ್ತಾನೆ. ಈ ಕೃತಿಯಲ್ಲಿ ಪ್ರಭು ಮತ್ತು ರೇವಣರ ಪರಸ್ಪರವಾಗಿ ಸಂಭಾಷಣೆಗಳು ಕಂಡುಬರುತ್ತವೆ.

ಈ ಪ್ರದೇಶವು ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ಸಮೀಪದಲ್ಲಿದೆ. ಇದಕ್ಕೆ ತಿಂಗಳೇಶ್ವರ ಎಂದು ಕರೆದಿದ್ದಾರೆ. ರೇವಣಸಿದ್ಧರ ಭವ್ಯಮೂರ್ತಿಯು (ವಿಗ್ರಹ) ಇರುವುದು. ಅಕ್ಕನಾಗಮ್ಮನ ಗವಿಯೂ ಸಹ ಇಲ್ಲಿ ಕಂಡುಬರುತ್ತದೆ.

### ೧೨. ರೇವಣಸಿದ್ದೇಶ್ವರ ಬೆಟ್ಟ

೧. ರೇವಣಸಿದ್ಧರ ಬೆಟ್ಟವು ಗುಲಬರ್ಗಾದಿಂದ ಮೂವತ್ತು ಕಿಲೋಮೀಟರ್ ಅಂತರದಲ್ಲಿರುವ ರಟಗಲ್ಲಿನಲ್ಲಿರುವದು. ಈ ಬೆಟ್ಟಕ್ಕೆ ಅನೇಕ ಭಕ್ತಾದಿಗಳು ಬರುತ್ತಲೇ ಇರುತ್ತಾರೆ. ಈ ಪ್ರದೇಶದ ಜನರು ರೇವಣಸಿದ್ಧರನ್ನು ಆರಾಧ್ಯ ದೈವವನ್ನಾಗಿ ಮಾಡಿಕೊಂಡಿರುವುದು ಕಂಡುಬರುತ್ತದೆ.

೨. ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಮಾರ್ಗದ ಮಧ್ಯ ರಾಮನಗರ (ಕ್ಲೊಸಪೇಟೆ) ರೇಲ್ವೆ ನಿಲ್ದಾಣಕ್ಕೆ ೬-೭ ಮೈಲು ದೂರದಲ್ಲಿ ಗುನ್ನೂರು ಹೋಬಳಿ ಅವ್ವೇರಹಳ್ಳಿ ಸಮೀಪದಲ್ಲಿ ಇನ್ನೊಂದು ರೇವಣಸಿದ್ಧೇಶ್ವರ ಬೆಟ್ಟವಿದೆ. ಇದಕ್ಕೆ ಭೀಮೇದ್ರಿ ಎಂದು ಕರೆಯುತ್ತಾರೆ. ಇತ್ತೀಚೆಗೆ ನಿರ್ಮಾಣವಾಗಿರುವ ರೇವಣಸಿದ್ಧರ ಹಿತ್ತಾಳೆ ಮೂರ್ತಿ ಇದೆ. ಅಲ್ಲದೆ ಅಗಸ್ತ್ಯರನ್ನು ಕಂಡ ಮಲೆಯ ಪರ್ವತದಲ್ಲಿಯ ನೆಲೆಮನೆ ಎಂಬ ಊರು ಈಗ ಹಾಳಾಗಿರುವುದು. ಇಲ್ಲಿಯೂ ಅಗಸ್ತ್ಯನಿಗೆ ಜಡೆಮುನಿ ಎಂದು ಕರೆಯುವದಕ್ಕೆ ಆ ಬೆಟ್ಟದ ಮೇಲೆ ರೇವಣಸಿದ್ಧರ ಲಿಂಗದ ಮುಂಭಾಗದಲ್ಲಿ ಜಡೆಗಳಿಂದ ಕೂಡಿದ ಮುನಿಯ ವಿಗ್ರಹವೂ ಕಂಡುಬರುತ್ತದೆ.

### ೧೩. ಬಾಳೆಹೊನ್ನೂರು

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಅಥವಾ ರಂಭಾಪುರಿ ಪೀಠವೆಂದು ಸುಪ್ರಸಿದ್ಧವಾದ ಕ್ಷೇತ್ರವಾಗಿದೆ. ಈ ಪೀಠದ ಆಚಾರ್ಯರು ಶ್ರೀ ರೇಣುಕ ಶಾಖಾ ಮತ್ತು ವೀರಗೋತ್ರದ

ಅಧಿಪತಿಗಳಾಗಿದ್ದಾರೆ. ಈ ಪೀಠವು ವೀರ ಸಿಂಹಾಸನದ ಜಗದ್ಗುರುಗಳು ೧೨೧ ಪರಂಪರೆಯನ್ನು ಇಲ್ಲಿಯವರೆಗೆ ಹೊಂದಿರುವುದು. ಈ ಪೀಠ ಪರಂಪರೆಯಲ್ಲಿ ಶ್ರೀ ರುದ್ರಮುನೀಶ್ವರರ ನಂತರ ಶ್ರೀ ಮುಕ್ತಿಮುನೀಶ್ವರ, ದಿಗಂಬರ ಮುಕ್ತಿಮುನೀಶ್ವರ ಮುಂತಾಗಿ ೨೮ ಪೀಠಾಚಾರ್ಯರ ನಂತರ ಪುನಃ ೨೯ನೆಯ ಪೀಠಾಚಾರ್ಯರಾಗಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಎಂಬ ಹೆಸರಿನವರು ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಇದರ ಕಾಲ ೧೦೦೦ ದಿಂದ ೧೧೫೭ರ ಮಧ್ಯದಲ್ಲಿ ಎಂದು ವೀರಶೈವ ಪಂಚಪೀಠ ಪರಂಪರೆಯಲ್ಲಿ ಉಲ್ಲೇಖಿಸುತ್ತಾರೆ. ಶ್ರೀ ರೇವಣಸಿದ್ಧರು ತಮ್ಮ ಮಗನಾದ ರುದ್ರಮುನಿದೇವರಿಗೆ ಶೂನ್ಯ ಸಿಂಹಾಸನದ ಅಧಿಕಾರವನ್ನು ವಹಿಸಿಕೊಟ್ಟಿರುವ ಪುಣ್ಯ ಸ್ಥಳವಾಗಿದ್ದು, ಇಲ್ಲಿ ಪಂಚಾಚಾರ್ಯರ ಮಠಗಳಿವೆ. ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಪರಿಚಲನೆಗಾಗಿ ಬಾಳೆಹೊನ್ನೂರು ಪೀಠದ ಇಂದಿನ ಶ್ರೀಗಳಾದ ಜ. ವೀರಸೋಮೇಶ್ವರ ಶಿವಾಚಾರ್ಯರು ಅವಿರತವಾಗಿ ಶ್ರಮಿಸಿದ್ದಾರೆ. ಧರ್ಮ ಸಮ್ಮೇಳನ, ಧರ್ಮ ಜಾಗೃತಿ, ತತ್ವ ಸಿದ್ಧಾಂತ ಪ್ರಚಾರ ಸಭಾಗಳನ್ನು ಹಾಗೂ ಗ್ರಂಥ ಪ್ರಕಟಣಾ ಯೋಜನೆಗಳನ್ನು ಶ್ರೀಗಳವರು ಹಮ್ಮಿಕೊಂಡಿದ್ದಾರೆ.

**ಕೊನೆಟಿಪ್ಪಣಿಗಳು**

೧. ಕನ್ನಡ ದಾಖಲು ಸಾಹಿತ್ಯ, ಡಾ.ಕೆ.ರವೀಂದ್ರನಾಥ, ಪು. ೧೫೨
೨. ಬಸವೇಶ್ವರರ ಸಮಕಾಲೀನರು, ಬಸವ ಸಮಿತಿ, ಬೆಂಗಳೂರು, ಪು. ೨೨೦
೩. ರೇವಣಸಿದ್ದೇಶ್ವರ ರಗಳೆ ೧ - ೪೦
೪. ರೇವಣಸಿದ್ದೇಶ್ವರ ರಗಳೆ ೫ - ೧೦೦
೫. ರೇವಣಸಿದ್ದೇಶ್ವರ ರಗಳೆ ೨ - ಗದ್ಯ
೬. ರೇವಣಸಿದ್ದೇಶ್ವರ ರಗಳೆ ೩ - ೧೦
೭. ರೇವಣ ಸಾಂಗತ್ಯ ೧೦ - ೧
೮. ರೇಣುಕ ವಿಜಯ ಪುರಾಣಂ ೧೪ - ೧
೯. ರೇವಣ ಸಿದ್ದೇಶ್ವರ ರಗಳೆ ೩- ೭೦
೧೦. ರೇವಣ ಸಾಂಗತ್ಯ ೧೦ - ೩೧
೧೧. ರೇವಣಸಿದ್ದೇಶ್ವರ ರಗಳೆ ೫ - ೫೦
೧೨. ರೇವಣಸಿದ್ದೇಶ್ವರ ರಗಳೆ ೩ - ೫೦
೧೩. ರೇಣುಕ ವಿಜಯ ಪುರಾಣಂ ೧೩ - ೧
೧೪. ರೇವಣಸಿದ್ದೇಶ್ವರ ರಗಳೆ ೧ - ೧೧೦
೧೫. ರೇವಣಸಿದ್ದೇಶ್ವರ ರಗಳೆ ೪ - ಗದ್ಯ
೧೬. ರೇವಣಸಿದ್ದೇಶ್ವರ ರಗಳೆ ೨ - ಗದ್ಯ
೧೭. ರೇವಣಸಿದ್ದೇಶ್ವರ ರಗಳೆ ೪ - ಗದ್ಯ
೧೮. ಪಂಚಾಚಾರ್ಯರ ಚರಿತ್ರೆ ಭಾಗ - ೧, ಚೆನ್ನಮಲ್ಲಿಕಾರ್ಜುನ, ಪು. ೧೪
೧೯. ರೇವಣಸಿದ್ಧರ ರಗಳೆ ೨ - ಗದ್ಯ
೨೦. ರೇವಣ ಸಾಂಗತ್ಯ ೯ - ೧೩೦
೨೧. ರೇಣುಕ ವಿಜಯ ಪುರಾಣಂ ೨೦ - ೩

# ೮

# ಸಮಾರೋಪ

# ೮

# ಸಮಾರೋಪ

ಕ್ರಿ.ಶ. ೯೫೦ ರಿಂದ ಕ್ರಿ.ಶ. ೧೯೪೧ ರವರೆಗೆ ರಚಿಸಲ್ಪಟ್ಟ ಕನ್ನಡ, ಸಂಸ್ಕೃತ, ತೆಲುಗು, ಮರಾಠಿ, ಹಿಂದಿ ಮತ್ತು ಇಂಗ್ಲಿಶ್ ಗ್ರಂಥಗಳಲ್ಲಿ ರೇವಣಸಿದ್ದೇಶ್ವರ ಚರಿತ್ರೆ ಮತ್ತು ಲೀಲೆಗಳನ್ನು ವರ್ಣಿಸಲಾಗಿದೆ. ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಜನಿಸಿ, ಘನಲಿಂಗಿ ರುದ್ರಮುನಿ ದೇವರಿಗೆ ತಂದೆಯಾಗಿ, ಲೋಕಸಂಚಾರ ಕೈಗೊಂಡು ಪುನಃ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಲೀನವಾದಂತೆ ಇಲ್ಲಿಯವರೆಗೆ ರಚನೆಗೊಂಡ ಕಾವ್ಯಗಳಿಂದ ತಿಳಿದುಬರುತ್ತದೆ. ಹರಿಹರ, ಚೆನ್ನಬಸವ, ಜಾಲವಾದಿ ಮಲ್ಲಣ್ಣ, ಚತುರ್ಮುಖ ಬೊಮ್ಮರಸ, ಶ್ರೀಕಂಠಶಾಸ್ತ್ರಿ, ಚೆನ್ನಬಸವಶಾಸ್ತ್ರೀಗಳು ರಚಿಸಿದ ಕೃತಿಗಳನ್ನು ಪ್ರಮುಖವಾಗಿಟ್ಟುಕೊಂಡು ಇತರೆ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಚಿತ್ರಣಗೊಂಡ ಸನ್ನಿವೇಶಗಳನ್ನು ಬಳಸಿಕೊಂಡು ರೇವಣಸಿದ್ಧರ ಚರಿತ್ರೆಯನ್ನು ಹೀಗೆ ಕಟ್ಟಿಕೊಡಬಹುದಾಗಿದೆ.

ಕೊಲ್ಲಿಪಾಕಿ ರೇವಣಸಿದ್ಧರ ಜನ್ಮಸ್ಥಳ ಮತ್ತು ಐಕ್ಯಸ್ಥಳ. ಲಿಂಗೋದ್ಭವ ಮತ್ತು ಲಿಂಗೈಕ್ಯ ಎಂಬುದು ಕೇವಲ ಭಾವುಕತನದ ಪ್ರತಿಪಾದನೆಗಳು. ಇಂತಹ ಆರೋಪಗಳು ರೇವಣಸಿದ್ಧರಿಗೆ ಮೊದಲಲ್ಲ.

ಅಂಗದಿಂದದಯವಾದಾತ ಮಡಿವಾಳಯ್ಯ
ಲಿಂಗದಿಂದುದಯವಾದಾತ ರೇವಣಸಿದ್ದಯ್ಯ
ಭಸ್ಮದಿಂದುದಯವಾದಾತ ಸಿದ್ಧರಾಮಯ್ಯ
ಪಾದೋದಕದಿಂದ ಉದಯವಾದಳು ಅಕ್ಕಮಹಾದೇವಿ

ಮಂತ್ರದಿಂದುದಯವಾದಾತ ನೀನಲ್ಲವೆ ಚೆನ್ನಬಸವಯ್ಯ
ಬಸವಣ್ಣ ಪ್ರಿಯ ಚೆನ್ನಸಂಗಯ್ಯ

ಎಂಬ ನಾಗಲಾಂಬಿಕೆಯ ವಚನವನ್ನಿರಿಸಿಕೊಂಡು ನೋಡಿದರೆ ಹೀಗಾಗಲೆ ಕೆಲವು ಶಿವಶರಣರ ತಂದೆ - ತಾಯಿಗಳ ಹೆಸರು ನಮಗೆ ತಿಳಿದಿರುವುದರಿಂದ ವಚನದಲ್ಲಿ ಉಲ್ಲೇಖಿತವಾದ ಅಪ್ಸಾರವಣಗಳೊಂದಿಗೆ ಇವರ ಜನನವನ್ನು ಬೆಸುಗೆ ಹಾಕುವರು ಕೇವಲ ತಾತ್ವಿಕ ಪರಿಕಲ್ಪನೆ ಎನ್ನಬೇಕು. ಒಂದು ಕಡೆ ಶಿವಶರಣರು ಕಟ್ಟಬೇಕಾದ ಸಮಾಜ ವೈಚಾರಿಕತೆಯ ತಳಹದಿಯನ್ನು ಬಯಸಿತ್ತೆಂದು ಹೇಳುವಾಗ ವರ್ಣ, ವರ್ಗ, ಲಿಂಗಭೇದಗಳನ್ನು ಬದಿಗಿರಿಸಿದುದಲ್ಲದೆ ಕಿವಿಯಲ್ಲಿ ಜನಿಸಿದ ಕರ್ಣನ ಜನ್ಮ ವೃತ್ತಾಂತವನ್ನು ತಿರಸ್ಕರಿಸಿ ನುಡಿಯುವ ಬಸವಣ್ಣ "ಹೊಲೆಗಂಡಲ್ಲದೆ ಪಿಂಡಗೆ ನೆಲಗಾಶ್ರಯವಿಲ್ಲ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?" ಎಂದು ಪ್ರಶ್ನಿಸಿದವರು. ಹೀಗಿದ್ದು, ಇವರ ಚರಿತ್ರೆಯನ್ನು ಬರೆಯಲು ಹೊರಟ ಮುಂದಿನ ಕವಿಗಳು ಇವರ ಜನನ ವೃತ್ತಾಂತದಲ್ಲಿ ಅತಿಮಾನುಷವಾದ ಸಂಗತಿಗಳನ್ನು ತುರುಕಿ ಬರೆದುದು ವಿಪರ್ಯಾಸವೇ ಸರಿ. ಈ ವಿಪರ್ಯಾಸಕ್ಕೆ ರೇವಣಸಿದ್ಧರು ಹೊರತಾಗಿಲ್ಲ.

ರೇವಣಸಿದ್ಧರು ಐತಿಹಾಸಿಕ ವ್ಯಕ್ತಿ. ಇವನ ಚರಿತ್ರೆಯನ್ನು ಮರೆ ಮಾಡುವಷ್ಟು ಇವನ ಸುತ್ತ ಪವಾಡಗಳು ಬೆಳೆದು ನಿಂತಿವೆ. ಆದರೆ ನಾಡಿನಾದ್ಯಂತ ದೊರೆತ ಶಾಸನಗಳು ಮತ್ತು ಈತನ ಕುರಿತಾದ ಕಾವ್ಯಗಳಲ್ಲಿ ಉಲ್ಲೇಖಿತಗೊಂಡ ಸಮಕಾಲೀನ ರಾಜ ಮಹಾರಾಜರ ಪರಿಸರಗಳು ಹಾಗೂ ಮುಕ್ತಿಕಂಠಾಭರಣದಲ್ಲಿ ತ್ರಿಪುರಾಂತಕ ಸೋಮಲಿಂಗ ಚೆನ್ನಬಸಯ್ಯ ಎಂಬ ಅಂಕಿತದಿಂದ ರಚನೆಗೊಂಡ

"ಆದವಲ್ಲ ದಶದಿಕ್ಕಿನಲ್ಲಿ ದಶನಾದಂಗಳು
ಆದವಲ್ಲ ಪುಷ್ಪವೃಷ್ಟಿ ಕಲ್ಯಾಣಪುರದಲ್ಲಿ
ಆಯಿತಲ್ಲ ಸರ್ವಗಣಂಗಳಿತ್ಯಾನಂದ
ಇನ್ನು ಬಾರನೆ ತ್ರಿಪುರಂತಾಕ ಸೋಮಲಿಂಗ ಚೆನ್ನಬಸವನು."

ಎಂಬ ವಚನಗಳ ಆಧಾರದಿಂದ (ಚೆನ್ನಬಸವಣ್ಣನು ಪ್ರಭುವಿನ ಪಾದದಲ್ಲಿ ಪ್ರಾಣತ್ಯಾಗ ಮಾಡಿದ ಸಂದರ್ಭದಲ್ಲಿ ರೇವಣಸಿದ್ಧನು ತನ್ನ ಹೆಂಡತಿಯರೊಂದಿಗೆ ಅಲ್ಲಿಗೆ ಬಂದಿರುತ್ತಾನೆ. ಆಗ ಹೇಳಿದ ವಚನವಿದೆಂದು ವಿದ್ವಾಂಸರ ಅಭಿಪ್ರಾಯವಿದೆ.) ರೇವಣಸಿದ್ಧ ಒಬ್ಬ ವಚನಕಾರ ಮತ್ತು ಕಾಯಕಯೋಗಿ ಎಂಬುದನ್ನು ಹೇಳಬೇಕಾಗುತ್ತದೆ. ಸಿರಿವಾಳ ಶಾಸನದಲ್ಲಿ ಉಲ್ಲೇಖಿತ ಶಾಂತಿಮಯ್ಯನ ಮಗನು ಮತ್ತು ನಿರ್ಲಜ್ಜ ಶಾಂತಯ್ಯನ ಶಿಷ್ಯನೆಂಬುದು ಕಾಲಜ್ಞಾನ ವಚನಗಳಿಂದಲೂ ತಿಳಿದುಬರುತ್ತದೆ.

ಅಧ್ಯಯನಕ್ಕೆ ಬಳಸಿಕೊಂಡ ಕೆಲವು ಕೃತಿಗಳು ಸಿದ್ಧಾಂತ ಶಿಖಾಮಣಿ ಕರ್ತೃ ಎಂದು ಹೇಳಲಾದ ರೇಣುಕಾಚಾರ್ಯರನ್ನು ಮತ್ತು ೧೨ನೇ ಶತಮಾನದ ವಚನಕಾರ ರೇವಣಸಿದ್ಧರ ಲೀಲೆಗಳನ್ನು ಲೀಲಾಜಾಲವಾಗಿ ಸೇರಿಸಿ ರಚಿಸಿರುವದರಿಂದ ಈತನ ಕುರಿತಾದ ಚರಿತ್ರೆಗೆ ಅಸ್ಪಷ್ಟತೆಯ ಮಂಕು ಕವಿದಿದೆ.

ಅದೇನೆ ಇದ್ದರೂ ರೇವಣಸಿದ್ಧರ ಉಲ್ಲೇಖಿತ ಸಾಹಿತ್ಯ, ಶಾಸನ, ವಚನಗಳನ್ನು ಕಣ್ಣುಮುಂದಿರಿಸಿಕೊಂಡು ಇಲ್ಲಿಯವರೆಗಿನ ವಿದ್ವಾಂಸರ ರಚನಾತ್ಮಕ ಹೇಳಿಕೆಯನ್ನು ಸಾಧ್ಯವಾದಷ್ಟು ವಾಸ್ತವಿಕ ನೆಲೆಯಲ್ಲಿ ಅರ್ಥೈಯಿಸಿಕೊಂಡು ರೇವಣಸಿದ್ಧರ ಇತಿವೃತ್ತವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ವಚನಕಾರ ಮರುಳಸಿದ್ಧ ತನ್ನ ಒಂದು ವಚನದಲ್ಲಿ

"ಆಲಿ ಆಲಯದಲ್ಲಿ ಕರಿಗೊಳಲು
ಆಲಿಸುವ ಶ್ರವಣವು ಮೇಲಿಪ್ಪ ಆಕಾಶವಡರಲು
ಉಲುಹು ನಿರ್ಭೂತ ಚಿತ್ರ ಸಮಾಧಾನವನೆಯ್ದಲು
ಕಾಲ ಕರ್ಮ ಭವಂಗಳ ಗೆಲುವುದಿನೇನು ಸೋಜಿಗವು
'ರೇವಣ ಪ್ರಭುವೆ'

"ರೇವಣ ಪ್ರಭುವೆ" ಎಂಬ ಅಂಕಿತದಿಂದ ವಚನ ರಚನಗೆ ತೊಡಗಿರುವದನ್ನು ನೋಡಿದರೆ ಮರುಳಸಿದ್ಧನ ಗುರುವಾಗಿ ಅವನಿಗೆ ದೀಕ್ಷೆಯನ್ನಿತ್ತು ಸರ್ವಜ್ಞಾನವನ್ನು ಭೋದನೆ ಮಾಡಿದ ದೀಕ್ಷಾಗುರುವಾಗಿ ಕಂಗೊಳಿಸುತ್ತಾನೆ; ರೇವಣಸಿದ್ಧರು. ಅಂಗಜರಿಪು, ಸಿದ್ಧಕುಲ ಚಕ್ರವರ್ತಿ, ನಿರುಪಮಸಿದ್ಧ, ಮುಕ್ಕಣ್ಣಸಿದ್ಧ ಸಿದ್ಧರ ಸಿದ್ಧ ಅರಸ ಶಿವಸಿದ್ಧ, ಸಿದ್ಧಕುಲಶೇಖರ ಮುಂತಾದ ಬಿರುದುಗಳನ್ನು ಧರಿಸಿದ ರೇವಣಸಿದ್ಧರು ಕರ್ನಾಟಕದಲ್ಲಿ ಸಿದ್ಧಪರಂಪರೆಯ ವಾರಸುದಾರರಾಗಿ ಗೋಚರಿಸುತ್ತಾರೆ.

ಹಾಗೆಯೇ ಶಾಸನೋಕ್ತ ಉಲ್ಲೇಖಗಳನ್ನು ಗಮನಿಸಿದರೆ ರೇವಣಸಿದ್ಧರ ಚರಿತ್ರೆಗೆ ಐತಿಹಾಸಿಕ ಮತ್ತು ಧಾರ್ಮಿಕ ಕಳೆ ಕಟ್ಟುತ್ತದೆ. ಕೊಲ್ಲೂರಿನ ೧೧೬೪ರ ಶಾಸನ ರೇವಣೇಶ್ವರ ದೇವರ ನಿತ್ಯ ಸೇವೆಗೆಂದು ಪ್ರಸನ್ನ ರಾಮೇಶ್ವರ ದೇವರ ಮತ್ತು ಅಲೇಶ್ವರ ದೇವರ ಆಚಾರ್ಯರಿಗೆ, ಕಳಚೂರಿ ಚಕ್ರವರ್ತಿ ಸೋವಿದೇವನ ಮಾಂಡಲಿಕ ಸೌದೊರೆ ಮಹಾಪ್ರಭುಗಳು ದತ್ತಿ ನೀಡಿದ ಉಲ್ಲೇಖ ಮತ್ತು ೧೧೯೩ರ ಅವ್ವೆರಹಳ್ಳಿ ಶಾಸನದ "ಪವಾಡ ನೆರೆದ ಆಚಾರ್ಯ ಮರುಳಸಿದ್ಧರು ರೇವಣಸಿದ್ಧರ ವರಪುತ್ರ" ಎಂಬ ಉಲ್ಲೇಖ ಹಾಗೆಯೇ ಕ್ರಿ.ಶ. ೧೨೦೦ರ ಪುಳಜೆ ಶಾಸನ ರೇವಣಸಿದ್ಧರ ಹೆಸರಿನಲ್ಲಿ ತೀರ್ಥಕುಂಡವನ್ನು ಸ್ಥಾಪಿಸಿರುವ ಸಂಗತಿ ಮುಂತಾದವುಗಳಿಂದ ಈ ಶಾಸನಗಳ ಸಮಯಕ್ಕಾಗಲೇ ರೇವಣಸಿದ್ಧರು ತಮ್ಮ ಸಾಮಾಜಿಕ ಧಾರ್ಮಿಕ ಹಾಗೂ ಐತಿಹಾಸಿಕ ಕಾರ್ಯಗಳಿಂದ ಜನ ಮನದಲ್ಲಿ ಪೂಜ್ಯ ಭಾವನೆಯನ್ನು ಗಳಿಸಿದ್ದರು. ನೂರಾರು, ದೇವಾಲಯಗಳು, ಮಠಗಳು ದಾನದತ್ತಿಗಳು ಇವರ ಹೆಸರಲ್ಲಿ ನಿರ್ಮಾಣಗೊಂಡಿರುವುದು ತಿಳಿದುಬರುತ್ತದೆ.

ರೇವಣಸಿದ್ಧರನ್ನು ಕುರಿತ ಕಾವ್ಯಪುರಾಣಗಳು ಈತನ ಜನನ ವೃತ್ತಾಂತವನ್ನು ಭಿನ್ನ ರೀತಿಯಲ್ಲಿ ಚಿತ್ರಿಸಿವೆ. ಧರ್ಮಕೆಟ್ಟ ಕಾರಣ ಅದರ ಉದ್ಧಾರಕ್ಕೆ ತನ್ನನ್ನು ತೊಡಗಿಸಿಕೊಳ್ಳುವ ನಿಮಿತ್ಯ ಭೂಲೋಕಕ್ಕೆ ಬಂದನೆಂಬುದು ನಂಜನಗೂಡು ಶ್ರೀಕಂಠಶಾಸ್ತ್ರೀ ವಿರಚಿತ ರೇಣುಕ ವಿಜಯಪುರಾಣದ ಆಶಯವಾದರೆ,

ದಾರುಕನನ್ನು ದಾಟಿದ ತಪ್ಪಿಗಾಗಿ ಭೂಲೋಕದಲ್ಲಿ ಜನಿಸಿ ಧರ್ಮಪ್ರಚಾರ ಕೈಗೊಂಡು ಮತ್ತೆ ಕೈಲಾಸಕ್ಕೆ ಹೋಗುವ ಸಿದ್ಧ ಮಾದರಿಯನ್ನು ಹರಿಹರ ಚಿತ್ರಿಸಿದ್ದಾನೆ. ರೇವಣ ಸಾಂಗತ್ಯ ಬರೆದ ಚೆನ್ನಬಸವ ಮತ್ತು ರೇವಣಸಿದ್ದೇಶ್ವರ ಪುರಾಣ ಬರೆದ ಚತುರ್ಮುಖ ಬೊಮ್ಮರಸರು ಹರಿಹರನ ಹಾದಿಯಲ್ಲಿಯೇ ಮುನ್ನಡೆಯುತ್ತಾರೆ. ತಂದೆ, ತಾಯಿ ಯಾರೊಬ್ಬರ ಗುರುತಿಲ್ಲದೆ ಆಚೆಗೊಂಡನ ಮನೆಗೆ ನೇರವಾಗಿ ಬರುವುದನ್ನು ಜಾಲವಾದಿ ಕವಿ ಮಲ್ಲಣ್ಣನು ಚಿತ್ರಿಸುತ್ತಾನೆ. ಹೀಗೆ ಈತ ಭೂಲೋಕಕ್ಕೆ ಬರುವ ರೀತಿ ಹಲವು ಬಗೆಯದಾಗಿದ್ದರೂ ಇಲ್ಲಿ ಕೈಗೊಳ್ಳಬೇಕಾದ ಉದ್ದೇಶ ಮಾತ್ರ ಒಂದೇಯಾಗಿದೆ. ದೀನರ ಬಡತನವನ್ನು ನಿವಾರಿಸುವುದು ಮತ್ತು ಅಹಂಕಾರದಿಂದ ಮೆರೆಯುವವರ ಗರ್ವಭಂಗ ಮಾಡುವದು ಹಾಗು ಧರ್ಮ ಮಾರ್ಗವನ್ನು ಕೈಗೊಳ್ಳುವಂತೆ ನಡೆದು ತೋರಿಸುವದು. ಇವು ಈತನ ಕುರಿತಾಗಿ ರಚನೆಯಾದ ಕವಿಗಳು ಕಂಡುಕೊಂಡ ಅಥವಾ ಪ್ರತಿಪಾದಿಸಲು ಹೊರಟ ಸತ್ಯ, ಸಿದ್ಧಾಂತ, ತತ್ವ ಮತ್ತು ಕಾವ್ಯ ಧ್ವನಿಯಾಗಿದೆ.

ವೀರಶೈವ ಚರಿತ್ರೆಯಲ್ಲಿ ರೇಣುಕರ ಹೆಸರು ಪ್ರಾಚೀನವಾದದ್ದು. ರೇಣುಕಾಗಸ್ತ್ಯ ಸಂವಾದವನ್ನು ಆಧಾರಿಸಿ ಸಿದ್ಧಾಂತ ಶಿಖಾಮಣಿ ರಚನೆಯಾಗಿದೆ. ಇದನ್ನು ಬಿಟ್ಟರೆ ಕನ್ನಡ ಕಾವ್ಯ, ಶಾಸನಗಳಲ್ಲಿ ರೇವಣಸಿದ್ಧರ ಹೆಸರು ಕಂಡುಬರುತ್ತದೆ. ಸಿದ್ಧಾಂತ ಶಿಖಾಮಣಿಯ ರಚನಾಕಾಲವನ್ನು ನಿರ್ಣಯಿಸುವ ವಿದ್ವಾಂಸರು ರೇವಣಸಿದ್ಧರೇ ಬೇರೆ, ಸಿದ್ಧಾಂತ ಶಿಖಾಮಣಿ ಕರ್ತೃ ರೇಣುಕಾಚಾರ್ಯ ಬೇರೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಸಿದ್ಧಾಂತ ಶಿಖಾಮಣಿಯ ರಚನೆ ಕರ್ತೃ ಕಾಲನಿರ್ಣಯ ಕುರಿತಾಗಿ ಏನೇ ಇದ್ದರೂ ಹನ್ನೆರಡನೆಯ ಶತಮಾನದಿಂದೀಚೆಗೆ ರಚನೆಯಾದ ಕಾವ್ಯ, ಶಾಸನಗಳಲ್ಲಿ ಉಲ್ಲೇಖಿತವಾದ ರೇವಣಸಿದ್ಧರು ಈ ಮಹಾಪ್ರಬಂಧದ ವಸ್ತುವಾಗಿದ್ದಾರೆ. ಅಂದರೆ "ಈ ಪೀಠಪರಂಪರೆಯಲ್ಲಿ ಶ್ರೀ ಮುಕ್ತಿ ಮುನೀಶ್ವರ, ದಿಗಂಬರ ಮುಕ್ತಿ ಮುನೀಶ್ವರ ಮುಂತಾಗಿ ೨೮ ಪೀಠಾಚಾರ್ಯರ ನಂತರ ೨೯ನೇ ಪೀಠಾಚಾರ್ಯರಾಗಿ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಎಂಬ ಹೆಸರಿನವರು ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಇವರು ಕ್ರಿ.ಶ. ೧೦೦೦ ದಿಂದ ೧೧೫೭ ಮಧ್ಯದಲ್ಲಿ ಬದುಕಿರುವುದಾಗಿ ತಿಳಿದುಬರುತ್ತದೆ. ಇವರು ಮಾಡಿದ ಲೀಲೆಗಳು ಅನಂತವಾಗಿವೆ. ಅವುಗಳಲ್ಲಿ ಮಾಸನೂರಿನ ಯಕ್ಷಮಿಥುನಗಳ ಉದ್ಧಾರ, ವಿಕ್ರಮಾದಿತ್ಯನಿಗೆ ಖಡ್ಗ ಪ್ರಧಾನ, ಬಿಜ್ಜಳನಿಗೆ ಖಡ್ಗ ಪ್ರಧಾನ, ೧೨ ಸಾವಿರ ಕನ್ನೆಯರ ಬಂಧವಿಮೋಚನೆ, ಕಲ್ಯಾಣದ ಬಳಿ ತ್ರಿಪುರಾಂತಕೇಶ್ವರ ಕೆರೆಯ ನಿರ್ಮಾಣ ಹಾಗೂ ಸೊನ್ನಲಿಗೆಯ ಶ್ರೀ ಸುಗ್ಗಲಾದೇವಿಗೆ ಪುತ್ರಾನುಗ್ರಹ ಇವೇ ಮೊದಲಾದವುಗಳು ಪ್ರಮುಖವಾಗಿವೆ.[೨] ಹೀಗೆ ಪರಂಪರೆಯಿಂದ ಈ ಪೀಠಕ್ಕೆ ರೇವಣಸಿದ್ಧ ಹೆಸರಿನ ಪೀಠಾಧಿಪತಿಗಳು ಆಗಿರುವುದು ಇವರ ಕುರಿತು ರಚಿತವಾದ ಕಾವ್ಯಗಳು ಒಬ್ಬ ವ್ಯಕ್ತಿಯ ಲೀಲೆಗಳನ್ನು ಆ ಹೆಸರಿನ ಎಲ್ಲಾ ವ್ಯಕ್ತಿಗಳಿಗೆ ಆರೋಪಿಸುವುದು ಕಂಡುಬಂದಿದೆ. ನಮ್ಮ ಅಧ್ಯಯನದ ಎಲ್ಲ ಆಕರಗಳನ್ನು ಗಮನಿಸಿ ೨೯ನೆ ಪೀಠಾಧಿಪತಿ ರೇವಣಸಿದ್ಧರನ್ನೆ ಕುರಿತು ಎಲ್ಲ ಕಾವ್ಯಗಳು, ಶಾಸನಗಳು ಮಾತನಾಡುತ್ತವೆ ಎಂಬುದು

ಇಲ್ಲಿಯ ಅಧ್ಯಯನದ ಫಲಶ್ರುತಿಯಾಗಿದೆ. ಈ ಅಭಿಪ್ರಾಯಕ್ಕೆ ಸಮಾಧಾನವೆನ್ನುವಂತೆ ವಿದ್ವಾಂಸರಾದ ಡಾ. ಬಿ.ವಿ.ಮಲ್ಲಾಪುರ ಅವರು ರೇಣುಕ-ರೇವಣಸಿದ್ಧ-ರಂಭಾಪುರಿಪೀಠ ಎಂಬ ಲೇಖನದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ.

"ರೇಣುಕಾಗಸ್ತ್ಯ ಸಂವಾದವನ್ನು ಆಧರಿಸಿ ಸಿದ್ಧಾಂತ ಶಿಖಾಮಣಿಯ ರಚನೆಯಾಗಿದೆ. ಶಿವಾಗಮಗಳಲ್ಲಿ ಉತ್ತಮವಾಗಿರುವುದು ರೇಣುಕರ ಹೆಸರು. ಇವರನ್ನೇ ರೇಣುಕಾಚಾರ್ಯರೆಂದು ಪಂಚಾಚಾರ್ಯರ ಹೆಸರುಗಳಲ್ಲಿ ಹೇಳುವಲ್ಲಿ ಉಲ್ಲೇಖಿತವಾಗಿದೆ. ಶಂಕರಚಾರ್ಯರು ಭಾಷ್ಯಗಳನ್ನು ಬರೆದು ಅದ್ವೈತಮತ ಪ್ರತಿಷ್ಠಾಪನಾಚಾರ್ಯರೆನಿಸಿದಂತೆ ಅತ್ಯಂತ ಪ್ರಾಚೀನ ಕಾಲದಲ್ಲಿ ವೀರಶೈವ ಪರಭಾಷ್ಯಗಳನ್ನು ಬರೆದು ವೀರಶೈವ ಪ್ರತಿಷ್ಠಾಪನಾಚಾರ್ಯರೆನಿಸುವ ವಿಷಯ ಶ್ರೀಪತಿ ಪಂಡಿತರ ಶ್ರೀಕರಭಾಷ್ಯಾದಲ್ಲಿ ಉಕ್ತವಾಗಿದೆ. ಅಂದರೆ ರೇಣುಕಾಚಾರ್ಯರೆಂಬುವರು ಐತಿಹಾಸಿಕ ವ್ಯಕ್ತಿಗಳು ಕೇವಲ ಪೌರಾಣಿಕ ವ್ಯಕ್ತಿಗಳಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ರೇಣುಕರ ಪರಂಪರೆ ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ. ನಮ್ಮ ಮುಂದಿನ ಚರಿತ್ರೆಯಲ್ಲಿ ರೇವಣಸಿದ್ಧರ ಹೆಸರು ಸ್ಪಷ್ಟವಾಗಿ ಕಂಡುಬರುತ್ತದೆ. ರೇಣುಕರು ಆಂಧ್ರಪ್ರದೇಶದ ಕೊನಲುಪಾಕ (ಕೊಲ್ಲಿಪಾಕ)ದಿಂದ ಬೇರೆ ಬೇರೆ ಕಡೆಗೆ ಸಂಚರಿಸಿ ಧರ್ಮೋಪದೇಶ ಮಾಡಿರುವರು. ಮುಂದೆ ಈ ಪರಂಪರೆಯಲ್ಲಿ ಬಂದ ರೇವಣಸಿದ್ಧರು ಬಾಳೆಹೊನ್ನೂರಿನಲ್ಲಿ ಬಂದು ನೆಲೆಸಿದ ವಿಷಯ ಶಾಸನಗಳಲ್ಲಿ ಪ್ರಸ್ತಾಪಿತವಾಗಿದೆ.[೩] ಹಾಗೆಯೇ ಇಂದಿಗೂ ಅಸ್ತಿತ್ವದಲ್ಲಿರುವ ಪುಣ್ಯಕ್ಷೇತ್ರಗಳು, ತೀರ್ಥಗಳು, ಸ್ಮಾರಕಗಳು ಹಾಗು ದೇವಸ್ಥಾನಗಳು ನಾಡಿನಾದ್ಯಂತ ಹರಡಿವೆ.

ಇಷ್ಟೊಂದು ಹೇರಳ ಆಕರಗಳು ಲಭ್ಯವಿದ್ದರೂ ರೇವಣಸಿದ್ಧರನ್ನು ಕುರಿತಾಗಿ ಸಾಹಿತ್ಯ ಚರಿತ್ರೆಕಾರರೂ, ಸಾಹಿತ್ಯಾಸಕ್ತರೂ ಮತ್ತು ವಿಮರ್ಶಕರು ಗಮನ ಹರಿಸದೇ ಹೋದದು ಸೋಜಿಗದ ಸಂಗತಿ. ಹಾಗೆಯೇ ವಚನಕಾರ ಬಾಲಬೊಮ್ಮಯ್ಯ ಹೇಳುವಂತೆ

"ಗುರುವಾಗಿ ಬಂದರಯ್ಯ ರೇವಣಸಿದ್ದೇಶ್ವರ ದೇವರು .....
ಜಂಗಮವಾಗಿ ಸುಳಿದರಯ್ಯ ಪ್ರಭುದೇವರು"[೪]

ಎಂಬ ಮಾತುಗಳಲ್ಲಿ ಗುರುಪೀಠ ಪರಂಪರೆ ರೇವಣಸಿದ್ದರಿಂದ, ಜಂಗಮಪೀಠ (ವಿರಕ್ತಪೀಠ) ಪರಂಪರೆ ಪ್ರಭುದೇವನಿಂದ ಆರಂಭವಾದುದನ್ನು ಗಟ್ಟಿಯಾಗಿ ಹಿಡಿದುಕೊಂಡು ಅತ್ತ ಗುರುಪೀಠದ ರೇವಣಸಿದ್ಧರನ್ನು ಇತ್ತ ವಚನ ಪರಂಪರೆಯಾದ ವಿರಕ್ತಪೀಠದಲ್ಲಿ ಇಟ್ಟು ನೋಡದ ಇವರ ಮನಸ್ಸು ಅದೇ ಗುರುಪೀಠ ಪರಂಪರೆಯಲ್ಲಿ ಬಂದು ವಚನಕಾರರಾಗಿ ಬೆಳೆದು ಶರಣರೆಂದೆನಿಸಿಕೊಂಡ ಪ್ರಸ್ತುತ ಅಧ್ಯಯನದ ರೇವಣಸಿದ್ಧರ ಚರಿತ್ರೆ ಮೂಲ ರೇಣುಕಾಚಾರ್ಯರ ಚರಿತ್ರೆಯೊಂದಿಗೆ ಹೆಣೆದಿರುವದು ಇವರ ಅಧ್ಯಯನದ ಮಿತಿಯನ್ನು ತೋರಿಸಿ ಕೊಡುತ್ತದೆ. ಹೀಗಾಗಿ ಇಲ್ಲಿಯವರೆಗಿನ ಅಧ್ಯಯನದ ಫಲಿತಗಳಿಂದ ಈ ಕೆಳಗಿನ ನಿರ್ಣಯಕ್ಕೆ ಬರಬಹುದಾಗಿದೆ.

೧. ರೇಣುಕ, ರೇವಣಸಿದ್ಧ ಎಂಬ ಹೆಸರುಗಳು ಇಬ್ಬರು ವ್ಯಕ್ತಿಗಳನ್ನು ಸೂಚಿಸುತ್ತವೆ. ರೇಣುಕ ಎಂಬುದು ಸಿದ್ಧಾಂತ ಶಿಖಾಮಣಿಗೆ ಮೂಲವಾದ ರೇಣುಕಾಗಸ್ತ್ಯ ಸಂವಾದದ ರೇಣುಕಾಚಾರ್ಯರು. ರೇವಣಸಿದ್ಧ ಎಂಬುದು ಹರಿಹರ, ಮಲ್ಲಣ್ಣಕವಿ, ಚೆನ್ನಬಸವ ಕವಿ ಹಾಗೂ ಪ್ರಾಸಾಂಗಿಕವಾಗಿ ಉಲ್ಲೇಖಿಸಿದ ಕನ್ನಡ ಕಾವ್ಯಗಳಾದ ಚೆನ್ನಬಸವ ಪುರಾಣ, ಸಿದ್ಧರಾಮ ಚಾರಿತ್ರ, ಗುರುರಾಜ ಚಾರಿತ್ರ ಮುಂತಾದ ಕಾವ್ಯಗಳು ಮತ್ತು ಸಮಕಾಲೀನ ಶಿವಶರಣರ ವಚನಗಳು, ಶಾಸನಗಳಲ್ಲಿ ಉಲ್ಲೇಖಿತಗೊಂಡವನಾಗಿದ್ದಾನೆ. ಈತನ ಕಾಲ ಕ್ರಿ.ಶ. ೧೦೦೦ ರಿಂದ ೧೧೮೭ ಅಂದರೆ ಈತ ಬಸವ ಪೂರ್ವಯುಗದ ಪಂಚಾಚಾರ್ಯ ಪಂಡಿತದ್ವಯರಾದ ಶ್ರೀಪತಿ ಪಂಡಿತ, ಅಮರಗುಂಡದ ಮಲ್ಲಿಕಾರ್ಜುನನ ಸಮಕಾಲೀನವನಾಗಿದ್ದಾನೆ. ರಂಭಾಪುರಿ ಪೀಠದ ೨೯ನೇ ಪೀಠಚಾರ್ಯರಾಗಿಬೇಕು.

೨. ಕನ್ನಡ ಮತ್ತು ಸಂಸ್ಕೃತ ಕೃತಿಗಳು ಸೇರಿ ವೀರಶೈವ ಆಚಾರ್ಯರನ್ನು ಕುರಿತು ರಚನೆಗೊಂಡ ಗ್ರಂಥಗಳಲ್ಲಿ, ರೇವಣಸಿದ್ಧರನ್ನು ಕುರಿತ ಗ್ರಂಥಗಳೇ ಬಹು ಪಾಲು ವ್ಯಾಪಿಸಿಕೊಂಡಿವೆ. ಹಾಗೆಯೇ ಹದಿನೇಳು ಶಾಸನಗಳಲ್ಲಿ ಈತ ಉಲ್ಲೇಖಗೊಂಡಿರುವದನ್ನು ಗಮನಿಸಿದರೆ ಈತನ ಕುರಿತಾಗಿ ಬಂದ ಶಾಸನಗಳು ಅಧಿಕವೆನಿಸುತ್ತವೆ.

೩. ರೇವಣಸಿದ್ಧರನ್ನು ಕುರಿತು ರಚನೆಯಾದ ಪ್ರಧಾನ ಕೃತಿಗಳು, ವಚನಗಳು ಮತ್ತು ಶಾಸನಗಳನ್ನು ಅಧ್ಯಾಯ ೪ರಲ್ಲಿ ಬಳಸಿಕೊಂಡು ಕಥಾವಸ್ತು ಸಮೀಕ್ಷೆಯನ್ನು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಈತನೊಬ್ಬ ಸಿದ್ಧಪುರುಷನಾಗಿ ಕಂಗೊಳಿಸಿದ್ದಾನೆಂಬುದಕ್ಕೆ ೧. ಕಂಚಿಯ ಚೋಳರಾಜ ಪ್ರತಿಷ್ಠಾಪನೆ ಮಾಡಿದ ವಿಷ್ಣು ಪ್ರತಿಮೆಯನ್ನು ಸ್ಥಿರಗೊಳಿಸಿದ್ದು ೨. ಬಿಮ್ಮನೆ ಬೀಗಿದ ಗೋರಕ್ಷನು ತನ್ನ ಹೆಂಡತಿ ಲಕ್ಕಾದೇವಿಯಿಂದ ಕಠಾರಿ ಭಿಕ್ಷೆ ನೀಡಿ ತನ್ನ ವಕ್ಷಸ್ಥಳದಲ್ಲಿ ಕಠಾರಿಯನ್ನು ಮಾಡಿಸಿಕೊಂಡು ರೇವಣಸಿದ್ಧರಿಗೆ ಶರಣಾಗತನಾಗುವದು. ೩. ಬಿಜ್ಜಳನಿಂದ ಕುದಿಯುವ ಓಗರವನ್ನು ಭಿಕ್ಷೆಯಾಗಿ ಸ್ವೀಕರಿಸಿ ಕುಡಿದು ಕೈಯನ್ನು ಅರಮನೆಯ ಕಂಭಕ್ಕೆ ಒರೆಸಿ ಅದರ ಧ್ವಂಸಕ್ಕೆ ಕಾರಣವಾದುದು. ೪. ತಗಣೆ ವೇಷದ ರಾಕ್ಷಸ ದಂಪತಿಗಳನ್ನು ಸುಟ್ಟು ಅವರಿಗೆ ಮೋಕ್ಷ ದಯಪಾಲಿಸುವದು. ೫. ಮಾಸೂರಿನ ಮಡುವಿನಲ್ಲಿ ಇರಿಸಿದ ಖಡ್ಗವನ್ನು ಖರ್ಪರನೆಂಬ ಕುಟಿಲ ವ್ಯಕ್ತಿಯ ಸಹಾಯದಿಂದ ಹನ್ನೆರಡು ಸಾವಿರ ಕನ್ನೆಯರನ್ನು ಬಲಿಕೊಟ್ಟು ಖಡ್ಗ ಕೈವಶ ಮಾಡಿಕೊಳ್ಳುವ ಬಿಜ್ಜಳನ ಆಶಯವನ್ನು ಭಂಗಗೊಳಿಸಿದುದು.

ಇಂತಹ ಹತ್ತಾರು ಪವಾಡಗಳು ಶಿಷ್ಟರಕ್ಷಕ, ದುಷ್ಟನಿಗ್ರಹ ಹಾಗೂ ಸಕಲ ಭೂತಾನುಕಂಪೆ ಗುಣಕ್ಕೆ ನಿದರ್ಶನವಾಗಿವೆ. ೬. ಕಲಬುರ್ಗಿ ಜಿಲ್ಲೆ ಶಹಪುರ ತಾಲೂಕಿನ ಕ್ರಿ.ಶ. ೧೧೮೭ರ ಸಿರಿವಾಳ ಶಾಸನದ ಆಧಾರದಿಂದ ಕೆಲವು ಮಹತ್ವದ ಐತಿಹಾಸಿಕ ಸಂಗತಿಗಳನ್ನು ಕಟ್ಟಿಕೊಡಬಹುದಾಗಿದೆ. ಅವುಗಳಲ್ಲಿ ರೇವಣಸಿದ್ಧರು ಶಿವಯೋಗಿ ಶಾಂತಮಯ್ಯಗಳ ಪುತ್ರ (ಶಿಷ್ಯ) ಈ ಮಾತನ್ನು ಚಂಗೆಣಗಿಲ ಮಂಟಪದಲ್ಲಿ (ಕಲ್ಯಾಣದಲ್ಲಿ) ರೇವಣಸಿದ್ದೇಶ್ವರರಿಗೆ, ನಿರ್ಲಜ್ಜ ಶಾಂತಯ್ಯಗಳು ಭೋದಿಸಿದರೆಂಬ ಸಂಗಬಸವೇಶ್ವರನ ವಚನ ಪುಷ್ಠಿ ನೀಡುತ್ತದೆ. ೭. ಅವ್ವೇರಳ್ಳಿ ಶಾಸನ ರೇವಣಸಿದ್ಧನ ಮಗ ಮರುಳಸಿದ್ಧನೆಂದು ಉಲ್ಲೇಖಿಸುತ್ತದೆ. ಆದರೆ ಮರುಳಸಿದ್ಧನ ವಚನದ ಅಂಕಿತ "ರೇವಣ ಪ್ರಭು" ಎಂದಿರುವದರಿಂದ ಈತ ರೇವಣಸಿದ್ಧನ ಶಿಷ್ಯನಾಗಿದ್ದಾನೆ. ಹಾಗೆಯೇ ಮುಂದೆ ಹೂಲಿಯ ಮರಳು ಸಿದ್ದೇಶ್ವರನಾಗಿ ಭೂಮಿಗೆ ಬಂದು ಪವಾಡಗಳನ್ನು ಮೆರೆದು ಪುಲಿಗೆರೆಯ ಸೋಮೇಶ್ವರನ ಸಾನಿಧ್ಯದಲ್ಲಿ ಶಿವಲಿಂಗ ಮೂರ್ತಿಯಾಗಿ ನೆಲೆಸಿದನೆಂಬುದನ್ನು ಕ್ರಿ.ಶ. ೧೫೧೩ರ ಲಕ್ಷ್ಮೇಶ್ವರ ಶಾಸನ ಬಣ್ಣಿಸುತ್ತದೆ. ೮. ಚೆನ್ನಬಸವಶಾಸ್ತ್ರೀಗಳು ಬರೆದ ಹಾಲುಮತ ಪುರಾಣದಿಂದ ರೇವಣಸಿದ್ದೇಶ್ವರರು ಕುರುಬರ ಕುಲದೇವರೆಂದು ತಿಳಿದುಬರುತ್ತದೆ. ಪ್ರಾಯಶಃ ಹಾಲುಮತದವರ ಮೂಲಪುರಷನಾದ ಶಾಂತಮುತ್ತಯ್ಯನಿಗೆ ರೇವಣಸಿದ್ಧರು ಲಿಂಗಧಾರಣ ಮಾಡಿ "ಒಡೆಯರು" ಎಂಬ ಬಿರುದು ಕೊಟ್ಟ ಕಾರಣ ಈತನನ್ನೆ ತಮ್ಮ ಆದಿಗುರುವೆಂದು ಸ್ವೀರಿಸಿದಂತಿದೆ. ಈಗಲೂ ಕೊಲ್ಲಿಪಾಕಿ ಹದಿನೆಂಟು ಮಠಗಳಲ್ಲಿ ಕುರುಬರ ಮಠವು ಒಂದಿರುತ್ತದೆ. ೯. ಲೋಕ ಕಲ್ಯಾಣಾರ್ಥವಾಗಿ ರೇವಣಸಿದ್ಧರು ರಾಮೇಶ್ವರ, ಕಾಂಚಿಪುರ, ಮಾಸೂರು, ಜಯಂತಿಪುರ, ಮಂಗಳವಾಡ, ಕಲ್ಯಾಣ, ಹಾವಿನಾಳು, ಕಾಶಿ, ಚೇರ, ಚೋಳ, ಮಲೆಯಾಳ ಮುಂತಾದ ಸ್ಥಳಗಳನ್ನು ಸಂಚರಿಸಿ ಅನೇಕ ಪವಾಡಗಳಿಂದ ಮೆರೆದಿರುವದನ್ನು ಕಾವ್ಯಗಳು ವರ್ಣಿಸುತ್ತವೆ. ೧೦. ಸಾಮಾಜಿಕವಾಗಿ ಸಕಲ ಪ್ರಾಣಿಗಳಿಗೆ ಹಿತಕರಮಪ್ಪ ತಟಾಕು ನಿರ್ಮಾಣ ಶಿವಪುರ ಮತ್ತು ಅನ್ನಸತ್ರಗಳ ಅನುಷ್ಠಾನದಲ್ಲಿ ರೇವಣಸಿದ್ಧರು ತೊಡಗಿರುವದನ್ನು ಕಾವ್ಯಗಳು ಉಲ್ಲೇಖಿಸುತ್ತವೆ.

೪. ಅಧ್ಯಾಯ - ೫ರಲ್ಲಿ ರೇವಣಸಿದ್ದೇಶ್ವರನ್ನು ಕುರಿತಾದ ಪ್ರಧಾನ ಕಾವ್ಯಗಳ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸನ್ನಿವೇಶ, ಪಾತ್ರ ಚಿತ್ರಣ, ಭಾಷೆ, ಶೈಲಿ ಮುಂತಾಗಿ ಕಾವ್ಯಗಳ ಶಿಲ್ಪದ ಅಭ್ಯಾಸವನ್ನು ಮಾಡಲಾಗಿದೆ. ಕೃತಿಯ ಮಹತ್ವದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಅಂಶಗಳಾದ ಸಾಮಾಜಿಕ, ಧಾರ್ಮಿಕ, ರಾಜಕೀಯ,

ಆಚಾರ - ವಿಚಾರ, ಸ್ಥಳನಾಮ ಇತ್ಯಾದಿ ಅಂಶಗಳನ್ನು ವಸ್ತುನಿಷ್ಠವಾಗಿ ಸಂಯೋಜಿಸಿ ಕೊಡಲಾಗಿದೆ.

೫. ಅಧ್ಯಾಯ - ೬ರಲ್ಲಿ ನಾಡಿನಲ್ಲಿರುವ ರೇವಣಸಿದ್ಧರ ಪುಣ್ಯಕ್ಷೇತ್ರಗಳ ಪರಿಚಯವಾಗಿದೆ. ಇಲ್ಲಿಯವರೆಗಿನ ಸಾಹಿತ್ಯ ಮತ್ತು ಕ್ಷೇತ್ರಕಾರ್ಯವನ್ನು ಆಧರಿಸಿ ಪುಣ್ಯಕ್ಷೇತ್ರಗಳ ಪರಿಚಯವನ್ನು ಮಾಡಲಾಗಿದೆ.

೬. ಅನುಬಂಧಗಳಲ್ಲಿ ರೇವಣಸಿದ್ಧರನ್ನು ಉಲ್ಲೇಖಿಸುವ ಭಾವಚಿತ್ರ ಶಾಸನಪಾಠ ಪ್ರಾಸಂಗಿಕವಾಗಿ ಕನ್ನಡ ಕಾವ್ಯಗಳಲ್ಲಿ ಉಲ್ಲೇಖಿತವಾದ ಕಾವ್ಯಪಾಠ, ವಚನಗಳು ಹಾಗೂ ಸಹಾಯಗ್ರಂಥಗಳ ಮಾಹಿತಿಯನ್ನು ನೀಡಲಾಗಿದೆ.

ಒಟ್ಟಾರೆ 'ರೇವಣಸಿದ್ಧರು : ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ರಚನೆಯಾದ ಈ ಮಹಾಪ್ರಬಂಧ ಬಸವ ಪೂರ್ವಯುಗದ ಶರಣನೊಬ್ಬನ ವ್ಯಕ್ತಿತ್ವವನ್ನು ನಿರೂಪಿಸುವ, ಕನ್ನಡ ಕಾವ್ಯಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಿರುವ ಪ್ರಯತ್ನವಾಗಿದೆ. ಜೊತೆಗೆ ಶಾಸನಗಳನ್ನು ಗಮನಿಸಿ ಸಾಹಿತ್ಯ ಮತ್ತು ಶಾಸನಗಳ ಬೆಳಕಿನಲ್ಲಿ ವಿಶ್ಲೇಷಣೆಯ ದೃಷ್ಟಿಯಿಂದ ಬೆಳಕಿಗೆ ಬಾರದೆ ಇದ್ದ ರೇವಣಸಿದ್ಧರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸೈದ್ಧಾಂತಿಕವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

"ಮುನ್ನಿನವರು ಹೋದ ದಾರಿ ಭಯಕಾಣಿರಣ್ಣ
ಬಲ್ಲಾಳನು ವಧುವಿನೊಡನೆ ಸರಸವಾಡಿದಂದಿಂದ ಭಯಕಾಣಿರಣ್ಣ
ಸಿರಿಯಾಳನ ಮಗನ ಬೇಡಿದಂದಿಂದ ಭಯಕಾಣಿರಣ್ಣ
ದಾಸನ ವಸ್ತ್ರವ ಬೇಡಿದಂದಿಂದ ಭಯಕಾಣಿರಣ್ಣ
ಅಘಟಿತ ಘಟಿತರು ವಿಪರೀತ ಚರಿತರು
ಕೂಡಲಸಂಗನ ಶರಣರು ನಡೆದ ದಾರಿ ಭಯಕಾಣಿರಣ್ಣ" ೫

ಎಂಬ ಬಸವಣ್ಣನವರ ವಚನದಲ್ಲಿಯ ಉಗ್ರಭಕ್ತಿ, ಅಚಲನಿಷ್ಠೆ, ಅದಮ್ಯಕಲಿತನ, ಅಘಟಿತ ಘಟನೆಗಳಿಗೆ ಸಾಕ್ಷಿಯಾಗಿ ನಿಂತಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ರೇವಣಸಿದ್ಧರು.

**ಕೊನೆಟಿಪ್ಪಣಿಗಳು**

೧. ಕನ್ನಡ ಸಾಹಿತ್ಯ ಚರಿತ್ರೆ (ಸಂ), ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ, ಸಂಪುಟ - ೪, ಪು. ೭೪೨
೨. ವೀರಶೈವ ಪಂಚಪೀಠ ಪರಂಪರೆ, ಡಾ.ಚಂದ್ರಶೇಖರ ಮಹಾಸ್ವಾಮಿಗಳು, ಪು. ೬
೩. ವೀರಶೈವ ದರ್ಶನ ಒಂದು ವಿವೇಚನೆ, ಸಂ, ಡಾ.ಆರ್.ಸಿ.ಹಿರೇಮಠ, ಪು. ೩೦೨, ೩೦೩
೪. ಸಮಗ್ರ ವಚನ ಸಂಪುಟ - ೮ (ಸಂ), ಡಾ.ಬಿ.ಆರ್.ಹಿರೇಮಠ, ವಚನ - ೨೩೨, ಪು. ೬೯
೫. ಸಮಗ್ರ ವಚನ ಸಂಪುಟ - ೧ (ಸಂ), ಡಾ. ಎಂ.ಎಂ.ಕಲಬುರ್ಗಿ, ವಚನ - ೧೪೭, ಪು. ೩೯

# ಅನುಬಂಧ

೧. ವಚನಗಳು

೨.ಶಾಸನಪಾಠ

೩. ಕಾವ್ಯಪಾಠ

೪.ಛಾಯಾಚಿತ್ರ

೫.ಗ್ರಂಥಋಣ

## ಅನುಬಂಧ ೧

# ವಚನಗಳು

## ಅಕ್ಕಮಹಾದೇವಿ

೧

ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ
ಇಂಗಿತವೇನೆಂದು ಬೆಸಗೊಂಬರಯ್ಯ
ಅವರ ನಡೆಯೇ ಆಗಮ, ಅವನ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನಬಹುದೆ ಅಯ್ಯಾ?
ಅದೆಂತೆಂದಡೆ ಸಾಕ್ಷಿ
"ವೃಕ್ಷಾದ್ಭವತಿ ಬೀಜಂ ಹಿ ತದ್ ವೃಕ್ಷೇಲೀಯ ತೇಪುನಃ
ರುದ್ರ ಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ ||
ಎಂಬುದಾಗಿ
ಅಂಕೋಲೆಯ ಬೀಜದಿಂದಾಯಿತ್ತು ವೃಕ್ಷವು
ಆ ವೃಕ್ಷ ಮರಳಿ ಆ ಬೀಜದೊಳಡಗಿತ್ತು
ಆ ಪ್ರಕಾರದಲ್ಲಿ ಲಿಂಗದೊಳಗಿಂದ ಪುರಾತನರುದ್ಭವಿಸಿ
ಮರಳಿ ಆ ಪುರಾತನರು ಆ ಲಿಂಗದೊಳಗೆ
ಬೆರಸಿದರು ನೋಡಯ್ಯ
ಇಂತಪ್ಪ ಪುರಾತನರಿಗೆ ನಾನು ಶರಣೆಂದು
ಹುಟ್ಟುಗೆಟ್ಟೆನಯ್ಯ ಚೆನ್ನಮಲ್ಲಿಕಾರ್ಜುನ

೨

ಪೃಥ್ವಿಯಗೆಲಿದ ಏಲೇಶ್ವರನ ಕಂಡೆ
ಭಾವಭ್ರಮೆಯ ಗೆಲಿದ ಬ್ರಹ್ಮೇಶ್ವರನ ಕಂಡೆ
ಸತ್ವರಜತಮ ತ್ರಿವಿಧವ ಗೆಲಿದ ತ್ರಿಪುರಾಂತಕನ ಕಂಡೆ

೨

ಬಸವಣ್ಣನೆನ್ನ ಅಂಗ, ಮಡಿವಾಳನೆನ್ನಮನ
ಪ್ರಭುವೆನ್ನ ಪ್ರಾಣ, ಚೆನ್ನಬಸವನೆನ್ನ ಕರಸ್ಥಲದಲಿಂಗ
ಘಟ್ಟಿವಾಳನೆನ್ನ ಭಾವ, ಸೊಡ್ಡಳಬಾಚರಸನೆನ್ನ ಅಕ್ಕರು,
ಸತ್ಯಕ್ಕನೆನ್ನ ಮುಕ್ತಿ, ನಂಬಿಯಕ್ಕನೆನ್ನ ನಿಶ್ಚಯ
ಅಲ್ಲಾಳಿಯಕ್ಕನೆನ್ನ ಸಮತೆ, ಅನಿಮಿಷನೆನ್ನ ನಿಶ್ಚಲ
ನಿಜಗುಣನೆನ್ನ ಕ್ಷಮೆ, ರೇವಣಸಿದ್ದಯ್ಯ ದೇವರೆನ್ನ ನೇತ್ರ
ಸಿದ್ಧರಾಮ ತಂದೆಗಳೆನ್ನ ನೇತ್ರದ ದೃಕ್ಕು
ಮರುಳಸಿದ್ಧಯ್ಯ ದೇವರೆನ್ನ ಶ್ರೋತ್ರ
ಪಂಡಿತಾರಾಧ್ಯರೆನ್ನ ಜಹ್ವೆ, ಏಕೋರಾಮಯ್ಯಗಳೆನ್ನನಾಸಿಕ
ಅಸಂಖ್ಯಾತರೆನ್ನ ಅವಯವಂಗಳು ಪುರಾತನರೆನ್ನಪುಣ್ಯದ ಪುಂಜ
ಏಳುನೊರೆಪ್ಪತ್ತು ಅಮರಗಣಂಗಳೆನ್ನ ಗತಿಮತಿ ಚೈತನ್ಯ
ಸೌರಾಷ್ಟ್ರಸೋಮೇಶ್ವರಾ ಆ ನಿಮ್ಮ ಶರಣರ ಪಡಿದೊತ್ತಯ್ಯ

## ಮಡಿವಾಳ ಮಾಚಿದೇವರು

ಇಂದ್ರಲೋಕದವರೆಲ್ಲರೂ ಸೂತಕಲಾ ಸಂಹಾರಿ ಬಸವಾ ಎಂದೆಂಬರು
ಚಂದ್ರಲೋಕದವರೆಲ್ಲರೂ ಷೋಡಶಕಲಾ ಪರಿಪೂರ್ಣ ಬಸವಾ ಎಂದೆಂಬರು
ಯುಗಕೋಟಿ ಬ್ರಹ್ಮರೆಲ್ಲರೂ ಪರಶಿವಬಸವಾ ಎಂದೆಂಬರು
ಅಷ್ಟದಿಕ್ಪಾಲಕರೆಲ್ಲರೂ ಪರಶಿವಬಸವಾ ಎಂದೆಂಬರು
ಸುರಪಡೆಯಲ್ಲಾ ಅಮೃತಸಾಗರ ಬಸವಾ ಎಂದೆಂಬರು
ನವನಾಥ ಸಿದ್ಧರೆಲ್ಲರೂ ಪರಮ ಘುಟಿಕೆ ಬಸವಾ ಎಂದೆಂಬರು
ಲಂಬೋದರ, ಕುಂಬೋಧರ, ದಾರುಕ, ರೇಣುಕ, ನಾರೀಸುತ
ತಾಂಡವರೆಲ್ಲರೂ ಸಕಲಜೀವ ಚೈತನ್ಯ ಮಾತ್ರ ಬಸವಾ ಎಂದೆಂಬರು
ಓತವರೆಲ್ಲರೂ ಮಾತಾಪಿತ ಬಸವಾ ಎಂದೆಂಬರು
ಒಲಿದವರೆಲ್ಲರೂ ಪ್ರಾಣ ಪರಿಣಾಮಿ ಬಸವಾ ಎಂದೆಂಬರು
ಆನೇನೆಂಬೆನು, ಉಪಮಿಸಬಾರದ ಮಹಾಘನ ಮಹಿಮನ ಕಲಿದೇವರದೇವ ||

## ಹಾವಿನಹಾಳ ಕಲ್ಲಯ್ಯ

ಎನ್ನ ಕಕ್ಷೆಯಲ್ಲಿ ಸ್ವಾಯತವಾದನಯ್ಯ ಶಂಕರದಾಸಿಮಯ್ಯನು
ಎನ್ನ ಕರಸ್ಥಳದಲ್ಲಿ ಸ್ವಾಯತವಾದನಯ್ಯ ಉರಿಲಿಂಗ ಪೆದ್ದಯ್ಯ

ಎನ್ನ ಅಮಳೋಕ್ಯದಲ್ಲಿ ಸ್ವಾಯತವಾದನಯ್ಯ ಅಜಗಣ್ಣನು
ಎನ್ನಮುಖ ಸಜ್ಜೆಯಲ್ಲಿ ಸ್ವಾಯತವಾದನಯ್ಯ ನಿಜಗುಣದೇವರು
ಎನ್ನ ಶಿಖೆಯಲ್ಲಿ ಸ್ವಾಯತವಾದನಯ್ಯ ಅನಿಮಿಷದೇವರು
ಎನ್ನ ಘ್ರಾಣದಲ್ಲಿ ಸ್ವಾಯತವಾದನಯ್ಯ ಏಕೋರಾಮಿತಂದೆಗಳು
ಎನ್ನ ಜಿಹ್ವೆಯಲ್ಲಿ ಸ್ವಾಯತವಾದನಯ್ಯ ಪಂಡಿತಾರಾಧ್ಯರು
ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯ ರೇವಣಸಿದ್ದೇಶ್ವರದೇವರು
ಎನ್ನ ತ್ವಕ್ಕಿನಲ್ಲಿ ಸ್ವಾಯತವಾದನಯ್ಯ ಸಿದ್ಧರಾಮೇಶ್ವರದೇವರು
ಎನ್ನ ಶ್ರೋತ್ರದಲ್ಲಿ ಸ್ವಾಯತವಾದನಯ್ಯ ಮರುಳಸಿದ್ದೇಶ್ವರದೇವರು
ಎನ್ನ ಹೃದಯದಲ್ಲಿ ಸ್ವಾಯತವಾದನಯ್ಯ ಪ್ರಭುದೇವರು
ಎನ್ನ ಭ್ರೂಮಧ್ಯದಲ್ಲಿ ಸ್ವಾಯತವಾದನಯ್ಯ ಚೆನ್ನಬಸವಣ್ಣನು
ಎನ್ನ ಉತ್ತಮಾಂಗದಲ್ಲಿ ಸ್ವಾಯತವಾದನಯ್ಯ ಮಡಿವಾಳಯ್ಯನು
ಎನ್ನ ಲಲಾಟದಲ್ಲಿ ಸ್ವಾಯತವಾದನಯ್ಯ ಸೋಡ್ಡಳ ಬಾಚರಪ್ಪ
ಎನ್ನ ಪಶ್ಚಿಮದಲ್ಲಿ ಸ್ವಾಯತವಾದನಯ್ಯ ಹದಪದಪ್ಪಣ್ಣಗಳು
ಎನ್ನ ಕಂಠದಲ್ಲಿ ಸ್ವಾಯತವಾದನಯ್ಯ ಕಿನ್ನರ ಬೊಮ್ಮಯ್ಯನು
ಎನ್ನ ಸರ್ವಾಂಗದಲ್ಲಿ ಸ್ವಾಯತವಾದನಯ್ಯ ಸರ್ವಗಣಂಗಳು
ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣರ ಪಾದಕ್ಕೆ ನಮೊ ನಮೋ ಎನುತಿರ್ದೆನು

## ಸಿದ್ದರಾಮೇಶ್ವರ

೧

ಬಲ್ಲಿದ ಬಾಣನ ಬಾಗಿಲಕಾವ್ವರವರು ಭೂತಗಳೇನಯ್ಯ
ಅಪ್ಪ ರೇವಣಸಿದ್ಧ ನೀರು ಹೊತ್ತನೆಂಬರು
ನಮ್ಮ ನೀರು ಹೊರುವವರು ಕೂಲಿಕಾರೇನಯ್ಯ?
ಸರ್ವೇಂಷ್ವಾಂ ಹೃದಿ ಸ್ಥಿಲಿಶ್ಚಂದ್ರ ಮೌಲಿ|
ಎಂಬ ಶ್ರುತಿ ವಾಕ್ಯವ ನಂಬು ನಂಬು
ಕಪಿಲಸಿದ್ಧ ಮಲ್ಲಿಕಾರ್ಜುನನ ಮುಂದೆ ಎಲೆ ಮನವೆ

೨

ಮರುಳತನದಲಿ ಭ್ರಮಿಸಿ ಫಲಪದಕೊಳಗಪ್ಪುವನ
ಎತ್ತಿದ ಗುರುಬಸವಣ್ಣ
ಆ ಜ್ಞಾನ ಸಿದ್ಧನನ ಬಜಿಸುವ ಪರಿಯಾಯವಿದೆಂದು
ತೋರಿದ ಗುರು ಬಸವಣ್ಣ
ಸರ್ವಸ್ವಮನೊಪ್ಪಿಸೆ ಎನ್ನ ತನ್ನಂತೆ ಮಾಡಿದ
ಕಪಿಲ ಸಿದ್ಧ ಮಲ್ಲಿಕಾರ್ಜುನ

## ಸಕಲೇಶ ಮಾದರಸ

ಪರುಷಮೃತ ಬಂದು ನಿಂದಲಿಜನ್ಮ ಜಯವಾಗಿದೆ ಧರ್ಮಂಗೆ
ಲಿಂಗ ಜಂಗಮ ಭಕ್ತಿ ಪ್ರಜ್ವಲಿಸದೆ ಸಿರಿಯಾಳಂಗೆ?
ಪ್ರಸಾದವ ಬಿಬ್ಬಿ ಬಾಚಯ್ಯ ಮೆರವುತ ಬಪ್ಪಲ್ಲಿ, ಅರಿವಾಗೆ ನಿಂದಿಸಿದಡೆ
ಹರಿದ ಹತ್ತದೆ ಉರಿಯ ನಾಲಗೆ ಗ್ರಾಮವ ?
ಹರನಿಪ್ಪ ನಿರೂಪನಿಡಿದ ಮಾರ್ಗದಲ್ಲಿ ಮೂರಾರಿಯ ಶರಣರು
ಬಂದು ನಿಂದಲ್ಲಿ ಅರ್ಧಗೃಹಂಗಳುಳಿಯವೆ?
ಸದ್ಯೋಜಾತ ಶರಣರ ಧರೆಯೂ ರಿಯ .....ನಾಲಗೆಯ ನೀಡಿ
ಕಲ್ಯಾಣವನಾಳುವ ಬಿಜ್ಜಳನ ಮುಟ್ಟನಿಂದಡೆ
ಕೋಪಾಟೋಪಂ ಬಿಟ್ಟಕಳದು ಸಾಮಾನ್ಯವಾಗದೆ?
ಶಿವನೊಲಿದ ಸಿದ್ಧರಿಗೆ ಅಂಗದ ಮೇಲೆ ಲಿಂಗವಿಲ್ಲದವನು
ಅಂಗಳವನು ಮೆಟ್ಟಲಾಗದೆಂದಡೆ
ಉರಿಯ ಜ್ವಾಲಯೆ ಬಿಟ್ಟದೆ ಪರಿಹರಿಸದೆ ಕುಂಟಿಗೆಯ ತುದಿಯಲ್ಲಿ
ಪರಮನೊಲಿದ ಶರಣರು ಸ್ವತಂತ್ರ ಮಹಿಮರು ಆದೆಂತೆಂದಡೆ
ಅವರೆದಂತೆ ಅಹುದೆಂದೆಡೆ ಅಂಗದ ಮೇಲೆ ಲಿಂಗ
ಪ್ರತಿಷ್ಠೆಯಾಗದೆ ಶಿವಯೋಗಿ ಸಿದ್ಧರಾಮಯ್ಯಂಗೆ
ಸಕಲಧೂರ್ತ ದುರಿತಂಗಳು ಬಿಟ್ಟೋಡುತ್ತಿದ್ದವು ಸಕಳೇಶ್ವರ ದೇವಾ
ನಿಮ್ಮ ಶರಣರ ದೇವತ್ವಕ್ಕಂಜಿ

## ಮೆರೆಮಿಂಡಯ್ಯಗಳು

ಎನ್ನ ಘ್ರಾಣ ಶುದ್ಧವಾಯಿತಯ್ಯ ಏಕೋರಾಮಿತಂದೆಗಳ ಧರ್ಮದಿಂದ
ಎನ್ನ ಜಿಹ್ವೆ ಶುದ್ಧವಾಯಿತ್ತಯ್ಯ ಪಂಡಿತಾರಾಧ್ಯರ ಧರ್ಮದಿಂದ
ಎನ್ನ ನೇತ್ರ ಶುದ್ಧವಾಯಿತ್ತಯ್ಯ ರೇವಣಸಿದ್ದೇಶ್ವರದೇವರ ಧರ್ಮದಿಂದ
ಎನ್ನ ತ್ವಕ್ಕು ಶುದ್ಧವಾಯಿತ್ತಯ್ಯ ಸಿದ್ಧರಾಮೇಶ್ವರದೇವರ ಧರ್ಮದಿಂದ
ಎನ್ನ ಶ್ರೋತ್ರಿ ಶುದ್ಧವಾಯಿತ್ತಯ್ಯ ಮರುಳಸಿದ್ದೇಶ್ವರ ದೇವರ ಧರ್ಮದಿಂದ
ಎನ್ನ ಹೃದಯ ಶುದ್ಧವಾಯಿತ್ತಯ್ಯ ಸಕಳೇಶ ಮಾದಿರಾಜಯ್ಯಗಳ ಧರ್ಮದಿಂದ
ಎನ್ನ ಅಂತರಂಗ ಶುದ್ಧವಾಯಿತ್ತಯ್ಯ ತೆಲುಗು ಬೊಮ್ಮಯ್ಯಗಳ ಧರ್ಮದಿಂದ
ಎನ್ನ ಬಹಿರಂಗ ಶುದ್ಧವಾಯಿತ್ತಯ್ಯ ಕೇಶಿರಾಜಯ್ಯಗಳ ಧರ್ಮದಿಂದ
ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯ ಬಸವಣ್ಣ, ಚೆನ್ನಬಸವಣ್ಣ, ಪ್ರಭು, ಮಡಿವಾಳಯ್ಯಗಳ ಧರ್ಮದಿಂದ
ಐಘಟದೂರ ರಾಮೇಶ್ವರಾ, ನಿಮ್ಮ ಶರಣರ ಧರ್ಮದಿಂದ ನಾನು ಶುದ್ಧನಾದೆನಯ್ಯ

## ಬಾಲ ಬೊಮ್ಮಣ್ಣ

ಗುರುವಾಗಿ ಬಂದರಯ್ಯ ರೇವಣಸಿದ್ದೇಶ್ವರ ದೇವರು
ಲಿಂಗದಲ್ಲಿ ನಿಬ್ಬೆರಗಾದರಯ್ಯ ಅನಿಮಿಷದೇವರು
ಜಂಗಮವಾಗಿ ಸುಳಿದರಯ್ಯ ಪ್ರಭುದೇವರು
ಪ್ರಸಾದವರ ಕೊಂಡು ಪಥವ ತೋರಿದರಯ್ಯ ಬಿಬ್ಬಿ ಬಾಚಯ್ಯಗಳ
ಲಿಂಗದಲ್ಲಿ ನಿರ್ವಯಲಾದರಯ್ಯ ನೀಲಲೋಚನೆಯಮ್ಮನವರು
ಸೌರಾಷ್ಟ್ರ ಮಂಡಲದಲ್ಲಿ ಮೆರೆದರಯ್ಯ ಓಹಿಲದೇವರು
ಇಂತಿವರ ಒಕ್ಕುಮಿಕ್ಕ ಬಯಲ ಪ್ರಸಾದವಕೊಂಡು ಬದುಕಿದೆನಯ್ಯಾ
ವೀರಶೂರ ರಾಮೇಶ್ವರ

## ಸಂಗನ ಬಸವ

ಚಂಗಣಗಲ ಮಂಟಪದ ರೇವಣಸಿದ್ದೇಶ್ವರಂಗೆ
ನಿರ್ಲಜ್ಜ ಶಾಂತಯ್ಯನೆಂಬ ದೇಶಿಕೇಂದ್ರನಾ ಬೋಧಿಸಿದನು ನೋಡಾ
ಅದೇ ಪ್ರಸಾದವನ್ನು ರೇವಣಸಿದ್ದೇಶ್ವರನೆಂಬ ದೇಶಿ ಕೇಂದ್ರನು
ತಮ್ಮಡಿಗೆರಗಿ ಬಂದ ಶಿವಶರಣರಿಗೆ
ಸ್ವಾನುಭವ ಸೂತ್ರವ ಬೋಧಿಸುತ್ತಿದ್ದರು ನೋಡಾ

## "ನಿಜಗುರು ನಿರಾಲಂಬ ಪ್ರಭುವೆ" ಅಂಕಿತದ ಅಜ್ಞಾನಶರಣನ ವಚನ

ಮತ್ತಂ ಸಾಕ್ಷಿ ಅಪ್ಪಯ್ಯ ಗುರುರಾಯ ಕೇಳು
ಎನ್ನ ಚಿತ್ರವು ಅತ್ತಿಯ ಹಣ್ಣು ನೋಡಯ್ಯ
ಬಿಚ್ಚಿದರೆ ಹುರುಳಿಲ್ಲವಯ್ಯ
ನೀ ಮೆಚ್ಚಿಕೊಂಡೆಯಾದರೆ ಮುಚ್ಚಿಕೊಂಡಿರುವುದಲ್ಲದೆ
ಹುಚ್ಚು ಮತ್ಸರವಾಗುವುದೆಂತು ?
ನಿಮ್ಮಿಚ್ಛೆ ಮಾತ್ರದಿಂದ ಅಚ್ಚಸ್ವಾಸಾದಿಗಳಾದ ಶಿವಶರಣರು
ಎನ್ನ ಅಚ್ಚುಗವನು ವಾಚ್ಯ ಸಂಭ್ರಮವೆಂದು ಮೆಚ್ಚಗಾರಣದಿ
ಬಚ್ಚಿಟ್ಟುಕೊಂಡ ಎಚ್ಚರದಲ್ಲಿ ಕೂಗುತ್ತಿರ್ಪರಲ್ಲದೆ
ಅಯ್ಯಾ ಶಿವಸಮರ್ಪಣವಾಗಲೆಂದು
ಅವಿರಳ ಜ್ಞಾನಾನಂದದಲ್ಲಿ ಭವಿಗಳ ಸಹವಾಸಮರೆತು
ವಿವೇಕತ್ವದಿಂದ ಆ ಮಹಾತ್ಮರು ಎನ್ನನು
ಬ್ರಹ್ಮಮಾನಗಾರನೆಂದು ಹೆಸರಿಟ್ಟು ಕರೆಯಲು

ನಾನವರೊಡನಾಡಿ ಅನುಸ್ಮರಣೆಯನು ಮಾಡಲು
ನೀನಾವ ದೇಶದ ಸುದ್ದಿ ಹೇಳಲು
ಮುಗ್ಧರುಚಿಗೊಂಡು ಜ್ಞಾನ ಪ್ರಕಾಶವಾಗಲು
ಅಬದ್ಧ ಜೀವಿಗಳಿಗೆ ಅಸಾಧ್ಯವಾಗಿ ಕದ್ದಕಳ ಹೆಡಗುಡಿಯುಂಕಟ್ಟಿ
ಮುದ್ದಿ ಲಂಚನುಂಕೊಟ್ಟು ಸುದ್ದಿ ಸುಳಿವಿಲ್ಲದೆ
ಸಿದ್ಧ ಪ್ರಸಿದ್ಧನಾಗಿ ಗುರುರೇವಣಸಿದ್ದೇಶ್ವರನಹುದೆಂದೆನಿಸಿ
ಲದ್ದಿ ಸೋಮಾರಾಧ್ಯರಿಗೆ ಸ್ವಬುದ್ಧಿಯನು ಕೊಟ್ಟು
ಸಭಾಮಧ್ಯದಲ್ಲಿಟ್ಟುಕೊಂಡು ಗುದ್ದಿ ಗುದ್ದಿ ಮುದ್ದಾಡುವದು
ನ್ಯಾಯ ನಿನಗಲ್ಲವೆ ?
ಎಲೆ ಲಿಂಗವೆ ಶಂಭುಲಿಂಗವೆ ನಿಜಗುರು ನಿರಾಲಂಬ ಪ್ರಭುವೆ

## ಅನುಬಂಧ ೨

### ಶಾಸನ ಪಾಠ

### ಕಕ್ಕೇರಿ ಶಾಸನ (ಕ್ರಿ.ಶ. ೧೧೨೭)

ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಕಕ್ಕೇರಿಯ ಕಕ್ಕಯ್ಯನ ಗುಡಿಯ ನವರಂಗದ ಬಲಭಾಗದ ಕಂಬದ ಮೂರು ಮುಖಗಳಲ್ಲಿಯ ಶಾಸನ ಹೀಗಿದೆ.

ಕಂಬದ ದಕ್ಷಿಣ ಮುಖ

೧. ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ
೨. ಮಹಾರಾಜಾಧಿರಾಜ ಪರಮೇಸ್ವರ ಪರಮಭಟ್ಟಾರ
೩. ಕಂ ಸತ್ಯಾಸ್ರಯಕುಲತಿಲಕ ಚಾಳುಕ್ಯಾಭರಣಂ
೪. ಶ್ರೀಮತು ಭೂಲೋಕಮಲ್ಲದೇವರ ವಿಜಯರಾಜ್ಯಮು
೫. ತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ ತಾ
೬. ರಂಬರಂ ಕಲ್ಯಾಣದ ನೆಲೆವೀಡಿನೊಳು ಸುಖಸಂಕ
೭. ಥಾ ವಿನೋದದಿಂದ ರಾಜ್ಯಂಗೆಯ್ಯುತ್ತಮಿರೆ || ಸ್ವಸ್ತಿ ಸಮ
೮. ಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಶ್ಮ
೯. ತೀಪುರವರಾಧೀಶ್ವರಂ ಮಧ್ಯದೇಶಾಧೀಶ್ವರ ಅಹಿಹಯ ವಂ
೧೦. ಶೋದ್ಭವಂ ವಿವೇಕ ವನಜೋದ್ಭವಂ ಕ್ಷತ್ರಿಯ ಪವಿತ್ರಂ
೧೧. ರೂಪಮಾಂಧಾತಂ ನುಡಿದಂತೆ ಗಂಡಂ ಭ್ರಿಗುಮದಾಚಾ
೧೨. ರ್ಯ್ಯಮಾ ಕಾಲಭೈರವ ವಾತಿಗೆದಪ್ಪುವ ಮಂಡಳಿಕರಗಂಡ
೧೩. ಜಗದೊಬ್ಬ್ರಗಂಡ ಗಂಡಭೇರುಂಡುಂ ರಾಯಕಟಕ
೧೪. ಮುಂನಿರುವಂ ಶ್ರೀಮತುಭೂಲೋಕಮಲ್ಲರಾಯನ ಅ
೧೫. ಡರು ನಾಮಾದಿ ಸಮಸ್ತ ಪ್ರುಶಸ್ತಿ ಸಹಿತಂ ಶ್ರೀಮನ್ಮಹಾ
೧೬. ಮಂಡಳೇಶ್ವರಂ ಮಲ್ಲಿದೇವರಸರುಂ ಭೈರವನತಿಯನೊ

ಕಂಬದ ಪೂರ್ವಮುಖ

೧೭. ಸಮಸ್ತ ಗುಣಸಂಪಂನ ಪ್ರಸಂನ ಬೀಡಿಂ ಮುಂನಿರಿವಂ
೧೮. ತೊತ್ತಳದುಳಿವಂ ನರಜಡರ ಕಾಲಂ ಕಿತ್ತ್ರಿಗೆನಲು ನೆರದೆತ್ತಿ
೧೯. ರಿವಂ ಸರಣೆನೆಕಾವಂ ಕಲಿನಾಯಕ ಮುಕದರ್ಪ್ಪಣಂ ಮಂ
೨೦. ಡಳಿಕ ಮರಿದೇವರಹನಂನಂ ಸಾಹಸೋತ್ತುಂಗ ರೇವೆಯ
೨೧. ನಾಯಕ ನಾಮಾದಿ ಸಮಸ್ತ ಪ್ರುಸಸ್ತಿ ಸಹಿತಂ ಶ್ರೀ

೨೨. ಮತು ಕಕ್ಕೇರಿ ಬಂಮೆಯನಾಯಕ ಮಾದೆಯನಾಯ
೨೩. ಕಂ ಸ್ವಸ್ತಿ ಶ್ರೀಮತು ಪ್ಲವಂಗ ಸಂವತ್ಸರದ ಚೈತ್ರ ಸುದ್ಧ ಪಂಚ
೨೪. ಮೆ ಸೋಮವಾರದಂದು ಶ್ರೀ ರೇವೇಸ್ವರದೇವರ ಅಂಗಭೋಗ
೨೫. ಕಂ ಧೂಪಾರಿತಿ ನಿವೇದ್ಯಕಂ ಆಸ್ತಾನದಾಚಾರ್ಯ್ಯ ಬ್ರಹ್ಮರಾ
೨೬. ಸಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ ಊ
೨೭. ರಿಂ ಪಡುವಲು ಕೆರೆಯೊಳಗೆ ಕಕ್ಕೇಸ್ವರದೇವರ ಕೆಯ್ಯ ಕೊಳ
೨೮. ಗದ ಕೆಯಿಂ ತೆಂಕಲು ಸರ್ಬ್ಬನಮಸ್ಯವಾಗಿ ಕೊಟ್ಟ ಕೆಯಿ ಮುಂ
೨೯. ಜನ ಕೋಲು ಮತ್ತರು ೧೩ ಸ್ವಸ್ತಿ ಶ್ರೀಮತು ಕಕ್ಕೇರಿ ಸಾಮಂತ
೩೦. ರಳಿಯ ರೇವೆಯನಾಯಕನು ಮಗ ಬಂಮೆಯನಾಯ
೩೧. ಕ ಮಾದೆಯನಾಕ ಶ್ರೀರೇವೇಸ್ವರದೇವರ ಜೀರ್ಣ್ಣೋ
೩೨. ದ್ಧಾರ ಧೂಪಾರಿತಿ ನಿವೇದ್ಯಕೆಂದು ಹಗರಿಟ್ಟಗೆಯ ಶ್ರೀ
೩೩. ಸ್ವಯಂಭುಯುಗ್ರ ಭೀಮೇಶ್ವರದೇವರ ಮುದಿನೀರ ಕುಮಾ
೩೪. ರೇಸ್ವರದೇವ ಕಕ್ಕೇಶ್ವರದೇವರ ಯಿಂತಪ್ಪ

ಕಂಬದ ಉತ್ತರಮುಖ

೩೫. ಮಹಾಸ್ಥಾನಂಗಳಾಚಾರ್ಯ್ಯ ಸಿದ್ಧರೇವಣದೇವನ ಷಿಸ್ಯ ಬ್ರಹ್ಮರಾ
೩೬. ಸಿ ಪಂಡಿತರ ಕಾಲ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ
೩೭. ಯೂರಿಂ ಮೂಡಣ ಕಲಿದೇವರ ಕೆಯ್ಯ ಕರುಗಳತ್ತಿಗೆ
೩೮. ಯ ಕೆಯ್ಯಿಂ ತೆಂಕ ಸರ್ಬ್ಬನಮಸ್ಯವಾಗಿ ಕೊಟ್ಟ ಕೆಯಿ ಮುಂ
೩೯. ಜನ ಕೋಲ ಮತ್ತರು ೧೩ ಅಂತು ಯರಡುಸ್ಥಳಉಂ
೪೦. ಕೂಡಿ ಯಿಪ್ಪತ್ತಾರು ಮತ್ತರು ಯೀ ದೇವರ ನಂದಾದೀವಿ
೪೧. ಗೆಗೆ ಗಾಣ ೧ ದೇವಮಾನ ೧ ಭಣ್ಣಸಹಿತ ಹೊಂಗೆ ಕೊ
೪೨. ಟ್ಟಲ್ಲಿ ಮಾನ ೧ ಕೊಂಡಲ್ಲಿ ಮಾನ ೧ ಸೆಟ್ಟಿಯರುಂ ಮುಂಮು
೪೩. ರಿದಂಡಂಗಳುಂ ದೇವರ ವೀಳೆಯಕ್ಕೆ ಅಡಕೆ ಹೊಂಗೆ ಕೊಟ್ಟಲ್ಲಿ
೪೪. ೧೦ ಕೊಂಡಲ್ಲಿ ೧೦ ಹನ್ನವಣಿಗ ಸಾಸಿರ್ಬ್ಬರು ದೇವರ ವೀಳೆಯಕ್ಕೆ
೪೫. ಯೆಲೆ ಹೇರಿಂಗೆ ೫೦ ಹೊರಿಗೆ ೨೫ ಹೊತ್ತಳಕ್ಕೆ ೧೨ ದೇವ
೪೬. ರ ಹಿಂದೆ ತೋಂಟ ಮ ೧ ಯೀ ಧರ್ಮ್ಮವಂ ಪ್ರತಿಪಾಳಿಸಿದವರ್ಗ್ಗೆ ವಾರಣಾ
೪೭. ಸಿಯಲು ಕೋಟಿ ಕವಿಲೆಯಂ ಚತುರ್ವ್ವೇದಪಾರಗರಪ್ಪ ಬ್ರಾ
೪೮. ಹ್ಮಣರ್ಗ್ಗೆ ದಾನವಂ ಕೊಟ್ಟ ಫಲಮಕ್ಕು || ಯೀ ಧರ್ಮ್ಮ - ಕಾವ
೪೯. ನೋರ್ವ್ವನಪಾಯಮಂ ಚಿಂತಿಸಿದಂಗೆ ವಾರಣಾಸಿಯಲು ಕೋಟಿ ಕ
೫೦. ವಿಲೆಯಂ ಚತುರ್ವ್ವೇದಪಾರಗರಪ್ಪ ಬ್ರಾಹ್ಮಣರುಮನಳಿದ
೫೧. (ದೋಷಂ ಸಾರ್ಗ್ಗು)೧೮

## ಯಡ್ರಾಮಿ ಶಾಸನ (ಕ್ರಿ.ಶ. ೧೧೫೫)

೧. ಶ್ರೀ ನಮಸ್ತುಂಗ ಶಿರಶ್ಚುಂದಿ ಚಂದ್ರ ಚಾ x x x x x x x x x x
೨. ಭಾಯ ಶಂಭವೇ|| ಸ್ವಸ್ತಿ ಸಮಸ್ತ ಭುವನಾ x x x x x x x x x x
೩. ಜ ಪರಮೇಸ್ವರಂ ಪರಮಭಟ್ಟಾರಕಂ ಸತ್ಯಾ x x x x x x x x x x
೪. ತ್ರೈಳೋಕ್ಯಮಲ್ಲದೇವರ ವಿಜಯರಾಜ್ಯ x x x x x x x x x x
೫. ತಾರಂಬರಂ ಸಲುತ್ತಮಿರೆ ಕಲ್ಯಾಣದ x x x x x x x x x x
೬. ಯುತ್ತಮಿರೆ || ಸ್ವಸ್ತ್ಯನೇಕ ಭಂಗುರ ತರ x x x x x x x x x x
೭. ಯವೇಳಾವನ ಗಂಗಾತೀರ ಪಾರಿಯಾತ್ರ x x x x x x x x x x
೮. ರಂ ಆ ಹೇಹಯ ವಂಶೋದ್ಭವಂ ವಿವೇಕ x x x x x x x x x x
೯. ಜ ಹಂಸ ಸರಸ್ವತೀ ಕರ್ಣ್ಣಾವತ (೦) ಸ ವಾ x x x x x x x x x x
೧೦. ಸರಭ ಭೇರುಂಡ ಮೂವಡಿಗಂಡ ಜ x x x x x x x x x x
೧೧. ದೇವರ ಸಿಡಿಲು || ನಾಮಾದಿ ಸಮಸ್ತ x x x x x x x x x x
೧೨. ಅಲ್ಲಹುಲಿದೇವರಸರು | ಸ್ವಸ್ತಿ ಶ್ರೀ x x x x x x x x x x
೧೩. ಲ್ಲದೇವ ವರ್ಷದ ೭ ನೆಯ ಯುವ ಸಂವ x x x x x x x x x x
೧೪. ವಾರ ನಕ್ಷ (ತ್ರ)ದ ದೆವಸ ಶ್ರೀಮನ್ಮಹಾಮಂಡ x x x x x x x x x x
೧೫. ಲದೇವಿಯರುಂ ಕುಮಾರ ರೇವಣದೇವ x x x x x x x x x x
೧೬. ದೇ ಶ್ರೀಮಲ್ಲಕ್ಷ್ಮಣೇಸ್ವ(ಶ್ವ)ರದೇವರ್ಗ್ಗೆ ಬಿಟ್ಟ ವಿ x x x x x x x x x x
೧೭. ಮನೆಯ ತೇಜ ಸಾಮ್ಯದ x x x x x x x x x x
೧೮. ಮಾರ ಸಮಸ್ತಮೊಳಮಂತ್ತರಿ x x x x x x x x x x
೧೯. ಮಲ್ಲಕ್ಷ್ಮಣೇಸ್ವ(ಶ್ವ)ರ ದೇವರ ಮಠದಾಚಾರ್ಯ್ಯ x x x x x x x x x x
೨೦. ತ ದೇವ ಶಿಷ್ಯ ಪ್ರಶಿಷ್ಯರ x x x x x x x x x x
೨೧. ಚ್ಚಿ ಧಾರಾಪೂರ್ವ್ವಕಂ ಮಾಡಿ x x x x x x x x x x
೨೨. (ಮಾ) x x x x ಯ x x x x x ೯೬

# ಕೊಲ್ಲೂರು ಶಾಸನ (ಕ್ರಿ.ಶ. ೧೧೮೯)

೨೭. -----ಶ್ರೀಮಚ್ಛೇದಿನೃಪೇಂದ್ರ ವಂಶಾಂಬು

೨೮. ಟ್ಟಿರ್ದ್ದಮು ಕುಮಾರ ಗಂಡನಲ್ಲಹುಲಿತ x x x x x ವೇಶಂ ಕಲಿಚಂಡ ಭೂಪನೆಸೆದಂ ಭೂಪಾಳ ಕಾಳಾನಳಂ ಜಲ x x x x x

೨೯. ಯ್ಯನ್ವಯಶಾಲಿ ಮೊನೆ ಎಸೆದ ಚಂದ್ರಂ ಚನ್ನಭೂಪಾಳ ತನೂಜಂ ಜಿತಾಮರ ನಿಂಬ ಮಹಿಪಂ ನಿಂಬಕ್ಷಿತಿಶಾನುಜಂ x x x x x

೩೦. ಬ್ರತಾಶಾವೃತಿ ಕೀರ್ತಿ ಪರಮ ದೇವಾನುಜಂ ವೆನಿಪುದುತ್ತಮದನುಜನ x x x x x ಚರವ ಮನುಜ ಶ್ರೀ ಗೊಗ್ಗಿ ಭೂಪಾಳಕಂ ಅವರಿಂದ ಕಿರಿಯಂ

೩೧. ಭೂಭುವನ ಅಸಂಖ್ಯಾತ ಸೋವಿಭೂಪಂಗ x x x x x || ಆ ಮಹಿಮಾ

೩೨. ಪಂಗೆ ಭೂಪರಸರ್ನರ್ಬನೃಪಾಳ ಮುಂಜಭೂಪಂ x x x x x ದುಜತಾರ್ಯರಸ ಗೊಗ್ಗರಸ ಕಲಿಭಾವಿಸೆ ಬರಿಂಬ ಮಹಿಮೋನ್ನತಗಳೊಡಮುರ್ಜಿದರಂ

೩೩. ತವರರ ಸಂದನುದ್ದಾಮ ಪರಾಕ್ರಮ ಸಗರಮಂಡಳದ್ವಿಮರಿ ಆ ಭೂಮಿಪ || ಆ ನೆಗಳ್ದ ದೇವನೃಪತಿಗೆ ಪ್ರಭೂತಯಶಂ ಮಲ್ಲಿದೇವನ ವಿಖ್ಯಾ

೩೪. ತಂ ಜನಿಸಿದನಾ ನೃಪಾಳತನಯಂ ವಿಭುಸೋವಿದೇವ ಭೂಪಂ ನೆಗಳ್ವಂ || ಅರ x x x x x ರಸನ x x x x x ವೀರಾಗ್ರಣಿಗೊಗ್ಗಿದೇವನೃಪಂ x x x x x

೩೫. ಯಂ ವೀರಂ ವಿಶಿಷ್ಟ ಜನತಾಧಾರಂ ಸಲೆ ನೆಗಳ್ವಲ್ಲಹುಲಿಭೂಪಾಳಂ ಆ ವಿಭುಮುನ್ನತ ಯಶಂ ಆದ ದೇವದೇ x x x x x ಆ ಮನ್ನೆಯ ವ x x x x x

೩೬. ಮಾಡಿಸಿ ಬಳಿಕಂ ಭಾವಿಸುತಂ ಗೊಗ್ಗೇಶ್ವರ ದೇವ ಚತುಕೂಟಭವನಮಂ ಮಾಡಿಸುತಂ || ತದಪತ್ಯ ವಿದಗ್ಧ ಸಕಳಾಧಾತ್ರಿಯಶರನ್ವಯನಾಕಂ x x x x x

೩೭. ಮದಮೆನಿಸಿ x x x x x ನೆಗಳ್ದತಿಮದದಿಂದಂ x x x x x ವೃತ್ತಿಗೆ ಸತತಂ ಶ್ರೀಮನ್ಮಹಾಮಂಡಳೇಶ್ವರಂ ಚಂದರಸರು ತ

೩೮. ಮ್ಮಯ್ಯ ಅಲ್ಲಿಹುಲಿಯರಸು ತನ್ನ ತಂದೆಯವೆಸರಲು ಪ್ರಸನ್ನಗೊಗ್ಗೇಶ್ವರದೇವ ಅಂತಾಯ ಪೆಸರಲು ಸಾ

೩೯. ವಿನಿರ್ಮಡೇಶ್ವರ ದೇವರಂ ಅಕ್ಕಂದಿರ ಪೆಸರಲು ರೇವಣೇಶ್ವರ ಏಚೇಶ್ವರಲಂತುಮಂ ಮುದಂ ಮತ್ತ ತಂಮ

೪೦. x x x x x ಕೆಯಯ್ಯನ ಮಗಂ ತಮ್ಮಣ್ಣನ ಪೆಸರ ಕಂನ್ನೇಶ್ವರ ದೇವರಂ ಅಂತಯ್ದು ಲಿಂಗದೇವರ ಪ್ರತಿಷ್ಠೆಯಂ ಮಾಡಿರಲಾ ದೇವರ ವೈ

೪೧. ತ್ತಿ ಪಡೆಯಲು ಮಂನ್ನೆಯಂ ಚನ್ದಿಮರಸರು ಸಗರ ಮುನ್ನೂರು ಬಾಡದ ಸೌಧರೆ ಮಹಾಪ್ರಭು ಮಲ್ಲರಸಯ್ಯರು

೪೨. ಶ್ರೀ ಮನಮಹಾಪ್ರಧಾನಂ ಬಮ್ಮದೇವ ದಂಡನಾಯಕರಿಗೆ ಬಿನ್ನಪಂಗೆಯ್ದು ದೇವರ್ಗೆ ವೃತ್ತಿಯಂ ಪರಮೇಶ್ವರ ದತ್ತಿಯಾಗಿ ಪಡೆದು

೪೩. ಕುಡೆವಲನಲು ಕಳಚೂರಿಯ ಚಕ್ರವರ್ತಿ ಸೋವಿದೇವಂಗೆ ಬಿನ್ನಪಂಗೆಯ್ದು ಪಡೆದು ಕೊರಲೂರ ಪ್ರಸನ್ನ ರಾಮೇ

೪೪. ಶ್ವರ ದೇವರ ಮುಖ್ಯದಾ ಪಂಚಲಿಂಗ ದೇವರ್ಗೆ ಶಕವರ್ಷ ೧೧೯೧ ನೆಯ ವಿರೋಧಿ ಸಂವತ್ಸರದ ಶ್ರಾವಣ ಸುದ್ಧ ೧೧ ಸೋಮವಾರ ವ್ಯತಿಪಾತ

೪೫. ಸೋಮಗ್ರಹಣದಂದು ಕೊರಲೂರ ಪ್ರತಿಷ್ಠದ ಕೊನ್ನದಸಳೆಯ ಉಭಯ ಸ್ವಾಮ್ಯಮಂ ಶ್ರೀ ರಾಮೇಶ್ವರ ಅಲೇಶ್ವರ ದೇವರ ಮ

೪೬. ಠದಾಚಾರ್ಯ ರಾಮೇಶ್ವರದೇವರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿ ಪ್ರಸನ್ನ ರಾಮೇಶ್ವರ ದೇವ ಸಾಯಿ ನಿರ್ಮಡೇಶ್ವರ ವೆಸ x x x x x

೪೭. x x x x x ಶ್ವರ ದೇವರ ಏಲೇಶ್ವರ ದೇವರ ಮಠದಾಚಾರ್ಯ ಮಾಡಿಕೊಟ್ಟರು ||
ಹಿರಿಯ ಸೋಮೇಶ್ವರ ದೇವರ ಮಠದಾಚಾರ್ಯರಿರ್ಗೆ x x x x x
೪೮. ಕಾಲಕರ್ಚಿ ಧಾರಪೂರ್ವಕಂ ಮಾಡಿ ಕಂನ್ನೆಶ್ವರ ದೇವರ ಮಠದಾಚಾರ್ಯ
ಮಾಡಿ ಕೊಟ್ಟರು x x x x x ಸ್ಥಳದ ಪ್ರಸನ್ನಗೊಗ್ಗೇಶ್ವ
೪೯. ರ ದೇವರಿಗಂ ಸಾಯಿನಿರ್ಮಡೇಶ್ವರ ದೇವರಿಗಂ ರೇವಣೇಶ್ವರ ದೇವರಿಗೆ
ಸಿದ್ದೇಶ್ವರ ದೇವರಿಗಂ ಕಂನ್ನೆಶ್ವರ ದೇವರಿಗಂ x x x x x ಬಾರಿ
೫೦. x x x x x ಯಂ ದೂರ ಪಂಚಲಿಂಗ ದೋವರೊಳ್ಳದಾಚಾರ್ಯರು ದೇವರ
ಪೂಜಾ ಪುನಸ್ಕಾರ ನಂದಾದೀವಿಗೆ ಖಂಡಸ್ಪುಟಿತ ಜೀರ್ಣೋದ್ಧಾ
೫೧. ರ ಚೈತ್ರ ಪವಿತ್ರಾರೋಪಣ ಅಂಗಭೋಗ ರಂಗಭೋಗಕಂ ಬಂದ
ತಪೋಧನರಶನಾಚ್ಛಾದನ ನೇವಿದ್ಯ ದಾನನಿತು ಮಾಳ ಕೊರಲೂರ ಸರ್ಬನಮಶ್ಯ
೫೨. ವಾಗಿ ಕೇರಿಯ ಸಾಮ್ಯ ದೇವಂಗಳು ಪ್ರತಿಪಾಳಿಸುವರು || x x x x x
೫೩. ಟಿಮುಮಂ ಪಂಚಲಿಂಗ ದೇವರಕ್ಕೆ ಮಾಡುವರು ಅಲ್ಲಿಯ ಮೂಳದೇವಸ್ಥಾನದ
ಬ್ರಹ್ಮಪುರಿಯ ಮುನ್ನ x x x x x
೫೪. x x x x x ಮಂನ್ನೆಯ ಸೋಮಪ x x x x x ವೊಲನು ಪ್ರಸನ್ನ ರಾಮೇಶ್ವರ
ಕಾಲದ x x x x x ಲಿಗೆ ದೇವವಂಶಾಸನದ ಬಿಟ್ಟ x x x x x

# ಹೋತಗಲ್ ಶಾಸನ (ಕ್ರಿ.ಶ. ೧೧೭೫)

೧. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀವ
೨. ಲ್ಲಭ ಮಹಾರಾಜಾಧಿರಾಜ ಪರಮೇಶ್ವರ
೩. ಪರಮ ಭಟ್ಟಾರಕಂ ವೀರಸೋಮೇಶ್ವರದೇವರುಂ ಸ್ವಸ್ತಿ ಶ್ರೀ
೪. ಮತು ಸೋವಣರದೇವರ ಪಾದಪಮಕಜಭ್ರಮ
೫. ರ ಕಳಚೂರ್ಯರಾಜ್ಯ ನಿರ್ಮ್ಮೂಳನ ಚಾಳುಕ್ಯರಾಜ್ಯಮುದ್ಧ
೬. ರಣನು ರಾಯ ದಂಡನಾಥಗಳಂಕಾರಂ
೭. ಮಹಾಪ್ರಚಂಡ ದಂಡನಾಯಕ ವರ ಕುಮಾರ ಬಮ್ಮಿದೇವ
೮. ರಸರು ಸ್ವಸ್ತಿ ಶ್ರೀಮತು ಮಹಾಮಂಡಳೇಶ್ವರ ನಾವಾರಗರ
೯. ಪಲ್ಲವ ಮರ X ದೇವರಗಳ X X ಆ ಮಹಾದೇವ ಲಬ್ಧವರ
೧೦. ಪ್ರಸಾದ ಅಲ್ಲಪುಲಿದೇವರಸನುಂ ಸ್ವಸ್ತಿ ಶ್ರೀಮದ
೧೧. ಣಿಮಾದ್ಯಷ್ಟಗುಣ ಸಂಪನ್ನರುಳಶ್ವಜ್ಞಾನಪ್ರ (ಗ ಅ)ರು
೧೨. ಕೃ X ಸಿದ್ಧಶಿವಯೋಗಿ ಶಾನ್ತಿಮಯ್ಯಂಗಳ
೧೩. ಭೂನುತಮಪ್ಪ ಸಿರಿವೊಳಲ ಶಾನ್ತೀಶ್ವರದೇವರ (ಸಿದ್ಧೇ)
೧೪. ಶ್ವರ ದೇವರ ದೇವಕಾರ್ಯ್ಯ ನಡವನ್ತಾಗಿ ಸಿದ್ಧರೇವಣ
೧೫. ಯ್ಯಗಳ ಪಾದಪ್ರಕ್ಷಾಲನ ಮಾಡಿ ಸೌಧೂರೆ ಬಮ್ಮ
೧೬. ಯ್ಯ ಮುಖ್ಯ ಸಮಸ್ತ ಆಶ್ರಾಯತರು ಸಗರವ್ಯೆನೂರುಂ
೧೭. ಬಾಡದ ಬಳಿಯ ಬಾಡ ಹೋತಂಗಲ್ಲಂ ತ್ರಿಭೋ
೧೮. ಗಾಭ್ಯಂತರಂ ಸರ್ವ್ವನಮಶ್ಯವಾಗಿ ಧಾರಾಪೂರ್ಬ್ಬಕಂ
೧೯. ಮಾಡಿ ಕೊಟ್ಟರು|| ಸ್ವದತ್ತಂ ಪರದತ್ತಂ ವಾಯೋ
೨೦. ಹರೇಶಿ ವಸುಂಧರಾ ಷಷ್ಠಿರ್ವ್ವರ್ಷ ಸಹಸ್ರಾ
೨೧. ಣಿ ವಿಷ್ಟಾಯಾಂ ಜಾಯತೇ ಕ್ರಿಮಿ||

# ಐವೂರು ಶಾಸನ (ಕ್ರಿ.ಶ. ೧೧೭೬)

ದಕ್ಷಿಣಮುಖ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ (| )
೨. ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ
೩. ಶಂಭವೇ|| ಈಂಗಡಲಿಂಗೆ ಶೀತಕರನೆಂತು ಕುಮಾ
೪. ರಕನೆಂತು ದೇವದೇವಂಗೆ ಮುರಾನ್ತಕಂಗೆ ಕುಸ್ಮಾ
೫. ಯುಧನೆಂತು ಜಯಂತನೆನ್ತು ಸಕ್ರಂಗೆ ತ
೬. ನೂಜನಂತೆ ರವಿದೇವ ಚಮೂಪತಿ ಸಂದ ಕೊಪ್ಪ
೭. ದೇವಂಗೆ ತನೂಜನೆಂದಡದರುಂನತಿಯಂ ಪೊಗಳಲ್ಕೆ
೮. ವೇಳ್ಕುಮೇ|| ವಿನುತಂ ನಾಚಣನಾತನಿಂ ಕಿರಿವ
೯. ವಂ ಕೊಪ್ಪಂ ತದೀಯಾನುಜನ್ಮನವಂ ವಾಂವಣ
೧೦. ನಾತನಿಂದೆ ಕಿರಿಯಾತಂ ರೇವಣಂ ತತು
೧೧. ಕನೀಯನವಂ ಸೋವಣವೆಂಬಿವರ್ಸ್ರ್ಕಳ ವಿದ್ಯಾ
೧೨. ಪಾರಗರ್ಪ್ಪುರ್ಣ್ಯಭಾಜನರಾತ್ಮೋದ್ಭವರೆಂ ೩

# ಕೊಳಕೂರು ಶಾಸನ (ಕ್ರಿ.ಶ. ೧೧೮೦)

೧. x x x x x
೨. ಪೂಜ್ಯಚಾರು ಚರಣಾರವಿಂದ
೩. ಶ್ರೀ ದುಶಯನಿ ಸಹಸ್ರ ಪೂರ್ಣ್ನಮಣಿ ಗಂಗಾಜಳನಿನಿತಕ್ಕವೆಯೋಭಯ
೪. ಹಜ ವಿಶಮವಿಶದ ಪ್ರತಾಪೋದಯನಿಂ ಬಿಷಾರವರಾಗಿ x x x x x
೫. ಘೋಶಣ ಸಮರವಿಭೀಶಣಾಂ ಭಯಲೋಭ (ದುರ್ಲಭಂ)
೬. ಬ್ದಜನಂ ನಿಜಮಾರ್ತ್ತಡ ನೆಲದೊಡೆ ಚಂಡ ಸಕಳ ಲಕ್ಷ್ಮೀ ನಿಜನಿವಾಸ ವಕ್ಷಸ್ಥಳ ವಾ
೭. ಗ್ಯಧೂರಮಣಿ ಗಂಡ ಸ್ಥಳ ಪ್ರಬಳರಿಪು x x x x x ಕದಂಬವಶಿಶಯ
೮. ಧೀರ ಕುಠಾರ ಮಮುಡಳಿಕಗಂಡ ಪೆಂಡಾರ ಮೆದವದ್ವೆರಿಬಳನದ
೯. ದರೆದು ಗೆಲ್ಲ ಪ್ರಚಂಡ ಮೊನೆಮುಟ್ಟಗಂಡ ಭೋಮಗ್ರ ವಂಶನೆ ನಿಭಯ ವಿಭ
೧೦. ಕೆಳವನವರ್ಗ್ಗ ನುತವಿಜಯಲಕ್ಷ್ಮೀಕಾನ್ತ x x x x x x x x x x
೧೧. ನಾ ಕರ್ಣ್ನ ಕುಂಡಳಾಭರಣ
೧೨. ಹ್ರಿದಯ ಸೇನಾನಿಗಳಂಕಮಲ್ಲ ಬಿರುದರ
೧೩. ನಿಕಾರಭ್ಯುದಯ ರವಿಗದೇವನ ಗನ್ಧವಾರಣಮ ಶರಣಾಗತ ವಜ್ರಪಂಜರ
೧೪. ವೈರಿದಿಕ್ಕುಂಜರಂ ಶ್ರೀ ಮದನಂ ತೇಶ್ವರದೇವ ಪಾದಾರಾಧಕರ ಗಧೀರನಾ
೧೫. x x x x x ನಾಮಾದಿ ಪ್ರಶಸ್ತಿ ಸಹಿತಶ್ರೀಮನುಮಹಾಮಂಡಳೇಶ್ವರಂ ದೇ
೧೬. ವರಸರ ವಂಶಾವತಾರಮೆಂತೆಂದಡೆ ||ವ್ರ|| ಸರಸಿಜ ಸಂಭವರಭುವನ
೧೭. ಪಡೆದಾತ್ಮಜನಪ್ಪ ಕಶ್ಯಪಂ ಗರಳಬಿಳದಾರಿಯ
೧೮. ಪುರಪರಮೇಶ್ವರನನಂನ ನಂತನ ಪಡೆದನಾರುಣಿ ತಾ ಜನತರ್ಕ್ಕಾ ವಿ
೧೯. ಕ್ರಮಂ ನಿರಪಮನಿ ಸಲೆ ಕಸ್ತೂರಿ ರಾಣೆಹಯಾ
೨೦. ಪನ:|| ಆ ದಿರದಿತಾಯುರಗಸ್ಥನೆಂಬ
೨೧. ನಿಂದದ ಬಡವಾಗ್ನಿ ಮುಟ್ಟದನಳ ಸುರ
೨೨. ಡೆಯ ತುಳುಕ ವಕಲ ಗದುಣವಾರ್ದ್ಧಿಯಂ
೨೩. ಬುಳು ಜಗರ್ಜ್ಜನಮಿಮೊಮನಾ ಗುಣ್ಪೆರ ಗೇಸ್ವರದಿ ಸುರಗಿರಿ
೨೪. ಬಿಣ್ಪಂಗೆ ರದರ್ಶ್ಧಿಜನ ಕೊಬೆಲೆಯ ದುಣಿಮಾರಂಪಗಿ ಕಾಲನೆಂಬಿ ಪೆಂಪಂ ತಳೆದಿ
೨೫. ರ್ದನುರ್ವ್ವಿಯೊಳು ರೇವರಸಂ || ತೆಲುಗರ ಸೈಂನ್ಯಂ ಲಕ್ಕಬಲವೆತ್ತಿಬರಲು ಇದಿ
೨೬. ರಾಂತ ವೀರರ ಪಲಬರ ಕೊಂದು ದಿಬ್ಯ ತುರಗಂಗಳುಮಂ ಪಡೆದಾಜಿರಂ
೨೭. ಗದೊಳು ಮಲೆವರ ಗಂಡನೊತ್ತರಿಸಲಾ ಬಿರುದೆತ್ತಿದ ಚೌ(ಭೋ)ರಿ ಬಿಳ ಮಾರ್ಬ್ಬಲಮನಿ
೨೮. ದಿರ್ಚ್ಚಿತಂದನೆರಡು ಪಡೆ ನೋಡಲು ದೇವಭೂಭುಜರು ಯಿಯೇ. ಶ್ರೀ ಮನುಮಹಾ
೨೯. ಮಂಡಳೇಶ್ವರ ದೇವರಸರು ಶ್ರೀಮತು ಚಾಳುಕ್ಯ ಚಳುಕ್ಯ ಚಕ್ರವರ್ತ್ತಿ ವೀರ ಸೋಮೇ
೩೦. ಶ್ವರದೇವ ವರ್ಶದ ೨ ನೆಯ ಕ್ರೋಧಿ ಸಂವತ್ಸರದ ವೈಶಾಖದ ಪೌರ್ಣಮಾಸೆ
೩೧. ಸೋಮವಾರದಂದು ಶ್ರೀಮತು ದುರ್ಗ್ಗದ ತಪ್ಪಲ ನದಿ ಪ್ರವಾಹ
೩೨. ದ ಶ್ರೀ ಚಂಡೇಶ್ವರ ದೇವರ ಯಂಗಭೋಗ ರಂಗಭೋಗ ಧೂಪದೀಪನಿವೇದ್ಯ ಖಂ
೩೩. ಡಸ್ಫುಟಿತ ಜೀರ್ಣೋದ್ಧಾರ ಯಿಂಶಿನಿತಕ್ಕಂ ಮೂಲಸ್ಥಾನ ದೇವರ ಕೆಯ್ಯಿಂ
೩೪. ತೆಂಕಲು ಬಿಟ್ಟ ಭೂಮಿ ಕಾಲಡಿಯ ಮತ್ತರು ಯಿಪ್ಪತ್ತನಾಲ್ಕು ೨೪ ಅ
೩೫. ಅಲ್ಲಿಯ ಗ್ರಾಮೇಶ್ ವರ ವಿನಾಯದೇವರ್ಗ್ಗೆ ಕಾಲಡಿಯ ಮತ್ತರು ಆ
೩೬. ರು. ೬ ರೇವಣೇಶ್ವರದೇವರ ಬಡಗಣವೊಳಗೆ ವರ್ದ್ದದಿಂ ಬಡಗಲು ಹಂ
೩೭. ನಿ ಕೆಯ್ಯ ನಿವೇಶನ ಒಂದು ೧ ಅಲ್ಲಿಯ ನಖರ ಹಂನವಣಂಗಳು ಬಿಟ್ಟ
೩೮. ಯ ಸೊಡರೆಣ್ಣೆ| ಸಟ್ಟುಗ ಭತ್ತ ನಾನಾದೇಸಿಗಳು ಬಿಟ್ಟಾಯ ಹೇರಂ
೩೯. ಗೆಯೆಲೆಯಿಪ್ಪತ್ತಯ್ದು ೨೫ ಅಡಕೆ ಹೊಂಗಯ್ದು ೫

೪೦. ಹೊಂಗೆ ಭತ್ತ ಮಾನ ೧ ಯಿಂತೀ ಧರ್ಮ್ಮಮಂ ಪ್ರತಿಪಾಳಿಸಿ
೪೧. ದವರು ಪ್ರಯಾಗೆ ಗಯೆ (ಯ)ಷ್ಟ ಭೋ ತೀರ್ತ್ಥ ವಾರಣಾಸಿಕು
೪೨. ರುಕ್ಷೇತ್ರಂಗಳು ಸುವರ್ಣ್ನಶ್ರೀಂಗಂಗಳಪ್ಪ ಕವಿಲೆಯಾಕಳ ಸುವರ್ಣ್ನ
೪೩. ದಲು ಕೋಡುಂ ಕೊಳಗುಮಂ ಕಟ್ಟಿಸಿ ಕೊಟ್ಟ ಫಳವಂ ಪಡೆ
೪೪. ವರು| ಇದಕ್ಕಾರೋರ್ವ್ವನು ಪ್ರತಿಕೂಲರಾದವರು ಆ
೪೫. ತೀರ್ತ್ಥದಲಾ ಕವಿಲೆಗಹಿತಂ ಚಿಂತಿಸಿದ ಫಳಮಂ ಪಡೆವರು|| ಇಂತಿನಿ
೪೬. ತುಮಾ ಅಲ್ಲಿಯಾಚಾರ್ಯ್ಯ ಮಲ್ಲಿಕರ್ಜಿಯಗ್ಗೆ ಧಾರಾಪೂ
೪೭. ರ್ವ್ವಕವಾಗಿ ಕೊಟ್ಟರು|| ಸ್ವದತ್ತಂ ಪರದತ್ತಂ ವಾಯೋ ಹರೇಶಿ
೪೮. ವಸುಂಧರಾ ಶಷ್ಟಿರ್ವ್ವರ್ಶ ಸಹಸ್ರಾಣಿ ವಿಷಾಯಾಂ
೪೯. ಚಾಯತೇ ಕ್ರಿಮಿ|| ಶ್ರೀ ಶ್ರೀ ಶ್ರೀ ಶ್ರೀ ಶ್ರೀ

# ಬಯಿರಿತ್ತಿ ಶಾಸನ (ಕ್ರಿ.ಶ. ೧೧೮೭)

ತುಮಕೂರು ತಾಲೂಕಿನ ಗುಬ್ಬಿ ಹತ್ತಿರ ಬಯಿರಿತ್ತಿ ಗ್ರಾಮದ ಉತ್ತರಕ್ಕಿರುವ ಜಡೆಮುನಿಯಪ್ಪನ ಬಂಡೆಯ ಮೇಲೆ ಶಾಸನ ಕೆತ್ತಲಾಗಿದೆ. ಅದು ಹೀಗಿದೆ.

ಮುಸಕುಂದ ಮಹಾರುಸಿಯ ಪಿತಾಮ ರೇವಣಸಿದ್ಧಯ

ದೇವರಿದ್ದ ..... ತಾವ ನಾ ಸಿಮ ಮುಸಿಗಳು ಪೂಜೆ

ಮಾಡಿದ ಮುಲತಾಣ

# ಸಿರಿವಾಳ ಶಾಸನ (ಕ್ರಿ.ಶ. ೧೧೮೭)

ಗುಲಬರ್ಗಾ ಜಿಲ್ಲೆಯ ಶಹಪುರ ತಾಲೂಕಿನ ಸಿರಿವಾಳ ಗ್ರಾಮದ ಸಿದ್ದೇಶ್ವರ ದೇವಾಲಯದ ದಕ್ಷಿಣರಂಗಮಂಟಪದಲ್ಲಿ ನಿಲ್ಲಿಸಲಾದ ಈ ಶಾಸನದ ಪಾಠ ಹೀಗಿದೆ.

೧. (ಸ್ವಸ್ತಿ ಸಮಧಿಗತ ಪಂಚಮಹಾಶಬ್ದ) ಮಹಾಮಂಡಳೇಶ್ವರಂ ತಗರನಗರಾ
ಧೀಶ್ವರಂ (ಜೀಮೂತವಾಹ)

೨. ನಾನ್ವಯಪ್ರಸೂತಸೂರ್ಯ್ಯ ಚ(ರ ?)ಘುಜಾತಂ ಶ್ರೀ ಶಿಳಾರವಂಶೋದ್ಭವ
ನರೇಂದ್ರ ವಿಭವಾಮರೇಂದ್ರ (ಡಂಗಾರ)

೩. ಭೇರಿನಿರ್ಗ್ಘೋಷಣಂ ಸಮರವಿಭೀಷಣಂ ವಿದಗ್ಧಮುಗ್ಧಾಂಗನಾಹೃದಯ
ಕುಸುಮಕೋದಂಡ ಕದನಪ್ರಚಂಡ ಚೆಂ

೪. ನಮನ್ನೆಯ ಪನ್ನಗವೈನತೇಯ ವಿರೊಧಿಮಂನ್ನೆಯ ತಾರಕಾಸುರಕಾರ್ತ್ತಿಕೇಯ
ನತಿಪಿಯಮಹಯಾ

೫. ರೂಢಪ್ರೌಢರೇಖಾರೇವಂತ ವಿಜಯಲಕ್ಷ್ಮೀಕಾಂತ ಸುವರ್ಣಗರುಡಧ್ವಜ
ವಿಮಳಕೀರ್ತ್ತಿಧ್ವಜ ಕಾತ್ತ್ಯಾಯನೀದೇವಿಲ

೬. ಬ್ಧವರಪ್ರಸಾದ ಮೃಗಮದಾಮೋದ ಅಳಿಂಮುಂನಿರಿವ ಸೌರ್ಯ್ಯಮಂ
ಮೆರೆವ ಆ ಬಂಟರಭಾವ

೭. ಮರವುಗೆಕಾವ ಆನೆಗನಂಕಾರಿ ರಣರಂಗನೀರಿ ನಿಜದಬೆಡಂಗ ಸಾಹಸೋ
ತ್ತುಂಗ ಶ್ರೀಮದು

೮. ತ್ರರೇಶ್ವರದೇವರ ಪಾದಾರಾಧಕ ಪರಬಳಸಾಧಕ ನಾಮಾದಿ ಸಮಸ್ತಪ್ರಶಸ್ತಿ
ಸಹಿತಂ ಶ್ರೀಮನುಮಹಾಮಂ

೯. ಡಳೇಶ್ವರ ಎಳೆಮೇಲ ಸಿಂಗಿದೇವರಸರುಮ ಅವ್ವೆ ನಾಗಲದೇವಿಯರುಂ ಶ್ರೀಮನು
ಮಹಾಪ್ರಧಾನಂ ಸೇನಾಧಿಪ

೧೦. ತಿಮಹಾಪಸಾಯಿತಂ ರಿಪುಮದಮರ್ದ್ದನಂ ಪ್ರತಾಪರಣಂಗಭೈರವಂ ಶ್ರೀಮತು
ಘಟ್ಟಿಯ

೧೧. ಕೇತಯನಾಯಕನುಂ ಸಮಸ್ತಪರಿವಾರಮುಂ ನಾಡಗ್ರಾಯಿತರುಂ ಶ್ರೀಮತು
ಭಿಲ್ಲಮದೇವರ ಮ

೧೨. ಹಾಪಸಾಯಿತಂ ಅಧಿಕಾರಿ ಪಯ್ಯನಾಯಕರುಂ ಸಕವರುಷಂ ೧೧೧೦ ನೆಯ
ಪ್ಲವಂಗ ಸಂವತ್ಸರ

೧೩. ದ ಭಾದ್ರಪದ ಬಹುಳದಮವಾಸ್ಯೆ ಶುಕ್ರವಾರ ಸೂರ್ಯ್ಯಗ್ರಹಣ ನಿಮಿತ್ತವಾಗಿ
ಎಳೆಮೇಲ

೧೪. ಯ್ಯತ್ತರಿ ಬಳಿಯ ಬಾಡಂ ಮುರುವಡಿಯ ಮಂನ್ನೆಯ ಮೇಲಾಳಿಕೆಯುಂ
ಬಾಹಿರ ಸೀಮೆಯೊ

೧೫. ಳಗಣ ನಿಧಿನಿಧಾನನಿಕ್ಷೇಪಜಲಪಾಷಾಣಮಾಳಾವೃಕ್ಷಗುಲುಮಲತಾವಳಿ ಚತುರಾ
ಘಾಟ

೧೬. ಕಲ್ಲಕಣೆ ಅರುವಣ ..... ದೆರಿ ಮೂಲೆಗರರುವಣ ಅಷ್ಟಭೋಗತೇಜಸಾಮ್ಯ ದಂಡ
ದೋಷ ಕಾಣಿಕೆ ಕಿ

೧೭. ರುಕುಳಾಯದಾಯ ಸರ್ಬ್ಬಯ ಶುದ್ಧವಾಗಿಯೆಂತಿನಿತುವಂ ಶ್ರೀಮದ್ದಕ್ಷಿಣ
ವಾರಣಾಸಿ

೧೮. ಧರ್ಮ್ಮದಮನೆಯಾದಿಪಟ್ಟಣ ಸಿರಿವೊಳಲ ಶ್ರೀಮತು ಸಿದ್ಧಸಾತೇಶ್ವರದೇವರ
ಅಂಗಭೋಗರಂ

೧೯. ಗಭೋಗ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ಶಿವಯೋಗಿಗಳಶನಾತ್ಸಾಧನಕ್ಕಂ ಶ್ರೀಮತು ಸರ್ವ್ವ

೨೦. ದೇವದಯೊಳಗೆ ಶಿವಯೋಗಿ ಶಾ (ನ್ತಿ *) ಮಯ್ಯಂಗಳ ಮಹಿಮೆಯೆಂತೆನೆ || ಕ್ರಿತಯುಗ ತ್ರೇತ

೨೧. ಮೂರನೆಯ ದ್ವಾಪರದೊಳು ನೆಗಳ್ದ ಭೂತೋದ್ಭವರ್ಬ್ಬತಿತ ಬ್ರತಾನುಕಾರಿ ಗಳು ದಿಬ್ಯಸಹಶ್ರಶತಾ

೨೨. ನುಮಬ್ದ ಕಿಂಕರನು ಹರಯಿಬಳಿಕವಾತೆಸೆದೀವನದಂತೆನೆ ಶಾನ್ತಿಮಯ್ಯ ತತುಕ್ಷ

೨೩. ಣದೊಳೆ ಭಕ್ತಿಯ ಪಡದನೇಂ ಕಲಿವೀರನೋ ವೀರಭದ್ರನೋ || ಶ್ರೀಮದಣಿ ಮಾದ್ಯಷ್ಟಗುಣಸಂ

೨೪. ಪಂನರು ತತ್ವಜ್ಞಾನಪ್ರಸನ್ನರುಂ ಷಡಂಗಯೋಗಸಂಗದರುಂ ಸಸಾರಭ್ಯಸಂಗ ನಿಸಂಗರುಮಪ್ಪ ಶಿವಯೋ

೨೫. ಗಿ ಶಾನ್ತಿಮಯ್ಯದೇವಂಗಳ ಪುತ್ರ ರೇವಣದೇವಯ್ಯಂಗಳ ಪ್ರಸಿದ್ಧತಿಕೆಯೆಂತೆನೆ || ಒಬ್ಬಳ ತಂಡುಳದಿಂ

೨೬. ದಮ್ಮಬ್ಬೀಶನ ರಾಯಕಟಕಮಂ ತಣಿಪಿದನಾ ಸರ್ಬ್ಬಜ್ಞಮೂರ್ತ್ತಿ ಜಗದೊಳ ಗೊರ್ಬ್ಬನೆ ಶಿವಸಿಧ ಚ

೨೭. ಕ್ರಿ ರೇವಣದೇವಂ || ತೊರೆ ತುಂಬಿ ಬಂದಡರೆ ತಾ ಹರಗೋಲುಂ ತನ್ನಿಮೆನ ದಾಜ್ಞಾಬಲದಿಂ ತೊರೆ

೨೮. ಯಂ ದಾಂಟುವನಿಂತೀ ಕುರುಪಿನ ತತುಕಾರನೀ ರೇವಣದೇವಂ || ಅಂದೊಂಮ್ಮೆ ಸಿದ್ಧನೆಂದೊಡೆ

೨೯. ನಿಂದಿಸಿದರು ಮನುಜರಲ್ಲ ಧರೆ ಭೂರ್ಭುಗಿಲೆನೆ ಬೆಂದುದು ಸತ್ವರಜಂತಮ ವಂದಿನ ಸಿದ್ಧಂ ಪ್ರ

೩೦. ಸಿದ್ಧ ರೇವಣದೇವಂ || ಮುನ್ನೊಮ್ಮೆ ಸಿದ್ಧನಾಗಿಯುವನ್ನದ ತವನಿಧಿಯ ತೋರೆ ಲೋಕದೊಳಂ

೩೧. ಮತ್ತಿನ್ನೊಮ್ಮೆ ನೋರ್ಪ್ಪನೆಂದುಂ ತಂನಂ ತಾನರಪ್ಪ ನೆಗಳ್ದ ರೇವಣದೇವಂ || ತಾರದ ಮಂದ್ರದ ಮಧು

೩೨. ರದ ಸಾರಾಯದ ಸಪ್ತಸರದಿಂದ ನರೇಶ್ವರನಂ ಭೋರೆನೆ ಕೇಳಿಸುತಿಪ್ಪ ಧಾರಿಣಿ ತಳದೊಳಗೆ ನೆಗಳ್ದ ರೇವಣದೇವ ||

೩೩. ನ್ರಿತ್ಯಕ್ಕೆ ನಿಂದಡೆವೆ ಬಲದತ್ಯದ್ಭುತ ಮರುಳತಂಡ ರೌದ್ರಮಿದೆನಲುಂ ಪ್ರತ್ಯಕ್ಷ ಲಿಂಗ ಬೆಮರಲು ಸತ್ಯ

೩೪. ದಿಂದತ್ಯಂತ ಸಿದ್ಧರೇವಣದೇವ || ಅನ್ತಾ ಭೂಲೋಕ ಸಿದ್ಧಪ್ರಸಿದ್ಧರಪ್ಪ ರೇವಣ ದೇವಯ್ಯಂಗಳ

೩೫. ಪಾದಪ್ರಕ್ಷಾಳನಂ ಮಾಡಿ ತ್ರಿಭೋಗಾಭ್ಯಂತರ ಸರ್ಬ್ಬನಮಶ್ಯವಾಗಿ ಧಾರಾ ಪೂರ್ಬ್ಬ

೩೬. ಕಂ ಮಾಡಿ ಕೊಟ್ಟರು ಮಂಗಳ ಮಹಾ ಶ್ರೀ ಶ್ರೀ ... ಯ ಪ್ರಭುಗಳು ಎಂಟು ಹಿಟ್ಟುಗ

೩೭. ಳಮಯ್ಯಂ ........... ಂಭು ಸೋಮನಾಥದೇವರಾಣೆಯ . .

೩೮. ಲೂರು ಸಾವಿದಿಗೆಯೂರಾ .......... ಮಿ ಪೂರ್ಬ್ಬಮರ್ಯ್ಯಲದೆ || . .

೩೯. ತ್ರಂ ಪರದತ್ತಂ ವಾಯೋಹ ............. ಣಿ ವಿಷ್ಟಾಯಾ . .

೪೦. ತೆ ಕ್ರಿಮಿ || ................ ಲನಿಯೋಭವ .......

೪೧. ವಿನಃ ಪಾರ್ತ್ಥಿ .........:

## ಅವ್ವೇರಹಳ್ಳಿ ಶಾಸನ (ಕ್ರಿ.ಶ. ೧೧೯೩)

ಆಚಾರ್ಯ ರೇವಣಸಿದ್ಧರ ಹಾಗೂ ಆಚಾರ್ಯ ಮರುಳಸಿದ್ಧರ ಸಂಬಂಧವನ್ನು ಹೇಳುವ ಅವ್ವೆರಹಳ್ಳಿ ಶಾಸನ ಹೀಗಿದೆ.

೧. ಆನಂದ ಸಂವಚರದ ಆಗೊರತ್ರಿಗೆ

೨. ಹಜರ ಗವಿ ಬಗಿಲ ತೆಗೆದು ಮುಲೋ

೩. ಕ ಅರಿವಹಿ ಪವಡವ ತೋರಿದರು

೪. ರೇವಣಸಿದ್ಧೇಶ್ವರನ ಮಗ

೫. ಮರುಳಸಿದ್ಧೇಶ್ವರನು ......

# ನಡಲಾ ಶಾಸನ (ಕ್ರಿ.ಶ. ೧೨೦೦)

೧. ಶ್ರೀಮತು ರೇವಣೇಸ್ವರ ದೇವರ
೨. ನಿವೇದ್ಯಕ್ಕೆ ಸ್ವಯಂಭು ದೇ
೩. ವರ ಗರ್ದಿಯಿಂ ತೆಂಕಲು ಬ
೪. ರ x x x x x x ರ ಮಗ
೫. x x x x x ಮಾಣಿಕೇ
೬. ಸ್ವ(ಶ್ವ)ರದ ಗಡಿಂಬದ
೭. x x ಗರ್ದೆ ಮತ್ತರು ೧೦೦
೮. x ಮ ೭೫೦

# ಪುಳಜೆ ಶಾಸನ (ಕ್ರಿ.ಶ. ೧೨೦೦)

ಮಹಾರಾಷ್ಟ್ರದ ಪಂಡರಪುರ ಹತ್ತಿರದ ಪುಳಜೆಯಲ್ಲಿ ರೇವಣಸಿದ್ಧರ ಹೆಸರಿನಲ್ಲಿರುವ ಪವಿತ್ರ ತೀರ್ಥವನ್ನು ಅಮಗಿದೇವನ ಈ ಶಾಸನದಲ್ಲಿ ಹೀಗೆ ಉಲ್ಲೇಖಗೊಂಡಿದೆ.

..... ಶ್ರೀಸಿದ್ಧಸೋಮನಾಥ ದೇವರ್ಗೆ ಅಸುರಿಯಲ್ಲಿ

ಡವಳ ಪಳದ ಬಟ್ಟೆ ಬಿವಡಳೆಯಂ? ಪಡುವಲು

ವೃತ್ತಿ ೧ ಜಕ್ಕಿಯರ ಬಾವಿ ರೇವಣಮಡು

ಹೂದೋಟ ೧ ..... ಸರ್ವ ನಮಸ್ಯ ಧಾರಾಪೂರ್ವಕಂ

ಮಾಡಿಕೊಟ್ಟರು .....

## ಇಂಗಳಗಿ ಶಾಸನ (ಕ್ರಿ.ಶ. ೧೨೦೯)

೧. ಶ್ರೀ ಓಂ ನಮಃ ಶಿವಾಯ | ನಮಸ್ತುಂಗ ಶಿರಶ್ಚುಂಬಿ
೨. ಚಂದ್ರಚಾಮರ ಚಾರವೇ | ತ್ರೈಳೋಕ್ಯ ನಗರಾರಂಭ ಮೂ
೩. ಲಸ್ತಂಭಾಯ ಶಂಭವೇ|| ಸ್ವಸ್ತಿ ಸಮಸ್ತ ಭುವನಾಶ್ರಯಂ
೪. ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪ್ರ
೫. ತಾಪ ಚಕ್ರವರ್ತಿ ತ್ರಿಭುವನಮಲ್ಲ ಸಿಂಗಣದೇವರ ವಿಜ
೬. ಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾ
೭. ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ದೇವಗಿರಿಯ
೮. ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂ
೯. ಗೆಯ್ಯುತ್ತಮಿಲೆ ಶ್ರೀಮನ್ಮಹಾಪ್ರಧಾನಂ ಯಾದ
೧೦. ವ ರಾಜ್ಯ ಸಮುದ್ಧರಣಂ ಸೇವುಣರಾಯ ಶ್ರೀ
೧೧. ಸಿಂಗಣದೇವರ ದಕ್ಷ ಭುಜಾದಂಚ ನಾ
೧೨. ಯಕ ನಾರಾಯಣನು ಲಕ್ಷ್ಮೀದೇವರಸ ದಂಡನಾಯಕರು
೧೩. ಅನೇಕ ದೇಶಾ ದೇಶಂಗಳಂ ಆಳುತ್ತ ಸಕಳಧರ್ಮಾಧರ್ಮ
೧೪. ಗಳಂ ಪ್ರತಿಪಾಳಿಸುತ್ತಮಿಲೆ ಸ್ವಸ್ತಿ ಸಮಧಿಗ
೧೫. ತ ಪಂಚ ಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಷ್ಮತೀ
೧೬. ಪುರವರಾಧೀಶ್ವರಂ ಅಹಿಂಹಯ ವಂಶೋದ್ಭವಂ
೧೭. ವಿವೇಕ ವನಜೋದ್ಭವಂ ದಾಯಿಗ ಗಿರಿವಜ್ರದಂಡಂ ನರ
೧೮. ನಂಕ ಸೂನೆಗಾರ ದಳದಂಕಕಾರ ವೈರಿಮಂಡಳಿಕ ಗಂಡಗೋ
೧೯. ಪಾಳ ಶ್ರೀ ಲೋಕನಾಥದೇವರ ದಿಬ್ಯಪಾದಾರಾಧಕ
೨೦. ನುಂ ಮಹಾಮಂಡಳೇಶ್ವರಂ ಆನೆಗದೇವ ಪ್ರಿಯಪುತ್ರನು
೨೧. ಗಂಡು ಭೂರಿಸ್ತವನಿಮಪ್ಪ ವೀರ ಬಿಜ್ಜರಸರು ಮಾಡಿದ ಧರ್ಮ
೨೨. ವಂ ಸಮಸ್ತ ಲೋಕಾ ಲೋಕ ಚಕ್ರವರ್ತ್ತಿಯಿಂ ಸಾಸ್ವ
೨೩. ಯಶ್ವರ್ಯ್ಯ ಮೂರ್ತ್ತಿಯುಮಪ್ಪ ಶ್ರೀ ಮಹಾಲಿಂಗ
೨೪. ದೇವರಮುರಿಗಣ್ಣಜ್ವಾಳೆಯಿಂದುದಯಿ
೨೫. ಸಿದ ಮಹಾವೀರ ಗಣಂಗಳ ಸಂಖ್ಯಾತರ ಮಹಿಮೆ
೨೬. ಯೆಂತೆಂದೊಡೆ || ಕಂದ || ಕರಕರನುಂ ಚೆಂಡಾಡುವರು
೨೭. ರಗಪ್ಪನಂ ಕಿಲರಲಿಟ್ಟು ಬಿಟ್ಟಿಕ್ಕುವರಾ ಗಿರಿಕುಳಮಂ ಕಿತ್ತೆತ್ತುಮ
೨೮. ರುಯೊಳು ಪರಿ ವೈರಿಯ ನಾಡುತಿರ್ಪ್ಪರು ಸರಣ
೨೯. ರು|| ಸ್ವಸ್ತಿ ಸಕನೃಪವರ್ಷದ ೧೧೩೧ ನೆ
೩೦. ಯ ಸುಕ್ಲ ಸಂವತ್ಸರದ ಅಶ್ವಯುಜ ಸುದ್ಧ ತ್ರ
೩೧. ಯೋದಸಿ ಸೋಮವಾರದಂದು ಶ್ರೀಮನ್ ಮಹಾ
೩೨. ಮಂಡಳೇಶ್ವರಂ ಬಿಬ್ಬರಸರು ಅರಲು ಮುಂಬೂರರ ಬ
೩೩. ಳಿಯಬಾಡ ಯಿಂಗುಳಿಗೆಯ ಪ್ರಭುನಾಗರಸ ವೆರ್ಗ್ಗಡೆ
೩೪. ಬಸವಯ್ಯನಲ್ಲಿಯ ಪಂಚಮಠ ಯಿಂತಿವರೇಕಸ್ತರಾಗಿ ಶೃ
೩೫. ಮೂಲಸ್ತಾನದೇವರ ಪಾದಾರಾಧಕೆಯರಪ್ಪ ಕ್ಷೇತ್ರ ಸಂನ್ಯಾ
೩೬. ಸಿ ಮಹಾನುಭಾವೆಯನುಮಪ್ಪ ಚಲವ್ವೆಯಗಳ ಕಾಲಂ ತೊ
೩೭. ಳದು ಧಾರಾಪೂರ್ಬ್ಬಕಂ ಮಾಡಿ ಶ್ರೀ ಸಿದ್ಧರಾಮನಾಥ ದೇವರ್ಗ್ಗೆ
೩೮. ದೇವರ್ಗ್ಗೆದ ನಗಣ ಸಿಂಗಿದೇವ ಬಿಚ್ಚೇಶ್ವರ ದೇವರು

೩೯. ರೇವಣೇಶ್ವರ ಕಂನ್ನೇಶ್ವರ ಕೇದಾರದೇವರು ನಾಗೇಶ್ವರ ಯಿಂ
೪೦. ತೀ ಸಕಳ ಲಿಂಗದೇವರಿಗೆ ಶ್ರೀ ಗುಡ್ಡವ್ವೆಗಳು ಮುಖ್ಯ
೪೧. ವಾಗಿ ಗಣಮಠಕ್ಕೆ ಕೊಟ್ಟವೃತ್ತಿ ಮನೆಯ ನಿವೇಶಣ
೪೨. ನಾಲ್ಕು ಮೂಡಣ ಹೊಲದಲು ಹಿರಿಯ ಕೋಲಮತ್ತರು ೨
೪೩. ಬಡಗಣ ಹೊಲದಲು ಹರಿಕಾರರಿಗೆ ಕಾಲಡಿಯ ಮತ್ತರು ೪
೪೪. ಬಡಗಲು ಕೋಟೆಯ ಕೆಳಗೆ ಹೂದೋಟ ಮತ್ತರು ೧ ದೀವಿಗೆಗೆ
೪೫. ಸರ್ವನಮಸ್ಯ ಗಾಣ ೧ ವೂರೊಳಗಣ ಗಾಣದಲು ಗಾಣಾ
೪೬. ಯಲೆ ಸೊಳಸ ೧ ದೇವರೊರಗರಾಶಿಯಲು ಕೊಳಗ ೧
೪೭. ಎಲೆಯ ಹೇರಿನ ಸುಂಕ ಷೇಡಸ ಗಟ್ಟೊಳಗಾಗಿ ದೇವರಿಗೆ ಸ
೪೮. ಲಿಸುವರು ಶ್ರೀ ತೊನಸೆಯ ಹಳ್ಳಿಯಲು ಮೇಲಕುಂದೆ ಈದ್ದು
೪೯. ದಂ ಬೋವನು ಗಣಮಠಕೆ ಕೊಟ್ಟ ಭೂಮಿ ತರಲಹಳ್ಳಿಯ
೫೦. ಕಾಚವ್ವೆದೂರಗೌಡ ಮುಖ್ಯವಾಗಿ ಧಾರಾಪೂರ್ಬಕಂ
೫೧. ಮಾಡಿ ಬಿಟ್ಟ ಕಾಲಡಿಯ ಮತ್ತರು ನಾಲ್ಕು ಪಾಂ ನಿಕ್ಕ
೫೨. ಯ್ಯ ನಿವೇಶನ ೧ ಇಂತೀಧರ್ಮಮ ಚಲವ್ವೆಗಳುಂ ಮಾದೇವಯ್ಯ
೫೩. ಗೆಯಸಂಖ್ಯಾತರು ಕೂರ್ತು ತೊತ್ತುಗೆಲಸಮಂ ಬೆಸ
೫೪. ಸಿಕೊಟ್ಟು ಸಿರಪಟ್ಟವಂ ಕಟ್ಟಿ ಆಚಂದ್ರಾರ್ಕ ತಾರಂಬರಂ
೫೫. ಕಾರುಣ್ಯಂಗೆಯ್ದು ಸ್ತಿರಂಜೀವಿಯೆಂದು ಮಾಡಿದ ಮಂ
೫೬. ಗಳ ಮಹಾಶ್ರೀ| ಯೀ ಧರ್ಮ್ಮಮಂ ಪ್ರತಿಪಾಳಿಸಿದವ
೫೭. ರು ಗಣಂಗಳು ಕೂರ್ಪರು ಈ ಧರ್ಮಕ್ಕೆ ಪ್ರತಿ
೫೮. ಕೂಲರಾದವರು ಶಿವದ್ರೋಹರು ಗಣಂಗಳುಮೆನಿಪರು:
೫೯. ಕುಲಕುಂದೆಯ ಪ್ರಭು ನಾಗರಸ ಬರೆದ ಸಾಸನ|

## ತೊಂಡವಾಡಿ ಶಾಸನ (ಕ್ರಿ.ಶ. ೧೩೪೬)

..... ವಿಜಯನಗರದಲ್ಲು ಆದಿ ಪ್ರತಮಾಚಾರ್ಯ ಪೀಟಸ್ತರಾದ ರೇವಣಾರಾಧ್ಯಸ್ವಾಮಿಯರ ಗೋತ್ರಕದೇವರು ಕೊಲ್ಲಿಪಾಕಿ ವೀರಭದ್ರಸ್ವಾಮಿಯವರು ..... ರಾಚವಟ್ಟಿ ವೀರಭದ್ರ ಕುಲದೇವರು ..... ಷಟಸ್ಥಲವರ್ಗ ಸಿಂಹಾಸನ ಸ್ಥಾಪಕಾಯ ..... ರೇಣುಕ ಗೋತ್ರ ಶಿವಲಿಂಗಸ್ವಾಮಿಯವರಿಗೆ ಶಿಷ್ಯರಾದ ಹರಿಹರ ಮಹಾರಾಯ ..... ಸೋಸಲೆಯಲ್ಲಿ ಮಠ ಸ್ಥಾಪಿಸಿಕೊಟ್ಟ .....

## ಚೌಡದಾನಪುರ ಶಾಸನ (ಕ್ರಿ.ಶ. ೧೨೬೩)

ಚೌಡದಾನಾಪುರದ ಗೋಪದೇವನ ಮುನಿಗುಡಿ ವೀರಭದ್ರದೇವರ ಹಿಂಭಾಗದಲ್ಲಿರುವ ಶಾಸನದಲ್ಲಿ ರೇವಣಸಿದ್ಧರ ಪ್ರಸ್ತಾಪ ಸುಂದರವಾಗಿದೆ. ವೀರಕನ್ನಾದೇವಿ ಚರಿತ್ರೆ ಮತ್ತು ಶ್ರೇಷ್ಠತೆಯನ್ನು ವಿವರಿಸುವುದು ಶಾಸನದ ಮುಖ್ಯ ಉದ್ದೇಶವಾಗಿದೆ.

ಶಿರಿಹಿರಿ (ಸಿರಿಗಿರಿ?) ಯೊಳಿರ್ದು ತನ್ನಯ
'ಛ' (ಚ)ರಣವೆ ಶರಣೆಂಬ ವೀರ ಶಿವದೇವರಿಗ
ಚ್ಚರಿಯಮೆನಿಪ ಪಶ್ಚಿಮ
ವರವಾಹಿನಿ ತುಂಗಭದ್ರೆಯಂ ತೋರುತ್ತಂ

ಆ ದೇಶದಿಂದ ನಡೆ ನೀ
ನಂ ದೇಶ 'ಕೈಲ್ಲ' (ಕೈಲ್ಲಿ ?) ಮುಕ್ತನಾಥನೊಳೆಂದು ಮಾ
ಮಾದೇವಿಸಹಿತ ..... ಸ
ಮಾಧಾನದೊಳರ್ಚಿ ಸುವದೆನಲ್ ನಡೆತಂದಂ
ಅಂತಾ ಶಿವದೇವರು ಶಿವಗಣಾಜ್ಞಾ ಸುಖದೊಳಿರುತ್ತಮಿರೆಯಿರೆ

ಕಾರಣಿಕರೆನಿಪರೊಳ್ ತಾಂ
ಕಾರಣಿಕರೆನಿಪ ಸಿದ್ಧರೇವಣ ದೇವರ
ಕಾರುಣ್ಯದ ಶಿಶು ಭಕ್ತ್ಯಾ
ಚಾರದ ಬಳ್ಳಾಲದೇವ ಲೊಕ್ಕೆಯೊಳೆಸೆದಂ

ಮಿಕ್ಕ ಶಿವಭಕ್ತಸುಖದಿಂ
ದುಕ್ಕಿ ಮಹಾದೇವ ಭಾವ ಭರದಿಂ
ಲೆಕ್ಕಿಸದೆ ಗಣಸಲದೊಳಿಹ
ಲೊಕ್ಕೆಯ ಬಳ್ಳಾಲದೇವ ತೊರೆಗೆರೆನಾದೊಳ್
ಅಂತಿರುತ್ತಮಿರ್ದು

ಒದವಿದ ಶಿವಭಕ್ತಿಯ ಸಂ
ಪದಮಂ ಕಲ್ಲರಸನರಸಿ ಕನ್ನಾದೇವಿಗೆ
ಮುದದಿಂದಲಿ ಬಲ್ಲಾ
ಳದೇವಂ ಜಂಗಮ ಸಖ್ಯೆಕ ಗುಣಸದ್ಭಾವಂ

ಆ ಸತಿ ಕನ್ನಾದೇವಿಯ
ಶ್ರೀ ಸುಖ ಸಂಪದ ವಿಳಾಸ ವಿಭವಾದಿಗಳಿಂ
ಬಾಸಣಿಸದೆ ಶಿವಣಗಗಳ
ಗೊಸರಿಸದೆ ಮಾಡಿ ನೋಡಿ ಸುಖಿಸುತಿರ್ಪಳ್

ತದನಂತರಂ
ಕರ್ಮಾರಿ (ಣಿ)ಯಂ ಪರಿಯಲುಜ್ಜುಗಂಗೆಯಿವನ್ನಂ
ಕರ್ಮಾತಿಶಯದಿ ನಿಜಪತಿ
ಧರ್ಮಧ್ವಜ ದೇವಲೋಕವನೆ ತಾನೆಯಲ್ದೆ
ಧರ್ಮಜ್ಞ ದೇವಿ ಕನ್ನರೆ
ಪರಮಗುರು ಸಿದ್ಧರೇವಣ

ಸಿರಿಗಿರಿಯ ನಿವಾಸನಾಜ್ಞೆಯಂ ಬೆಸಸಿದ ನ
ಚ್ಚರಿಯ ಮನೆಯಪ್ಪ ಮುಕ್ತೇ
ಶ್ವರ ಲಿಂಗದೊಳಲ್ಲಿ ತುಂಗಭದ್ರೆಯ ತಡಿಯೊಳ್

ಇಂತೆನೆ
ಆಸೀನನೆನದೆ ಸದ್ಗುರು
ತಾನೇನಂ ತೋರಿದ ವಿಚಿತ್ರಮೆನುತ್ತಂ
ಮಾನಿನಿ ಕನ್ನಾದೇವಿಯ
ಕಾನಂದದಿ ಬಂದು ಮುಕ್ತಿನಾಥನ ಕಂಡರ್

# ಮರಡಿಪುರ ಶಾಸನ (ಕ್ರಿ.ಶ. ೧೨೮೦)

೧. ಶ್ರೀ ನಮಸ್ತುಂಗ ಸಿರಸ್ತುಂಗ ಚಂದ್ರ ಚಾಮರಚಾರವೇ ತ್ರೈಲೋಕ್ಯನಗರಾರಂಭ .....
೨. ಸ್ತಂಭಾಯ ಶಂಭವೇ ‖ ಸ್ವಸ್ತಿ ಶ್ರೀ ಮನ್ಮ (ಮ) ಹಾಮಹಿಮನಪ್ಪ ಶ್ರೀ ಕವಿಳಾಸದುತ್ತರ .....
೩. ರಾಧೀಶ್ವರಂ ಶ್ರೀ ಪಾರ್ವತೀವಲ್ಲಭಂ ಪಾರ್ವತೀಮನೋನಯನ ಪ್ರಾಣೇಶ್ವರ .....
೪. ಚಕಳಸಕುಂಕುಮಪಂಕಾಂಗಿ ತಸರೀರವಕ್ಷಸ್ತಳ ಪಾರ್ವತಿ ಮನಸ್ಸರೋವರರಾಜ
೫. ಕ ಪಾರ್ವತೀ ಪ್ರಾಣನಾಥ ಭಸ್ಮೋದ್ಧೂಳಿತ ಶುದ್ಧಗಾತ್ರ ಕಟ್ವಾಂಗಧಾರಿತ್ರಿಸೂಳಧರ ಗಂಗಾ
೬. ಧರ ಜಾಹ್ನವೀಜತಾಜೂಟಿಕೋಟೀರಭಾರ ಪಂಚವಕ್ತ್ರ ಪರಮೇಶ್ವರ ತ್ರಿಯಂಬಕ ತ್ರಿಲೋಚನ ತ್ರಿ
೭. ಸೂಳಧರ ಕಟ್ವಾಂಗಧಾರಿ ಕಪಾಳಧರ ಕರಗೊರಳ ಹೆರೆನೊಸಲತುರುಗಿದ ಕೆಂಜೆಡೆಯ
೮. ನವಿಲೆಯ ಜೆಡೆಯ ಶಂಕರದೇವರ ಪಡಿಪಾರ ದಾಸಯ್ಯ ಸದ್ಯೋಜಾತನ ಮಹಿಮಮೂರ್ತಿ ಭಕ್ತಜ
೯. ನವ ಸರ್ವರ್ತಿ ಹರಿವಿರಿಂಬಗಳ ಕುಲಸ್ವಾಮಿ ತೇತ್ರಿಂಪಾದಿಕೋಟಿ ದೇವರ್ಕ್ಕಳು ಪೂಜಿತ ಸಕಳ (ಧಾ)
೧೦. ನಿಸ್ತಾರಕ ಅಂಧಕಾಸುರ ಮದಭಂಜನ ಲಾಳಾ ಸುರಕೋಳಾಹಳ ತ್ರಿಪುರ ಸಂಹಾರ್ಥಿ (ಶಿವ) ಮೂರ್ತ್ತಿ
೧೧. ಸು ಪ್ರಾಣಪ್ರಧ ವಿರಂಚಿ ಪಂಚಮ ಸಿರಚ್ಛೇದನ ನಾರಾಯಣನೇತ್ರಾಂ (ಭೋ) ಜಪೂಜಿತ ಪದದ್ವ
೧೨. ಯ ಬಾಣಬಾಣಾಸುರಬಾಹುಪ್ರಮದ ಸಂಹಾರಿ ನಾರದಾದಿ ಮುನಿಗಣ ಮನೋನಾಯಕ ಉಟ್ಟಿ .....
೧೩. ಶಿತೇ ಮಂತ್ರ ಉದ್ಧರಿಸಿತೇ ತಂತ್ರ ಸಿವಾಚಾರವೇ ಪಥವಾಗಿ ನಡೆಪರಿಪಿಗಣಂಗಳು ಪ್ರಿಯದಕ್ಷಯಜ್ಞ .....
೧೪. ನಾಸನ ಭ ..... ಕ್ಷಹರ ಅಕ್ಷೇಶ್ವರ ನಂದಿನಾಥ ನಂದಿಮಹಾಕಾಳ ವೀರಭದ್ರ ಬ್ರಂಗಿನಾಥ ಅಂಗಜ ಅ .....
೧೫. ತಗ್ರೀವಮಯಗ್ರೀವ ಘಂಟಾಕರ್ಣ್ನ (ಅ)ಗ್ಗಳ ಗಣ್ನಧಾರುಕ ರೇಣುಕ ಸಾರುಪ್ಯಸಾಯುಜ್ಯ ಸಾ
೧೬. ಮ್ಯಾಜ್ಞಪದವಿಯಂ ಹಡದ ಗಂಗಾಮಳುಕಕಸಮಾರುದ್ರರು ಸಕಳ ಗಣಪರಿವೇ
೧೭. ಷ್ಟಿತ ಯೆಕ್ಕೋಟಿಗಳು ಪೂಜಿತಯತ್ತಂ ಮಾರ್ತ್ಯಲೋಕದ ಗಣಂಗಳ ಪ್ರಿರಿಯಾಳುವ ದಾಸದಸವ
೧೮. ರ್ಮ್ಮಓಹಿಲ ಉದ್ಭಟ ನಂಬಿ ಕುಂಬಾರಗುಂಡ ಆಂಡಮ ಕರಿಕಾಲ ಚೋಳ ಭೋಗದೇವ ಬಾಣಮ
೧೯. ಯೂರ ಕಾಳಿದಾಸ ಕೇಶಿರಾಜ ದಣ್ನಾಯಕ ಸುರಿಗೆಯ ಚಲ್ವಚರಾಯಸಂಗನ ಬಸವಯ್ಯ ಅನಿಮಿಟಿ
೨೦. ಕೇಸವರಾಜ ಜಗದೇವರಣ್ನಯಕ ಏಕಾನ್ತದ ರಾಮಯ್ಯ ಸೊಂನಲಿಗೆಯ ರಾಮಯ್ಯ ಹುಲಿಗೆರೆಯ ಪೊ
೨೧. ನ್ನಯ್ಯ ನೆಲುವಿಗೆಯ ಸಾಂತಯ್ಯ ಸಕಳಗಣ ಪರಿವೇಷ್ಟಿತ ಶ್ರೀ ಕಲಿದೇವರ ಪ್ರಶಸ್ತಿ ಮಂಗಳಂ
೨೨. ಸ್ವಸ್ತಿ ಶ್ರೀ ಮನ್ಮ (ಮ)ಹಾಮಂನ್ನಳೇಶ್ವರಂ ತಳಕಾಡ ಗಂಗವಾಡಿನೊಣಂಬವಾಡಿ ಬನವಸೆ ಹಾನಂಗಲ್ಲು
೨೩. ವುಚ್ಚಂಗಿ ಕೊಂಗು ನಂಗಲಗೊಂಡ ಭುಜಭಲವೀರ ಗಂಗನ ಸಹಾಸಮಸೂರ ನಿವಾರ ಸಿದ್ಧ ಗಿರಿದು
೨೪. ದ ನೆಲೆವೀಡಿನಲು ಸುಖಸಂಖಥಾ ವಿನೋದದಿಂ (ರಾವಿನೊಳು) ರಾಜ್ಯಂಗೆಯ್ಯುತ್ತಮಿರೆ ತತ್ಪಾದ ಪದ್ಮೊ
೨೫. ಪಜೀವಿತನುಮಪ್ಪ ಶ್ರೀಮನುಮಹಾಮಂನ್ನ ಭಾಸಗೆ ತಪ್ಪುವಲೆಂಕರಗಂಡಹುಲಿಯಜ್ಯ
೨೬. ಗುಡಿಯ ಮೊತ್ತದ ಸೇನಾನಾಯಕಂ ಶ್ರೀ ಕಲಿದೇವರ ದಿವ್ಯಶ್ರೀ ಪಾದಪದ್ಮಂಗಳಂಕಮಳನಾಳ
೨೭. ಶೂತ್ರದಂನ್ತೆಡೆವರಿಯದೆ ಅನುದಿನಂ ಬೆಸೆಕೆಯ್ಯುತ್ತವಿ (ದ್ದ)ನಾಗಯ್ಯವೀರಮಯ್ಯನ ಮಗ ಭಕ್ತರ
೨೮. ಕರುಣ (ದ) ಕಾರುಣ್ಯದ ಮಗ ಶರಣರ ದಾಸಶೋವನ ಶಿಂಗನ ಮಾರೆಯನಾಯಕ ತಂಮ್ಮ ಬಲ್ಲ
೨೯. ಯ್ಯ ಮಗ ಶಾತಯ್ಯ ಕೆರೆಗೋಡಿನಾಡ ಹಾಡಿಮಂಡಲ ವಿತ್ತಿಯಮಾಡಲ ಹೊಯಿಸಣ ಗವುಡ ಕೆಚ್ಚಿಹಳ್ಳಿ
೩೦. ಯ ಗಂಗಗವುಡ ಬೇವುಕಲ್ಲಿ ಚಮಡಗವುಡ ಕನ್ನೆಯನ ಹಟ್ಟಿಯನ ಚಾಕೆಯಾನಾಯಕನೊ
೩೧. ಳಗಾದ ಸಮಸ್ತ ಗಾವುಂಡಗಳುವಿದ್ದು ಸಕರಿಶ್ಯದ ೧೨೦೧ನೆಯ ವಿಶ್ವಾವಸುಸಂವತ್ಸರದ ಪುಶ್ಯ ಸು ೨ ಸೋಯೆಮ್ಮಯ ಕೇತನ ಹಟ್ಟಿಯ
೩೨. ಶ್ರೀ ಕಲಿದೇವರಿಗೆ ಶಿವಪುರವಾಗಿ ಭಕ್ತರಿಗೆ ಕೊಟ್ಟಧರ್ಮ್ಮ ಆಡಿಕೇಶ್ವರ ದೇವರತೊತ್ತುವೀರ ಬಮ್ಮಯ್ಯ
೩೩. ಚೊಡಮದೇವರ ಅಂಕಯ್ಯಾ ಮಲ್ಲಿನಾಥದೇವ : ಜಕ್ಕಯ್ಯ ಸೋಮನಾಥದೇವರಕೇತಯ್ಯಾ ಅಪ್ಪ
೩೪. ಯ್ಯ ಮಲ್ಲಿನಾಥದೇವರ ಯೇಚಯ್ಯಾ ರಾಮನಾಥದೇವರ ಹೊಯಗಣದಾಶಿ ಚೊಡಮದೇವರ ಮಾ
೩೫. ಚಯ್ಯಾ ಅಂಕನಾಥದೇವರ ಹೊಂನಯ್ಯ ಚೂಡಮದೇವರ ಲೆಂಕಬೂವಣ್ನೆಯಿನ್ನಿನಿಬರಿದೂ ದಾದಾಪೂರ್ವ್ವ
೩೬. ಕಂ ಮಾಡಿಕೊಟ್ಟಂ ದರ್ಮ್ಮಾತಂ ಚಂದ್ರಾರ್ಕತಾರಾಂಬರಂ ಸಲುವುದು ಯೀಧರ್ಮಕೆ ಅನುಕೂಲವಾದ
೩೭. ವನು ಸಿವಲೋಕ ಪ್ರಾಪ್ತನಪ್ಪನು ಯಿ ಧರ್ಮಕೆಯನ್ಯಾಯವ ಚಿನ್ತಿಸಿದನು ಗಂಗೆಯ ತಡಿಯಲು ಸಾವಿರ (ಬ್ರಾಹ್ಮಣ)
೩೮. ರು ಸಾವಿರ ಕವಿತಿಯ ಕೊಂದ ಬ್ರಹ್ಮತಿಯಲಿ ಹೋಹ ‖ ಶ್ವದತ್ತಂವಾಯ (ವೆ)ತಿವಸುಂಧ (೧೦)
೪೦. ಣೆ ವಿಷ್ಟಾಯಾಂ ಜಾಯತೀ ತ್ರಿಮಿ ‖ ಶ್ರೀ ಜೆಡೆಯ ಸಂಸರದೇವರಮಲ್ಲಸ್ಸು ಬರದ ಶಿವದೇವ
೪೧. ಮಂಗಳಾ ಮಹಾಶ್ರೀ ಶ್ರೀ

## ಲಕ್ಷ್ಮೇಶ್ವರ ಶಾಸನ (ಕ್ರಿ.ಶ. ೧೫೧೩)

"..... ಶ್ರೀ ಮರಳಸಿದ್ಧೇಶ್ವರಾಯ ನಮಃ"
ಉ || ಶ್ರೀಮುದಮಾಮನೋಹರನೆನಿಪ್ಪ ಸದಾಶಿವನಾ ಮಹಾಗಣ||
ಸ್ತೋಮದ ಮಧ್ಯದಲ್ಲಿ ರಜತಾದ್ರಿಯೊಳೋಲಗವಿತ್ತು ದಿವ್ಯತೇ |
ಜೋಮಯಮೂರ್ತಿ ದಾರುಕ ನಿಮಿತ್ತದ ಸೋಂಕಿನೊಳಂದು ರೇಣುಕಂ |
ಗೀ ಮಹಿಯಲ್ಲಿ ಲಿಂಗದುದರೋದ್ಭವ ನೇಮವನಿತ್ತನಕ್ಕರಿಂ ||
ಶಿವಭಕ್ತರ್ನಲಿದಾಡೆ ಸಜ್ಜನಜನಂ ಕೊಂಡಾಡೆ ದೇವರ್ಕಳು |
ತ್ಸವದಿಂದಂಬರಭಾಗದೊಳ್ಜಯಜಯದ್ವಾನಂಗಳಂ ಮಾಡೆ ತತ್ |
ಶಿವಲಿಂಗೋದ್ಭವನಾಗಿ ಸಂಚರಿಸುತಿರ್ದ ರೇವಣಾಚಾರ್ಯ ಪುಂ |
ಗವನೀ ಧಾರುಣಿಯಲ್ಲಿ ಸಾಸಿರದನಾನೂರ್ವತ್ಸರಂ ಲೀಲೆಯಿಂ ||
ಮಗುಳ್ದಾ ಸೋಮೇಶನೊಳ್ಪೊಕ್ಕಗಣಿತ ಮಹಿಮಂ ಸಿದ್ಧರೇವಣನೊಲ್ದಾ |
ಜಗದೀಶಂ ತನ್ನ ಮುನ್ನಂ ಕಳುಪಿದ ಕಥನಂ ತೀರಲೆಂದುರ್ವ್ವಿಯೊಳ್ಬಂ |
ದೊಗೆದಂ ಪೂವಲ್ಲಿ ಸಿದ್ಧೇಶ್ವರನೆನೆ ಪೆಸರಿಂ ಜಂಗಮಾಕಾರದಿಂ ಭ |
ಕ್ತಗಣಕ್ಕಾನಂದಮಂ ಪುಟ್ಟಿಸುತೆ ಸುಳಿದಂ ಲೀಲಾವಿನೋದಂಗಳಿಂದಂ ||
ಕಂ|| ಇಂತಾ ಯತಿಕುಲತಿಲಕನ |
ನಂತ ಮಹಾತ್ಮೆಯೊಳೆ ಚರಿಸಿ ಪುಲಿಗೆರೆಗೆಯ್ತಂ |
ದಂ ತನ್ನ ಸಗುಣಲೀಲೆಯ |
ದಂತದನುಳಿದಮಲ ಲಿಂಗಮಪ್ಪ ನಿಮಿತ್ತಂ ||

....................

ಸ್ವಸ್ತಿ ಶ್ರೀ ಮತ್ಕೈಲಾಸವಾಸಿಯಾದ ಶ್ರೀಮತ್ಪರಮೇಶ್ವರಾವತಾರಮಪ್ಪ ರೇವಣಾಚಾರ್ಯ ಭಕ್ತಜನಹಿತಾರ್ಥಮಾಗಿ ಮರ್ತ್ಯಕ್ಕೆ ಪೂಲಿ(ಯ) ಮರುಳಸಿದ್ಧೇಶ್ವರ ನಾಮವಂ ಧರಿಸಿ ಕತಿಪಯ ದಿವಸಂ ತನ್ನ ಮಹಾತ್ಮೆಯಂ ಮೆರೆದು ಚರಿಸುತ ಪುಲಿಕರಪುರಕ್ಕೆಯ್ತಂದು ಸಕಲ ಭಕ್ತರಿಷ್ಟಾರ್ಥಸಿದ್ಧಿಯಂ ಸಾರ್ಚಿ ಶ್ರೀ ದಕ್ಷಿಣ ಸೋಮೇಶ್ವರ ಸಾನ್ನಿಧ್ಯದಲ್ಲಿ ಸಾಲಿವಾಹನಶಕದ ಸಾವಿರದ ನಾನೂರಮೂವತ್ತಯ್ದನೆಯ ಶ್ರೀಮುಖಿಸಂವತ್ಸರದ ಭಾದ್ರಪದ ಶುದ್ಧ ಪಂಚಮೀ ಆದಿತವಾರದರುಣೋದಯದ ಕಾಲದಲ್ಲಿ ಶ್ರೀಲಿಂಗಮೂರ್ತಿಯಾಗಿ ನೆಲಸಿದ ಮರುಳಸಿದ್ಧೇಶ್ವರ ದೇವರಿಗೆ ....."

# ಗುಮ್ಮಳಾಪುರ ಶಾಸನ (ಕ್ರಿ.ಶ. ೧೬೦೬)

೧. ಶಿವಾಯ ನಮಃ
೨. ಶುಭಮಸ್ತು ಸ್ವಸ್ತಿ ಶ್ರೀವಿ
೩. ಜಯಾಭ್ಯುದಯ ಶಾಲಿ
೪. ವಾಹನ ಶಕವರುಷಂಗಳು ೧೫೨೮
೫. ನೆಯ ಪರಾಭವ ಸಂವತ್ಸರದ ಕಾರ್ತಿಕ ಬ
೬. ೧೨ ಸೋಮವಾರದಲ್ಲು || ಶ್ರೀ ಮದ್ರಾ
೭. ಜಾಧಿರಾಜ ಪರಮೇಶ್ವರ ಶ್ರೀ ವೀರಪ್ಪ
೮. ತಾಪ ಶ್ರೀವೀರ ವೆಂಕಟ ಪತಿದೇವ ಮಹಾರಾ
೯. ಯರು ರತ್ನಸಿಂಹಾಸನರೂಢರಾಗಿ ಪ್ರಿಥುವೀ
೧೦. ಸಾಮ್ರಾಜ್ಯಂಗೆಯ್ಯುತ್ತಿರಲೂ ಚತುರ್ಥಗೋತ್ರದ
೧೧. ಯಲಹಂಕನಾಡ ಪ್ರಭು ಕೆಂಪನಾಚೇ೧ ಗೌಡರ ಪವುತ್ರರಾದ ಕೆಂಪೇ
೧೨. ಗೌಡರ ಪುತ್ರರಾದ ಯಿಂಮಡಿ ಕೆಂಪೇಗೌಡರು
೧೩. ಭಾರದ್ವಾಜ ಗೋತ್ರದ ಪಡಿವಿಡಿವರ್ಗದ
೧೪. ಕೊಲ್ಲಿಪಾಕ ರೇವಣಸಿದ್ದೇಶ್ವರನ ಸಂಪ್ರದಾಯದವ
೧೫. ರಾದ ಗುಂಮಳಾಪುರದ ಸಿಂಹಾಸನ ಕರ್ತ
೧೬. ರಾದ ನಂಜೇದೇವರು ಅಯ್ಯನವರ ಪವುತ್ರರಾದ ಚೆಂ
೧೭. ನ್ನಮಲ್ಲಿಕಾರ್ಜುನ ದೇವರ ಪುತ್ರರಾದ ನಂಜದೇ
೧೮. ವ ಅಯ್ಯನವರ .....
೧೯. ಯರ ..... ಮೇಲೂರೊಳಗಣ ಗುಮ್ಮಾಳಪುರ
೨೦. ದ ಗ್ರಾಮವನೂ | ಚತುರ್ಥ ಗೋತ್ರದ ಯಲಹಕನಾಡ
೨೧. ಪ್ರಭು ಕೆಂಪೆನಾಚೇಗೌಡರ ಪಉತ್ರರಾದ ಯಿಂಮಡಿ ಕೆಂಪೇ
೨೨. ಗೌಡರು ಭಾರದ್ವಾಜ ಗೋತ್ರದ ಪಡಿವಿಡಿವರ್ಗದ ಕೊಲ್ಲಿಪಾಕೆ
೨೩. ರೇವಣಸಿದ್ದೇಶ್ವರನ ಸಂಪ್ರದಾಯಕರಾದ ಗುಂಮಳಾಪುರದ
೨೪. ಸಿಂಹಾಸನಕೆ ಕರ್ತರಾದ ನಂಜೇದೇವರು ಅಯ್ಯನವರ ಪವುತ್ರ
೨೫. ರಾದ ಚೆನ್ನಮಲ್ಲಿಕಾರ್ಜುನದೇವರ ಪುತ್ರರಾದ ನಂಜೇ
೨೬. ದೇವರು ಅಯ್ಯನವರ ಪಾದಕೆ .....
೨೭. ಸ್ವಾಮಿ ನಂಜದೇವಪ್ಪ ಅಯ್ಯನ ..... ಪಾದಕೆ
೨೮. ಶಿವಾರ್ಪಿತನಾಗಿ ಸಮರ್ಪಿಸಿದೆ ವಾದದ ಕಾರ
೨೯. ಣ

## ಅನುಬಂಧ ೩

## ಕಾವ್ಯಪಾಠ

### ರಾಘವಾಂಕನ ಸಿದ್ಧರಾಮ ಚಾರಿತ್ರ್ಯ

(ಗತಿ - ೧, ಪದ್ಯ ೩೪ ರಿಂದ ೩೭)

ವನಿತೆಯೈದಾರು ಸೂಲಂ ಗೆಲಿದಳಾರೆ ತನ್ನ
ತನುವಿನೈದಾರವಗುಣಂಗಳಂ ಗೆಲಿದಂತೆ
ಜನನ ಮರಣದ ಸೂತಕಂ ಕೆಡುವ ತೆರದಿ ಕೆಟ್ಟವು ಹೊಲೆಗಳಾದಿವಸಕೆ
ಮನದ ಶುದ್ಧತಿಕೆ ತಲೆದೋರ್ಪಲುನಕೆ ಮೊಳೆತು
ದನುನಯದೊಳು ತೆರುದಲಾಕೆ ಯಿರುತಿರಲೊಂದು
ದಿನಬರುತಿರ್ದನಾವಾರತ್ತಲಪ್ರತಿಮ ಸಿದ್ಧಕುಲಚಕ್ರೇಶನು ||೧||

ಹರುಷದಿಂದಲನಾಹುತಿಗೊಂಡು ದೇವ್ಯರೆ
ಲರನಾಳಿಸುತ ಧ್ಯಾನದೊಳಿರ್ದು ನೆರೆಕೇಳ್ಳು
ಹರಿತಂದು ನದಿಯ ನಡುವಡ ಸುರಿಗೆವಿಡಿದು ತೆಗೆದ ಮಾಸನೂರ ನೆರೆದದ
ತರುಣಿಯರ ಕಟಕವೆಲ್ಲವನೂಡಿದಪ್ರತಿಮ
ಗುರು ರೇವಣಾಚಾರ್ಯನಾವಾರ ಸೀಮೆಯೊಳು ದಂಡಿಗೆಯನೊಲದಿಳಿದನು ||೨||

ಹಾವುಗೆಗಳಂ ಕಳಿದು ಮೈಯಿಕ್ಕಿ ಪುಳಕಿಸುತೆ
ಭಾವಿಸುತೆ ಕಂಪಿಸುತ್ತಡಿ ನೆಲನ ತಾಗದಂ
ತೋವಿ ನಡೆನಡೆದು ನಿಂದಡಿಗಡಿಗೆ ನೆನೆದು ಹಾರೈಸಿ ಬೆರಗಾಗುತಿರಲು
ದೇವ ನೀವಿನುತಂ ಕೃತಾರ್ಥತೆಯೆನೆಯ್ದುವುದಿ
ದಾವ ಕಾರಣವೀ ಪ್ರದೇಶಂಗಳೊಳು ಮಹಾ
ದೇವ ಗೃಹಮಿಲ್ಲಾರ್ಯರಿಲ್ಲ ತೀರ್ಥಗಳಿಲ್ಲೆಂದುಕೇಳ್ದರು ಶಿಷ್ಯರು ||೩||

ಉದಕವಿಲ್ಲದ ತೀರ್ಥ ನೆಲೆ ಶಿಲಾಲಿಂಗ
ಲ್ಲದ ಶಿವಂ ತನುಧರ್ಮ ಕರ್ಮ ಕಲ್ಮಷತೆಯಿ
ಲ್ಲದ ಹಿರಿಯನೆನಿಪ ಶಿಷಸಿದ್ಧನೀಪುರದೊಳಗೆ ಜನಿಸಿದಪನಾತನಿಂದ
ಇದು ಲಿಂಗದ ಬೀಡಾಗಿ ಸಿರಿಗೆ ಕುರುವಾಗಿ ಪು
ಣ್ಯದ ಪುಂಜವಾಗಿ ಮುಕ್ತಿ ಕ್ಷೇತ್ರವಾಗಿ ಧ
ರ್ಮದ ದಾನಿಯಾಗಿ ಧರೆಯರಿಯೆ ಮೆರೆದಪ್ಪುದೀ ಸೊನ್ನಲಿಗೆ ಕೇಳೆಂದನು ||೪||

### ವಿರುಪಾಕ್ಷ ಪಂಡಿತನ ಚೆನ್ನಬಸವ ಪುರಾಣ

(ಸಂಧಿ - ೨, ಪದ್ಯ - ೨೩)

ಆ ರುದ್ರ ಸಮ್ಮುಖದೊಳತಿವಿಭವದಿಂ ವಿಜಯ
ವೀರಭದ್ರಂ ನಂದಿ ಕಾರ್ತಿಕೇಯ ಭೃಂಗಿ
ವೀರವೀರಕನತುಳ ರೇಣುಕಂ ದಾರುಕಂ ಕಂಕಾಳಧರ ಗಣಪರ
ಭೈರವಂ ಚಂಡೇಶ ಕೂಷ್ಮಾಂಡನಂಗಾರ
ಧಾರ ಗಗನಾಂಗ ದೂಮಾಂಗ ಶೈಲಾಂಗರಂ
ಬಾ ರೌದ್ರರೂಪಿನ ಮಹಾಗಣಂಗಳ್ ಮೆರೆದರೇನೆಂಬೆನಚ್ಚರಿಯನು ||೧||

# ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ

(ಸಂಧಿ - ೨, ಪದ್ಯ - ೧ - ೧೦)

ರೇವಣಸಿದ್ದೇಶ ಮರುಳಸಿದ್ದೇಶ ಗುರು
ಪಾವನದ ಪಂಡಿತಾರಾಧ್ಯರೇಕೋರಾಮಿ
ದೇವರ ಮಹಾಕಥೆಯ ಪೇಳ್ದನಾ ನಂಜೇಶ ಚೆನ್ನವೀರಾಂಬೆಗೊಲಿದು
ಶ್ರೀ ಮದನುಪಮ ಪುಣ್ಯನಾಮನಪ್ರತಿಮ ನಿ
ಸ್ಸೀಮ ಸುಜ್ಞಾನ ಗುಣಧಾಮ ದಾರೂದ್ಯಾನ
ಕಾಮಿನೀಚಿತ್ತವಿಭ್ರಮಕಾಸ್ಪದಂ ಲಸದ್ ರಾಮಣೀಯಡ ಸ್ವರೂಪಂ
ಸೋಮಶೇಖರ ಕೃಪಾರಾಮ ಸನ್ ಮುಕ್ತಿಯತಿ
ಸ್ತೋಮ ಸಜ್ಜನಭಕ್ತರಾಮಯಾಪತ್ ಪಕ್ಷ
ಧೂಮಾಂಕ ಪಶುಪತಿಲಲಾಮ ಪರಿಪಾಲಯ ಸ್ವಾಮಿ ಗುರುಸಿದ್ಧನಂಜ ||೧||

ಆಚಾರ್ಯರುದ್ಭವವ ಕಳಶಲಕ್ಷಣಗಳಂ
ಪ್ರಾಚುರೋತ್ತಮೆ ಕೇಳ್ದೆಯಾ ಎನಲ್ ನೊಸಲಿಂಗೆ
ಚಾಚಿ ಕರಮಂ ನುಡಿದಳೆಲೆ ದೇವ ಇಹದಲ್ಲಿಯೀ ಗುರೂತ್ತಮರು ಮೆರೆದ
ಆಚರಣೆಯಂ ಕಥೆಗಳಂ ಪೇಳ್ವುದೆನೆ ಮಧುರ
ವಾಚಿ ಕೇಳೌ ಜಗದ್ಧಿತವಾಗಿ ಬಂದಲಸ
ದಾಚಾರ್ಯರುರುಮಹಿಮೆಯಗಣಿತಂ ಸಂಕ್ಷೇಪದಿಂದಲೊರೆದಪೆನೆಂದನು ||೨||

ನೀಲಕುಂತಳೆ ಚೆನ್ನವೀರಾಂಬಿಕೆಯ ಕೇಳು
ಭಾಳಾಂಬಕನ ನಿರೂಪದೊಳು ರೇಣುಕಗಣಪ
ಭೂಲೋಕಕಧಿಕವೆನಿಸುವ ಕೊಲ್ಲಿಪಾಕದ ಮಹಾಲಿಂಗ ಗರ್ಭದಲ್ಲಿ
ಲೀಲೆಯಿಂದೊಗೆದು ಸರ್ವರ ಪಾಲಿಸುತ ಸತ್ ಕೃ
ಪಾಳು ರೇವಣಸಿದ್ಧ ಗುರುಮೂರ್ತಿ ವಿಗತಾರ್ಥಿ
ಹೇಳೆಯಿಂದೊಪ್ಪಿದಂ ಸಿದ್ದಕುಲಚಕ್ರೇಶ ಚಿತ್ ಕೋಶ ಸುಪ್ರಕಾಶ ||೩||

ಆ ರೇವಣಸಿದ್ಧದೇಶಿಕಂ ಸರ್ವಜ್ಞ
ಚಾರು ಮಹಿಮಾಧಾರ ಸಕಲದೇಶಂಗಳೊಳು
ರಾರಾಜಿಸುವ ದಿವ್ಯಕ್ಷೇತ್ರದ ಋಷಿಪ್ರಚಯಕಿಷ್ಟಾರ್ಥಸಿದ್ಧಿಯಿತ್ತು
ವಾರವನಿತಾರತ್ನ ಮಾಯಿದೇವಿಯ ಗೃಹದೊ
ಳೋರಂತೆ ಸೇವಕಾವೃತ್ತಿಯೊಳಿರುತ್ತವಳ
ಚಾರುಭಕ್ತಿಗೆ ಮೆಚ್ಚಿ ಪುರುಷಲಿಂಗವನಿತ್ತುವ ಸುರದಂಪತಿತ್ರಿಗುಣೆಯ ||೪||

ಹತಿಸಿ ಸುರಗಿಯ ಮಾಡಿಸುತ್ತ ಮಡುವಿನೊಳಿರಿಸಿ
ನುತಿಸುವ ವಿಭೀಷಣಂಗೊಲಿದು ಲಂಕೆಗೆ ಬಂದು
ಯತಿರಾಯ ಮೂರ್ ಕೋಟಿಲಿಂಗಗಳನೊಂದು ಲಗ್ನದೊಳು ಸಂಸ್ಥಾಪಿಸುತ್ತಂ
ಅತಿವೇಗದಿಂ ಬಂದು ಸತಿಯರಸುವಂ ಕಾಯ್ದು
ಕ್ಷಿತಿಪ ಚೋಳಾಖ್ಯಂಗೆ ಸುರಗಿಯಂ ತೆಗೆದೀಯ
ಲತಿಭಯದಿ ಹಿಡಿಯಲಂಜುವೆನೆನಲು ನಗು ತೊಂದನಲ್ಲಿಯೇಹಾಕ್ಕಿ ಮುದದಿ ||೫||

ಒಂದು ಸುರಗಿಯ ತಂದು ವಿಕ್ರಮಂಗಿತ್ತು ನೂ
ರೊಂದು ಸ್ಥಲವಂ ಕುಂಭಸಂಭವಂಗರುಹಿ ನಲ
ವಿಂದ ದೇಶಾಂತರಂಗೆಯ್ಯುತ್ತಲೊರ್ವ ಸಿದ್ಧನ ಮುಂದೆ ಭಿಕ್ಷೆಯನಲು
ತಂದವನ ಸತಿ ಕಠಾರವ ಭಿಕ್ಷವಿಕ್ಕೆ ಮನ
ಸಂದು ನುಂಗಲು ಪತಿಯಯೆರ್ದೆಯಲ್ಲಿ ಮೂಡೆ ಭಯ
ದಿಂದ ಬಂದಡಿಗೆರಗಿ ದಂಪತಿಗಳಂ ನುತಿಸೆ ಕಾಯ್ದನಾ ಸಿದ್ದೇಂದ್ರನು ||೬||

ಚೋಳಾಖ್ಯನರಮನೆಗೆ ಬಂದು ಭಿಕ್ಷಾಯೆನಲು
ಖೂಳ ಕುದುರೆಗೆ ಕುದಿವ ಮಡ್ಡಿಯಂ ನೀಡಿಸಲು
ಹೇಳಿಯೊಳು ಸವಿದು ತತ್ ಶೇಷಹಸ್ತವ ತೊಡೆದನಾಚಾವಡಿಯ ಕಂಬಕೆ
ಓಲಗ ಶಾಲೆ ಹಯಶಾಲೆ ಗಜ ಶಾಲೆಗಳು
ಕೇಳು ನಿಮಿಷದಿ ಸುಟ್ಟು ಬೂದಿಯಾದುದು ನಮಿಸೆ
ಪಾಲಿಸಿದ ಮುನ್ನಿನೊಲು ಸೊಲಗಕ್ಕಿಯೋಗರದಿ ಕಟಕವೆಲ್ಲಕ್ಕುಣಿಸಿದಂ ||೭||

ಚಾಮಲೊವ್ವೆಗೆಯೊಲಿದು ಸೊನ್ನಲಾಪುರಸಿದ್ಧ
ರಾಮನುದಯವನರುಹಿ ಗಾಣಮಂ ತಿರುಹುತ್ತ
ಕಾಮಿನಿಗೆ ಕಲ್ಲಿಸೆಟ್ಟಿಗೆಯೆತ್ತಿಗಂ ಕಣ್ಣ ಕೊಟ್ಟು ವೈಷ್ಣವ ಚೋಳನ
ಆ ಮಹಾ ನೂರೊಂದು ಸಮಯವಾದವ ಗೆದ್ದು
ಭೂವೀಶನಿಂ ಶರಣ್ಗೊಂಡು ನಿಜವೀರ್ಯದಿಂ
ದಾಮೋದರಪ್ರತಿಷ್ಠೆಯ ಮಾಡಿಯಲ್ಲಾಡದಂತೆ ನಿಲ್ಲಿದ ಸಿದ್ಧನು ||೮||

ರಾಜೇಂದ್ರಚೋಳಭೂಭುಜಮುಖ್ಯರಹ ಸಕಲ
ರಾಜರ ತನೂಜೆಯರನೇಳುನೂರಂ ಮಹಾ
ರಾಜವಿಭವದಿ ವರಿಸಿ ಸರ್ವಸುಖಮಂ ಲಿಂಗಭೋಗೋಪಭೋಗಿಯಾಗಿ
ನೈಜದಿಂ ಕೈಕೊಂಡು ನಿಜಸತಿಸುಸೌಂದರಿಸ
ರೋಜವದನೆಯ ಗರ್ಭದಲ್ಲೊಗೆದ ರುದ್ರಮುನಿ
ರಾಜನಂ ಸಲಹೆಂದು ಭೂವನಿತೆಯಳ ಕೈಯ ಕೊಟ್ಟನಾ ಸಿದ್ದೇಂದ್ರನು ||೯||

ಧರೆಯಲ್ಲಿ ಸಾವಿರದ ನಾನೂರ ವರುಷ ಬಾ
ಳ್ದಿರುತ ಸಕಲರ ಪಾಲಿಸುತ್ತ ಭಕ್ತರ ಹೃದಯ
ಸರಸಿಜವನರಳಿಸುವ ಚಿತ್ ಸೂರ್ಯನೆನಸಿ ರಾಜಿಸುವ ಕೀರ್ತಿಪ್ರಕಾಶನಂ
ಗುರುರೇವಣಸಿದ್ಧ ಚಕ್ರೇಶಲಿಂಗದೊಳು
ಬೆರೆದನಿನ ನಿಂದೊಗೆದ ಕಿರಣವಪರಾಹದೊಳಣ
ಗಿರದೆಯಾ ಸೂರ್ಯನೊಳಗಡಗುವೊಲು ಸಕಲಸುರನಿಕರ ಜಯ ಜಯ ಎನುತಿರೆ ||೧೦||

## ಷಡಕ್ಷರಿ ಕವಿಯ ಬಸವರಾಜ ವಿಜಯಂ

(ಆಶ್ವಾಸ - ೧, ಪದ್ಯ - ೧೧)

ಸದ್ಗುರು ವಾದಿಗಾದಿಗುರು ಜಂಗಮ ಕೋಟಿಗೆ ಮುಖ್ಯನಾದಭಾ
ಸ್ವದ್ಗುರುವಾಗ ಮಂಗಳಡಿಗಾಣದೆ ಬೊಬ್ಬಿಡ ಪಾಟಿಗೆಯ್ಯದು
ದ್ಯದ್ಗುರು ಭಕ್ತ ದೇಹಿಸಕಲಸದ್ಗುರು ಪಟ್ಟಲ ಚಿತ್ಕ್ರಿಯಾಸ್ಪದಂ
ಮದ್ಗುರು ರೇಣುಕೇಶ್ವರ ಮಹಾಗುರು ಮಾಳ್ಕೆಮಗಿಷ್ಟ ಸಿದ್ಧಿಯಂ ||೧||

## ರಾಜಶೇಖರ ವಿಲಾಸ

(ಆಶ್ವಾಸ ೧, ಪದ್ಯ ೫೩ - ೬೭)

ಶಿವವಕ್ತ್ರೋಭಸ್ಮರೇಣುಪ್ರಭವನೆಸಿಮುಂ ರೇಣುಕೇಶಾಖೆಯಂ ತಾ
ಳ್ದವನೀರಕ್ಷಾರ್ಥಮೀಶಂ ಬೆಸಸೆ ಧರಣಿಯೊಳ್ಕೊಲ್ಲಿಪಾಕೀಶನೊಳ್ಸಂ
ಭವಿಸುತ್ತುಂ ಜಂಗಮಾಕಾರದೆ ಸುಳಿದಖಿಳಕ್ಷೇತ್ರಮಂ ಪಾವನಂಗೆ
ಯ್ದು ವಿಶೇಷೌನ್ನತ್ಯದಿಂ ಕುಂಬಜಮುಖಮುನಿಪವ್ರಾಮಂ ಬೋಧಿಸುತ್ತಂ ||೧||

ಖಿಗತಿಯೊಳೆಯ್ದಿ ಲಂಕೆಗೆ ವಿಭೀಷಣನಿಷ್ಟಮನಿತ್ತು ಸಿದ್ಧರಂ
ಬಗೆಗೆಡಿಸುತ್ತೆ ಬಿಜ್ಜಳನನಳ್ಕಿಸಿ ನೇತ್ರಮನಿತ್ತು ತೆಲ್ಲಿಗಂ

ಗೆ ಗರುಡವಾಹಕಂಪನಮನಿಲ್ಲೆನಿಸುತ್ತೆ ನಿಜೋರುತೇಜದಿಂ
ದಗಣಿತಮಾದ ಪೆಣ್ಸೆರೆಗಳಂ ಬಿಡಿಸುತ್ತುರುವಿಕ್ರಮಾರ್ಕನಾ || ೨ ||

ಅಭಿಮತಮಿತ್ತು ಖರ್ಪರನ ಭಂಗಿಸಿ ಯಕ್ಷನ ರಕ್ಷಿಸುತ್ತೆ ಬಂ
ದಭವನನುಜ್ಞೆಯಿಂ ಮದುವೆನಿಂದು ಮಹೀಶ್ವರಪುತ್ರಿಯರ್ಕಳೊಳ್
ವಿಭವದೆ ತದ್ವಧೂತತಿಯೊಳಗ್ಗಳಭೋಗಮನಾಂತು ರೇವಣ
ಪ್ರಭು ಪಡೆದಂ ಮಹೋತ್ಸವದೆ ರುದ್ರಮುನೀಶ್ವರನೆಂಬ ಪುತ್ರನಂ || ೩ ||

ಕಾರುಣ್ಯಂಗೆಯ್ದು ಸದ್ದೀಕ್ಷೆಯನೆಸಗಿ ಲಸಚ್ಛಿತ್ಕ್ರಿಯಾಮಾರ್ಗಮಂ ಪೇ
ಳ್ದಾ ರಾಜತ್ಸೂನುಗಾಚಾರ್ಯತೆಯನೊಸೆದು ತಾನಿತ್ತುಮೇಶಾಜ್ಞೆಯಿಂ ದಿಂ
ತೀರೇಳ್ನೂರ್ವತ್ಸರಂಗಳ್ನೆರುಯೆ ಭರದೊಳಾ ಕೊಲ್ಲಿಪಾಕೀಶನೊಳ್ಪೊ
ಕ್ಕಾರಾಧ್ಯಂ ಮುಕ್ತಿರಾಮಾರಮಣನೆನಿಸಿದಂ ರೇಣುಕಾಚಾರ್ಯವರ್ಯ || ೪ ||

ರುದ್ರಮುನೀಂದ್ರನಾಮಮುನಿಮುಖ್ಯನಿಳಾತಳದಲ್ಲಿ ಪೆರ್ಮೆವೆ
ತ್ತದ್ರಿಜೆಯಾಣ್ಮನರ್ಗಳಮಹತ್ವಮನೆಲ್ಲೆಡೆಯಲ್ಲಿ ತೋರುತಂ
ಕ್ಷುದ್ರಮತಂಗಳಂ ಜಯಿಸಿ ಬೆಳ್ಪಸಮೆಣ್ದೆಸೆದೀವೆ ಸಂತತಂ
ಭದ್ರ ಚರಸ್ವರೂಪನೆಸೆದಂ ನಿಗಮಾಗಮಶಾಸ್ತ್ರಪಾರಗಂ || ೫ ||

ಆ ಗುರುನಾಥ ವಂಶದೊಳೆ ಪುಟ್ಟಿದನೊರ್ವನಖರ್ವಸರ್ವಶೈ
ವಾಗಮವೇದಿ ನಿರ್ಜಿತಮನೋಜನಿಳಾತಳರುದ್ರಮೂರ್ತಿ ಸ
ದ್ಯೋಗಿವರೇಣ್ಯನಾನತಸುರಾಗನರಾಗನಗಣ್ಯಪುಣ್ಯಶೋ
ಭಾಗತವಿಗ್ರಹಂ ವಿಪುಳಶೈವಸುಧಾಂಬುಧಿಶರ್ವರೀಶ್ವರಂ || ೬ ||

ಜ್ಞಾನನಿಧಾನನಾನನತಜನಪ್ರಸರಾಮರಭೂರುಹಂ ಸುಧಾ
ಭಾನುಸಮಾನಕೀರ್ತಿ ಶಿವಮೂರ್ತಿ ಮುನೀಶ್ವರಚಕ್ರವರ್ತಿ ಧಾ
ತ್ರೀನವಿತಾನಮಾನಿತಪದಂ ಪದೆದೊಪ್ಪಿದನುತ್ತಭಾವನು
ದ್ದಾನನವೀನನಾಮಚರಪುಂಗವನಂಗಜಮಾನಮರ್ದನಂ || ೭ ||

ಆ ಶಿವಯೋಗಿಹಸ್ತ ಕಮಳೋದರದೊಳ್ಮಿಗೆ ಪುಟ್ಟಿ ಭಕ್ತಿಯಿಂ
ಶ್ರೀ ಶಿವನಂಘ್ರಿಯಂ ಭಜಿಸಿ ತತ್ಕೃಪೆಯಿಂ ಘನಶಿಷ್ಯವೃಂದಮಂ
ದೇಶಿಕಶೇಖರಂ ಪಡೆವುತಾತ್ಮಸಮಾನರನುರ್ವಿಗನ್ನದಾ
ನೀಶನೆನಿಪ್ಪ ನಾಮಮಭಿರಾಮತೆವೆತ್ತಿರೆ ತೋರ್ದನೂರ್ಜಿತಂ || ೮ ||

ಶಿವನ ಗುಣಂ ಪುರಾಂತಕನ ವಿಕ್ರಮಮಿಂದುಕಳಾಕಪರ್ದನು
ತ್ಸವಮಹಿರಾಜಭೂಷಣನ ಮೈಮೆ ಮಹೇಶನ ಭಾಗ್ಯಮಂಬಿಕಾ
ಧವನ ಜಸಂ ಗಿರೀಶ್ವರನ ಗೌರವಮೊರ್ಬುಳಿಗೊಂಡು ಪುಟ್ಟಿದಂ
ತೆವೊಲೊಗೆದಂ ತದೀಯ ಕರಕಂಜದೆ ರೇವಣಸಿದ್ಧದೇಶಿಕಂ || ೯ ||

ಧರಣೀರಮಣಿಯ ಹೃದಯಾಂ
ಬುರುಹದವೊಲ್ ಮೆರೆದು ತೋರ್ಪ ದನುಗೂರೊಳ್ಬಾ
ಸುರಕರ್ಣಿಕೆವೊಲ್ ರಾಜಿಪ
ವರಮಠದೊಳ್ ಪರಮಹಂಸನೆನೆ ರಂಜಿಸಿದಂ || ೧೦ ||

ಶಿವಪೂಜಾರತಿಯಿಂ ರತೀಶ್ವರಜಯಪ್ರಾಗಲ್ಭ್ಯಸದ್ವೃತ್ತಿಯಿಂ
ವಿವಿಧಾಮ್ನಾಯವಿಚಾರದಿಂ ಶರಣಗೋಷ್ಠೀಸಾರಸಲ್ಲಾಪದಿಂ
ಭುವನಸ್ತುತ್ಯನಶೇಷಶಿಷ್ಯತತಿಯಿಂ ತಾನೊಪ್ಪಿದಂ ಶಂಭುಸಂ
ಭವತದ್ರೇಣುಕರೂಪರೇವಣಮಹಾಯೋಗೀಂದ್ರಪಂಚಾನನಂ || ೧೧ ||

ವರವಾಣಿವಿಬುಧಸೇವಿತ
ಚರಣಂ ಕಲ್ಯಾಣಗರ್ಭನಾಗಿಯುಮಜನಂ

ತಿರೆ ಜಡಜಜನೆನಿಸದೆ ತ
ದ್ಗುರುಕರಕಂಜಾತಜಾತನೆನಿಸಿದನೀತಂ ||೧೨||

ಮಣಿಯದ ಮಾನ್ಯರಿಲ್ಲ ತಲೆವಾಗದ ವಾದಿಗಳಿಲ್ಲ ಬಂದು ಸಂ
ದಣಿಸದ ಸಂತರಿಲ್ಲ ನಡೆನೋಳ್ಪಡೆ ಬಾರದ ರಾಜರಿಲ್ಲ ಕೂ
ರ್ತಣಿಸದ ಧೀರರಿಲ್ಲ ನುತಿಗೆಯ್ಯದ ಕಬ್ಬಿಗರಿಲ್ಲ ಸಾರಸ
ದ್ಗುಣಮನೆನಲ್ ಧರಾತಳದೊಳೊಪ್ಪಿದನಾ ಚಿಕವೀರ ದೇಶಿಕಂ ||೧೩||

ಕ್ಷೀರಪಟೀರಹೀರಘನಸಾರಸುಶಾರದನೀರದೋರುಮಂ
ದಾರತುಷಾರವಾರವರಹಾರಸರೋರುಹಸಾರಸಾರಿಬ್ಬಂ
ದಾರಕವಾರಣಾರುಚಿರನಾರದತಾರಸಮೀರಭುಗ್ವರೋ ||೧೪||

ಜನನುತಶಾಂತಿಭೂಷನ ಜಗಜ್ಜನವಂದ್ಯನ ಧರ್ಮಪೂರ್ಣಕೋ
ಶನ ಧರಣೀಶಪೂಜ್ಯನ ಶುಭಾವಹಭಾವನ ಶೈವಪಾರಿಜಾ
ತನ ಮಧುರಸ್ವಭಾವನ ಮಹಾಮಹಚಿತ್ತನ ಮನ್ಮಥಾರಿರೂ
ಪನ ಚಿಕವೀರದೇವನ ಚಿದಂಬರಶಂಬರಜಾತಮಿತ್ರನಾ ||೧೫||

## ಶಾಂತಲಿಂಗದೇಶಿಕರ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ

**(ಕಥೆ ೧೭೬ ಮತ್ತು ೯೭೪)**

''ಖರ್ಪರನು'' ಎಂಬುದಕ್ಕೆ ಕಥೆ :

ಖರ್ಪರನೆಂಬ ಸಿದ್ಧನು ಕೀಲಕ ಪರ್ವತದಲ್ಲಿದ್ದು, ಪಾತಾಳಾಂಜನ ಜಲಾಂಜನ ಮೇಘಾಂಜನ ಮೊದಲಾದಂಜನಸಿದ್ಧಿಯ ಬಲ್ಲಾತನಾಗಿ, ರಾಯರಿಗೆ ದ್ರವ್ಯದ ಸಾಧಿಸಿ ಕೊಡುತ ಬರುತ್ತಿರಲು, ಇತ್ತ ಕಲ್ಯಾಣದಲ್ಲಿ ಬಿಜ್ಜಳನು ''ಮಾಸನೂರ ಮಡುವಿನಲ್ಲಿ ರೇವಣಸಿದ್ದೇಶ್ವರನು ಮಡಿಗಿದ ಸುರಗಿಯದೆ'' ಯೆನಲು ಕೇಳಿ ಅದು ತನಗೆ ಬೇಕೆಂದೆನಿಸಿ ತೆಗೆಯಬೇಕೆಂಬಷ್ಟರೊಳಗೆ, ಖರ್ಪರನೆಂಬ ಸಿದ್ಧ ಬರಲು, ಅವನ ಕೇಳಲು, ಅಂಜನವನಿಕ್ಕಿ ನೋಡಿ ''ಹನ್ನೆರಡು ಸಾವಿರ ಕನ್ನಿಕೆಯರು ಬೇಕೆಂದು'' ಪುಸಿಯ ಪೇಳಲು, ಬಿಜ್ಜಳನಾಗ ಪೇಳಿದಷ್ಟು ಕನ್ನಿಕೆಯರ ತರಿಸಲೊಂದು ಕಡಿಮೆಯಾಗಲು, ಮಾಯದೇವಿಯ ಮಗಳು ರೇವಕ್ಕನ ಪಿಡಿತರಲು, ಮಾಯಾದೇವಿ ಕಲ್ಯಾಣದಲ್ಲಿ ಮೊರೆಯಿಡಲಾಕ್ಷಣದೊಳು ಕಾಶಿಯಿಂದ ರೇವಣಸಿದ್ಧೇಶ್ವರ ಬಂದು ರೇವಕ್ಕ ಮೊದಲಾದ ಕನ್ನಿಕೆಯರ ಬಿಡಿಸಿ, ಆಗ ಮಾಸನೂರ ಮಡುವಿನದಲ್ಲಿರ್ದ ಸುರಗಿಯ ಬಿಜ್ಜಳಗೆ ತೋರಿಸಿ ''ಪಿಡಿ''ಯೆನಲು, ಪಿಡಿಯಲಮ್ಮದೆ ನಡುಗುತ್ತಿರಲಲ್ಲಿಯೆ ಮಡಗಿಸಿ, ಖರ್ಪರನೆಂಬ ಸಿದ್ಧನ ಇಂದ್ರಜಾಲ ಮಹೀಂದ್ರಜಾಲವ ಜಯಿಸಲವ ಸೋತು ರೇವಣಸಿದ್ದೇಶ್ವರನ ಬೀಳ್ಕೊಂಡು ಪೋಗಿ, ಮತ್ತಾ ಖರ್ಪರೆಂಬ ಸಿದ್ಧನು ಸಕಲಸಿದ್ಧಿಯ ಬಲ್ಲೆನೆಂಬ ಗರ್ವದಿಂದ ಸೊನ್ನಲಾಪುರಕೆ ಬಂದು ಸಿದ್ಧರಾಮೇಶ್ವರನು ಮಾಡುವ ಯಜ್ಞಕುಂಡವುರಿವುತ್ತಿರಲು ನೋಡಿ, ಅದರೊಳಗೆ ಖರ್ಪರನೊಂದು ಮೂಲಿಕೆಯ ಹಾಕಲಾಗ, ಅಗ್ನಿ ನೀರಾಯಿತು; ''ಒಬ್ಬ ಸಿದ್ಧ ಬಂದು ಹೋಮದಗ್ನಿಯ ನೀರ ಮಾಡಿದನೆ''ಂದು ಶಿಷ್ಯರು ಸಿದ್ಧರಾಮಯ್ಯಗೆ ಪೇಳಲು ಕೇಳಿ, ಆದಕೆ ಸಿದ್ಧರಾಮಯ್ಯ ತಮ್ಮ ಶಿಷ್ಯರ ಕಯ್ಯಲ್ಲಿ ಒಂದು ಮೂಲಿಕೆಯ ಹಾಕಿಸಲು, ಅದು ಮೊದಲಂತೆ ಉರಿವುತ್ತಿರಲದ ಕಂಡು ಖರ್ಪರನು ''ನಿಮ್ಮ ಗುರುವು ಬಂದು ನನ್ನೊಡನೆ ವಾದಿಸಲೆ''ಂದು ಪೇಳುವಲ್ಲಿ ಆ ಖರ್ಪರನು ಕೂಡಳಂಜೋಗಿಗಳು ಡೊಂಬೆಯಂ ಮಾಡಿ ರಾಮಯ್ಯನ ಶಿಷ್ಯರ ನೋಯಿಸಲು, ಶಿವಸಿದ್ಧ ನೊಸಲ ಕಣ್ದೆರುದು ಜೋಗಿಗಳ ಸುಟ್ಟುರುಹಲು ಕಂಡು, ಖರ್ಪರ ಬಂದು ಸಿದ್ಧರಾಮಯ್ಯಂಗೆ ಹೊಡಗೆಡದು ದೈನ್ಯದಿಂದ ಮೊರೆಯಿಡಲಾಗ, ಜೋಗಿಗಳ ಪ್ರಾಣವ ಪಡದು ಕೊಡಲಾಗ, ಅಂಜನ ಸಿದ್ಧರಿಗೆ ಅಸಾಧ್ಯಸಿದ್ಧನೆಂಬ ಬಿರಿದ ಹೊಗಳಿಸಿಕೊಂಬುದು ಬಿಟ್ಟು ನಾಂಚಿ ಪೋದ ಖರ್ಪರನು.

"ಭಸಿತವ ಕೊಡೆ ಮುಟ್ಟಿದೊಡೆ ಲಿಂಗ, ಮತ್ತೆ ಮುಟ್ಟೆ ಹೊನ್ನು ಆಗುವದು; ಮಾಯಾದೇವಿಗಿತ್ತ ರೇವಣಸಿದ್ದ" ಎಂಬುದಕ್ಕೆ ಕಥೆ :

ಕೈಲಾಸದಲ್ಲಿ ರೇಣುಕನೆಂಬ ಗಣೇಶ್ವರನು ಶಿವನ ಬೆಸನದಿಂದ ಭೂವಳಯದಲ್ಲಿ ಕೊಲ್ಲಿಪಾಕಿಯ ಸೋಮೇಶ್ವರನೆಂಬ ಲಿಂಗದೊಳಗೆ ಮೇಘ ಗರ್ಜಿಸುವಂತೆ ಸಿಡಿಲ ಧ್ವನಿಯಂತೆ, ಕಂಥೆ ಕಮಂಡಲ ಲಾಕುಳ ಕರ್ಣಕುಂಡಲ ಕೌಪೀನ ಸಹವಾಗಿ ಪುಟ್ಟಿ, ಚಂದ್ರಮನಂತೆ ಪರಮ ಶಾಂತಿಯಿಂದೆ ದಕ್ಷಿಣ ದೇಶಕ್ಕೆ ಚರಿಸಿ ಬಂದು, ಅಗಸ್ತ್ಯಗೆ ವೀರಶೈವವ ಬೋಧಿಸಿ, ಕಂಚಿಗೆ ಬಂದು ವಿಷ್ಣುಚೋಳನ ಭಿನ್ನಹಕ್ಕೆ ವಿಷ್ಣುವಿನ ಚಲನೆಯ ವೀರ್ಯದಿಂದ ನಿಲಿಸಿ, ವಾದಿಗಳ ತಲೆವಾಗಿಸಿ, ಅಲ್ಲಿಂದ ಕಲ್ಯಾಣಕ್ಕೆ ಬಂದು ರೇವಣಸಿದ್ದೇಶ್ವರನು ಮಾಯದೇವಿಯೆಂಬ ವೇಶಿಯ ಮನೆಗೆ ಬರಲು ಆಕೆ ನಮಸ್ಕರಿಸಿ, "ಎಲೆ ಮರುಳನೆ, ನಮ್ಮನೆಯಲಂಬಕಳವ ನುಂಡು ನೀ ನೀರ ಹೊತ್ತುಕೊಂಡು ಮನೆಗೆ ತಾ"ರೆನಲು ಒಳ್ಳಿತೆಂದಾಗ ಒಡಂಬಟ್ಟು, ಬ್ರಹ್ಮಾಂಡಗಳೆಂಬ ಭಾಂಡವನೆ ಹೊತ್ತನೊ ಎಂಬಂತೆ ಹರವಿಗಳ ಕಾವಡಿಯೊಳಗಿಟ್ಟುಕೊಂಡು ನೀರ ತರುತಿರಲು, ಒಂದು ದಿನ ರಾತ್ರಿಯಲ್ಲಿ ಮಾಯಾದೇವಿ ತನ್ನ ಮನೆಯ ಮಗ್ಗುಲಿನ ಮಂಟಪದಲ್ಲಿ ಮಲಗಿರ್ದ ಮರುಳನ ನೋಡುವೆನೆಂದು, ತನ್ನ ಉಪ್ಪರಿಗೆಯ ಮೇಲೆ ನಿಂದು ನೋಡುವಲ್ಲಿ, ತಾ ನಿಂದ ಉಪ್ಪರಿಗೆ ಕೀಳಾಗಿ, ಆ ಮರುಳ ಮಲಗಿರ್ದ ಮಂಟಪವೆ ದಿವ್ಯ ಹಜಾರದುಪ್ಪರಿಗೆಗೆ ಮೇಲಾಗಿ ಕಾಣಲೆಲ್ಲ ದೇವಸ್ತ್ರೀಯರು ಪಾದವನೊತ್ತುತ ಹರಿಯಜೇಂದ್ರಾದಿ ಸುರರು, ವಾಲೈಸುವರ ನಿಯೋಗವಂ ಕಂಡು, "ಇವರು ಮಹಿಮಾ ಪುರುಷರೆ"ಂದು ಹೆದರಿ, ನೀರ ಹೊರಸುವದ ಬಿಡಿಸಿ ನಮಿಸಲಾಗಿ, ಆಕೆಗೆ ಹರಸಿ ವಿಭೂತಿಯ ಕೊಡಲದು ಮುಟ್ಟಿದೊಡೆ ಲಿಂಗವಾಗುವದು; ಮತ್ತೊಮ್ಮೆ ಮುಟ್ಟಿದೊಡೆ ಹೊನ್ನರಾಸಿಯಾಗುವದು. ಅದರಿಂದ ಚಿಕ್ಕ ಮಾಯದೇವಿಯೆಂಬುವಳು ಜಂಗಮಾರ್ಚನೆಯಂ ಮಾಡುತ್ತ ಪುತ್ರಿಯಂ ಪಡೆದು, ರೇವಕ್ಕನೆಂಬ ಹೆಸರಿಟ್ಟು ಸುಖದಿಂದಿರಲಿತ್ತ, ರೇವಣ್ಣನು ಮತ್ತೇಳ್ನೂರು ವರುಷ ದೇಶಾಂತರವಂ ಮಾಡಿ, ಮಂಗಳವಾದದ ಗಾಣಿಗ ಕಲ್ಲಿಸೆಟ್ಟಿಯ ಸತಿಗೆ ಎತ್ತಿಗೆಯು ಮೂವರಿಗೊಂದೊಂದ ಕಣ್ಣ ಕೊಟ್ಟಾತಗೆ ತವನಿಧಿಯನಿತ್ತು ಜಂಗಮಾರ್ಚನೆಯ ಮಾಡೆಂದು ಪೇಳಿ, ಅಲ್ಲಿಂದ ರೇಣುಕ ಗಣೇಶ್ವರನೆಂಬ ನಾಮದಿಂದ ಬಿಜ್ಜಳನರಮನೆಗೆ ಭಿಕ್ಷಕ್ಕೆ ಬರಲವರು ಕುದಿವ ಓಗರವನಿಕ್ಕಲು, ಕಯ್ಯಲ್ಲಿ ತೆಗೆದುಕೊಂಡು ಕಂಭಕ್ಕೆ ತೊಡೆಯಲಾಗ, ಅರಮನೆಯ ಗಜತುರಗಶಾಲೆಯೆಲ್ಲಾ ಬೇವಲ್ಲಿ, ಬಿಜ್ಜಳನು ಅಡಿಗೆರಗಿ ನುತಿಸಲು, ಮುನ್ನಿನಂತೆ ನಿರ್ಮಿಸಿಕೊಟ್ಟು ರೇವಣಸಿದ್ದೇಶ್ವರನು ಕಾಶಿಯತ್ತ ದೇಶಾಂತರವಂ ಪೋದನು.

## ಗುರುಲಿಂಗ ದೇಶಿಕರ ಲಿಂಗಪುರಾಣ

**(ಸಂಧಿ ೨೪, ಪದ್ಯ ೩೫ - ೫೦, ಸಂಧಿ ೨೫, ಸಂಧಿ ೨೬ ಪದ್ಯ ೧ - ೧೯)**

ಇಂತೆಸೆವ ಗುರುವಿನುಪದೇಶದಿಂ ರಂಜಿಸುತ
ನಂತತತ್ವಾರ್ಥಗಳನರುವುತ ವಿಲಾಸದಿಂ
ಮಂತಣದಿ ಲಿಂಗಾನುಭವಗೋಷ್ಠಿಯಿಂದೆಸೆವುತಂತರಂಗದೊಳರುವುತ
ಯಂತ್ರವಾಹಕನಲ್ಲದನ್ಯತ್ರವಿಲ್ಲೆನುತ
ಸಂತಸದಿ ಬಸವ ಮೊದಲಾಗಿರ್ದ ಶರಣಜನ
ಪಂತಿವಿಡಿದೊಪ್ಪಿರ್ದರಮಲತರ ಶೋಭೆಯಿಂ ಕಂತುಹರಭಕ್ತಿವೆತ್ತು ||೧||

ಇರೆ ವಿಶ್ವರೂಪ ತನ್ನುದರದೊಳಗಿರಿಸುತಂ
ಕರಮೆಸೆದು ಕಲ್ಯಾಣಪಟ್ಟಣಕೆ ನಡೆತಂದು
ವರಬಿಜ್ಜಳಾಧಿಪನ ರಾಜಗೃಹಕೆಯಿದುತಂ ಭರದಿ ಭಿಕ್ಷವ ಬೇಡಲಂ
ಶರಣರೇಣುಕಗೆ ಹಯಶಾಲೆಯಿಂ ಕುದಿವುತಿಹ
ಕರುಕನೊಂದಿದ ಮಡ್ಡಿಯಂ ತಂದು ಸಿದ್ಧೇಂದ್ರ
ಕರದ ಕರ್ಪರಕೆ ನೀಡಲು ಕೆಂಡಗುದಿಯೆಸೆದು ಸುರಿವುತಿರೆ ಪಾತ್ರೆಯಲ್ಲಿ ||೨||

ಇತ್ತ ರೇಣುಕನದಂ ಕೊಂಡು ತೆರಳುತ್ತಮಿರ
ಲ್ಯತ್ತ ಬಿಜ್ಜಳನ ರಾಜಗೃಹಂ ಪೊಗೆನೆಗೆದು
ಹೊತ್ತಿ ಚಿಟಿಭಿಟಿಲೆಂದು ಬೇವುತಿರೆ ಭಯವಿಡಿದು ಸುತ್ತಲುಂ ಧಗಧಗಿಸುತ
ಮತ್ತಗಜ ತುರಗ ಶಸ್ತ್ರದಶಾಲೆ ದಹಿಸುತಂ

ಚಿತ್ರದ ಹಜಾರಮಂಟಪವೊಳವನಂ ಕರಿಕು
ವೆತ್ತು ಭಂಡಾರ ಭೂಷಣ ಜಲ್ಲಿ ಪಟ್ಟೆಯುಂ ಕೆತ್ತುರಿದವೊಂದುಳಿಯದೆ ||೩||

ನಾಟಕಸ್ಥಲ ಛತ್ರವಾಂದೋಳನಂ ದಿವ್ಯ
ನಾಟಕದ ಸತಿಯರು ಪರಿಮಳದ ಭಂಡಾರ
ನಾಟಕದ ವಾದ್ಯ ರತ್ನದಗೂಡೆ ಪಿಲ್ಲಣಂ ನಾಟಕದ ಸಂಜೋಗವು
ದಾಟಿಸುವರಿಲ್ಲ ಪೊಗುವವರಿಲ್ಲ ಬೆಂದವುರು
ಕೀಟಕಂ ಕೊಳ್ಳವನೆಯೊಳು ಸಿಕ್ಕಿದಂತಾಗಿ
ಪಾತಕಜನಂ ಪರಿಜನಂ ಬೆಂದು ಬಹಳಿಮದಿ ಕೂಟದಗ್ನಿಯೊಳಳಿದರಂ ||೪||

ಇಂತೆಲ್ಲರಳಿದು ರಾಜಗೃಹಂ ನೀಸಲುಂ
ಮಂತಣದಿ ಬಿಜ್ಜಳಂ ದು:ಖಿಸುತ ಮನದೆಡೆಯ
ಚಿಂತಿಸುತ ಬಸವರಾಜನ ಬರವ ಹಾರುತಂ ಭ್ರಾಂತಿಡಿದ ತೆರದೊಳಿರಲು
ಕಂತುಹರ ಬಸವೇಶನೀ ಕೌತುಕಂಗೇಳಿ
ತಾಂ ತಳರಿ ಬಂದು ಬಿಜ್ಜಳನ ಸಂಧಿಸೆ ಭೂಪ
ನಂತರಿಸದಲ್ಲಿ ದೀರ್ಘಾಳೋಚನೆಯೊಳಿರ್ದನೆಂತೊರೆವಡರಿದು ಬಗೆಗೆ ||೫||

ದೇವ ಬಸವೇಶ ಬಿಜಯಂಗೆಯ್ದುದೆಂದು ನೃಪ
ತಾವಿಮಲ ಗದ್ದುಗೆಯನಡರಿಚುತ ಕುಳ್ಳಿರಿಸಿ
ಭಾವಿಸಿ ನಮಸ್ಕರಿಸಿ ತನ್ನ ಚಿಂತೆಯನೊರದನಾವರಿಸಿ ಬಸವೇಶಗೆ
ದೇವ ಎನ್ನಂತ:ಪುರಂ ದಹನವಾಯ್ತು ಮಿಗೆ
ತೀವಿದಾಶ್ಚರಿಯಿದಂ ಕಂಡು ಪರಿಕಿಪುದಖಿಳ
ಜೀವಿಗಳಿಗರಿದು ನಿಮ್ಮಯ ಕೃಪೆಯೊಳರುವಪ್ಪುದೀ ವಿಧವನರುವುದೆನಲು ||೬||

ಎನೆ ಬಸವರಾಜ ನಿಮ್ಮರಮನೆಗೆ ಶಿವಯೋಗಿ
ಜನಮುಖ್ಯ ಮರುಳವೇಶದಿ ಭಿಕ್ಷಯಾಚಕದೊ
ಳನಘನೊರ್ವ ಬಂದನೇ ಕಂಡಿರೇಯೆಂದಡೆನಸಿನಿಂ ಕುಂಟನೆಂಬ
ವಿನುತ ಕರಣಿಕನೊರ್ವ ಬಿನ್ನೈಸಿದಂ ದೇವ
ದಿನಚರಿಯ ಬರ್ಪುದಿಲ್ಲಂ ಜಜ್ಜುಕಂಥೆಗಂ
ವನದ ಕಡೆಯಿಂದೆಯ್ದಿ ನಮ್ಮರಮನೆಗೆ ಭಿಕ್ಷವೆನುತ ಬೇಳ್ದಂ ಕ್ಷಿಪ್ರದಿ ||೭||

ಕಂಡು ಹಯಶಾಲೆಯಿಂ ಮಡ್ಡಿಯಂ ಪಾಕಿಸುವ
ತೊಂಡರ್ಕಳಲ್ಲಿ ಭಿಕ್ಷವ ಬೇಡಿ ಜವದಿ ಕೈ
ಕೊಂಡು ತೆರಳಿದನೆಂದಡಹುದು ರೇವಣಸಿದ್ಧಮಂಡನಂ ಶಿವಸೌಖ್ಯನು
ಚಂಡಕರತೇಜಂಗೆ ಕುದಿವಮಡ್ಡಿಯನೀಡ
ಲುಂಡಕೈಯಿಂದಾಂತು ವಿಶ್ವಪ್ರಕಾಶನರಿ
ಖಂಡರೇಣುಕನವನ ದೆಸೆಯಿಂದಲಾಯ್ತು ಸಲೆ ಪೆಂಡವಾಸಂ ಬೆಂದುದು ||೮||

ಪರಮನಪರಾವತಾರಂ ಭುವನರಕ್ಷಕಂ
ಗುರುಕುಲಾಗ್ರಣಿ ರೇಣುಕಂ ಪಂಚಭೂತೇಶ
ನರ ನಾಗ ನಿರ್ಜರಸ್ತುತಿಪಾತ್ರ ಸಾವಯಂ ಪರಮಸ್ವತಂತ್ರಮಹಿಮ
ನಿರತಿಶಯ ಮಾಯಾವಿಲೀನಪದವಿಧ್ವಂಸ
ಪುರಮಥನವಕ್ತ್ರ ಸಂಜಾತ ಭಿಕ್ಷಾವೇಶ
ಗರುವರೇಣುಕ ಬಂದಡಿನಿತು ಕಪಟವನೆಣಿಸಿ ಸಿರಿಯನಳಿದಿರಿ ಲೇಸೆನೆ ||೯||

ಬಿಜ್ಜಳಂ ಮನದಿ ಭಯವಟ್ಟವರ ಕಾಣ್ಬೆನೆಂ
ದುಜ್ಜುಗಿಸಿ ಬಸವೇಶಗಂದು ಬಿನ್ನೈಸುತಂ
ನಿರ್ಜರವಿಲಾಸ ರೇಣುಕನ ಪದಮಂ ತೋರು ತಜ್ಜವದೊಳೆನಗೆಂದರೆ

ಮಜ್ಜೀವಿತೇಶ ರೇವಣನಿರ್ಪ ಠಾವುವುಂ
ನಜ್ರಿಸುತ ಕಲ್ಯಾಣಪುರದೊಳರಸಲ್ವೇಳ್ಕು
ಪರ್ಜನ್ಯಕಾಲನಂ ಪರಮಸ್ವತಂತ್ರನಂ ರಜ್ಜುದಂಡಕರಾಬ್ಜನ ||೧೦||

ಎಲೆ ಹಸಾದಂ ಲೇಸು ನಿಮ್ಮೊಡನೆ ಬಂದಪೆಂ
ಘನಮಹಿಮನು ನೋಳ್ಪೆನೆನುತ ಬಸವೇಶನೊಳು
ಜನಪ ನಡೆತರುತಿರ್ದ ಕಲ್ಯಾಣಪುರವೀಥಿಗನಲನೇತ್ರನನರಸುತ
ತನುಪುಳಕವಡೆದು ಬಸವೇಶ್ವರಂ ಕೇಳುವಂ
ಮನದೊಳಿರ್ಪಜ್ಞಾನ ಹರ ಮರುಳಸಿದ್ಧನಂ
ಬನವಾಸಿ ಭಿಕ್ಷುಕಂ ಶಿವಯೋಗಿಯಂ ಕಂಡರೆನಗುಸುರಿರೇಯೆಂದನು ||೧೧||

ಮರುಳಸಿದ್ಧನ ಕಂಡವರ್ನನಗೆ ತೋರಿರೇ
ಮರುಳಬಳಗದಪತಿಯ ಮನ್ಮಹಾದೇವನಂ
ಮರುಳ ರೂಪಿನೊಳೆಸೆವ ಚಿನ್ಮಯವಿಲಾಸನು ಮರುಳ ಕುಲಸಂರಕ್ಷನ
ಕರುಣಚಾರಿತ್ರನಂ ಭವಲತಲವಿತ್ರನಂ
ಗುರುಪದವಿಲಾಸನಂ ಸುಜ್ಞಾನಭೂಷನಂ
ನಿರುತ ಕಂಡವರೆನಗೆ ತೋರಿರೇಯೆನುತಲ್ಲಿ ಭರದಿ ಬಸವೇಶ ಕೇಳ್ದ ||೧೨||

ಅಲ್ಲಿ ನಡೆದಾ ಪಟ್ಟಣದವೀಥಿಗಳನರಸುತಂ
ಅಲ್ಲಿ ಯಾದವಕುಲದ ವೀಥಿಗಳ ನೋಡುತಂ
ಅಲ್ಲಿ ಭೂಸುರಕುಲದ ಕೇರಿಯಂ ಬೆದಕುತಂ ಅಲ್ಲಿ ಚಾರರ ಕಳುಪುತ
ಅಲ್ಲಿ ಪುರದಿಪ್ಪತ್ತುಯೋಜನವ ಬಳಸುತಂ
ಅಲ್ಲಿ ನಾನಾ ಜನಂಗಳ ಕೇಳಿ ಬಳಸುತಂ
ಅಲ್ಲಿ ನಾನಾ ಜನಂಗಳ ಕೇಳಿ ಸುಳಿವುತಂ
ಅಲ್ಲಿ ಮನ್ಮಥನಲಾವಣ್ಯನೆಲಸಿರ್ಪೆಡೆಗೆ ಮೆಲ್ಲನೆಯಿತರುತಿರ್ದರು ||೧೩||

ನಡೆದು ಸಂದಣಿವೆತ್ತ ಠಾವುಮಂ ನೋಡುತಂ
ತೊಡಗಿ ಭಿಕ್ಷುಕರಿಳಿವ ಸರಣಿಯಂ ಬೆದಕುತಂ
ಮಡಲಿರಿದ ಗಲಭೆಗಳ ನಿಟ್ಟಿಸುತ ಲಂಘಿಸುತ ಮೃಡರೂಪನಂ ನೆನೆವುತ
ಗಿಡುಗಳಲ್ಲಿರ್ಪನೋ ಗುಹೆಗಳಲ್ಲಿರ್ಪನೋ
ಮಡುಗಳ ತಟಾಕದಿಂ ಪೂಗೊಯ್ಯುತಿರ್ಪನೋ
ಜಡರಂತಿರೆಸದಿರ್ಪನೋಯೆಂದು ಕೇಳುತಿರನೊಡನೊಬ್ಬರಿವನುಸುರ್ದ ||೧೪||

ನೀವರಸುವನ ಕಂಡು ನಾ ಬಲ್ಲೆನೀ ಕೇರಿ
ಗಾವಗಂ ಬರ್ಪನವರವರ ಮನೆಯಲ್ಲುಂಬ
ಕೇವಲವಿಲಾಸಿ ಶಾಮಲವರ್ಣ ಜಡೆಯುಂಟು ತೀವಿಗಳದಲ್ಲಿಜಜ್ಜು
ಭಾವನೆಗೆ ಮುಗ್ಧ ಮಾತಿಲ್ಲ ಹುಸಿನಗೆಯವಂ
ಠಾವಿಲ್ಲವಿಲ್ಲಿ ವಿಸಟಂಬರಿವುತಿರ್ದಪಂ
ನೀವರಿಸಿ ಪಣ್ಯಾವಿಲಾಸಕೇರಿಯೊಳೆಂದು ತಾ ವನಿತೆಯೊಳ್ನೋದನು ||೧೫||

ಇದು ಪರಶಿವಾಕೃತಿಯ ಗುರುಲಿಂಗಣಾರ್ಯನಂ
ಪದುಳದಿಂ ನಂತಿಗೈದ ಲಿಂಗಪೌರಾಣದಿಂ
ಮುದವಡೆದ ಮಡಿವಳನ ಚಾರಿತ್ರ ಬಸವೇಶನೊದವಿಸಿದ ಶರಣಕಥನ
ಸದಮಲ ಪ್ರಭುವಿನನುಭವ ಬಿಜ್ಜಳಾಧಿಪನ
ಸದನ ರೇಣುಕದೇವನಿಂ ದಹನ ಬಸವೇಶ
ನಧಿಕ ಮಂಗಳವಾಡದಿಂ ರೇಣುಕನ ನೋಳ್ಪ ಸುಧನ ಚತುರ್ವಿಶತಿ ಗತಿ ||೧೬||

## ಸಂಧಿ : ಇಪ್ಪತ್ತೈದು

ಗಳಿಕಾಜನದ ನಿಕೇತನಗಳಂ ನೋಡುತಂ
ಬಳಿಕ ನಾನಾತೆರದ ಸಿಂಗರವ ನಿಟ್ಟಿಸುತ
ವಳಿಕನೇತ್ರನ ರೇಣುಕನನರಿಸಿ ಬರುತಿರ್ದನಿಳೆಪನುಂ ಬಸವೇಶನು ||ಪ||

ಆವಳಧರದಚುಂಬನದೊಳೈದುಮೊಗನಾದ
ಆವಳಾಲಿಂಗನದಿ ನವ್ಯದಶಭುಜನಾದ
ನಾವಳ ಮುಖಾಬ್ಜರಸಗಂಡು ಧವಳಿಮನಾದನಾವಳಂಗದ ಸೋಂಕಿನ
ಪಾವನತೆಯಿಂದ ಶಂಕರವೆಸರುಗಂಡ ಮ
ತ್ತಾವಳ ಮೃದುದೃಷ್ಟಿಯಿಂ ಶಾಂತವೆರಸಿರ್ಪ
ನಾವಳ ವಿಲಾಸಲೀಲೆಯೊಳು ಶಿವನಾದನಾ ದೇವನಡಿಗಾನೆರಗುವೆಂ ||೧||

ಇಂತು ಬಸವೇಶ್ವರಂ ಬಿಜ್ಜಳಂ ನಡೆತರುತ
ಮಂತಣದ ಗೇಹಗೇಹಂಗಳನ್ನರಿಸುತಂ
ಮುಂತೆ ಬರುತಿರ್ಪಲ್ಲಿ ಸಿಂಗರವಿಲಾಸದಿಂದಂ ತೀವಿ ಕರುವಾಡದ
ಪಂತಿಯಿಂ ವಿವಿಧಸೌಭಾಗ್ಯವ ವಿಲಾಸದಿಂ
ಕಂತುಮೋಹನವೆತ್ತು ಕಾಂತರಿಂದೆಸೆವುತಂ
ಸಂತಸದಿ ಸಂಭ್ರಮಂಬೆತ್ತು ಗಳಿಕಾಜನಂ ಮುಂತೆ ಶೋಭಿಸುತಿರ್ದರು ||೨||

ಓರಣಂಬಡೆದಿರ್ದ ಕರುವಾಡದಿಂ ಮಕರ
ತೋರಣಗಳಿದ್ದೆಸೆಯೊಳೊಪ್ಪುವುಯ್ಯಾಲೆಯಿಂ
ವಾರಣಮೊಗಂ ಬಡೆದ ಸೋಪಾನ ಕತ್ತುರಿಯ ಸಾರಣೆಯನುರುಕುಂಕುಮ
ಕಾರಣೆಯ ನವರತ್ನ ಕೀರಣದ ಕೆಲಸಗಳ
ತಾರಣಾದ್ರಿಯೊಳೆಸೆವ ಗೋಪುರದ ಭವನಗಳ
ಪೂರಣಂಬಡೆದ ಸೌಭಾಗ್ಯದಿಂದೆಸೆದರಾ ವಾರವಧುನಿವಹವಂದು ||೩||

ವ್ಯಸನವಲಸಿಕೆ ದುಗುಡ ಗಸಣೆ ಗನ್ನಂ ಚುನ್ನ
ಪೊಸನುಡಿ ಸರಸ ವೊತ್ತು ಜೊತ್ತು ಕಾತರ ಕನಲು
ಕಿಸುರು ಹೊಳ್ಳಕ್ಕೆ ಹೋರಟೆಗೊಡಸುಗೇಣ್ಮುರುಹುರಸನೆಯ ಕುತರ್ಕ ಮೋಹ
ವಶವಲ್ಲದಿರ್ಪ ನಯ ಕಾರ್ಪಣ್ಯಬೋಸರಂ
ಪಸರಿಸುವ ಗಮಕ ಶಠೆ ನಿರ್ದಯಂ ಕೃತಕವಿಡಿ
ದೆಸಕದಿಂದೊಪ್ಪಿದರ್ ವಾರವಧುನಿವಹವಿದ್ದೆಸೆಯತಲೆವಕ್ಕಿಯೆನಲು ||೪||

ಚಿನ್ನವರದನ ತೆರಿದೊಳೊರೆ ತೂಕಮಂ ನೋಡಿ
ಕನ್ನಕಾರನ ತೆರದಿ ಕಳುವಹೊತ್ತಂ ಬೆದಕೆ
ಬಣ್ಣಗೆಲಸಿಗನಂತೆ ಹೊಸಧಾತನಳವಡಿಸಿ ತನ್ನ ತಾನೇ ಮೆಚ್ಚುತ
ಸೊನ್ನಾರಿಯಂತೆ ಕೊಟ್ಬೊಡವೆಯಂ ಛಿದ್ರಿಸುತ
ಗೊನ್ನೂರಿ ಜೂಜಿನವನಂತೆ ಗೆಲ್ಲಮನರಿಸಿ
ಗನ್ನದಿಂ ಪರಿವಡೆದ ಸರ್ವಜನರಮಣಿಯರನಿನ್ನಾವನುಸುರಬಹುದು ||೫||

ಇವರ ಲಾವಣ್ಯವೇ ಕಮಲ ಕಮಲಂ ಕಮಲ
ವಿವರಶೃಂಗಾರವೇ ಕುಮುದಕುಮದಂ ಕುಮುದ
ವಿವರಲಂಕಾರವೇ ವಿಮದ ವಿಮದಂ ವಿಮದವಿವರ ಚೆಲ್ವಿನವಿಲಾಸ
ವಿವರಿಪಡೆ ಪೊಸತಚ್ಚಭ್ರಮರ ಭ್ರಮರಂ ಭ್ರಮರ
ವಿವರತನುಮಧ್ಯಲತೆ ಲತೆಗಳಂ ಕೀಳ್ಪಡಿಸ
ಲಿವರ ಬಣ್ಣಿಪಡೆ ನವದಶಸಹಸ್ರಾನನದ ಕವಿಗರಿದುಸುರ್ವಡೆಂತೊ ||೬||

ಪೊಡೆಯಲರನಂತೆ ಸರಸಿರುಹನೇತ್ರಂಗಳಿಂ
ಕಿಡಿಗಣ್ಣನಂತೆ ಜಡೆಮುಡಿಗಳ ವಿಲಾಸದಿಂ
ನುಡಿವೆಣ್ಣನೆರೆಯನಂತೊಡಲ ಹೊಂಬಣ್ಣದಿಂ ಮಡಲಿರಿದ ಭೋಗದಿಂದ
ಪೆಡೆವಣೆಗರಂತೆ ಮೈದೊಡಗಳಿಂ ಮೇರುವಂ
ತಿಡಿದ ಲಾವಣ್ಯದಿಂದಡರ್ವ ಸೊಬಗಿಂ ಜಸಂ
ಬಡೆದಲರ್ವಿಲ್ಲಗೆಣೆಯೆನಲುಡುವರಾಸ್ಯದಿಂ ಕಡುಚೆಲ್ವೆಯರ್ಮೆರೆದರು ||೭||

ತೆಳ್ವಸುರ ನಸಿನಡುವ ನೀಳ್ಪಡದ ಜಘನಮನ
ರಳ್ವ ನೈದಿಲಪಾಂಗಿನಿಂದೆಸೆವ ಕಣ್ಮಲರಿ
ನೊಳ್ವಿಲಾಸಂ ಬಡೆದ ಕರ್ಣದ್ವಯಮನಡರಿ ನೇಲ್ವ ಚಂಪಕಮಾಲೆಯ
ಕೀಳ್ಪಡಿಸುತಿರ್ಪ ನವತೋಳ್ವದನಮಂಡಲಂ
ಚೆಲ್ವಡೆದು ಸೊಬಗಿಡಿದು ಬೆಳ್ವೆಳಗನಮರ್ದ ಹಂ
ಗಳ್ವರ್ಣನೆಗೆ ವಿಚಿತ್ರಮನೆಯ್ದೆ ನಕ್ತಮನ್ನಾಳ್ವನಂಗನೆಯರೆನಲು ||೮||

ನಿರಿಗುರುಳ್ಗಳೊ ಚೆಲ್ವ ಪರಮೆಗಳ ಪಂತಿಯೋ
ನೆರೆದಿಂಗಳೋ ಕಾಂತಿಯೊರದೆಸವ ಲಪನವೋ
ಮರಿಮೀನ್ಗಳೋ ಸೊಬಗ ತುರುಗಿದೆವೆಗಂಗಳೋ ಮೆರೆವಚ್ಚಲಾವಣ್ಯವೊ
ಉರುಬಿ ತಲೆಬಿಲ್ಲುಗೊಂಡೆಸುವ ಮದನಾಸ್ತ್ರವೋ
ತರಿಸಂದ ಸೊಬಗಿನಿಂದೆರದ ಪುತ್ತಳಿಗಳೋ
ಕರೆಕಂಠಪಗೆವನ ಭುಜಪ್ರತಾಪಿಗಳೆನಲ್ ಸರಿಮಿಂಡಿಯರ್ಮೆರೆದರು ||೯||

ಪುಲ್ಲೆಗಣ್ಮಲರ ತೆಳುಗಲ್ಲಮಂ ತೋರಧ
ಮ್ಮಿಲ್ಲಮಂ ಕಾಣ್ಬರೆದೆ ಘಲ್ಲಿಸುವ ಕುಚಗಳಂ
ಪಲ್ಲವಾಧರಮನಿನಿವಿಲ್ಲ ಕೃತಕಾಚಳಮ ಗೆಲ್ಲವಡೆದಿಹ ಜಘನವ
ಪುಲ್ಲಸರಗರುಡಿಯೂರು ಮಲ್ಲಗಂಭದ ತೊಡೆಯ
ನಿಲ್ಲವಿದು ನವ್ಯವೆಂದೆನಿಪ ಜಂಘೆಯನಮಲ
ಮೆಲ್ಲಡಿಯ ಗಳಿಕೆಯರು ಸಲ್ಲಲಿತದಿಂದೊಪ್ಪಲಲ್ಲಿ ಕಲ್ಯಾಣಪುರದಿ ||೧೦||

ತುಂಬೆಗುರುಳೇ ನೀಲ ಕಂಬುಗಳ ಶಂಖ ನವ
ಬಿಂಬಾಧರಂ ಪವಳ ಕೆಂಬಲ್ಲೆ ಮಾಣಿಕ ನಿ
ತಂಬಗಿರಿ ದಿಣ್ಣಿಯೋ ಪಾಠೀನ ಬೆಳ್ಬೆಳಗ ತುಂಬಿದ ನಖಂ ಮೌಕ್ತಿಕ
ಇಂಬುವಡೆದಮಲಮೃದುಪದತಳಂ ಕಮಠ ಪರಿ
ಮಬುರತಿಯೊಳ್ಮೊಳೆತ ಘರ್ಮಜಲವಾಗಲಾ
ಡಂಬರಂಬೆತ್ತು ನವಶೃಂಗಾರಶರಧಿಯೆನೆ ಲಂಬಾಳಕಿಯರೆಸೆವರು ||೧೧||

ಪುರ್ಬುಗಳೆ ಚಾಪ ಕಣೆ ನಿಬ್ಬರದ ನೋಟ ಬಿಡ
ದುಬ್ಬಿದ ಕುಚಂ ಬಲೆಗಳಬ್ಬರಿಪ ತೊಡರವಂ
ಪರ್ಬೆ ಘಂಟಾನಿನದ ವೊಬ್ಬುಲಿಯ ದರಹಸನ ಸರ್ಬದಿಗು ಚಂದ್ರಾತಪ
ಬೆಬ್ಬಳಿಪ ನೋಳ್ಪ ಕಾಲದ ಸಮುದಯಂ ಮೃಗಗ
ಳಿಬ್ಬೆಡಗುವಡೆದ ನವಗಾಡಿ ಪಿಡಿತಹ ರಜ್ಜು
ಮೆಚ್ಚನಿಂ ಬೇಂಟೆಗೆಯ್ವತುಳ ವನಚರಿಯರೆನೆ ಕರ್ಬುಧನಂಬಲರೆಸೆದರು ||೧೨||

ಕಂಗಳೆ ತುರಂಗಮುರು ಪೊಂಗಳಸಪಾಂಗಿನ ಕು
ಚಂಗಳೆ ಗಜಂಗಳೆಸೆವಂಗಜನ ಬಗ್ಗಿನ
ಶೃಂಗಜಘನಂಗಳೆ ರಥುಗಳು ಜವಂಗಳ ಪದಂಗಳೇ ಕಾಲಾಳ್ಗಳು
ತಂಗದಿರ ತೇಜದ ನಖಂಗಳೇ ಶಸ್ತ್ರಂಗ
ಳುಂ ತೇಜದ ನಖಂಗಳೇ ಶಸ್ತ್ರಂಗ

ಳುಂ ಘನಮುಡಿವ್ರತಾನಂಗಳೇ ಖೇಟಕಮ
ನಂಗೊಳಲನಂಗನ ಬಲಂಗಳು ಚತುಷ್ಪಮನೆ ಹೆಂಗಳ್ವಿರಾಜಿಸಿದರು ॥ ೧೩ ॥

ತಮವ ಬಳಸಿರ್ದ ಜೈವಾತೃಕಪ್ರಭೆಯಂತೆ
ರಮಣಿಯವಿಲೋಚನಮದಂತುಮಲ್ಲದೆ ಪಾಂಡು
ಕಮಳದೊಳ್ಮಳಿತು ಬಂಡುಂಬ ಕಾಳಿಮಭ್ರಮದಂತೆಯೆಸೆಯ ದಿಟ್ಟಿಗೆ
ಕುಮುದಮಿತ್ರನ ಪಾಂಗಿನಿಂ ಮೊಗಂ ಮೊಗದೆಡೆಯ
ಕುಮುದಸೋದರನೆಸೆಯಲೊಬ್ಬಳ್ವಿಲಾಸದಿಂ
ಕಮನೀಯ ಕುಚವನರೆದೆಗೆದು ಕೈಸನ್ನೆಯಿಂ ರಮಣನಂ ಕರೆದಳಂದು ॥ ೧೪ ॥

ಪುಳಕತತಿ ಪೆಚ್ಚಿ ರೋಮಾಂಚನಂ ಗುಡಿಗಟ್ಟಿ
ನಿಳಯಕೆಯ್ತಂದು ನಲ್ಲಳ ಕಂಡು ತವಕದಿಂ
ಕಳಸಕುಚಗಳನೆದೆಗೆಮರ್ಚುತ ವಿಲಾಸಮುಂ ತುಳುಕೆ ಚುಂಬನಗೆಯ್ಯುತ
ಸೆಳೆಮಂಚಕೊಯ್ಯುತಂ ಪೊಳೆವ ದುವಟಂಬೊದಿಸಿ
ತಳಿರಡಿಯನೊತ್ತಿ ನುಣ್ದೊಡೆಗಳಿದ್ದೆಸೆಗಮರೆ
ಗಳರವದಿ ಕೂಡುತಂ ಕಳಕಳಿಪ ಕಾದಲನ ಕಳೆಗೆ ಮೈಮರೆದಿರ್ದಳು ॥ ೧೫ ॥

ಮತ್ತೊಬ್ಬಳತಿ ವಿರಹವಿಹ್ವಲದಿ ಪೊರಳುತಂ
ಚಿತ್ತವಲ್ಲಭನ ಕಾಣದೆ ಕಾತರಂ ಕೊನರಿ
ಕತ್ತುರಿಯಕೊಯಿ ಕರಡೆಯನ್ನೊಯ್ದು ಜವಹದಿಂ ಬಿತ್ತುಯೆಲೆಗುರಿಯನಿಕ್ಕು
ಕಿತ್ತುಕಡಿ ಸುರಕುಜವನಡವಿಯೊಳ್ಮೊಳೆತಿರ್ಪ
ದುತ್ತೂರಮಂ ನಡಿಸು ಕರುವಾಡಮಂ ಕೈಯೊ
ಳೆತ್ತು ನಡೆಯೆಂದು ವಿಕಳದಿ ನುಡಿವುತಿರ್ದಳಂದೊತ್ತಿಲಿಹ ಸತಿಯರೊಡನೆ ॥ ೧೬ ॥

ಗಂಧಮಂ ಹಿಮಗೂಡು ಮಂದಮಂ ಮಾಡು ಬಿಡ
ದೆಂದಿನಂತಿರೆ ಕತ್ತುರಿಯಕಲಸು ಪೂಸರವ
ತಂದಿರಿಸು ಪೂಗಭರಣೆಗೆ ಪರಿಮಳಂಗೊಳಿಸು ಬಂದರಂ ನೋಡು ಪೊರೆಗೆ
ಒಂದುಘಟದೊಳಗುದಕಮಂ ತುಂಬು ಸ್ವಾದುಪ
ರ್ಣದೊಳಿದು ಚೂರ್ಣಮನ್ನಿಡು ಗಿಳಿಗೆ ಕುಟುಕನೀ
ಯೆಂದೊಬ್ಬ ರಮಣಿ ತನ್ನಾಳಿಯಂ ಬೋಧಿಸುತ್ತಂದು ಕೆಲಸಮನುಸುರ್ದಳು ॥ ೧೭ ॥

ಬಿಟ್ಟಳಕಮಂ ಕೊಡಹಿ ತುರುಬಿಟ್ಟು ಪೂದಂಬಿ
ನಿಟ್ಟೆಸಳ್ಗಂಗೆ ನವಕಾಡಿಗೆಯನೆಚ್ಚು ಬೆ
ಳ್ವಟ್ಟೆಯಂ ನಿರಿವಿಡಿದು ಚೆಲ್ವುಡೆಯನಳವಡಿಸಿ ದಟ್ಟಯಿಸಿ ಮೃಗನಾಭಿಯ
ಬಟ್ಟಮೊಲೆಗಳಿರಗೊರಸಿ ಮೈದೊಡಮನಿಕ್ಕಿ ಕೈ
ಘಟ್ಟಿಯಂ ತಾಂಬೂಲಮನ್ನಿತ್ತು ಪೊಸಮಿಂಡ
ರಿಟ್ಟಿಸದ ಮುನ್ನ ಕರೆಯೆಂದವಳ ಪಿತೆ ನಿಲಿಸೆ ಕಟ್ಟೆಸಕದಿಂದಿರ್ದಳು ॥ ೧೮ ॥

ಬಲ್ಲ ವಿಟನೊಬ್ಬನೀ ವಲ್ಲಭೆಯ ಕಂಡು ಭರ
ದಲ್ಲಿ ನಡೆತಂದು ಕೈಯಲ್ಲಿ ಕರವಿಕ್ಕಿ ನಡೆ
ದಲ್ಲಿ ಮನೆಯೋವರಿಗೆ ಗುಲ್ಲವಿಸುತೊಯ್ಯುತಿನಿವಿಲ್ಲಗೆಲಸಮನೆಸಗಲು
ತಲ್ಲಣಿಸುತಿರಲವಳ ಮುತ್ತಿನೊಚ್ಚಪರಿಯೆ
ಮೆಲ್ಲನೊಂದೆರಡ ಗೆಯಕೊಳುತದಂ ಗಂಟಿಕ್ಕಿ
ನಿಲ್ಲದೆ ಪರಿವುತಿರಲ್ಕೊತ್ತೆಯಂ ಬೇಡೆ ಕರದಲ್ಲಿ ಮಣಿಯನ್ನಿತ್ತನು ॥ ೧೯ ॥

ಮನವೆಂಬ ಸೆಜ್ಜೆವನೆಯೊಳಗಿನಿಯನಂ ಪೊಗಿಸಿ
ತನುಪುಳಕವೆಂಬ ತಳ್ಪಲೊಳು ರತಿಕೇಳಿಯಂ
ಕೊನರಿಸುತ ಮುನಿಸು ಮೋಹನ ಮುದ್ದು ಲಲ್ಲೆ ಸಂಜನಿತ ಬಿಡದಪ್ಪುತಿರಲು

ಅನಿತರೊಳಗವ ಜಗುಳ್ದಂತಾಗೆ ವಿರಹದಿಂ
ಕನಲಿ ಕಾತರಿಸಿ ಪೂಗಣೆಗೊಡಲನೀವುತಂ
ಜಿನುಗುತಿರ್ಪಳ ಕಂಡು ಕಾದಲಂ ಪರಿತಂದು ವಿನಯದಿಂ ನೆರೆದನಂದು || ೨೦ ||

ಎವೆಗದಗಳಂ ತೆಗೆವುತಿನಿಯನಂ ಪೊಗಿಸುತಂ
ತವೆ ಪೊರಡದಂತೆ ಕಣ್ಮುಚ್ಚು ತಂತರ್ಮುಖದಿ
ಸವಿದಧರಪಾನಮಂ ಕವಿದು ಮೇಲ್ವರಿವುತಂ ನವರತಿಕ್ರೀಡೆವಡೆದು
ಅವನಲಾವಣ್ಯರಸದೊಳ್ಮೂಡಿ ಮುಳುಗುತಂ
ದವಳ ಪಂಕೇಜಪತ್ರೇಕ್ಷಣೆ ವಿಲಾಸದಿಂ
ದವನ ತನು ತಾನಾಗಿ ತನ್ನತನುವವನಾದುದವನಿಗೆ ವಿಚಿತ್ರವೆನಲು || ೨೧ ||

ಅಂತುಮಲ್ಲದೆ ಚಂದ್ರಕಾಂತನೆಲೆವಾಡದೊಳ
ನಂತವಿಭವದಿ ಚೆಲ್ವಿನಿಂ ಚದುರಿನಿಂ ಸೊಬಗಿ
ನಿಂ ತನಗೆ ಸರಿದೊರೆಗಳಿಲ್ಲೆಂಬ ತೇಜದ ಜಸಂ ತೀವಿ ಸೊಗಸಾಗಲು
ಕಂತುಸನ್ನಿಭೆ ಕಮಳದಳನೇತ್ರೆ ಸೌರಭ್ಯ
ಕುಂತಳೆ ಗುರುಸ್ತನೆ ಶಶಾಂಕಮುಖಿ ಪುಷ್ಪಶರ
ಮಂತ್ರದೇವತೆಯೊಬ್ಬಳೆಸದಳ್ವಿಲಾಸದಿ ಶಿವಂ ತಾನೆ ಬಲ್ಲನೆನಲು || ೨೨ ||

ಅನಿತರೊಳು ಜಾತಿವಿಟನವಳಿರ್ದ ನೆಲೆವಾಡ
ಕೆನಸು ಬೇಗದೊಳೆಯ್ದಿ ಬಂದಡುಪಚರಿಸುತಂ
ವನಿತೆ ಸಂತಸದೊಳಾಸನವಿತ್ತು ವಿನಯದಿಂ ಮನದೆಡೆಯೊಳುಚ್ಚವಿಸುತ
ವನಜದೆಸಳೊಳು ಕತ್ತುರಿಯನೀಯಲೊಲ್ಲೆನೆನ
ಲನುಮಾನವೇನೆಂದು ಕೇಳುತಿರಲಾ ವಿಟಂ
ಘನಕಂಚೆಯ ಕೂಡಸುರಿದು ಪ್ರಸಂಗಿಪೆನೆಂದಡನುವನೊರೆಯೆನಂತಿರ್ದಳು || ೨೩ ||

ಭೃಂಗವಿರ್ದಪುದು ಕುಸುಮಕ್ಷೇತ್ರವಿಲ್ಲ ನರೆ
ದಿಂಗಳಿರ್ದಪುದುಭ್ರವಿಲ್ಲ ಧವಲಚ್ಛವಿಯ
ಮೀನ್ಗಳಿರ್ದಪವು ಕಮಲಾಕರವದಿಲ್ಲ ಮಾತಂಗಮುಂಟಡವಿಯಿಲ್ಲ
ಜಂಗುಳಿಯ ರತ್ನವಿವೆಯಬ್ಧಿಮುನ್ನಿಲ್ಲುರು ಭು
ಜಂಗವಿವೆ ನಾಗಲೋಕಂ ತಾನಿದಲ್ಲ ನೋ
ಡಂಗನಾಮಣಿ ನಿನ್ನ ಲಾವಣ್ಯವೆಸೆದುದು ಭುಜಂಗರ ವಿಲಾಸಮಾಗಿ || ೨೪ ||

ರಾಶಿ ನಿನ್ನಯ ಭ್ರೂಲತಾವಿಸರಾಮಾವಗಂ
ರಾಶಿ ನಿನ್ನಯ ಕುಚದ್ವಯವರಿದು ನೋಳ್ಪಡಂ
ರಾಶಿ ನಿನ್ನಯ ದಿಟ್ಟಿ ರಾಶಿ ನಿನ್ನಯ ಮಧ್ಯ ರಾಶಿ ವೆಸರಿನ ಕೋಮಲೆ
ನೀ ಸುದತಿ ನಿನ್ನ ಮೊಗದಲ್ಲಿಗೊಣಗಿದ ನೀರಿ
ದೇಸುದಿನಬಂದಿದರನುಜೆಯೆನ್ನ ಕರದೊಳಿದೆ
ಪೂಸರನಕೇಳಿಗೊದಗಿದಡಧರಸುದೇಯುಂಡು ನಾ ಸುಖಂಬಡೆವೆನೆನಲು || ೨೫ ||

ಬಲ್ಲಹಂ ನೀನಹುದು ನಿನ್ನ ಕೈಯೊಳಗಿರ್ಪ
ಕೊಲ್ಲಟಗೆಯನುಜನಧ್ವನಿ ದೇಗುಲದ ಬಾಗಿ
ಲಲ್ಲಿ ಮೊಳೆಯದ ಮುನ್ನವಿಲ್ಲಿಗೆಯಿತಂದು ಮಿಗೆ ಪುಲ್ಲಶರಕೇಳಿವಡೆದು
ಪಲ್ಲವಿಸು ಪೋಗೆನಲ್ಕೊಂದಡಿಯನಿಡಲಾರ
ದಲ್ಲಿ ವಿರಹಾಗ್ನಿಯಿಂ ಮೈಮರೆದನಂ ಕಂಡು
ವಲ್ಲಭೆ ಕರಾಗ್ರದಿಂದೆತ್ತಿ ಸೆಜ್ಜಾಗೃಹಕೆ ಭುಲ್ಲವಿಸುತೊಯಿದಳಂದು || ೨೬ ||

ಮಣಿಮಂಚದಲ್ಲಿರಿಸುತಾಲಿಂಗನಂಗೆಯುವು
ತಣಿಯರದಿ ರಸದಂಬುಲದ ಗುಟುಕುನೀವುತಂ
ಕಣೆನಿಮಿರ್ದ ಕಾಲವರೆದುಪರಿಗೆಯಿತಂದು ಕೈದಣಿಯೆ ಕುಚಗಳ ಪಿಡಿಸುತ

ಎಣೆಯಿಲ್ಲದಿರ್ಪ ಕಾಮಗೃಹದೊಳಂಗಜನ
ಪಣೆಗೊಳಿಸುತೋಟ ಭರತದಿ ಗಳಧ್ವನಿ ಕೊನರ
ಕುಣಿದಾಡುತಿರ್ದಳುಪರತಿಯೆಂಬ ಮಳೆಗಾಲದಣೆಗಂಡ ಕೇಕಿಯೆನಲು ॥ ೨೭ ॥

ಸೆಳೆಮಂಚವೇ ಕಳಂ ಪೊಳೆವ ನಖವೇ ಸುರಗಿ
ಯಳವೆತ್ತ ಶಿಖಿ ಬೆನ್ನನಲೆವೆಣ್ಣೆಗಂಟು ನವ
ಗಳರವದ ಬೊಬ್ಬೆ ರತಿಪುಳಕ ಸಹಕಾರಮುಂ ಬೆಳೆದ ಬಿರುದಿಟ್ಟ ವೀರ
ಒಳಪೊಕ್ಕ ಮೋಸವೇ ನಳಿತೋಳ ತೆಕ್ಕೆ ಸವಿ
ದಳುಕೆ ನಖ ದಂತಕ್ಷತಂ ಮೊಳೆತ ಘಾಯಮನೆ
ತಳಿರ ತೋಮರನ ಪಟುಭಟಗಚ್ಚಗಾಳಗಂ ಕಳೆವಡೆದುದುಪರತಿಯೊಳು ॥ ೨೮ ॥

ಬಟ್ಟದುರುಬೇ ಛತ್ರವಿಟ್ಟೆಡೆ ಕುಚಂ ಕಳಸ
ನಿಟ್ಟೆಸಳ್ಗಣ್ಬೆಳಗಿನಾರತಿಗಳೆನಲು ಹೊಂ
ಗಟ್ಟಳೆಯ ಗುಂಡಿನಂತಿಹ ಮೊಲೆಯ ಮೇಲುದೇ ಕಟ್ಟಿರ್ದ ಗುಡಿ ತೋರಣ
ತಟ್ಟನೆ ವಿಟರಸನ್ನೆಗೆಯ್ವ ನವಪುರ್ಬಿನ
ಲ್ಪಿಟ್ಟಗಲದಳಿಗಿಳಿಗಳಬ್ಬರಂ ವಾದ್ಯ ಮಿಗ
ಲೊಟ್ಟಯಿಸುತಿನಿಯನನಿದಿರ್ಗೊಬಳಂತೊರ್ವ ಕಟ್ಟೆಸಕದಬಲೆಯೊಪ್ಪೆ ॥ ೨೯ ॥

ಮತ್ತೊಬ್ಬ ರಮಣಿ ತನ್ನಯ ರಾಜಮಂದಿರದಿ
ಚಿತ್ರಜವಿಲಾಸವೆಂದೆನಿಪಾಗಮವನೋದ
ಲರ್ಥಮಂ ಪೇಳುತಿಹ ಶುಕನಮಾತಂ ಕೇಳುತಿದ್ದೆರದಿ ಸತಿಯರಿರಲು
ಮತ್ತೇಭಗಮನೆಯೊಬ್ಬಳ್ವಿಲಾಸದಿ ಬಂದ
ದೊತ್ತಿನಲಿ ಕುಳ್ಳಿರಿಸುತುಪಚರಿಸೆ ಕೈಕೊಂಡು
ಕತ್ತುರಿಯ ಪನ್ನೀರ ತಾಂಬೂಲಮಂ ತರಲ್ಮೊತ್ತವೆಂಡಿರ ಕರೆದಳು ॥ ೩೦ ॥

ಭರಣಿ ಕೃತ್ತಿಕೆಯಮೃತಕರಣೆ ರೋಹಿಣಿ ಮದನ
ಸರಣಿ ಮೃಗಶಿರೆಯಾರ್ದ್ರೆ ಹುಬ್ಬೆ ಸನ್ಮೋಹನ
ಸ್ಮರಣೆ ಮಘೆ ಹಸ್ತ ಚಿತ್ತೆ ಸ್ವಾತಿ ಸತ್ಕಲಾವರಣಿ ಪುನರಪಿ ವಿಶಾಖೆ
ಧರಣಿಪ್ರಕಟ ಪೂರ್ವಭಾದ್ರಪದೆ ರೇವತಿ
ಕರಣಿ ಬಾರೆಂದು ನಕ್ಷತ್ರನಾಮಂಗಳಿಂ
ಪರಿಣತೆಯೆನಿಪ್ಪ ನಾಯಕಿ ಕರೆವುತಿರ್ದಳಂದಿರದೆ ತನ್ನಯ ಸತಿಯರ ॥ ೩೧ ॥

ಹೊಂಗುಡಿಕೆ ಮಾಲೆ ಮದನಖಡ್ಗದ ಮಸೆದ ಮೊನೆಗ
ಳಂ ಗೆಲ್ವ ಲೋಚನ ಭುಜಂಗಾರಿಯಂತೆ ಮುಡಿ
ರಂಗಾಧರಂ ಬಾಲವೆರೆ ಭ್ರೂಲತಾವಿಸರಮಗಜನ ಚಾಪವೆಸೆವ
ಸಂಗೀತಶರಧಿಯಾವರ್ತ ಕರ್ಣದ್ವಯಗ
ಳಿಂಗಡಲಕುವರವೆಳಗಂ ನಳಿವ ನಗೆ ಮಿನುಗೆ
ಜಂಗುಳಿವಡೆದ ವಿಟರ ನಿಟ್ಟಿಸುತ ಬರುತಿರ್ದರಂಗನೆಯ ಬಳಿಗೆ ಭರದಿ ॥ ೩೨ ॥

ಪನ್ನೀರ ಗಿಂಡಿ ಕತ್ತುರಿ ಹಿಮಂ ಜಾತಿ ಬಾ
ವನ್ನ ಕರ್ದಮ ನವ್ಯತಾಂಬೂಲಮಂ ನವಸು
ಗಂಧಪುಷ್ಪಪ್ರಕರಮಂ ನೀಡಿ ತಮ್ಮರಸಿ ಮನ್ನಿಸಿದಳಾ ವಧುಗಳ
ತನ್ನೆಡಬಲದರಮಣಿಯರಿಗೆ ಪರಿಮಳವೀವು
ತುನ್ನತವಿಲಾಸದಿಂ ರುದ್ರವೀಣೆಯ ಪಿಡಿದು
ಪನ್ನಗಸ್ತ್ರೀಯಂತೆ ನುಡಿಸುತಿರ್ದಳು ಸಭೆಗೆ ಸನ್ಮೋಹನವನೀವುತ ॥ ೩೩ ॥

ಅವನಯವಾವ ಹವಣಾವ ರಾಗದಲಹರಿ
ಯಾವ ಸೊಲಪಿನ ಸೊಂಪಿದಾವ ಸಂಕೀರ್ಣ ಸೊಗ

ಸಾವ ದೇಸಿಮಾರ್ಗವೆಂದು ಗಿಳಿ ವಿಸ್ತರಿಸಿ ಕೋವಿದೆಯ ಕೊಂಡಾಡಲು
ಆ ವಿಮಳಸಭೆಯವಳ ಮನ್ನಿಸುತ್ತಿರಲಿತ್ತ
ಲೀ ವಧುಗಳುಯ್ಯಾಲೆಯನ್ನೇರಿದರು ಮಹಾ
ದೇವನರಿವಂ ಕುಸ್ತರಿಸಲರಿದು ಸತಿಯರು ಕಾವನಮಳಿನಮತಿಯರ || ೩೪ ||

ನೀಲಕಂಠಾಕೃತಿಯ ಧಮ್ಮಿಲ್ಲವಲ್ಲಾಡೆ
ತೋಳ ತೊಡ ಪೈಸರಿಸೆ ಕೀಲಕಡಗಂ ಕಳೆಯೆ
ಕಾಲಪೆಂಡೆಯವಳಿದು ಬನದಕೊಣನೊಳ್ಕೆಡೆಯೆ ಭಾಳದಿ ಬೆಮರ್ಮೊಳೆಯಲು
ಮೇಲುದಿನ ತೆರಪಿನೊಳು ವೃತ್ತಕುಚಕುಣಿದಾಡೆ
ಸಾಳಗಂ ನವದೇಸಿವರ್ಣದಿಂ ಪಾಡುತಂ
ಸೂಳುಗೊಂಡಿಹ ಸತಿಯರುಯ್ಯಾಲೆಯನ್ನಾಡೆ ನೀಲಮೇಘಂ ಮುಟ್ಟಲು ||೩೫||

ವೃತ್ತಕುಚವೆನಿಪ ಹಳದಿಯಕಾಯ ಜೋಡ ಹಿಡಿ
ದೊತ್ತಿ ಕೈತವವೆನಿಪ ಹಸುರಕೊಂದತಿರತಿಯ
ಲೆತ್ತಮಂ ಕಂಗೊಳಿಸಿ ಮುಳಿಸು ಮೋಹನವೆನಿಪ ಚಿತ್ತಜನ ಕರಿದು ಕೆಂಪ
ಅತ್ತಿತ್ತ ಚಲಿಸಲೀಯದೆ ನಡೆಸಿ ಮನ್ಮಥನ
ವಿಸ್ತರದ ಚೌಮಾರ್ಗವೆನಿಪ ಹಾಸಂಗಿಯಂ
ಹೊತ್ತವಳ ನಡೆಸಿ ಗೆಲ್ಲಂಬಡೆದ ರಾಜವಿಟ ಮತ್ತೊಬ್ಬ ರಮಣಿಯೊಡನೆ || ೩೬ ||

ನಿನ್ನ ಗಜ ಕವಡಿಂದ ಸಿಕ್ಕಿತಲೆ ಕಮಲಮುಖಿ
ನಿನ್ನ ಹಯವಡಿಗೆಟ್ಟು ಚಲಿಸದಿವೆ ರಮಣಿ ಸಲೆ
ನಿನ್ನ ತೇರಿಲ್ಲಿಯುಂ ಪಚ್ಚೆಗೆಟ್ಟುದು ನೋಡು ನಿನ್ನಾಳು ನಡೆಯವಿನ್ನು
ನಿನ್ನ ಮಂತ್ರಿಗೆ ಬುದ್ಧಿವಿನಿಸಿಲ್ಲ ವಿವರಿಪಡೆ
ನಿನ್ನರಸು ಕಟ್ಟಿತೆನ್ನಾಟ ಗೆಲವಂದುದೆನು
ತುನ್ನತ ಸ್ತ್ರೀಯೊಡನೆ ಚದುರಂಗವಾಡಿ ಮನದನ್ನನೊರ್ಬ ಗೆದ್ದನು || ೩೭ ||

ಬೇಡವೆನಲೆನ್ನ ಮಾತಂ ಕೇಳೆ ಕುವರಿಯವ
ಗಾಡಿಕಾರಿಂ ಚಾಟು ಚಪಳ ಬರಿ ಬೇಸರಂ
ಮಾಡದಿರು ಮೋಹಮಂ ಕೂಡಿದರು ಗೇಹಮಂ ನೋಡದಿರು ದಿಟ್ಟಿ ನಟ್ಟು
ನಾಡೆ ಹಣವುಳ್ಳನಂ ಕೊಡುವನಂ ಕರೆದು ಮಾ
ತಾಡು ಮನ್ಮಥಕಲೆಯನೂಡು ನವರತಿಯೊಳೋ
ಲಾಡೆಂದು ಮಗಳಿಗುಸುರಿದಳಂ ಬಹುಯುಕ್ತಿಯಂ ಬೇಡಿ
ಪಿಸುಣತೆಯ ಹೂಡಿ || ೩೮ ||

ಕಂಬುಗಳದಿಂದಲರ್ದಬುಜಾನನಗಳಿಂ
ಕೆಂಬಲ್ಲ ಕಾಂತಿಯಿಂ ಬಿಂಬಾಧರಪ್ರಭೆಯ
ಶಂಬೋಕನಖದ ಮರಿದುಂಬಿಗಳ ಕೀಳ್ಪಡಿಪ ಲಂಬಾಳಕಂಗಳೆಸೆವ
ಕುಂಭಕುಚಯುಗದಿಭ ನಿತಂಬದತಿ ಚೆಲ್ವಿಡಿದ
ಪೊಂಬಾಳೆದೊಡೆಯ ಸೌರಂಭದಿಂ ಪದ್ಮಿನಿಯ
ರಿಂಬುವಡೆದಿರೆ ನಾಗರೀಕನಾಲಿಂಗನಂ ಚುಂಬನಕೆ ಮೆಚ್ಚಿ ಬಿಡದೆ || ೩೯ ||

ಅಲಘು ಜಘನಂ ಗುರು ಕುಚಂ ಕೊಬ್ಬಿದಧರ ಮಂ
ಗಲವಡೆದ ಕಾಂತಿಯಿಂದಸಿಯ ನಡುವಿಂ ನವ್ಯ
ಜಲಜಗಳಲೋಚನಂ ಧವಳಿಮ ನಖಾಗ್ರದಿಂ ನೆಲೆಗೊಂಡ ದೇಹವೆಸೆವ
ಸಲೆ ಸಂದ ಗೀತಕುಸುಮಾಮೋದ ವಾಂಛೆಯಂ
ತೊಗದ ವಿಟನ ಕೂಟ ತಕ್ಕೆ ಚುಂಬನಗಳಿಂ
ಬಲವೆತ್ತ ಚಿತ್ತಿನೀಜನ ವಿರಾಜಿಸುತಿರ್ದುದಳವಟ್ಟ ಭದ್ರದೆಡೆಯ || ೪೦ ||

ಕೊಬ್ಬಿಲ್ಲ ತಗ್ಗಿಲ್ಲದೊಡಲ ನೀಲಚ್ಛವಿಯ
ನೆಬ್ಬಿಸುವಳಕ ದಿವ್ಯಕಾಂತಿ ಕೊಂಕಿದ ಕುಚಂ
ಬೆಬ್ಬಳಿಪ ದಿಟ್ಟ ನುಣ್ಣೊಡೆಯಲ್ಪ ಜಘನದಿಂ ಕರ್ಬುರಪ್ರಭೆಯಡಿಗೆಯ
ಸರ್ಬರೊಳು ವಿನಯಂ ವಿದೂಷಕ ಮಹಾ ಪ್ರೌಢ
ನೊಬ್ಬನೊಳಗೊಂದು ಕೂಟಂ ಚುಂಬನದ ಸೊಗಸಿ
ಗುಬ್ಬಿ ಸತ್ಕಲೆವಡೆದ ಶಂಕಿನಿಯರೆಸೆದರು ಮಹಾಭ್ರ ಸೋಂಕುವ ಹರ್ಮ್ಯದಿ || ೪೧ ||

ಮಿಶ್ರತರ ಕೆಂಪಿನಿಂ ಶಿಶ್ರಷೆಯಮೋಹದಿಂ
ಸಶ್ರಿಯವಿಲಾಸ ದಿಗಜಶ್ರುತೀವಿ ಗಂಧದಿ ನಿ
ಜಾಶ್ರಿಮಪ್ರಿಯದಿಂ ಪಟುಶ್ರವದ ನುಡಿಯಿಂದಿಭಶ್ರದುಡಿಗೆಯೊಳೊಪ್ಪುವ
ಕುಶ್ರಕುಳಕಾರದೂಟಂ ತೋರತನುವಿನಿಂ
ನಿಶ್ಶಕ್ತಿ ಪೀಠವರ್ಧನನೊಡನೆ ಮೈಥುನವ
ಜಶ್ರವಳವಟ್ಟ ಹಸ್ತಿನಿಸಮಾಜಂಗಳಿರೆ ವಿಶ್ರಮನಿಕೇತನದೊಳು || ೪೨ ||

ಮೊಳೆ ಮೊಲೆಯ ಮೋಹನದ ಮೊಲೆಯ ರತಿವಲ್ಲಭನ
ಕಳೆವೆತ್ತ ಮೊಲೆಯ ಕಾಂಚನಬೊಗರಿ ಮೊಲೆಯ ನು
ಣ್ಣೆಳಗುವಡೆದಿಹ ಮೊಲೆಯ ಚೆಲ್ವಿಡಿದ ಮೊಲೆಯ
ಹೊಂಗಳಸದಂತೆಸೆವ ಮೊಲೆಯ
ನಳಿನಕೋರಕ ಮೊಲೆಯನತನು ಸಂಜೀವನದ
ಗುಳಿಗೆಯಂತಿಹ ಮೊಲೆಯ ಕುರವಕದ ಕೋಮಳದ
ಫಳದಪಾಂಗಿನ ಮೊಲೆಯ ಗಳಿಕೆಯರ್ಮೆರೆದರಾ ಪೊಳೆವ
ಮಣಿಹರ್ಮ್ಯದೆಡೆಯಂ || ೪೩ ||

ಪುಲ್ಲೆಗಂಗಳನೆಸಳ್ಗಣ್ಗಳಂ ಸೊಬಗಿಡಿದ
ಚೆಲ್ಲೆಗಂಗಳ ಕಂತು ಖಡ್ಗದ ಮಹಾಬಿರಿದ
ನುಳ್ಳ ಕಣ್ಗಳನತನು ನೃಪ ಸವಡಿಗೋಲ್ಗಳಂ ಗೆಲ್ಲಗಂಗಳ ನೈದಿಲ
ಪುಲ್ಲದವ ಪಾಂಗಿನ ವಿಲೋಚನದ ವಿರಹಮಂ
ಪಲ್ಲವಿಪ ಲೋಚನದ ಕಲ್ಲೆರ್ದೆಯ ಮುನಿಗಳಂ
ಮೆಲ್ಲೆರ್ದೆಗರು ಮಾಳ್ಪ ಲೋಚನದ ಕೋಮಲೆಯರಲ್ಲಿರೆ ಸುಧಾಹರ್ಮ್ಯದಿ || ೪೪ ||

ಕೃತಕಾಚಳಗಳಂತಿರೆಸವ ಜಘನವ ನೋಡ
ಲತಿವೇಗ ರೋಮಾಂಚನಂ ಕೊನರಿ ಮುಮ್ಮೊಂದು
ಗತಿಗುಂದಿ ಗರುವಿಕೆಯನತಿಗಳೆದು ಭ್ರಮಿಸುತಂ ಯತಿ ಪರಮಹಂಸರೆಂಬ
ಜತಿಕುಳಂ ಬ್ರಹ್ಮಚರಿಯವನಳಿದು ಸೋಂಕಿನಿಂ
ಚತುರತ್ವಮಂ ಕಲಿತು ಕಲೆದಾಣಮನ್ನರಿದು
ನತರಾಗಲವರ ಕೊರಚಾರಿಸುವರಂಜೆ ಕಾಸತಿಯರುಳಿದರ ಬಲ್ಲರೆ || ೪೫ ||

ಹಾರ ಪದಕಂ ರತ್ನಕಟಕ ನವ ಸೂಸಕಂ
ವೀರಮುದ್ರಿಕೆಯುಂಗುರಂ ನೂಪುರಂಗಳಿಂ
ತೋರಲುಳಿ ಮೇಖಲಂ ಕರ್ಣಭೂಷಣಗಳಿಂ ಚಾರುಶೃಂಗಾರಮಾಗಿ
ಸ್ಮೇರಾನನದಿ ನಾಸಿಕಾಭರಣವೆಸೆಯಲಂ
ದೋರೆಗಣ್ನೊನೆಗಳಿಂ ದಿಟ್ಟಿಸುತ ನಲ್ಲರಂ
ಭೂರಿಸೌಭಾಗ್ಯದಿಂ ರಂಜಿಸಿದರಾ ಪುರದ ವಾರವಧುನಿವಹಮದು || ೪೬ ||

ತೊಂಡೆವಾಯ್ದೆರೆಗಳಿಂ ತೋರತರ ಕುಚಗಳಿಂ
ಪುಂಡರೀಕಾಸ್ಯದಿಂ ಪೃಥುಳನೈತಂಬದಿಂ
ಶುಂಡಾಲವದ ನಡೆಯ ಸುರುಚಿರಾಭರಣದಿಂ ಖಂಡಶಶಿನೊಸಲ್ಗಳಿಂದ

ತೊಂಡುರಿಸಿ ವಿಟರ ಮೇಲ್ವಾಯ್ದು ಪಿಡಿದಪ್ಪುತಂ
ಬೆಂಡೇಳ್ವ ಪುಳಕದಿಂ ಮೈಮರೆದು ಹೆಚ್ಚುತಂ
ಮಿಂಡವರೆಯದ ಗಣಿಕೆಯರ್ವಿರಾಜಿಸಿದರಾ ಮಂಡಲೇಶ್ವರ ನಗರದಿ || ೪೭ ||

ಓರೆದುರುಚಿನ ಚೆಲ್ವ ನೀರಜವಿಲೋಚನದ
ಚಾರುತರ ಗುರುಕುಚದ ಕೀರವದ ಸವಿನುಡಿಯ
ಮಾರ ಗಜಗತಿಯ ವಿಸ್ತಾರ ನೈತಂಬದ ಹೀರಾವಳಿಯ ತೊಡಗಳಿಂದ
ವೀರಮುದ್ರಿಕೆಯಡಿಯನೂರುಸ್ಥಲದ ಸೊಬಗ
ತಾರಾಪತೀಮೊಗದ ಭೂರಿಲಾವಣ್ಯದಿಂ
ನೀರೆಯರು ಮನ್ಮಥಾಕಾರೆಯರು ವಿವಿಧಶೃಂಗಾರೆಯರ್ಮೆರೆದರಂದು || ೪೮ ||

ಬಟ್ಟವರೆಮೊಗದ ಬಲ್ಮೊಲೆಯ ಸಿಂಹದ ಕಟಿಯ
ನಿಟ್ಟೆಸಳ್ಗಣ್ಣ ಕಂಬುಗ್ರೀವದೆಡೆಯ ಜೌ
ಗಿಟ್ಟೊಸರುತಿರ್ಪ ಕಸ್ತುರಿಯ ಕರ್ದಮವ ಕಣ್ಣಿಟ್ಟು ನೋಡುವರ ಮನಕೆ
ಕಟ್ಟೆಸಕಮಾದ ವೃಂದಾರಕಾದ್ರಿಗಳಂತೆ
ಮುಟ್ಟಿಮೋಹಿಪ ಕಾದಲರ ಪುಣ್ಯನಿಧಿಯಂತಿ
ರೊಟ್ಟಯಿಪ ಸಿಂಗರದೊಳೆಸೆದರ್ ವಿಲಾಸದಿಂ ಬಿಟ್ಟಗಲದಿನಿಯರೊಡನೆ || ೪೯ ||

ಬಂದಿರು ಮನೆಯೊಳೆನ್ನಮಗಳತಿ ಪ್ರೌಢೆಯವ
ಳಿಂದಧಿಕರಿಲ್ಲವೀ ನಗರಿಯೊಳಗಮಲತರ
ಚಂದ್ರಮುಖಿ ದಿವ್ಯಸ್ವರೂಪಿ ನಾಗಿಣಿ ಪುಷ್ಪಗಂಧಿ ಕೋಮಲೆ ಕೌಶಲೆ
ನಂದೀಶವಾಹನಾರಿಯ ಪಟ್ಟದಾನೆ ಬಾ
ರೊಂದು ಕೂಟದಿ ಕಾಮಸಾಮ್ರಾಜ್ಯವೆನಲು ನಡೆ
ತಂದೊಬ್ಬ ಹೊಸವಿಟಂ ಹಳೆವೆಣ್ಣೆನಣುಗೆಯೊಡನಂದು ಸಮರತಿವಡೆನು || ೫೦ ||

ಸಕ್ಕರೆಯೊ ಪಾಲ್ಗೆನೆಯೊ ಪಂಚಾಮೃತಪ್ರಕರ
ದಿಕ್ಕೆಯೋ ಸಹಕಾರಫಲಮೊ ಜೇನ್ಗೊಡನೊ ರಸ
ವುಕ್ಕಿ ನಿಮಿರ್ದೊಸರ್ವ ಪುಂಡ್ರೇಕ್ಷುವಣ್ಣೋ ಸವಿಯ ಪಕ್ಕಲೆಯೊ ಬಾಯ್ಗೆಬಂದು
ಸಿಕ್ಕಿರ್ದ ಬಾಲವರೆಯೊ ರಸನೆಸವಿಗಂಡು
ಸೊಕ್ಕಿ ಬೆಳೆದೆಡವಿಡದೆ ಕೊನರ್ವ ಸಂಜೀವನವೊ
ಸಕ್ಕಜಂ ನಿನ್ನಧರಸುಧೆಯೆಂದು ಪೀರ್ದು ಮನವಿಕ್ಕಿದು ಚುಂಬನದೊಳು || ೫೧ ||

ಅಂತಲ್ಲದೆಲ್ಲಿಯುಂ ಹಿಡಹಿಲ್ಲದಿರಲೊಬ್ಬ
ದಂತ ಹೋದವಳು ನಾರಂ ಮುಡಿದು ಕರಟಮ
ನ್ನಂತರಿಸದೆರ್ದೆಗೆ ಬಿಗಿದದಕೆ ಮೇಲುದ ಮರೆಸಿ ಮಂತಣಿಪ ವಿಟರ ನಡುವೆ
ಕಂತುಮೋಹನವಾಡ ನಸಿದರಾಗದಿ ತೊದಳಿ
ನಿಂ ತವೆಗೊಡಸುತಣಲಸೊಪ್ಪನಗಿದುಗುಳುತವ
ನಂತರೋಚಕದಿಂದಲೊಪ್ಪಿದಳ್ ಮುದಿಸೂಳೆ ಕಾಂತರೊಗಡಿಸುತಲೇಳೆ || ೫೨ ||

ತೊಡರು ನೇವುರ ಪಾಯವಟ್ಟ ಮಣಿಕಟಕ ಪೊ
ನ್ನುಡೆಯ ಲೇವಳ ಬಾಹುಪೂರ ಬೆರಳುಂಗುರಂ
ಬಿಡದೆಸೆವ ನವ್ಯಮುಕ್ತಾಫಳ ತ್ರಿಸರದಿಂ ಬೆಡಗು ಬಿನ್ನಣಿಸಿ ಮೆರೆವ
ಮುಡಿವಣಿಯ ಸೂಸಕದ ಮಡಲಿರುವ ಭೂಷಣದ
ಕಡುಚೆಲ್ವ ನಗೆಮೊಗದ ಕುಡಿವರಿವ ಸಿಂಗರದ
ಸಡಗರದ ಕಾಮಸಭೆಯೊಪ್ಪೆ ಸತ್ಕವಿಕುಲಂ ನುಡಿವರೆ ವಿಚಿತ್ರವೆನಲುಂ || ೫೩ ||

ಇವರ ಲಾವಣ್ಯವಂಗಜಮಹಿವರನ ಪುಣ್ಯ
ವಿವರ ಕಂಬೇಟ ಮನ್ಮಥನ ಕೈಮಾಟವಿಂ
ತಿವರ ಸವಿದಕ್ಕೆ ಪೂಸರನ ಮೋಹದ ಪಕ್ಕೆ ಇವರ ಮಾಧುರ್ಯವಚನ
ಭವಹರಾರಿಯ ಮನದೊಳೆಸೆವ ಚಾತುರ್ಯ ಮ
ತ್ತಿವರ ಶೃಂಗಾರ ಮನಸಿಜನ ಬಂಗಾರವೆಂ
ದಿವರ ಬಣ್ಣಿಪಡನಂತಾನನದೊಳೆಸವ ಸತ್ಕವಿಗರಿದುಸುರ್ವಗೆಂತೊ || ೫೪ ||

ಕೂಟದೊಳಗಂಗಜನಮೂರ್ತಿ ಪ್ರಸನ್ನ ಕಂ
ಬೇಟದೊಳು ಕಾಮನೃಪಸಾಮ್ರಾಜ್ಯವಿವರ ಕೈ
ಮಾಟದೊಳು ಮನಸಿಜನ ಮಂತ್ರಪಾಠನ ಬಿನದಿಪಾಟದೊಳು ನವ್ಯಸೊಬಗು
ಜೀಟುಜೀಟಿಗೆ ರತಿಪ್ರೌಢಿ ಸಮನಿಸಿ ವಿಟರ
ದಾಟಲೀಯದೆ ಪಲ್ಲವಾಸ್ತ್ರದಿಂದೆಸುತಲತಿ
ಮೀಟುಜವ್ವನೆಯರೊಪ್ಪಿದರೊಗ್ಗಿನಿಂ ಚಂದ್ರಜೂಟಾರಿ ಭೃತ್ಯರೆನಲು || ೫೫ ||

ಸೆರಿಗಿನೊಳ್ಕಟ್ಟಿದೊತ್ತೆಯ ಬಿಟ್ಟು ಚೆಲ್ಲುತಂ
ಹೊರಗೆ ನೋಡುತ ಹೊಂಚಿ ಕೈಸನ್ನೆಮಾಡುತಂ
ಬೆರಗುವಟ್ಟಂತಲ್ಲಿ ನಿಂದು ಸುಯಿಲೊಗೆವುತಂ ಮರೆದೇನುವನ್ನರಿಯದೆ
ನಿರೆ ಸಡಿಲ್ದೊಳಗೆ ನಾಣೆಡೆ ನಾಂದು ಜುಮ್ಮೆನ
ಲ್ಕರೆಗೊಂಡ ಕಾಮಾತುರದಿ ಮೇಲುದುಂ ಸಡಿ
ಲ್ದುರೆ ತಮ್ಮ ಕಾದಲರ ಮೇಲಿಟ್ಟ ದಿಟ್ಟಿಯಿಂ ಸರೆಮಿಂಡಿಯರ್ಮರೆದರು || ೫೬ ||

ಬಂದವನ ಕಂಡು ಕಾತರದಿ ಬರಸೆಳೆವುತಂ
ನಿಂದಂತಿರಾಲಿಂಗನಂ ಮಾಡೆ ತೊಡಚಿಬಿಡ
ದಂದಧರಪಾನಮಂ ಸವಿದು ಮೇಲ್ವರಿವುತಂ ತಂದೊಳಗೆ ಸೆಜ್ಜೆವನೆಯ
ಹೊಂದುಗೆವಡೆದ ಜೋಡುವಾಸಿನೊಳ್ಕೂಡುತ ಸು
ಖಂದಳೆದು ಸರ್ವಾಗಮನ್ನವಂಗೊಪ್ಪಿಸುತ
ಲಿಂದುಮುಖಿಯರ್ವಿರಾಜಿಸಿದರತಿ ರತಿಯೊಳಾನಂದವಂಗಜಗೇರಲು || ೫೭ ||

ನಾಗಾರಿಧಮ್ಮಿಲ್ಲ ನಾಗಾರಿಮೊಗವಚ್ಚ
ನಾಗಾರಿ ತನುಮಧ್ಯ ನಾಗಾರಿ ದಶನ ಮಿಗೆ
ನಾಗಾರಿಮೂರ್ತಿ ನವನಾಗಾರಿ ದರಹಸನ ನಾಗಾರಿ ಗತಿಯೊಳೆಸೆವ
ನಾಗಾರಿ ಪಗೆಯಂತಿರೊಪ್ಪೆ ಕುಚಕುಟ್ಮಳಂ
ನಾಗಪಗೆಸತಿಯ ಮಿನ್ನೊಗೆದ ಕಂಗಡೆಗಳಿಂ
ನಾಗವಲ್ಲಭನ ರಮಣಿಯ ಪಾಂಗಿನಿಂದೊಬ್ಬ ನಾಗಮೋಹಿನಿಯೆಸೆದಳು || ೫೮ ||

ತೋರಹಾರದ ಜವಳಿಗಡುಕಿನ ಸಿತಂಬಡೆದ
ನೀರಜವಿಲೋಚನದ ನಿರ್ಮಲೀಕೃತ ಮೊಗದ
ಚಾರುತರ ತನುರುಚಿಯ ಮೃಗನಾಭಿ ಗಳದ ವಿಸ್ತಾರ ಹೊಂಚೆಳೆನಡುವಿನ
ಓರೆದುರುಬಿನೊಳೆಸೆವ ಜಾತಿಯರಲಿನ ಚೆಲ್ವ
ಸಾರಸದ ಸುಳಿಗಳೆನೆ ಮುರಿದಮೀಸೆಗಳ ಶೃಂ
ಗಾರವಡೆದಿರ್ದ ವಿಟಜನ ವಿರಾಜಿಸೆ ಮದನವಾರಣದ ಸೊಬಗ ಹಳಿದು || ೫೯ ||

ಇಂದ್ರನಂತಿರೆ ಭಗಾಂಕಿತರಲ್ಲದಾವಗಂ
ಚಂದ್ರನಂತಿರೆ ಕಳಂಕಿತರಲ್ಲವರಿದೆನಿಪ
ಕಂದುವಣ್ಣನ ತೆರದಿ ಪುಷ್ಪಾಕ್ಷರಲ್ಲ ಮಾಕಂದವಾಹನನಂತಿರೆ
ಒಂದಿನಿಸು ವಾಯುರೂಪಿಗಳಲ್ಲ ದೇವಕೀ
ನಂದನಾತ್ಮಜನೆನಲ್ಬೆಂದೆ ಮೈಯವರಲ್ಲ
ವೆಂದೆನಲ್ಕಾವರೆನೆ ಚಿತ್ರತರ ಕಾವರೆನಲಂದು ವಿಟಜನವೆಸೆದುದು || ೬೦ ||

ಇವನಾರು ನಾಗರೀಕಂ ಲಕ್ಷಣಾನ್ವಿತಂ
ಇವನಾರು ಪೀಠವರ್ಧನನತಿಪ್ರೌಢನಿಂ
ತಿವನಾರು ವಿಟವಿಲಾಸಪ್ರಕಟಕೋವಿದಂ ಇವ ವಿದೂಷಕಬಲ್ಲಹ
ಇವರು ಶಶ ವೃಷ ಹಯ ಮದಾರಣಸ್ತಬಕರಂ
ದವರ ಗುಣಗಣ ರೂಪರೇಖೆಯಂ ವಿಸ್ತರಿಸಿ
ತವೆ ಕಕೋವನೋದುತಿರ್ಪ ರಮಣಿಯರೆಸದರವನಿಗೆ ವಿಚಿತ್ರವೆನಲು ||೬೧||

ಪರಮೆಗುರುಳಿಂ ಚೆಲ್ವ ತುರುಗಿದವೆಗಂಗಳಿಂ
ನೆರೆದಿಂಗಳಂತೆ ಬೆಳಗೊರೆವ ನಿರ್ಮಲವೊಗ೦
ಮರೆದನ್ನಮನ್ನರೆಯದಿಟ್ಟೆಪ ಕುಚದ್ವಯಂ ಮಿರುಪ ಹೊಂಜೆಳೆನಡುವಿನ
ಜರುವತಿ ಬ್ರಹ್ಮಚರಿಗಳ ಚತುಷ್ಕರಣಮಂ
ಸೆರೆವಿಡಿವ ಜಘನದಿಂ ಮಿರುಪ ಸಪುರದ ಚೆಲ್ವ
ನಿರಿಯ ಮೇಲಿಟ್ಟ ಕಾಂಚೀದಾಮದಿಂದೊಪ್ಪಲುರೆ ಮೋಹನದಿ ಸೊಗಸಂತ ||೬೨||

ಲೆತ್ತ ಚದುರಂಗ ರತಿಶಾಸ್ತ್ರ ವೀಣಾಭ್ಯಾಸ
ನೃತ್ಯಪಾಠನ ಮುರಜ ವಾಸ ಮರ್ದಲ ಪಟಹ
ಶ್ರುತಗಾನಾಲಾಪ ಷಡ್ಜ ಪಂಚಮ ಲಸಿತಕೃತ್ಯ ಗಮಕ ಸ್ವರಗಣ
ವೆತ್ತ ನಾನಾವಿದ್ಯಗಳ ಕಲಿವುತಂ ಬಹುಳ
ಚಿತ್ತಜನ ರತಿಕೇಳಿಯಂ ನಟಿಸಿ ಬಳಲುತಂ
ಪೊತ್ತುಗಳೆವುತ ಗಂಧಮನ್ನರೆಯಿಸುವ ಸತಿಯರೊತ್ತರದಿ ಬಿನದವಾಯ್ತು ||೬೩||

ಚಂದನವನರೆವ ರಮಣಿಯ ಮೊಗಂ ಸಂಪೂರ್ಣ
ಚಂದ್ರನಂತಿರಲೊಸರುತಿರೆ ನಿರ್ಮಲೀಕೃತದ
ಚಂದ್ರಕಾಂತದ ಸಾಣೆಯದನರಿಯದಾ ಸುದತಿ ಚಂದನಂದೇವುತಿರಲು
ಮಂದವಾಗದೆ ವಿಸ್ಮಯಂದಳೆದವಳ ಮೊಗವ
ನುಂ ದಯದೊಳವಲೋಕಿಸುತ್ತ ನಾಯಕಿ ಕರೆದ
ಡಿಂದೀವರಾಕ್ಷಿ ಬರೆ ಗಂಧ ಕಠಿಣಮನ್ನೆದಿತಂದಿಳೆಗೆ ಚಿತ್ರಮೆನಲು ||೬೪||

ನೀಲಕುಂತಳೆ ಕೋಮಲಾಂಗಿ ಮಲಯಜಗಂಧಿ
ಬಾಲಚಂದ್ರೋಷ್ಠೆ ಶೈಥಿಲ್ಯತನುಮಧ್ಯೆ ನವ
ನಾಳಿಕೇರಸ್ತನ ಕುರಂಗಲೋಚನೆ ಕಾಮಕಾಳಗತರಂಗಮೋಹಿ
ಜಾಳು ರತಿಗಜನ್ಯಕಂಠೀರವ ಸಲಕ್ಷಣೆ ಮ
ರಾಳ ನಿರುಪಮಯಾನೆ ಪೃಥುಳ ಜಘನಸ್ಥಳೆ ವಿ
ಶಾಲೆ ಬಾರೆಂದು ಕರೆದಳು ದೂತೆ ನಾಯಕಿಯ ಕಾಲವರಿದಿನಿಯ ಬರಲು ||೬೫||

ಒಡಗೂಡುವ ಗೃಹದೊಳಿರ್ದವನ ಬೇಗದಿಂ
ಕಡೆಗೆ ತೊಲಗಿಸಿ ನಲ್ಲನಂ ಕಂಡು ಜವಹದಿಂ
ಕಡು ನೇಹವಂಕುರಿಸಿ ಕಾತರಿಸಿ ಪೆಚ್ಚುತಂ ನಡೆದೊಳಗೆ ಸೆಜ್ಜೆವನೆಯ
ನಡುವೆ ಕೋಮಲವಾಸಿನೊಳ್ಕಾಮಕೇಳಿಯಂ
ತಡೆಯದೆ ಚಮತ್ಕರಿಸುತಿರ್ಪ ಸಮಯದೊಳವಳ
ಕಡೆಗಣ್ಣ ಕೆಂಪ ನುಣ್ಗೊಲೆಯ ನಖರೇಖೆಯಂ ಬಿಡದಟ್ಟೆಸುತ್ತಿರ್ದನು ||೬೬||

ಇಂಗಡಲಕುವರ ಬಡವಾದಪಂ ನಿನ್ನಯ ಕು
ಚಂಗಳೊಳು ಕಾದಲೆ ವಿಚಿತ್ರವಿದು ಕಂಗಡೆಯೊ
ಳಿಂಗಡಲವೈರಿಯರುಣದ್ಯುತಿ ವಿರಾಜಿಸಿದುದಿಂಗಡಲಪುತ್ರವದನೆ
ಇಂಗಡಲಣುಗನಳಿಯಚಾಪ ಸಿಂಜಿಣಿ ಪರದ
ವಿಂಗಡಲ ನಗತನುಜಬಣ್ಣವಧರದೊಳೆಸೆದು
ದಂಗನೆ ನಿನಗೆ ಮನಂ ಕವಲಾದುದಿಡಿದ ಸಾರಂಗವರಿಗೋಡಿದಂತೆ ||೬೭||

ಇಂತಾಡುವರೆ ಬಲ್ಲಹಂ ನಿನ್ನ ಮೇಲಾಣೆ
ಯೆಂತೆನಲ್ ನಿನ್ನ ಕಾಣದೆ ವಿರಹದುಷ್ನದಿಂ
ನಾಂ ತಳರಿ ಬನಕೆ ಪೋದಲ್ಲಿ ಕುರವಕವಪ್ಪಲುಂ ತಳದಿ ನೀಂ ಬೇಗಿರೆ
ಇಂತಾದವೆನ್ನ ಕಂಚವಳಕವಧರಂ ಮನುಜ
ಗೆಂತು ಪ್ರಮಾಣಮಂ ಮಾಡೆ ನಂಬುಗೆ ಸಾಲ
ದಂತವರ ಬಸುರಬಂದವಳಲ್ಲ ನೀ ಮುನಿಯೆ ಕಂತು ಸಯಿರಿಸಬಲ್ಲನೆ ॥ ೬೮ ॥

ಕಂಡವರ ಕೂಡುವರ್ಕಳ್ವೆಯರ್ತಾಕಿಯ
ರ್ಮಿಂಡರೊಳ್ಕೂಡೆದಾಡಿ ಭಂಡುಗೆಡೆವರು ಕೂಳಿ
ನುಂಡೆಯೊಳ್ಪರಸುವರು ಮಚ್ಚುಮದ್ದು ಮರುಳುಗೊಂಡಂತೆ ಪೆಚ್ಚುತಿಹರು
ತೊಂಡುರಿಸಿ ಪರಿದು ಬಹುಕೃತಕಮಂ ಗಂಟಿಕ್ಕಿ
ಪುಂಡತನದಿಂದಲಗನಿತ್ತು ಕಡಿದಾಡಿಸುತ
ಷಂಡರಂ ಮಾಡಿ ಬಹುಧನವ ಕೂಡುವ ಸೂಳೆವೆಂಡಿರಿಗೆ ಸಹಜವುಂಟೆ ॥ ೬೯ ॥

ಎಂದು ವೇಶ್ಯಾವಿಡಂಬವನಾಡಿ ಕಾದಲರ
ಮುಂದೆ ಹೊಸತನದಿ ರಂಜಿಪ ವಾರನಾರಿಯರ
ಗೊಂದಣಮ ನಿಖಿಳವಿಟಜನವ ಗಳಿಕಾಲಯವನಂದಿಟ್ಟಿಸುತ ಕೇಳುತ
ಕಂದುಗಳ ರೇವಣನ ಕುಡವರು ಪೇಳಿರೇ
ಗಂಧವಾಹಕ ಪೂಜ್ಯ ರೇಣುಕನ ಕಂಡಿರೇ
ಎಂದು ಬಸವೇಶನುಂ ಬಿಜ್ಜಳಮಹೀರಮಣನಂದರಸುತಿರ್ಪೆಡೆಯೊಳು ॥ ೭೦ ॥

ವೃತ್ತಕುಂಚೆ ಮಾಯಿದೇವಿಯರ ಗೇಹಕೆ ನೀರ
ಹೊತ್ತಡಕುತಂ ವ್ರೀಹಿಯಂ ಮಿದಿವುತಿರ್ಪನದೆ
ನಿತ್ಯವೀ ಪರಿಯೆನಂತ ಚೇಟಿಯೋರ್ವಳು ತೋರ್ದುಡುತ್ತಮೆಯ
ಮನೆಗೆ ಬಂದು
ಕೃತ್ತಿವಾಸನ ಶರಣ ರೇಣುಕಂ ನೀರನಡ
ಕುತ್ತಮಿರೆ ಬಸವೇಶ ತಾ ಕೊಡಲನಾನುತಂ
ನೆತ್ತಿಯಲ್ಲಿರಿಸಿಕೊಂಡೆಯಿತರಲು ರಮಣಿ ಮಿಗೆ ಮತ್ತೆ ಮಿಂಡನ ಗಜರ್ದಳು ॥ ೭೧ ॥

ಬಿಜ್ಜಳಂ ನೋಡಿ ವಿಸ್ಮಯವಡುತಲೀ ಪುರುಷ
ನಿರ್ಜರನಮಿತ ಚರಣನೀ ರಮಣಿಯೊಳು ಸಿಕ್ಕಿ
ವರ್ಜಿಸಿದ ಕೈವಲ್ಯಮಂ ನೋಡೆನಲ್ಬಸವ ಬಿಜ್ಜಳನ ಮೊಗವ ನೋಡೆ
ಉಜ್ಜುಗವಿದಲ್ಲೆನುತ ಸುಮ್ಮನಿರ್ದ ನೃಪತಿ
ಮಜ್ಜೀವಿತೇಶಯೆನುತಂ ಬಸವ ಕೊಡನಿಳುಹಿ
ವಜ್ರಪಂಜರ ರೇಣುಕಂಗೆರಗಿ ನೃಪಸಹಿತ ತಜ್ಜವದಿನೊಪ್ಪಿರ್ದರು ॥ ೭೨ ॥

ಮಾಯಿದೇವಿಯರ ಸದನಂ ಪ್ರಚುರಕೈಲಾಸ
ಮಾಯಿದೇವಿಯರ ಸದನಂ ಶಿವನಸೆಜ್ಜೆವನೆ
ಮಾಯಿದೇವಿಯರ ಸದನಂ ಶಿವನಮಂತಣಂ ಮಾಯಿದೇವಿಯರ ಗೃಹ
ಮಾಯಿದೇವಿಗೆ ರೇವಣಂಗೆ ನಿಜಪರಬೊಮ್ಮ
ಮಾಯಿದೇವಿಯರ ಕಂಡವರ ಜನ್ಮಂ ಸಫಲ
ಮಾಯಿದೇವಿಗೆ ನಮಸ್ಕಾರವೆನುತಂ ಬಸವ ಮಾಯಿದೇವಿಯರ ನುತಿಸೆ ॥ ೭೩ ॥

ಮತ್ತೆ ರೇಣುಕನ ಸಿಂಹಾಸನದೊಳಿರಿಸುತಂ
ವಸ್ತ್ರಾಭರಣ ಗಂಧಮಾಲ್ಯದಿನಲಂಕರಿಸಿ
ಕೃತ್ತಿವಾಸನ ರೇಣುಕಂಗೆರಗಿ ನುತಿಗೆಯ್ಯುತಿತ್ತ ದೇವೀರ ಕಂಡು
ಚಿತ್ತಜಹರಪ್ರೀಯೆ ಶರಣಾಗೆನುತ ಬಸವ

ನಶ್ಯತ್ಯಿಂದಿಂದೆರಗೆ ಮಾಯಿದೇವಿಯುರಳುಕಿ
ಮಸ್ತಕವ ಮಣಿದು ಬಸವಗೆ ಪೊಡಮಡುತ್ತಿರ್ದಳೆತ್ತಲುಂ ಶ್ರದ್ಧೆ ಮೊಳೆತು ||೭೪||

ಅಯ್ಯನಿರ್ಪ ನನಗೆ ನೀವೆರಗಬೇಡೆಂದ
ಡಯ್ಯ ನಮ್ಮಯ ಮನೆಯ ಕರಣಲಕ್ಷಣದ ಪೋ
ತಯ್ಯ ನಿಮ್ಮಣುಗೆ ನಾನೆತ್ತ ಬಿಜೆಮಾಡಿ ಬಸವಯ್ಯ ಶರಣಪ್ರಕರದ
ದಿಯ್ಯಯೆನುತಂ ರೇವಣನ ಮಂಚದೊತ್ತಿನೊಳ
ಗೊಯ್ಯನೆ ನೃಪನ ನಿಲಿಸಿ ಬಸವೇಶನಂ ಕರೆದು
ರಯ್ಯಮಾದ ಗೃಹದಿ ವಿಸ್ಮಯವ ತೋರೆಸಿದಳಯ್ಯ ಪೇಳ್ವಡೆ ವಿಸ್ಮಯ ||೭೫||

ರಜತಾದ್ರಿಕೋಣೆಯಿಂ ನಡುಮನೆಯ ಸುರನಗಂ
ರಜತಾದ್ರಿಯೊಡೆಯ ರೇಣುಕನಾಗಿ ಮೆರೆದಿರ್ಪ
ರಜತಾದ್ರಿಗಣನಿವಹವಿರ್ದರಾತನ ಬಳಸಿ ರಜತಾದ್ರಿಯಷ್ಟದಿಶೆಯ
ರಜತಶೃಂಗಂ ಸ್ವರ್ಣಮೇರು ಕುಧರಾಷ್ಟಕಂ
ರಜತಮೃಗ ಪಶುಪಕ್ಷಿ ತರುಕುಲಂ ವನಕೊಳಂ
ರಜತಲಕ್ಷಣವೆತ್ತು ರಂಜಿಲಸ್ಪಸವೇಶ ಮುರು ಭಾಪೆನಂತಲೆರಗಿದ ||೭೬||

ಇದು ಪರಶಿವಾಕೃತಿಯ ಗುರುಲಿಂಗಣಾರ್ಯನಂ
ಪದುಳದಿಂ ನುತಿಗೈದ ಲಿಂಗಪೌರಾಣದಿಂ
ಮುದವಡೆದು ಬಸವ ಬಿಜ್ಜಳರುಭಯ ರೇಣುಕನ ಪದಯುಗಳಮಂ ಕಾಣುತ
ಸದನದ ಮಹಾಮಾಯಿದೇವಿಯ ಮಹತ್ವಮಂ
ವಚನಪಂಚಕ ರೇಣುಕನ ಮಹಾಮಹಿಮೆಯಂ
ವಿದಿತವಿಟ್ಟಿಸುವೆಡೆಗೆ ಸಂಧಿಯಿಪ್ಪತ್ತಯ್ದು ಸುಧನ ಶಿವತತ್ವಸೌಖ್ಯ ||೭೭||

## ಸಂಧಿ : ಇಪ್ಪತ್ತಾರು

ಅರಸ ಬಿಜ್ಜಳನ ರಾಜಗೃಹ ದಹನಮಾಗೆ
ವರ ವಿಭೂತಿಯನಿತ್ತು ವಿಭ್ರಾಜಿಸಿದ ನವ್ಯ
ಗುರುತತ್ವ ರೇಣುಕಾಚಾರ್ಯ ನಿರುಪಮಶೌರ್ಯ ಸುರವಿನುತಮುಕ್ತಿಪೂರ್ಯ ||ಪ||

ಪೂಷ ಶಶಿ ಶಿಖಿನೇತ್ರ ವಿಶ್ವರಕ್ಷಣಜಠರ
ಶೇಷವಲ್ಲಭಕಟಕ ಜನ್ಮಪ್ರವೀನ ಬಹು
ದೋಷಮಾಯಾಮೂಲ ಕುದ್ದಳ ವಿಭವಲಸಿತಭಾಷಣ ಶರಣಬೋಧಕ
ರೋಷಸಂಕಲ್ಪ ಷಡ್ವರ್ಗನಿರ್ಮುಕ್ತ ಹರಿ
ಶೋಷಣ ವಿಚಿತ್ರಕರ್ಕಶಭೀಮ ಬಹುದು:ಖ
ಶೇಷಣ ವಿಪಿನಕುಠಾರಂ ಪಾಲಿಸೊಲಿದೆಮ್ಮ ಪೋಷಣಶ್ರೀಯನಿತ್ತು ||೧||

ಇಂತು ಮಾಯಾದೇವಿರ್ದೋರ್ದ ಕೈವಲ್ಯದಿರ
ವಂ ತವೆ ಬಸವರಾಜ ನಿಟ್ಟಿಸುತ ನುತಿಗೈವು
ತಂತರಂಗದೊಳು ರೇವಣನಮೂರ್ತಿಯನಿರಿಸುತಂ ತರಣಿಕೋಟಿತೇಜ
ಅಂತಕಾಹಿತಭಕ್ತಿಜನಕಲ್ಪಕಂಜ ಪರಮ
ಚಿಂತಾಮಣೀನಿಳಯ ದಾಸಕರ್ಮ ಕಠೋರ
ದಂತಿಹತ ಮೃಗರಾಜ ರೇವಣ ಸಲಹುಗೆಮ್ಮ ಕಂತುಕೇಳೀವಿಲಾಸ ||೨||

ಪಿಣ್ಣಾಕದೇವನಾಗಿರ್ದು ಗಾಣವ ಹೊಡೆದು
ಕಣ್ಣ ಮೂವರಿಗಿತ್ತು ಲಂಕಾಪುರಿಗೆ ನಡೆದು
ಮಣ್ಣಪುತ್ಥಳಿಗೆ ಹರಣವಕೊಟ್ಟು ವೈವಾಹಪಣ್ಣಕೆಯೊಳೆಸೆದು ಜವದಿ
ಅಣ್ಣೆವಾಲಿನ ಮಳೆಯ ಕರೆಸಿ ಕೆರೆಯಂ ಕಟ್ಟಿ

ಹೆಣ್ಣುಗಳನೇಳ್ನೂರನಾಳ್ದು ರಾವಣನನುಜ
ನುಣ್ಣದಿರೆ ಲಿಂಗದುರುಶನವಿತ್ತು ಮೆರೆದ ರೇವಣ್ಣನಡಿಗಾನೆರಗುವೆ ||೩||
ತನ್ನಿಮಿತ್ತದಿ ನಡೆದು ಕೊಲ್ಲಾಪುರದೊಳೆಸೆವ

ಬನ್ನಿಮಾಕಳಿಯಿಕ್ಕಿದ ನಂಜನುಂಡವಳ
ಸ್ಪನ್ನಲಿಗೆಮಾಲೆಯ ನಾಸಾಪುಟವ ಖಂಡಿಸುತ ಕಿನ್ನರಿಯ ಮಾಡಿ ಪಿಡಿದು
ಉನ್ನತಿಕೆವಡೆದ ನವನಾಥಸಿದ್ಧರ ಪೊಡವು
ತನ್ನಡಸಿ ಮೇಷವಿಂಡು ಕೂಡಿ ಕಮಲಗಿರಿ
ಯನ್ನಗೆದು ರಾಜೇಂದ್ರನಣುಗೆಯಂ ತಂದ ರೇವಣ್ಣನಡಿಗಾನೆರಗುವೆ ||೪||

ಪಿಡಿದು ಮಸಕಸುರರಂ ಪೊಸೆದು ಸುರಗಿಯ ಮಾಡಿ
ಮಡುವಿನಿಂ ಬಿಸುಟು ಗಜಮನ್ನೇರಿ ಸಿಂಹಮಂ
ಕಡಗಿ ತುಳಿಸತು ನಖದಕೊನೆಯ ಪ್ರದಕ್ಷಿಣದ ಕಡಲಚಿಮ್ಮಿಸುತ ಬಂದು
ಪಡೆವಣೆಯ ಮೇಖಲಂಗೈದು ಕೌಶಲ್ಯದಿಂ
ವಡಬನಂ ಕೌಪೀನಮಂ ಮಾಡಿ ವಿಷಪೂರ್ಣ
ದಡಿಗಳಿಂ ಗಮಸಿ ಷೋಡಷಯುಗಂ ಶಿಲೆಯ ಮೆಲ್ಡೊಡೆಯ ರೇವನಗೆರಗುವೆ ||೫||

ಆಲ್ಲಾಡುತಿರ್ಪ ಗೋವಿಂದನ ಶಿಖಾಗ್ರದಿಂ
ದಲ್ಲಾಡದಂತೆ ತನ್ನಯ ವೀರ್ಯಮನ್ನೊತ್ತು
ತಲ್ಲಾಟಮು ನಿಲಿಸಿದಿಂದು ವೈಕುಂಠನೆನುತೆಲ್ಲರಿಂ ಕರೆಯಿಸುತ್ತ
ಗಲ್ಲಮಂ ಪಿಡಿದು ಕಾಮಾಕ್ಷಿಯಂ ಮುದ್ದುಗೈ
ದುಲ್ಲಸಿತ ಕಾಂಚೀಗುಹೆಯೊಳೆಯ್ದಿ ತಪಕಿರಿಸಿ
ನಿಲ್ಲದೆ ಚರಿಸುತಿರ್ಪ ಸಿದ್ಧಪತಿಯಂ ಕಂಡು ಮೆಲ್ಲಡಿಗೆ ನಮಿಸುತಿರ್ಪೆ ||೬||

ಕಲ್ಯಾಣ ಕಾಂಚಿಯಮರಾವತಿಯಯೋಧ್ಯದಿಂ
ಹಲ್ಯಾಪುರವನೆಯ್ದಿ ಭಿಕ್ಷಮಂ ತೆಗೆತರಂತ
ಪಲ್ಯಾವಳಿಯ ಕೊಡವ ಚರಲಿಂಗಶತಲಕ್ಷಕಲ್ಯೋಪಶಾಂತಿಗೈದು
ಶಲ್ಯಾದಿಬಾಣಾಂತ ಕರವಾಳುಮಂ ಪಿಡಿದು
ಶಿಲ್ಯಾಸಮೂಹದಿಂ ಚರಿಸಿ ಬೇಂಟೆಯನೆಸಗಿ
ದಲ್ಯಾಚ ದಾನವರ ಬಡಿದ ಸಿದ್ದೇಶನ ವಿಮಲ್ಯಾಪದಕೆ ನಮಿಸುವೆ ||೭||

ಎಂದು ನುತಿಸುವ ಬಸವನು ರೇವಣಾಸಿದ್ಧ
ಮಂದಹಾಸದಿ ನೋಡಿ ಬಿಜ್ಜಳನ ಮನೆ ಸುಟ್ಟಿ
ತೆಂದು ಸಂಶಯಬೇಡ ಭೂತಿಯಂ ಕೋಯೆನುತಲಂದು ನೃಪಗೀಯಲೊಡನೆ
ಹಿಂದೆ ಸೆರಗಂ ಪಿಡಿವುತಷ್ಟಲಕ್ಷ್ಮಿಗಳೆಯ್ದೆ
ಬಂದಪೆವೆನುತ ಭೂಪನು ಕರೆಯಲತಿ ಬೇಗ
ವಂದಿಸಿದ ಭಕ್ತಿಯಿಂ ಚಾಳ್ಚಕ್ಕಿನೃಪತನಯನಂದು ರೇವಣಸಿದ್ಧಗೆ ||೮||

ಆನಿತರೊಳು ಸುಪ್ರಕಾರಂ ಗೋಪುರಂ ಚೆಲ್ವ
ಜನಪ ಸಿಂಹಾಸನಂ ನವರಂಗ ತೊಟ್ಟಿಯುಂ
ನವ ತುರಗಶಾಲೆ ಗಜಶಾಲೆ ನವ್ಯ ಹಜಾರ ಮನೆ ಸೌಧ ನಾಟ್ಯಶಾಲೆ
ಇನತೇಜಭಂಡಾರಗೇಹಮೃತಕಪ್ಪಡದ
ಮನೆ ಜಲ್ಲಿ ಪಟ್ಟೆ ಪರಿಮಳವಸ್ತುನಿವಹ ಸಂ
ಜನಿಸಿದೌ ದೇವ ಚಿತ್ತಯಿಸೆಂದು ಚರಕುಳಂ ಜನಪತಿಗೆ ಬಿನ್ನಯಿಸಲು ||೯||

ಚತುರಗಂಬಲವಸ್ತು ರತ್ನದ ಕಿರೀಟಮುಂ
ಚತುಪದ್ಮಭಂಡಾರ ವಿನಿಯೋಗ ರಕ್ಷಣದ
ಚತುರ ವನಿತಾಜನಂ ಖಡ್ಗಸಂಚಯ ನವ್ಯಸುತರಮಲದಮೃತಕೂಪ

ಸಿತವಡೆದ ಗಂಧಶಾಲ್ಯಾದಿ ಧಾನ್ಯಂ ಬಹುಳ
ಜಿತಪಲ್ಲಕಾಂದೋಳನಂ ಛತ್ರ ಚಾಮರಂ
ಪ್ರತಿರಹಿತ ಪುಷ್ಪವಾಟಗಳಿಂ ವಿಭೂಷಣದೊಳತಿ ಚೆಲ್ವನಾಯ್ತರಮನೆ ॥ ೧೦ ॥

ಎನುತ ಪೇಳಲು ವಿಸ್ಮಯಂಬಟ್ಟು ಭೂವರಂ
ಜನಿತ ಹರುಷದಿ ರೇಣುಕನಪದಾಬ್ಜಕೆ ಮಣಿದು
ಚಿನುಮಯಾ ನಿಮ್ಮ ಕರುಣದ ಕವಿಲೆ ತಾನೆಂದು ಘನಮಹಿಮನಂ ಪೊಗಳುತ
ತನುಪುಳಕವಡೆದು ಬಸವನ ಹೊರೆಯೊಳಪ್ಪಿರಲು
ಜನಪನಂ ಬಸವಣ್ಣನಂ ಗೃಹಕೆ ಕಳಿಪುತಂ
ವಿನಯದಿಂ ರೇಣುಕಾಚಾರ್ಯನೊಪ್ಪಿರುತಿರ್ದ ವನಜಾಕ್ಷಿಯಾಲಯದೊಳು ॥ ೧೧ ॥

ಇತ್ತ ಬಸವಂ ರೇಣುಕನ ಮೂರ್ತಿಯಂ ತನ್ನ
ಚಿತ್ತದಲ್ಲಿರಿಸಿ ಪದಕೆರಗಿ ಬಿಜ್ಜಳ ಸಹಿತ
ವೃತ್ತಕುಚೆಯಾಗಾರಮಂ ಕಳಿದು ಭೂಪತಿಯನತ್ತಲರಮನೆಗೆ ಕಳುಹಿ
ಕೃತ್ತಿವಾಸನ ಚರಂಗಳ ಸೇವೆಯಂ ಮಾಡು
ತುತ್ತಮದ ಗುರುಗೋಹೇಶ್ವರಬೋಧೆಯಂ ಕೇಳು
ತೆತ್ತಲುಂ ಶಿವಭಕ್ತಿರಸದೊಳೋಲಾಡುತಂ ನಿತ್ಯಮಿತಿರುತಿರ್ದನು ॥ ೧೨ ॥

ಒಂದುದಿನ ಬಸವದರುಶನದಿ ಕಿನ್ನರಶರಣ
ಮಂದಹಾಸದಿ ವೀಣೆಯಂ ನುಡಿಸುತಿರೆ ಜವದಿ
ಬಂದು ಸಕಳೇಶಮಾದರಸ ಕೇಳುತ ಭರತ ಸಂದು ಕಾಲಕ್ರಮಗಳ
ಹೊಂದಿಕೆಯೊಳಿರಬೇಕು ಶುದ್ಧ ದೇಸೀಕ್ರಮಗ
ಳೆಂದುಭಯಲಕ್ಷಣಂ ಶಬ್ದಪ್ರಮಾಣಗಳ
ಛಂದ ನಯ ನೇವಣೆಯೊಲವು ಸೊಲಪು ಸೊಗಸೆಂದು ಶರ್ವ ನುತಿಸಲು ॥ ೧೩ ॥

ಎನೆ ಕಿನ್ನರನ ಚಿತ್ತ ವಿಸ್ಮೃತಿಯನೆಯದಿ ಮುಖ
ವನಜವಲರದೆ ಮಾದಿರಾಜನಂ ನೋಡುತಂ
ಘನತಾಳ ಶಬ್ದ ಮಾರ್ಗದಿ ನುಡಿಸಲತಿಗಳೆದು ತನುಪುಳಕ ತಲೆದೋರದೆ
ಕನಪಾಗಿ ಮಾದಿರಾಜಂ ವೀಣೆಯಂ ನುಡಿಸ
ಲನುವಾಗದೆಮ್ಮ ತ್ರಿಪುರಾಂತಕನ ಮೆಚ್ಚಲ್ಲ
ವೆನಲಿಬ್ಬರಂ ದಂಡನಾಥ ಸಲೆ ಕಳುಹಿದಂ ವಿನಯದಿಂ ಲಿಂಗದೆಡೆಗೆ ॥ ೧೪ ॥

ಕಳುಪಲೊಲ್ಲದೆ ಕಿನ್ನರಯ್ಯ ಬಸವನೊಳೆಂದ
ವಳಿಕನೇತ್ರನ ಶಿವಾಲಯವೆರಸಿ ಬರಿಸುವೆಂ
ಅಳುಕಲೇಕೆಂದನುಭವಸ್ಥಳದಿ ನುಡಿಸಿದಂ ಕಳೆವೆತ್ತು ಶುದ್ಧವಡೆದು
ಬಳಿಕ ನವ ಕ್ರೀ ಮಾರ್ಗ ದೇಸೀ ಕರ್ತರಗಳಿಂ
ತಳ ಸಂಚು ನಖ ಪೊಯ್ಲು ಗದ್ಯಲಕ್ಷಣಗಳಿಂ
ಬೆಳೆದ ಶಾಖೋಪಶಾಖಾವಿಸ್ತರಂಬೆತ್ತು ಗಳದ ನಯವೊಂದಿ ಮರಳಿ ॥ ೧೫ ॥

ಕೂಡೆ ಸಾಳಗ ತಾನ ಗೌಳ ಮಿಶ್ರಂ ಲಲಿತ
ಮಾಡೆ ಗೀತಕ್ರಮದಿ ಸಂಕೀರ್ಣವೆತ್ತು ರತಿ
ಜೋಡಣೆಗೆ ಚಿಂದು ಜಕ್ಕಡಿ ಗೀತ ಕಂಪನವ ಸೂಡೆ ಸರಸಲಾಪದಿ
ಮೂಡೆ ನೇರುರುಪು ಚೌಕಂ ಮಡುಪು ದುರಕುಳಕೆ
ನಾಡೆ ಚೊಕ್ಕಳಮಾಗೆ ತಚ್ಛ್ರುತಿವಿಲಾಸದಿಂ
ಪಾಡಿ ಕಿನ್ನರ ನುಡಿಸುತಿರ್ದ ನವಕಿನ್ನರಿಯ ಗಾಡಿ ಮಿಗೆ ಬಹಳ ಸುಖದಿ ॥ ೧೬ ॥

ಸಾಕೆನಿಸದಂತೆ ನಯಬಲಿದು ಕರ್ತರವೆಸೆಯ
ಬೇಕೆನಿಸುವಂತೆ ನವರಾಗ ಲಳಿತಂಬಡೆಯ
ಜೋಕೆ ಸಮನಿಸುತದಕೆ ರಮ್ಯಕೌತುಕ್ರಮದಿ ವಾಕೆಸೆದುಶೋಭಿಪಂತೆ

ಆ ಕುತೂಹಲ ನಾಟ್ಯ ರೀತಿ ನರ್ತಿಸುವಂತೆ
ರಾಕೇಂದುಮೌಳ್ಯ ತಲೆದೂಗೆ ರಯ್ಯಂ ಬಲಿದ
ನೇಕಸಾಹಿತ್ಯಜನವಾಯೆಂದು ನಲಿಯೆ ಶಿವಲೋಕ ಪುಳಕಿಸೆ ಬಾಜಿಸೆ ||೧೭||

ತತ್ತಕಾರಮನೆಸಗಿ ಝೊತಕಿಟಮೆನಲು
ತಿತ್ತಕಟ ಧಿಕಟನಭ ತೊಂಗಕಿರ್ರಿಟಮೆಸುಗ
ಲುತ್ತರವಿಳಾಸ ನವಕಂಬಡೆದು ಸೊಂಪೆಸೆಯಲೆತ್ತಿ ವಾದ್ಯಕ್ರಮಗಳ
ಕರ್ತುಕವಿಡಿದು ಸುಪ್ರಯೋಗಪೂರಣಮಾಗೆ
ವರ್ತನಪ್ರೌಢಿ ಸೊಗಸಿನೊಳೆಸೆಯೆ ಸಾರಂಗ
ಮರ್ತಲ ಪ್ರಹಸಿತಂಗೊಳೆ ನುಡಿಸಿದಂ ಶರಣ ನರ್ತಕಜನಂ ಮೆಚ್ಚಲು ||೧೮||

ಮೆಟ್ಟುಗಳ ಮೇಲೆ ಕುಣಿದಾಡುವ ಬೆರಳ್ಗಳಿಂ
ದಿಟ್ಟಿಗಳ ಚೆಲ್ವ ಕೋಮಲದ ಚಳಬಳಿಕೆಯಿಂ
ತಟ್ಟನೆ ಬೆರಳ್ಪಿಡಿತ ಪಯಿಸರಿಸದಂಗುಲಂ ಕಟ್ಟೆಸಕಮಾದ ಕೊರಲು
ಬಟ್ಟೆಯೊಳು ಸಂದಣಿಸಿ ನಯವೊಗೆದ ಗಾನದಿಂ
ಮುಟ್ಟಿ ನಾಲಿಗೆಯೊಳುಚ್ಚರಿಪ ಶಬ್ದಕ್ರಿಯೆಗ
ಳೊಟ್ಟಯಿಸೆ ಕಿನ್ನರಂ ಬಾಜಿಸಿದನೊಡನೆ ಮೂದಿಟ್ಟಿಗಂ ನಲಿವುತಿರಲು ||೧೯||

## ರಾಚಪ್ಪಯ್ಯನ ಪ್ರಭುಚರಿತೆ

(ಪದ್ಯ ೩೮ ರಿಂದ ೫೫)

ಪೂರಹೊಂಟ ಹರಿಯ ಹೆಗಲನೇರಿ ಊರೊಳು
ತಿರಿಗಿ ತಂದಿಂಗಳೇಸ್ವರದ
ಹೊರಗೆ ಬಿಟ್ಟನು ದೃಷ್ಟಿ ದ್ವಿಜರನುಳಿದು ಬಂ
ದರಿದ ರೇವಣ್ಣ ಶಿವನ ||೧||

ಬಂದು ಮಂಗಳವಾಡ ಸಿದ್ದವಾಟದ ಕೆರೆ
ಗಂದು ನಿರ್ವಾಣ ವಿರಕ್ತ
ಮಂದಿ ಅಸಂಖ್ಯಾತ ಬಿಟ್ಟಿಯಾಚರ ಮಹ
ತೊಂದು ದೇಶ ದೇಶಗಳಲಿ ||೨||

ಏಡಿಸಿ ಹಲ್ಗಿರಿದರಲ್ಲಲ್ಲಿ ನಿಂದು ನಿಂ
ದಾಡುತ ಕುಣಿವ ಗಹಗಹಿಸಿ
ನೋಡಿದ ಮಿಗಿಲು ಮಂದಿರ ಉಪ್ಪರಿಗೆ ಕರು
ಮಾಡುವ ರೇವಣ್ಣನ ಗೃಹವ ||೩||

ಆರೆಲೊ ಪಾಷಂಡಿ ಸಿದ್ದನೆಲ್ಲಿಹನು ಏ
ಳ್ನೂರು ಕತ್ತೆಯ ಕಾವ ಡೊಂಬ
ಬಾರನೆ ಹೊರಗೆ ಪರಾಕಯಾತಕೆ ಹೇಳಿ
ಮೋರೆಯ ನೋಡುವೆನವನ ||೪||

ಕೇಳಿ ಕೋಪಾಟೋಪವಾಗಿ ಮತ್ತಾತನು
ಕೇಳಿ ಬಿಟ್ಟವರಾರು ಇವನ
ಆಳಿಗೊಂದಂದು ಗುದ್ದಲಿ ಒಳಗಿಹ ಹೆಣ್ಣು
ಗೋಳುಗುಟ್ಟುತ ಹೊರಳಿದರು ||೫||

ಕೇಳಿದನರ್ಭಟವ ರೇವಣಸಿದ್ದ ದಯಾಳ್ದನ
ಎದ್ದು ಹರಿದು ಬಂದು ಕಂಡು

ಬಾಳವ ಬಾಚಿ ಅಂಘ್ರಿಯಲಿ ಹಾ ಹಾ ಸ್ವಾಮಿ
ಕೊಳರೊಳನುಭಾವವುಂತೆ ||೬||

ಹುಟ್ಟಿಯೊಗಿಯಳೆ ಸತ್ಯಕ್ಕ ನಿಂಬೆವ್ವೆಯು
ಕುಟ್ಟುವ ವನಕೆಯಲಿ ನಿನ್ನ
ಭಟ್ಟನ ಬಾಗಿಲ ಕಾಯ್ದಿರೆ ಶರಣರಿಂದ
ಕೆಟ್ಟ ಕೇಡೆಷ್ಟು ಹೇಳುವರೆ ||೭||

ಮರುಳನಲ್ಲವು ನನ್ನ ಕುರುಹನರಿಯರಾರು
ಗಿರಿಜೇಶನೆಂಬವ ನಿನ್ನ
ಶರಣರಿಂದಲಿ ನೊಂದ ನನಗೇಕೆ ಹೆಮ್ಮೆನಿ
ನ್ನರಮನೆಯುಪಚಾರ ನಮಗೆ ||೮||

ಶಿವನಾರು ನೀನ್ಯಾರು ನೆವನೇಕೆ ನುಡಿ ಭೇದ
ಇವನಾರು ಮೆಚ್ಚುವರಯ್ಯಾ
ಕಿವಿಯಲ್ಲಿ ಕೇಳಿ ಬಲ್ಲೆನು ಕಂಡು ಬಲ್ಲೆಸು
ಶಿವನ ಸ್ವರೂಪು ಜಂಗಮವು ||೯||

ಹರನು ಹೆಮ್ಮೆಯ ಹೇಳದಿರು ನನ್ನ ಹೋಲಿಸು ವಸುರರಾಜ ವಿಷಯ ಪಾಷಂಡಿ
ಸರಿಗಟ್ಟದಿರು ನನ್ನ ಗುರುದ್ರೋಹ ನಿನಗೇಕೆ ಹೆಂ
ಡರ ಮೇಲೆ ನೀ ಲುಬ್ದಲೋಭಿ ||೧೦||

ವಿಷಯವೇದ್ಯನು ನಿರ್ವಿಷಯ ನಿಮ್ಮದು ನಿಮಗೆ
ವಿಶೇಷವ ಕಾಂಬೆನೆಂದು ನಗಲು
ಹೊಸಬನಾಗಿಯೆ ನನ್ನ ನೋಟಕ್ಕೆ ನೋಡುವೆ
ವಿಷಯದ ಮಠಕೆ ಚಿತ್ತೈಸು ||೧೧||

ಬಾರೆ ನಿನ್ನರಮನೆಯೊಳಗೆ ಹೆಣ್ಣಿನ ಸ್ತೋಮ
ನೀ ರಾಜಯೋಗಿಯಂದರಿದೆ
ಮೋರಿಯ ನೋಡಿ ಸಂತುಷ್ಟಿಯಾಯಿತು ಕೊಡು
ನೀ ರೂಪವನೆಂದು ನಗಲು ||೧೨||

ಬರಸಿದ ತನ್ನ ಏಳ್ನೂರ ಹೆಂಡರ ಶೃಂ
ಗರಿಸಿ ವಸ್ತ್ರಾಭರಣಗಳಿಂದ
ಒರಸಿದ ಕಣ್ಣನ್ನೆಗೈದರೆ ಮುತ್ತಿತು
ನೊರಜು ಸಕ್ಕರೆಗೆ ಕವಿದೊಲು ||೧೩||

ಹಿಡಿದರೆ ಸಿಕ್ಕನವರೊಳು ಸರಸರತಿ
ಕಡೆಗೆ ಕಾಣಸುವನಾಚೆಯಲಿ
ಉಡುಗಿಗಳೊರಗೆ ಧರಣಿಯೊಳು ಕೈಕಾಲು
ಬಡಿದು ಭಂಗಿಸಿ ನಗುತಿಹನು ||೧೪||

ಏನ ಕೂಡಿಸಿದೆ ಹೆಣ್ಣನಿಗಳನು ನೀನು ವಾಹಾ
ಮಾನ ಹಾನಿ ಮಾಡಿಕೊಂಡೆ
ಈ ನರಕ್ರಿಮಿ ಕೀಟಕದೊಳು ಹೊರಳುವಿ
ಮಾನ್ಯನೆಂದಿದ್ದೆ ನಿನ್ನವನ ||೧೫||

ಕಾವುದೆನ್ನವನು ಕರುಣದಿಂದಲಿ ನನ್ನ
ದೇವನಾದರೆಯೆಂದು ದೈನ್ಯ
ಭೂವಳಯಾಳಾದಿ ರುದ್ರಭಲರೆಂದು
ನೀ ಒಲಿದು ತರ್ಕೈಸಿದ ಪ್ರಭು ||೧೬||

ಆದಿ ರುದ್ರಾಚಾರ್ಯ ಕೇಳು ರೇವಣಸಿದ್ಧ ಈ
ಮೇದಿನಿಯೊಳು ಭಕ್ತಿ ಬೆಳಗ
ಆ ದಿವ್ಯ ಸ್ವಯಂಜ್ಯೋತಿ ಬಸವ ಬಂದಿಹನೆ ನಿಮ
ಗಾದಪುದಾತನಿಂ ಮುಕ್ತಿ ||೧೭||

ಸತ್ಯ ವಿಜಯನಗರಿಗೆ ಭಕ್ತಿಯ ಬೀಜವ
ಬಿತ್ತಿದ ಬೆಳಸಿನ ಸಿರಿಯೆ
ತುತ್ತು ನೀಡಿ ನಿಮ್ಮ ಸಾಕುವನವನಿಂದಲಿ
ಮುಕ್ತರಾಹುದು ನೀವೆಂದ ||೧೮||

## ಜನಪದ ಹಾಲುಮತ ಮಹಾಕಾವ್ಯ

ಶಿವನ ನಮ್ಮಯಿ ದೇವರು ಬಂದಾರು ಬನ್ನೀರೆ
ಸ್ವಾಮಿ ನಮ್ಮಯ ದೇವರು ಬಂದಾರ ಬನ್ನೀರೆ
ಏನಮ್ಮ ಚಲುವ ದೇವರಿಗೆ ಎಂಥಾ ಹೂಗೋಳು ಬಂದಾವೆ
ಸಗರದ ಸಣ್ಣ ಮಲ್ಲಿಗಿ ಬಂದಾವ ದುರ್ಗದ ದುಂಡಮಲ್ಲಿಗೆ
ಕೆಸರಗೊಟ್ಟ ಕ್ಯಾದಿಗಿ ಬಂದಾವ ಮರಳಗೊಟ್ಟ ಮಲ್ಲಿಗೆ
ಈಳಗಿ ಹಚ್ಯಾರ ಸೀಳಿ ನೈದರ ಬಾಳಿ ದಿಂಡಿನ ಭಾಸಿಂಗ
ಕಟ್ಯಾರೋ ಕೈಲಾಸದ ಮಾಲಿ ಒಟ್ಯಾರೋ ಹೂವಿನ ಬಣಮೇನ
ಒಟ್ಟಿದ ಹೂವಿನ ಒಣಮಿಯ ಮ್ಯಾಲ ಹೊಟ್ಟಿ ಮೇಲ ಮಾಡಿ ಆಡ್ಯಾನ
ಹೂವಿನಾಗ ಹುದಗ್ಯಾನ ಮಾಲ್ಯಗ ಮಲಗ್ಯಾನ ಮಗ್ಯಾಗ ಕಣ್ಣ ತೆರದಾನ
ಮಗ್ಯಾಗ ಕಣ್ಣ ತೆರದಾನ ಜಗ್ಗಿನ ಗಾಳಿ ಹೊಡದಾನ
ಮಾರಗ ಮಾರಗಂದಾರೆ ಯಾವಲಿ ಇರುಪತಾವೇನ
ಏನಮ್ಮ ದೇವರ ಮಾರಗ ಭುಂಯಾ ಕಾಡಮಗೇರ್ಯಾಗ
ಭುಂಯಾ ಕಾಡಮಗೇರ್ಯಾಗೆ ನೆಲದ ಭುಂಯಾರದೊಳಗೇನ
ನೆಲದ ಭುಂಯಾರದೊಳಗೇನೆ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ಧನ ಮನದಾಗ ಯೋಚನ ಮಾಡ್ಯಾನ
ಮನದಾಗ ಯೋಚನ ಮಾಡ್ಯಾನೆ ಭಿಕ್ಷುಕ ಹೋಗಬೇಕಾಂದನ
ಶರಣ ತಿಂಗಳ ಕಡಿಯೇನ ಹಾಲಿನ ಬಿಕ್ಷಕ ಹೋಗಬೇಕಾಂದನ
ಹೊಕ್ಕಳ ಗಂಟಿ ಕಟ್ಯಾನೆ ಮಳಕಾಲ ಜಂಗ ಕಟ್ಯಾನ
ರುಂಡಮಾಳ ಹಾಕ್ಯಾನೆ ಗುಂಡಮಣಿಗೋಳು ಹಾಕ್ಯಾನ
ಮುಂಗೈಗ ಜೋಳಗಿ ಹಾಕ್ಯಾನೆ ಕ್ಯಾವಿಯ ಭಗವಾ ಹಾಕ್ಯಾನ
ಕ್ಯಾವಿಯ ಭಗವಾ ಹಾಕ್ಯಾನೆ ಲ್ಯಾವಿ ದಂಡಕೋಲ ಹಿಡಿದಾನ
ಲ್ಯಾವಿಯ ದಂಡಕೋಲ ಹಿಡಿದಾನೆ ಕೈಯಾಗ ತ್ರಿಸೂಲ ಹಿಡಿದಾನ
ಕೈಯಾಗ ತ್ರಿಸೂಲ ಹಿಡದಾನೆ ಮುಳ್ಳಆಂವಿಗಿ ಹಾಕ್ಯಾನ
ಮುಳ್ಳ ಆಂವಿಗಿ ಹಾಕ್ಯಾನೆ ಕಾಲರುಳಿಗೋಳು ತೊಟ್ಯಾನ
ಗುರುವ ರೇವಣಸಿದ್ಧನೆ ನೆಲದ ಭುಂಯಾರದೊಳಗೇನ
ಹೊನ್ನ ಹೊಸ್ತುಲ ಧಾಟ್ಯಾನೆ ಏಳಗಜದ ಕಲ್ಲೇನ
ಏಳಗಜದ ಕಲ್ಲೇನೆ ಈಡ ಬಾಗಲ ಮಾಡ್ಯಾನ
ಏನಮ್ಮ ಗುರುವ ಬರುವಾಗೆ ಮುಗಲನೆ ಥೆರಿ ಹೊಡದಾವೆ
ಮುಗಲನೆ ಥೆರಿ ಹೊಡದಾವೆ ಭೂಮಿನೆ ಭುಗುಲಂದಾವ
ಗುರುವ ರೇವಣಸಿದ್ಧನೆ ರಾಯಿಮಾರಗ ಹಿಡಿದಾನ
ಅಲ್ಲ್ಯಾನೆ ಇಲ್ಲ್ಯಾನೇನ ಎಲ್ಲಿಗ ಬರುವುತಾರೇನ

ಶರಣ ತಿಂಗಳ ಕಡಿಯಾ ಸೋಮರ ಹಾಲಿನ ಭಿಕ್ಷಕ ಬಂದಾನ
ಶರಣ ತಿಂಗಳ ಕಡಿಯಾ ಸೋಮರ ಹಾಲಿನ ಬಿಕ್ಷಕ ಬಂದಾನ
ಹೋಗುತ ಹೋಗುತಲ್ಲೇಳ ಎಲ್ಲಿಗ ಬರುತಾನೇನಯ್ಯ
ಹೋಗುತ ಹೋಗುತಲ್ಲೇಳ ಹಾರರ ಗುಂಡವ್ವನ
ಹಾರರ ಗುಂಡವ್ವನ ಮನಿಗಿ ಕೋರಣ ಭೀಕ್ಷೇಳಂದಾನ
ಕಡಿಯಾಗ ಆಗಿನಿ ಮಡಿಯಾ ಉಟ್ಟನಿ ಮುಂದಿನ ಮನಿಯೊಂದು ಆಗಲೆ
ಮಾನವಿಲ್ಲದ ಹೀನ ಜಾತಿ ಎಂಥಾ ಮಾತೊಂದು ಆಡಿದೆ
ಗುರುವ ರೇವಣಸಿದ್ಧನ ನಿಂತಲ್ಲೆ ಮಾಯವಾದನ
ನಿಂತಲ್ಲೆ ಮಾಯವಾದನೆ ಎಲ್ಲಿಗ ಬಂದಾನೇಸಯ್ಯ
ರಡ್ಡೇರ ನೀಲವ್ವನ ಮನಿಗೆ ಕೋರಣ ಬಿಕ್ಷೇಳಂದಾನ
ಕೋರಣ ಬಿಕ್ಷೇಳಂದಾನೆ ರೆಡ್ಡೇರ ನಿಲವ್ವನ
ಯಾವ ನಾಡದ ಜಂಗಮ ಎಂಥಾ ಬಿಕ್ಕಕ ಬಂದಿದೆ
ಶರಣ ತಿಂಗಳ ಕಡಿಯಾ ಸೋಮರ ಹಾಲಿನ ಬಿಕ್ಷಕ ಬಂದೇನ
ಚರಗಿ ಹಿಡಿದೀನೆ ಕರಗೋಳ ಬಿಟ್ಟೇನೆ ಚರಿಗಿ ಕೈಯಾಗ ಹಿಡದೀನೆ
ಚರಗಿ ಕೈಯೋಳ ಹಿಡದೀನೆ ಕೈವಂದು ಖಾಲಿ ಇಲ್ಲೇನ
ನಿನ್ನ ಕರಗೋಳಲ್ಲೇನ ನಿನ್ನಗಿಲ್ಲದಂಗಾಗಲೆ
ನಿನ್ನ ಕರಗೋಳಲ್ಲವ್ವ ನಿನ್ನಗಿಲ್ಲದಂಗಾಗಲೇ
ನಿನಗ ಇಲ್ಲದಂಗಾಗಲೆ ಕೈವಂದು ಖಾಲಿ ಆಗಲೇ
ಗುರುವ ರೇವಣಸಿದ್ಧನ ನಿಂತಲೆ ಮಾಯವಾದವ

ಅಲ್ಲ್ಯಾನ ಇಲ್ಲ್ಯಾನೇನ ಎಲ್ಲಿಗ ಬರುವುತಾನೇನ
ಇಳದಲ್ಲಿ ಇಳಿಗಾಳೇನ ಸುಳದಲ್ಲಿ ಸುಳಿಗಾಳೇನ
ರಾಯರ ಓಣಿಲಿ ಹಾಯ್ದನೆ ರಡ್ಡೇರ ಮನಿಯ ಮುಂದೇನ
ರಡ್ಡೇರ ಮನಿಯ ಮುಂದೇನ ಚಕ್ಕರಗಟ್ಟಿ ಮುಂದೇನ
ಚಕ್ಕರಗಟ್ಟಿ ಮುಂದೇನೆ ಕುರುಬರ ಸಿದ್ದವ್ವನ
ಕುರಬರ ಸಿದ್ದವ್ವನ ಮನಿಗಿ ರೇವಣ ಬರುವುತಾನೇನ
ರೇವಣ ಬರುವುತಾನೇನ ಏನಂದಾಡುತಾನೇನ
ಸರ್ವ ಕುಲದ ಹಿರಿಯಾ ಬಾ ನನ್ನ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ದಗೆ ಕುರುಬರ ಸಿದ್ದವನ
ಕುರುಬರ ಸಿದ್ದವನೇ ಏನಂದಾಡುತಿದ್ದಳ
ಏ ನನ್ನ ಗುರುವ ನೀ ಬಾರೋ ಎಂಥ ಬಿಕ್ಷಕ ಬಂದೀದೆ
ಶರಣತಿಂಗಳ ಕಡಿಯಾ ಸೋಮರ ಹಾಲಿನ ಬಿಕ್ಷಕ ಬಂದೇನ
ಕುರುಬರ ಸಿದ್ದವನೇ ಒಳ್ಳೆದು ಒಳ್ಳೇದಂದಾಳ
ಚಕ್ಕರಗಟ್ಟಿ ಮ್ಯಾಲೇನ ರೇವಣಸಿದ್ದನಿದ್ದಾರ
ಗುರುವ ರೇವಣಸಿದ್ದನ ತಾವೊಂದು ಮೂರುತಿ ಆದನ
ಮನಿಯ ಸಾರುಣಿ ಮಾಡ್ಯಾಳ ಮನವಂದು ಮೀಸಲ ಹಾಕ್ಯಾಳ
ಮನವ ಮೀಸಲ ಹಾಕ್ಯಾಳೆ ಮನಿಯಾ ಸಾರುಣಿ ಮಾಡ್ಯಾಳ
ಏನಮ್ಮವ್ವ ಸಿದ್ದವ್ವ ಗಚ್ಚಿನ ಬಚ್ಚಲಕ ಹೋದಾಳ
ಮಡಿ ಕಳದ ಮಡಿ ಉಟ್ಯಾಳೆ ಎರದಾಳ ಹೆಣುಲ ಹಾಕ್ಯಾಳ
ಎರದಾಳ ಹೆಣುಲ ಹಾಕ್ಯಾಳೆ ಹಣೆಯಲಿ ಕುಂಕುಮ ಇಟ್ಯಾಳ
ಹಣೆಯಲಿ ಕುಂಕಮಿಟ್ಯಾಳೆ ಹಲ್ಲಿಗೆ ಜಾಚೇಲಿ ಹಚ್ಯಾಳ
ಕೈಯಾಗ ಚರಗಿ ಹಿಡದಾಳೆ ಗೆಜ್ಜಿ ಬಿಂದಿಗಿ ಹಿಡದಾಳ
ಗೆಜ್ಜಿ ಬಿಂದಗಿ ಹಿಡದಾಳೆ ಈಡ ಬಾಗಲ ತೆರದಾಳ
ಈಡ ಬಾಗಲ ತೆರದಾಳೆ ದೊಡ್ಡಿ ಒಳಗೆ ಹೋದಳ
ದೊಡ್ಡಿ ಒಳಗೆ ಹೋದಾಳೆ ಹುಟ್ಟಗ್ಯಾಮರಿ ಆದೇನ

ಹುಟ್ಟಗ್ಯಾಮರಿ ಆಡೇನ ಕಾಮಧೇನು ಇದ್ದಾವ
ಕಾಮಧೇನು ಕಲ್ಪವೃಕ್ಷ ಆಡ ಮುಂದಕ ಕರದಾಳ
ಆಡ ಮುಂದಕ ಕರದಾಳ ಆಡ ಮುಂದ ಬಂದು ನಿಂತಾವ
ಬಾರ ಬಾರ ತಾಯವ್ವ ನಮ್ಮ ಗುರುವ ಬಂದಾನ
ಶರಣಸೋಮರ ಕಡಿಯಾ ತಿಂಗಳ ಹಾಲಿನ ಬಿಕ್ಷಾಕ ಬಂದಾನ
ಮರಿಯಾ ಕುಡದ ಎಂಜಲ ಹೋತ ಹಾರಿದ ಎಂಜಲ
ಏ ನನ್ನ ಗುರುವನಲ್ಲವ್ವ ಮೀಸಲಹಾಲ ಬೇಡ್ಯಾನ
ಗಿಣ್ಣ ಹಿಂಡುತಾಳೇನ ಚರಗಿ ತುಂಬುತಾಳೇನ
ಹಾಲ ಹಿಂಡುತಾಳೇನ ಚರಿಗಿ ತುಂಬುತಾಳೇನ
ಚರಗಿಯ ತುಂಬುತಾಳೇನ ಮಿಸಲದ್ಹಾಲ ತಂದಾಳ
ಮೀಸಲದ್ಹಾಲ ತಂದಾಳ ಗುರುವ ರೇವಣಸಿದ್ದಗ
ಗುರುವ ರೇವಣಸಿದ್ದಗೆ ಹಾಲ ಕೊಡವುತಾಳೇನ
ಏನಮ್ಮ ರೇವಣಸಿದ್ದನ ಹಾಲ ಸವಿದಾನೇನಯ್ಯ
ಹಾಲ ಸವಿದಾನೇನಪ್ಪ ಹರಕಿ ಕೊಡುವುತಾನೇನಯ್ಯ
ನನಗೆ ಬಿಕ್ಷೆ ಕೊಟ್ಟಿದೆ ದೊಡ್ಡಿಯಾ ದೊಡ್ಡದಾಗಲೇ
ಒಂದಕೆರಡನಾಗಲೆ ಎರಡಕ ಹತ್ತನಾಗಲೇ
ಎರಡಕ ಹತ್ತನಾಗಲೇ ಹತ್ತಕ ಸಾವೀರಾಗಲೇ
ಹಾಲ ದಾನಿವರ ಹಟ್ಯಾಗ ಮಜ್ಜಿಗಿ ದಾನಿವರ ಮನಿಯಾಗ
ಹಸುವಿಗ ಹಾಲ ಹಾಕ್ಯಾರೆ ಸಿಸುವಿಗ ಬೆಣ್ಣೊಂದು ಇಟ್ಟಾರೆ
ಬಂಜೆ ತೊಟ್ಟಿಲ ಕಟ್ಟಲೆ ಬಾಣತಿ ಜೋಗುಳ ಹಾಡಲೆ
ಕುಂಬಿ ಕುಂಬಿ ಹತ್ತಲೆ ರಂಬಿ ರಂಬಿ ಹತ್ತಲೆ
ಹಗುಲ ಬೆಳ್ಳನಾಗಲೇ ಹಗಲ ದೀವಟಗಿ ಆಗಲೆ
ಸರ್ವ ಕುಲಕ ಹರಿಯಾ ಬಾ ನನ ಗುರುವ ರೇವಣಸಿದ್ದನ
ಗುರುವ ರೇವನಸಿದ್ದನೆ ಹರಕಿ ಕೊಡುವುತಾನೇನ
ಕುರುಬರ ಸಿದ್ದವನ ಗಟ್ಟಿ ಪಾದ ಹಿಡದಾಳ
ಗಟ್ಟಿ ಪಾದ ಹಿಡಿದಾಳ ಮಂಡೀಲಿ ಹಸ್ತ ಇಟ್ಟಾನ
ಯಾವಂದ ಯಾವ ಕಾಲದಲ್ಲಿ ಇದಿಯಾ ತೌರ ತಿಳಿಯವ್ವ
ಪಾದ ಬಿಡುವುತಾಳೇನ ಪಾವನಾಗುತಾಳೇನ

ಗುರುವ ರೇವಣಸಿದ್ದನೆ ರಾಯಿಮಾರಗ ಹಿಡದಾನೇನ
ಅಲ್ಲ್ಯಾನ ಇಲ್ಲ್ಯಾನೇನ ಎಲ್ಲಿಗ ಹೋಗುತಾನೇನ
ಅಲ್ಲ್ಯಾನ ಇಲ್ಲ್ಯಾನೇನ ಅಗಸರ ಮಡಿವಾಳನ
ಅಗಸರ ಮಡಿವಾಳನ ಮನಿಗಿ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನ ಕೋರಣ ಬಿಕ್ಷೇಳಂದಾನ
ಮಡಿವಾಳನ ಮಡದಿ ನೀಲಮ್ಮ ಊರಾನ ಬಟ್ಟಿಗ ಹೋಗ್ಯಾಳ
ಅಗಸರ ಮಡಿವಾಳನೆ ಮನಿಯಾಗ ಇರುವುತಾನೇನ
ಮನಿಯಾಗಿರುವುತಾನೇನ ಯಾವ ನಾಡದ ಜಂಗಮ
ಯಾವ ನಾಡದ ಜಂಗಮ ಕೋರಣ ಭಿಕ್ಷೇಳಂದಾನ
ಯಾವ ನಾಡದ ಜಂಗಮನೆಂದು ಮನಿಯ ಹೊರಗೆ ಬಂದಾನೆ
ಹೊರಳಿ ಮನಿಯಾಕ ಹೋದನೆ ಮರ ತುಂಬ ಮುತ್ತ ತಂದಾನ
ಮರ ತುಂಬ ಮುತ್ತ ತಂದನಾ ಭಿಕ್ಷಾ ನೀಡಲಿ ಬಂದಾನ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನೆ
ಮರ ತುಂಬ ಮುತ್ತ ಮಡಿವಾಳ ಹಳಿಯಾ ಜ್ಯಾಳನಿದ್ದಾವ
ಒಲ್ಲೇನ ಮಡಿವಾಳ ಒಲ್ಲೇಣ ಹಳಿಯಾ ಜ್ಯಾಳನಿದ್ದಾವ

ಇಂಥ ಭಿಕ್ಷಾ ಒಲ್ಲೇನೆ ಹೊರಳಿ ಮನಿಯಾಗ ಹೋಗ್ಯಾನ
ಹೊರಳಿ ಹೋಗುತಾನೇನೆ ಮಡಿವಾಳ ಮನಿಯಾಕ ಹೋಗ್ಯಾನ
ಹವುಳ ಮುತ್ತ ತಂದಾನ ಭಿಕ್ಷಾ ನೀಡಲಿ ಬಂದಾನ
ಭಿಕ್ಷಾ ನೀಡಲಿ ಬಂದಾನ ಗುರುವ ರೇವಣಸಿದ್ದನ
ನಿನ್ನ ಮನಿಯು ಒಳಗೇನೆ ಮುಗ್ಗಜ್ಜಾಳನಿದ್ದಾವ
ಆಗಸರ ಮಡಿವಾಳನೇ ಏನಂದಾಡುತ್ತಿದ್ದಾನ
ಯಾವ ನಾಡಾದ ಜಂಗಮ್ಮ ಎಂಥಾ ಭಿಕ್ಷಾ ಬೇಡಿಗ
ಎಂಥಾ ಭಿಕ್ಷಾ ಬೇಡಿದೆ ಬೇಡಿದ ಭಿಕ್ಷಾ ಕೊಟ್ಟೇನ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ಹನ್ನೆರಡು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಆಗಸರ ಮಡಿವಾಳನೆ ಒಳ್ಳೆದು ಒಳ್ಳೆದಂದಾನ
ಸರ್ವ ಕುಲಕ ಹಿರಿಯಾ ಬಾ ನನ್ನ ಗುರುವ ರೇವಣಸಿದ್ದನೆ
ಹನ್ನೆರಡು ವರ್ಷಿನ ಕಂತೇನೆ ಮಡಿವಾಳ ಕೈಯಾಗ ಕೊಟ್ಟಾನ
ಇಪತ್ತು ವರ್ಷಿನ ಕಂತೇನ ಮಡಿವಾಳ ಕೈಯಾಗ ಕೊಟ್ಟಾನ
ಗುರುವ ರೇವಣಸಿದ್ದನ ನಡುದಾನೆ ಮಾತಾಡ್ಯಾನ
ಉರಿಯಾ ಕಟಗಿ ಬ್ಯಾಡಲ್ಲ ಹೊರವ ಕಟಗಿ ಬ್ಯಾಡಲ್ಲ
ಸುಣ್ಣ ಬೀಳಲಿ ಬಾರದ ಭಟ್ಟಿ ಹಾಕಲಿ ಬಾರದ
ಹರಿಯಾ ನೀರ ಬ್ಯಾಡಲ್ಲ ಹಚ್ಚು ಸಾಬನ ಬ್ಯಾಡಲ್ಲ
ಒಗಿಯಾ ಭಂಡಿ ಬ್ಯಾಡಲ್ಲ ಕಲ್ಲಿಗಿ ಬಡಿಯಲಿ ಬಾರದ
ಕಲ್ಲಿಗಿ ಬಡಿಯಲಿ ಬಾರದ ಕೈಯಲಿ ಹಿಂಡಲಿಬಾರದ
ಕೊರಿಯಾ ಕಡ್ಡಿ ಬ್ಯಾಡಲ್ಲ ಕಡ್ಡಿನ ಮನಿಯಾ ಬ್ಯಾಡಲ್ಲ
ಕಲ್ಲಿಗಿ ಬಡಿಯಲಿ ಬಾರದ ಕೈಯಲಿ ಹಿಂಡಲಿಬಾರದ
ಕೊರಿಯಾ ಕಡ್ಡಿ ಬ್ಯಾಡಲ್ಲ ಕುದಿಯಾ ಗಡಗಿ ಬ್ಯಾಡಲ್ಲ
ಒಳ್ಳೆದು ಒಳ್ಳೇದಂದಾನೆ ಅಗಸರ ಮಡಿವಾಳನೆ
ಒಳ್ಳೆದು ಒಳ್ಳೇಂದಂದಾನೆ ಇಂದ ಹೋಗತೀನಿ ಅಂದಾನ
ಇಂದ ಹೋಗತೀನಿ ಅಂದಾನೆ ನಾಳಿಗ ಬರತೇನಿ ಅಂದಾನ
ನಾಳಿಗ ಬರತೇನಿ ಅಂದಾನ ರೇವಣ್ಣ ನಿಂತಲ್ಲೆ ಮಾಯವಾದನ

ಅಗಸೂರು ಮಡಿವಾಳನೆ ದೇವರ ಕೋಲಿ ಒಳಗೇನೆ
ದೇವರ ಕೋಲಿಯ ಒಳಗೇನೆ ಜಗಲಿಯ ಮ್ಯಾಲ ಇಳುವ್ಯಾನ
ಜಗಲಿಯ ಮ್ಯಾಲೆ ಇಳುವ್ಯಾನೆ ಹಳ್ಳ ಲೋಭಾನ ಸುಟ್ಟಾನ
ನಡುವಿನ ಮನಿಯಾಗ ಕುಂತಾನೆ ಮಾರಿ ಸಣ್ಣದು ಮಾಡ್ಯಾನೆ
ಮಡಿವಾಳನ ಮಡದಿ ನೀಲಮ್ಮ ಊರನ ಬಟ್ಟಿಗ ಹೋಗ್ಯಾಳ
ಊರನ ಬೆಟ್ಟಿಗ ಹೋಗ್ಯಾಳೆ ಮಡದೀಯ ನೀಲಮ್ಮನ
ಮಡದೀಯ ನೀಲಮ್ಮನೆ ಊರಾನ ಬಟ್ಟಿ ತಂದಾಳ
ಊರನ ಬಟ್ಟಿ ತಂದಾಳೆ ಹೊರಗಿನ ಕಟ್ಟಿಗ ಒಗದಾಳ
ಊರನ ಬಟ್ಟಿ ತಂದಾಳೆ ಹೊರಗಿನ ಕಟ್ಟಿಗ ಒಗದಾಳ
ಹೊನ್ನ ಹೊಸ್ತುಲ ಧಾಟ್ಯಾಳೆ ನೀಲಮ್ಮ ಮನಿಯಾಗ ಬಂದಾಳ
ನೀಲಮ್ಮ ಮನಿಯಾಗ ಬಂದಾಳೆ ಪುರುಷನ ಮಾರಿ ನೋಡ್ಯಾಳ
ಮಾರಿ ಸಣ್ಣವಾದಾವೆ ಮಕವ ಸಣ್ಣವಾದವ
ಯಾರೇನಂದಾರ ಹೇಳಯ್ಯಾ ಯಾರೇನಾಡ್ಯಾರ ಹೇಳಯ್ಯ
ಯಾರೇನಂದಾರ ಹೇಳ ನನಗ ಹೊಸ್ತುಲ ತಗಸೇನಂದಾಳ
ಕಣ್ಣೆಲಂದಾರ ಹೇಳ ನನಗ ಕಣ್ಣ ತಗಸೇನಂದಾಳ
ಕಣ್ಣೆಲಂದಾರ ಹೇಳ ನನಗ ಕಣ್ಣ ತಗಸೇನಂದಾಳ

ಯಾರೇನಂದಿಲ್ಲಂದಿದ್ದ ಯಾರೇನಾಡಿಲ್ಲಂದಿದ್ದ
ಯಾವ ನಾಡ ಜಂಗಮ್ಮ ಭಿಕ್ಷಾಕ ಬಂದೇನಂದಾನ
ಹವುಳ ಮುತ್ತು ವೈದರ ಹಳಿಯಾ ಜ್ವಾಳನಂದಾನ
ಮನಿಯಾಗ ಹೊರಳಿ ತಂದೇನ ಬಿಳಿಯಾ ಮುತ್ತ ವೈದೇನ
ಬಿಳಿಯಾ ಮುತ್ತು ವೈದರೆ ನುಡದಾನೆ ಮಾತಾಡ್ಯಾನ
ನನ್ನ ಮನಿಯಾ ಒಳಗೇನೆ ಮುಗ್ಗಜ್ವಾಳನಿದ್ದಾವ
ಹೊರಳಿ ಹೋದೇನಂದಾನೆ ಎಂಥಾ ಭಿಕ್ಷಾ ಬೇಡ್ಯಾನೆ
ಯಾವ ನಾಡದ ಜಂಗಮನೇನು ಎಂಥಾ ಭಿಕ್ಷಾ ಬೇಡ್ಯಾನೆ
ಯಾವ ನಾಡದ ಜಂಗಮನೇನು ಎಂಥಾ ಭಿಕ್ಷಾ ಬೇಡ್ಯಾನೆ
ಎಂಥಾ ಭಿಕ್ಷಾ ಬೇಡ್ಯಾನೆ ಗುರುವ ರೇವಣಸಿದ್ದನ
ಹನ್ನೆರಡು ವರ್ಷಿನ ಕಂತೇನೆ ಇಪ್ಪತ್ತು ವರ್ಷಿನ ಕಂತೇನ
ಹನ್ನೆರಡು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಗಂಜಿ ಮಾಡಲಿಬೇಕಪ್ಪ ಗಳಗಿ ಹಾಕಲಿಬೇಕಯ್ಯ
ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಗಂಜಿ ಮಾಡಲಿಬೇಕಪ್ಪ ಗಳಗಿ ಮಾಡಲಿಬೇಕಯ್ಯ
ಗುರುವ ರೇವಣಸಿದ್ದನ ನುಡದಾನೆ ಮಾತಾಡ್ಯಾನ
ಹೂಡ ಒಲಿಯಾ ಬ್ಯಾಡಪ್ಪ ಕುದಿಯಾ ಗಡಗಿ ಬ್ಯಾಡಯ್ಯ
ಕುದಿಯಾ ಗಡಗಿ ಬ್ಯಾಡಪ್ಪ ಸುಣ್ಣಕ ಬೀಳಲಿ ಬಾರದ
ಸುಣ್ಣಕ ಬೀಳಲಿಬಾರದ ಭಟ್ಟಗಿ ಬೀಳಲಿಬಾರದ
ಉರುವ ಕಟಗಿ ಬ್ಯಾಡಪ್ಪ ಕುಡಿಯಾ ನೀರ ಬ್ಯಾಡಯ್ಯ
ಹಚ್ಚು ಬೆಂಕಿ ಬ್ಯಾಡಪ್ಪ ಕುದಿಯಾ ಗಡಗಿ ಬ್ಯಾಡಯ್ಯ
ಒಗಿಯಾ ಭಂಡಿ ಬ್ಯಾಡಪ್ಪ ಹರಿಯಾ ನೀರ ಬ್ಯಾಡಪ್ಪ
ಕಲ್ಲಿಗಿ ಬಡಿಯಲಿ ಬಾರದ ಕೈಯಲಿ ಹಿಂಡಲಿ ಬಾರದ
ಬಂಡಿಗಿ ಬಡಿಯಲಿ ಬಾರದ ಹಚ್ಚು ಸಾಬನ ಬ್ಯಾಡಂದ
ಇಷ್ಟು ಮಾತ ಹೇಳಿದ್ದ ನಿಂತಲ್ಲೆ ಮಾಯವಾಗಿದ್ದ
ಇಂದ ಹೋಗತೇನಿ ಅಂದಾನೆ ನಾಳಿಗ ಬರತೀನಿ ಅಂದಾನ
ಒಳ್ಳೆದು ಒಳ್ಳೆದಂದಾನೆ ಕಂತಿ ಇಳವೀನಿ ಅಂದಾನ

ಮಡದೀಯ ನೀಲಮ್ಮನೆ ಒಳ್ಳೆದು ಒಳ್ಳೇದಂದಾಳೆ
ಗಂಜಿ ಮಾಡತೀನಿ ಅಂದಾರೆ ಗಲಿಗಿ ಮಾಡತೀನಂದಾರ
ಮನಿಯಾ ಸಾರುಣಿ ಮಾಡ್ಯಾಳೆ ಮನವಂದು ಮೀಸಲ ಮಾಡ್ಯಾಳ
ಕಾಯ ವಜ್ಜರ ಮಾಡ್ಯಾಳೆ ಮನವಂದು ಮಿಸಲ ಮಾಡ್ಯಾಳ
ಗಚ್ಚಿನ ಬಚ್ಚಲಕ ಹೋಗ್ಯಾಳೆ ಎರದಾಳ ಹೆಣುಲ ಹಾಕ್ಯಾಳ
ಎರದಾಳ ಹೆಣಲ ಹಾಕ್ಯಾಳೆ ಎಳಿಯಾ ಬೇತುಲ ತಗದಾಳ
ಮಡಿ ಕಳದ ಮಡಿ ಉಟ್ಯಾಳೆ ಹಣೆಯಲಿ ಕುಂಕಮಿಟ್ಯಾಳ
ಹಣೆಯಲ್ಲಿ ಕುಂಕಮಿಟ್ಯಾಳೆ ಹಲ್ಲಿಗಿ ಜಾಚೇಲಿ ಹಚ್ಯಾಳ
ಮಡದೀಯ ನೀಲಮ್ಮನೆ ಹಿರಿಯರು ಗಳಿಸಿದ ಜಂಬೇನ
ಹಿರಿಯರು ಗಳಿಸಿದ ಜಂಬೇನ ದೇವರ ಜಗುಲಿ ಮ್ಯಾಲೇನ
ದೇವರ ಜಗುಲಿಯ ಮ್ಯಾಲೇನ ಜಂಬ್ಯಾ ಕೈಯಾಗ ಹಿಡದಾಳ
ಜಂಬ್ಯಾ ಕೈಯಾಗ ಹಿಡದಾಳೆ ನುಡದಾಳೆ ಮಾತಾಡ್ಯಾಳೆ
ಹರಕಿನಾಗಿ ಬಂದಾವೆ ವರವ ಕೂಡಿ ಬಂದಾವ
ವರವ ಕೂಡಿ ಬಂದಾರೆ ಜಲ್ಮ ಸಾರ್ಥಕ ಮಾಡಯ್ಯ
ಗುರುವ ರೇವಣಸಿದ್ದಗೆ ಜಲ್ಮ ಸಾರ್ಥಕ ಮಾಡಯ್ಯ
ಜಲ್ಮ ಸಾರುತ ಮಾಡಯ್ಯ ಸಿರಸ ಪವಾಡ ಕೊಟ್ಟೇನ
ಜಂಬ್ಯಾ ಹಿಡಯುತಾಳೇನ ಉಟ್ಟರದೊಳಗ ಸಿಗಸ್ಯಾಳ

ಹನ್ನೆರಡು ವರ್ಷಿನ ಕಂತೇನ ಇಪ್ಪತ್ತು ವರ್ಷಿನ ಕಂತೇನ
ಇಪ್ಪತ್ತು ವರ್ಷಿನ ಕಂತೇನ ಮಡಿವಾಳಗ ಹೊರಸುತಾಳೇನ
ಊರಾನ ಬಟ್ಟಿ ನೀಲಮ್ಮ ಮಂಡಿಯಾ ಮ್ಯಾಲ ಹೊತ್ತಾಳ
ಮಂದನ ಮಳಗೀಲಿ ಬಂದಾರೆ ಚಂದನ ಚಾವುಡಿಲಿ ಹಾಯ್ದರ
ರಾಯರ ಓಣಿಲಿ ಹಾಯ್ದರೆ ರಡ್ಡೇರ ಮನಿಯ ಮುಂದೇನ
ರಾಜವಾಡದ ಮುಂದೇನೆ ಬಣ್ಣದಗಸೀಲಿ ಹಾಯ್ದರ
ಬಣ್ಣದಗಸೀಲಿ ಹಾಯ್ದರೆ ರಾಯಿಮಾರಗ ಹಿಡದಾರ
ಅಲ್ಯಾರ ಇಲ್ಯಾರೇನೆ ಎಲ್ಲಿಗ ಬರವುತಾರೇನ
ಎಲ್ಲಿಗ ಹೋಗುತಾರೇನ ಹರಿಯಾ ಹಳ್ಳದೊಳಗೇನ
ಹರಿಯಾ ಹಳ್ಳದೊಳಗೇನ ಊರನ ಬಟ್ಟಿ ಒಗದಾಳ
ಊರಾನ ಬಟ್ಟಿ ಒಗದಾಳ ಗಳಗಿ ಹಾಕುತಾಳೇನ
ಗಳಗಿ ಹಾಕುತಾಳೇನ ಪುರುಷಾಗ ಹೇಳುತಾಳೇನ
ಯಾಳ್ಯಾಗೋಳು ಬಹಳಾದವೇ ಗಂಜಿ ಮಾಡಬೇಕಂದಾಳ
ಗಂಜಿ ಮಾಡಬೇಕಂದಾಳೆ ಗಳಗಿ ಮಾಡಬೇಕಂದಾಳ
ಏ ನನ್ನ ಪರುಷ ನೀ ಬಾರೋ ಜಂಬ್ಯಾ ಕಿತ್ತುತಾಳೇನ
ಎತ್ತಿ ಹಾಕಲಿಬೇಕಪ್ಪ ನನ್ನ ಕುತ್ತಗಿ ಕೊಯಲಿಬೇಕಲ್ಲ
ಒಂದಾ ತಲಿಯಾ ಎರಡ ಮಲಿಯಾ ಹೂಡ ಒಲಿಯಾ ಮಾಡಯ್ಯ
ಕಯ್ಯಾ ಕಾಲ ಕಡದ ನೀನು ಉರುವ ಕಟಗಿ ಮಾಡಯ್ಯ
ಉರುವ ಕಟಗಿ ಮಾಡೇ ನೀನು ಮೈಯಾ ಮ್ಯಾಲಿನ ಕೂದಲ
ಮೈಯಾ ಮ್ಯಾಲಿನ ಕೂದಲಕೊಂದು ಕಡ್ಡಿ ಮಾಡಲಿಬೇಕಯ್ಯ
ಕುತ್ತಗಿ ಕೊಯ್ದು ರಕ್ತನೆ ಆಳಿಯಾ ನೀರ ಮಾಡಯ್ಯ
ಅಂಗೈ ಬಂಡಿ ಮಾಡೋ ನೀನು ಮುಂಗೈ ಹಿಂಡಲಿ ಬೇಕಯ್ಯ
ತಲಿಯಾ ಮಿದುಡ ತಗದ ನೀನು ಹಚ್ಚು ಸಾಬನ ಮಾಡಲ್ಲ
ಒಂದಾ ತಲಿಯಾ ಎರಡ ಮಲಿಯಾ ಹೂಡ ಒಲಿಯಾ ಮಾಡಯ್ಯ
ಹೂಡ ಒಲಿಯಾ ಮ್ಯಾಲೇನ ಡೊಕ್ಕಿ ಹಿಡಿಯಲಿಬೇಕಯ್ಯಾ
ಡೊಕ್ಕಿ ಹಿಡಿಯಲಿಬೇಕಲ್ಲೋ ಕಡ್ಡಿ ಕೊರದ ಹಚ್ಚಯ್ಯ
ಕೈಯಾ ಕಾಲ ಕಡದ ನೀನು ಉರವ ಕಟಗಿ ಮಾಡಲ್ಲ
ಹ್ಯಾಂಗ ಮಾಡಬೇಕಂದಾರೆ ಹ್ಯಾಂಗ ಹೊಡಿಬೇಕಂದಾರ
ಮಡದೀಯ ನೀಲಮ್ಮನೆ ಕಣ್ಣ ತೆರಿಯುತಾಳೇನ
ನನ್ನ ಮಾತ ಕೇಳಿದರ ಅಪ್ಪಗ ಹುಟ್ಟಿದಿ ಅಂದಾಳ
ಅಪ್ಪಗ ಹುಟ್ಟಿದಿ ಅಂದಾಳೆ ಗುರುವಿನ ಹರಕಿ ಮುಟ್ಟಿಸಿಗೆ

ಅಗಸರ ಮಡಿವಾಳನೆ ಉರದ ಚೆಂಕಿನಾದನ
ಉರದ ಚೆಂಕಿನಾದನೆ ತಲಿವಂದು ಖೆಂಡನಾದನ
ಹುಟ್ಟಿದು ಒಮ್ಮೇಳಂದಾನೆ ಸಾವುದು ಒಮ್ಮೇಳಂದಾನ
ಕೈಯಾಗ ಜಂಬ್ಯಾ ಹಿಡದಾನೆ ಮಡದೀನ ಎತ್ತಿ ಹಾಕ್ಯಾನ
ಮಡದೀಯ ನೀಲಮ್ಮಗೆ ಕುತ್ತಿಗಿ ಕೊಯ್ಯುತ್ತಾನೇನ
ಎರಡ ಮಲಿಯಾ ಒಂದ ತಲಿಯಾ ಹೂಡ ಒಲಿಯ ಮಾಡ್ಯಾನ
ಕೈಯಾ ಕಾಲ ಕಡದಾನೆ ಉರವ ಕಟಗಿ ಮಾಡ್ಯಾನ
ಕಡ್ಡಿ ಮುಂದ ಇಟ್ಯಾನೆ ಡೊಕ್ಕಿ ಸೀಳುತಾನೇನ
ಎರಡ ಮಲಿಯಾ ಒಂದ ತೇಲಿಯಾ ಹೂಡ ಒಲಿಯ ಮಾಡ್ಯಾನ
ಕೈಯಾ ಕಾಲ ಕಡದಾನೆ ಉರವ ಕಟಗಿ ಮಾಡ್ಯಾನ
ಕಡ್ಡಿ ಮುಂದ ಇಟ್ಯಾನೆ ಡೊಕ್ಕಿ ಸೀಳುತಾನೇನ
ಎರಡ ಮಲಿಯಾ ಒಂದು ತೇಲಿಯಾ ಹೂಡ ಒಲಿಯಾ ಮಾಡ್ಯಾನ
ಎರಡ ಮಲಿಯಾ ಒಂದು ತೇಲಿಯಾ ಹೂಡ ಒಲಿಯಾ ಮಾಡ್ಯಾನ

ಹೂಡ ಒಲಿಯಾ ಮ್ಯಾಲೇನೆ ಡೊಕ್ಕಿ ಇಡುವುತಾನೇನ
ಡೊಕ್ಕಿ ಹಿಡಿಯುತಾನೇನೆ ತೆಲಿಯನ ಕೂದಲ ಹರದಾನ
ಕೈಯಾ ಕಾಲ ತಗದಾನೆ ಒಲಿಯಾಗ ಇಡುವುತಾನೇನ
ಕಡ್ಡಿ ಕೊರದಾನಲ್ಲಪ್ಪ ಒಲಿಯಾ ಪುಟವ ಮಾಡ್ಯಾನ
ಒಲಿಯಾ ಪುಟವ ಮಾಡ್ಯಾನೆ ಒಲಿಯಾ ಕುದಿಯಾ ಹಿಡದಾನ
ಹನ್ನೆರಡು ವರ್ಷಿನ ಕಂತೇನ ಇಪ್ಪತ್ತು ವರ್ಷಿನ ಕಂತೇನ
ಇಪ್ಪತ್ತು ವರ್ಷಿನ ಕಂತೇನ ಡೊಕ್ಕಿ ಒಳಗ ಇಟ್ಯಾನ
ಡೊಕ್ಕಿ ಒಳಗ ಇಟ್ಯಾನೆ ಕುದಿಯಾ ಹಿಡಯುತಾನೇನ
ಕುದಿಯಾ ಹಿಡಿಯುತಾನೇನ ಉಕ್ಕ ಬರುವುತಾವೇನ
ಉಕ್ಕಾ ಬರವುತಾವೇನ ಕಟಗಿ ಕಡಿಯಾಕಾದವ
ಕಟಗಿ ಕಡಿಯಾಕಾದಾವೆ ಗಂಜಿ ಬಯಲಿಗ ತಗದಾನ
ಗಂಜಿ ಬಯಲಿಗ ತಗದಾನೆ ಅಂಗೈ ಬಂಡಿ ಮಾಡ್ಯಾನ
ಅಂಗೈ ಬಂಡಿ ಮಾಡ್ಯಾನೆ ಅರುವಿ ನೀರ ನೋಡ್ಯಾನ
ಹರಿಯಾ ರಂಗದೊಳಗೇಳ ಕಂತಿ ಗಂಜಿ ಮಾಡ್ಯಾನ
ತಲಿಯ ಮಿದಡ ತಗದಾನ ಅಂಗೈ ಭಂಡಿ ಮಾಡ್ಯಾನೆ
ಅಂಗೈ ಭಂಡಿ ಮಾಡ್ಯಾನೆ ತೆಲಿಯನ ಮಿದಡ ಹಚ್ಯಾನ
ತೆಲಿಯಾನ ಮಿದಡ ಹಚ್ಯಾನ ರಕ್ತದೊಳಗ ಇಟ್ಯಾನ
ಹನ್ನೆರಡು ವರ್ಷಿನ ಕಂತೇನ ಗಂಜಿ ಮಾಡುತಾನೇನೆ
ಗಂಜಿ ಮಾಡುತಾನೇನೆ ಗಳಗಿ ಹಾಕುತೇನೇನ
ಇಪ್ಪತ್ತು ವರ್ಷಿನ ಕಂತೇನ ಗಳಗಿ ಮಾಡುತಾನೇನ
ಗಂಜಿ ಮಾಡುತಾನೇನ ಗಳಗಿ ಹಾಕುತಾನೇನ
ಗುರುವಿನ ಕಂತಿನಲ್ಲೇಳ ಗಳಗಿ ಮಾಡುತಾನೇನ
ಹನ್ನೆರಡು ವರ್ಷಿನ ಕಂತೇನ ಇಪ್ಪತು ವರ್ಷಿನ ಕಂತೇನ
ಇಪ್ಪತ್ತು ವರ್ಷಿನ ಕಂತೇನ ಮಂಡಿಯ ಮ್ಯಾಲ ಹೊತ್ತಾನ
ಊರನ ಬಟ್ಟಿ ಮಡಿವಾಳ ಹೆಗಲಿನ ಮ್ಯಾಲ ಹಾಕ್ಯಾನ
ಹೆಗಲಿನ ಮ್ಯಾಲೆ ಹಾಕ್ಯಾನೆ ಹರಿಯಾ ಹಳ್ಳ ಬಿಟ್ಯಾನ
ಅಗಸರ ಮಡಿವಾಳನೆ ಚಿಂತಿ ಮಾಡುತಾನೇನ
ಬರುವಾಗ ಇಬ್ಬರು ಬಂದೇವೆ ಹೋಗುವಾಗ ಒಬ್ಬವನಾದೇನ
ಮಾರಿ ಸಣ್ಣದು ಮಾಡ್ಯಾನೆ ಕಣ್ಣಿಗೆ ನೀರು ತಂದಾನ
ಇಲ್ಲದ ಮಡದೀನಲ್ಲೇಳ ಎಲ್ಲಿಂದ ತರಬೇಕಂದಾನ
ಅಗಸರ ಮಡಿವಾಳನೆ ಹಳ್ಳ ಬಿಟ್ಟು ನಡದಾನ
ಹಳ್ಳ ಬಿಟ್ಟು ನಡದಾನೆ ರಾಯಿ ಮಾರಗ ಹಿಡದಾನ
ಅಲ್ಯಾನ ಇಲ್ಯಾನೇನೆ ಬಣ್ಣದಗಸೀಲಿ ಹಾಯ್ದಾನ
ರಾಯರ ಓಣಿಲಿ ಹಾಯ್ದುನೆ ರಡ್ಡೇರ ಮನಿಯಾ ಮುಂದೇನ
ಚಂದನ ಚೌಡೀಲಿ ಹಾಯ್ದಾನೆ ಮಂದನ ಮಳಗೀಲಿ ಬಂದಾನ
ರಾಜಾವಾಡದ ಮುಂದೇನೆ ತನ್ನ ಮನಿಗೆ ಬಂದಾನ
ತನ್ನ ಮನಿಗೆ ಬಂದಾನೆ ಹೊರಗಿನ ಕಟ್ಟಿ ಮ್ಯಾಲೆನ
ಹೊರಗಿನ ಕಟ್ಟಿಯ ಮ್ಯಾಲೇನ ಊರನ ಬಟ್ಟಿ ಒಗದಾನ
ದೇವರ ಜಗುಲಿಯ ಮ್ಯಾಲೇನ ಗುರುವಿನ ಕಂತಿ ಹಿಡದಾನ

ಅಂತ ಇಂತ ಯಾಳ್ಯದೊಳಗ ಗುರುವ ಬರುವತಾನೇನ
ಕಡಿಯಾ ಸೋಮರದಿವಸೇನ ಕಂತಿಯ ಭಿಕ್ಷಕ ಬಂದಾನ
ಕಂತಿಯಾ ಭಿಕ್ಷಕ ಬಂದಾನೆ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನ ಕೋರಣ ಭಿಕ್ಷೇಳಂದಾನ
ಅಗಸರ ಮಡಿವಾಳನ ಮನಿಯಾಗ ಹೋಗುತಾನೇನ

ಹನ್ನೆರಡು ವರ್ಷಿನ ಕಂತೇನ ಇಪ್ಪತ್ತು ವರ್ಷಿನ ಕಂತೇನ
ಎರಡು ಕಂತಿನಲ್ಲೇಳ ಕೈಯಾಗ ಹಿಡಿಯುತಾನೇನ
ಅಗಸರ ಮಡಿಳನೆ ಭಿಕ್ಷಾ ನೀಡಕ ಬಂದಾನ
ಭಿಕ್ಷಾ ನೀಡಲಿ ಬಂದಾರ ಅಗಸರ ಮಡಿವಾಳಗ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ನುಡದಾನೆ ಮಾತಾಡ್ಯಾನೆ ಭಿಕ್ಷಾ ನೀಡಕ ಬಂದಾನ
ಒಬ್ಬರ ಕೊಟ್ಟರಲ್ಲಪ್ಪ ಗಳಗಿ ಒಲ್ಲೇಳಂದಾನ
ಗಳಗಿ ಒಲ್ಲೇಳಂದಾನೆ ಗಂಜಿ ಒಲ್ಲೇಳಂದಾನ
ಮಡದೀಯ ನೀನು ಬರಬೇಕೆ ಕಂತಿ ಕೊಡಬೇಕಂದಾನ
ಅಗಸರ ಮಡಿವಾಳನೆ ನುಡದಾನೆ ಮಾತಾಡ್ಯಾನೆ
ಲಗ್ನನಾಗಿಲ್ಲಂದಾನೆ ಇಲ್ಲದ ಮಡದೀನಂದಾನ
ಇಲ್ಲದ ಮಡದೀನಲ್ಲೇಳ ಎಲ್ಲಿಂಧ ತರಬೇಕಂದಾನ
ನನಗೆ ಲಗ್ನನಾಗಿಲ್ಲ ನನ್ನ ಮಡದಿ ಇಲ್ಲೇಳ
ನನ್ನ ಮಡದಿ ಇಲ್ಲಯ್ಯ ಭಿಕ್ಷಾ ಕೊಡತೀನಿ ಮೈಯಬೇಕ
ಗುರುವ ರೇವಣಸಿದ್ದನ ನುಡದಾನೆ ಮಾತಾಡ್ಯಾನ
ದೇವರ ಖೋಲಿ ಒಳಗೇನ ದೇವರ ಜಗಲಿ ಮ್ಯಾಲೇನ
ದೇವರ ಜಗುಲಿಮ್ಯಾಲೇನ ಕಂತಿ ಇಡುವುಲಿಬೇಕಯ್ಯ
ಮಡದೀಯ ನೀಲಮ್ಮನೆಂದು ಓ ಎಂಬ ಶಬ್ದ ಕೂಗಯ್ಯಾ
ಒಳೈದು ಒಳೈದಂದಾನೆ ಕಂತಿಯ ಮನಿಯಾಗ ಒಯ್ದಾನ
ಕಂತಿ ಮನಿಯಾಕ ಒಯ್ದನೆ ದೇವರ ಜಗುಲಿ ಮ್ಯಾಲೇನ
ದೇವರ ಜಗುಲಿಮ್ಯಾಲೇನ ಕಂತಿ ಇಳುವುತಾನೇನ
ದೇವರ ಖೋಲಿ ಒಳಗೇನೆ ಮಡದೀಯ ನೀಲಮ್ಮನ
ಮಡದೀಯ ನೀಲಮ್ಮನೆಂದು ಓ ಎಂಬ ಶಬುದ ಮಾಡ್ಯಾನ
ಮಡದೀಯ ನೀಲಮ್ಮನೆಂದು ಓಯೆಂಬ ಶಬುದ ಕೂಗ್ಯಾನ
ಓಯೆಂಬ ಶಬುದ ಕೂಗ್ಯಾನೆ ಹಳ್ಳದಾಗ ಧನಿಯಾ ಕೊಟ್ಯಾನ
ಅಗಸರ ಮಡಿವಾಳನೆ ನಡುವಿನ ಮನಿಯಾ ಒಳಗೇನ
ನಡುವಿನ ಮನಿಯಾ ಒಳಗೇನೆ ಓಯೆಂಬ ಶಬುದ ಮಾಡ್ಯಾನ
ಮಡದೀಯ ನೀಲಮ್ಮನೆಂದು ಓಯೆಂಬ ಶಬುದ ಕೊಟ್ಯಾನ
ಓಯೆಂಬ ಶಬುದ ಕೊಟ್ಯಾಗ ಊರಾಗ ಧನಿಯಾ ಕೊಟ್ಯಾಳ
ಊರಾಗ ಧನಿಯಾ ಕೊಟ್ಯಾಳೆ ಮಡದೀಯ ನೀಲಮ್ಮನೆ
ಅಗಸರ ಮಡಿವಾಳನೆ ಹೊರಗಿನ ಕಟ್ಟಿಗ ಬಂದಾನೆ
ಹೊರಗಿನ ಕಟ್ಟಿಗ ಬಂದಾನೆ ಓಯೆಂಬ ಶಬುದ ಕೂಗ್ಯಾನ
ಓಯೆಂಬ ಶಬುದ ಕೂಗ್ಯಾನೆ ದೇವರ ಖೋಲಿ ಒಳಗೇನ
ದೇವರ ಖೋಲಿಯ ಒಳಗೇನೆ ಮಡದೀಯ ನೀಲಮ್ಮನೆ
ಮಡದೀಯ ನೀಲಮ್ಮನೆ ಧನಿಯಾ ಕೊಡವುತಾಳೇನ
ಅಗಸರ ಮಡಿವಾಳನೆ ದೇವರ ಖೋಲಿಗ ಹೋಗ್ಯಾನ
ಮಡದೀಯ ನೀಲಮ್ಮನೆ ಅಗಸರ ಮಡಿವಾಳನೆ
ಇಪ್ಪತ್ತು ವರ್ಷಿನ ಕಂತೇನೆ ಮಡದೀಯ ಕೈಯಾಗ ಕೊಟ್ಯಾನ
ಹನ್ನೆರಡು ವರ್ಷಿನ ಕಂತೇನೆ ತನ್ನ ಕೈಯಾಗ ಹಿಡದಾನ
ಮಡದಿ ಪುರುಷರು ಕೂಡ್ಯಾರೆ ಕಂತಿಯ ಭಿಕ್ಷವ ತಂದಾರ
ಅಗಸರ ಮಡಿವಾಳನೆ ಕಂತಿಯ ಭಿಕ್ಷಾ ನೀಡ್ಯಾನ
ಮಡದೀಯ ನೀಲಮ್ಮನೆ ಕಂತಿಯಾ ಭಿಕ್ಷಾ ನೀಡ್ಯಾಳ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ಭಾವಕ ಮೆಚ್ಚೇದಂದಾನೆ ಭಕ್ತಿಗೆ ಮೆಚ್ಚೇದಂದಾನ

ಏನ ಬೇಡತಿ ಬೇಡರೆ ಬೇಡಿದ ಕುಡತಿನಿ ಅಂದಾನ
ಅಗಸರ ಮಡಿವಾಳನೆ ಮಡದೀಯ ನೀಲಮ್ಮನ
ಮಡದೀಯ ನೀಲಮ್ಮನ ತಾಯೇನು ಬೇಡುತಾಳೇನ
ಹರಿಯಾ ಹಳ್ಳದೊಳಗೇನೆ ಹರಿಯಾ ನೀರಬೇಡ್ಯಾರ
ಹರಿಯಾ ಗಂಗಿ ಒಳಗೇನೆ ಹರಿಯಾ ನೀರ ಬೇಡ್ಯಾರ
ಕಣಕಿಸ ಜ್ವಾಳ ಬೇಡ್ಯಾರೆ ಮನಿಗೊಂದು ರೊಟ್ಟಿ ಬೇಡ್ಯಾರ
ಗುರುವ ರೇವಣಸಿದ್ದನೆ ಒಳ್ಳೆದು ಒಳ್ಳೆದಂದಾರ
ಹರಿಯಾ ಹಳ್ಳದೊಳಗೇನ ಹರಿಯಾ ನೀರ ಕೊಟ್ಟೇನೆ
ಕಣಕಿಸ ಜ್ವಾಳ ಕೊಟ್ಟೇನೆ ಮನಿಗೊಂದು ರೊಟ್ಟಿ ಕೊಟ್ಟೇನ
ಮಡದಿಯ ನೀಲಮ್ಮನ ಅಗಸರ ಮಡಿವಾಳನ
ಗುರುವ ರೇವಣಸಿದ್ದನೆ ಮಂಡೀಲಿ ಹಸ್ತ ಇಟ್ಟಾರ
ಮಂಡೀಲಿ ಹಸ್ತ ಇಟ್ಟ್ಯಾನೆ ಆಶೀರ್ವಾದ ಮಾಡ್ಯಾನ
ಆಶೀರ್ವಾದ ಮಾಡ್ಯಾನೆ ಆಶೀರೋಜನ ಕೊಟ್ಟಾರ
ಮಡದೀಯ ನೀಲಮ್ಮನ ಅಗಸರ ಮಡಿವಾಳನ
ಹೊರಳಿ ಮನಿಯಾಗ ಹೋದರೆ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನೆ ಹೋದರೆ ನಿಂತಲ್ಲೆ ಮಾಯವಾದನ
ದೇವಿ ದರ್ಮರ ಹಾಡೇನ ಇಲ್ಲಿಗಿ ಇದು ಒಂದು ಸಂದೇನ
ಕಳಸ ವಿಟ್ಟರ ಕವಿತ ಕಟ್ಯಾರ ಹೊನ್ನ ಜಗ್ಗುನಿ ಗೌಡರೋ
ದೇವರು ಬಂದಾರ ಬನ್ನೀರೆ

ಅನುಬಂಧ ೪

# ಛಾಯಾಚಿತ್ರಗಳು



ಕೊಲ್ಲಿಪಾಕಿಯ ಸೋಮೇಶ್ವರಲಿಂಗ ನಲ್ಗೊಂಡ ಜಿಲ್ಲೆ, ಆಂಧ್ರಪ್ರದೇಶ



ರೇವಣಸಿದ್ಧರ ಜನ್ಮಸ್ಥಳವಾದ ಕೊಲ್ಲಿಪಾಕಿಯ ಸೋಮೇಶ್ವರ ದೇವಸ್ಥಾನ



ಶ್ರೀಗುರು ಪಂಚಲಿಂಗೇಶ್ವರ ಪುಣ್ಯಕ್ಷೇತ್ರ, ಮುನವಳ್ಳಿ, ಸವದತ್ತಿ ತಾ, ಬೆಳಗಾವಿ ಜಿ.



ಅಗಸ್ತ್ಯ ಮುನಿಗಳ ಸಮಾಧಿ, ಮುನವಳ್ಳಿ, ಸವದತ್ತಿ ತಾ, ಬೆಳಗಾವಿ ಜಿ.



ಪಂಚಲಿಂಗೇಶ್ವರ ದೇವಸ್ಥಾನದಲ್ಲಿರುವ ಅಗಸ್ತ್ಯರ ಪ್ರತಿಮೆ, ಮುನವಳ್ಳಿ, ಬೆಳಗಾವಿ ಜಿ.



ಪಂಚಲಿಂಗೇಶ್ವರ ದೇವಸ್ಥಾನ ಹೂಲಿ, ಬೆಳಗಾವಿ ಜಿ.



ಗೋರಖನಾಥ ಸಮಾಧಿ, ಕೊಲ್ಲಾಪುರ, ಮಹಾರಾಷ್ಟ್ರ ರಾಜ್ಯ



ಮಂಗಳವೇಡೆಯ ಮಾಸನೂರು ಕೆರೆ, ಮಹಾರಾಷ್ಟ್ರ ರಾಜ್ಯ



ಏಕಾಮ್ರನಾಥ ದೇವಸ್ಥಾನ, ಶಿವಕಂಚಿ, ತಮಿಳುನಾಡು



ಏಕಾಮ್ರನಾಥ ದೇವಸ್ಥಾನ, ವಿಷ್ಣುಕಂಚಿ, ತಮಿಳುನಾಡು

## ಅನುಬಂಧ ೫

# ಗ್ರಂಥಋಣ


೧. ಇತಿಹಾಸ ದರ್ಶನ ಸಂಪುಟ ೫, ಸೂರ್ಯನಾಥ ಕಾಮತ್, ಲಕ್ಷ್ಮಣ ತೆಲಗಾವಿ (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೦

೨. ಕರ್ನಾಟಕ ಸಂಸ್ಕೃತಿ ಸಂಶೋಧನೆ, ಕಪಟರಾಳ ಕೃಷ್ಣರಾಯ, ಹನುಮಂತರಾವ್, ಕುರುಡಿ ನಿವೃತ್ತ ಡೆಪ್ಯೂಟಿ ರಿಜಿಸ್ಟ್ರಾರ್, ಸಹಕಾರ ಸಂಘ, ಮೈಸೂರು, ೧೯೭೦

೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಚಿದಾನಂದಮೂರ್ತಿ ಎಂ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

೪. ಕಲಬುರ್ಗಿ ಜಿಲ್ಲೆಯ ಶಾಸನಗಳು, ಹನುಮಾಕ್ಷಿ ಗೋಗಿ (ಸಂ), ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ, ೧೯೯೬

೫. ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೧-೫, ಡಾ. ಹಾ.ಮಾ.ನಾಯಕ (ಪ್ರ.ಸಂ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೭

೬. ಕರ್ನಾಟಕ ಧರ್ಮಗಳು ಭಾಗ-೧, ಡಾ. ನಂದಿಮಠ ಎಸ್.ಸಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೭

೭. ಕರ್ನಾಟಕ ಕವಿಚರಿತೆ, ಸಂಪುಟ : ೧-೩, ನರಸಿಂಹಚಾರ್ ಆರ್. (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೨೯

೮. ಕನ್ನಡ ಸಾಹಿತ್ಯ ಚರಿತ್ರೆ, ಮುಗುಳಿ ರಂ.ಶ್ರೀ.(ಲೇ), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೮

೯. ಕನ್ನಡ ದಾಖಲು ಸಾಹಿತ್ಯ, ಡಾ. ರವೀಂದ್ರನಾಥ ಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೦. ಕೊಡೇಕಲ್ಲು ವಚನವಾಕ್ಯ, ಸಂಪುಟ-೨, ಡಾ. ಶಿವಾನಂದ ಎಸ್. ವಿರಕ್ತಮಠ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೧. ಗುರುರಾಜ ಚಾರಿತ್ರ, ಭೂಸನೂರಮಠ ಸಂ.ಶಿ. (ಸಂ), ಮುರಘಾಮಠ, ಧಾರವಾಡ, ೧೯೫೦

೧೨. ಚೆನ್ನಬಸವ ಪುರಾಣ (ಗದ್ಯಾನುವಾದ), ಚಂದ್ರಶೇಖರ್ ಎನ್. (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೯

೧೩. ಚಿಕ್ಕನಂಜೇಶ ವಿರಚಿತ ರಾಘವಾಂಕ ಚರಿತೆ, ಮ.ನಿ.ಪ್ರ.ಮೃತ್ಯುಂಜಯಸ್ವಾಮಿ (ಸಂ), ಮುರುಘಾಮಠ, ಧಾರವಾಡ, ೧೯೫೪

೧೪. ಜಗದ್ಗುರು ಶ್ರೀ ರೇವಣಸಿದ್ಧರು, ಭೈರವನಹಟ್ಟಿ ಎಂ.ಎಸ್. (ಲೇ), ಭಾರ್ಗವ ಮುದ್ರಣಾಲಯ, ಬೆಂಗಳೂರು, ೧೯೯೧

೧೫. ಜನಪದ ಹಾಲುಮತ ಮಹಾಕಾವ್ಯ, ಡಾ. ವೀರಣ್ಣದಂಡೆ (ಸಂ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೧೬. ಧರ್ಮಸಂಪದ, ಷಣ್ಮುಖಯ್ಯ ಅಕ್ಕೂರಮಠ (ಲೇ), ಚೆನ್ನಚೇತನ ಪ್ರಕಾಶನ, ಹೊನ್ನಾಳಿ, ೧೯೬೬

೧೭. ಪಂಚಪೀಠ ಪರಂಪರೆ, ಚಂದ್ರಶೇಖರ ಮಹಾಸ್ವಾಮಿಗಳು (ಲೇ), ಜ್ಞಾನಗುರು ವಿದ್ಯಾಪೀಠ, ಉಜ್ಜಯಿನಿ, ೨೦೦೧

೧೮. ಬಸವೇಶ್ವರರ ಸಮಕಾಲೀನರು, ಬಸವ ಸಮಿತಿ, ಬೆಂಗಳೂರು, ೧೯೭೯

೧೯. ಬಸವಮಾರ್ಗ, ಸಂಪುಟ-೨, ಡಾ. ಕಲಬುರ್ಗಿ ಎಂ.ಎಂ. (ಸಂ), ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೧

೨೦. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಡಾ. ಹಿರೇಮಠ ಆರ್.ಸಿ, ಡಾ. ಸುಂಕಾಪುರ ಎಂ.ಎಸ್. (ಸಂ), ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೪

೨೧. ಬಸವರಾಜ ವಿಜಯಂ, ಡಾ. ಹಿರೇಮಠ ಆರ್.ಸಿ. (ಸಂ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೨೨. ರೇಣುಕ ವಿಜಯ ಪುರಾಣಂ, ನಂಜನಗೂಡು ಶ್ರೀಕಂಠಶಾಸ್ತ್ರಿ (ಲೇ), ಮಹಾಚಾರ್ಯ ತತ್ವ ಪ್ರಕಾಶನ, ಮೈಸೂರು, ೧೯೩೩

೨೩. ರೇವಣ ಸಾಂಗತ್ಯ, ಟಿ.ಎ.ಮಾಣಿಕ್ಯಶೆಟ್ರು (ಸಂ), ಕರ್ನಾಟಕ ಬುಕ್ ಡಿಪೋ ಏಜೆಂಟ್, ಬಳ್ಳಾರಿ, ೧೯೧೦

೨೪. ರುದ್ರ ಭದ್ರ ರೇಣುಕರು, ಡಾ. ಜಚನಿ (ಲೇ), ಮಾಮಿಡಿ ಪ್ರಕಾಶನ, ಬೆಂಗಳೂರು, ೧೯೮೫

೨೫. ರಾಘವಾಂಕ ವಿರಚಿತ ಸೋಮನಾಥ ಚಾರಿತ್ರ, ಡಾ. ಹಿರೇಮಠ ಆರ್.ಸಿ, ಡಾ. ಸುಂಕಾಪುರ ಎಂ.ಎಸ್.(ಸಂ), ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೧

೨೬. ರಾಘವಾಂಕ ವಿರಚಿತ ಸಿದ್ಧರಾಮ ಚಾರಿತ್ರ ಸಂಗ್ರಹ, ಡಾ. ನರಸಿಂಹಾಚಾರ್ಯ ಎಲ್. (ಸಂ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩

೨೭. ರೇವಣಸಿದ್ದೇಶ್ವರ ಕಾವ್ಯ, ಡಾ. ಸುಂಕಾಪುರ ಎಂ.ಎಸ್. (ಸಂ), ಶ್ರೀ ಬಾಲಲೀಲ ಮಹಾಂತ ಶಿವಯೋಗಿಗಳ ಗ್ರಂಥಮಾಲೆ, ಮುರುಘಾ ಮಠ, ಧಾರವಾಡ, ೧೯೮೦

೨೮. ರೇವಣಸಿದ್ಧರು ಭಾಗ-೧, ಚೆನ್ನಮಲ್ಲಿಕಾರ್ಜುನ (ಲೇ), ಸದ್ಧರ್ಮದೀಪಿಕೆ ಪ್ರಕಾಶನ, ಮೈಸೂರು, ೧೯೫೮

೨೯. ಲಿಂಗಾಯಿತ ಧರ್ಮಮತ ಸಂಸ್ಥಾಪಕ ಯಾರು?, ಜವಳಿ ಬಿ.ಸಿ.(ಲೇ), ಸುಹಿದಾನ ಗ್ರಂಥಮಾಲೆ, ಧಾರವಾಡ, ೧೯೭೩

೩೦. ವಚನ ಸಾಹಿತ್ಯ ವಿವೇಚನೆ, ಷಣ್ಮುಖಯ್ಯ ಅಕ್ಕೂರಮಠ, ಅನ್ನದಾನೇಶ್ವರ ಸಂಸ್ಥಾನಮಠ, ಮುಂಡರಗಿ, ೧೯೯೨

೩೧. ವಚನಾನುಶೀಲನ, ಡಾ. ವಿದ್ಯಾಶಂಕರ ಎಸ್, ಸ್ನೇಹ ಪ್ರಕಾಶನ, ಬೆಂಗಳೂರು, ೧೯೮೯

೩೨. ವಚನಗಳಲ್ಲಿ ವೀರಶೈವಧರ್ಮ, ಡಾ. ಎಚ್.ತಿಪ್ಪೆರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೬೯

೩೩. ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ನಾರಾಯಣ ಪಿ.ವಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೩

೩೪. ವೀರಶೈವ ಪುರಾಣಗಳು ಒಂದು ಅಧ್ಯಯನ, ಡಾ. ವಿದ್ಯಾಶಂಕರ ಎಸ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೩೫. ವೀರಶೈವ ಸಂಸ್ಕೃತಿಗೆ ಶಿವಾಚಾರ್ಯರ ಕೊಡುಗೆ, ಸಂಪುಟ-೪, ಡಾ. ಜಚನಿ, ತರಳಬಾಳು ಪ್ರಕಾಶನ, ಸಿರಿಗೆರೆ, ೧೯೮೯

೩೬. ವೀರಶೈವ ಸಾಹಿತ್ಯ ಸಮೀಕ್ಷೆ, ಸದಾನಂದ ಕನವಳ್ಳಿ, ಚೆನ್ನಪ್ಪ ಕರಿಮನಿ (ಸಂ), ಮಹಾಕವಿ ಪಂಪ ಪ್ರಕಾಶನ, ಲಕ್ಷ್ಮೇಶ್ವರ, ೧೯೭೬

೩೭. ವೀರಶೈವಾಮೃತ ಪುರಾಣ, ಭಾಗ ೧-೨, ಡಾ. ಹಿರೇಮಠ ಆರ್.ಸಿ. (ಸಂ), ಎನ್.ಎಸ್.ಎಸ್. ಕಲ್ಯಾಣಕೇಂದ್ರ, ಬೆಂಗಳೂರು, ೧೯೯೦

೩೮. ವೀರಶೈವ ಪ್ರಾಚೀನತೆ, ಚೆನ್ನಬಸವಶಾಸ್ತ್ರಿ, ಚೆನ್ನಬಸವೇಶ್ವರ ಗ್ರಂಥಮಾಲೆ, ರಾಯಚೂರು, ೧೯೭೧

೩೯. ವೀರಶೈವ ತತ್ವ ಪ್ರಕಾಶ, ಬಸವನಾಳ ಶಿ.ಶಿ, ಸಾಹಿತ್ಯ ಸಮಿತಿ, ಧಾರವಾಡ, ೧೯೪೧

೪೦. ಶಾಸನಗಳಲ್ಲಿ ಶಿವಶರಣರು, ಡಾ. ಕಲಬುರ್ಗಿ ಎಂ.ಎಂ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೭೮

೪೧. ಶಾಸನ ಪರಿಚಯ, ಡಾ. ಶೇಷಶಾಸ್ತ್ರಿ ಆರ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೨

೪೨. ಶಿವಶರಣೆಯರ ವಚನಗಳು, ಡಾ. ಹಿರೇಮಠ ಆರ್.ಸಿ. (ಸಂ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦

೪೩. ಶಿವಯೋಗಿ ಜೇನುಕಲ್ಲು ಸಿದ್ಧಲಿಂಗೇಶ್ವರ, ಡಾ. ನಂಜುಂಡಪ್ಪ ವೆ.ಡಿ, ಸಿದ್ಧಸಾಹಿತ್ಯ ಪ್ರಕಾಶನ, ಅರಸಿಕೆರೆ, ೧೯೯೯

೪೪. ಶಂಕರದಾಸಿಮಯ್ಯ ಪುರಾಣ : ಒಂದು ಅಧ್ಯಯನ, ಡಾ. ಅನ್ನಪೂರ್ಣ ಜಾಲವಾದಿ ಎಂ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೯

೪೫. ಶಿವಶರಣರ ಕಥಾ ರತ್ನಕೋಶ, ಶಾಮರಾಯ ತ.ಶು. (ಲೇ), ತಳುಕಿನ ವೆಂಕಟಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೭

೪೬. ಶಿವಶರಣ ಚರಿತ್ರೆಗಳು, ಭಾಗ-೩, ಹಳಕಟ್ಟಿ ಫ.ಗು, ಶಿವಾನುಭವ ಪ್ರಕಾಶನ, ವಿಜಾಪುರ, ೧೯೫೧

೪೭. ಷಡಕ್ಷರ ವಿರಚಿತ ರಾಜಶೇಖರ ವಿಳಾಸ, ಡಾ. ಹಿರೇಮಠ ಆರ್.ಸಿ, ಡಾ. ಸುಂಕಾಪುರ ಎಂ.ಎಸ್. (ಸಂ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೪೮. ಷಟಸ್ಥಲ ಪ್ರಭೆ, ಡಾ. ಹಿರೇಮಠ ಆರ್.ಸಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬

೪೯. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೧-೪, ಶಿವರುದ್ರಪ್ಪ ಜಿ.ಎಸ್. (ಸಂ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೭

೫೦. ಸಂಶೋಧನ ಸಂಪುಟ, ದೇವಿರಪ್ಪ ಎಚ್. (ಲೇ), ಶಿವಕುಮಾರ ಪ್ರಕಾಶನ, ಬೆಂಗಳೂರು, ೧೯೮೪

೫೧. ಸಮಗ್ರ ವಚನ ಸಂಪುಟ-೧, ಡಾ. ಕಲಬುರ್ಗಿ ಎಂ.ಎಂ. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೨. ಸಮಗ್ರ ವಚನ ಸಂಪುಟ-೨, ಡಾ. ಮಲ್ಲಾಪುರ ಬಿ.ವಿ. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೩. ಸಮಗ್ರ ವಚನ ಸಂಪುಟ-೩, ಡಾ. ಮಲ್ಲಾಪುರ ಬಿ.ವಿ. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೪. ಸಮಗ್ರ ವಚನ ಸಂಪುಟ-೪, ಡಾ. ವಿದ್ಯಾಶಂಕರ ಎಸ್. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೫. ಸಮಗ್ರ ವಚನ ಸಂಪುಟ-೫, ಡಾ. ವೀರಣ್ಣ ರಾಜೂರು (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೬. ಸಮಗ್ರ ವಚನ ಸಂಪುಟ-೬, ಡಾ. ಕಲಬುರ್ಗಿ ಎಂ.ಎಂ. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೭. ಸಮಗ್ರ ವಚನ ಸಂಪುಟ-೭, ಡಾ. ವಿದ್ಯಾಶಂಕರ ಎಸ್. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೮. ಸಮಗ್ರ ವಚನ ಸಂಪುಟ-೮, ಡಾ. ಹಿರೇಮಠ ಬಿ.ಆರ್. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೫೯. ಸಮಗ್ರ ವಚನ ಸಂಪುಟ-೯, ಡಾ. ಹಿರೇಮಠ ಬಿ.ಆರ್. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೬೦. ಸಮಗ್ರ ವಚನ ಸಂಪುಟ-೧೦, ಡಾ. ವೀರಣ್ಣ ರಾಜೂರು (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೬೧. ಸಮಗ್ರ ವಚನ ಸಂಪುಟ-೧೫, ಡಾ. ವಿದ್ಯಾಶಂಕರ ಎಸ್. (ಸಂ), ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೩

೬೨. ಸುರಪುರ ತಾಲೂಕಿನ ಶಾಸನಗಳು, ಹನುಮಾಕ್ಷಿ ಗೋಗಿ (ಸಂ), ಮಹಿಳಾ ಸಾಹಿತ್ಯಿಕ, ನವನಗರ, ಹುಬ್ಬಳ್ಳಿ, ೧೯೯೫

೬೩. ಸಿದ್ಧ ಸಾಹಿತ್ಯ, ಕೃಷ್ಣಮೂರ್ತಿ ಮ.ನು. (ಲೇ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨

೬೪. ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ, ಸಂಪುಟ - ೧, ಡಾ. ಚಂದ್ರಶೇಖರ ಮಹಾಸ್ವಾಮಿಗಳು (ಲೇ), ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಗದಗ, ೧೯೯೯

೬೫. ಹರಿಹರನ ರಗಳೆಗಳ ಸಾಹಿತ್ಯಿಕ ಅಧ್ಯಯನ, ಡಾ. ಮಹಾದೇವಯ್ಯ ಕೆ.ಪಿ. (ಲೇ), ಅಭಿರುಚಿ ಪ್ರಕಾಶನ, ಮೈಸೂರು, ೧೯೯೯

೬೬. ಹರಿಹರನ ನೂತನ ಪುರಾತನರ ರಗಳೆಗಳು, ಡಾ. ಸುಂಕಾಪುರ ಎಂ.ಎಸ್. (ಸಂ), ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೬೭. ಹಾಲುಮತ ಪುರಾಣ, ಚೆನ್ನಬಸವ ಶಾಸ್ತ್ರೀಗಳು (ಲೇ), ರೇಣುಕ ಗುರುಕುಲಾಶ್ರಮದ ಸದ್ಭಕ್ತರು, ಚಿಕ್ಕಬೂದಿಹಾಳು, ದಾವಣಗೆರೆ

೬೮. ಹರಿಹರ ದೇವ ಚರಿತ್ರೆ ಕಾಲ ನಿರ್ಣಯ ಕಾವ್ಯ ವಿಮರ್ಶೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೯

೬೯. ಹರಿಹರನ ಕೃತಿಗಳು (ಒಂದು ಸಂಖ್ಯಾ ನಿರ್ಣಯ), ಹಿರೇಮಲ್ಲೂರ ಈಶ್ವರನ್ (ಲೇ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

೭೦. ಹರಿಹರನ ರಗಳೆಗಳು, ಡಾ. ಕಲಬುರ್ಗಿ ಎಂ.ಎಂ. (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

**ನಿಯತಕಾಲಿಕೆಗಳು**

೧. ಶರಣ ಸಾಹಿತ್ಯ, ಸಂಪುಟ-೭ ಹಾಗೂ ೮, ಅ.ನ.ಕೃ. (ಸಂ)

೨. ಶಿವಾನುಭವ, ಸಂಪುಟ ೨ ಮತ್ತು ೩, ಹಳಕಟ್ಟಿ ಫ.ಗು. (ಸಂ), ೧೯೨೯

೩. ಶಿವಾನುಭವ ಸಂಪುಟ ೪, ಸಂಚಿಕೆ ೪, ೧೯೨೫

**ಹಸ್ತಪ್ರತಿಗಳು**

೧. ಚತುರ್ಮುಖ ಬೊಮ್ಮರಸನ ರೇವಣಸಿದ್ಧೇಶ್ವರ ಪುರಾಣ, ಹಸ್ತಪ್ರತಿ ಸಂಖ್ಯೆ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೬೩

❖❖

AKSHARA GRANTHALAYA
ACC.NO. 052073

AKSHARA GRANTHALAYA
ACC.NO. 052073